ಪ್ರಾಚೀನ ಭಾರತದಲ್ಲಿ ಬೇಸಾಯ

ಸಿ ಕೆ ಕುಮುದಿನಿ

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಪ್ರಕಟಣೆ-140

ಪ್ರಾಚೀನ ಭಾರತದಲ್ಲಿ ಬೇಸಾಯ

ತಾಂತ್ರಿಕ ಸಂಪಾದಕ : ಎಸ್. ಪಿ. ರಾಯ್‌ಚೌಧರಿ

ಸಹಾಯಕ ತಾಂತ್ರಿಕ ಸಂಪಾದಕ : ಆರ್. ಕೆ. ರಾವ್

ಮುಖ್ಯ ಸಂಪಾದಕ (ಉತ್ಪಾದನೆ) : ಡಿ. ರಾಘವನ್

ಜೊತೆಗಾರರು : ಕೃಷ್ಣಕುಮಾರ್
ಜಿ. ಬಿ. ಬಾಲಿ

ಅನುವಾದ : ಪಿ. ಕೆ. ಕುಮುದಿನಿ

1987

ಕನ್ನಡ ಅಧ್ಯಯನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-560024

ಮೂಲ : ಅಗ್ರಿಕಲ್ಚರ್ ಇನ್ ಏನ್‌ಷಿಯಂಟ್ ಇಂಡಿಯ, ಅನುವಾದ :
ಪ್ರಾಚೀನ ಭಾರತದಲ್ಲಿ ಬೇಸಾಯ–(ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ
ವಿಭಾಗದಿಂದ ಸಿದ್ಧಗೊಂಡು, ಪ್ರಕಾಶಿತ), ಪ್ರಥಮ ಮುದ್ರಣ 1987 [illegible]: 19
ಪುಟಗಳು : XIV + 297,
ಬೆಲೆ : ಸಾದಾ ಪ್ರತಿ ರೂ. 28-00 ಕ್ಯಾಲಿಕೋ ಪ್ರತಿ ರೂ. 38-00

ಮುದ್ರಣ
ಅನುಗ್ರಹ ಪ್ರಿಂಟರ್ಸ್,
ನಂ. 3, 6ನೇ ಮುಖ್ಯ ರಸ್ತೆ, ಶಿವನಹಳ್ಳಿ,
ರಾಜಾಜಿನಗರ, ಬೆಂಗಳೂರು-560 010

ಕುಲಪತಿಗಳ ಹಾರೈಕೆ

ಕೇಂದ್ರ ಸರ್ಕಾರದಿಂದ ಪುರಸ್ಕೃತಗೊಂಡ ಯೋಜನೆಯ ಆಶ್ರಯದಲ್ಲಿ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕನ್ನಡದಲ್ಲಿ ಕೃಷಿ ವಿಜ್ಞಾನ ಪಠ್ಯಪುಸ್ತಕಗಳನ್ನು ಪ್ರಕಟಿಸುವ ಸಲುವಾಗಿ ಕನ್ನಡ ಅಧ್ಯಯನ ವಿಭಾಗ 1970ರಲ್ಲಿ ಆರಂಭಗೊಂಡಿತು. ಅಲ್ಲಿಂದ ಇಲ್ಲಿಯವರೆಗೆ ಕೃಷಿ ವಿಜ್ಞಾನಗಳಿಗೆ ಸಂಬಂಧಿಸಿದ ಬೇಸಾಯಶಾಸ್ತ್ರ, ಪಶುಸಂಗೋಪನೆ ಹಾಗೂ ಪಶುವೈದ್ಯಕೀಯಶಾಸ್ತ್ರ, ಹೈನುಗಾರಿಕೆ, ತೋಟಗಾರಿಕೆ, ಕೋಳಿಸಾಕಣೆ, ಅರಣ್ಯಶಾಸ್ತ್ರ, ಗೃಹವಿಜ್ಞಾನ, ಮತ್ಸ್ಯಶಾಸ್ತ್ರ, ಕೃಷಿ ಸಹಕಾರ, ಜೇನುಸಾಕಣೆ, ರೇಷ್ಮೆ ವ್ಯವಸಾಯ, ಮೂಲ ವಿಜ್ಞಾನ ಹಾಗೂ ಮಾನವಿಕ ಶಾಸ್ತ್ರಗಳಲ್ಲಿ ನೂರಾರು ಪುಸ್ತಕಗಳು ಪ್ರಕಟಗೊಂಡಿವೆ. ಹಲವಾರು ವಿಷಯಗಳ ಮೇಲಿನ ತಾಂತ್ರಿಕ ಶಬ್ದಕೋಶಗಳು ನಿರ್ಮಾಣವಾಗಿವೆ. ಈ ಪೈಕಿ ಈಗಾಗಲೇ ಕೆಲವು ಪುಸ್ತಕಗಳು ಪುನರ್‌ಮುದ್ರಣಗೊಂಡಿವೆ. ಮತ್ತೆ ಕೆಲವು ಪುಸ್ತಕಗಳು ಮುಗಿದಿದ್ದು, ಇವುಗಳಿಗಾಗಿ ಅಪಾರ ಬೇಡಿಕೆ ಉಂಟಾಗಿ ಪುನರ್‌ಮುದ್ರಣಗೊಳ್ಳಬೇಕಾಗಿದೆ. ಇದು ಈ ಪುಸ್ತಕಗಳಿಗಿರುವ ಜನಪ್ರಿಯತೆಗೆ ಸಾಕ್ಷಿ.

ಕೃಷಿ ವಿಜ್ಞಾನಗಳಲ್ಲಿ ಕೆಲವು ವಿಷಯದ ಮೇಲೆ ಹೆಚ್ಚಿನ ಪುಸ್ತಕಗಳು ಪ್ರಕಟಗೊಂಡಿದ್ದರೆ, ಮತ್ತೆ ಕೆಲವು ವಿಷಯಗಳಲ್ಲಿ ಒಂದೋ, ಎರಡೋ ಪುಸ್ತಕಗಳು ಮಾತ್ರ ಪ್ರಕಟಗೊಂಡಿವೆ. ಈ ದಿಸೆಯಲ್ಲಿ ಒಂದು ರೀತಿಯ ಸಮತೋಲನ ಕಾಯ್ದುಕೊಳ್ಳಬೇಕಲ್ಲದೆ ಇತ್ತೀಚೆಗೆ ಅತ್ಯಂತ ಮಹತ್ವಗಳಿಸುತ್ತಿರುವ ಹೈನುಗಾರಿಕೆ, ಕೋಳಿಸಾಕಣೆ ಹಾಗೂ ಮೀನುಗಾರಿಕೆ ವಿಷಯಗಳಿಗೆ ಸಂಬಂಧಿಸಿದ ಪುಸ್ತಕಗಳ ಪ್ರಕಟಣೆಗೆ ಆದ್ಯತೆ ನೀಡಿ ಉಪಯುಕ್ತತೆ ಕಂಡುಕೊಳ್ಳುವುದು ಅತ್ಯಗತ್ಯ.

ವಿಜ್ಞಾನ ಸಾಹಿತ್ಯ ಕನ್ನಡದಲ್ಲಿ ಬೆಳೆದು ಬರಬೇಕೆಂದು ನಡೆಯುತ್ತಿರುವ ಯತ್ನದಲ್ಲಿ ಕೃಷಿ ವಿಶ್ವವಿದ್ಯಾನಿಲಯದ ಈ ಕೊಡುಗೆ ಅಳಿಲು ಸೇವೆ. ಈ ಕೆಲಸ ಇದೀಗ ಮೈದುಂಬಿ ನಡೆಯುತ್ತಿದೆ. ಇದು ಇನ್ನೂ ತ್ವರಿತಗತಿಯಿಂದ ಸಾಗಬೇಕಾಗಿದೆ. ವಿಶಾಲವಾದ ಕೃಷಿ ವಿಜ್ಞಾನ ಪರಿಚಯ ಮಾಡಿಕೊಡಲು ಈಗ ಪ್ರಕಟಗೊಂಡಿರುವ ಪುಸ್ತಕಗಳು ಏತಕ್ಕೂ ಸಾಲದು. ಕೃಷಿ ವಿಜ್ಞಾನಗಳ ಒಂದೊಂದು ಶಾಖೆಯಲ್ಲೂ ನೂರಾರು ಪುಸ್ತಕಗಳು ಪ್ರಕಟವಾಗಬೇಕು; ಎಲ್ಲ ಶಾಖೆಗಳ ಮೇಲೂ ತಾಂತ್ರಿಕ ಶಬ್ದಗಳು ಮೂಡಿಬರಬೇಕು. ಈ ದೃಷ್ಟಿಯಿಂದ ನೋಡಿದಾಗ ನಿಜವಾದ ಭೂಮಿಕೆಯಿದ್ದು ಭದ್ರವಾದ ಬುನಾದಿ ಇದೀಗ ಸಿದ್ಧವಾಗಿದೆ. ಅದರ ಮೇಲೆ ಇನ್ನೂ ಕಟ್ಟಡ ನಿರ್ಮಾಣವಾಗಬೇಕು.

ಕೃಷಿ ವಿಶ್ವವಿದ್ಯಾನಿಲಯದ ವ್ಯವಸಾಯ ಶಿಕ್ಷಣದಲ್ಲಿ ಕನ್ನಡ ಮಾಧ್ಯಮ ತರಗತಿ ಈಗಾಗಲೇ ಪ್ರಾರಂಭಗೊಂಡಿದ್ದು, ಕನ್ನಡದ ಬಗ್ಗೆ ಕಳಕಳಿಯುಳ್ಳ, ಆಸಕ್ತಿಯುಳ್ಳ ಅತ್ಯಂತ ಉತ್ಸಾಹೀ ವಿದ್ಯಾರ್ಥಿಗಳು ಈ ಪುಸ್ತಕಗಳ ಸದುಪಯೋಗ ಪಡೆಯುತ್ತಿರುವುದು ಅತ್ಯಂತ ಸಂತಸದ ಸಂಗತಿ.

ಈಗ ಪ್ರಕಟವಾಗುತ್ತಿರುವ **ಪ್ರಾಚೀನ ಭಾರತದಲ್ಲಿ ಬೇಸಾಯ** ಪುಸ್ತಕ ವಿಜ್ಞಾನಿಗಳು, ತಂತ್ರಜ್ಞರು ಹಾಗೂ ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿಯಾಗಲೆಂದು ಆಶಿಸುತ್ತೇನೆ.

ಗಾಂಧೀ ಕೃಷಿ ವಿಜ್ಞಾನ ಕೇಂದ್ರ
ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು-560 065

ಎಸ್. ವಿ. ಪಾಟೀಲ್
ಕುಲಪತಿಗಳು

ಸಂಪಾದಕರ ನುಡಿ

ಭಾರತ ಮೂಲತಃ ಪ್ರಾಚೀನಕಾಲದಿಂದಲೂ ಕೃಷಿಪ್ರಧಾನ ದೇಶ. ಇಲ್ಲಿ ಕೃಷಿ ಮತ್ತು ಪಶುಸಂಗೋಪನೆಗಳು ವೇದಕಾಲಾರಂಭದಿಂದಲೇ ಪ್ರಾರಂಭವಾಗಿದ್ದುವು, ಮಾತ್ರವಲ್ಲ ಜನ ಅರಣ್ಯಶಾಸ್ತ್ರದಲ್ಲೂ ಪರಿಣತರಾಗಿದ್ದುದು ತಿಳಿದುಬರುತ್ತದೆ. ಕಾಲಾಂತರದಲ್ಲಿ ರೈತ ಶೋಷಣೆಯಿಂದಾಗಿ ಬೇಸಾಯ ಸಾಂಪ್ರದಾಯಿಕ ಪದ್ಧತಿಗಳಿಗೆ ಸೀಮಿತವಾಯಿತು. ಇಂದು ಆಧುನಿಕ ಅವಶ್ಯಕತೆಗಳು, ಸಾಧನೋಪಕರಣಗಳು ಮತ್ತು ತಾಂತ್ರಿಕತೆಗಳಿಂದಾಗಿ ಕೃಷಿಯಲ್ಲಿ ಸುಧಾರಣೆಗಳನ್ನು ತರಲಾಗುತ್ತಿದೆ. ಇದಕ್ಕಾಗಿ ಭೂಮಿಯ್ಲು ಜಾಯಮಾನದ ಹಿನ್ನೆಲೆ, ತಿಳಿವಳಿಕೆ ಅವಶ್ಯವಾಗಿರಲೇ ಬೇಕು. 'ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಗಸು'.

ಈ ಪುಸ್ತಕದಲ್ಲಿ ಪ್ರಾಚೀನ ಕಾಲದ ಕೃಷಿ ಪದ್ಧತಿಯಲ್ಲಿ ಭೂಮಿ ವಿಂಗಡಣೆ, ನೀರಾವರಿ ಮತ್ತು ಬಸಿಯುವಿಕೆ, ಉಳುಮೆ ಮತ್ತು ಸಲಕರಣೆಗಳು, ಗೊಬ್ಬರ ವಿನಿಯೋಗ, ಬೆಳೆಗಳ ಬೇಸಾಯ, ಬೆಳೆಸರದಿ, ರೋಗ ಮತ್ತು ಪೀಡೆಗಳಿಂದ ಬೆಳೆಸಂರಕ್ಷಣೆ, ಬೀಜಬಿತ್ತನೆ, ಕೃಷಿ ಪವನಶಾಸ್ತ್ರ, ಜಾನುವಾರುಗಳು, ಅವುಗಳ ಆರೈಕೆ, ಸಂರಕ್ಷಣೆ, ಪ್ರಾಣಿಜನ್ಯ ಆಹಾರ ಬಳಕೆ ಹಾಗೂ ದನಗಳ ವೈದ್ಯಕೀಯ ಚಿಕಿತ್ಸೆ ಕುರಿತು ವಿವರಗಳಿವೆ. ಮೂಲ ಪುಸ್ತಕವು ಭಾರತೀಯ ಕೃಷಿ ಸಂಶೋಧನ ಮಂಡಳಿಯ ಪ್ರಕಟಣೆಯಾಗಿದ್ದು ವಿಭಾಗದಸಂಶೋಧನ ಸಹಾಯಕರಾದ ಶ್ರೀಮತಿ ಸಿ. ಕೆ. ಕುಮುದಿನಿಯವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಬೇಸಾಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ। ಎಲ್. ಎ. ದೀಕ್ಷಿತ್‌ರವರು ಈ ಪುಸ್ತಕದ ಭಾಷಾಂತರ ಪರಿಶೀಲನೆ ಮಾಡಿದ್ದಾರೆ. ಇದರ ಬೆರಳಚ್ಚು ಪ್ರತಿ ಸಿದ್ಧಪಡಿಸಿದವರು ಶ್ರೀ ಎಲ್. ಆರ್. ದೊಡ್ಡರಂಗಯ್ಯ, ಕರಡೋದಿದವರು ಶ್ರೀ ಎಂ. ರಮೇಶ್, ಇವರಿಗೆಲ್ಲ ಕೃತಜ್ಞತೆಗಳು.

ಈ ಪುಸ್ತಕ ಎಲ್ಲ ವಿದ್ಯಾರ್ಥಿಗಳು, ರೈತರು ಹಾಗೂ ಆಸಕ್ತರಿಗೆಲ್ಲ ಉಪಯುಕ್ತವಾಗಿರುವುದೆಂದು ಆಶಿಸಲಾಗಿದೆ.

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು-560024

ಎಚ್. ಕೆ. ನರಸಿಂಹೇಗೌಡ
ಕನ್ನಡ ಪ್ರಾಧ್ಯಾಪಕರು ಹಾಗೂ ಕನ್ನಡ ಅಭಿವೃದ್ಧಿ ಸಮಿತಿಯ ಕಾರ್ಯದರ್ಶಿಗಳು

ಪೀಠಿಕೆ

ನಾನು ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ ಅಧ್ಯಕ್ಷನಾಗಿರುವಾಗ ಒಪ್ಪಿಗೆ ಕೊಟ್ಟ **ಪ್ರಾಚೀನ ಭಾರತದಲ್ಲಿ ಬೇಸಾಯ**ವನ್ನು ಕುರಿತ 'ಏಕ ವಿಷಯಕ' ಪ್ರಬಂಧ ರಚನೆ ಯೋಜನೆಯು ಪೂರ್ಣತೆಯನ್ನು ಕಂಡದ್ದು ತುಂಬ ಸಂತೋಷದಾಯಕ ವಿಷಯ. ಈ ಪ್ರಬಂಧವು ವಿದ್ವಾಂಸರ ಸಹಕಾರದ ಫಲವಾಗಿ ರೂಪುಗೊಂಡಿದೆ. ಅವರಿಗೆಲ್ಲ ನನ್ನ ಕೃತಜ್ಞತೆಗಳು. ಅವರು ಈ ವಿಷಯದ ಬಗ್ಗೆ ಅಧಿಕೃತ ಗ್ರಂಥವೊಂದನ್ನು ಹೊರತರುವುದರಲ್ಲಿ ಸಫಲರಾಗಿದ್ದಾರೆ.

ವೇದಪೂರ್ವಕಾಲದಿಂದಲೇ ಬೇಸಾಯ ಮತ್ತು ಪಶುಸಂಗೋಪನೆಗಳು ಭಾರತದಲ್ಲಿ ಬೆಳೆಯತೊಡಗಿದ್ದವು. ಋಗ್ವೇದದಲ್ಲಿಯೇ ನೂರಾರು, ಸಾವಿರಾರು ಗೋವುಗಳನ್ನು ಕುರಿತ ಆಧಾರಗಳು ದೊರೆಯುತ್ತವೆ. ಹಾಗೆಯೇ ಕುದುರೆಗಳನ್ನು ರಥಗಳಿಗೆ ಹೂಡುತ್ತಿದ್ದ, ಸ್ಪರ್ಧಾಂಗಣದಲ್ಲಿ ರಥಗಳ ಸ್ಪರ್ಧೆಗಳು ನಡೆಯುತ್ತಿದ್ದ, ಒಂಟೆಗಳನ್ನು ರಥಗಳಿಗೆ ಹೂಡುತ್ತಿದ್ದ, ಕುರಿಮೇಕೆಗಳನ್ನು ಯಜ್ಞಪಶುಗಳಾಗಿ ಬಲಿ ಕೊಡುತ್ತಿದ್ದ ಹಾಗೂ ವಸ್ತ್ರಗಳಿಗೆ ಉಣ್ಣೆ (ತುಪ್ಪಟ)ಯನ್ನು ಬಳಸುತ್ತಿದ್ದವೇ ಮುಂತಾದ ಆಧಾರಗಳು ದೊರೆಯುತ್ತವೆ. ವಿಖ್ಯಾತ ಗೋಸೂಕ್ತ (ಋಗ್ವೇದ 6.28)ವು ಗೋವು ಆಗಲೇ ಗ್ರಾಮೀಣ ಆರ್ಥಿಕ ಸ್ಥಿತಿಯ ಮೂಲವಾಗಿದ್ದುದನ್ನು ಸೂಚಿಸುತ್ತದೆ. ಮತ್ತೊಂದು ಸೂಕ್ತದಲ್ಲಿ ಗೋವನ್ನು ವಸುಗಳ, ರುದ್ರರ ಮತ್ತು ಆದಿತ್ಯರ ಮಾತೆಯೆಂದು ದೈವೀಕರಿಸಲಾಗಿದೆ ; ಹಾಗೆಯೇ ಅಮರತೆಯ ಕೇಂದ್ರ ಬಿಂದುವೆಂದೂ ಭಾವಿಸಲಾಗಿದೆ. ವೇದಕಾಲೀನ ಆರ್ಯರು ಮರಮುಟ್ಟುಗಳನ್ನು ಪಡೆಯಲು ದೊಡ್ಡ ದೊಡ್ಡ ಅರಣ್ಯಗಳನ್ನು ಅವಲಂಬಿಸಿದ್ದಂತೆ ತೋರುತ್ತದೆ. ಅಥರ್ವಣವೇದದಲ್ಲಿ ಉಲ್ಲೇಖಿಸಿರುವಂತೆ ವೈದ್ಯರು ವೈದ್ಯಕೀಯ ಚಿಕಿತ್ಸೆಗಾಗಿ ಗಿಡಮೂಲಿಕೆಗಳನ್ನು ಬಳಸುತ್ತಿದ್ದಂತೆ ಕಂಡು ಬರುತ್ತದೆ. ಅಂದು ಬೇಸಾಯೋದ್ಯಮವನ್ನು ಅತ್ಯಂತ ಗೌರವಾದರಗಳಿಂದ ಭಾವಿಸಲಾಗಿತ್ತು. ಅಂದಿನ ಕೃಷಿಯು ಸಂಪೂರ್ಣವಾಗಿ ಮಳೆಯ ದೇವತೆ ಪರ್ಜನ್ಯನ ಕೃಪಾಕಟಾಕ್ಷವನ್ನೇ ಅವಲಂಬಿಸಿತ್ತು. ಆತನ ಗುಡುಗುಗಳು ಆಹಾರ ತರುತ್ತವೆಂದು ವರ್ಣಿಸಲಾಗಿದೆ.

ಕೃಷಿ ಮತ್ತು ಪಶುಸಂಗೋಪನೆಗಳು ವೇದಕಾಲಾರಂಭದಿಂದಲೇ ಪ್ರಾರಂಭವಾದವು. ಮುಂದೆ ವಿಶ್ವದ ಇತರೆಡೆಗಳಲ್ಲಿ ಅಷ್ಟೇನೂ ತಿಳಿಯದಮಟ್ಟಕ್ಕೆ ಕ್ರಮೇಣ ಅದರಲ್ಲಿ ನೈಪುಣ್ಯತೆ ಬೆಳೆಯಿತು. ಸಾಮಾಜಿಕವಾಗಿ ರೈತರನ್ನು ಬ್ರಾಹ್ಮಣರನಂತರದ

ವರ್ಗವೆಂದು ಪರಿಗಣಿಸಲಾಗುತ್ತಿತ್ತು. ಇಡಿಯ ಗ್ರಾಮದ ಆಡಳಿತಾಧಿಕಾರವೆಲ್ಲ ಪ್ರಮುಖ ರೈತರ ಕೈಯಲ್ಲಿರುತ್ತಿತ್ತೆಂದು ತೋರುತ್ತದೆ. ಇಂಥವರಿಗೆ 'ಕುಟುಂಬಿನ್' ಎನ್ನಲಾಗುತ್ತಿತ್ತು. ಇದರಿಂದ 'ಕುನ್ಬಿ' ಶಬ್ದ ನಿಷ್ಪತ್ತಿಯಾಗಿದೆ.

ಈ 'ಏಕವಿಷಯಕ ಕೃತಿ'ಯಲ್ಲಿ ಆಧಾರವಾಗಿ ಬಳಸಿದ ಗ್ರಂಥಗಳಿಂದ, ಕೃಷಿ ಮತ್ತು ಪಶುಸಂಗೋಪನೆಗಳಲ್ಲದೆ, ಅರಣ್ಯಶಾಸ್ತ್ರದಲ್ಲಿಯೂ ಜನ ಪರಿಣಿತರಾಗಿದ್ದುದು ತಿಳಿದುಬರುತ್ತದೆ. ಹಿಂದೂಧರ್ಮದಲ್ಲಿ ಮರಗಳನ್ನು ನೆಡುವಿಕೆ ಮತ್ತು ಪಾಲನೆ ಪ್ರಧಾನ ತತ್ವಗಳಾಗಿವೆ. ಏಕೆಂದರೆ, ಭಾರತೀಯ ಸಂಸ್ಕೃತಿಯು ತನ್ನ ಹುಟ್ಟಿನಿಂದಲೇ ಋಷಿಮುನಿಗಳು ವಾಸಿಸುತ್ತಿದ್ದ ಮರಗಳ ನೆರಳಿನಲ್ಲಿಯೇ ಬೆಳೆದು ಬಂದಿತು. ವಿವಿಧ ಬಗೆಯ ಮರಗಳು, ಬದುಕಿನಲ್ಲಿ ಅವುಗಳ ಪ್ರಾಮುಖ್ಯತೆ, ಉಪಯುಕ್ತತೆ ಹಾಗೂ ಸೌಂದರ್ಯವನ್ನು ತುಂಬ ಎಚ್ಚರದಿಂದ ಅಧ್ಯಯನ ಮಾಡಲಾಗಿದೆ.

ಮಧ್ಯಕಾಲೀನ ಅವಧಿಯಲ್ಲಿಯೂ ಸಹ ಹಿಂದೂ ರಾಜರುಗಳ ಅಧೀನದಲ್ಲಿ ಗೋಧಿ, ಕಡಲೆ, ದ್ವಿದಳಕಾಳುಬೆಳೆಗಳು, ಜವೆಗೋಧಿ, ಬಾರ್ಲಿ, ನೀಲಿ, ಹತ್ತಿ, ಮೆಣಸು ಮತ್ತು ಶುಂಠಿ ಬೆಳೆಯುವಿಕೆ ಹಾಗೂ ಅನಾನಸು, ಕಿತ್ತಳೆ ಮತ್ತು ಮಾವಿನ ಹಣ್ಣುಗಳ ಬೇಸಾಯಗಳಲ್ಲಿ ಪರಿಣತಿಯಿದ್ದ ಬಗ್ಗೆ ಸಮಕಾಲೀನ ಸಾಕ್ಷ್ಯಾಧಾರಗಳು ಹೇರಳವಾಗಿ ದೊರೆಯುತ್ತವೆ. ರೈತರು ತಮ್ಮ ಉತ್ಪನ್ನದ 1/6 ರಿಂದ 1/12 ಭಾಗವನ್ನು ಮಾತ್ರ ರಾಜ್ಯಕ್ಕೆ ಸಲ್ಲಿಸುತ್ತಿದ್ದರು.

ತುರ್ಕರ ಆಡಳಿತ ಬಂದ ಮೇಲೆ ಅನೇಕ ಬದಲಾವಣೆಗಳಾದವು. ಅಲ್ಲಾವುದೀನ್ ಖಿಲ್ಜಿಯು 'ಒಂದು ಚಕ್ರಾಧಿಪತ್ಯ ಉಳಿಯ ಬೇಕಾದರೆ ರೈತರನ್ನು ಶೋಷಿಸಬೇಕು' ಎಂದಿದ್ದಾನೆ. ಈತ ರೈತರ ಉತ್ಪನ್ನದಲ್ಲಿ ಅರ್ಧಪಾಲು ವಸೂಲಿ ಮಾಡುತ್ತಿದ್ದ. ಆದರೆ ಅಕ್ಬರನ ಆಡಳಿತದ ಅಲ್ಪ ಕಾಲಾವಧಿಯಲ್ಲಿ ಮಾತ್ರ ಷೇರ್‌ಷಹನ ಸ್ಥೂಲತತ್ವಗಳನ್ನು ಅನುಸರಿಸಿ ಭೂಸುಧಾರಣೆಗಳಾದವು. ಇದನ್ನು ಬಿಟ್ಟರೆ, ರೈತ ಶೋಷಣೆಯೇ ಆಳಿಕೆಯಾಗಿದ್ದಿತು. ಸಹಜವಾಗಿಯೇ ರೈತರ ಸ್ಥಿತಿಗತಿಗಳು ಕುಂದಿ, ಬೇಸಾಯವು ಸಾಂಪ್ರದಾಯಿಕ ಪದ್ಧತಿಗಳಿಗೆ ಸೀಮಿತಗೊಂಡಿತು.

ಪ್ರಾಯಶಃ ಸಾವಿರ ವರ್ಷಗಳ ಅವಧಿಯಲ್ಲಿ ಮೊದಲಬಾರಿಗೆ ಸ್ವತಂತ್ರ ಭಾರತದಲ್ಲಿ ಆಧುನಿಕ ಅವಶ್ಯಕತೆಗಳು ಮತ್ತು ಸಾಧನೋಪಕರಣಗಳಿಂದಾಗಿ ಗ್ರಾಮೀಣ ಆರ್ಥಿಕ ಪರಿಸ್ಥಿತಿಯನ್ನು ಬಲಪಡಿಸುವಾಗಲೂ ಸಹ ಕೃಷಿ ಏಳಿಗೆಗಾಗಿ ತಮ್ಮ ಬದುಕನ್ನು ಮುಡಿಪಾಗಿಟ್ಟವರೂ ಭೂಮಿಯ ಜಾಯಮಾನದ ಹಿನ್ನೆಲೆ, ತಿಳಿವಳಿಕೆಯನ್ನು ಅವಶ್ಯ

ಪಡೆದಿರಬೇಕು. ಏಕೆಂದರೆ, ನಮ್ಮ ನವೀನ ಕೃಷಿ ಪದ್ಧತಿಗಳು ಮತ್ತು ಪಶುಸಂಗೋಪನೆಗಳು ಫಲಕಾರಿಯಾಗಬೇಕಾದರೆ ಅವುಗಳನ್ನು ಹಳೆಯ ಪದ್ಧತಿಗಳ ಆಧಾರದ ಮೇಲೆಯೇ ಬೆಳೆಸಬೇಕಾಗುತ್ತದೆ.

ಗ್ರಾಮೀಣ ಆರ್ಥಿಕತೆಯನ್ನು ಸ್ವಾವಲಂಬಿಯನ್ನಾಗಿರುವಂತೆ ಮಾಡುವಲ್ಲಿ ತಲೆದೋರಿರುವ ವಿಫಲತೆಗಳಲ್ಲಿ ಬಹುತೇಕವಾದವು ನಾವು ಸಿದ್ಧ ವಿಧಾನಗಳನ್ನು ಅನುಸರಿಸಿ ಯತ್ನಿಸುವುದರಿಂದಾಗಿಯೇ ಉದ್ಭವಿಸಿದಂತಹವು. ಏಕೆಂದರೆ, ವಿಧಾನಗಳೆಲ್ಲ ಇತರ ಜಮೀನು ಹಾಗೂ ಜನತೆಗಾಗಿ ರೂಪಿಸಿದವು. ಈ 'ಏಕವಿಷಯಕ' ಪ್ರಬಂಧವು ಅವಶ್ಯ ಜ್ಞಾನವನ್ನು ಒದಗಿಸಿಕೊಡುವಲ್ಲಿ ಉಪಯುಕ್ತವಾಗಿದೆಯೆಂಬುದು ನಿಶ್ಚಿತ.

ಹೀಗೆಯೇ ಭಾರತೀಯ ಕೃಷಿ ಸಂಶೋಧನ ಸಂಸ್ಥೆಯು ಮಧ್ಯಕಾಲ ಹಾಗೂ ಬ್ರಿಟಿಷ್ ಕಾಲಗಳಿಗೆ ಸಂಬಂಧಿಸಿದ ಏಕವಿಷಯಕ ಪ್ರಬಂಧಗಳನ್ನು ಪ್ರಕಟಿಸುವ ಮೂಲಕ ಈ ಯೋಜನೆಯನ್ನು ಪೂರ್ಣಗೊಳಿಸುತ್ತದೆಂದು ಭಾವಿಸುತ್ತೇನೆ.

ಭಾರತೀಯ ವಿದ್ಯಾಭವನ
ನವದೆಹಲಿ

ಕೆ. ಎಂ. ಮುನ್ಷಿ

ಪರಿವಿಡಿ

ಪ್ರಾಚೀನ ಭಾರತದಲ್ಲಿ ಬೇಸಾಯ

ಒಪ್ಪೋಲೆ

ಪುಟ	ಸಾಲು	ತಪ್ಪು	ಒಪ್ಪು
12	19	ಶ್ಲೋ. 11	ಶ್ಲೋ. 12
13	21	ವೃಕ	ವೃಕ್ಷ
43	3	ಅರು	ಆರು
114	19	—	ಶ್ಲೋ. 517
121	12	175	575
151	25	ಅಧ್ಯಾಯ	ಅಧ್ಯಾಯ 8
152	17	(ಅಂಚೆ	(ಅಪ್ಸೈರ್ಯಾಂತರ್ ಅಸ್ಪ್ರರ)

ಅಧ್ಯಾಯ 1

ಭೂಮಿ ಮತ್ತು ವಿಭಾಗಗಳು

ನೈಸರ್ಗಿಕವಾಗಿ ಭಾರತವನ್ನು ಸ್ಥೂಲವಾಗಿ ಮೂರು ಮುಖ್ಯ ಪ್ರದೇಶಗಳಾಗಿ ವಿಂಗಡಿಸಬಹುದು; ಅವುಗಳೆಂದರೆ: 1) ಉತ್ತರದ ಹಿಮಾಲಯ ಪರ್ವತ ಪ್ರದೇಶ, ದಕ್ಷಿಣದ ಆಗ್ನೇಯ ಹಾಗೂ ನೈರುತ್ಯ ಭಾಗಗಳ ಅಂಚಿನಲ್ಲಿ ಹಬ್ಬಿರುವ ಘಟ್ಟಗಳು ಹಾಗೂ ಅರಾವಳೀ ಪರ್ವತ ಸಾಲಿನಿಂದೊಡಗೂಡಿದ ವಿಂಧ್ಯ ಪರ್ವತಗಳು, 2) ದಕ್ಷಿಣದ ಮೈದಾನ ಪ್ರದೇಶ ಅಥವಾ ಪ್ರಸ್ಥಭೂಮಿ ಮತ್ತು 3) ಗಂಗಾ ಯಮುನಾ ಹಾಗೂ ಬ್ರಹ್ಮಪುತ್ರಾ ನದಿಗಳ ಮಣ್ಣಿನಿಂದ ಸಮೃದ್ಧವಾಗಿರುವ ಸಿಂಧೂ ಗಂಗಾ ಮೈದಾನ ಅಥವಾ ತಗ್ಗು ಪ್ರದೇಶ.

ಪುರಾತನ ಕಾಲದಲ್ಲಿ ಪರ್ವತಪ್ರದೇಶಗಳು ಮಾನವ ವಾಸಕ್ಕೆ ದುಸ್ಸಾಧ್ಯವಾಗಿದ್ದವು, ಆದರೂ ಪರ್ವತದ ಕೆಳಗಣ ಭಾಗಗಳನ್ನು ಬೇಸಾಯ ಹಾಗೂ ಮಾನವ ವಸತಿಗೆ ಬಳಸಿಕೊಂಡಿದ್ದರು. ಹಿಮಾಲಯ ಪರ್ವತಾವಳಿಯ ಎತ್ತರ ಪ್ರದೇಶದಲ್ಲಿನ ಕೆಲವು ಕಣಿವೆ ಪ್ರದೇಶಗಳು ಬಹಳಷ್ಟು ಫಲವತ್ತಾದ ತಗ್ಗು ಪ್ರದೇಶಗಳಾಗಿವೆ. ತದನಂತರದ ಮಹಾಗ್ರಂಥ ಕರ್ತೃಗಳು ಉಲ್ಲೇಖವಾಗಿ ಬಳಸಿಕೊಂಡ ಬಿಮ್ಮರುಗಳನ್ನು ರಚಿಸಿದ ಮೆಗಾಸ್ತನೀಸ್ ಹಾಗೂ ಆತನಿಗೂ ಹಿಂದಿನ ಗ್ರೀಸ್ ಪ್ರತ್ಯಕ್ಷದರ್ಶಿಗಳು ಭಾರತದ ವಂಪಾನದಿಗಳಿಂದ ಸ್ಫೂರ್ತಿಪಡೆದಿದ್ದಾರೆ. ಸಿಂಧೂಗಂಗಾ ಮೆಕ್ಕಲು ಪ್ರದೇಶವೆಲ್ಲಾ ಫಲವತ್ತಾದ ಮಣ್ಣಿನಿಂದ ಕೂಡಿದ್ದು ನಾಗರೀಕತೆಯ ಬೆಳವಣಿಗೆಗೆ ನೆರವು ನೀಡಿದೆ.

ಆಧುನಿಕ ಮಣ್ಣು ಸಮೀಕ್ಷಣೆ ಮತ್ತು ಮಣ್ಣು ವರ್ಗೀಕರಣದ ಉದ್ದೇಶ, ಮಣ್ಣು ಸಂಪನ್ಮೂಲಗಳ ತಪಶೀಲು ಪಟ್ಟಿ ಸಿದ್ಧಪಡಿಸಿ ಅವುಗಳ ಯುಕ್ತ ಜಮೀನುಗಳ ಬಳಕೆಗೆ ಅನುಕೂಲ ಮಾಡಿಕೊಳ್ಳುವುದೇ ಆಗಿದೆ. ಜಮೀನು ಬಳಕೆ ಯೋಜನೆಗಾಗಿ ಭೂವರ್ಗೀಕರಣ ಮಾಡುವಿಕೆಯ ಆಧುನಿಕ ಕಲ್ಪನೆಯೆಂದರೆ ಉತ್ಪಾದನೆ ಬಗೆಗಳನ್ನು ನಿರ್ದಿಷ್ಟಪಡಿಸುವುದು ಮತ್ತು ಜಮೀನನ್ನೇ ಅವಲಂಬಿಸಿರುವ ಜನತೆಗೆ ಅತ್ಯಧಿಕ ಸಾಮಾಜಿಕ ಹಾಗೂ ಆರ್ಥಿಕವಾಗಿ ಜಮೀನಿನ ಪ್ರಯೋಜನ ಹಾಗೂ ಉಪಯುಕ್ತತೆಗಳ ನಿರ್ಧಾರ ಮಾಡುವುದೇ ಆಗಿದೆ. ಅಲ್ಲದೆ ಭೂವರ್ಗೀಕರಣವು ಭೂಮಿಯನ್ನು ಆರ್ಥಿಕ ದೃಷ್ಟಿಯಲ್ಲಿ ಪ್ರಾಮುಖ್ಯತೆ ಪಡೆದ ಸಸ್ಯೋತ್ಪಾದನೆಗೆ ಅನುಗುಣವಾಗಿ ವಿಂಗಡಿಸುವುದಕ್ಕೆ ಸಂಬಂಧಪಟ್ಟಿರುತ್ತದೆ.

ಮಣ್ಣಿನ ಸ್ವಭಾವ ಹಾಗೂ ಆರ್ಥಿಕ ಪ್ರಾಮುಖ್ಯತೆಯುಳ್ಳ ವಿಶಿಷ್ಟ ಬೆಳೆಯ ಉತ್ಪಾದನೆಗೆ ಸಂಬಂಧಿಸಿದಂತೆ ಪ್ರಾಚೀನ ಭಾರತದ ಕೃಷಿಕರು ಚೆನ್ನಾಗಿ ಅರಿತಿದ್ದರು. ಸ್ವಾನುಭವದಿಂದ ಗಳಿಸಿದ್ದ ಜ್ಞಾನವು ತಲೆತಲಾಂತರವಾಗಿ ಮುಂದುವರಿಯಿತು. ಅದು ಒಂದು ರೀತಿಯಲ್ಲಿ ಸಾರ್ವತ್ರಿಕ ತತ್ವ ಹಾಗೂ ಗಾದೆ ಇತ್ಯಾದಿಗಳ ರೂಪದಲ್ಲಿ ಪ್ರಚಲಿತವಾಗಿ ರೈತರಿಗೆ ಮಾರ್ಗದರ್ಶಕವಾಯಿತು. ರೈತರು ಯಾವುದೊಂದು ಬೆಳೆ ಬೆಳೆಯಲು ಬೇಕಾದ ಉಚಿತ ಮಣ್ಣು ಯಾವುದೆಂದು ತಿಳಿಯುವುದರಲ್ಲಿ ಸಾಕಷ್ಟು ಪರಿಣತಿ ಪಡೆದಿದ್ದರು ಹಾಗೂ ಬೆಳೆ ಬೆಳೆಯುವುದರ ಮೂಲ ತತ್ವಗಳನ್ನೂ ಅರಿತವರಾಗಿದ್ದರು. ಈ ಬಗ್ಗೆ ಕೆಲವು ಪರಿಣತ ಲೇಖಕರ ಕೃತಿಗಳಲ್ಲಿ ಹಾಗೂ ಹಳೆಯ ಸಂಸ್ಕೃತ ಹಸ್ತಪ್ರತಿಗಳ ಅನುವಾದಿತ ಕೃತಿಗಳಲ್ಲಿ ದೊರೆತ ಲಭ್ಯ ಮಾಹಿತಿಯನ್ನು ಈ ಮುಂದೆ ಕೊಟ್ಟಿದೆ.

ಆರ್. ಗಂಗೋಪಾಧ್ಯಾಯರು ಪ್ರಾಚೀನ ಭಾರತದ ಕೃಷಿ ಹಾಗೂ ಕೃಷಿಕರ ಅಧ್ಯಯನಕ್ಕಾಗಿ ಕೆಲವು ವಿಷಯಗಳು (1932) ಎಂಬ ತಮ್ಮ ಕೃತಿಯಲ್ಲಿ ಮಣ್ಣು ಮತ್ತು ವರ್ಗೀಕರಣವನ್ನು ಕುರಿತು ಹೀಗೆ ಬರೆದಿದ್ದಾರೆ :

ಫಲವತ್ತತೆಗೆ ಅನುಗುಣವಾಗಿ ಮಣ್ಣನ್ನು ಮುಖ್ಯವಾಗಿ ಎರಡು ವರ್ಗಗಳಾಗಿ ವಿಂಗಡಿಸಲಾಗಿದೆ. ಉರ್ವರ (ಫಲವತ್ತಾದದ್ದು) ಹಾಗೂ ಅನುರ್ವರ ಅಥವಾ ಊಸರ (ಬರಡು). ಉರ್ವರ ವ್ಯಕ್ತಿಕೆ (ಮಣ್ಣು) ಯನ್ನು ಮತ್ತೆ ಅವುಗಳ ವಿವಿಧ ಬೆಳೆಗಳ ಬೇಸಾಯಾನುಕೂಲತೆಗಳ ವಿಶಿಷ್ಟ ಹೊಂದಾಣಿಕೆಗೆ ಅನುಗುಣವಾಗಿ ವಿವಿಧ ಬಗೆಯ ಮಣ್ಣುಗಳಾಗಿ ಪುನರ್ ವಿಂಗಡಿಸಲಾಗಿದೆ. ಉದಾಹರಣೆಗೆ ಧಾನ್ಯ, ತಿಲ, ಪ್ರಿಯಂಯಾಸ ಲೇಯ, ಮಾಷ್ಗಿನ ಎಂದರೆ ಬಾರ್ಲಿ, ಎಳ್ಳು, ಉದಿ (ಬತ್ತ) ಮಿಲ್ಲೆಟ್ ಇತ್ಯಾದಿ ಬೆಳೆಗಳಿಗೆ ಯೋಗ್ಯವಾದ ಮಣ್ಣು. ಅನುರ್ವರ ವ್ಯಕ್ತಿಕೆಯನ್ನು ಸಹ ಊಸರ (ಚೌಳು ಭೂಮಿ), ಮರು (ಮರಳುಗಾಡು) ಭೂಮಿಗಳೆಂದು ಪುನರ್ ವಿಂಗಡಿಸಲಾಗಿದೆ. ಹಾಗೆಯೇ ನದಿಗಳಿಂದ ನೀರು ಪೂರೈಕೆಯಾಗುವ (ನೀರಾವರಿಯಾಗುವ) ಮಣ್ಣುಗಳಿಗೆ ನದೀ ವ್ಯಕ್ತಿಕೆಗಳೆಂದೂ, ಮಳೆಯ ನೀರನ್ನೇ ಆಶ್ರಯಿಸಿದವುಗಳಿಗೆ ದೇವ ವ್ಯಕ್ತಿಕೆಗಳೆಂದೂ ಹೆಸರು.

ಪ್ರಾಚೀನ ಲೇಖಕರಿಗೆ ವಿವಿಧ ಬಗೆಯ ಮಣ್ಣುಗಳಲ್ಲಿಯ ನಿಖರವಾದ ರಾಸಾಯನಿಕ ಸಂಯೋಜನೆಗಳು ಯಾವುವೆಂದು ತಿಳಿಯದೆ ಇದ್ದಿರಬಹುದು. ಆದರೆ ಈ ದಿಸೆಯಲ್ಲಿ ಹಿಂದೆ ಜ್ಯೋತಿಷ್ಯ ಶಾಸ್ತ್ರಜ್ಞನೆಂದು ಖ್ಯಾತನಾಗಿದ್ದ ಮಿಹಿರನ ಪತ್ನಿಯೆಂದು ಸಾಂಪ್ರದಾಯಿಕವಾಗಿ ತಿಳಿಯಲಾದ 'ಖನ'ಳ ಸಾರ್ವತ್ರಿಕ ತತ್ವಗಳನ್ನು ಗಮನಿಸಿದಾಗ ಅವರು ಮಣ್ಣಿನಲ್ಲಿ ಬಹಳಷ್ಟು ಪ್ರಾಯೋಗಿಕ ವೀಕ್ಷಣೆಗಳನ್ನು ನಡೆಸಿದ್ದು ವಿವಿಧ ಬೆಳೆಗಳ ಬೇಸಾಯಕ್ಕೆ ಸೂಕ್ತವಾದ ಮಣ್ಣಿನ ಗುಣಧರ್ಮಗಳ ಬಗ್ಗೆ ಪರಿಣತಿಯನ್ನು ಪಡೆದಿದ್ದರೆಂಬುದು ಸ್ಪಷ್ಟವಾಗುತ್ತದೆ.

'ಮರಳು ಮಣ್ಣು ಪಿಸ್ ಬತ್ತದ ಬೇಸಾಯಕ್ಕೆ ಸೂಕ್ತವಾಗಿದ್ದು ಜೇಡಿ ಮಣ್ಣು ಸಣಬಿನ ಬೇಸಾಯಕ್ಕೆ ಅನುಕೂಲಕರವಾಗಿರುತ್ತದೆ'. 'ಮರಳು ಯುಕ್ತ ಮೆಕ್ಕಲು ಮಣ್ಣಿನಲ್ಲಿ ಪೆಟಾಲ್ ಅನ್ನು ಬೆಳೆಸಿದರೆ ನಿರೀಕ್ಷಿತ ಫಲ ದೊರೆಯುತ್ತದೆ'.

'ಬಿದಿರು ಮೆಳೆಗಳ ಪಕ್ಕದಲ್ಲಿ ಆಲೂಗಡ್ಡೆ ಬೇಸಾಯ ಮಾಡಿದರೆ ಚೆನ್ನಾಗಿ ಬೆಳೆಯುತ್ತದೆ'.

'ನದೀ ದಂಡೆಯಲ್ಲಿ ಸೋರೆ ಬಿತ್ತಿದರೆ ಅದು ಮೂರು ಮೊಳದುದ್ದ ಬೆಳೆಯುತ್ತದೆ.'

ಅರ್ಥಶಾಸ್ತ್ರದಲ್ಲಿ ವಿವಿಧ ಬೆಳೆಗಳ ಬೇಸಾಯಕ್ಕೆ ಯೋಗ್ಯವಾದ ವಿವಿಧ ಜಮೀನುಗಳನ್ನು ಕುರಿತ ವಿವರಗಳು ದೊರೆಯುತ್ತವೆ.

'ನೊರೆಯ ಘೋಷಕ್ಕೆ ಸಿಕ್ಕುವ ಭೂಮಿಗಳು ಎಂದರೆ ನದೀ ದಂಡೆಗಳು ಮುಂತಾದವು ವಲ್ಲೀಫಲ (ಕುಂಬಳ, ಸೋರೆ, ಪಡವಲ ಇತ್ಯಾದಿ ತಿರುಳ್ಗಾಯಿ) ಬೆಳೆಯುವುದಕ್ಕೆ ಅನುಕೂಲಕರವಾಗಿರುತ್ತವೆ. ಆಗಾಗ್ಗೆ ನೀರಿನಿಂದ ತುಂಬಿ ಹರಿಯುವ ಭೂಮಿಗಳು (ಪರಿವಾಹಾಂತ) ಬಾಲಮೆಣಸು, ದ್ರಾಕ್ಷಿ (ಮೃದ್ವೀಕ) ಮತ್ತು ಕಬ್ಬು ಬೆಳೆಗಳಿಗೆ; ಬಾವಿಗಳ ಸುತ್ತಮುತ್ತಲ ಪ್ರದೇಶವು ತರಕಾರಿ ಮತ್ತು ಗೆಡ್ಡೆಗೆಣಸು (ಮೂಲಿಕೆ) ಗಳಿಗೆ; ತಗ್ಗು ಪ್ರದೇಶಗಳು (ಹರಣಿಪರ್ಯಂತ – ಕೆರೆಗಳ ತಂಪಾದ ಕ್ಷೇತ್ರ) ಹಸುರು ಬೆಳೆಗಳಿಗೆ; ಯಾವುದೇ ಬೆಳೆಸಾಲಿನ ನಡುವಣ ಅಂಚು ಸಾಲುಗಳು ಸುಗಂಧ ಸಸ್ಯಗಳು, ಔಷಧೀಯ ಸಸ್ಯಗಳು ಹಾಗೂ ಖಸ್-ಖಸ್ ಬೇರುಗಳು (ಉಶೀರ), ಹ್ರೀರ (?) ಪಿರಕ (?) ಮತ್ತು ಪಿಂಡಾಲುಕ (ಆರಗು) ಇತ್ಯಾದಿ ಬೆಳೆಗಳಿಗೆ ಅನುಕೂಲಕರವಾಗಿರುತ್ತವೆ (ಅರ್ಥಶಾಸ್ತ್ರ, ಇಂಗ್ಲಿಷ್ ಅನುವಾದ ಡಾ. ಶಾಮಾಶಾಸ್ತ್ರಿ, ಪು. 198).

ಕೃಷಿ ಸಂಗ್ರಹದ (ಕೃಷಿ ಸಂಗ್ರಹ, ವಂಗಭಾಷಾ ಆವೃತ್ತಿ; ಇಲ್ಲಿ ಕೃಷಿ ಸಂಗ್ರಹದ ಎಲ್ಲ ಶ್ಲೋಕಗಳನ್ನು ಲೇಖಕರು ಮೊದಲ ಬಾರಿಗೆ ಅನುವಾದ ಮಾಡಿದ್ದಾರೆ). ಈ ಮುಂದಿನ ಸಾಲುಗಳಿಂದ ರೈತರು ಬೀಜ ಪೋಷಕೆಯಾಗುವುದಕ್ಕೆ ಬೇಕಾದ ನೀರಿನ ಅವಶ್ಯಕತೆ, ಮಣ್ಣು ಸಾಕಷ್ಟು ತೇವಾಂಶಯುಕ್ತವಾಗಿರಬೇಕಾದುದು ಇವೆಲ್ಲ ವಿಷಯಗಳನ್ನೂ ಸಂಪೂರ್ಣವಾಗಿ ತಿಳಿದಿದ್ದರೆಂಬುದು ವ್ಯಕ್ತವಾಗುತ್ತದೆ.

'ಬೇಸಾಯಕ್ಕೆ ಮಳೆ ಅವಶ್ಯಕವಾದುದು. ಹಾಗೆಯೇ ಬೇಸಾಯವು ಜೀವನಕ್ಕೆ ಅವಶ್ಯಕ. ಆದಕಾರಣ ಮೊದಲು ಪ್ರತಿಯೊಬ್ಬರೂ ಮಳೆಯನ್ನು ಕುರಿತು ತಿಳಿವಳಿಕೆ ಪಡೆದಿರಬೇಕು'.

ಪ್ರೊ. ಜಿ. ಪಿ. ಮಜುಂದಾರ್ ಅವರು ತಮ್ಮ ಶ್ರೇಷ್ಠ ಅನುವಾದಿತ ಕೃತಿ ಉಪವನ ವಿನೋದದಲ್ಲಿ (1935ರಲ್ಲಿ ಇಂಡಿಯನ್ ರೀಸರ್ಚ್ ಇನ್ಸ್ಟಿಟ್ಯೂಟ್, ಕಲ್ಕತ್ತ

ಇದರಿಂದ ಪ್ರಕಟಿತ) ಚರಕ (ಕಲ್ಪಸ್ಥಾನ 1, ಮದನ ಫಲಕಲ್ಪ, 6, 7–9; ಇಂಗ್ಲಿಷ್ ಅನುವಾದ ಪಾಠ 1, ಪುಟ 1917–1918) ಮತ್ತು (ಶುಶ್ರುತ ಸೂತ್ರಸ್ಥಾನ, ಅಧ್ಯಾಯ 35, 34–42, ಇಂಗ್ಲಿಷ್ ಅನುವಾದ ಕೆ. ಎಲ್. ಬಿಶಗ್ರತ್ನ, ಸಂಪುಟ II, ಪುಟ 325–326, ಕಲ್ಕತ್ತ 1911) ಇವರ ಕೃತಿಗಳಲ್ಲಿ ವಿಶಿಷ್ಟ ಸಸ್ಯವರ್ಗಗಳ ಲಕ್ಷಣಗಳಿಂದ ಕೂಡಿದ ಮಣ್ಣು ವರ್ಗೀಕರಣ, ಒಪ್ಪುವಂತೆ ಪಕ್ಕಾಗಿ ಗಮನವಿತ್ತಿರುವುವನ್ನು ತೋರಿಸಿ ಕೊಟ್ಟಿದ್ದಾರೆ. ಈ ಮುಂದಿನ ಭಾಗಗಳನ್ನು ಶ್ರೀ. ಮಜುಂದಾರರ ಕೃತಿಯಿಂದ ಆಯ್ದುಕೊಟ್ಟಿದೆ :

ಚರಕ ಭೂಮಿಯನ್ನು ಮಣ್ಣಿನ ಸ್ವಭಾವ (ಸಸ್ಯ ಉತ್ಪತ್ತಿಸಾಮರ್ಥ್ಯ) ಹಾಗೂ ವಾಯುಗುಣಪರಿಸ್ಥಿತಿಗಳಿಗನುಗುಣವಾಗಿ ಮೂರು ವರ್ಗಗಳಾಗಿ ವಿಂಗಡಿಸಿದ್ದಾನೆ. ಅವು ಜಂಗಲ, ಅನೂಪ ಹಾಗೂ ಸಾಧಾರಣ ಭೂಮಿಗಳು.

ಜಂಗಲ ಪ್ರದೇಶ : ಇದು ಅಡೆತಡೆಗಳಿಲ್ಲದ ವಿಶಾಲ ಪ್ರದೇಶವಾಗಿದ್ದು ಒಂದೇ ಸಮನೆ ಶುಷ್ಕಗಾಳಿ ಬೀಸುತ್ತಿರುತ್ತದೆ. ಇಂಥ ಪ್ರದೇಶದಲ್ಲಿ ದೊಡ್ಡ ದೊಡ್ಡ ಮರೀಚಿಕೆ (ಮೃಗಜಲ)ಗಳು ಆವರಿಸಿರುತ್ತವೆ. ನದಿಗಳು, ಹೊಳೆಗಳು ವಿರಳವಾಗಿದ್ದು ಬಾವಿಗಳಿಂದ (ಕೃತಕ) ಕೂಡಿರುತ್ತದೆ (ಎಂದರೆ, ಅಲ್ಲಿ ನೀರಿಗೆ ಅಭಾವವಿರುತ್ತದೆ), ಶುಷ್ಕ ಹಾಗೂ ಒರಟು ಮರಳು ಮತ್ತು ದೊಡ್ಡ ಮರಳು ಕಣಗಳು ತುಂಬಿರುತ್ತವೆ (ಕೆಂಕರ್ಸ್) (ಶ್ಲೋ. 6, 7).

ಶುಶ್ರುತನು ಈ ಪ್ರದೇಶವನ್ನು ಕುರಿತು ಅದು ವೈವಿಧ್ಯತೆ ಇಲ್ಲದ ಸಮತಟ್ಟಾದ ಭೂಮಿಯನ್ನು ಹೊಂದಿರುತ್ತದೆ, ಅಲ್ಲಲ್ಲಿ ಮುಳ್ಳು ಪೊದೆಗಳು ಮತ್ತು ಕೆಲವು ಬೆಟ್ಟ ಗುಡ್ಡಗಳು ಕಂಡುಬರುತ್ತವೆ, ಅಲ್ಲಿ ಮಳೆಗಾಲದಲ್ಲಿ ಶೇಖರವಾದ ನೀರಿನಿಂದ ತುಂಬಿದ ಚಿಲುಮೆಗಳೂ ಬಾವಿಗಳೂ ಸಂಪೂರ್ಣ ಬತ್ತಿದಂತಾಗುತ್ತವೆ ಹಾಗೂ ಬಿಸಿಯಾದ ಬಿರುಗಾಳಿಯು ಬಲವಾಗಿ ಬೀಸುತ್ತಿರುತ್ತದೆ (ವರ್ಷದ ಬಹುಕಾಲವೆಲ್ಲ) ಎಂದು ವಿವರಿಸಿದ್ದಾನೆ (ಶ್ಲೋ. 35).

ಚರಕನು ಈ ಪ್ರದೇಶದಲ್ಲಿ ಬೆಳೆಯುವ ವಿಶೇಷ ಸಸ್ಯಗಳ ಪಟ್ಟಿಯನ್ನು ಕೊಟ್ಟಿದ್ದಾನೆ : ಅವು ಖದಿರ, ಅಸನ ಅಶ್ವಕರ್ಣ (ಮತ್ತೀಮರ) ಧವ, ತಿನಿಸ, ಸಲ್ಲಕಿ, ಸಾಲ, ಸೋಮವಲ್ಕ, ಬದರಿ, ತಿಂದುಕ, ಅಶ್ವತ್ಥ, ವಟ (ಆಲ) ಮತ್ತು ಆಮಲಕಿ. ಇವುಗಳಲ್ಲಿ ಶಮೀ (ಬನ್ನಿಮರ), ಅರ್ಜುನ ಮತ್ತು ಸಿಂಸಪ ವೃಕ್ಷಗಳು ಪ್ರಧಾನವಾದುವು (ಶ್ಲೋ. 6 ಮತ್ತು 7).

ಅನೂಪ ಪ್ರದೇಶ (ಅಕ್ಷರಶಃ ಜೌಗು ಅಥವಾ ಜಲಸಸ್ಯಗಳ ತೀರ ಪ್ರದೇಶ ಅಥವಾ ಒಳನಾಡು) : ಬಹುವಾಗಿ ನದಿಗಳಿಂದ ತುಂಬಿದ್ದು ಸಮುದ್ರದಿಂದ ಸಂತೃಪ್ತವಾಗಿ

ದಿರುತ್ತದೆ. ಶೀತ ಮಾರುತ ಬೀಸುತ್ತಿರುತ್ತದೆ. ಎಂದರೆ ವಿಪರೀತ ತೇವಾಂಶದಿಂದ ತುಂಬಿರುತ್ತದೆ. ಇಂಥ ದೇಶದಲ್ಲಿ ಅಲ್ಲಲ್ಲಿ ನದಿಗಳು ಹರಿಯುತ್ತಿದ್ದು ತೀರ ಪ್ರದೇಶವೆಲ್ಲ ವಂಜುಲ ಮತ್ತು ವನಿರ ವೃಕ್ಷಗಳಿಂದ ಅಲಂಕೃತವಾಗಿರುತ್ತದೆ. ಇಂಥಲ್ಲಿ ಪರ್ವತ ಪ್ರದೇಶಗಳು ಕಂಡುಬರುವುದಿಲ್ಲ. ಈ ಪ್ರದೇಶದಲ್ಲೆಲ್ಲಾ ಬಳ್ಳಿ ಮಾಡಗಳು (ಪೊದೆಗಳು) ದಟ್ಟವಾಗಿ ತುಂಬಿದ್ದು ಪುಷ್ಪ ವೃಕ್ಷಗಳು ಹಾಗೂ ಕೋಮಲ ಬಳ್ಳಿಗಳಿಂದ ಆವೃತವಾಗಿರುತ್ತದೆ (ಒಳನಾಡು). ಭೂಮಿಯೆಲ್ಲಾ ಹಿಂತಾಲ, ತಮಾಲ. ನಾರಿಕೇಲ, ಹಾಗೂ ಕದಳೀ ವೃಕ್ಷಗಳ ದಟ್ಟ ಕಾಡಿನಿಂದ ತುಂಬಿರುತ್ತದೆ (ಶ್ಲೋ. 8).

ಸುಶ್ರುತನು ಈ ಪ್ರದೇಶವು ಬಹಳಷ್ಟು ಕೆರೆಗಳಿಂದ ಕೂಡಿದ್ದು ಕಾಡು ಮತ್ತು ಉದ್ದಕ್ಕೂ ತರಂಗ ತರಂಗವಾಗಿ ಹಬ್ಬಿದ ಉನ್ನತ ಪರ್ವತಗಳಿಂದ ತುಂಬಿರುತ್ತದೆ. ಪ್ರದೇಶವೆಲ್ಲ ನದಿಗಳ ಶಾಖೋಪಶಾಖೆ ಜಾಲ ಹಾಗೂ ಮಂದ ಆರ್ದ್ರಗಾಳಿಯಿಂದಾಗಿ ಕಿರುದೆರೆಗಳಂತೆತೋರುವ ಶೇಖರಿತ ಮಳೆ ನೀರಿನ ಫಲವಾಗಿ ದುರ್ಗಮವಾಗಿರುತ್ತದೆಂದು ವಿವರಿಸಿದ್ದಾನೆ (ಶ್ಲೋ. 34).

ವರಾಹಮಿಹಿರನು ಈ ಪ್ರದೇಶದಲ್ಲಿ ಮುಂದೆ ತಿಳಿಸುವ ವೃಕ್ಷಗಳು ಬೆಳೆಯುತ್ತವೆಂದು ತಿಳಿಸಿದ್ದಾನೆ; ಜಂಬು, ವೇತಸ, ವಾನೀರ, ಕದಂಬ, ಉದುಂಬರ, ಅರ್ಜುನ, ವೀಜಪೂರಕ, ದ್ರಾಕ್ಷಾ, ಲಕೂಚ, ದಾಡಿಮ, ವಂಜುಲ, ನಕ್ತಮಾಲ, ತಿಲಕ, ಪನಸ, ತಿಮಿರ ಮತ್ತು ಅಮ್ರಾಟಕ–ಈ 16 ಬಗೆಯ ಮರಗಳು ಈ ಪ್ರದೇಶದಲ್ಲಿ ಬೆಳೆಯುವ ಪ್ರಮುಖ ವೃಕ್ಷಜಾತಿಗಳಾಗಿವೆ [ಬೃಹತ್ಸಂಹಿತ ಅಧ್ಯಾಯ 54, 10–11, ಸಂಪುಟ II. ಪುಟ 745 (ಪಠ್ಯ)].

ಅಮರಕೋಶದಲ್ಲಿ ಸೌಗಂಧಿಕ, ಕಲ್ಹಾರ, ಹಲ್ಲಕ, ರಕ್ತಸಂಧ್ಯಕ, ಉತ್ಪಲ, ಕುವಲಯ(ಕುಬಲಯ), ಇಂದೀವರ, ಕುಮುದ, ಪದ್ಮ, ಕಮಲ, ಪುಂಡರೀಕ, ಸೀತಾಂಭೋಜ (ಬಿಳಿಕಮಲ), ಕೋಕನದ, ರಕ್ತೋತ್ಪಲ, ವಾರಿಪರ್ಣಿ, ಮುಸಕರ್ಣಿ, ಜಲನೀಲೀ(ಹಾವಸೆ) ಮತ್ತು ಶೈವಲ–ಇವೆಲ್ಲ ಪೂರ್ಣಜಲಸಸ್ಯಗಳೆಂದು ತಿಳಿಸಲಾಗಿದೆ (ಪಾಟಲಿವರ್ಗ 50–56, ಕಾಲ್‌ಬುಕ್‌ನ ಆವೃತ್ತಿ (1807), ಪುಸ್ತಕ 1, ಅಧ್ಯಾಯ 2, ವಿಭಾಗ 3, 36–42).

ಸಾಧಾರಣ ಪ್ರದೇಶ (ಪದಶಃ ಮಧ್ಯಮ ವರ್ಗದ–ಸಾಮಾನ್ಯ ಸಸ್ಯಗಳು): ಚರಕನ ಪ್ರಕಾರ 'ಬಳ್ಳಿಗಳಿಂದ ತುಂಬಿದ್ದು ವನಸ್ಪತ್ಯ ಮತ್ತು ವನಸ್ಪತಿ ಎರಡೂ ವರ್ಗಗಳಲ್ಲಿಯ ಸಸ್ಯ ವೃಕ್ಷಗಳನ್ನು ಹೊಂದಿರುವ ಪ್ರದೇಶ'ವನ್ನು ಸಾಧಾರಣ ಪ್ರದೇಶವೆಂದು ಕರೆಯಲಾಗುತ್ತದೆ (ಶ್ಲೋ. 9).

ಸುಶ್ರುತನ ಪ್ರಕಾರ ಮೇಲೆ ತಿಳಿಸಿದ ಎರಡೂ ವರ್ಗಗಳಿಗೆ ಸಾಮಾನ್ಯವಾಗಿರುವ ಗುಣವೈಲಕ್ಷಣ್ಯಗಳು ಕಂಡುಬರುವ ಪ್ರದೇಶವು ಸಾಧಾರಣ ಅಥವಾ ಸಾಮಾನ್ಯ ಭೂಮಿಯಾಗಿರುತ್ತದೆ (ಶ್ಲೋ. 36).

ಈ ಪ್ರದೇಶಗಳಲ್ಲಿಯ ಮಳೆಯ ಪ್ರಮಾಣವನ್ನು ಕುರಿತಾಗಿ ಕೌಟಿಲ್ಯನು ತನ್ನ ಅರ್ಥಶಾಸ್ತ್ರ ಕೃತಿಯಲ್ಲಿ ಜಂಗಲ (ರುಕ್ಷ) ಪ್ರದೇಶದಲ್ಲಿ 16 ದ್ರೋಣಗಳಷ್ಟು ಮಳೆಯಾದರೆ ಅದರ ಒಂದೂವರೆಪಟ್ಟು ಅನೂಪ (ಆರ್ದ್ರ) ಪ್ರದೇಶದಲ್ಲೂ ಮಳೆಯಾಗುತ್ತದೆ. ಕೃಷಿಯೋಗ್ಯ ಪ್ರದೇಶ (ದೇಶಾವಾಪನಂ) -ಅಶ್ಮಕ (ಮಹಾರಾಷ್ಟ್ರ) ಗಳಲ್ಲಿ 13½ ದ್ರೋಣಗಳಷ್ಟು ಮಳೆಯಾಗುತ್ತದೆ. ಅವಂತಿಯಲ್ಲಿ 23, ಅಪರಾಂತದಲ್ಲಿ (ಕೊಂಕಣ) ಮತ್ತು ಹಿಮಾಲಯದ ಸುತ್ತಮುತ್ತಲ ಪ್ರದೇಶದಲ್ಲಿ ವಿಪುಲವಾಗಿ ಮಳೆಯಾಗುತ್ತದೆ ಎಂದು ವಿವರಿಸಿದ್ದಾನೆ. ಅಲ್ಲದೆ ನೊರೆಯು ಹೊಡೆದಕ್ಕೆ ಸಿಕ್ಕುವ ಭೂಮಿಗಳು (ಫೇನ ಘಟ್ಟ ಎಂದರೆ, ಕೆರೆಗಳ ದಂಡೆ ಇತ್ಯಾದಿಗಳು) ವಲ್ಲೀ ಫಲ (ಕುಂಬಳ, ಪಡವಲ, ಇತ್ಯಾದಿ ತಿರುಳುಗಾಯಿ) ಬೆಳೆಯುವುದಕ್ಕೆ ಯುಕ್ತವಾಗಿರುತ್ತವೆ. ಆಗಾಗ್ಗೆ ನೀರು ಪ್ರವಾಹಕ್ಕೀಡಾಗುವ ಭೂಮಿಗಳು (ಪರಿವಾಹಾಂತ) ಬಾಲ ಮೆಣಸು, ದ್ರಾಕ್ಷಾಫಲ (ಮೃದ್ವೀಕ) ಮತ್ತು ಕಬ್ಬು ಬೆಳೆಗೆ ಅನುಕೂಲವಾಗಿರುತ್ತವೆ. ಬಾವಿಗಳ ಸುತ್ತು ಮುತ್ತಲ ಪ್ರದೇಶವು ತರಕಾರಿ ಮತ್ತು ಗೆಡ್ಡೆಗೆಣಸು ಬೆಳೆಗೂ ತಗ್ಗು ಪ್ರದೇಶಗಳು (ಹರಿಣಿಪರ್ಯಂತ-ಕೆರೆಗಳ ಆರ್ದ್ರದಂಡೆ) ಹಸುರು ಸಸ್ಯ ಬೆಳೆಗೂ ಯುಕ್ತವಾಗಿರುತ್ತವೆ. ಯಾವುದೇ ಬೆಳೆಸಾಲುಗಳ ನಡುವಣ ಅಂಚು ಪ್ರದೇಶವು ಸುಗಂಧಸಸ್ಯಗಳ ಹಾಗೂ ಔಷಧೀಯ ಮೂಲಿಕೆಗಳ ಕ್ಯಾಸ್‌ಕಸ್ ಬೇರುಗಳು (ಉಶೀನರ?), ಹೀರ (?), ಬೆರಕ (?) ಮತ್ತು ಪಿಂಡಾಲುಕ (ಆರಗು) ಮುಂತಾದುವುಗಳ ಬೆಳೆಗೆ ಉಪಯುಕ್ತವಾಗಿರುತ್ತದೆ, ಎಂದು ತಿಳಿಸುತ್ತಾನೆ (ಅಧ್ಯಾಯ 24, 116–117, ಶ್ಯಾಮಾಶಾಸ್ತ್ರಿ ಆವೃತ್ತಿ–1915 ಮು.ಪು. : 143–145).

ಈ ವಿಭಾಗದ ಸಮೀಕ್ಷೆಯಿಂದ ಮಣ್ಣಿನ ವರ್ಗೀಕರಣವು ಸಾಮಾನ್ಯವಾಗಿ ಸಸ್ಯಗಳ ಔಷಧೀಯ ಗುಣ ಹಾಗೂ ಆರ್ಥಿಕ ಉಪಯುಕ್ತತೆಗಳನ್ನು ಆಧರಿಸಿರುವುದು ಸ್ಪಷ್ಟವಾಗುತ್ತದೆ. ವೈದ್ಯಕೀಯ ವಿಚಾರದಲ್ಲಿ ಅಧಿಕೃತ ವ್ಯಕ್ತಿಗಳಾದ ಚರಕ ಮತ್ತು ಸುಶ್ರುತರು ವರ್ಗೀಕರಣದಲ್ಲಿ ಮಣ್ಣಿನ ಸ್ವಭಾವವನ್ನವಲಂಬಿಸಿ ಬೆಳೆಯುವ ಔಷಧೀಯ ಮೂಲಿಕೆಗಳ ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡಿದ್ದರು. ಆದರೆ ಚಾಣಕ್ಯನಂತಹ ರಾಜನೀತಿಜ್ಞರು ಒಳ್ಳೆಯ ಸರಕಾರವು ಬರ ಪರಿಸ್ಥಿತಿಯನ್ನು ತಡೆಯಲು ಅವಶ್ಯವಾಗಿ ಗಮನಿಸಬೇಕಾದ ವಿವಿಧ ಬಗೆಯ ಮಣ್ಣುಗಳ ಉತ್ಪಾದಕತೆಗೆ ಗಮನವಿತ್ತಿದ್ದರು.

ವ್ಯವಸಾಯಯೋಗ್ಯ ಜಮೀನುಗಳನ್ನು ವಿವಿಧ ರೀತಿಗಳಲ್ಲಿ ವರ್ಗೀಕರಿಸಲಾಗಿದ್ದಿತು. ಉತ್ತರ ಭಾರತದಲ್ಲಿ ಆರ್ಯರಿಗೆ ಉಪಭೂಮಿಯ ಬಗ್ಗೆ ಅಂದರೆ,

ಕ್ಷಾರ ಮಣ್ಣಿನ ಬಗ್ಗೆ ಒಳ್ಳೆಯ ತಿಳಿವಳಿಕೆ ಇದ್ದಿತು. ಎತ್ತರ ಅಥವಾ ತಗ್ಗು ಭೂಮಿ ಎಂದು ವರ್ಗೀಕರಿಸುವುದಕ್ಕೆ ಹೆಚ್ಚಿನ ಬುದ್ಧಿವಂತಿಕೆಯೇನೂ ಬೇಕಾಗುವುದಿಲ್ಲ. ಇಲ್ಲಿ ಮಳೆಯನ್ನೇ ಆಶ್ರಯಿಸಿ ಬೆಳೆ ಬೆಳೆಯಬೇಕಾದ ಭೂಮಿಗಳು ಹಾಗೂ ಜಲಪ್ರವಾಹ ಇಲ್ಲವೇ ನದಿಗಳ ನೀರಿನಿಂದ ನೀರಾವರಿ ಮಾಡಬಹುದಾದ ಭೂಮಿಗಳೆಂದು ವರ್ಗೀಕರಣ ಮಾಡುವುದು ಒಂದು ಅತ್ಯಂತ ಪ್ರಾಚೀನ ವರ್ಗೀಕರಣ ಪದ್ಧತಿಯಾಗಿದೆ. ಕೌಟಿಲ್ಯನು ಒಂದು ದೇಶದ ಭೂ ಪ್ರದೇಶವನ್ನು ಅಲ್ಲಿ ಆಗುವ ಮಳೆಯ ಪ್ರಮಾಣದ ಮೇಲೆ ವರ್ಗೀಕರಿಸಿದ್ದಾನೆ. ಈತನಂತೆ ಗರಿಷ್ಠ ಮಳೆಯಾಗುವ ಪ್ರದೇಶಗಳು, ಪಶ್ಚಿಮ ಘಟ್ಟಗಳು ಹಾಗೂ ಹಿಮಾಲಯದ ದಕ್ಷಿಣ ಅಂಚು ಪ್ರದೇಶಗಳಾಗಿದ್ದು ಮರಳುಗಾಡುಗಳು ಕನಿಷ್ಠ ಮಳೆಯ ಪ್ರದೇಶಗಳಾಗಿವೆ. ಇದೇ ರೀತಿ ಭೂಮಿಗಳನ್ನು ಅಲ್ಲಿ ಚೆನ್ನಾಗಿ ಬೆಳೆಯಲಾಗುವ ಬೆಳೆಯ ಆಧಾರದ ಮೇಲೂ ಸಹ ವರ್ಗೀಕರಿಸಲಾಗುತ್ತಿತ್ತು.

ಕಶ್ಯಪ ಮಹರ್ಷಿಗಳೂ ಸಹ ತಮ್ಮ 'ಕೃಷಿ ಪ್ರಕರಣಗ್ರಂಥ' (ಮೂಲ ಸಂಸ್ಕೃತ ಹಸ್ತಪ್ರತಿಯಿಂದ ಅನುವಾದಿತ)ದಲ್ಲಿ ವಿಶಿಷ್ಟ ಬೆಳೆಗಳಿಗೆ ಯೋಗ್ಯಾಯೋಗ್ಯತೆಗನುಗುಣವಾಗಿ ಭೂಮಿಯನ್ನು ವಿಂಗಡಿಸಿದ್ದಾರೆ. ಇದರಂತೆ ಭೂಮಿಯನ್ನು ಪರ್ವತಮಯ ಪ್ರದೇಶ, ನದೀ ಹಾಗೂ ತೊರೆಗಳಿಂದ ನೀರಾವರಿಯಾಗುವ ಭೂಮಿ, ಕಾಡು ಹಾಗೂ ಹುಲ್ಲುಗಾವಲು ಭೂಮಿ ಇತ್ಯಾದಿಯಾಗಿ ವಿಂಗಡಿಸಲಾಗಿದೆ. ಈ ಮುಂದಿನ ವಾಕ್ಯವೃಂದಗಳನ್ನು ಆ ಕೃತಿಯ ಇಂಗ್ಲಿಷ್ ಅನುವಾದಿತ ಪ್ರತಿಯಿಂದ ಉದ್ಧರಿಸಲಾಗಿದೆ.

ವ್ಯವಸಾಯಯೋಗ್ಯ ಭೂಮಿಗಳಿಂದ ತುಂಬಿದ ಪೃಥ್ವಿಯು ನಾನಾರೂಪವಾಗಿದೆ. ಆ ವಿವಿಧ ಬಗೆಗಳನ್ನು ವಿವಿಧ ವಿಭಾಗಗಳಾಗಿ ವಿಂಗಡಿಸಬೇಕು(ವಿವಿಧೋದ್ದೇಶಗಳಿಗಾಗಿ) (ಶ್ಲೋ. 23).

ಭೂ ವಿಂಗಡಣೆ

ಸೃಷ್ಟಿಸುವಾಗಲೇ ಸಮುದ್ರದಿಂದ ಸುತ್ತುವರಿದ ಭೂಮಿಯನ್ನು ಸೃಷ್ಟಿಕರ್ತನಾದ ಬ್ರಹ್ಮ ಸಮತಟ್ಟಾಗಿಸಿದನು (ಶ್ಲೋ. 24).

ಭೂಮಿಯು ಎಲ್ಲ ಕಾಲಗಳಲ್ಲಿಯೂ ವಿವಿಧ ಬಗೆಯ ಹಣ್ಣು ಹಂಪಲುಗಳನ್ನು ಕೊಡುತ್ತಿದ್ದು, ದೇವ, ಗಂಧರ್ವ, ಋಷಿ ಹಾಗೂ ರಾಜರುಗಳಿಂದ ಸ್ತುತ್ಯವಾಗಿದ್ದಿತು. ಪ್ರತಿ ಬಾರಿ ವಿಶ್ವ 'ಲಯ' ವಾದಾಗಲೂ ಪೃಥ್ವಿಯು ಹೊಸದಾಗಿ ಸೃಷ್ಟಿಗೊಂಡು ಜೀವ ಹಾಗೂ ಹಣ್ಣುಹಂಪಲು ಉತ್ಪಾದನಾ ಶಕ್ತಿಯನ್ನು ಪಡೆಯುತ್ತಿತ್ತು (ಶ್ಲೋ. 25).

ಕೆಲವೆಡೆಗಳಲ್ಲಿ ಪೃಥ್ವಿಯು ಸಮುದ್ರಕ್ಕೆ ಬರುವ ನೀರಿನ ಪ್ರವಾಹಕ್ಕೀಡಾಗಿ ಕೊಚ್ಚಿ ಹೋಗುತ್ತಿದ್ದರೆ ಇತರೆಡೆಗಳಲ್ಲಿ ಸಮುದ್ರವೇ ಹಿಮ್ಮೆಟ್ಟಲ್ಪಡುತ್ತಿತ್ತು.

ಇನ್ನೂ ಕೆಲವೆಡೆಗಳಲ್ಲಿ ಕಾಲದ ಅವಶ್ಯಕತೆಗೆ ತಕ್ಕಂತೆ ವಿವಿಧ ಕಾಲಗಳಲ್ಲಿ ಬಿರುಕುಗಳು ಏರ್ಪಟ್ಟವು (ಶ್ಲೋ. 26).

ಕೆಲವೆಡೆಗಳಲ್ಲಿ ಉಪಯುಕ್ತ ಹಾಗೂ ಫಲಕಾರಿ ಚಿಲುಮೆಗಳು ಉಂಟಾದರೆ ಇನ್ನು ಕೆಲವೆಡೆ ಭೂಮಿಯು ಸಮತಲದಲ್ಲಿ ಉಬ್ಬು ತಗ್ಗುಗಳು, ಬೆಟ್ಟ ಪ್ರದೇಶಗಳು, ನದಿಗಳು, ತೊರೆಗಳು, ದೊಡ್ಡ ಕೆರೆಗಳು ಹಾಗೂ ಫಲವತ್ತಾದ ಭೂಮಿಗಳು ಉಂಟಾದವು (ಶ್ಲೋ. 27–28).

ಕೆಲವೆಡೆಗಳಲ್ಲಿ ಭೂಮಿಯು ಮಣ್ಣು ಗರಸಾಗಿತ್ತು. ಇದು ಕೆಲವೆಡೆ ಭೂಮಿ ಬಿಸಿಯೇರಿದ್ದು ಮತ್ತೆ ಕೆಲವೆಡೆ ಜಲಾಭಾವಪೂರಿತವೂ ಕೆಲವೆಡೆ ಜೌಗುಯುಕ್ತವಾಗಿಯೂ ಇದ್ದು. ಬೀಜ ಮೊಳಕೆಗೆ ಹಾನಿಕರವಾಗಿದ್ದಿತು. ಹೀಗೆ ಕಾಲಕ್ರಮೇಣ ಭೂಮಿಯು ಬಹುರೂಪಿಯಾಗಿ ಪರಿಣಮಿಸಿತು. (ಶ್ಲೋ. 29–30).

ಆದಕಾರಣ ಪ್ರಜಾಕಲ್ಯಾಣಬದ್ಧನಾದ ರಾಜನು ಸಮೃದ್ಧ ಕೊಯ್ಲಿಗೆ ಅತ್ಯುತ್ತಮ ಭೂಮಿ ಯಾವುದೆಂದು ಪರೀಕ್ಷಿಸಬೇಕು (ಶ್ಲೋ. 31).

ಭೂಮಿ (ಭೂಮಿ ಪದವನ್ನು ಸಂದರ್ಭೋಚಿತವಾಗಿ ಬೇರೆ ಬೇರೆಯಾಗಿ ಅನುವಾದಿಸಬೇಕು) ಸ್ವಚ್ಛವಾಗಿದ್ದು ಅದರಲ್ಲಿ ಧೂಳಿ ಮತ್ತು ಕಲ್ಲುಚೂರುಗಳು, ಹೊಟ್ಟು ಮತ್ತು ಗಾಜು ಇತ್ಯಾದಿ ಚೂರುಗಳಿರಬಾರದು (ಮೂಲದ 'ತುಷ-ಕಚ' ಪದಗಳು (ನನ್ನ ದೃಷ್ಟಿಯಲ್ಲಿ) ಕಾಡು ಹುಲ್ಲುಗಳಾದ 'ಕುಶ-ಕಶ' ಎಂಬುದಾಗಿ ಬದಲಾಯಿಸಬೇಕು). ಮಣ್ಣು ಮೃದುವಾಗಿದ್ದು ದೃಢವಾದುದೂ ಜಿಗುಟಾಗಿಯೂ ಆರ್ದ್ರಮಯವಾಗಿಯೂ ಇರಬೇಕು ; ಹಾಗೆಯೇ ಅದು ತಂಪು ಕೆಂಬಣ್ಣವಿದ್ದು ಕಪ್ಪಾಗಿರಬೇಕು. ಭೂಮಿಯು ಮೇಲ್ಮೈ ಹಳ್ಳದಿಣ್ಣೆಗಳು, ಬಿರುಕುಗಳು ಇಲ್ಲದೆ ಮಟ್ಟವಾಗಿದ್ದು ಮಲ್ಲಿಕ (ಜಾಸ್ಮಿನಂ ಸಾಂಬಾಕ್), ಜಾತಿ (ಜಾಸ್ಮಿನಂ ಗ್ರ್ಯಾಂಡಿಫ್ಲೋರಂ), ಕುಟಜ (ರಿಂಗ್ಟಿಯಾ ಆ್ಯಂಟಿಡೈಸೆಂಟೆರಿಕ), ದ್ರಾಕ್ಷಾರಸ ಇಲ್ಲವೇ ಕಮಲ ಇಲ್ಲವೇ ಖರ್ಜೂರ ಇಲ್ಲವೇ ತಿನಿಸ (ಡಾಲ್ಬರ್ಜಿಯಾ ಉಜ್ಜೈನೆನ್ಸಿಸ್) ಗಳ ಮಧುರ ಕಂಪನ್ನು ಸೂಸುತ್ತಿರಬೇಕು.

ಭೂಮಿಯಲ್ಲಿ ಎಲ್ಲ ಕಾಲದಲ್ಲಿಯೂ ಹೆಚ್ಚಿನ ನೀರು ಇಲ್ಲದಿರಬಹುದು ಅಥವಾ ಅದು ಎಲ್ಲಕಾಲದಲ್ಲಿಯೂ ಜಲಮಯವಾಗಿರಬಹುದು. ಆದರೆ ಅಲ್ಲಿ ಬೀಜಗಳು ಮೊಳಕೆಯೊಡೆಯಲು ಅನುಕೂಲವಾಗಿದ್ದು ಭೂಮಿ ಉಳುಮೆಗೆ ಸುಲಭ ಸಾಧ್ಯವಾಗಿರಬೇಕು. ಆ ಭೂಮಿ ಗೂಳಿಗಳ ಮೆಲುಕುಳಿ ಆಹಾರ (ವೃಷಫೇನ) ದಿಂದ ತುಂಬಿರಬಹುದು. ಹಾಗೆಯೇ ಅಲ್ಲಿ ಉಪಯೋಗಿ ಪ್ರಾಣಿ, ಕೀಟಗಳು ತುಂಬಿರಬಹುದು. ಮಣ್ಣು ಒತ್ತಾಗಿ ಘನವಾಗಿದ್ದು ಮೂಲಿಕೆಗಳು ಚೆನ್ನಾಗಿ ಬೆಳೆಯಲು ತಕ್ಕ ರೀತಿಯ ತೂಕದ ಮಣ್ಣಾಗಿರಬೇಕಲ್ಲದೆ ಸಸ್ಯಗಳು ಹುಲುಸಾಗಿ ಬೆಳೆಯುವಂತಿರ

ಬೇಕು. ಮುಳ್ಳು ಪೊದೆ ಮತ್ತು ಒಣತೊಪ್ಪೆ (ಸಗಣಿ) ಗಳಿಲ್ಲದಂತಿರಬೇಕು (ಶ್ಲೋ. 35–36).

ಭೂಮಿಯಲ್ಲಿ ಐದು ಬಗೆ ಇರುತ್ತವೆ. ಅವುಗಳೆಂದರೆ ಬ್ರಾಹ್ಮಣ ಭೂಮಿ, ಕ್ಷತ್ರಿಯ ಭೂಮಿ, ವೈಶ್ಯ ಭೂಮಿ, ಶೂದ್ರ ಭೂಮಿ ಹಾಗೂ ಮಿಶ್ರಗುಣದ ಭೂಮಿ (ಶ್ಲೋ. 37).

ರಾಜನು ಇವುಗಳನ್ನು ಚೆನ್ನಾಗಿ ಪರೀಕ್ಷಿಸಿ ಶುದ್ಧ ನೀರು ಸೌಲಭ್ಯವಿರುವ ಮೇಲ್ಮೈ ಹಾಗೂ ಒಳಭಾಗಗಳೆರಡರಲ್ಲೂ ಫಲವತ್ತಾದ (ಕಲ್ಪಕಿ) ಮಣ್ಣಿನಿಂದ ಸಮೃದ್ಧವಾಗಿರುವ ಭೂಮಿಯನ್ನು ಆಯ್ಕೆ ಮಾಡಿಕೊಳ್ಳಬೇಕು. ಅಂಥ ಜಮೀನು ನೋಟಕ್ಕೆ ಆಹ್ಲಾದಕರವಾಗಿದ್ದು ಅಲ್ಲಿ ಗೆದ್ದಲು ಮತ್ತು ಹಾನಿಕಾರಿ ಪಶುಪಕ್ಷಿ ಕೀಟ ಗಳಿರಬಾರದು. ಆದರೆ ಅದು ಉಪಯುಕ್ತ ಪಶುಪಕ್ಷಿಗಳ ನೆಲೆವೀಡಾಗಿರಬೇಕು. ಅಲ್ಲದೆ, ಬಿರುಗಾಳಿ, ಸುಂಟರಗಾಳಿ ಹಾಗೂ ವಳ್ಳುರಿಗೆ ಸಿಲುಕುವಂತಿರಬಾರದು (ಶ್ಲೋ. 38. 39).

ಅಂತರ್ಜಲ ಪೂರೈಕೆಯು ಅಕ್ಷಯವಾಗಿದ್ದು ತೋಟಗಳು, ಉದ್ಯಾನವನ ಗಳನ್ನು ಬೆಳೆಸಲು ಅನುಕೂಲವಾಗಿರಬೇಕು, ಹಾಗೆಯೇ ದಟ್ಟ ನೆರಳು ಮರಗಳು ಹಾಗೂ ಎಲ್ಲಬಗೆಯ ಬೀಜಗಳ ಬೆಳವಣಿಗೆಗೆ ಅನುಕೂಲವಾಗಿರಬೇಕು. ಅಂಥ ಭೂಮಿ ತುಸು ಹಳ್ಳತಿಟ್ಟುಗಳನ್ನು ಸಹ ಹೊಂದಿದ್ದು ಸ್ಪರ್ಶಕ್ಕೆ ಮೃದುವಾಗಿರಬೇಕು. ದನಕರುಗಳು ಮೇಯುವುದಕ್ಕೆ ಉತ್ತಮವಾಗಿರಬೇಕು, ಮಣ್ಣು ಬಾವಿಗಳನ್ನು ತೋಡುವುದಕ್ಕೂ ನೀರು ಬಸಿಯುವುದಕ್ಕೂ ಯುಕ್ತವಾಗಿರಬೇಕು: ಅಲ್ಲಲ್ಲಿ ನಿಷ್ಪ್ರಯೋಜಕ ಅಥವಾ ಮರುಭೂಮಿ ಪ್ರದೇಶಗಳಂಥ ಕುಂದು ಕೊರತೆಗಳೂ ಇರಬಹುದು. ಆದಾಗ್ಯೂ ಮೇಲೆ ತಿಳಿಸಲಾದ ಕೆಲವು ಲಕ್ಷಣಗಳು ಒಳ್ಳೆಯ ಜಮೀನಿನ ಗುಣಗಳಾಗಿವೆ (ಶ್ಲೋ. 40–43).

ಪರಿಣಿತ ಭೂ ಪರೀಕ್ಷಕರು, ಜಲಮೂಲ ತಜ್ಞರು (ದಗರ್ಗಲ ಪ್ರಮಾಣಜ್ಞ) ಹಾಗೂ ಕೃಷಿಕರು ಇವರುಗಳೆಲ್ಲ ಬ್ರಾಹ್ಮಣ, ಕ್ಷತ್ರಿಯ ವೈಶ್ಯ ಇಲ್ಲವೇ ಶೂದ್ರ ಜಾತಿ ಗಳಲ್ಲಿ ಯಾವ ಜಾತಿಗೆ ಸೇರಿದವರಾಗಿದ್ದರೂ ರಾಜಾಜ್ಞೆಯ ಮೇರೆಗೆ ಪವಿತ್ರ ಪ್ರಶಸ್ತ ದಿನದಂದು ಭೂ ಪರೀಕ್ಷೆ ಮಾಡಬೇಕು (ಶ್ಲೋ. 44–45)

ಜಲಮೂಲತಜ್ಞರು ಸ್ನಾನಮಾಡಿ ಶುಭ್ರವಸ್ತ್ರಗಳನ್ನು ಧರಿಸಿ ಬಂಗಾರದ ಉಂಗುರವನ್ನು ತೊಟ್ಟು ವೇದ ಪಾರಂಗತರಾದ ಬ್ರಾಹ್ಮಣರ ಜೊತೆಯಲ್ಲಿ ಪ್ರಾತಃ ಕಾಲ ಇಲ್ಲವೇ ಸಾಯಂಕಾಲ ಜಮೀನುಗಳಿಗೆ ಹೋಗಬೇಕು. ಶುಭವಾದ್ಯ ಮೊಳಗು ತ್ತಿರಲು ಬ್ರಾಹ್ಮಣರು ಸ್ವಸ್ತಿವಾಚನದ ನಡುವೆ ಪಂಚಗವ್ಯ (ಹಸುವಿನ ಪಂಚೋತ್ಪನ್ನ ಗಳು) ಅಥವಾ ಪವಿತ್ರ ಜಲವನ್ನು ಪ್ರೋಕ್ಷಿಸುತ್ತಿರಲು ಭೂ ಪ್ರದಕ್ಷಿಣೆ ಮಾಡಬೇಕು.

ಆ ಬಳಿಕ ಗುದ್ದಲಿ ಇಲ್ಲವೇ ಕೈಗೊಡಲಿಯಿಂದ ಭೂಮಿಯನ್ನು ಅಗೆದು ವಾಸನೆ, ರುಚಿ ಹಾಗೂ ತೂಕಗಳನ್ನು ನೋಡುವುದಲ್ಲದೆ ನೀರಿನಲ್ಲಿ ಹಾಕಿ ವರ್ಣಕಗಳು ಹಾಗೂ ರಾಸಾಯನಿಕಗಳ ಮೂಲಕ ಮಣ್ಣಿನ ಗುಣಧರ್ಮಗಳನ್ನು ಎಚ್ಚರಿಕೆಯಿಂದ ಪರೀಕ್ಷಿಸಬೇಕು (ಶ್ಲೋ. 46-50).

ಸಮಾನ ಬಣ್ಣ ಹಾಗೂ ಛಾಯೆ ಇದ್ದು ಸಾಂದ್ರವಾದ, ನಯ ಮಣ್ಣುಳ್ಳ ಭೂಮಿಯು ಅತ್ಯುತ್ತಮವಾದುದೆಂದು ದೇವತೆಗಳು, ರಾಜರು, ಮಹರ್ಷಿಗಳು, ಬ್ರಾಹ್ಮಣರು ಮತ್ತು ವೈಶ್ಯರು ಭಾವಿಸುತ್ತಾರೆ. ಇಂಥ ಭೂಮಿಯು ತನ್ನ ಒಳ್ಳೆಯ ಗುಣಧರ್ಮಗಳಿಂದಾಗಿ ಎಲ್ಲರ ಶ್ರೇಯಸ್ಸು ಹಾಗೂ ಕಲ್ಯಾಣ ದೃಷ್ಟಿಯಿಂದ ಉಪಯುಕ್ತವಾಗಿರುತ್ತದೆ. ಆದ್ದರಿಂದ, ಕುಟುಂಬಗಳ ಆರೋಗ್ಯವರ್ಧನೆಯಾಗುವುದಲ್ಲದೆ ಐಶ್ವರ್ಯ, ಧನಧಾನ್ಯ ಹಾಗೂ ಪಶುಸಂಪದಭಿವೃದ್ಧಿಯುಂಟಾಗುತ್ತದೆ. (ಶ್ಲೋ. 51-52).

ಭೂತಜ್ಞನು ಅತ್ಯುತ್ತಮ, ಮಧ್ಯಮ ಹಾಗೂ ನಿಕೃಷ್ಟ ಭೂಮಿಗಳನ್ನು ನಿರ್ದಿಷ್ಟಪಡಿಸಬೇಕು. ಇವುಗಳಲ್ಲಿ ನಿಕೃಷ್ಟ ಭೂಮಿಯನ್ನು ಸಂಪೂರ್ಣವಾಗಿ ವರ್ಜಿಸಬೇಕು. ಆತ ಯಾವ ಭೂಮಿ ವ್ಯವಸಾಯ ಯೋಗ್ಯ, ಯಾವುದು ತೋಟಗಾರಿಕೆಗೆ ಯುಕ್ತ, ಯಾವುದು ಅರಣ್ಯಾಭಿವೃದ್ಧಿಗೆ ಯುಕ್ತ ಹಾಗೂ ನೀರು ಶೇಖರಣೆಗೆ ಯೋಗ್ಯವಾಗಿರುತ್ತದೆಂದು ಸೂಚಿಸಬೇಕು. ಆತನೇ ರಾಜಾಜ್ಞೆಯ ಮೇರೆಗೆ ಒಂದು ಪವಿತ್ರದಿನ ಅಂಥ ಭೂಮಿಯ ಪ್ರಾಕೃತಿಕ ಎಲ್ಲೆ ಕಟ್ಟುಗಳನ್ನು ನಿರ್ದಿಷ್ಟಪಡಿಸಬೇಕು. (ಶ್ಲೋ. 53-55).

ಹೀಗೆ ಭೂಮಿಯನ್ನು ಪಡೆಯಬಯಸುವವರ ಅನುಕೂಲಕ್ಕಾಗಿ ಅದರ ಎಲ್ಲೆಗಳನ್ನು ನಿರ್ದಿಷ್ಟಪಡಿಸಬೇಕು (ಶ್ಲೋ. 56).

ವಿವಿಧ ಬಗೆಯ ನೀರು ಮತ್ತು ಮಣ್ಣುಗಳನ್ನು ಗುರುತಿಸುವುದರಲ್ಲಿ ಪರಿಣತನಾದ ವ್ಯಕ್ತಿಯು ಯಾವ ಭೂಮಿ ಕೃಷಿಗೆ ಅನುಕೂಲಕರವಾಗಿರುತ್ತದೆ, ಯಾವುದು ತೋಟಗಾರಿಕೆಗೆ ಯುಕ್ತ ಎಂಬಿತ್ಯಾದಿ ವಿಷಯಗಳನ್ನು ಹಳ್ಳಿಗಳು, ದೇಶಗಳು, ಕೋಟೆ ದುರ್ಗಗಳು, ನಗರ ಹಾಗೂ ಅರಮನೆ ಆವರಣಗಳಲ್ಲಿ ವಾಸಿಸುವ ಜನತೆಗೆ ಅನುಕೂಲವಾಗುವಂತೆ ನಿರ್ದಿಷ್ಟಪಡಿಸಬೇಕು (ಶ್ಲೋ. 57-58).

ಭೂ ಪರೀಕ್ಷಣೆ ಮತ್ತು ವರ್ಗೀಕರಣ

ಶ್ರೀ ಮಿಶ್ರ ಚಕ್ರಪಾಣಿಯು ತನ್ನ 'ವಿಶ್ವವಲ್ಲಭ' ಕೃತಿಯಲ್ಲಿ ಸೂಚಿಸಿರುವ ಭೂಮಿಯ ವರ್ಗೀಕರಣ ಹಾಗೂ ಪರೀಕ್ಷಣೆ ವಿವರಗಳನ್ನು ಮುಂದೆ ಕೊಟ್ಟಿದೆ:

ಭೂಮಿಯು ಮೂರು ಬಗೆಯದಿರುತ್ತದೆ. ಅದು ಶುಷ್ಕ, ಆರ್ದ್ರ (ಎಂದರೆ ಜೌಗು) ಹಾಗೂ ಮಧ್ಯವರ್ತಿ (ಎಂದರೆ ತೀರಾ ಶುಷ್ಕವೂ ಅಲ್ಲ ತೀರಾ ಆರ್ದ್ರವೂ ಅಲ್ಲದ ಮಧ್ಯಮ ಬಗೆ). ಹಾಗೆಯೇ ಅದು ಆರು ಬಗೆಯ ರುಚಿಯಿಂದ ಕೂಡಿರುತ್ತದೆ. ಇದನ್ನು ಆಯಾ ಮಣ್ಣಿನ ಬಣ್ಣದಿಂದ ತಿಳಿಯಬಹುದು (ಶ್ಲೋ. 1).

ಬೂದು ಬಣ್ಣ, ಮಾಸಲು ಬಿಳಿ, ಕಪ್ಪು, ಬಿಳಿ, ಕೆಂಪು ಮತ್ತು ಹಳದಿ ಬಣ್ಣದ ಮಣ್ಣುಗಳು ಪ್ರಾಚೀನರ ಮತದಂತೆ ಕ್ರಮವಾಗಿ ಸಿಹಿ, ಹುಳಿ, ಉಪ್ಪು, ಕಹಿ, ಖಾರ (ಘಾಟು) ಹಾಗೂ ಒಗರು ರುಚಿಯುಳ್ಳವಾಗಿರುತ್ತವೆ. ಮಿಶ್ರಚಕ್ರಪಾಣಿಯ ಅಭಿಪ್ರಾಯದಂತೆ ಅವುಗಳನ್ನು ಮಣ್ಣಿನ ರುಚಿ ನೋಡುವುದರಿಂದಲೇ ನಿಶ್ಚಿತವಾಗಿ ತಿಳಿಯಬಹುದು. (ಶ್ಲೋ. 2-3).

ಹುತ್ತಗಳು, ಹಳ್ಳ (ಕುಳಿ)ಗಳು ಮತ್ತು ಕಲ್ಲುಗಳಿಂದ ಕೂಡಿದ ಭೂಮಿ, ಜೌಗು ಮಯವಾಗಿದ್ದು ಗರಸುಯುಕ್ತವಾಗಿರುತ್ತದೆ. ಅಂಥಲ್ಲಿ ನೀರು ತುಂಬಾ ಆಳದಲ್ಲಿ ಕಂಡುಬರುತ್ತದೆ. ಇಂಥ ಭೂಮಿ ಮರ ನೆಡುವಿಕೆ ಇತ್ಯಾದಿಗಳಿಗೆ ಅಪಕಾರಿಯಾಗಿರುತ್ತದೆ. (ಶ್ಲೋ. 4).

ಮರಗಳು ಮತ್ತು ಸಸ್ಯಗಳು ಹಿಮಪೀಡಿತ ಪ್ರದೇಶಗಳಲ್ಲಿ ಹಾಗೂ ಕಸಕಡ್ಡಿಗಳಿಂದ ತುಂಬಿದ ಪ್ರದೇಶಗಳಲ್ಲಿ ಉದ್ಯಾನವನ (ತೋಟ)ಗಳನ್ನು ಮಾಡಬಾರದು (ಶ್ಲೋ. 5).

ಮಣ್ಣು ತುಂಬಾ ಮೃದುವಾಗಿದ್ದು ಕಡಮೆ ಆಳದಲ್ಲಿಯೇ ನೀರಿರುವ ಭೂಮಿ ಮರನೆಡಲು ಅತ್ಯುತ್ತಮವಾಗಿರುತ್ತದೆ. ಅಂಥ ಸ್ಥಳಗಳಲ್ಲಿ ಜನರ ಕಲ್ಯಾಣಾರ್ಥವಾಗಿ ತೋಟಗಳನ್ನು ಮಾಡಬೇಕು. (ಶ್ಲೋ. 6).

ಕಲ್ಲುಗಳಿಂದ ತುಂಬಿದ ಅಥವಾ ಮೃದುವಾದ ಇಲ್ಲವೇ ಕರಗಿದ ಬಂಗಾರದಂತೆ ಹೊಳೆಯುವ ಭೂಮಿಗಳಲ್ಲಿ ಗೂಢ ಪುಷ್ಪ (ಮುಮುಸೋಪ ಎಲೆಂಜಿ), ಪುನ್ನಾಗ, ರಾಜದಾನ (?) ಹಾಗೂ ಚಂಪಕ ವೃಕ್ಷಗಳು ಹೆಚ್ಚು ಶ್ರಮವಿಲ್ಲದೆ ಬೆಳೆಯುತ್ತವೆ (ಶ್ಲೋ. 7).

ಒಂಬತ್ತು ಬಗೆಯ ಕುಂದ ಮತ್ತು ಜಾತಿಗಳು, ಶ್ರೀಸಂದಿಕ (ಗಂಧದ ಮರ?), ಕೇತಕಿ (ಪೆಂಡೇನಸ್ ಒಡೋರೊಟಿಸ್ಸಿಮಸ್), ಕೇತಕ (?), ಅಂಬು (ಒಂದು ಬಗೆಯ ಆ್ಯಂಡ್ರೊಪೊಗಾನ್), ಬಾಳೆ, ಅಶ್ವಮಾರ. (ಅಶ್ವನಾಶಿನಿ, ನೀರಿಯಮ್ ಓಡೋರಮ್), ಕರುಜ ಉದ್ವಿಜ (ದ್ರಾಕ್ಷಾಬಳ್ಳಿ), ಪನ್ನೀರಲೆ, ಮತ್ತಿತರ (ಅಂತಹುದೇ) ಮರಗಳು ಮತ್ತು ಸಸ್ಯಗಳು ಜೌಗು ಭೂಮಿಯಲ್ಲಿ ಬೆಳೆಯುತ್ತವೆ (ಶ್ಲೋ. 8).

ಚಂಪಕ, ಪಾಟಲ, ಮಾವು, ಬಕುಳ, ಅಶೋಕ, ಕೋಲ, ಅತ್ತಿ, ನಿಂಬ, ಪಿಪ್ಪಲ, ಆಲ, ಚಿಂಚ, ಅಸನ (ಟರ್ಮಿನೇಲಿಯಾ ಟೊಮೆಂಟೋಸ) ಅಕ್ಷ (ಇಲೋಕಾರ್ಪಸ್ ಗ್ಯಾನಿಟ್ರಸ್). ಅರಿಷ್ಟ, ಮಧೂಕ, ಶಿಗ್ರುಕ, ಮಹಾನಿಂಬ, ಅರ್ಜುನದಂಥ ಸಾಗುವಳಿಯಲ್ಲಿರುವ ಮರಗಳನ್ನು ದಾಳಿಂಬೆಯಂಥ ಹಣ್ಣಿನ ಮರಗಳು ಹಾಗೂ ಪುಷ್ಪಸಸ್ಯಗಳನ್ನು ಸಾಧಾರಣ (ತೀರ ಶುಷ್ಕವೂ ಅಲ್ಲದ ಹಾಗೂ ತೀರಾ ಆರ್ದ್ರವೂ ಅಲ್ಲದ್ದು) ಭೂಮಿಯಲ್ಲಿ ಬೆಳೆಯಬೇಕು. (ಶ್ಲೋ. 9).

ಧವ, ಖದಿರ, ಪನಸ, ಮಂತ, ಧಾತ್ರಿ, ಇಂಗುಡಿಕ, (ಟರ್ಮಿನೇಲಿಯ ಕ್ಯಟಪ್ಪ) (ಶಿವಾಣಿ ? ಪಿಸ್ಟೇಸಿಯ ಇಂಟಿಗ್ರಿಮ), ಕರಭ(?), ಕುಂಡ ಮೂಲಿಕೆಗಳು, ಸಲ್ಲಕಿ(ಬಾಸ್ವೆಲ್ಲಿಯಾ ತೂರಿಫೆರ), ಸಪ್ತಪರ್ಣ, (ಅಲ್ಸ್ಟೋನಿಯಾ ಸ್ಕೊಲ್ಯಾರಿಸ್), ಸುರತರು (ದೇವದಾರು), ರಜನಿಕ (ಕುರ್ಕುಮಾ ಲಾಂಗ) ಮತ್ತು ಜಾತಿಕ ಇತ್ಯಾದಿ ಮರಗಿಡಬಳ್ಳಿಗಳು ಶುಷ್ಕ ಭೂಮಿಯಲ್ಲಿ ಚೆನ್ನಾಗಿ ಬೆಳೆಯುತ್ತವೆ (ಶ್ಲೋ. 10).

ಇಲ್ಲಿ ಕೆಲವು ವೃಕ್ಷಗಳನ್ನು ವಿವರಿಸಿದ್ದೇನೆ. ಇನ್ನುಳಿದುದನ್ನು ದೇವತೆಗಳು ಮತ್ತು ಮಾನವರು (ಸ್ವಾನುಭವ, ಪರೀಕ್ಷೆಗಳಿಂದ) ತಿಳಿಯಬೇಕು. ವಾಸ್ತವವಾಗಿ ಫಲಪುಷ್ಪಗಳನ್ನು ಬಿಡುವ ಸಸ್ಯಗಳ ಬೆಳವಣಿಗೆ ಹಾಗೂ ಸಾಮರ್ಥ್ಯಗಳು ಮಣ್ಣಿನ ಸ್ವಭಾವಕ್ಕನುಗುಣವಾಗಿರುತ್ತವೆ (ಶ್ಲೋ. 11).

ಆದರೆ ಶ್ರೀಮಂತರು ಹಾಗೂ ರಾಜರಿಗೆ ಸೇರಿದ ಮರಗಿಡಗಳು ಅಯುಕ್ತ ಮಣ್ಣಿನಲ್ಲಿಯೂ ಸಹ ತೀವ್ರ ಪ್ರಯತ್ನ ಹಾಗೂ ದೈವ ಕೃಪೆಗಳಿಂದ ಫಲಪುಷ್ಪಗಳನ್ನು ಬಿಡುತ್ತವೆ (ಶ್ಲೋ. 11).

ಕೆಲವು ಮರಗಿಡಗಳು, ಪೊದೆಗಳು ಮುಂತಾದವು ಬೀಜದಿಂದ ಹುಟ್ಟುತ್ತವೆ. ಕೆಲವು ಕಸಿಕೊಂಬೆಗಳಿಂದ, ಕೆಲವು ಕಂದ(ಗಡ್ಡೆ)ಗಳಿಂದ ಬೆಳೆಯುತ್ತವೆ, ಮತ್ತೆ ಕೆಲವು ಬೀಜ ಹಾಗೂ ಕಸಿಗಳೆರಡರಿಂದಲೂ ಬೆಳೆಯುತ್ತವೆ. ಕೆಳಗೆ ಅವುಗಳ ವಿವಿಧ ಬಗೆಗಳನ್ನು ವಿವರಿಸಿದೆ:

ಜಂಬು, ಮಾವು, ಚಂಪಕ, ಮಧೂಕ, ಕಪಿತ್ಥ, ಚಿಂಚ, ಪುನ್ನಾಗ, ಬಿಲ್ವ, ಬಕುಳ, ಅಸನ (ಟರ್ಮಿನೇಲಿಯ ಟೊಮೆಂಟೋಸ) ಕಾಂಚನಾರ, ಕ್ಷೀರಿಕ (ಒಂದು ಬಗೆಯ ಖರ್ಜೂರ ಮರ), ಪನಸ, ಅಕ್ಷಕ, ತೆಂಗು, ತಾಲ ಮತ್ತು ತಿಲಕ (ಕ್ಲೆರೊಡೆಂಡ್ರಂ ಫ್ಲೊಮಾಯ್ಡಿಸ್) ವೃಕ್ಷಗಳು ಬೀಜದಿಂದ ಹುಟ್ಟಿ ಬೆಳೆಯುತ್ತವೆ (ಶ್ಲೋ. 14).

ಜಾಜಿ (ಜಾತಿ), ಗುಲಾಬಿ, ತರುಣೀ (ಅಲೋ ಪರ್‌ಫೋರಿಯೇಟ), ನವಮಾಲಿಕ, ಮಲ್ಲಿ, ಜಪ, ತಗರ, ಕುಂದ, ಶಿಖಂಡಿನ್ (ಎಬ್ರಸ್ ಪ್ರಿಕಟೋರಿಯಸ್), ಕುಬ್ಜ (ಅಮೈರಾಂತಸ್ ಆಸ್ಪೆರಾ), ತಾಂಬೂಲಿಕಾ (ವೀಳೆಯದೆಲೆ ಬಳ್ಳಿ), ನಾಲಿಕ, ಕೇತಕಿ ಮತ್ತು ಕೇತಕ(?) ಇತ್ಯಾದಿ ಗಿಡಗಳು ಕಸಿಕೊಂಬೆಯಿಂದ ಬೆಳೆಯುತ್ತವೆ. (ಶ್ಲೋ. 15).

ಬಿಂಬ (ಮೊಮೊರ್ಡಿಕ ಮೊನಡೆಲ್ಫ), ಸ್ಫೂರ್ತಿ (ಯುಫೋರ್ಬಿಯಾ ಅಂಟಿಕೋರಮ್), ಕಪದ್ರುಕ (ಗೈನಾಂಡ್ರಾಪ್ಸಿಸ್ ಪೆಂಟಾಫಿಲ್ಲ), ಸಿಂಧುವಾರ, ಶ್ರೀಮಂಡಿಕಾ (ಶ್ರೀಗಂಧ), ಅಶ್ವತ್ಥ, ವಟ (ಆಲ), ಪಲಾಶ (ಮುತ್ತುಗ), ದಾಳಿಂಬೆ, ಅರ್ಕ, ಮುನಿದ್ರು (ಅಗಾತಿ ಗ್ರ್ಯಾಂಡಿಫ್ಲೋರ) ವಂಶ (ಬಿದಿರು) ಹಾಗೂ ದ್ರಾಕ್ಷಾಬಳ್ಳಿ ಮುಂತಾದವು ಬೀಜ ಹಾಗೂ ಕಸಿಕೊಂಬೆಗಳೆರಡರಿಂದಲೂ ವೃದ್ಧಿಗೊಳ್ಳುತ್ತವೆ (ಶ್ಲೋ. 16).

ಕುಂಕುಮ (ಕ್ರೋಕಸ್ ಸಟೈವಸ್, ಕೇಸರಿ), ಶೃಂಗಬೇರ (ಶುಂಠಿ), ವಿದಾರಿಕ (ಬಟಾಟಸ್ ಪ್ಯಾನಿಕ್ಯುಲೇಟಸ್), ಸೂರಣ, ಶೀತಕ, ಹರಿದ್ರ-ಅಂಬರ ಪುಷ್ಪ ([illegible] ಪೆನ್ನೇಟ) ಇತ್ಯಾದಿಗಳು ಕಂದ (ಗೆಡ್ಡೆ) ಗಳಿಂದ ಬೆಳೆಯುತ್ತವೆ. ಏಲಾ (ಏಲಕ್ಕಿ ಕೇಸರಿ), [illegible] (ವಿವಿಧ ಜಾತಿಯ ಕಮಲ ಹಾಗೂ ನೀರು ನೈದಿಲೆಯ ಪ್ರಭೇದಗಳು) ಇತ್ಯಾದಿಗಳು ಬೀಜ ಮತ್ತು ಕಂದ (ಗೆಡ್ಡೆ) ಗಳೆರಡರಿಂದಲೂ ಬೆಳೆಯಬಲ್ಲವು (ಶ್ಲೋ. 17).

ಬಾಳೆ ಮುಂತಾದ ಗಿಡಗಳನ್ನು ಕಂದ ಅಥವಾ ಕಸಿಕೊಂಬೆಗಳೆರಡರಿಂದಲೂ ಬೆಳೆಯಬಹುದು. ಈ ಗುಂಪಿಗೆ ಸೇರಿದ ಅನೇಕವನ್ನು ಗಮನಿಸಬಹುದು. ಬುದ್ಧಿವಂತರು ಇವು ತೋಟಗಳಲ್ಲಿ ಬೆಳೆಯುವುದಕ್ಕೆ ಯುಕ್ತವೆಂದು ಕಂಡಿದ್ದಾರೆ. ಆದರೆ ಅವುಗಳ ಕೃಷಿ ಮಾಡಿ ಬೆಳೆಸಿಲ್ಲ (ಶ್ಲೋ. 18).

ಈಗ ವಾಸಗೃಹಗಳೊಳಗೆ ಅಥವಾ ಅವರ ಸಮೀಪದಲ್ಲಿ ಅವರಲ್ಲೂ ವಿಶೇಷವಾಗಿ ಯಾವ ಭಾಗ (ದಿಕ್ಕು) ದಲ್ಲಿ ಕೆಲವು ಮರಗಳನ್ನು ಬೆಳೆಸಲು ಸಿದ್ಧ (ಬಾರದು) ವೆಂದು ತಿಳಿಸುತ್ತೇನೆ (ಶ್ಲೋ. 19).

ದಾಳಿಂಬೆ, ಮೊದಲ, ಬಾಳೆ, ಅರಿಶಿನ, ಜುಜುಬೆ (ಒಂದು ಬಗೆಯ ಹಣ್ಣಿನ ಗಿಡ), ಪಲಾಶ, ಶ್ಲೇಷ್ಮಾತ (ದೊಡ್ಡ ಚಳ್ಳುಬೋಂಕೆಗಿಡ) ಬಿಂಬ, ಅರ್ಜುನ, ಕಾಂಚನಾರ ಮತ್ತು ಕಾರಂಜ ವೃಕ್ಷಗಳನ್ನು ಜ್ಞಾನಪೀಠ (ವಿದ್ಯಾಕೇಂದ್ರ) ಗಳಲ್ಲಿ ಬೆಳೆಯಿಸುವುದು ಮಂಗಳಕರವಲ್ಲ (ಶ್ಲೋ. 20).

ವಾಸಗೃಹಗಳೊಳಗೆ ಅಥವಾ ಸಮೀಪದಲ್ಲಿ ಮುಳ್ಳಿನ ಅಥವಾ ಕ್ಷೀರಯುಕ್ತ ವೃಕ್ಷಗಳು ಇಲ್ಲವೇ ಪೊದೆಗಳನ್ನು ಬೆಳೆಸಬಾರದು. ಹಾಗೆಯೇ ಸುಖಸಂತೋಷವನ್ನು ಬಯಸುವವರು ಫಲಕೊಡದ ಇಲ್ಲವೆ ಕಾಡಿನಂತೆ ಹಬ್ಬುವ ಗಿಡಗಳನ್ನು ಕತ್ತರಿಸಿ ಹಾಕಬೇಕು (ಶ್ಲೋ. 21).

ಫಲ ಇಲ್ಲವೇ ಪುಷ್ಪಗಳನ್ನು ಬಿಡದ ಎಲ್ಲ ಬಗೆಯ ಮರಗಳು, ಕಾಡು ಸಸ್ಯಗಳು ಹಾಗೂ ಅಂಕೋಲಾ (ಅಲಾಂಜಿಯಂ ಹೆಕ್ಸಾಪೆಟಲಂ) ವಿಕಾಸಕ (ಕ್ಯಾರಿಸ್ಸಾ ಯುರೆನ್ಸ್?) ಇತ್ಯಾದಿ ವೃಕ್ಷಗಳು, ಹರಳೆಣ್ಣೆ ಮರ, ಬಿಳಿಸಾಸುವೆ ಮತ್ತು, ಅಥವಾ ನೀಲಿಕ (ಪ್ಲಿಕ್ಸಾ ಆಕ್ಸ್ಯಾಂಡ್ರು) ಗಳನ್ನು ವಾಸಗೃಹಕ್ಕೆ ಸೇರಿದಂತಿರುವ ತೋಟಗಳಲ್ಲಿ ಬೆಳೆಸಬಾರದು (ಶ್ಲೋ. 22).

ತೋಟದಲ್ಲಿ ಮೊದಲಾಗಿ ಹೂವುಗಳನ್ನು ಬಿಡುವಂತಹ ಗಿಡಗಳನ್ನೇ ಹಾಕಬೇಕು, ಆದರೆ ವಾಸಗೃಹಕ್ಕೆ ಸೇರುವಂತಿರುವ ತೋಟದಲ್ಲಿ ಹಣ್ಣುಗಳನ್ನು ಬಿಡುವಂತಹ........ ಎಲ್ಲ ಬಗೆಯ ಮರಗಳು, ಬಳ್ಳಿಗಳು, ಮಾಲಿಕೆಗಳು ಮತ್ತು ಪೊದೆಗಳನ್ನು ಬೆಳೆಸಬೇಕು (ಶ್ಲೋ. 23).

ಶಾಸ್ತ್ರವಾದರೂ ಮನೆಯಲ್ಲಿ ಯಾವ ಮರವನ್ನೂ ಬೆಳೆಸಬಾರದು. ಆದರೆ ಅನ್ಯ ಮಾರ್ಗವಿಲ್ಲದಿರುವಾಗ ಮಂಗಳಕರವಾದ ಹೂಗಿಡಗಳು, ಮರಗಳು ಮತ್ತು ಬಳ್ಳಿಗಳನ್ನು ಮಾತ್ರ ಬೆಳೆಸಬೇಕು (ಶ್ಲೋ. 24).

ಮನೆಯ ಪೂರ್ವ ಭಾಗದಲ್ಲಿ ಸೇಂ (?) ವೃಕ್ಷ, ದಕ್ಷಿಣ ಭಾಗದಲ್ಲಿ ಆಲ ಮತ್ತು ಅತ್ತಿ ವೃಕ್ಷಗಳು, ಪಶ್ಚಿಮದಲ್ಲಿ ಅಶ್ವತ್ಥ (ಅರಳಿ) ಹಾಗೂ ಉತ್ತರಕ್ಕೆ ಪ್ಲಕ್ಷ(?) ಮರಗಿಡಗಳನ್ನು ಬೆಳೆಸಬೇಕು. ಈ ಪ್ರಕಾರದಲ್ಲಿ ಈ ಕ್ರಮವನ್ನು ಬಿಟ್ಟು ಬೇರೆ ರೀತಿಯಲ್ಲಿ ಬೆಳೆಸಬಾರದು (ಶ್ಲೋ. 25).

ವಾಸಗೃಹದ ಎಡ ಅಥವಾ ಬಲ ಭಾಗದಲ್ಲಿ ದೂರದಲ್ಲಿ ಬೆಳೆಸಿರುವ ಮರಗಿಡಗಳ ವಿಚಾರದಲ್ಲಿ ಈ ನಿಯಮ ಅನ್ವಯಿಸುವುದಿಲ್ಲ. ಅಲ್ಲದೆ, ಸಹ ಎಲ್ಲ ಬಗೆಯ ಮರ ಬೆಳೆಸುವ ವಿಚಾರದಲ್ಲಿಯೂ ಶಾಸ್ತ್ರ ... ಯಾವುದೇ ... ನಿಂಗದಿಸಲಾಗಿದೆ (ಶ್ಲೋ. 26).

ವಾರುಣ (?) ಅಗ್ನೇಯ ದಿಕ್ಕು, ಅಥವಾ ನೈಋತ್ಯ ಭಾಗಗಳಲ್ಲಿ ತೋಟ ಮಾಡಬಾರದು. ಬದಲಿಗೆ ಶಿವ ಮತ್ತು ವಾಯು(?) ಗಳಿಗೆ ಪವಿತ್ರವಾದ ಸ್ಥಾನಗಳ ನಡುವೆ ಬರುವ ಪೂರ್ವ, ಪಶ್ಚಿಮ, ಅಥವಾ ಉತ್ತರ ಭಾಗಗಳಲ್ಲಿ ಬೆಳೆಸುವುದು ಮಂಗಳಕರ (ಶ್ಲೋ. 27).

ಕೋಟೆ(ದುರ್ಗ)ಗಳಲ್ಲಿ ಸ್ಥಳಾವಕಾಶಗಳಿಗನುಗುಣವಾಗಿ ಸಾಮಾನ್ಯ ತೋಟವೊಂದನ್ನು ಬೆಳೆಸಬಹುದು. ಇದಲ್ಲದೆ ಅಲ್ಲಿ ಎಲ್ಲ ಬಗೆಯ ವೃಕ್ಷಗಳನ್ನು (ಕಾಡು ಹಾಗೂ ಪಳಗಿಸಿದವು) ಬೆಳೆಸಬಹುದು. ಅವು: ಚಂಪಕ, ಪಾಟಲಿ, ಕುರಬಕ (ಕೆಂಪು ಅಮರ ಪುಷ್ಪ ಅಥವಾ ಬರ್ಲೇರಿಯಾ), ನಿರ್ಗುಂಡಿಕ (ಟ್ರೈಗೊನೆಲ್ಲ ಕಾರ್ನಿಕ್ಯುಲೇಟ), ಜಾತಿಕ (ಜಾಸ್ಮಿನಮ್ ಆರಿಕ್ಯುಲೇಟಮ್), ತ್ರಿಸಂಧಿ, ಕರವೀರ, ಕುಂದ, ಬಕುಳ (ಹೆಲ್ಲಿಬೋರಸ್‌ನೈಜರ್) ಸೇವಂತಿ (ಭಾರತೀಯ ಬಿಳಿ ಗುಲಾಬಿ), ಕರ್ಣ (ಪ್ರೆಮ್ನ ಸ್ಪೈನೋಸ) ಕುಬ್ಜ, (ಅಪ್ಯೆರಾಂಥಸ್ ಆಸ್ಪೆರ), ಗುಲಾಲ (?) ಹೇಮಕುಸುಮಕ (ರೂಬಿಯ ಮಂಜಿಷ್ಟ) ಸಿಂದೂರಿಕ (ಗ್ರಿಸ್ಲಿಯ ಟೊಮೆಂಟೋಸ), ಕೇತಕಿ, ಬಂಧೂಕ, (ಪೆಂಟಪೀಟಸ್ ಫೊನಿಸಿಯ) ಮುಚುಕುಂದ (ಟೆರೋಸ್ಪರ್ಮ್ ಮ್‌ಸುಬೆರಿಫೋಲಿಯಂ) ಕೇತಕಿ, ಜಯ (ಸೆಸ್ಬೇನಿಯ ಈಜಿಪ್ಟಿಯಕ), ಮಲ್ಲಿ (ಒಂದು ಬಗೆಯ ಮಲ್ಲಿಗೆ), ಜಟಾ (ಒಂದು ಬಗೆಯ ಆ್ಯಂಡ್ರೋಪೋಗಾನ್), ಅಗಸ್ತ್ಯಕ (ಅಗಾಸ್ತ ಗ್ರ್ಯಾಂಡಿ ಫ್ಲೋರ) ಮುಂತಾದವು (ಶ್ಲೋ. 28-29)

ಮಾಲೂರ (ಫೆರೋನಿಯ ಎಲಿಫೆಂಟಮ್), ಬದರಿ, ರಸಾಲ, ಕರಕ (ಪ್ರೂಗೇಮಿಯಾ ಗ್ಲಾಬ್ರ) ಚಿರ (ಬುಚನೇನಿಯ ಲ್ಯಾಟಿಫೋಲಿಯ), ಅಸನ, ಶ್ರೀಫಲ, ಚಿಂಚ, ಮಾದಾಕ್ಕಿ, ಬಿಲ್ವ (ಬಿಂಬ), ಪೂಗ, ಪನಸ(?) ಹಿಪ್ಪೆನೇರಳೆ, ಆಲ, ಅಶ್ವತ್ಥ (ಅರಳಿ), ಖರ್ಜೂರ ಪನಸ, ಕಪಿತ್ಥ (ಬೇಲ), ಕರವ, ಪಥ್ಯ (ಟರ್ಮಿನೇಲಿಯ ಚೆಬ್ಯುಲ), ಶಿವ, (ಟರ್ಮಿನೇಲಿಯ ಸಾಪ), ಶಿಂಶಕ ಬಿದಿರು, ಶಾಲ್ಮಲಿ, ಸಾಲ (ಪಟಿಕ್ಯುಲೇಟಾ), ತಾಲ, ಜಾತಿತ (ಟೆಕ್ಟೋನ ಗ್ರ್ಯಾಂಡಿಸ್), ರೋಹಿತಕ (ಆಂಡರ್‌ಸೋನಿಯ ರೋಹಿತಕ), ಪಾಟಲ (ಸಿಗ್ನೋಸಿಯ ಸ್ವಾವಿಯೋಲೆನ್ಸ್) (ಶ್ಲೋ. 30).

ರಾಜಾದಾನ(?), ಅಶೋಕ, ಕದಂಬ, ಜಂಬು (ನೇರಳೆ), ಲಕುಚ (ಹಿಂದೂಸ್ತಾನಿ ವೃಕ್ಷ), ನಾರಂಜ (ಕಿತ್ತಳೆ), ಬೀಜಪೂರ (ಸಿಟ್ರಸ್ ಮೆಡಿಕ), ಬಾಳೆ, ಆಮ್ರಾತಕ (ಟ್ಯಾಮರಿಂಡಸ್ ಇಂಡಿಕ), ದಾಳಿಂಬೆ, ಅಸನ, ಆಲಿಂಕಾರಿ (?), ತಾವರೆ, ಕಲ(?) ಕೋಲ, ಇತ್ಯಾದಿ ನಿಯಂತಫಲ ಕೊಡುವಂಥವು (ಶ್ಲೋ. 31).

ಅಖೋಟ (ಅಕ್ರೋಡ), ಪಿಸ್ತಾ (ಪಿಸ್ತಾಶಿಯೊ), ಅಂಜೂರ, ಬಾದಾಮಿ, ಬೀಳಿಯದೆಳ್ಳಿ, ಬಲಕ್ಕಿ, ಶತಪತ್ರಿ (ಅನ್‌ತದರ್ ಗೋದ), ದ್ರಾಕ್ಷಾಬಳ್ಳಿ, ಮತ್ತಿತರ ಅನೇಕ ಫಲಪುಷ್ಪಗಳನ್ನು ಕೊಡುವ ಮರಗಳು, ಪೊದೆಗಳು, ಅದರ ಬಳ್ಳಿಗಳೆಲ್ಲ ಅನು ಭೋಗಿಸುವಂಥವು (ಶ್ಲೋ. 32).

ವಿವೇಕಗಳು ಗಿಡಮರಗಳ ಉತ್ತಮ, ಮಧ್ಯಮ ಮತ್ತು ಅಧಮ ಎಂಬ ವರ್ಗೀಕರಣಕ್ಕನುಗುಣವಾಗಿ ವಿಭಿತ ಅಂತರಗಳಲ್ಲಿ ಅಥವಾ ದಿಕ್ಕುಗಳಲ್ಲಿ ತೋಟದ ಪೂರ್ವಕ್ಕೆ ಕರ್ಮಾರಕ (ಕ್ಯಾಲಿಸ್ಸ ಕ್ಯರಂಡಸ್), ಬಿದಿರು, ಇತ್ಯಾದಿಗಳನ್ನು ದಕ್ಷಿಣ ಭಾಗದಲ್ಲಿ ದ್ರಾಕ್ಷಾ ಮತ್ತು ಪರಿಪಟ (ಡಯೋಸ್ಪೈರಸ್ ಎಂಬ್ರಯೋಪ್ಟೆರಿಸ್) ಗಳನ್ನು ಪಶ್ಚಿಮದಲ್ಲಿ ಕಪಿತ್ಥ (ಬೇಲ) ಇತ್ಯಾದಿಗಳನ್ನೂ ಹಾಗೂ ಉತ್ತರಕ್ಕೆ ಕೋಲ (ಬುಂಬೆ ಅಥವಾ ವೈಪರ್ ಲಾಂಗಮ್) ಮುಂತಾದುವುಗಳನ್ನು ಬೆಳೆಸಬೇಕು (ಶ್ಲೋ. 33-34).

‘ಕಶ್ಯಪರ ಭೂ’ ವರ್ಗೀಕರಣ

‘ಕೃಷಿ ಸೂಕ್ತಿ’ ಎಂಬ ಕೃಷಿ ವಿಜ್ಞಾನ ಕೃತಿಯನ್ನು ಕಶ್ಯಪರು ರಚಿಸಿದ್ದಾರೆಂದು ತಿಳಿಯಲಾಗಿದೆ. ಈ ಕೃತಿಯಲ್ಲಿ ಭೂಮಿಯನ್ನು (1) ಬತ್ತದ ತರಿಭೂಮಿ (ಇದನ್ನು ಶಾಲಿಭೂಮಿ, ಜಲಭೂಮಿ ಮತ್ತು ಸಸ್ಯಭೂಮಿ ಎಂದು ವಿವಿಧವಾಗಿ ಕರೆಯಲಾಗಿದೆ) ಹಾಗೂ (2) ಖುಷ್ಕಿ ಭೂಮಿ (ಇದನ್ನು ಅಧಕಭೂಮಿ, ತರಭೂಮಿ ಮತ್ತು ಉಷ್ಣ ಭೂಮಿ ಎಂದೂ ಕರೆಯಲಾಗುತ್ತದೆ) ಎಂದು ವರ್ಗೀಕರಿಸಿದ್ದಾರೆ. ಅಲ್ಲದೆ ಭೂಮಿಯನ್ನು ಅಲ್ಲಿ ಬೆಳೆಯಬಹುದಾದ ವಿಶಿಷ್ಟ ಬೆಳೆಗಳಿಗೆ ಅನುಗುಣವಾಗಿಯೂ ಸಹ ವರ್ಗೀಕರಣ ಮಾಡಿದ್ದಾರೆ. ‘ಉಪವನ-ವಿನೋದ’ದಲ್ಲಿ ಯಂತೆಯೇ ಇಲ್ಲೂ ಮಣ್ಣು ವರ್ಗೀಕರಣ ಮಾಡಲಾಗಿದೆ.

ಭೂಮಿಯಲ್ಲಿ ಮೂರು ಬಗೆ: ಶುಷ್ಕ, ಆರ್ದ್ರ ಹಾಗೂ ಮಧ್ಯಮ (ಎಂದರೆ ತೀರಾ ಶುಷ್ಕವೂ ತೀರಾ ಆರ್ದ್ರವೂ ಅಲ್ಲದ್ದು). ಇದನ್ನು ಮತ್ತೆ ಪ್ರತಿಯೊಂದನ್ನು ಅದರ ಬಣ್ಣ ಮತ್ತು ರುಚಿಗಳಿಗನುಗುಣವಾಗಿ 6 ಬಗೆಯವಾಗಿ ವಿಂಗಡಿಸಲಾಗಿದೆ (ಶ್ಲೋ. 35).

ಬಣ್ಣದ ಆಧಾರದ ಮೇಲೆ ಭೂಮಿಯನ್ನು ಕ್ರಮವಾಗಿ ಕಪ್ಪು, ಹೂಸಲು, ದಟ್ಟಕೆಂಪು, ಬಿಳಿ ಮತ್ತು ಹಳದಿ ಮಣ್ಣುಗಳೆಂದೂ. ರುಚಿಯ ಆಧಾರದ ಮೇಲೆ ಸಿಹಿ, ಹುಳಿ, ಉಪ್ಪು, ಖಾರ, ಕಹಿ ಮತ್ತು ಒಗರು ಎಂಬುದಾಗಿ ವಿಂಗಡಿಸಲಾಗಿದೆ (ಶ್ಲೋ. 36).

ವಿಷವಸ್ತುಗಳು, ಕಲ್ಲುಗಳು, ಗೆದ್ದಲು, ಸುರಂಗಗಳಿಂದ (ಹಾನಿಕಾಂತ ಪಶು ಪಕ್ಷಿಪ್ರಾಣಿಗಳಿಂದಾದುದು) ಕಲುಷಿತವಾದ ಇಲ್ಲವೇ ಚೌಳುಯುತ ಗರಸಿನಿಂದಕೂಡಿದ ಅಥವಾ ಅಂತರ್ಗತಜಲ ತುಂಬಾ ಆಳದಲ್ಲಿರುವ ಭೂಮಿಯು ಮರಗಳನ್ನು ನೆಡುವುದಕ್ಕೆ ಒಳ್ಳೆಯದಲ್ಲ (ಶ್ಲೋ. 37).

ನೀಲಮಣಿ ಇಲ್ಲವೇ ಗಿಳಿಯ ಪುಕ್ಕದಂತೆ ತಿಳಿ ಬಣ್ಣವಿರುವ ಭೂಮಿ ಅಥವಾ ಶಂಖ, ಕುಂದ (ಮಲ್ಲಿಗೆ) (ಜಾಸ್ಮಿನಮ್‌ಮಲ್ಟಿಫ್ಲೋರಂ) ಅಥವಾ ಚಂದ್ರ ಇಲ್ಲವೇ ಕರಗಿದ ಚಿನ್ನದಂತೆ ಹೊಳಪಾಗಿದ್ದು ಸಂಪಿಗೆ ಬಣ್ಣದೊಡನೆ ಸ್ಪರ್ಧಿಸುವಂತ ಬಣ್ಣದ ಮಣ್ಣುಳ್ಳ ಭೂಮಿಯನ್ನು ಅತ್ಯುತ್ತಮವೆಂದು ಪರಿಗಣಿಸಲಾಗಿದೆ (ಶ್ಲೋ. 38).

ಸಮತಟ್ಟಾಗಿದ್ದು ಹತ್ತಿರದಲ್ಲಿ ನೀರು ಸೌಲಭ್ಯವಿರುವ ಹಾಗೂ ಹುಲ್ಲು ಮತ್ತು ಮರಗಿಡಗಳಿಂದ ಹಸುರಾಗಿರುವ ಭೂಮಿಯಲ್ಲಿ ಎಲ್ಲ ಬಗೆಯ ಮರಗಳು ಚೆನ್ನಾಗಿ ಬೆಳೆಯುತ್ತವೆ (ಶ್ಲೋ. 39).

ತೀರ ಶುಷ್ಕ ಇಲ್ಲವೇ ಆರ್ದ್ರ ಭೂಮಿಯು ಒಳ್ಳೆಯ ಭೂಮಿಯಲ್ಲ. ಮಧ್ಯಮ ಭೂಮಿ (ತೀರ ಶುಷ್ಕವೂ ಅಲ್ಲ ತೀರ ಆರ್ದ್ರವೂ ಅಲ್ಲದ್ದು)ಯಲ್ಲಿ ಮಾತ್ರ ಎಲ್ಲ ಬಗೆಯ ಮರಗಳೂ ಬೆಳೆಯುವುದು ಖಚಿತ (ಶ್ಲೋ. 40).

ಪನಸ, ಲಕುಚ, ತಾಲಿ (ಹೆಂಡದ ಮರ) ಬಿದಿರು, ಪನ್ನೇರಳೆ, ಮಧುಕ, ಎಳ್ಳು, ಕಂಟ (?) ಕದಂಬ, ಆಮ್ರಾತ, ಖರ್ಜೂರ, ಅಡಕೆ, ಬಾಳೆ, ತಿನಿಸ, ದ್ರಾಕ್ಷಿಬಳ್ಳಿ, ಕೇತಕಿ ತೆಂಗು ಇತ್ಯಾದಿ ಮರಗಳು ಆರ್ದ್ರ ಭೂಮಿಯಲ್ಲಿ ಬೆಳೆಯುತ್ತವೆ (ಶ್ಲೋ. 41).

ಶೋಭಾಂಜನ, ಶ್ರೀಫಲ (ಬೇಲ), ಸಪ್ತಪರ್ಣ, ಸಿಫಾಲಿಕ, ಅಶೋಕ ಶಮಿ, ಕರೀರ, ಕರ್ಕಂಧೂ, ಕೇಸರ, ಬೇವು (ನಿಂಬೆ) ಮತ್ತು ಶಾಖ (?) ತರಕಾರಿಗಳು, ಇವು ಶುಷ್ಕ ಭೂಮಿಯಲ್ಲಿ ಚೆನ್ನಾಗಿ ಬೆಳೆಯುತ್ತವೆ (ಶ್ಲೋ. 42).

ಪಾದಳ, ಪುನ್ನಾಗ, ಚಂಪಕ, ಸಂಪಿಗೆ, ಆಮ್ರ(ಮಾವು), ಅತಿಮುಕ್ತಕ, ಪ್ರಿಯಂಗು, ದಾಳಿಂಬ ಮತ್ತು ಅಶ್ವ (?=ಅಶ್ವತ್ಥ=ಅರಳೀಮರ) ಇವು ಮಧ್ಯಮ ತರವಾದ ಎಂದರೆ ತೀರಾ ಶುಷ್ಕವೂ ಅಲ್ಲ ತೀರಾ ಆರ್ದ್ರವೂ ಅಲ್ಲದ ಭೂಮಿಯಲ್ಲಿ ಬೆಳೆಯುತ್ತವೆ (ಶ್ಲೋ. 43).

ಆದರೆ ದೈವಕೃಪೆ, ಅದೃಷ್ಟ, ರಾಜರುಗಳ ಪ್ರಭಾವ ಹಾಗೂ ಕ್ಲಿಷ್ಟ ದುಡಿಮೆಗಳಿಂದಾಗಿ ಮರಗಳು ಅನನುಗುಣಯುಕ್ತ ಮಣ್ಣಿನಲ್ಲೂ ಸಹ ಬೆಳೆಯುತ್ತವೆ (ಶ್ಲೋ. 44).

ಮರಗಳನ್ನು ನೆಡುವುದಕ್ಕೆ ಭೂಮಿ ಆಯ್ಕೆ

ವೃಕ್ಷಾಯುರ್ವೇದದಲ್ಲಿ ಮರಗಳನ್ನು ನೆಡುವುದಕ್ಕೆ ಯುಕ್ತವಾದ ಭೂಮಿಯ ಆಯ್ಕೆ ಮಾಡುವ ರೀತಿಯನ್ನು ಕೊಟ್ಟಿದೆ ಅದರಲ್ಲಿಯಂತೆ ;

ಸಾಮಾನ್ಯವಾಗಿ ಸುಂದರ ಜಲಾಶಯಗಳ ದಂಡೆಯಲ್ಲಿ ನೆರಳು ಇಲ್ಲದಿರುವುದರಿಂದ ಅವುಗಳ ಅಂಚಿನ ಸುತ್ತ ತೋಟಗಳನ್ನು ಮಾಡಬೇಕು (ಶ್ಲೋ. 35).

ವಿಷವಸ್ತುಗಳು, ಕಲ್ಲು ಮಣ್ಣುಗಳು ಇಲ್ಲವೇ ಹುತ್ತಗಳಿಂದ ತುಂಬಿರುವ ಇಲ್ಲವೇ ಚೌಳುಯುಕ್ತ ಗರಸು ಅಥವಾ ಅನಿಷ್ಟವಾದ ಅಂತರ್ಗತಜಲ ಹೊಂದಿರುವ ಮಣ್ಣು ಮರಗಳನ್ನು ಬೆಳೆಸುವುದಕ್ಕೆ ಅನುಕೂಲಕರವಲ್ಲ (ಶ್ಲೋ. 36).

ದಟ್ಟ ಬಣ್ಣವಿರುವ, ನೀರಿಗೆ ಸಮೀಪವಿರುವ, ಹಾಳುಬಿದ್ದಿರುವ, ಹಸುರಿನಿಂದ ಆವರಿಸಿದ ಮಣ್ಣಿನಲ್ಲಿ ಯುಕ್ತಸ್ಥಳಗಳಲ್ಲಿ ಮರಗಳನ್ನು ನೆಟ್ಟಾಗ ಎಲ್ಲ ಬಗೆಯ ಮರಗಳೂ ಬೆಳೆಯುತ್ತವೆ (ಶ್ಲೋ. 37).

ಸಾಮಾನ್ಯ ಆರ್ದ್ರತೆಯುಳ್ಳ ಭೂಮಿಯು (ತೀರಾ ಶುಷ್ಕವೂ ಅಲ್ಲ ತೀರ ಆರ್ದ್ರವೂ ಅಲ್ಲದ್ದು) ಉತ್ತಮವಾದುದು. ಅಲ್ಲಿ ಎಲ್ಲ ಬಗೆಯ ಮರಗಳು ಬೆಳೆಯುವುದು ನಿಶ್ಚಿತ (ಶ್ಲೋ. 38).

ಪನಸ (ಹಲಸು), ಲಕುಚ, ತಾಳಿ, ಬಿದಿರು, ಪಾದಳ, ಜಂಬು, ತಿಲಕ (ಕ್ಲಿರೋಡೆಂಡ್ರಮ್ ಫ್ಲೋಮಾಯ್ಡಿಸ್) ಘಟ, ಕದಂಬ, ಆಮ್ರಾತ ಖರ್ಜೂರ, ಅಡಕೆ, ಬಾಳೆ, ತಿನಿಸ, ಮೃದ್ವೀ (ಕೆಂಪು ದ್ರಾಕ್ಷಿಬಳ್ಳಿ), ಕೇತಕಿ (ಪೆಂಡಾನಸ್ ಒಡೊರೇಟಿಸ್ಸಿಮಾಸ್), ತೆಂಗು ಇತ್ಯಾದಿ ಮರಗಳು ಸಾಮಾನ್ಯವಾಗಿ ಆರ್ದ್ರ ಭೂಮಿಯಲ್ಲಿ ಬೆಳೆಯುತ್ತವೆ (ಶ್ಲೋ. 39).

ಶೋಭಾಂಜನ (ಮೊರಿಂಗ ಟೆರಿಗೊಸ್ಪರ್ಮ), ಶ್ರೀಫಲ (ಏಗಲ್ ಮಾರ್ಮೆಲಸ್), ಸಪ್ತಪರ್ಣ (ಮಿಮೋಸಾಪುಡಿಕ), ಸೊಕಲಿಕ (ವೈಟೆಕ್ಸ್ ನೆಗುಂಡೊ), ಅಶೋಕ, ಸನ್ನೆ (ಪ್ರೊಸೊಪಿಸ್

.' ಸ್ಪೈಸಿಗೆರ), ಕರೀರ (ಕಪ್ಪಾರಿಸ್ ಅಫಿಲ್ಲ), ಕರ್ಕಂಧು, ರಾಕಿಚರ, ಸಿಂಚ ಮತ್ತು ಸೋಕೆ (ಸಿಮಿ ಕಾರ್ಪಸ್ ಅನಕಾರ್ಡಿಯಂ) ಗಳು ಒಣ (ಶುಷ್ಕ) ಭೂಮಿಯಲ್ಲಿ ಬೆಳೆಯುತ್ತವೆ (ಶ್ಲೋ. 40).

ಪನ್ನೇರಲೀ. ವೇತಸ ಮತ್ತು ವಸಿಸ (ಕ್ಯಾಲಮಸ್ ರೋಟಂಗ್), ಕದಂಬ, ಅತ್ತಿ, ಅರ್ಜುನ, ಪಾದಳ, ದ್ರಾಕ್ಷಬಳ್ಳಿ, ಲಕುಚ, ದಾಳಿಂಬೆ, ಅಸಿಕೋಲಿ (ಅಲ್ಲಾಂಜಿಯಮ್ ಹೆಕ್ಸಾಪೆಟಲಮ್), ತಿಲಕ, ಪನಸ, ತಿಮಿರ (ಒಂದು ಜಲಸಸ್ಯ) ಮತ್ತು ಅಮ್ರಾತಕ (ಸ್ಪಾಂಡಿಯಸ್ ಮ್ಯಾಂಜಿಫೆರ) ಈ ಹದಿನಾರು ವೃಕ್ಷಗಳು ಆರ್ದ್ರ ಭೂಮಿಯಲ್ಲಿ ಬೆಳೆಯುತ್ತವೆ (ಶ್ಲೋ. 41-42).

ಪಾದಳ, ಪುನ್ನಾಗ, ಚಂಪಕ, ಮಾವು. ಅತಿಮುಕ್ತಕ, (ಒಂದು ಪೊದೆ), ಪ್ರಿಯಂಗು, ದಾಳಿಂಬೆ, ಮುಂತಾದವು ಸಾಮಾನ್ಯ (ಮಧ್ಯಮತರ) ಎಂದರೆ, ತೀರ ಶುಷ್ಕವೂ ತೀರ ಆರ್ದ್ರವೂ ಅಲ್ಲದ ಭೂಮಿಯಲ್ಲಿ ಬೆಳೆಯುತ್ತವೆ (ಶ್ಲೋ. 43).

ಭೂ ಕಂದಾಯ ಪದ್ಧತಿ

ಆಧುನಿಕ ಕಾಲದಲ್ಲಿನಂತೆಯೇ ಪ್ರಾಚೀನ ಭಾರತದಲ್ಲಿಯೂ ಸಹ ಭೂ ಕಂದಾಯವನ್ನು ಭೂಮಿಯಿಂದ ಬರುವ ಉತ್ಪತ್ತಿಯ ಮೇಲೆ ವಿಧಿಸಲಾಗುತ್ತಿತ್ತೆಂಬುದು ಆಧಾರಗಳಿಂದ ವ್ಯಕ್ತವಾಗುತ್ತದೆ. ಎಂದರೆ, ಕಂದಾಯವನ್ನು ಮಣ್ಣಿನ ಬಗೆ ಹಾಗೂ ಉತ್ಪಾದಕತೆಗೆ ಅನುಗುಣವಾಗಿ ವಿಧಿಸಲಾಗುತ್ತಿತ್ತು. ಮುಂದಿನ ಸಾಲುಗಳನ್ನು ಎ. ಎಸ್. ಬೋಸ್ ವಿರಚಿತ 'ಸೋಷಿಯಲ್ ಆ್ಯಂಡ್ ರೂರಲ್ ಎಕಾನಮಿ ಆಫ್ ನಾರ್ದರ್ನ್ ಇಂಡಿಯಾ' ಸರ್ಕ್ಯುಲರ್ 600 BC–200 AD ಯ ಸಂ. 1, ಪು. 118 ರಿಂದ ತೆಗೆದು ಉದ್ಧರಿಸಲಾಗಿದೆ. ಮಣ್ಣಿನ ಗುಣಧರ್ಮಗಳಿಗನು ಗುಣವಾಗಿ ಮನು ಇದನ್ನು $\frac{1}{6}$: $\frac{1}{8}$ ಅಥವಾ $\frac{1}{12}$ ಎಂದು ನಿಗದಿ ಪಡಿಸಿದ್ದಾನೆ (vii. 130). ಗೌತಮನು ಕಂದಾಯದ ಕನಿಷ್ಠಮಿತಿಯನ್ನು $\frac{1}{10}$ ಕ್ಕೆ ಏರಿಸಿದ್ದಾನೆ (X 24). ಶುಕ್ರನ ಪ್ರಕಾರ ಇದು ಮಣ್ಣಿನ ಸ್ವಭಾವ, ಮಳೆ ಹಾಗೂ ನೀರಾವರಿ ಸೌಲಭ್ಯ ಗಳಿಗನುಗುಣವಾಗಿ $\frac{1}{3}$, $\frac{1}{4}$, $\frac{1}{2}$ ಮತ್ತು $\frac{1}{6}$ ಆಗಿರುತ್ತದೆ (IV.ii 227–30). ಇಲ್ಲಿ ಸಾಮಾನ್ಯ ಪಾರಂಪರಿಕ ಕಂದಾಯ ದರ $\frac{1}{6}$ ರಿಂದ ಕ್ರಮೇಣ ಹೆಚ್ಚುತ್ತಾ ಹೋಗಿರುವುದು ಗಮನಾರ್ಹ. ಗೋಪನ ಕ್ಷೇತ್ರನೋಂದಣಿ ಪುಸ್ತಕದಲ್ಲಿ ಮೈದಾನ (ಸ್ಥಲ) ಹಾಗೂ ತಗ್ಗು ಪ್ರದೇಶ(ಕೇದಾರ)ಗಳನ್ನು ಪ್ರತ್ಯೇಕ ದಾಖಲು ಮಾಡಿಕೊಳ್ಳಬೇಕೆಂದು ಶಿಫಾರಸ್ಸು ಮಾಡಲಾಗಿದೆ. ಹಾಗೆಯೇ ಕಂದಾಯಾಧಿಕಾರಿಯನ್ನು ಕುರಿತ ಗೌತಮ ಹಾಗೂ ಮನುಗಳ(ಹೇಳಿಕೆಯ) ನಿಲುವಿನ ಮೇಲೆ ಹಳ್ಳಿಗಳನ್ನು ಮೂರು ದರ್ಜೆಗಳಾಗಿ ವರ್ಗೀಕರಣ ಮಾಡಲಾಗಿದೆ (ಸಮರ್ಪರ್ತರ್, II. 35 ; ಶುಕ್ರನೀತಿ, VV.ii 220). ಇದು ಹಾಗೂ ಪುಸ್ತಕ V, ಅಧ್ಯಾಯ II ರಲ್ಲಿರುವ ಇಂಥದೇ

ಆಧಾರದಿಂದ ವಿವಿಧ ವರ್ಗದ ಮಣ್ಣುಗಳಿಗೆ ವಿವಿಧ ದರಗಳನ್ನು ನಿಶ್ಚಿತಪಡಿಸಲಾಗಿತ್ತೆಂಬುದು ವ್ಯಕ್ತವಾಗುತ್ತದೆ. ಅಗ್ನಿಪುರಾಣದಲ್ಲಿ ವಿವಿಧ ಬಗೆಯ ಬತ್ತದ ಬೆಳೆಗಳಿಗೆ ವಿವಿಧ ದರಗಳನ್ನು $\frac{1}{6}$ ಮತ್ತು $\frac{1}{8}$ ರ ಅಂತರದಲ್ಲಿ ವಿಧಿಸಲಾಗಿದೆ. ಹೀಗೆ ಮಣ್ಣಿನ ಗುಣಧರ್ಮ ಹಾಗೂ ಬೆಳೆಯ ಬಗೆಗನುಗುಣವಾಗಿ ಕಂದಾಯವು ಬದಲಾಗುತ್ತಿತ್ತು. ಸದ್ಭಾಗವು ಕೇವಲ ಸಾಂಪ್ರದಾಯಿಕ ಇಲ್ಲವೇ ಸರಾಸರಿಯಾಗಿದ್ದು ನಿಗದಿತ ಇಲ್ಲವೇ ಸಾರ್ವತ್ರಿಕ ದರವಾಗಿರಲಿಲ್ಲ. ಈ ದೃಷ್ಟಿಯಲ್ಲಿ ಇದು ಕೆಲಮಟ್ಟಿಗೆ ಐರೋಪ್ಯ ರಾಜ್ಯಾದಾಯ ಪರಿಭಾಷೆಯಲ್ಲಿಯ 'ದಶಾಂಶ ತೆರಿಗೆ'ಯನ್ನು ಹೋಲುತ್ತದೆ.

ಮನು ಧರ್ಮಶಾಸ್ತ್ರ, ಅರ್ಥಶಾಸ್ತ್ರ ಮತ್ತು ಸುಮನೀತಿಗಳಲ್ಲಿ ಭೂಮಿಯ ವಿಸ್ತಾರಪೂರ್ಣ ವರ್ಗೀಕರಣ, ಸಮೀಕ್ಷಣೆ ಹಾಗೂ ಅಳತೆ, ಉತ್ಪತ್ತಿ ಲೆಕ್ಕಾಚಾರ ಹಾಗೂ ಪ್ರತಿ ಏಕಮಾನ ಭೂಮಿಗೆ ತಗಲುವ ವೆಚ್ಚ ಇತ್ಯಾದಿ ಅಂಶಗಳನ್ನು ಪೂರ್ವಭಾವಿಯಾಗಿಟ್ಟುಕೊಂಡು (ಮುಂಗಂಡು)ದರ ವಿಧಿಸಲಾಗಿದೆ.

ಅರ್ಥಶಾಸ್ತ್ರ ಹಾಗೂ ಸ್ಮೃತಿಗಳಲ್ಲಿ ಒಳ್ಳೆ ಉತ್ಪಾದಕನ ಅಧಿಕ ಉತ್ಪನ್ನಕ್ಕೆ ವಿನಾಯಿತಿ ಕೊಡುವಲ್ಲಿ ಕಟ್ಟುನಿಟ್ಟಾದ ನಿಯಮಗಳನ್ನು ವಿಧಿಸಿರುವುದಲ್ಲದೆ ಫಲವತ್ತತೆಯ ಆಧಾರದ ಮೇಲೆ ಮಣ್ಣು ವರ್ಗೀಕರಣ ಹಾಗೂ ಅದರ ಮೇಲೆ ವಿವಿಧ ಕಂದಾಯ ದರಗಳನ್ನು ಹೇರಿರುವುದು ಕಂಡುಬರುತ್ತದೆ.

ರಾಜನ ಪಾಲು ಅವಶ್ಯವಾಗಿ ನಿಗದಿತ ಪಾಲಾಗಿರಲಿಲ್ಲ. ಅದನ್ನು ಮಣ್ಣಿನ ಫಲವತ್ತತೆಯನ್ನು ಪರಿಗಣಿಸಿ ರಾಜ್ಯದ ಅಥವಾ ಬೇಸಾಯಗಾರನ ಅವಶ್ಯಕತೆಗಳಿಂದ ನಿರ್ಧರಿಸಲಾಗುತ್ತಿತ್ತು. ಅಳತೆ ಮತ್ತು ಸಮೀಕ್ಷಣೆ ಪದ್ಧತಿ ಹಾಗೂ ಉತ್ಪಾದಕತೆಗನುಗುಣವಾಗಿ ಮಾಡುವ ಮಣ್ಣಿನ ವಿಂಗಡಣೆಗಳಿಂದಾಗಿ, ಭೂ ಕಂದಾಯವು ಶಾಶ್ವತವಾದುದಾಗಿರಲಿಲ್ಲವೆಂದು ಕಂಡುಬರುತ್ತದೆ. ಅಲ್ಲದೆ, ನಿರಂತರ ಪುನರ್ವಿಮರ್ಶೆ ಅವಶ್ಯವಿಲ್ಲದಿದ್ದರೂ, ಆಗಾಗ್ಗೆ ಅದರಲ್ಲಿ ಪುನರ್‌ಸುಧಾರಣೆಯಾಗುತ್ತಿತ್ತೆಂದೂ ಸೂಚಿತವಾಗುತ್ತದೆ.

ಮೌರ್ಯ ಕಂದಾಯಾಧಿಕಾರಿಗಳು ಕಂದಾಯ ವಿಧಿಸುವಲ್ಲಿ ಮೆಕ್ಕಲು ಮಣ್ಣು ಸಂಗ್ರಹಣೆ ಹಾಗೂ ಅದರ ಪ್ರಮಾಣವನ್ನು ಪರಿಗಣಿಸುತ್ತಿದ್ದರೆಂದು ಮೆಗಾಸ್ತನೀಸನು ತಿಳಿಸುತ್ತಾನೆ. ಬಹಲರ್‌ನು ಅಶೋಕನ ಕಾಲದ 'ರಜುಕ'ವು ಜಾತಕದ ಕತೆಗಳಲ್ಲಿ ಬರುವ ರಜ್ಜುಕ ಅಥವಾ ರಜ್ಜುಗಹಕ ಅಮಚ್ಚ ಎಂದು ತಿಳಿಸುತ್ತಾನೆ. ಇದು ಸರಿಯಾಗಿದ್ದರೆ ಹಾಗೂ ಇವೆರಡನ್ನೂ ಮೆಗಾಸ್ತನೀಸನು ಹೇಳುವ ಅಗ್ರೊನೊಮಾಯ್‌ದೊಂದಿಗೆ ತಾಳೆಗೂಡಿಸಿದರೆ ಅದು ಅರ್ಥಶಾಸ್ತ್ರದಲ್ಲಿ ಸೂಚಿಸಿದಂತಹ ವ್ಯವಸ್ಥಿತ ಭೂ ಸಮೀಕ್ಷಣೆಯನ್ನು ಸೂಚಿಸುತ್ತದೆ ಮಾತ್ರವಲ್ಲ, ಇಂಗ್ಲೆಂಡಿನ ಮೊದಲ ವಿಲಿಯಂ ದೊರೆಯ 'ಡೂಮಸ್‌ಡೇ' (ಜಮೀನು ಹಿಡುವಳಿ ದಫ್ತರ) ಪುಸ್ತಕದಂತಹ ದಾಖಲಿಡುವ ಅರ್ಥಶಾಸ್ತ್ರದ ಒಳ್ಳೆಯ ಯೋಜನೆಗಳನ್ನೂ ಮನಗಾಣಿಸುತ್ತದೆ.

ಅಧ್ಯಾಯ 2

ನೀರಾವರಿ ಮತ್ತು ನೀರು ಬಿಸಿಯುವಿಕೆ

ದೇಶದ ಬಹುಭಾಗದಲ್ಲಿ ಮಳೆ ಯಾವಾಗಲೂ ಅಸಮವಾಗಿ ಹಾಗೂ ಅನಿಯತವಾಗಿ ಬೀಳುತ್ತದೆ. ಇದರಿಂದಾಗಿ ಭಾರತದ ಬೇಸಾಯಗಾರರು ಅನಾದಿಕಾಲದಿಂದಲೂ ಮಳೆನೀರಿಗೆ ಪೂರಕವಾಗಿ ಬಾವಿಗಳನ್ನು ತೋಡಿ ನೀರನ್ನು ಕೆರೆ ಮತ್ತು ಜಲಾಶಯಗಳಲ್ಲಿ ಹಿಡಿದಿಟ್ಟು ಸಂರಕ್ಷಿಸಿಕೊಂಡು ಬಂದಿದ್ದಾರೆ. ಈ ದಿಸೆಯಲ್ಲಿ ಈ ಹಿಂದೆ ನೀರಾವರಿಗಾಗಿ ಹೆಚ್ಚಿನ ಕಳವಳ (ಆತಂಕ) ಪಟ್ಟಿರುವುದರ ಬಗ್ಗೆ ಗ್ರಾಂಥಿಕ ಹಾಗೂ ಸ್ಮಾರಕ ಆಧಾರಗಳನ್ನು ಆಗಲೇ ಕೊಟ್ಟಿದೆ. ಅಲ್ಲದೆ, ವಿಲ್‌ಕಾಕ್ಸ್‌ನನ್ನು ನಂಬುವುದಾದರೆ ಹಿಂದೆ, ಈಗ ನಡೆದಿರುವುದಕ್ಕಿಂತಲೂ ಬಹು ದೊಡ್ಡ ಹಾಗೂ ವಿಸ್ತೃತ ನೀರಾವರಿ ಕಾರ್ಯಗಳು ನಡೆದಿದ್ದುವೆಂದು ಒಪ್ಪಬೇಕಾಗುತ್ತದೆ.

ನೀರಾವರಿಯನ್ನು ಕುರಿತು ಅನೇಕ ಆಧಾರಗಳು ದೊರೆಯುತ್ತವೆ ಮತ್ತು ಅವೆಲ್ಲ ಪ್ರಾಚೀನ ಸಾಹಿತ್ಯದಲ್ಲಿ ಚೆದುರಿಹೋಗಿವೆ. ಇವು ಹಾಗೂ ಪಾಶ್ಚಾತ್ಯ ಎಂದರೆ ಅದರಲ್ಲೂ ತೀರಾ ಹಳೆಯ ಕಾಲದ ಮೆಗಾಸ್ತನೀಸನಂಥ ಲೇಖಕರು ಮತ್ತು ಆಧುನಿಕ ಕಾಲದ ವಿಲ್‌ಕಾಕ್ಸ್‌ನಂತಹವರ ಕೃತಿಗಳು ಪ್ರಾಚೀನ ಭಾರತದಲ್ಲಿಯ ನೀರಾವರಿ ಪದ್ಧತಿಗಳನ್ನು ಕುರಿತು ಹೆಚ್ಚಿನ ಬೆಳಕನ್ನು ಬೀರುತ್ತವೆ.

ಹಿಂದಿನಿಂದಲೂ ಭಾರತದ ಬೇಸಾಯದಲ್ಲಿ ನೀರಾವರಿಯು ಪ್ರಮುಖ ಸ್ಥಾನವನ್ನು ಆಕ್ರಮಿಸಿಕೊಂಡಿತ್ತು. ಅವುಗಳನ್ನು ಕುರಿತು ಉತ್ತಮ ವಿವರಗಳು ಆರ್. ಗಂಗೋಪಾಧ್ಯಾಯರು ಬರೆದಿರುವ ಅಗ್ರಿಕಲ್ಚರ್ ಆ್ಯಂಡ್ ಅಗ್ರಿಕಲ್ಚರಿಸ್ಟ್ ಇನ್ ಏನ್‌ಶಿಯಂಟ್ ಇಂಡಿಯಾ' ಪುಸ್ತಕದಲ್ಲಿ ಕಂಡುಬರುತ್ತದೆ.

ವೇದಗಳಲ್ಲಿ ಸಿಕ್ಕುವ ಆಧಾರಗಳು[1]

ಪ್ರಾಚೀನ ಕಾಲದಿಂದಲೂ ಭಾರತದ ಕೃಷಿ ಉದ್ಯಮದಲ್ಲಿ ನೀರಾವರಿಯು ಯಾವಾಗಲೂ ಪ್ರಮುಖ ಪಾತ್ರವಹಿಸಿದೆ. ಋಗ್ವೇದದಲ್ಲಿ ನೀರಾವರಿಗೆ ಸಂಬಂಧಿಸಿದಂತೆ ಅನೇಕ ಆಧಾರಗಳು ದೊರೆಯುತ್ತವೆ. ಅವರಲ್ಲಿ 'ಬಾವಿ' ಪದ ಪದೇ ಪದೇ ಬರುತ್ತದೆ ಮತ್ತು ಅದನ್ನು ಬತ್ತಿಹೋಗದ ಹಾಗೂ ಜಲಭರಿತವಾಗಿರುವುದು ಎಂದು ವಿವರಿಸಲಾಗಿದೆ (ಋಗ್ವೇದ X, 101, 6). ಬಾವಿಯಿಂದ ನೀರನ್ನು ಒಂದು

ಚಕ್ರ(ರಾಟೆ), ಚರ್ಮದ ಪಟ್ಟಿ ಹಾಗೂ ನೀರುಪಾತ್ರೆ (ಬಿಂದಿಗೆ) ಗಳಿಂದ ಮೇಲೆಳೆಯಲಾಗುತ್ತಿತ್ತು. (ಋಗ್ವೇದ VIII, 69, 12, ಹಾಗೂ ಜಾತಕ ಸಂಖ್ಯೆ 174 ಮತ್ತು 259). ಹಾಗೆಯೇ ಪ್ರಾಯಶಃ ಒಂದು ಮರದ ಉದ್ದ ಕೋಲಿಗೆ ಹಗ್ಗದಿಂದ ಬಕೆಟ್ಟನ್ನು ಕಟ್ಟಿದ್ದು ಕೋಲಿನ ಮತ್ತೊಂದು ತುದಿಯಲ್ಲಿ ಭಾರದ ತೂಕ ಕಟ್ಟಿ ಸನ್ನೆಯಾಧಾರದ ಮೂಲಕ ನೀರೆಳೆಯಲಾಗುತ್ತಿತ್ತು. ಇದೇ ಹಳೆಯ ಒರಟು ಪದ್ಧತಿಯು ಈಗಲೂ ಉತ್ತರ ಭಾರತದ ಕೆಲವು ಭಾಗಗಳಲ್ಲಿ ಇನ್ನೂ ಕಂಡುಬರುತ್ತದೆ. ಪೆಟ್ಟಿಗೆ ಬಳಕೆಯಲ್ಲಿದ್ದ ಮತ್ತೊಂದು ವಿಧಾನವೆಂದರೆ ಒಂದು ಸಣ್ಣ ತೋಡು ದೋಣಿಗೆ ತಂತಿಯಂತಹ ಹಗ್ಗವನ್ನು ಎರಡು ಬದಿಗೆ ಒಂದೊಂದು ಜೊತೆ ಕಟ್ಟಿ ಕಡಮೆ ಆಳದ ಜಲಾಶಯದ ಮೇಲಿರುವ ಮರದ ನಿಲುಮಣೆಯ ಮೇಲೆ ನಿಂತ ಇಬ್ಬರಿಂದ ನೀರನ್ನು ಮೇಲೆತ್ತಲಾಗುವುದು. ಈ ತೋಡು ದೋಣಿಯನ್ನು ಹಿಂದಕ್ಕೂ ಮುಂದಕ್ಕೂ ತೂಗಾಡಿಸಲಾಗುವುದು. ಪ್ರತಿ ಜೋಕಾಲಿಯ ಕೊನೆಯಲ್ಲೂ ನೀರು ಮೇಲೆ ಬಂದು ದೊಡ್ಡ ಕಾಲುವೆಗೆ ಸುರಿಸುತ್ತದೆ. ಮೆಕ್ಡೊನೆಲ್ ಮತ್ತು ಕೀತ್‌ರಿಗೆ ಋಗ್ವೇದ ಕಾಲದಲ್ಲಿ ನೀರಾವರಿಗೆ ಆಚರಣೆಯಲ್ಲಿದ್ದ ಕೃತಕ ನೀರ್ಗಾಲುವೆಗಳನ್ನು ಕುರಿತ ಸ್ಪಷ್ಟ ಆಧಾರಗಳು ದೊರೆತಿವೆ. (ವೇದಿಕ್ ಇಂಡೆಕ್ಸ್ I, P. 214). ಅಥರ್ವಣ ವೇದದಲ್ಲಿ ಸಹ ಆಧಾರಗಳಿಗೆ ಕೊರತೆ ಇಲ್ಲ (ನೋಡಿ ಋಕ್ 13, ಬುಕ್ II).

ಮಹಾಕಾವ್ಯಗಳು, ಅರ್ಥಶಾಸ್ತ್ರ ನ್ಯಾಯಶಾಸ್ತ್ರ (ಕಾನೂನು) ಗ್ರಂಥಗಳು ಹಾಗೂ ಜಾತಕಗಳಲ್ಲಿ ದೊರೆಯುವ ಆಧಾರಗಳು

ನಾರದರು 'ನೀರಿಲ್ಲದೆ ಎಂದೂ ಯಾವ ಕಾಳನ್ನು ಉತ್ಪಾದಿಸಲಾಗಿಲ್ಲ, ಆದರೆ ನೀರು ಹೆಚ್ಚಾದಾಗಲೂ ಧಾನ್ಯದ ಬೆಳೆ ಕೆಡುತ್ತದೆ. ನೀರಿನ ಪ್ರವಾಹ ಅಥವಾ ನೆರೆ ನೀರು ಕೊರತೆಯಷ್ಟೇ ಅಪಾಯಕಾರಿ' ಎಂದಿದ್ದಾರೆ (ನಾರದಸ್ಮೃತಿ XI, 19). ಬೃಹಸ್ಪತಿಯು 'ಭೂಮಿಯು ಫಲವತ್ತಾಗಿರಬೇಕು. ಮಣ್ಣು ಸಚ್ಛಿದ್ರವಾಗಿ ಅರ್ದ್ರಯುಕ್ತವಾಗಿರಬೇಕು, ಅದು ನೀರಾವರಿಗೆ ಯೋಗ್ಯವಾಗಿದ್ದು ಸುತ್ತಲೂ ಜಮೀನುಗಳಿಂದ ಆವೃತವಾಗಿರಬೇಕು. ಇಂಥ ಭೂಮಿಯಲ್ಲಿ ಸಕಾಲದಲ್ಲಿ ಸಾಗುವಳಿ ಮಾಡಿ ಬಿತ್ತನೆ ಮಾಡಿದಾತ, ಒಳ್ಳೆಯ ಉತ್ಪನ್ನಗಳಿಸುತ್ತಾನೆ' ಎಂದು ಘೋಷಿಸಿದ್ದಾನೆ (ನಾರದಸ್ಮೃತಿ XIV, 23). ಅರ್ಥಶಾಸ್ತ್ರದಲ್ಲಿ ನೀರಾವರಿ ಕೆಲಸ ಕಾರ್ಯಗಳು ಬೆಳೆಗಳಿಗೆ ಮೂಲವೆಂದು ಸೂಚಿಸಲಾಗಿದೆ. ನೀರಾವರಿ ಸೌಕರ್ಯದಿಂದ (ಕಾರ್ಯಗಳಿಂದ) ಬೆಳೆಯಲಾದ ಬೆಳೆಗಳಲ್ಲೂ ಸಹ ಒಳ್ಳೆಯ ಮಳೆಯಾದಾಗ ದೊರೆಯುವ ಪರಿಣಾಮವೇ ಇರುತ್ತದೆ. ನ್ಯಾಯಶಾಸ್ತ್ರ ಗ್ರಂಥಗಳಲ್ಲಿ ನೀರ್ಗಾಲುವೆ ಅಥವಾ ಜಲ ಮಾರ್ಗಗಳ ಬಗ್ಗೆಯೂ ಆಧಾರಗಳು ದೊರೆಯುತ್ತವೆ. ಅಲ್ಲಿ ಎರಡು ಬಗೆಯ ನೀರ್ಗಾಲುವೆಗಳು ಕಂಡುಬರುತ್ತವೆ; ಒಂದು ಖೇಯ. ಇದನ್ನು ಭೂಮಿಯೊಳಕ್ಕೆ ಅಗೆ

ಯಲಾಗುತ್ತದೆ. ಇನ್ನೊಂದು 'ಬಂಧ್ಯ' ಇದು ಹೆಚ್ಚಿನ ನೀರನ್ನು ಒಳಬರದಂತೆ ತಡೆಯುತ್ತದೆ. ಕೇಯ ನೀರ್ಗಾಲುವೆಯು ನೀರಾವರಿಗೆ ಅನುಕೂಲಕರವಾಗಿದ್ದರೆ, ಬಂಧ್ಯ ಕಾಲುವೆಯು ಅಧಿಕ ನೀರನ್ನು ದೂರವಿಡಲು ಉಪಯುಕ್ತವಾಗಿರುತ್ತದೆ (ನಾರದಸ್ಮೃತಿ, XI, 18). ಯಾಜ್ಞ್ಯ ವಲ್ಕ್ಯರಂತೆ ಇನ್ನೊಬ್ಬರ ಜಮೀನಿನ ಮಧ್ಯೆ ನೀರವಾಗಿ (ಕಾಲುವೆ) ನಿರ್ಮಿಸುವುದು• ನಿಷೇಧ ಕಾರ್ಯವೇನಿಲ್ಲ, ಏಕೆಂದರೆ, ಇದರಿಂದ ಉತ್ಪಾದನೆಗೆ ಹೆಚ್ಚಿನ ಅನುಕೂಲವುಂಟಾಗುವುದಲ್ಲದೆ ಅದರಿಂದಾಗುವ ನಷ್ಟವೂ ತೀರಾ ಅತ್ಯಲ್ಪವಾಗಿರುತ್ತದೆ (II, 156, cf. ನಾರದಸ್ಮೃತಿ XI, 17). ವಾಸ್ತವವಾಗಿ ಎಲ್ಲಾ ನ್ಯಾಯಶಾಸ್ತ್ರ ಗ್ರಂಥಗಳೂ ಜಲಾಶಯಗಳನ್ನು ತೋಡುವುದರ ಉಪಯುಕ್ತತೆಯನ್ನು ಶ್ಲಾಘಿಸುತ್ತವೆ. ಮಹಾಭಾರತದ ಸಭಾ ಪರ್ವದಲ್ಲಿ ನಾರದರು ಸಹ ಯುಧಿಷ್ಠಿರನನ್ನು ದೇಶದಲ್ಲಿ ಕೃಷಿ ಕಾರ್ಯಗಳು ಸಂಪೂರ್ಣವಾಗಿ ಮಳೆಯನ್ನೇ ನೆಚ್ಚಿಕೊಂಡಿರಬಾರದು, ಆದಕಾರಣ ಆತ (ಯುಧಿಷ್ಠಿರ) ತನ್ನ ರಾಜ್ಯದಲ್ಲಿ ಯುಕ್ತ ಅಂತರಗಳಲ್ಲಿ ಕೆರೆಗಳನ್ನು ಕಟ್ಟಿಸಿ ಕೃಷಿ ಸುಧಾರಣೆಯತ್ತ ಗಮನವಿತ್ತಿದ್ದಾನೆಯೆ?, ಎಂದು ಕೇಳಿರುವುದನ್ನು ನಾವು ಕಾಣುತ್ತೇವೆ. ಅರ್ಥಶಾಸ್ತ್ರದಲ್ಲಿ (ಪುಸ್ತಕ II, ಅಧ್ಯಾಯ 1) ರಾಜನು ವರ್ಷವೆಲ್ಲ ನೀರಿರುವಂತಹ ಇಲ್ಲವೇ ಇತರ ಮೂಲಗಳಿಂದ ನೀರು ಸಂಗ್ರಹ ಮಾಡಲಾದ ಜಲಾಶಯಗಳನ್ನು ನಿರ್ಮಿಸಬೇಕೆಂದು ವಿಧಿಸಲಾಗಿದೆ. ಅಲ್ಲದೆ, ಅವನು ತಮ್ಮದೇ ಆದ ಜಲಾಶಯಗಳನ್ನು ನಿರ್ಮಿಸಿಕೊಳ್ಳುವಂತಹವರಿಗೆ ಬೇಕಾದ ನಿವೇಶನ, ರಸ್ತೆಸೌಲಭ್ಯ, ಮರಮುಟ್ಟು ಇತ್ಯಾದಿ ಅವಶ್ಯಕ ವಸ್ತುಗಳನ್ನು ಒದಗಿಸಿಕೊಡಬೇಕಾಗಿತ್ತು. ವಾಸ್ತವವಾಗಿ ನೀರಾವರಿಗಾಗಿ ಜಲಾಶಯಗಳನ್ನು ನಿರ್ಮಿಸುವ ಸಹಕಾರ ಸಂಸ್ಥೆಗಳು ಸಹ ಇದ್ದವು. ಜಾತಕದಲ್ಲಿ (ಸಂಖ್ಯೆ 76) ಹೇಗೆ ಜನ ಮುಂಬರುವ ಮಳೆಯ ಸಂಕೇತಗಳಿಂದ ಗುದ್ದಲಿ ಮಂಕರಿಗಳನ್ನು ಹೊತ್ತು ಕಾಲುವೆಗಳನ್ನು ತೋಡಲು ಹೋಗುತ್ತಿದ್ದರೆಂದು ವಿವರಿಸಲಾಗಿದೆ (ಸಂ.. 1, ಮು. ಪು. 190–191 ಹಾಗೂ ಪು. 188). ಕುನಾಲ ಜಾತಕ ಗ್ರಂಥದಲ್ಲಿ(ಸಂ.V.ಪು. 219), ಶಾಕ್ಯರು ಮತ್ತು ಕೋಲಿಯರು ಜೇಷ್ಠಮಾಸದಲ್ಲಿ ತಮ್ಮ ಬೆಳೆಗಳು ಬಸವಳಿದು ಸೊರಗತೊಡಗಿದಾಗ ರೋಹಿಣಿ ನೀರಿಗಾಗಿ ಪರಸ್ಪರ ಹೊಡೆದಾಡುವುದರಲ್ಲಿದ್ದರೆಂದು ಪ್ರತಿಪಾದಿಸಲಾಗಿದೆ. ಹರಿವಂಶದ ವಿಷ್ಣುಪರ್ವದಲ್ಲಿ ಬಲರಾಮನು ಯಮುನೆಯ ನೀರನ್ನು ಬೃಂದಾವನದ ಮೂಲಕ ಹರಿಸುವುದನ್ನು ಕುರಿತು ಪರೋಕ್ಷ ಆಧಾರವು ಕಂಡುಬರುತ್ತದೆ (ಅಧ್ಯಾಯ 102). ಅದು ಕೃಷಿ ಉದ್ದೇಶಕ್ಕಾಗಿಯೇ ಎಂಬುದು ಸ್ಪಷ್ಟವಾಗುತ್ತದೆ. ಏಕೆಂದರೆ, ನೇಗಿಲು (ಲಾಂಗಲ=ಹಲ) ಮತ್ತು (ಮುಸಲ) ಒನಕೆಗಳು ಬಲರಾಮನ ಆಯುಧಗಳಾಗಿ ಪ್ರತಿಬಿಂಧಿಸಲ್ಪಟ್ಟಿವೆ.

ಪ್ರಾಚೀನ ಭಾರತದಲ್ಲಿ ಬಹುವಾಗಿ ನೀರಾವರಿ ಪದ್ಧತಿಯಿಂದ ಬೇಸಾಯ ನಡೆಸುತ್ತಿದ್ದರೆಂಬುದಕ್ಕೆ ಮೆಗಾಸ್ತನೀಸನಿಂದಲೂ ಪ್ರಮಾಣ ದೊರೆಯುತ್ತದೆ. ಆತ

ಭಾರತದಲ್ಲಿ ಅನೇಕ ದೊಡ್ಡ ದೊಡ್ಡ ಪರ್ವತಗಳಿವೆ. ಇವೆಲ್ಲ ಎಲ್ಲ ಬಗೆಯ ಹಣ್ಣುಗಳ ಮರಗಿಡಗಳಿಂದಲೂ ಅನೇಕ ಫಲವತ್ತಾದ ವಿಶಾಲ ಬಯಲು ಪ್ರದೇಶಗಳಿಂದಲೂ ತುಂಬಿವೆ. ಎಲ್ಲವೂ ಹೆಚ್ಚು ಕಡಮೆ ಒಂದೇ ರೀತಿಯಲ್ಲಿ ಸುಂದರವಾಗಿದ್ದು, ಅನೇಕ ನದಿಗಳಿಂದ ವಿಭಾಗಗಳಾಗಿವೆ; ಬಹುತೇಕ ಭೂಮಿಯೆಲ್ಲ ನೀರಾವರಿಗೊಳಗಾಗಿದ್ದು ತತ್ಫಲವಾಗಿ ಇಲ್ಲಿ ವಾರ್ಷಿಕವಾಗಿ ಎರಡು ಬೆಳೆಗಳನ್ನು ತೆಗೆಯಲಾಗುತ್ತದೆ ಎಂದು ಬರೆದಿದ್ದಾನೆ (ಮೆಕ್ ಕ್ರಿಂಡಲ್, ಪುಟ 29-30). ಅರ್ಥಶಾಸ್ತ್ರದಲ್ಲಿ ಕೃಷಿ ಮೇಲ್ವಿಚಾರಕನೆಂಬ ವಿಶೇಷ ಸರ್ಕಾರಿ ಅಧಿಕಾರಿಯ ವಿವರ ಬರುತ್ತದೆ. ಈತ ವಿವಿಧ ನೀರಾವರಿ ಪದ್ಧತಿಗಳಿಗನುಗುಣವಾಗಿ ಕಂದಾಯ ವಿಧಿಸುತ್ತಿದ್ದ. ದೈಹಿಕ ಶ್ರಮದಿಂದ ನೀರಾವರಿ ಮಾಡುತ್ತಿದ್ದವರು ಉತ್ಪನ್ನದ $\frac{1}{5}$ ಭಾಗವನ್ನು ನೀರು ತೆರಿಗೆಯಾಗಿ ಕೊಡಬೇಕಿತ್ತು. ಹಾಗೆಯೇ ಭುಜಗಳ ಮೇಲೆ ನೀರು ಸಾಗಿಸಿ ನೀರಾವರಿ ಮಾಡುವವರು ಉತ್ಪನ್ನದ $\frac{1}{4}$ ಭಾಗ, ನೀರೆತ್ತುಕಗಳನ್ನು ಬಳಸುವವರು ಉತ್ಪನ್ನದ $\frac{1}{3}$ ಭಾಗ ಹಾಗೂ ನದಿ, ಕೆರೆ, ಸರೋವರ ಮತ್ತು ಬಾವಿಗಳಿಂದ ನೀರಾವರಿ ಮಾಡುವವರು $\frac{1}{3}$ ಅಥವಾ $\frac{1}{4}$ ಭಾಗ ಉತ್ಪನ್ನವನ್ನು ನೀರು ತೆರಿಗೆಯಾಗಿ ಕೊಡಬೇಕಾಗಿತ್ತು. ತಮ್ಮದೇ ಆದ ಕೆರೆ ಕೊಳಗಳನ್ನು ನಿರ್ಮಿಸಿಕೊಂಡ ಇಲ್ಲವೇ ಅಂಥ ಅಲಕ್ಷಿಸಲಾದ ಅಥವಾ ಹಾಳಾದ ಕೆರೆ ಬಾವಿಗಳನ್ನು ದುರಸ್ತಿಪಡಿಸಿದವರಿಗೆ ತೆರಿಗೆ ವಿನಾಯಿತಿಗೂ ಅವಕಾಶವಿರುತ್ತಿತ್ತು (ಅರ್ಥಶಾಸ್ತ್ರ ಪುಸ್ತಕ II, ಅಧ್ಯಾಯ 24; ಮತ್ತು ಪುಸ್ತಕ III, ಅಧ್ಯಾಯ 7). ಚಂದ್ರಗುಪ್ತಮೌರ್ಯನು ಒಂದು ನಿಯತ ನೀರ್ಗಾಲುವೆ ವ್ಯವಸ್ಥೆಯನ್ನು ಕಾಯ್ದುಕೊಂಡು ಬಂದಿದ್ದನಲ್ಲದೆ ಅವನ ಆಳ್ವಿಕೆಯಲ್ಲಿ ಭೂಮಿಯನ್ನು ಅಳತೆಮಾಡಿ ತೂಬುಗಳಲ್ಲಿ ನೀರು ಪೂರೈಕೆಯನ್ನು ನಿಯಂತ್ರಗೊಳಿಸಲೆಂದೇ ಒಂದು ವಿಶೇಷ ವಿಭಾಗವನ್ನು ಸಹ ರಚಿಸಿದ್ದನು.

ಚಂದ್ರಗುಪ್ತನ ರಾಜ ಪ್ರತಿನಿಧಿ ಪುಷ್ಯಗುಪ್ತನು ತೋಡಿಸಿದ ಸುದರ್ಶನ ಕೆರೆಯ ನೀರಾವರಿ ಕಾಲುವೆ ಮಾರ್ಗಗಳನ್ನು ಅಶೋಕನು ಪೂರ್ಣಗೊಳಿಸಿದನು. ಇದು ಅವನ ಚಿರಸ್ಮರಣೀಯ ಕಾರ್ಯಗಳಲ್ಲಿ ಒಂದಾಗಿದ್ದು ಇಂದಿಗೂ ಪ್ರಾಚೀನ ಭಾರತದಲ್ಲಿ ನೀರಾವರಿಗಿದ್ದ ಪ್ರಾಮುಖ್ಯತೆಯನ್ನು ಸೂಚಿಸುತ್ತದೆ. ಮುಂದೆಯೂ ಸಹ ರಾಜರುಗಳು ಬೇಸಾಯಕಾರ್ಯಗಳಿಗೆಂದು ಅನೇಕ ಕೊಳಗಳನ್ನು ತೋಡಿಸಿದ್ದಾರೆ. ಈಗಲೂ ಪಶ್ಚಿಮ ಬಂಗಾಳದ ಮಿಡ್ನಾಪುರ, ಬಂಕೂರ ಹಾಗೂ ಬೀರ್‌ಭೂಮ್‌ಗಳಲ್ಲಿ ಇವುಗಳ ಅವಶೇಷಗಳನ್ನು ಕಾಣಬಹುದಾಗಿದೆ.

ಜೆ. ಸಿ. ರಾಯ್‌ರವರ 'ಲೈಫ್ ಇನ್ ಏನ್‌ಷಿಯಂಟ್ ಇಂಡಿಯ' (ಪ್ರಾಚೀನ ಭಾರತದಲ್ಲಿ ಜನಜೀವನ) ಎಂಬ ಪುಸ್ತಕದಲ್ಲಿ ಪ್ರಾಚೀನ ಭಾರತದಲ್ಲಿ ಅನುಸರಿಸಲಾಗುತ್ತಿದ್ದ ನೀರಾವರಿ ಪದ್ಧತಿಗಳನ್ನು ಕುರಿತು ಅಮೂಲ್ಯ ಮಾಹಿತಿಗಳು ದೊರೆಯುತ್ತವೆ. ಓದುಗರ ಅನುಕೂಲಕ್ಕಾಗಿ ಆ ಪುಸ್ತಕದಿಂದ ತೆಗೆದ ಕೆಲವು ಮುಖ್ಯ

ಭಾಗಗಳನ್ನು ವಿವರಿಸಿದೆ. ಋಗ್ವೇದ ಕಾಲದ ರೈತರು ನೀರಾವರಿಗಾಗಿ 'ಬಾವಿಗಳಿಂದ ಕಾಲುವೆಗಳನ್ನು ನಿರ್ಮಿಸುತ್ತಿದ್ದರು. ಪ್ರಾಯಶಃ ಬೇಸಿಗೆಯಲ್ಲಿ ಹಿಮವತ್ಪರ್ವತದೆಡೆಯಿಂದ ಹಿಮಕರಗಿ ಹರಿವ ನದಿಗಳಿಂದಲೂ ಸಹ ನೀರಾವರಿ ಕಾಲುವೆಗಳನ್ನು ನಿರ್ಮಿಸುತ್ತಿದ್ದರು. ದಕ್ಷಿಣ ಭಾರತದಲ್ಲಿ ಮಳೆನೀರು ಶೇಖರಣೆಗೆಂದು ಕೃತಕ ಕೆರೆಗಳನ್ನು ರಚಿಸಿರುವುದು ಸಾಮಾನ್ಯವಾಗಿದೆ. ಇಂಥ ಕೆರೆಗಳು ಪಶ್ಚಿಮ ಪಂಜಾಬ್ ಪ್ರದೇಶದಲ್ಲಿ ಕಂಡುಬರುವುದಿಲ್ಲ. ಪ್ರಾಯಶಃ ಈ ಬಗೆಯ ನೀರು ಶೇಖರಣೆಯ ಬಗ್ಗೆ ಚಿಂತನೆಯೂ ಮಾಡಿರಲಿಲ್ಲವೆಂದು ತೋರುತ್ತದೆ. ಏಕೆಂದರೆ, ಅಲ್ಲಿ ವಾರ್ಷಿಕ ಮಳೆ ಪ್ರಮಾಣವು ಕಡಮೆ ಇದ್ದು, ಬಿಸಿಗಾಳಿ ಬೀಸುವುದಲ್ಲದೆ ಬೇಸಿಗೆಯಲ್ಲಿ ಉಷ್ಣತಾಮಾನವೂ ಅಧಿಕವಾಗಿರುತ್ತದೆ. ಪ್ರಾಚೀನ ಕಾಲದಲ್ಲಿ ಜನತೆಗೆ, ನದಿಗೆ ಶಾಶ್ವತ ಅಣೆಕಟ್ಟು ಕಟ್ಟಿ ಕಾಲುವೆ ನೀರಾವರಿ ಮಾಡುವುದು ಪ್ರಾಯಶಃ ತಿಳಿದಿರಲಿಲ್ಲ. ಆದರೆ ಅವರು ಇದಕ್ಕಾಗಿ ಇನ್ನೊಂದು ವಿಧಾನವನ್ನು ಅನುಸರಿಸುತ್ತಿದ್ದರು: ಇದು ಭೂಮಿಯ ಅಂಚು ಬೆಟ್ಟಕ್ಕೆ ಸಮೀಪವಿರುವಲ್ಲಿ ಅಥವಾ ಭೂಮಿಯು ತಗ್ಗು ದಿಣ್ಣೆಗಳಿಂದ ಕೂಡಿರುವಲ್ಲಿ ಮಾತ್ರ ಸಾಧ್ಯವಿರುತ್ತದೆ. ಈ ವಿಧಾನದ ಒಂದು ಗಮನಾರ್ಹ ಉದಾಹರಣೆಯು ಬಂಕೂರ ಜಿಲ್ಲೆಯ ಶುಷ್ಕ ಭಾಗದಲ್ಲಿ ಕಂಡುಬರುತ್ತದೆ. ಅಲ್ಲಿ ಮೇಲ್ಮೈಬಿಜ ಭೂಮಿಯಿಂದ ಹರಿದುಬರುವ ಹೆಚ್ಚಿನ ಮಳೆ ನೀರನ್ನು ಶೇಖರಿಸಲೆಂದು ಮಾಡಿರುವ 16 ಮೈಲಿಗಳಷ್ಟು ಉದ್ದದ ಕಾಲುವೆ ಕಂಡುಬರುತ್ತದೆ: ಇದನ್ನು ಸುಪ್ರಸಿದ್ಧ ಪ್ರಾಚೀನ ಗಣಿತಜ್ಞ ಶುಭಂಕರನ ಹೆಸರಿನಲ್ಲಿ ಕರೆಯಲಾಗಿದೆ. ಈ ಕಾಲುವೆಗೆ ಶುಭಂಕರಿ ದಂಡ ಎಂದು ಕರೆಯಲಾಗಿದೆ. ಇದಕ್ಕೆ ಉಪಕಾಲುವೆಗಳನ್ನು ತೋಡಲಾಗಿದ್ದು ನೋಡುವುದಕ್ಕೆ ರೆಂಬೆ, ಕೊಂಬೆಗಳಿಂದ ಕೂಡಿದ ಒಂದು ಮರದ ಕಾಂಡವನ್ನು ಹೋಲುವುದರಿಂದ 'ದಂಡ' (ಸಂಸ್ಕೃತ ಶಬ್ದ)ವೆಂದು ಕರೆಯಲಾಗಿದೆ. ವಿಶಾಲ ಪ್ರದೇಶದಲ್ಲಿ ದೋಷರಹಿತವಾಗಿ ನಿರ್ಮಿಸಿದ ಕಾಲುವೆ ರಚನೆಗೆ ಇದೊಂದು ನಿದರ್ಶನ.

ಋಗ್ವೇದದಲ್ಲಿ ನೀರೆತ್ತಲು ಬಳಸುವ 'ಅಶ್ಮಚಕ್ರ' ಎಂಬ ಯಂತ್ರದ ವಿಷಯ ಬರುತ್ತದೆ. ಅದು ಕಲ್ಲಿನಿಂದ ಮಾಡಿದ ಚಕ್ರವಾಗಿದ್ದು ಚರ್ಮದ ಪಟ್ಟಿಯ ಮೂಲಕ ಕೊಳಪಾತ್ರೆಯಲ್ಲಿ ನೀರೆತ್ತಲಾಗುತ್ತಿತ್ತು. ಇದರಿಂದ ನೀರೆತ್ತುವ ವಿಧಾನ ಯಾವುದೆಂಬುದು ಸ್ಪಷ್ಟವಾಗುವುದಿಲ್ಲ. 'ದ್ರೋಣ' ಎಂಬ ದೋಣಿಯಾಕಾರದ ಸಾಧನದ ('ಬಕ್ಕೀಟು') ವಿಚಾರವಿದ್ದರೂ ಅದರ ಗಾತ್ರವೇನು?, ಸನ್ನೇಗೋಲನ್ನೇನಾದರೂ ಒಂದು ಬದಿಯಲ್ಲಿ ತೂಗುಹಾಕಿ ದ್ರೋಣವನ್ನು ಎಳೆಯುತ್ತಿದ್ದರೆ ಎಂಬುದು ಸ್ಪಷ್ಟವಾಗುವುದಿಲ್ಲ. ಈ ರೂಪದಲ್ಲೂ ಅದು ಬಳಕೆಯಲ್ಲಿದ್ದು ತನ್ನ ಪರಿಮಿತಿಯಲ್ಲಿ ಅದೊಂದು ಸಮರ್ಥಯಂತ್ರವಾಗಿದೆ. 'ಅರಘಟ್ಟ'ಎಂಬುದೂ ಸಹ ಬಳಕೆಯಲ್ಲಿತ್ತು. ಆದರೆ ಅದನ್ನು ಮೊದಲು ಯಾವಾಗ ಬಳಸಲಾಯಿತೆಂಬುದು ತಿಳಿಯುವುದಿಲ್ಲ.

ಅದು ತೆರೆ ಅಥವಾ ತಡೆಗಂಬಿಗಳ ಜಾಲನೆ ಮೂಲಕ ಕೆರೆಬಾವಿಗಳಿಂದ ನೀರೆತ್ತುವ ಉಪಾಯವಾಗಿದೆ. ಪ್ರಾಯಶಃ 'ಘಟಿಯಂತ್ರ' ಹಾಗೂ 'ಉದ್ಘಟನ' ಎಂದು ಹೆಸರಾಗಿರುವುದೂ ಇದೇ ಇರಬೇಕು. ಉದ್ಘಟನ ಎಂಬುದು ಪೀಪಾಯಿ ಆಕಾರದ ಚಕ್ರವನ್ನು ಹೊಂದಿದ್ದು ನೀರಿನ ಮೇಲೆ ಲಂಬ (ಸಮತಲದಲ್ಲಿ) ತಿರುಗುತ್ತಿರುತ್ತದೆ. ಇದರ ಸುತ್ತಲೂ ಸಮಾನಾಂತರಗಳಲ್ಲಿ ಘಟ ಅಥವಾ ಮಣ್ಣಿನ ಮಡಿಕೆಗಳನ್ನು ಕಟ್ಟಿರುವ ಕೊನೆ(ತುದಿ)ಯಿಲ್ಲದ ಜೋಡಿ ಹಗ್ಗದ ಜೊತೆ ಹಾಯ್ದು ಹೋಗಿರುತ್ತದೆ. ಚಕ್ರವು ಒಂದು ತುದಿಯಲ್ಲಿ ಅರೆ (ತಡೆಗಂಬಿ)ಗಳನ್ನು ಹೊಂದಿದ್ದು ಹಾಯಿರಾಟೆಯಂತೆ ಕೆಲಸ ಮಾಡುತ್ತದೆ. ಇದು ಪರ್ಶಿಯನ್ ಚಕ್ರವೆಂದು ಹೆಸರಾಗಿದ್ದು ಕಬ್ಬಿಣದ ಸರಪಳಿ ಹಾಗೂ ಬಕೆಟ್ ಪಂಪುಗಳನ್ನೊಳಗೊಂಡ ಇದು ಒಂದು ಅತ್ಯಂತ ಸಮರ್ಥ ಮತ್ತು ಸಾಧನವಾಗಿರುತ್ತದೆ. ಇದಕ್ಕೆ 'ಘಟಚಕ್ರ'ವೆಂದೂ ಸಹ ಹೆಸರಿದೆ. ಋಗ್ವೇದದಲ್ಲಿ ಬರುವ ಅಸ್ಮಚಕ್ರವೆಂಬುದೂ ಪ್ರಾಯಶಃ ಇದೇ ಆಗಿದ್ದಿರಬಹುದು. ಕಲ್ಲು ಚಕ್ರವು, ಯಾವಾಗಲೂ ಚಕ್ರದ ಒಂದು ಬದಿಗಿರುವ ತುಂಬಿದ ಪಾತ್ರೆಗಳು ಜಾರದಂತೆ ತಡೆಯುವುದಾಗಿದೆ. ಅದನ್ನು ಎತ್ತು(ಹೋರಿ)ಗಳಿಂದಲೂ ನಡೆಸಲಾಗುತ್ತದೆ. ಇಲ್ಲಿ ಶಕ್ತಿಯನ್ನು ಮರದ ಹಲ್ಲು ಚಕ್ರದ ಮೂಲಕ ಪ್ರವಹಿಸಲಾಗುತ್ತದೆ. ಬಂಗಾಳ ಹಾಗೂ ಭಾರತದ ಇತರ ಭಾಗಗಳಲ್ಲಿ ಬಳಕೆಯಲ್ಲಿರುವ ಘರ್ಘರಿ ಎಂಬುದು ರಾಟೆ ಮತ್ತು ಬಕೆಟ್ಟು ಹಾಗೂ ಚಕ್ರ ಮತ್ತು ಚಕ್ರದಂಡು (ಇರಚು) ಬಳಕೆಯ ವ್ಯವಸ್ಥೆಯಾಗಿರುತ್ತದೆ. ಇದನ್ನು ಮನೆಗಳಿಗೆ ಬೇಕಾದ ನೀರು ಪೂರೈಕೆಗೆ ಬಳಸುತ್ತಾರೆ. ಉತ್ತರ ಭಾರತದಲ್ಲಿ ಹೊಲಗಳಿಗೆ ನೀರು ಎತ್ತಿ ಉಣ್ಣಿಸುವ ವಿಧಾನವಾದ ಕಪಿಲೆ ಪದ್ಧತಿಯಲ್ಲಿ ರಾಟೆ (ಗಡಗಡೆ) ಹಾಗೂ ಹಗ್ಗ ಉಪಯೋಗಿಸಲಾಗುತ್ತದೆ. ಹಗ್ಗ ಎಳೆಯಲು ಎತ್ತುಗಳನ್ನು ಉಪಯೋಗಿಸುತ್ತಾರೆ. ಇದಲ್ಲದೆ ತಿರ, 'ತಿರ್ಯಕ್‌ಯಂತ್ರ' ಇಲ್ಲವೇ 'ಸ್ವಾಪಿ' ಎಂದು ಕರೆಯುವ ಮಾನವ ಚಾಲಿತ ಸಾಧನಗಳು ಇವೆ. ಇದರಲ್ಲಿ ಒಂದು ಕಂಬಕ್ಕೆ ಒಂದು ಉದ್ದವಾದ ಗಳವನ್ನು ಕಟ್ಟಲಾಗಿರುತ್ತದೆ. ನೀರಿರುವ ಕಡೆ ತುದಿಯಲ್ಲಿ ಬಕೀಟು ಹಾಗೂ ಅದರ ವಿರುದ್ಧ ದಿಸೆಯಲ್ಲಿ ಒಂದು ಭಾರವಿರುತ್ತದೆ. ಒಬ್ಬ ಮನುಷ್ಯ ಬಕೀಟಿರುವ ತುದಿಯಲ್ಲಿ ನಿಂತು ಅದನ್ನು ಬಗ್ಗಿಸಿ ಬಕೀಟನ್ನು ನೀರಿನಿಂದ ತುಂಬುವಂತೆ ಮಾಡುತ್ತಾನೆ. ಕೈಬಿಟ್ಟ ಕೂಡಲೇ ಇನ್ನೊಂದು ತುದಿಯಲ್ಲಿಯ ಭಾರದಿಂದಾಗಿ ಬಕೀಟು ಮೇಲೇಳುತ್ತದೆ. ಇದಕ್ಕೆ ಬದಲಾಗಿ ಪಿಕೋಟ್ಟಾದಂತಹ ಕೆಲವು ಏತಗಳಲ್ಲಿ ಭಾರ ಹಾಕಿದ ಸಾಧನವಿದ್ದರೂ ಕಾಲಿನಿಂದ ಒತ್ತಿ ಕಾರ್ಯಸಾಧನೆ ನಡೆಸುವ ವ್ಯವಸ್ಥೆ ಇರುತ್ತದೆ. ಇದಕ್ಕೆ ಹೆಚ್ಚಿನ ಅಭ್ಯಾಸ ಬೇಕಾಗುತ್ತದೆ. ಇದಕ್ಕೆ ಕೌಟಿಲ್ಯನು ಎರಡು ಬಗೆಯ ಯಂತ್ರ ಸಾಧನಗಳನ್ನು ತಿಳಿಸುತ್ತಾನೆ. ಒಂದು ಮೇಲೆ ತಿಳಿಸಿದಂತಹ 'ಉದ್ಘಟ'. ಅದನ್ನು ಎತ್ತುಗಳ ನೆರವಿನಿಂದ ನದಿ, ಕೆರೆ, ಕೊಳಗಳಿಂದ ನೀರೆತ್ತಲು ಬಳಸಲಾಗುತ್ತಿತ್ತು. ಇನ್ನೊಂದು

'ಸ್ರೋಟಯಂತ್ರ' ಇದು ಪ್ರಾಯಶಃ ನೀರಿನಿಂದ ನಡೆಸುವ ನೀರೆತ್ತುಗೆಯಾಗಿರುತ್ತದೆ (ನೋಡಿ ಇನ್ನಾ).

ಭಾರತದ ವಿವಿಧ ಬಗೆಯ ಹವಾಮಾನ ಹಾಗೂ ಮಣ್ಣುಗಳು ಮತ್ತು ಪ್ರಾಕೃತಿಕ ಹೊಲದ ಬೆಳೆಗಳು ಮತ್ತು ತಲೆ ತಲಾಂತರದಿಂದಲ್ಲೂ ಕೃಷಿಕರು ಬಿತ್ತನೆಯಲ್ಲಿ ನಡೆಸಿದ ಆಯ್ಕೆಯಿಂದಾಗಿ ಅನೇಕ ತಳಿಗಳ ಮತ್ತು ಕೆಲವು ಸಂದರ್ಭಗಳಲ್ಲಿ ತೀವ್ರ ಆರ್ಥಿಕ ಉಪಯುಕ್ತತೆಯುಳ್ಳ ಆಹಾರ ಧಾನ್ಯಗಳ ತಳಿಗಳು ಸಹ ಹೊರಬಂದಿವೆ : ಉದಾಹರಣೆಗೆಂದು ಬತ್ತವನ್ನು ಗಮನಿಸಿದಾಗ ಅದನ್ನು ಒಂದಲ್ಲ ಒಂದ ರೀತಿಯಲ್ಲಿ ವರ್ಷವಿಡೀ ಬೆಳೆಯಬಹುದಾಗಿದೆ. ಕೊಯ್ಲಿಗೆ ಬರುವ 'ಕಾಲಕ್ಕೆ ಅನುಗುಣವಾಗಿ ನಾಲ್ಕು (ಬಗೆಯ) ಬತ್ತದ ಪ್ರಕಾರಗಳು ಕಂಡುಬರುತ್ತವೆ. ಬೇಸಿಗೆಯ 'ಗ್ರೈಷ್ಮಿಕ' (ಗ್ರೀಷ್ಮ), ಮಳೆಗಾಲದ ವಾರ್ಷಿಕ, ಮಾಗಿ(ಶರತ್ಕಾಲ)ಯ 'ಶರದ ಹಾಗೂ ಚಳಿಗಾಲದಲ್ಲಿ 'ಹೈಮನ'. ಪ್ರಾಚೀನ ಆಯುರ್ವೇದೀಯ ಗ್ರಂಥಕರ್ತರ ಹಾಗೂ ಕೌಟಿಲ್ಯ ಇವರುಗಳು ಮಾಗಿಯ ಬಗೆಯಾದ ಬಂಗಾಳದ 'ಲಘುಧಾನ್ಯ ವನ್ನು ಕುರಿತು ಸ್ಪಷ್ಟವಾಗಿ ವಿಂಗಡಿಸಿಲ್ಲ. ಪ್ರಾಯಶಃ ತೇವಾಂಶ ಬಯಸುವ ಬತ್ತದ ಬೆಳೆಗೆ ಹವಾಮಾನ ಪರಿಸ್ಥಿತಿಗಳು ಅಷ್ಟೇನೂ ಯುಕ್ತವಾಗಿಲ್ಲದಿರುವ ಉತ್ತರ ಭಾರತವು ಅವರ ವಾಸಸ್ಥಾನವಾಗಿದ್ದುದೇ ಇದಕ್ಕೆ ಕಾರಣವಿರಬೇಕು. ಅವರುಗಳ ಮೂರು ಬಗೆಯ ಬತ್ತವನ್ನು ಗುರುತಿಸಿದ್ದಾರೆ. ಬೇಸಿಗೆಯಲ್ಲಿ ಅರವತ್ತು ದಿನಗಳಲ್ಲಿ ಮಾಗಿ, ಕಟಾವಿಗೆ ಬರುವ ಷಾಷ್ಟಿಕ; ಮಳೆಗಾಲದ ವ್ರೀಹಿ ಹಾಗೂ ಚಳಿಗಾಲದ 'ಶಾಲಿ.' ಕೆಲವರು ಇವುಗಳಲ್ಲಿ ಮೊದಲ ಎರಡು ಬಗೆಗಳೂ ಒಂದೇ ಎಂದು ಪರಿಗಣಿಸಿದ್ದಾರೆ. ಒಂದೇ ಬತ್ತದ ಬೀಜ ಈ ಎರಡೂ ಬಗೆಯ ಬೆಳೆಗಳಲ್ಲೂ ಚೆನ್ನಾಗಿ ಬೆಳೆಯುತ್ತದೆಂಬುದೂ ಸಂಪಾದಿತ ವೇದಸಾಹಿತ್ಯದಲ್ಲಿ ಬಂದಿರುವ ವ್ರೀಹಿ ಬತ್ತವನ್ನು ಬೇಸಿಗೆಯ ಬತ್ತವೆಂದು ಕರೆಯಬಹುದಾಗಿದೆ. ಪಂಜಾಬಿನ ಪೂರ್ವ ಪಶ್ಚಿಮ ಭಾಗಗಳಲ್ಲಿಯ ವಾಯುಗುಣ ಪರಿಸ್ಥಿತಿಗಳು ಬಹಳಷ್ಟು ಬದಲಾಗುತ್ತವೆ ಅಲ್ಲಿ ವೇದಕಾಲದ ಆರ್ಯರು ಏಳು ನದಿಗಳು ಹರಿಯುವ 'ಸಪ್ತಸಿಂಧು' ಭೂಮಿಯಲ್ಲಿ ವಾಸಿಸತೊಡಗಿದಾಗ ಪ್ರವಾಹಕ್ಕೆ ನೀರಾವರಿ ಸಾಧ್ಯವಾಯಿತಲ್ಲದೆ ಬತ್ತವು ಪ್ರಮುಖ ಬೆಳೆಯಾಗಿ ಪರಿಣಮಿಸಿತು.

ಪಾಲಿಕೃತಿಗಳು ಮತ್ತು ಮಹಾಕಾವ್ಯಗಳಲ್ಲಿ ಕಂಡುಬರುವ ಆಧಾರಗಳು

ಬುದ್ಧನ ಕಾಲದಲ್ಲಿ ಮಗಧದ ಕ್ಷೇತ್ರಗಳು ಚೌಕಾಕೃತಿ ಹಾಗೂ ವಕ್ರರೇಖಾತ್ಮಕ ಕಾಲುವೆ ಮತ್ತು ಬದುಗಳ ಬರೆಯಂತಹ ರಚನೆಗಳಿಂದ ವಿಚ್ಛೇದನಗೊಂಡಿದ್ದು ನಾಡಿನ ವ್ಯವಸಾಯ ಯೋಗ್ಯ ಭೂಮಿಯ ಸೀಮೆ (ಎಲ್ಲೆ) ಯನ್ನು ಗುರುತಿಸಿದ್ದವು ಪದಶಃ ಹೇಳುವುದಾದರೆ ಸಣ್ಣ, ಸಣ್ಣ ವಿಭಾಗಗಳಾಗಿ—ವಿಭಾಗಿತ (ಅಚ್ಚಿಬಂಧಂ-

ಚತುರೆಸ್ಸಕ್ಕೇದಾರಕ ಬದ್ಧಂ' ಎಂಬ ಬುದ್ಧಘೋಷನ ಟಿಪ್ಪಣಿಯು ಅಪರಿಪೂರ್ಣವಾಗಿದೆ. ಸಾಲು ವಿಂಗಡಣೆ ನೀರು ಹಂಚುವಿಕೆಗೆ ಅನುಕೂಲವಾಗಿರುವುದಿಲ್ಲ) ವಾಗಿದ್ದವು. ಅವು ಸಾಲು ಸಾಲಾಗಿ (ಪಾಳಿ ಬಂಧಂ : ಬುದ್ಧ ಘೋಷನಲ್ಲಿ ಆಯಮಟೋಚ ವಿತ್ತರಾಟೊ ಚತುದಿಘ ಮರಿಯಾದ ಬಂಧಂ ಎಂದಿದೆ) ಬಾಹ್ಯ ಬದುಗಳಿಂದ (ಮರಿಯಿ•ಬಂಧಂ–ಬುದ್ಧ ಘೋಷ್, 'ಅನಂತರಂತರಾಯ ಮರಿಯಾದಾಯ ಮರಿಯಾದ ಬಂಧಂ-ಎಂದು ಕೊಟ್ಟಿದ್ದಾನೆ) ಮತ್ತು ಅಡ್ಡ ಸೀಮಾ ಪ್ರದೇಶಗಳಿಂದ (ಸಿಂಘತಾಕ ಬಂಧಂ–ಬುದ್ಧಘೋಷ ಮರಿಯಾದಂ ಪಿಸಿಪಿಜ್ಜತ್ವ-ಗಟತ್ಥಾನೆ ಸಿಂಘಟಾಕ ಬಂಧ್ಮಂ, ಚಟುಕ್ಕ–ಸಂತನಾಂತಿ, ಅಟ್ಠೊ-ಎಂದು ವಿವರಿಸುತ್ತಾನೆ) ವಿಂಗಡಣೆಗೊಂಡಿದ್ದವು. ಬುದ್ಧಘೋಷನ ಟಿಪ್ಪಣಿಯು ಸೂಚಿಸಿದ ಇವು ಅತ್ಯಂತ ಕನಿಷ್ಠ ಅಪೇಕ್ಷಣೀಯವಾದ ಬುದ್ಧನ ಕೌದಿ ನಮೂನೆಯನ್ನು ಹೋಲುತ್ತಿದ್ದವು. ನೀರಾವರಿ ಯೋಜನೆಗಳನ್ನು ತಜ್ಞರೇ ವಹಿಸಿಕೊಂಡಿದ್ದರಲ್ಲದೆ ತಮ್ಮಿಚ್ಛೆಬಂದಂತೆ ಪ್ರವಹಿಸುತ್ತಿದ್ದರು (ಉದಕಂ ಹಿ ನಯಂತಿ, ನೆಟ್ಟಿಕ ಧಮ್ಮಪದ 80. 145; ಥೆರಾಗ್ 19. 877) (ಲಭ್ಯ ವಿವರಣೆ ಹಾಗೂ ಸಾಲಿನ ಸಾಮಾನ್ಯ ವಿವರದಿಂದ ನೆಟ್ಟಿಕರು ಎಂಬುವರು ಕೇವಲ ನೀರು ಹಾಯಿಸುವವರು ಮಾತ್ರವಲ್ಲ ಕಾಲುವೆಗಳು ಹಾಗೂ ಮೇಲುಕಾಲುವೆ ಕಟ್ಟುವವರೂ ಹಾಗೂ ನೀರು ತಾನಾಗಿ ಹರಿಯದಿರುವೆಡೆ ಅದನ್ನು ಹರಿಯುವಂತೆ ಮಾಡುವವರು ಎಂದು ನಿರ್ಣಯಿಸಬಹುದು. ಧಮ್ಮಪದದಲ್ಲಿಯ ಮ್ಯಾಕ್ಸ್ ಮ್ಯುಲ್ಲರನ ಟಿಪ್ಪಣಿ S.B.E. ಸೀರಿಸ್). ಬಿತ್ತನೆಯಾದ ಬಳಿಕ ಚೆಟ್ಟಿಗಳಲ್ಲಿ ನೀರು ಒಳ ಹರಿಯುವಿಕೆ ಹಾಗೂ ಹೊರ ಹರಿಯುವಿಕೆಗಳನ್ನು ನಿಯಂತ್ರಗೊಳಿಸುವಂತೆ ನೀರು ಹಾಯಿಸುವಿಕೆಯನ್ನು ರೂಪಿಸಲಾಗುತ್ತಿತ್ತು (ಉದಕ ಅಟಿನತಾಬ್ಬಂ .... ಅಟಿನೇತ್ವ ನಿನ್ನೇತಾಬ್ಬಂ, (Cv. VII. 1.2, cf. V. 17.2). ಕಾಲುವೆಗಳು, ಕೆರೆಗಳನ್ನು ಸಹಕಾರ ಶಕ್ತಿಯಿಂದ ತೋಡಿ ಸಹಕಾರಿ ನೀರಾವರಿ ನಡೆಸಲಾಗುತ್ತಿತ್ತು (ಜಾಟ್. 1, 199, f. 336 ; V. 412). ಮಹಾಕಾವ್ಯಗಳಲ್ಲಿ ಕಾಲುವೆ ಸೌಕರ್ಯ ಒದಗಿಸುವ ಕಾರ್ಯವು ರಾಜರ ಪಾಲಿನ ಕರ್ತವ್ಯವೆಂದು ಸೂಚಿಸಲಾಗಿದೆ. ನಾರದರು ಆಡಳಿತ ತತ್ವಗಳನ್ನು ಕುರಿತು ಯುಧಿಷ್ಠಿರನೊಂದಿಗೆ ನಡೆಸುವ ಚರ್ಚೆಯಲ್ಲಿ ವ್ಯವಸಾಯ ಕಾರ್ಯಗಳು ಸಂಪೂರ್ಣವಾಗಿ ಮಳೆಯ ನೀರನ್ನೇ ಆಶ್ರಯಿಸದಿರುವಂತೆ ನಿನ್ನ ಸಾಮ್ರಾಜ್ಯದಲ್ಲೆಲ್ಲಾ ಯುಕ್ತ ಅಂತರಗಳಲ್ಲಿ ದೊಡ್ಡ ದೊಡ್ಡ ನೀರಿನಿಂದ ತುಂಬಿದ ಸರೋವರಗಳನ್ನು ತೋಡಿಸಿರುವೆಯಾ ? ಎಂದು ಕೇಳುತ್ತಾರೆ(ಕೌಚಿದ್ ರಾಷ್ಟ್ರೇ) ತಟಾಗನಿ ಪೂರ್ಣಾನಿ ಚ ವೃಹಂತಿ ಚ: ಭಾಗ ಸೋವಿನಿವಿಶ್ಟಾನಿ ನಕೃಷಿರ್ದೇವ ಮಾತೃಕ, ಮಹಾಭಾರತ II 5, 77). ರಾಮನು ಕೋಸಲ ದೇಶವನ್ನು ಅದೇವ ಮಾತೃಕ ಎಂದು ಶ್ಲಾಘಿಸುತ್ತಾನೆ: ಎಂದರೆ ಅದು ನೀರಾವರಿಯನ್ನವಲಂಬಿಸಿದೆಯಲ್ಲದೆ ಮಳೆ ಆಶ್ರಯ ಭೂಮಿಯಲ್ಲ ಎಂದರ್ಥ(ರಾಮಾಯಣ II 100, 45). ಹಾಗೆಯೇ ಅರ್ಥಶಾಸ್ತ್ರದಲ್ಲಿಯೂ ಸಹ ಒಳ್ಳೆಯ ದೇಶವೊಂದರ ಗುಣಧರ್ಮಗಳನ್ನು ವಿವರಿಸುವಾಗ

ಇದೇ ವಿಶೇಷಣವನ್ನು ಬಳಸಲಾಗಿದೆ. (VI. 1). ನೀರಾವರಿಯಲ್ಲಿಯ ಪ್ರಗತಿಯನ್ನು ದಂತಕಥೆಯೊಂದರಿಂದ ಊಹಿಸಿ ತಿಳಿಯಬಹುದಾಗಿದೆ. ಒಮ್ಮೆ ಉಪಾಧ್ಯಾಯರೊಬ್ಬರು ತಮ್ಮ ಶಿಷ್ಯನನ್ನು ಒಂದು ಜಮೀನಿನಲ್ಲಿ ನೀರು ಕಾಲುವೆಯಲ್ಲಾದ ಬಿರುಕನ್ನು ಸರಿಪಡಿಸಲು ಕಳಿಸಿದಾಗ ಆ ಶಿಷ್ಯನು ಬೆಳೆಗಳಿಗೆ ಒದಗಬಹುದಾಗಿದ್ದ ಹಾನಿಯನ್ನು ತಡೆಗಟ್ಟುವ ಹೋಸುಗ ಪ್ರವಾಹಕ್ಕೆ ಅಡ್ಡವಾಗಿ ಮಲಗಬೇಕಾಯಿತಂತೆ. (ಮಹಾಭಾರತ I. 3). ಇದರಿಂದ ಒಡ್ಡು ಇಲ್ಲವೇ ನೀರು ಕಟ್ಟೆಗಳ ಬಾಗಿಲ ಬಳಿ ಕಾವಲು ಭಂಟರನ್ನು ನೇಮಿಸಲಾಗುತ್ತಿತ್ತೆಂತಲೂ ಕಟ್ಟೆ ಇಲ್ಲವೇ ಒಡ್ಡು ಒಡೆದರೆ ನೀರು ಪ್ರವಾಹದಂತೆ ಹರಿದು ಸಾಕಷ್ಟು ನಷ್ಟ ಉಂಟಾಗುತ್ತಿತ್ತೆಂದೂ ತಿಳಿಯಬಹುದಾಗಿದೆ (ದೊಡ್ಡ ದೊಡ್ಡ ಅಣೆಕಟ್ಟುಗಳ ವಿಚಾರದಲ್ಲಿಯಂತೆಯೇ ರಾಜರು ಅವರಿಯ ದಿಡ್ಡಿ ಬಾಗಿಲುಗಳ ವಿಚಾರದಲ್ಲಿಯೂ ಎಚ್ಚರದಿಂದಿರಬೇಕಾಗಿತ್ತು. ಅಪದ್ವಾರೇಷುಯುಕ್ತಸ್ಯಾಜ್ಜಲ ಪ್ರಸ್ರವಣೇಷ್ವಿವ. ಮಹಾಭಾರತ XII. 120-8).

ಅರ್ಥಶಾಸ್ತ್ರದಲ್ಲಿ ಕಂಡುಬರುವ ಆಧಾರಗಳು

ಆದರೆ ಜಾತಕ ಮತ್ತು ಮಹಾಕಾವ್ಯಗಳಲ್ಲಿ ಶಕ್ರ ಅಥವಾ ಇಂದ್ರನು ಜಲಾಧಿಪತಿಯಾಗಿದ್ದು ಸ್ವರ್ಗದಿಂದ ನೀರು ಹಂಚಿಕೆ ಮಾಡುವನೆಂಬ ನಂಬಿಕೆ ಹೋಗಿಲ್ಲ. ಕ್ರಿಸ್ತಶಕದಿಂದೀಚೆಗಿನ ಧರ್ಮಶಾಸ್ತ್ರ ಕೃತಿಗಳು ರಾಜರು ಮತ್ತು ಪ್ರಜೆಗಳು ದೈವೀ ಶಕ್ತಿಯ ಪ್ರೇರಣೆಯಿಂದ ನೀರಾವರಿ ಉದ್ಯಮಗಳ ನಡೆಸುವಿಕೆಯನ್ನು ಪ್ರೋತ್ಸಾಹಿಸಿವೆ (Vis. XCI. ff. g; Vas. XVII. 8; cf. Vi. XIV. 23). ಅರ್ಥಶಾಸ್ತ್ರದಲ್ಲಿ ಸಂಪೂರ್ಣ ಆರ್ಥಿಕ ದೃಷ್ಟಿಕೋನದ ವಿಕಾಸವನ್ನು ಸೂಚಿಸಿದೆ. ಅಲ್ಲಿ ಸಾಂಪ್ರದಾಯಿಕ ವೇದಮಂತ್ರ ಘೋಷಣೆಯನ್ನುಳಿದಂತೆ (II. 24). ವಿವಿಧ ಮುನ್ನೆಚ್ಚರಿಕೆ ಕ್ರಮಗಳನ್ನು ಕುರಿತು ತಿಳಿಸಲಾಗಿದೆ; ಅವುಗಳಲ್ಲಿ ನೀರಾವರಿಗೆ ಹೆಚ್ಚಿನ ಗಮನವನ್ನು ನೀಡಲಾಗಿದೆ. ಬುದ್ಧನ ಕಾಲದಲ್ಲಿಯ ನೀರಾವರಿ ರಚನೆಗಳು ಹಳೆಯ ವೇದಕಾಲೀನ ತಂತ್ರಗಳಿಗಿಂತ ಮಿಗಿಲಾಗಿರಲಿಲ್ಲ. ನೀರನ್ನು ಸನ್ನೆಗೋಲು (ತುಲವ್), ಪತ್ರ್ಯಗಳು (ಇಲ್ಲಿ ಪಾಠಾಂತರ 'ಕರಕಟಕ', 'ಕರಟುಪಾಂಕ' ಮತ್ತು 'ಕರಕಡಕ' ಇತ್ಯಾದಿಯಾಗಿ ವ್ಯತ್ಯಾಸವಾಗುತ್ತದೆ. ಬುದ್ಧಗೋಷನು ವುಚ್ಚಟಿ ಗೋಣಿ ವಯ್ಯೋಜೇತ್ವ ಹತ್ಥೇಹಿವ ಗಹೇತ್ವಧಿಷ ವರತ್ತದಿಹಿ ಅಕದ್ಧನಯಂತ.) ಎಂದು ವಿವರಿಸುತ್ತಾನೆ. ಮತ್ತು ಇರಚಂ (ಚಕ್ಕವತ್ತಕಂ ಎಂಬುದಕ್ಕೆ ಬುದ್ಧಘೋಷನು ಕೊಟ್ಟಿರುವ 'ಅರಹಟ್ಟ ಘಟಿಯಂತಂ' ಎಂಬ ವಿವರಣೆ ಸ್ಪಷ್ಟವಾಗಿಲ್ಲ.) ಗಳಿಂದ ಮೇಲೆಳೆಯಲಾಗುತ್ತಿತ್ತು (Cv. V. 16.2); ಅರ್ಥಶಾಸ್ತ್ರದಲ್ಲಿ ಪರಿಪಕ್ವ ಎಂಜಿನಿಯರಿಂಗ್ ಕೌಶಲ ವ್ಯಕ್ತವಾಗುತ್ತದೆ. ಅದರಲ್ಲಿ ಕೊಟ್ಟಿರುವ ನೀರಾವರಿ ಯೋಜನೆಗಳನ್ನು ಸರಿಯಾಗಿ ಬಳಸಬೇಕಾದರೆ ಬೇಸಾಯಗಾರನಿಗೆ ಬಹಳಷ್ಟು ಮುನ್ನೆಚ್ಚರಿಕೆ ಹಾಗೂ ಅನುಭವಗಳಿರಬೇಕಾಗುತ್ತದೆ

(II. 9). ಅಂದು ನೀರು ತುಂಬಿದ ಕೆರೆಯ ಕಟ್ಟೆಯೊಡೆದ ಅಪರಾಧಿಯನ್ನು (ಉದಕ ಧಾರಣಂ ಸೇತುಮ್ ಭಿಂದತಃ) ಅದೇ ಕೆರೆಯಲ್ಲಿ ಮುಳುಗಿಸಲಾಗುತ್ತಿತ್ತು (IV. II, ಮನು. IX. 279). ಅದರಲ್ಲಿ ಕೊಟ್ಟಿರುವ ಯಾಂತ್ರಿಕ ವಿಧಾನ ಮತ್ತು ಗಾಳಿಶಕ್ತಿಗಳಿಂದ ನಡೆಸುವ ನೀರಾವರಿ ಪದ್ಧತಿಗಳನ್ನು ಮುಂದಿನ ಪಲ್ಲವರ ಕಾಲದ ಶಾಸನ ಫಲಕ (ಎಪಿಗ್ರಾಫಿಯ ಇಂಡಿಕ V. 8) ಹಾಗೂ ಶುಕ್ರನೀತಿಸಾರ (II 320–24) ಗಳಲ್ಲಿ ಸಾದರಪಡಿಸಲಾಗಿದೆ. ಸಮರ್ಪಕ ನೀರಾವರಿ ಕೆಲಸಕಾರ್ಯಗಳಿಗೆ ಅಧಿಕ ವೆಚ್ಚ ತಗುಲುತ್ತಿದ್ದುದರಿಂದ ನಿಯಮಿತ ನೀರು ತೆರಿಗೆ (ಉದಕ ಭಾಗ) ವಿಧಿಸುವುದು ಅವಶ್ಯವಾಗಿ ಪರಿಣಮಿಸಿತು. ಶುಕ್ರನೀತಿಸಾರದಲ್ಲಿ ಕಂಡುಬರುವ ಆಧಾರವೂ ಇದಕ್ಕೆ ಅನುಗುಣವಾಗಿಯೇ ಇದೆ. (IV. ii. 227 29). ಆದರೆ ಅಂತಹ ಕೆಲಸಗಳನ್ನು ಪ್ರಜೆಗಳು ತಾವೇ ಸ್ವತಃ ಮಾಡಿಕೊಂಡಿದ್ದಾದರೆ ಅವರು ಅದರಿಂದ ತಾವು ಖರ್ಚು ಮಾಡಿದ ಹಣದ ಎರಡರಷ್ಟು ಲಾಭಗಳಿಸುವವರೆಗೂ ಅವರಿಂದ ತೆರಿಗೆಯನ್ನು ತೆಗೆದುಕೊಳ್ಳುತ್ತಿರಲಿಲ್ಲ (ಅರ್ಥಶಾಸ್ತ್ರ III. 9; ಶುಕ್ರನೀತಿಸಾರ IV. II. 242–44). ಈ ಪರವಾಗಿ ಅವಕಾಶವನ್ನು ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಸುಮಾರು 900 ವರ್ಷಗಳ ಅಂತರವಿರುವ ರಾಜ್ಯ ಅರ್ಥಶಾಸ್ತ್ರವನ್ನು ಕುರಿತ ಎರಡು ಪ್ರಕರಣ ಗ್ರಂಥಗಳಲ್ಲಿ ಕಾಣಬಹುದಾಗಿದೆ. ಇವು ಪ್ರಾಚೀನ ಭಾರತದಲ್ಲಿಯ ಸಂಪ್ರದಾಯ ಹಾಗೂ ಸಾಮಾಜಿಕ ಬೆಳವಣಿಗೆಯ ಮೇಲಿನ ಅದರ ಪ್ರಭಾವವನ್ನು ಕುರಿತ ಅದ್ಭುತ ದಾಖಲೆಗಳಾಗಿವೆ.

ಶಾಸನಾಧಾರಗಳು

ಅಶ್ಲಿಂದೀಚಿನ ಶಾಸನಾಧಾರಗಳಿಂದ, ದೊಡ್ಡ ದೊಡ್ಡ ರಾಜ್ಯೋದ್ಯಮಗಳ ವಿಪುಲ ಉದಾಹರಣೆಗಳು ದೊರೆಯುತ್ತವೆ. ಹಳೆಯ ಶಾಸನಗಳಲ್ಲಿ ದೂರಕ್ಕೆ ಅಲ್ಲೊಂದು ಇಲ್ಲೊಂದು ಆಧಾರಗಳು ಕಂಡುಬರುತ್ತವೆ. ಆದಾಗ್ಯೂ ರಾಜನ ಪ್ರೋತ್ಸಾಹದಿಂದ ಖಾಸಗಿಯವರು ಬಾವಿಗಳನ್ನು ತೋಡಿದ ಹಾಗೂ ಜಲಾಶಯಗಳನ್ನು ಕಟ್ಟಿದ ಉದಾಹರಣೆಗಳೇ ಇಲ್ಲವೆಂದಲ್ಲ; ಎರಡನೆಯ ಕಾನಿಷ್ಕನ ಕಾಲದ 'ಅರ' ಶಾಸನದಲ್ಲಿ ಸಕಲ ಜೀವಿಗಳ ಕಲ್ಯಾಣಕ್ಕಾಗಿ ದಾಸಪೋಟನಿಂದ ಅಗೆದ ಬಾವಿಯ ಉಲ್ಲೇಖ ಬಂದಿದೆ. ಇದಕ್ಕೆ ರಾಜನು ಧಾರ್ಮಿಕ ಕೊಡುಗೆಯಾಗಿ ಒಂದು ಲಕ್ಷರೂಪಾಯಿಗಳನ್ನು ಕೊಟ್ಟನಂತೆ. ಶ್ರೀ ಪುಲುಮಾಯಿಯ ರಾಜ್ಯಭಾರವನ್ನು ಕುರಿತ ಆಂಧ್ರಪ್ರದೇಶದ ಶಾಸನವೊಂದರಲ್ಲಿ (ಅದು ಎರಡನೆಯ ಪುಲುಮಾಯಿಯ ಕಾಲದ್ದೆಂದು ಸುಕ್ತನ್‌ಕರ್ ಗುರುತಿಸಿದ್ದಾರೆ) ಗಪ ಪತಿಕ್‌ನಿಂದ ಅಗೆದ ಬಾವಿಯ ವಿಚಾರ ಬರುತ್ತದೆ. (ಎಪಿಗ್ರಾಫಿಯ ಇಂಡಿಕ XIV. 7, 9)ನೀರಾವರಿ ಯೋಜನೆಗಳ ಮುಂದಾಳುಗಳಂತಿದ್ದ ಮೌರ್ಯರು ಅಶೋಕನ ರಾಜ್ಯಶಾಸನಗಳನ್ನು ಮಾತ್ರವೇ

ಅನುಸರಿಸಲಿಲ್ಲ. ಅವರು ದೇಶದ ನೀರಾವರಿಯ ಬಗ್ಗೆ ತೀವ್ರ ಆಸಕ್ತಿಯನ್ನು ವಹಿಸಿದ್ದರು. ಮೆಗಸ್ತನೀಸನು ನಗರದ ಆಡಳಿತ ಮತ್ತು ಸೇನಾವ್ಯವಸ್ಥೆಯನ್ನು ನೋಡಿಕೊಳ್ಳುವವರಲ್ಲದೆ ಪ್ರತ್ಯೇಕ ಅಧಿಕಾರಿಗಳನ್ನು ವಿವರಿಸಿದ್ದಾನೆ. ಇವರು ನದಿಗಳ ಮೇಲ್ವಿಚಾರಣೆ. ಈಜಿಪ್ಟಿನಲ್ಲಿ ನಡೆಸುವಂತೆ ಭೂಮಿ ಅಳತೆ ಮಾಡುವಿಕೆ. ಪ್ರಮುಖ ಕಾಲುವೆಗಳಿಂದ ಉಪಕಾಲುವೆಗಳಿಗೆ ನೀರು ಹರಿಯುತ್ತಿದ್ದ ಜಾರುಬಾಗಿಲವು ಅಥವಾ ತೂಬುಗಳ ಪರೀಕ್ಷೆಮಾಡಿ ಎಲ್ಲರೂ ಸಮಾನವಾಗಿ ನೀರು ಪೂರೈಕೆ ಹೊಂದುವ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು (Str. XV. i.50). ರುದ್ರದಾಮನ್‌ನ ಜುನಾಗಡ ಶಿಲಾಶಾಸನದಿಂದ ಚಂದ್ರಗುಪ್ತಮೌರ್ಯನ ರಾಜ್ಯಪಾಲ ತೋಡಿಸಿದ 'ಸುದರ್ಶನ' ಕೆರೆಯು ಹೇಗೆ ಅಶೋಕನ ರಾಜ್ಯಪಾಲನಿಂದ ಸಂರಕ್ಷಿತವಾಗಿದ್ದು ಕೊನೆಗೆ ಬಹು ದೊಡ್ಡ ಬಿರುಕು ಬಿದ್ದು (ಕ್ರಮೇಣ ಅನೇಕ ನಿಯಮ ಉಲ್ಲಂಘನೆಗಳಿಗೆ ಪಕ್ಕಾಗಿ) ಬತ್ತಿ ಹೋಯಿತೆಂಬುದು ವ್ಯಕ್ತವಾಗುತ್ತದೆ. ಹಾಗೆಯೇ ಅದರಿಂದ್ದ ಅಣೆಕಟ್ಟನ್ನು ಪುನರ್ ನಿರ್ಮಿಸದಿದ್ದುದರಿಂದ ಜನತೆ ಹತಾಶರಾಗಿ ಪ್ರಲಾಪಿಸುತ್ತಿದ್ದರೆಂದೂ (ಪುನಃ ಸೇತುಬಂಧ ನೈರಾಶ್ಯಾತ್ ಹಾಹಾಭೂತಾಸು ಪ್ರಜಾಸು)ಶಕ ರಾಜಕುಮಾರನು ಸಚಿವರ ಪ್ರತಿರೋಧವಿದ್ದಾಗ್ಯೂ ಭಂಡಾರದಿಂದ ಅಪಾರ ಹಣ ವೆಚ್ಚಮಾಡಿ ಕೆರೆಯನ್ನು ಪುನರ್ ಸ್ಥಾಪಿಸಿ ಸ್ವಾಭಾವಿಕ ಅಣೆಕಟ್ಟು ಕಟ್ಟಿಸಿ ಚೆನ್ನಾಗಿ ಯೋಜನೆ ಹಾಕಿ ನಾಲೆಗಳನ್ನೂ ಚರಂಡಿಗಳನ್ನೂ ತೋಡಿಸಿ ಕೊಳೆತ ವಸ್ತುಗಳು ಬಿದ್ದು ನಾರದಂತೆ, ಸುಸಜ್ಜಿತಗೊಳಿಸಿದನೆಂದೂ ತಿಳಿಯುತ್ತದೆ ಇಂಥದೇ ಉಲ್ಲಂಘನೆಗಳಿಗೆ ಎಪಿಗ್ರಾಫಿಯ ಇಂಡಿಕ VIII. 6 of. cf. ev. 17.2 ನೋಡಿ) ಈ ಅಣೆಕಟ್ಟಿನ ಉದ್ದಳತೆಗಳು (420 ಮೊಳ - 420 ಮೊಳ) ಆ ಜಲಾಶಯದ ವೈಶಾಲ್ಯತೆಯ ಬಗ್ಗೆ ಒಂದು ಕಲ್ಪನೆ ಮಾಡಿಕೊಡುತ್ತದೆ ಇಂಥವನ್ನು ಮೌರ್ಯರು ಹೊರ ಪ್ರಾಂತಗಳಲ್ಲಿಯೂ ಸಹ ಕಟ್ಟಿಸಿದ್ದರು. ಕಳಿಂಗದರಾಜ ಖಾರವೇಲನೂ ಸಹ ಇದೇ ರೀತಿ ಅಪಾರ ಹಣ ವೆಚ್ಚಮಾಡಿ ಚಿಲುಮೆಗಳು ಮತ್ತು ಸರೋವರಗಳ ಕೆರೆಗಳ ಅಣೆಕಟ್ಟು(ಒಡ್ಡು)ಗಳನ್ನು ಭದ್ರಪಡಿಸಿದನೆಂಬುದಾಗಿ ಪ್ರಖ್ಯಾತ 'ಹತಿಗುಂಫ' ಶಾಸನದಿಂದ ವ್ಯಕ್ತವಾಗುತ್ತದೆ. ಅದ್ಭುತ ನೀರಾವರಿ ಉದ್ಯಮ ಕಾರ್ಯಗಳಲ್ಲಿ ರುದ್ರದಾಮನ್‌ದು ಮಾತ್ರವೇ ಒಂದು ಏಕೈಕ ಉದಾಹರಣೆಯಲ್ಲ. ಕ್ರಿ.ಶ. ಮೂರನೆಯ ಶತಮಾನದ ಸಾಂಚಿಯ ಶಾಸನದಲ್ಲಿ ಸಹ ಶಕರ ಅಧಿಕಾರಿಯೊಬ್ಬ (ಮಹಾದಂಡನಾಯಕ) ಎಲ್ಲರಿಗೂ ವರ್ಷವಿಡೀ ನೀರು ಪೂರೈಕೆಯಾಗುವಂತಹ ಬಾವಿಯೊಂದನ್ನು ತೋಡಿಸಿದ ದಾಖಲೆ ಇದೆ (ಸಲಿಲಃ ಸರ್ವಾಧಿಗಂಯಃ ಸದಾ ; ಕಾರ್ಥೇವಾಡದ ಎರಡನೆಯ ಶತಮಾನದ ಶಾಸನವೊಂದರಲ್ಲಿ ಕ್ಷತ್ರಪ ರುದ್ರಸಿಂಹನ ಕಾಲದ ದಂಡನಾಯಕ (ಸೇನಾಪತಿ)ನು ರಾಸೋಪದ್ರ ಹಳ್ಳಿಯಲ್ಲಿ ಎಲ್ಲ ಜನತೆಯ ಕಲ್ಯಾಣ ಸುಖಸೌಕರ್ಯಕ್ಕಾಗಿ ಬಾವಿಯೊಂದನ್ನು ತೋಡಿಸುವಂತೆ ಮಾಡಿದನೆಂದು ತಿಳಿದುಬರುತ್ತೆ (ಸರ್ವಸತ್ವನಂ ಹಿತ ಸುಖಾರ್ಥಂ) (ಎಪಿಗ್ರಾಫಿಯ ಇಂಡಿಕ XVI. 16f.),

ನೀರಾವರಿ ಮತ್ತು ಪ್ರವಾಹಗಳು

ನೀರಾವರಿ ಯೋಜನೆಗಳಿಂದಾಗಿ ಬರಗಾಲದಲ್ಲಿ ಮಾತ್ರವಲ್ಲ ಪ್ರವಾಹ ಹಾಗೂ ಅಧಿಕ ಮಳೆಯಿಂದಲೂ ಸಹ ಜನತೆಗೆ ಉಂಟಾಗುತ್ತಿದ್ದ ತೊಂದರೆಯು ತಪ್ಪಿತು. ಪ್ರವಾಹ ವಿಚಾರವು ವೇದ ಸ್ಮೃತಿಗಳಲ್ಲಿ ಅರ್ಥಶಾಸ್ತ್ರದ ದೈವಪೀಡನಮದಲ್ಲಿ ಹಾಗೂ ಮಹಾಭಾರತದ ಇತಯಹ್‌ಗಳಲ್ಲಿ (V. 60. 17). ಬಂದಿದ್ದರೂ ಪುರಾಣಗಳಲ್ಲಿ ವಿವರಿಸಿದಂತೆ (ಇವು ಕೃಷಿಯಲ್ಲಿಯ ಆರು ಬಗೆಯ ವಿಪತ್ತುಗಳಾಗಿರುತ್ತವೆ ಅವು: ಬರ, ಪ್ರವಾಹ; ಮಿಡಿತೆ ಹಾವಳಿ, ಇಲಿಗಳು, ಪಕ್ಷಿಗಳು ಹಾಗೂ ಪರಾಕ್ರಮಣಗಳಾಗಿರುತ್ತವೆ)ಅದಂ ಕ್ಷೇಪಿಸುವ ಮುನ್ಸೂಚನೆಯಾಗಿರುತ್ತದೆ. ಆದಾಗ್ಯೂ ಎಲ್ಲ ಬಗೆಯ ಸಾಹಿತ್ಯದಲ್ಲೂ ಬರ ಪರಿಸ್ಥಿತಿಯೇ ಪ್ರವಾಹದ ಹಾವಳಿಗಿಂತ ಮಿಗಿಲಾಗಿರುತ್ತದೆ. ಆ ಕಾಲದಲ್ಲಿ ನದೀ ಪಾತ್ರವು ಪ್ರಾಯಶಃ ತನ್ನ ಪ್ರಾಕೃತಿಕ ದೆಸೆಯಲ್ಲಿ ಹರಿಯುತ್ತಿದ್ದುದರಿಂದ ಹಾಗೂ ಈಗಿನಂತೆ ಗೂಡಿನಿಂದ ತುಂಬಿ ಹೋಗದಿದ್ದುದರಿಂದ (ವಾಣಿಜ್ಯ ಮಾರುತಗಳೊಂದಿಗೆ) ವಾರ್ಷಿಕವಾಗಿ ಪ್ರವಾಹಗಳು ಉಂಟಾಗುತ್ತಿರಲಿಲ್ಲ. ಜಾತಕದಲ್ಲಿ ಮಳೆಗಾಲದಲ್ಲಿ ಕಾಳಂಗಳು ಕೊಚ್ಚಿ ಹೋಗುವವೆಂಬ ಒಂದೇ ಒಂದು ಘಟನೆಯ ಉಲ್ಲೇಖ ಬರುತ್ತದೆ. ಆದರೆ ಕಾಳಂಗಳು ಅದೇ ತಾನೆ ಮೊಳೆಯುತ್ತಿದ್ದುದರಿಂದಾಗಿ (ಸಿಸ್ಸಾನಂ ಗಭಗಹಂಕಾಲೋಜಟೋ) ಪೀಟ್ಟಗಳು ಪ್ರವಾಹದಿಂದ ಸಂಪೂರ್ಣವಾಗಿ ಹಾಳಾಗಲಿಲ್ಲ. ಇದರಿಂದಾಗಿ ಹಳ್ಳಿಗರು ಇನ್ನೆರಡು ತಿಂಗಳು ಕಳೆದಲ್ಲಿ ಒಳ್ಳೆಯ ಕೊಯ್ಲಾಗಬಹುದೆಂದು ನಿರೀಕ್ಷಿಸಿದ್ದರು ಎಂಬ ವಿವರ ಬಂದಿದೆ (II. 135). (Mv. III, 9.4; 28; M.I.P. 277) (ಮಿಲ್ ಪುಟ 277 ಇದರಲ್ಲಿ ಪ್ರವಾಹದ ಉಲ್ಲೇಖವಿದೆ).

ಮಹಾಸುಪಿನ ಜಾತಕ ಕೃತಿಯ ಪೀಠಿಕೆಯಲ್ಲಿ 'ಬೀಳುತ್ತಿದ್ದ ಮಳೆ ಬರುವ ಚಿಹ್ನೆಗಳು ಕಂಡಕೂಡಲೇ ಜನ ಬೇಗ ಕೈಗಳಲ್ಲಿ ಗುದ್ದಲಿ ಮಂಕರಿಗಳನ್ನು ಹೊತ್ತು ಒಡ್ಡುಗಳನ್ನು ಕಟ್ಟಲು ಹೋಗುತ್ತಿದ್ದರೆಂಬ ವಿವರಣೆ ಬಂದಿದೆ. (ಪುರಿಸೇಸು ಕುದ್ದಲ ಪಿತಕಹತ್ಥೇಸು ಅಲಿಂ ಬಂಧನ ತಾಯ ನಿಕ್ಖಂತೇಸು–1, 336). ಮಹಾಭಾರತದಲ್ಲಿ ಒಂದೆಡೆ ಬರುವ ನೀರೆಲ್ಲ ಸಂಪೂರ್ಣ ಹರಿದುಹೋದ ಮೇಲೆ ಒಡ್ಡನ್ನು ಹಾಕಿ ಮುಚ್ಚಿ ಬಿಡುವುದರ ನಿರರ್ಥಕತೆಯನ್ನು ಸ್ಮರಿಸುವ ಉಪಮಾನವೂ ಸಹ ಇದೇ ಅರ್ಥವನ್ನು ಕೊಡುತ್ತದೆ (ಗತೋದಕೇ ಸೇತುಬಂಧೊ–VIII. 86.2). ರಾಮಾಯಣದಲ್ಲಿಯೂ ಸಹ ನೀರು ಬಿಡುವ ಒಡ್ಡುಗಳ ವಿಚಾರಬರುತ್ತದೆ (ಪುರಾಣಲಿವ ನವೋದಕಂ–11. 62–10). ಮಿಲಿಂದದಲ್ಲಿ ಖೇಟ್ಟಾಗಳಿಗೆ ನೀರು ಒಳಹರಿಸಿಕೊಳ್ಳಲು ತೂಬು (ಮಟಿಕ) ಗಳು ಮತ್ತು ಹಾಗೆ ಪಡೆದ ನೀರನ್ನು ಒಳಗಿರಿಸಿಕೊಳ್ಳಲು ಒಡ್ಡು (ಮರಿಯಾದ) ಗಳನ್ನು ಒದಗಿಸಿದ್ದುದು ಕಂಡುಬರುತ್ತದೆ (ಪು. 416). ಮೇಲೆ ತಿಳಿಸಿದ ವಿನಯ ನೀರಾವರಿ ವಿಧಾನದಲ್ಲಿ ನೀರಿನ ಒಳಹರಿಯುವಿಕೆ ಹಾಗೂ ಹೊರಹರಿಯುವಿಕೆಗಳ ಮೇಲೆ ನಿಯಂತ್ರಣ ಕಂಡುಬರುತ್ತದೆ. ಜಮೀನುಗಳ ಸುತ್ತ ಕಟ್ಟಿದ ಒಡ್ಡುಗಳಿಗೆ

ಅಡ್ಡಲಾಗಿ ಕಟ್ಟಿದ ಚರುಂಡಿಗಾಲುವೆಗಳಲ್ಲಿ ಬರಗಾಲದಲ್ಲಿ ಕೊಳಗಳು, ಬಾವಿಗಳು ಹಾಗೂ ನದಿಗಳಿಂದ ನೀರು ತುಂಬಿಸಲಾಗುತ್ತಿತ್ತಲ್ಲದೆ ಅಧಿಕ ಮಳೆಯ ಕಾಲದಲ್ಲಿ ಹೆಚ್ಚಿನ ನೀರನ್ನು ಹೊರಚೆಲ್ಲಲು ಸಹ ಬಳಸುತ್ತಿದ್ದು ದೀರ್ಘಕಾಲಾನಂತರ ಉಂಟಾಗುತ್ತಿದ್ದ ಮಳೆಯ ಕಾಲದಲ್ಲಿ ಇಂದಿನಂತೆಯೇ ಒಡ್ಡುಗಳ ಮಧ್ಯದ ಭಾಗವನ್ನು ಮುಚ್ಚಿ ಬಿಸಿಲಿಗೆ ಬೆಂದ ಭೂಮಿಗಾಗಿ ನೀರನ್ನು ಸಂಗ್ರಹಿಸುತ್ತಿದ್ದಂತೆ ತೋರುತ್ತದೆ.

ಜಲಾಶಯಗಳು (ನೀರು ಶೇಖರಣಾಗಾರಗಳು)

ಕಶ್ಯಪ ಮಹರ್ಷಿಗಳು ತಮ್ಮ 'ಕೃಷಿ ಗ್ರಂಥದಲ್ಲಿ ರಾಜನಾದವನು ಹಳ್ಳಿಗಳು, ನಗರಗಳು, ಕೋಟೆಕೊತ್ತಳ ಇತ್ಯಾದಿಗಳನ್ನು ಪರಿಣತ ವಾಸ್ತುಶಿಲ್ಪಿಗಳು ಮತ್ತು ತಂತ್ರಜ್ಞರಿಂದ ಹೇಗೆ ಯೋಜಿಸಿ ಕಟ್ಟಿಸಬೇಕೆಂಬುದನ್ನು ಸೂಚಿಸಿದ್ದಾರಲ್ಲದೇ ಜಲಾಶಯಗಳನ್ನು ನಿರ್ಮಿಸುವಿಕೆ, ಅವುಗಳಿಗಾಗಿ ಸೂಕ್ತ ಪ್ರದೇಶದ ಆಯ್ಕೆ ಮಾಡುವುದು ಹಾಗೂ ಅವುಗಳಿಂದ ಉಂಟಾಗುವ ಅನುಕೂಲತೆಗಳೇನು ಎಂಬುದನ್ನು ಸವಿವರವಾಗಿ ಬರೆದಿದ್ದಾರೆ. ಜಲಾಶಯಗಳನ್ನು ಕುರಿತ ಕಶ್ಯಪರ ತಿಳುವಳಿಕೆಯನ್ನು ಓದುಗರು ಅರಿಯಲೆಂದು ಅದರಲ್ಲಿಯ ಕೆಲವು ಮುಖ್ಯ ಭಾಗಗಳ ಅನುವಾದವನ್ನು ಕೆಳಗೆ ಕೊಡಲಾಗಿದೆ.

ರಾಜನು ನೀರಾವರಿ ಮಾಡಬೇಕಾದ ಭೂಮಿಯ ಪರಿಸ್ಥಿತಿಗನುಗುಣವಾಗಿ ಹಳ್ಳಿಗಳ ಮತ್ತು ನಗರಗಳ ಪಶ್ಚಿಮ, ಉತ್ತರ, ಪೂರ್ವ ಅಥವಾ ದಕ್ಷಿಣ ದಿಕ್ಕುಗಳಲ್ಲಿ ಅತ್ಯಂತ ಯುಕ್ತಸ್ಥಾನದಲ್ಲಿ ಜಲಾಶಯಗಳನ್ನು ಕಟ್ಟಿಸಬೇಕು. ಜಲಾಶಯವು ಆಳವಾಗಿ ಕುಂಡಕದಂತೆ ನೆಲಗಾಣದಂತಿದ್ದು ಅರೆ ವೃತ್ತಾಕಾರ, ದೀರ್ಘವೃತ್ತ ಇಲ್ಲವೇ ವೃತ್ತಾಕಾರದಲ್ಲಿರಬೇಕು. ಅದು ಎತ್ತರವಾದ ಒಡ್ಡುಗಳನ್ನು (ಕಟ್ಟೆಗಳನ್ನು) ಹೊಂದಿರಬೇಕು; ಅಲ್ಲದೇ ಬಲವಾದ ಆಧಾರವನ್ನೂ ಪಡೆದಿರಬೇಕು. ಅನುಕೂಲವಾಗುವಂತೆ ಒಡ್ಡು ಮಾರ್ಗಗಳು, ಕಾಲುವೆಗಳು ಮತ್ತು ತೂಬುಗಳು ಇರಬೇಕು; ಆದಕಾರಣ ಜಲಾಶಯಗಳನ್ನು ದೊಡ್ಡ ಸರೋವರದೊಂದಿಗೆ ಬೆಟ್ಟದ ಸಮೀಪದಲ್ಲಿ ಇಲ್ಲವೇ ಪ್ರಸ್ಥಭೂಮಿಯಲ್ಲಿ ನಿರ್ಮಿಸಬೇಕು. ಮರಳು ಮತ್ತು ಕಲ್ಲು ಹರಳುಗಳಿಲ್ಲದ ಉರುಟು ಕಲ್ಲುಗಳಿಲ್ಲದ ದೃಢವಾದ ಭೂಮಿ ಇಲ್ಲವೇ ವಾರ್ಷಿಕ ಚಿಲುಮೆಗೆ ಸಮೀಪವಿರುವ ಸ್ಥಳದಲ್ಲಿ ಬಹಳಷ್ಟು ನೀರು ಹಿಡಿಸುವ ಜಲಾಶಯವನ್ನು ನಿರ್ಮಿಸಬೇಕು. ಇಂಥ ಜಲಾಶಯವು ಆಳವಾಗಿದ್ದು ಪ್ರವಾಹ–ಬಾಗಿಲುಗಳನ್ನು ಹೊಂದಿರಬೇಕು. ರಾಜನು ಜಲಾಶಯವು ತುಂಬಿ ತುಳುಕುತ್ತಿರುವಾಗ ಎಚ್ಚರವಹಿಸಬೇಕಲ್ಲದೆ; ಅದು ಹಳ್ಳಿ, ನಗರ, ಅಳುವೇರಿ (ಕಾಪು), ಕಟ್ಟು ತೋಟಗಳು, ಕೋಟೆಕೊತ್ತಲಗಳು ಹಾಗೂ ಬೀಡು ಭೂಮಿಯಲ್ಲಿ ಉಕ್ಕಿಹರಿದು ಇಲ್ಲವೇ ಕಟ್ಟೆಯೊಡೆದು ಎಲ್ಲೆಮೀರಿ ಅಪಾಯಕಾರಿಯಾಗದಂತೆ ನೋಡಿಕೊಳ್ಳಬೇಕು. ಆತ ಅದನ್ನು ಆಗಾಗ್ಗೆ ಎಂದರೆ ಪ್ರತಿ ತಿಂಗಳು ಇಲ್ಲವೇ

ವರ್ಷಕ್ಕೊಮ್ಮೆ ಪರೀಕ್ಷೆ ಮಾಡಿಸುತ್ತಿರಬೇಕು. ಅಣೆಕಟ್ಟುಗಳ ಸುರಕ್ಷತೆಗಾಗಿ ಕಾವಲುಗಾರರನ್ನಿಟ್ಟಿರಬೇಕು. ವಿಶೇಷವಾಗಿ ಮಳೆಗಾಲದಲ್ಲಿ ಜಲಾಶಯವು ತುಂಬಿ ಹೆಚ್ಚಿನ ನೀರು ಹರಿಯುವುದಕ್ಕಾಗಿ ಅನೇಕ ಕಾಲುವೆಗಳನ್ನು ತೋಡಿಸಿರಬೇಕು. ಪ್ರಜೆಗಳ ಕಲ್ಯಾಣದೃಷ್ಟಿಯಿಂದ ಕೆರೆಕೊಳಗಳ ಸಂರಕ್ಷಣೆಯನ್ನು ಪರಿಗಣಿಸಬೇಕು. ಜಲಾಶಯದ ತುಂಬ ನೀರು ಸಂಗ್ರಹಿಸಿ ಸುರಕ್ಷಿತವಾಗಿರುವದೇಶದಲ್ಲಿ ಕೊಯ್ಲು ಸಮೃದ್ಧವಾಗಿರುತ್ತದೆ. ಅಂಥಲ್ಲಿ ರೋಗರುಜಿನಗಳ, ಬೆಂಕಿ ಇತ್ಯಾದಿಗಳ ಭೀತಿಯಿಲ್ಲದಿರುವುದರಿಂದ ಪ್ರಜೆಗಳೆಲ್ಲ ಒಟ್ಟಿನಲ್ಲಿ ಸಂತಸದಿಂದಿರುತ್ತಾರೆ (ಶ್ಲೋ. 69–80).

ದ್ವಿಪಾದಿಗಳು, ಚತುಷ್ಪಾದಿಗಳು, ಪಕ್ಷಿಗಳು ಮತ್ತು ಸರೀಸೃಪ(ಹಾವುಗಳಂತಹವು)ಗಳ ಪೋಷಣೆ ಮತ್ತು ರಕ್ಷಣೆ ಸದಾ ಶ್ಲಾಘ್ಯ. ಇದರಿಂದ ಸಾಮಾನ್ಯವಾಗಿ ಸಂತೋಷವುಂಟಾಗುವುದಲ್ಲದೆ ಸಾಂಕ್ರಾಮಿಕ ರೋಗವನ್ನು ತಡೆಗಟ್ಟಿದಂತಾಗುತ್ತದೆ.

ಎಲ್ಲ ಜೀವಿಗಳನ್ನೂ ಸೃಷ್ಟಿಸಿದ ಬ್ರಹ್ಮನು ನೀರನ್ನು ಮಾತ್ರ ದ್ವಿಪಾದಿಗಳು ಮತ್ತು ಚತುಷ್ಪಾದಿಗಳ ಸಾಮಾನ್ಯ ಪೇಯವನ್ನಾಗಿ ಮಾಡಿದನು. ಆದಕಾರಣ, ಜಲಾಶಯಕ್ಕೆ ಪ್ರಮುಖ ಜಲಪೂರೈಕೆ ಮೂಲವೆಂದು ಹೆಸರು. ಆದುದರಿಂದ ತನ್ನ ಪ್ರಜೆಗಳ ರಕ್ಷಣಾಭಾರವನ್ನು ಹೊತ್ತ ರಾಜನು ಜಲಾಶಯವನ್ನು ಸದಾ ಜೋಪಾನ ಮಾಡಿ, ಸಂರಕ್ಷಿಸಿಕೊಂಡು ಬರುವಲ್ಲಿ ತನ್ನ ಎಲ್ಲ ಪ್ರಯತ್ನಗಳನ್ನೂ ನಡೆಸಬೇಕು. ಭೂಮಿಯ ಫಲವತ್ತತೆ ಮಟ್ಟ ಹಾಗೂ ಆಯಾ ಹಳ್ಳಿಗಳ ಅವಶ್ಯಕತೆಗಳಿಗೆ ಅನುಗುಣವಾಗಿ ಅತ ಒಂದು ಇಲ್ಲವೇ ಎರಡು ಜಲಾಶಯಗಳನ್ನು ಕಟ್ಟಿಸಬೇಕು (ಶ್ಲೋ. 81–84.)

ಜಲಾಶಯಕ್ಕೆ ಪರ್ವತದ ತೊರೆ, ದೊಡ್ಡ ಕೆರೆ, ಕಾಡಿನ ಸಣ್ಣಹೊಳೆ ಇಲ್ಲವೇ ಒಂದು ದೊಡ್ಡ ನದಿಯಿಂದ ನೀರನ್ನು ತುಂಬಿಸಬಹುದು : ನೀರು ಹಂಚಿಕೆಗಾಗಿ ಅದಕ್ಕೆ ಸೂಕ್ತ ರಚನೆಯೊಂದನ್ನು ಏರ್ಪಡಿಸಬೇಕು. ಜಲಾಶಯದ ದಡಗಳ ಮೇಲೆ ರತನ್ (ಕ್ಯಾಲಮಸ್ ರೋಟಂಗ್), ಆಲ (ಫೈಕಸ್ ಇಂಡಿಕ), ಕೊಟಕಂಡದ ಒಂದು ಸಾಲು (ಒಂದು ಬಗೆಯ ಕಂದೀಯ ಸಸ್ಯ ಕ್ರಿಮಿರೇಚಕ). ಪ್ಲಾಕ್ಷ್ (ಫೈಕಸ್ ಇನ್ಫೆಕ್ಟೋರಿಯಾ), ಅಶ್ವತ್ಥ (ಫೈಕಸ್ ರಿಲಿಜಿಯೋಸ), ಖದಿರ ಮತ್ತು ಖದಿರ (ಅಕೇಸಿಯ ಕಟೆಚು), ತಿಂದುಕ (ಡೈಯೋಸ್ಪೈರಸ್ ಎಮ್ಬ್ರಿಯಾಪ್ಟೆರಿಸ್), ತಿಂತ್ರಿಣಿ ?, ಭೂರ್ಜರ, (ಬಿರ್ಚ್, ಬಿತುಲ ಭೋಜಪತ್ರ?), ಬಿದಿರು, ಬೇವು (ನಿಂಬ), (ಅಜದಿ-ರಾಚ್ಟ ಇಂಡಿಕ) ಮತ್ತು ಕದಂಬ (ನಾಕ್ಲಿಯ ಕದಂಬ) ಇತ್ಯಾದಿ ಗಡಸು ದಿಂಡುಳ್ಳ ಮರಗಳನ್ನು ನೆಡುವುದನ್ನು ಹೆಚ್ಚಿಸಬೇಕು.

ಸರ್ವಜನ ಕಲ್ಯಾಣಾರ್ಥವಾಗಿ ರಾಜನು ಈ ವೃಕ್ಷಗಳನ್ನು ಸರಿಯಾದ ಋತು (ಹಂಗಾಮು)ವಿನಲ್ಲಿ ತಂದು (ನರ್ಸರಿಗಳಿಂದ?) ಜಲಾಶಯದ ದಡಗಳ ಉದ್ದಕ್ಕೂ ಇಲ್ಲವೇ ಅದರ ಇಳುಕಲು ಮೇಲೇ ಇಲ್ಲವೆ ತೂಬಿನ ಹೊರದ್ವಾರದ ಬಳಿ ಅವು ಸ್ನಾನ ಘಟ್ಟಗಳಿಗೆ ಅಡಚಣೆಯನ್ನುಂಟುಮಾಡದ ರೀತಿಯಲ್ಲಿ ನೀರು ತೊಟ್ಟಿಗೆ ನೆರಳೊದಗಿಸಿ ಕೊಡುವಂತೆ ಸರಿಯಾಗಿ ನೆಡಿಸಬೇಕು. ಅತಿ ಬರಡು ಭೂಮಿಗಳಲ್ಲಿ ಆಲದ ಮರದಂತಹ ಉಪಯುಕ್ತ ಮರಗಳು ಸರಿಯಾಗಿ ಬೆಳೆಯುವುದಕ್ಕೂ ಸಹ ಪ್ರೋತ್ಸಾಹಿಸಬೇಕು. ಹಾಗೆಯೇ ಕೆರೆ, ಕೊಳಗಳು, ಬಾವಿಗಳು, ಹೂ ಹಣ್ಣುಗಳ ತೋಟಗಳು, ವಿಶ್ರಾಂತಿಧಾಮಗಳು ಹಾಗೂ ಜಲಾಶಯದ ಸಮೀಪದಲ್ಲಿರುವ ಹೆದ್ದಾರಿ (ರಾಜಮಾರ್ಗ)ಗಳಲ್ಲಿ ದಟ್ಟ ನೆರಳು ಕೊಡುವ ಮರಗಳು : ಮತ್ತು ವಟ-ಪೋಟ=(ವಟಪೋತ? (ಬ್ರಹ್ಮವೃಕ್ಷ) ಬ್ಯುಟಿಯ ಫ್ರಾಂಡೋಸ) ಹಾಗೂ ಪ್ರಸವಕ (ಬುಕೆನಿಯ ಲ್ಯಾಟಿಫೋಲಿಯ) ಗಳಂತಹ ಮಂಗಳಕರ ಆಯಾಸ ಪರಿಹಾರಕ ವೃಕ್ಷಗಳನ್ನು ವನವಿಹಾರ ಸ್ಥಳ ಮತ್ತಿತರ ಅಂತಹ ಸ್ಥಳಗಳಲ್ಲಿ ಬೆಳೆಸುವುದನ್ನು ಹೆಚ್ಚಿಸಬೇಕು (ಶ್ಲೋ. 85-94).

ರಾಜನು ಮೇಲೆ ಹೇಳಿದ ನೆರಳು ಕೊಡುವಂತಹ ಮರಗಳನ್ನು ದೇವಾಲಯ ಹಾಗೂ ಅರಮನೆಗಳಿಗೆ ಸೇರಿದಂತಿರುವ ತೋಟಗಳಲ್ಲಿ ಮತ್ತು ವಿಶೇಷವಾಗಿ ಸನ್ಯಾಸಾಶ್ರಮಗಳಲ್ಲಿ, ಸೇನಾಶಿಬಿರಗಳಲ್ಲಿ, ರಾಜ್ಯದ ವಿಶ್ರಾಂತಿ ಗೃಹಗಳಲ್ಲಿ, ಯಜ್ಞಭೂಮಿ ಹಾಗೂ ಬಲಿಸ್ಥಾನಗಳಲ್ಲಿ ಬೆಳೆಸುವುದನ್ನು ಸದಾ ಹೆಚ್ಚಿಸಬೇಕು. ಯುಕ್ತ ಸ್ಥಳಗಳಲ್ಲಿ ಬೇಲಿ ಅಥವಾ ಆವರಣಗಳಲ್ಲಿ (ಬೇಲಿಯಂತೆ ರಕ್ಷಣೆ ಕೊಡುವ) ಫಲಪುಷ್ಪದಾಯಕವಾದ, ತಂಪಾದ ಹಾಗೂ ಮನೋಹರವಾದ ಹಾಗೆಯೇ ಪಕ್ಷಿಗಳಿಗೆ ಪ್ರಿಯವಾದ ರೋಗರುಜಿನ ನಿವಾರಕ, ಮುಳ್ಳುಗಳಿಲ್ಲದ (ಕಂಟಕರಹಿತ) ರೊಟ್ಟಿ-ಹಣ್ಣು, ಮಾವು (ಆಮ್ರ ಮತ್ತು ರಸಾಲ), ಪುನ್ನಾಗ (ರೊಟ್ಟಲೇರಿಯ ಟಿಂಕ್ಟೋರಿಯ? ಅಡಕೆ ಮರ?), ಮಾಲತಿ (ಜಾಸ್ಮಿನಂ ಗ್ರಾಂಡಿಫ್ಲೋರಮ್)ಕುಂದ(ಜಾಸ್ಮಿನಂಮಲ್ಟಿಫ್ಲೋರಮ್), ಚಂಪಕ (ಮೈಕೇಲಿಯ? ಚಂಪಕ) ಇತ್ಯಾದಿ ವೃಕ್ಷಗಳನ್ನು ಬೆಳೆಸಿ ಜಲಾಶಯಗಳ ಸೀರೆರದು ಬೆಳೆಸಬೇಕು (ಶ್ಲೋ. 95–99).

ಜಲಾಶಯಗಳಿಲ್ಲದಿದ್ದಲ್ಲಿ ನಿಜವಾಗಿಯೂ ಅನಾನುಕೂಲತೆಯುಂಟಾಗುತ್ತದೆ. ಏಕೆಂದರೆ, ಜಲಾಶಯಗಳಿಲ್ಲದಿದ್ದಲ್ಲಿ ಸ್ನಾನಾಹ್ನಿಕಗಳಿಗೂ, ಸಂಧ್ಯಾವಂದನೆಗೂ ಗಿಡ ಮರಗಳಿಗೆ ನೀರು ಹಾಯಿಸಲೂ ಆಗುವುದಿಲ್ಲವೆಂದು ಋಷಿಗಳು ಸಾರಿದ್ದಾರೆ. ಆದ ಕಾರಣ, ರಾಜನು ಸಾರ್ವಜನಿಕ ಕಲ್ಯಾಣಾಭಿವೃದ್ಧಿ ಕಾರ್ಯದಲ್ಲಿ ಶ್ರದ್ಧೆಯುಳ್ಳವನಾಗಿ ಸದಾ ಎಚ್ಚರಿಕೆಯಿಂದ ಎಲ್ಲ ಹಳ್ಳಿಗಳು, ತೋಟಗಳು ಇಲ್ಲವೇ ವನಪ್ರದೇಶಗಳಲ್ಲಿ ಒಳ್ಳೆಯ ಭದ್ರವಾದ, ದೊಡ್ಡ ದೊಡ್ಡ ಅಡಿಗಾಲುವೆಗಳು, ನೀರು ಹಂಚಿಕೆಗೆ ಸಣ್ಣ ಸಣ್ಣ ಉಪಕಾಲುವೆಗಳನ್ನು ಹೊಂದಿರುವ ಜಲಾಶಯಗಳನ್ನು ನಿರ್ಮಿಸಬೇಕು (ಶ್ಲೋ. 100–103).

ಕಾಲುವೆಗಳು ಮತ್ತು ಬಾವಿಗಳು

ನಿಯತವಾಗಿ ಧಾರಾಳ ನೀರುಪೂರೈಕೆಯುಳ್ಳ ಕಾಲುವೆ ಇಲ್ಲವೇ ಜಲಾಶಯ ವಿಲ್ಲದ ಅಥವಾ ಅಂಥದೊಂದನ್ನು ಕಟ್ಟಬೇಕೆಂದು ಯೋಚಿಸದಿರುವ ಬೇಸಾಯ ಭೂಮಿಯಲ್ಲಿ ಸ್ವಾಮೀ ತೊರೆಯ ಆಶ್ರಯದಿಂದ ಜಮೀನಿನವರೆಗೆ ಕಾಲುವೆಯೊಂದನ್ನು ತೋಡುವುದು ಅವಶ್ಯಕ. ಬೇಸಾಯತಜ್ಞರ ಅಭಿಪ್ರಾಯದಂತೆ ಇಂತಹ ಕಾಲುವೆಗಳಲ್ಲಿ ನಾಲ್ಕು ಬಗೆಗಳಿರುತ್ತವೆ. ಅವು: ನದಿಯಿಂದ ನೀರು ಪೂರೈಕೆಗೊಳ್ಳುವ ಕಾಲುವೆ; ಸರೋವರದಿಂದ ನೀರು ಪಡೆಯುವ ಕಾಲುವೆ, ಜಲಾಶಯದಿಂದ ನೀರು ಪಡೆಯುವ ಕಾಲುವೆ ಹಾಗೂ ಬೆಟ್ಟದ ಇಳಿಜಾರಿನಿಂದ ಎಂದರೆ ಪರ್ವತ ಝರಿಯಿಂದ ನೀರು ಪಡೆಯುವ ಕಾಲುವೆಗಳಾಗಿವೆ: ದೇಶದ ಅವಶ್ಯಕತೆಗಳಿಗನುಗುಣವಾಗಿ ಈ ನಾಲ್ಕು ಬಗೆಯ ಕಾಲುವೆಗಳನ್ನು ತೋಡಬೇಕಾಗುತ್ತದೆ (ಶ್ಲೋ. 104–106).

ಪ್ರಾಕೃತಿಕ ಭೂಮಟ್ಟದಿಂದ ಸ್ವಲ್ಪ ಎತ್ತರದಲ್ಲಿ ನದಿ ಮುಂತಾದ ಜಲಮೂಲಗಳಿದ್ದಲ್ಲಿ, ಅಂತಹ ಎಡೆಗಳಲ್ಲಿ ನದಿಮುಖಜ ಭೂಮಿಯನ್ನು ವಿಸ್ತರಿಸುವುದರಿಂದ ನೀರು ತಾನೇತಾನಾಗಿ ಹರಿಯುವಂತಾಗುತ್ತದೆ. ಕೃಷಿ ತಜ್ಞರು ಒಂದು ನಿಯಮವೋ ಎಂಬಂತೆ ಕಾಲುವೆಗಳಿಗೆ ನೀರು ಪೂರೈಸುವ ಮೂಲವು, ಅದು ನೀರಾವರಿ ಮಾಡಲಿರುವ ಜಮೀನಿಗೆ ಸಮಾನದಲ್ಲಿರುವ ಅಥವಾ ದೂರದಲ್ಲಿ ಇರಲಿ ಆ ಜಮೀನಿನ ಮಟ್ಟಕ್ಕಿಂತ ಸ್ವಲ್ಪ ಮೇಲಿರುವಂತೆ ಮಾಡಬೇಕು. ಪೂರ್ವದಿಕ್ಕಿನತ್ತ ಹರಿಯುತ್ತಿರುವ ನದಿಯಿಂದ ಕಾಲುವೆಯನ್ನು ತೋಡಿದಾಗ ಅದು ಪಶ್ಚಿಮದೆಡೆ ಇಲ್ಲವೇ ಇನ್ನೊಂದು ದಿಶೆಯತ್ತ ಅಥವಾ ಮಧ್ಯಮ ದಿಕ್ಕಿನತ್ತ ಹರಿಯುವ ನದಿಯೊಂದರಲ್ಲಿ ಬೀಳುವಂತೆ ಮಾಡಬೇಕು. ಆದರೆ ಈ ಎಲ್ಲಾ ಸಂದರ್ಭಗಳಲ್ಲಿಯೂ ಅದು ಉನ್ನತ ಮಟ್ಟ(ಎತ್ತರ)ದಲ್ಲಿರಬೇಕಾದುದು ಅಪೇಕ್ಷಣೀಯ. ನದಿಯಿಂದ ನದೀಜಲಪೋಷಿತ ಕಾಲುವೆ ತೋಡುವುದಕ್ಕೆ ಅಸ್ತಿಭಾರ ಹಾಕಿ ರಚನೆಗೆ ತೊಡಗಿದ ಮೇಲೆ ರಾಜನು ಆ ಕಾಲುವೆಯು ಹಳ್ಳಿಯಿಂದ ಹಳ್ಳಿಗೆ, ಒಂದು ವನದಿಂದ ಮತ್ತೊಂದು ವನಕ್ಕೆ, ವಿವಿಧ ಬಗೆಯ ಸಾಗುವಳಿ ಜಮೀನುಗಳ ಮೂಲಕ ಹಾಯುವಂತೆ ಮಾಡಬೇಕು; ಹಾಗೆಯೇ ತನ್ನ ಪ್ರಜೆಗಳ ಅನುಕೂಲಕ್ಕಾಗಿ ಕೊನೆಯಲ್ಲಿ ಆ ಕಾಲುವೆಯು ತನ್ನ ಅಧೀನ ಪ್ರಾಂತದಲ್ಲೂ ಹರಿಯುವಂತೆ ಮಾಡಬೇಕು (ಶ್ಲೋ. 107–12).

ಕಾಲುವೆಯ ಅಗಲವು ನಾಲ್ಕು, ಐದು, ಆರು, ಏಳು, ಇಲ್ಲವೇ ಹತ್ತು ಹಸ್ತಗಳಷ್ಟು ಇರುವುದೆಂದು ಹೇಳಲಾಗಿದೆ (1 ಹಸ್ತ = 1½ ಅಡಿ) (ಶ್ಲೋ. 113).

ಕೆಲವೆಡೆ ದೊಡ್ಡ ಕೆರೆಯಿಂದ ನೀರು ಪೂರೈಕೆಗೊಂಡ ಕಾಲುವೆಯು ನೀರಿನಿಂದ ತುಂಬಿರುತ್ತದೆ, ಹಾಗೆಯೇ ದೊಡ್ಡ ನದಿಯಿಂದ ನೀರು ಪೂರೈಕೆಗೊಂಡ ಕಾಲುವೆಯೂ ಸಹ ಜಲಭರಿತವಾಗಿರುತ್ತದೆ. ಒಂದು ಕಾಲುವೆಯ ತಂತ್ರನದಿಯೆಂದರೆ ಆಯಾ

ರೈತರ ಜಮೀನಿನವರೆಗಿನದಾಗಿದ್ದು ಕಾಲುವೆಯ ಎತ್ತರವು ಅದರ ಪಾತ್ರಕ್ಕೆ ಅನುಗುಣವಾಗಿರಬೇಕಲ್ಲದೆ ಕಾಲುವೆಯ ಆಳವೂ ಸಹ ಅದರಲ್ಲಿ ಹರಿಯುವ ನೀರಿನ ಘನ ಪ್ರಮಾಣಕ್ಕೆ ಅನುಗುಣವಾಗಿರುವಂತೆ ಎಲ್ಲೆಡೆಯಲ್ಲೂ ಹೊಂದಿಸಿರಬೇಕು. ರಾಜನು ಎಲ್ಲ ಜೀವಿಗಳ ಅನುಕೂಲಕ್ಕಾಗಿ. ಅಂತಹ ಕಾಲುವೆಯನ್ನು ಒಂದು ವೇಳೆ ಅದು ತನ್ನ ಪಥದಲ್ಲಿ ದೊಡ್ಡ ಕೋಟೆಯೊಂದನ್ನು ಅಡ್ಡ ಹಾಯಬೇಕಾಗಿ ಬಂದರೂ ಸಹ ಲೆಕ್ಕಿಸದೆ ಕಟ್ಟಿಸಬೇಕು (ಶ್ಲೋ. 144 116).

ಸಮೃದ್ಧ ಕೊಯ್ಲಿಗಾಗಿ ಕೆಲವೆಡೆಗಳಲ್ಲಿ ಪರ್ವತದ ಚಿಲುಮೆಯೊಂದರಿಂದ ಜಮೀನಿನವರೆಗೂ ಕಾಲುವೆಯನ್ನು ತೋಡಬೇಕಾಗುತ್ತದೆ. ಜಮೀನುಗಳ ಉಪಯೋಗಕ್ಕಾಗಿ ನೀರು ತುಂಬಿದ ಒಂದು, ಎರಡು, ಇಲ್ಲವೇ ಮೂರು ಕಾಲುವೆಗಳನ್ನು ತೋಡುವುದು ಅವಶ್ಯವಾಗಬಹುದು. ನದಿಗಳೇ ಇಲ್ಲದ ಕೆಲವು ಸ್ಥಳಗಳಲ್ಲಿ ಮರಳು ಮಣ್ಣಿನಲ್ಲಿ ತೋಡಿದ ಕಾಲುವೆಯೂ ಸಹ ಉಪಯುಕ್ತವಾಗಿರುತ್ತದೆಂದು ಕೃಷಿ ಪರಿಣತರು ಹೇಳಿದ್ದಾರೆ. ಕಲ್ಲುಗಳಿಲ್ಲದೆ ನಿರಂತರ ನೀರು ಪೂರೈಕೆಯುಳ್ಳ, ಒಳ್ಳೆಯ ಗುಣ ಧರ್ಮಗಳುಳ್ಳ ಜಮೀನಿನಲ್ಲಿ ಸಮೃದ್ಧ ಕೊಯ್ಲಾಗುವುದು ಖಚಿತ. ಕೆಲವು ಸ್ಥಳಗಳಲ್ಲಿ ತನ್ನ ಹಳ್ಳಿಯ ಬಳಕೆಗಾಗಿ ಇಲ್ಲವೇ ತೋಟಗಳು ಅಥವಾ ದೇಶದ ವಿಹಾರ ತೋಪುಗಳಿಗಾಗಿ ಕೆರೆಗಳಿಂದಲೂ ಕಾಲುವೆಗಳನ್ನು ತೋಡಬೇಕಾಗುತ್ತದೆ. (ಶ್ಲೋ. 117–121).

ಸ್ನಾನಕ್ಕೆ, ಕುಡಿಯುವ ನೀರಿಗೆ ಹಾಗೂ ವ್ಯವಸಾಯ ಭೂಮಿಯ ನೀರಾವರಿಗೆ ನೀರಿನಿಂದ ತುಂಬಿ ಹರಿಯುವ ಕಾಲುವೆಗಳ ರಚನೆ ಜೀವಿರಕ್ಷಣೆಗಾಗಿಯೆ ಗಣಿಸಲಾದುದೆಂದು ಭವಿಷ್ಯತ್ ಜ್ಞಾನಿಗಳಾದ ಋಷಿವರ್ಯರು ಸಾರಿದ್ದಾರೆ.

ಕೆಲವೆಡೆಗಳಲ್ಲಿ ಮಣ್ಣಿನ ಪಾರಂಪರಿಕ ದೋಷಗಳಿಂದಾಗಿ ಕಾಲುವೆಯಲ್ಲಿಯ ನೀರು ಇಂಗಿ ಹೋಗುತ್ತದೆ ಇಲ್ಲವೇ ಒಣಗಿ ಹೋಗುತ್ತದೆ. ಕಾಲುವೆ ಎಂಜಿನಿಯರುಗಳು ಅಂತಹ ಸ್ಥಳಗಳನ್ನು ವರ್ಜಿಸಬೇಕು. ಮತ್ತೆ ಕೆಲವೆಡೆ ಇಡೀ ಭೂಪ್ರದೇಶವೆಲ್ಲ ಪೆಟ್ಲುಪ್ಪಿನಿಂದ ತುಂಬಿರುತ್ತದೆ. ಅಂತಹ ಮತ್ತು ಇತರ ದೋಷಪೂರಿತ ಮಣ್ಣುಳ್ಳ ಪ್ರದೇಶಗಳನ್ನು ಕಾಲುವೆ ತೋಡುವಾಗ ವರ್ಜಿಸಬೇಕು. ಕೃಷಿ ಏಳಿಗೆಗಾಗಿ ರಾಜನು ಕಾಲುವೆಗಳನ್ನು ತೋಡಿಸಲೇಬೇಕು. ಇದಕ್ಕಾಗಿ ಕೆಲವೆಡೆಗಳಲ್ಲಿ ಎರಡು ಇಲ್ಲವೇ ಮೂರು ಕಾಲುವೆಗಳನ್ನು ತೋಡುವುದು ಅವಶ್ಯವಾಗಬಹುದು: ಆಯಾ ಸ್ಥಳೀಯ ಪರಿಸ್ಥಿತಿಯ ಅವಶ್ಯಕತೆಗಳಿಗೆ ತಕ್ಕಂತೆ ಕಾಲುವೆಗಳ ಸಂಖ್ಯೆಯನ್ನು ನಿರ್ಧರಿಸಬೇಕು (ಶ್ಲೋ. 123–126).

ಈ ಶಾಸ್ತ್ರವನ್ನರಿತ ಋಷಿವರ್ಯರು ಎಲ್ಲ ಕಾಲುವೆಗಳೂ ಕ್ರಮೇಣ ಕೆರೆ ಇಲ್ಲವೇ ಕೊಳದೊಳಗೆ ಲೀನವಾಗಬೇಕೆಂದು ತಿಳಿಸುತ್ತಾರೆ. ಆದರೆ ಅಂತಹ ಜಲಾಶಯಗಳೇ

ಇಲ್ಲದಿರುವೆಡೆಗಳಲ್ಲಿ ಅದು ಬಯಲಿರಲಿ ಹಳ್ಳಿ, ನಗರ, ಕಾಡು ಇಲ್ಲವೇ ವನ(ಅಡವಿ) ಪ್ರದೇಶವಿರಲಿ ವಿವೇಕಿಗಳು ಸಂಪ್ಯದ್ಧ ಬೆಳೆ ಕೊಯ್ಲು ಅಭಿವೃದ್ಧಿಗಾಗಿ ಕಾಲುವೆಯು ಜಮೀನುಗಳಲ್ಲಿ ಕೊನೆಗೊಳ್ಳುವಂತೆ ವ್ಯವಸ್ಥೆ ಮಾಡಬೇಕು. ಅದರೆ ಅಂತಹ ಸ್ಥಳಗಳಲ್ಲಿ ಸಣ್ಣ ಅಡ್ಡಿಗಾಲ್ಲುವೆಗಳು ಉಪಯುಕ್ತವೆಂದು ಶಿಫಾರಸ್ಸುಮಾಡಲಾಗಿದೆ. ಜೀವಜಂತು ಗಳಂತೆಯೇ ಕೃಷಿಮಾಡಿದ ಸಸ್ಯಗಳಿಗೂ ಸಹ ನೀರೇವಾಸ್ತವ ಜೀವನಾಡಿಯಾಗಿರುತ್ತದೆ (ಅತ್ಯವಶ್ಯವಾಗಿದೆ).

ಆದಕಾರಣ ರಾಜನು ನೀರು ಪೂರೈಕೆಗಾಗಿ ನದಿಗಳು ಇಲ್ಲವೇ ಇನ್ನಾವುದಾದರೂ ಮೂಲದಿಂದ ಪ್ರತಿಭೂಮಿಯಲ್ಲೂ ಕಾಲುವೆಗಳನ್ನು ತೋಡಿಸಿ, ರಕ್ಷಿಸಬೇಕಲ್ಲದೆ ಅವುಗಳಲ್ಲಿ ಸದಾ ನೀರು ತುಂಬಿ ಹರಿಯುವಂತೆ ನೋಡಿಕೊಳ್ಳಬೇಕು. ಅರಕ್ಷಿತ (ನಿರ್ಲಕ್ಷಮಾಡಿದ) ಕಾಲುವೆಯು ನಿರುಪಯುಕ್ತವಾಗುತ್ತದೆ. ಹಾಗೆಯೇ ಬತ್ತಿ ಹೋದ ಕಾಲುವೆಗಳನ್ನು ಕಡೆಗಣಿಸಬೇಕಾಗುತ್ತದೆ. ಆದಕಾರಣ ರಾಜರು ಕಾಲುವೆಗಳ ವಿಚಾರದಲ್ಲಿ ಚೆನ್ನಾಗಿ ಎಚ್ಚರಿಕೆವಹಿಸಿದುದಾದರೆ ಅವರು ಉತ್ತಮ ರಾಜ್ಯಭಾರ ಮಾಡಿದಂತಾಗುವುದು. ಅವುಗಳನ್ನು ಸುಸ್ಥಿತಿಯಲ್ಲಿ ಪೋಷಿಸಿಕೊಂಡು ಬರಬೇಕು. ಸತ್ಯದ ಅರಿವುಳ್ಳ ಋಷಿಮುನಿಗಳೂ ಸಹ ಅದು ರಾಜನ ಶ್ರದ್ಧಾಪೂರ್ಣ ಪವಿತ್ರ ಕಾರ್ಯವೆಂದು ಸಾರಿದ್ದಾರೆ(ಶ್ಲೋ. 127–131).

- ಕೃಷಿಗಾಗಿ ಕೊಳಗಳು, ಸರೋವರಗಳು ಹಾಗೂ ವಿಶೇಷವಾಗಿ ಬಾವಿಗಳಿಂದಲೂ ನೀರಾವರಿ ಮಾಡುವುದನ್ನು ಶಿಫಾರಸ್ಸು ಮಾಡಲಾಗಿದೆ.

ಕೆಲವು ಕಡೆಗಳಲ್ಲಿ ಭೂಮಿಯ ಮೇಲ್ಭಾಗದಲ್ಲೇ ನೀರು ಒದಗುತ್ತದೆ, ಮತ್ತೆ ಕೆಲವೆಡೆಗಳಲ್ಲಿ ಅದು ಅಂತರ್ಗಾಮಿಯಾಗಿರುತ್ತದೆ, ಇನ್ನೂ ಕೆಲವೆಡೆಗಳಲ್ಲಿ ಕಲ್ಲು ಬಂಡೆಗಳ ಅಧಿಕ್ಯತೆಯಿಂದಾಗಿ ನೀರು ಕಾಣೆಯಾಗುತ್ತದೆ. ಹಾಗೆಯೇ ಮತ್ತೆ ಕೆಲವೆಡೆಗಳಲ್ಲಿ ಮಣ್ಣಿನಲ್ಲಿಯ ದೋಷದಿಂದಾಗಿಯೇ ನೀರಿನ ಅಭಾವ ಸಂಭವಿಸುತ್ತದೆ. ಆದಕಾರಣ ಬುದ್ಧಿವಂತರು ಕೆರೆಬಾವಿಗಳನ್ನು ಕಟ್ಟಿಸಲು ನೀರು ಹೆಚ್ಚಾಗಿರುವ ಮರಳು ಮಣ್ಣನ್ನು ಶಿಫಾರಸುಮಾಡುತ್ತಾರೆ(ಶ್ಲೋ. 134–135).

ಸಾಗುವಳಿಮಾಡಿದ ಜಮೀನುಗಳಿಗೆ ಇಲ್ಲವೇ ತೋಟಗಳಿಗೆ ಬೇಸಿಗೆಯಲ್ಲಿ ನೀರಾವರಿ ಮಾಡಲು ಕಾಲುವೆ ನೀರು ಸಾಕಾಗದಿದ್ದಲ್ಲಿ ದಿರುವೆಡೆಗಳಲ್ಲಿ ರಾಜನು ಬಾವಿಯನ್ನು ತೋಡಿಸಬೇಕು. ಆತ ಅಂತಲ್ಲಿ ಒಂದು ಚಿಕ್ಕ, ಮಧ್ಯಮ ಗಾತ್ರದ ಇಲ್ಲವೇ ದೊಡ್ಡ ಬಾವಿ ಇಲ್ಲವೇ ಕೊಳವನ್ನು ತೋಡಿಸಿ ಸೂಕ್ತರೀತಿಯಲ್ಲಿ ಸಂರಕ್ಷಣೆ ವ್ಯವಸ್ಥೆ ಮಾಡಬೇಕು. ಇಂಥವು ಚಚ್ಚೌಕಾಕಾರ, ವೃತ್ತ ಇಲ್ಲವೇ ದೀರ್ಘ ವೃತ್ತಾಕಾರದಲ್ಲಿರಬಹುದಾಗಿದೆ(ಶ್ಲೋ. 136–137).

ಬೇಸಿಗೆ ಕಾಲದಲ್ಲಿ ದೇಶದಲ್ಲೆಲ್ಲಾ ನೀರಿನ ಮಟ್ಟವು ಕಡಮೆಯಾಗುತ್ತದೆ: ಹಾಗೆಯೇ ನದೀ ತಳದಲ್ಲಿಯೂ ಸಹ ನೀರು ಕೆಳಮಟ್ಟಕ್ಕಿಳಿಯುತ್ತದೆ. ಆದಕಾರಣ, ಸತತವಾಗಿ ಪೂರ್ತಿ ನೀರಿನ ಪೂರೈಕೆಪಡೆಯಲು ಬೇಸಿಗೆ ಕಾಲದಲ್ಲಿ ಬಾವಿ ಮುಂತಾದವುಗಳನ್ನು ತೋಡಬೇಕು. ರಾಜನಾದವನು, ಮೊದಲಿಗೆ ಭೂಜಲನಿಯಮಗಳನ್ನು ತಿಳಿದಿರುವಾತನ ಮೂಲಕ ಮಣ್ಣು ಪರೀಕ್ಷೆ ಮಾಡಿಸಿ ಹಾಗೂ ಮರಗಳ ಬೇರು ಹರಿದಿರುವ ದಿಕ್ಕು ಪರೀಕ್ಷೆಯ ಮೂಲಕ ಮಣ್ಣುಸ್ತರವನ್ನು ಗುರುತಿಸಿ ಬಳಿಕ ಒಂದು ಶುಭದಿನ, ಶುಭಘಳಿಗೆಯಲ್ಲಿ ಬಾವಿ ಇಲ್ಲವೇ ಕೊಳ ಕಟ್ಟುವುದಕ್ಕೆ ಆಜ್ಞೆಕೊಡಬೇಕು. ಬಾವಿ ಅಗೆಯುವುದಕ್ಕೆ ಪ್ರಾತಃಕಾಲ ಪ್ರಶಸ್ತವಾದುದೆಂದು ಪರಿಗಣಿಸಲಾಗಿದೆ. ಈ ದಿಸೆಯಲ್ಲಿ ರಾಜನು ಮೊದಲು ಅನುಮತಿಕೊಟ್ಟು, ಜಲದೇವತೆಯಾದ ವರುಣ, ಭೂದೇವಿ ಹಾಗೂ ವನದೇವತೆಯರನ್ನು ಪೂಜಿಸಿ ಬಳಿಕ ಬಾವಿ, ಕೆರೆ ಇಲ್ಲವೇ ಕೊಳ ಕಟ್ಟುವುದಕ್ಕೆ ಅನುಜ್ಞೆ ಕೊಡಬೇಕು. ಮೊದಲಿಗೆ ದೀರ್ಘವೃತ್ತ, ಚಚ್ಚೌಕ, ಇಲ್ಲವೇ ವೃತ್ತಾಕಾರದಲ್ಲಿ ದೊಡ್ಡ ಹಳ್ಳವೊಂದನ್ನು ತೋಡಬೇಕು ಹಾಗೂ ಅಗೆದು ತೆಗೆದ ಮಣ್ಣನ್ನು ಸ್ಥಳದಿಂದ ದೂರಕ್ಕೆ ಸಾಗಿಸಬೇಕು. ಬಳಿಕ ಶೂರಸೈನಿಕರು ಮತ್ತು ರೈತರು ನೀರು ಬರುವವರೆಗೂ ಹಳ್ಳದಿಂದ ಮಣ್ಣು ತೋಡುತ್ತಾ ಹೋಗಬೇಕು. ಹಾಗೆ ಅಗೆತವನ್ನು ಮುಂದುವರಿಸುತ್ತಿದ್ದರೆ ಮರಳು ಮಿಶ್ರಿತ ನೀರು ಕಾಣುತ್ತದೆ. ಆಗ ಅಡಿಪಾಯ ಭದ್ರವಾಗಿರುವಂತೆ ನೆಲೆಗಟ್ಟು ರಚಿಸಬೇಕು.

ತಳದಲ್ಲಿ ಮರಳು ಸ್ತರ ಕಂಡುಬಂದಾಗ ಜಾಲಂದರ ರೀತಿಯ ಅಡಿಪಾಯವನ್ನು ಸುಟ್ಟ ಇಟ್ಟಿಗೆಗಳಿಂದ ಕಟ್ಟಬೇಕು. ಗಟ್ಟಿಸ್ತರದಲ್ಲಿ ಹಾಗೂ ದೀರ್ಘಚತುರಸ್ರ ಸರೋವರ ಕಟ್ಟುವಲ್ಲಿ ತಳಪಾಯವನ್ನು ಕಲ್ಲು ಚಪ್ಪಡಿಗಳಿಂದ ಕಟ್ಟಲಾಗುತ್ತದೆ. ಬಾವಿಯ ತಳದಲ್ಲಿ ನಿಯತವಾಗಿ ಮಣ್ಣು, ಮರಳು ಮತ್ತು ನೀರು ಮಿಶ್ರಿತ ಮಣ್ಣನ್ನು ಕ್ರಮೇಣ ತೆಗೆಯುವ ಮೂಲಕ ತಳಪಾಯವನ್ನು ಭದ್ರಪಡಿಸಬೇಕು: ನೀರು ಒಂದೇ ಸಮನೆ ಹೇರಳವಾಗಿ ಉಕ್ಕುವುದು ಕಂಡುಬಂದಾಗ ತಳಪಾಯದ ಮೇಲೆ ಇಟ್ಟಿಗೆ ಕಟ್ಟಡವನ್ನು ಕಟ್ಟಬೇಕು. ಬಾವಿಯ ಸುತ್ತುಗೋಡೆಗಳನ್ನು ಇಟ್ಟಿಗೆ ಮತ್ತು ಸುಣ್ಣ ಗಾರೆಗಳಿಂದ ಕಟ್ಟಬೇಕು. ಏಕೆಂದರೆ, ಪಂಡಿತರು ಅದು ತುಂಬಾ ಬಾಳಿಕೆ ಬರುತ್ತದೆಂದು ಸಾರಿದ್ದಾರೆ. ವೈಜ್ಞಾನಿಕ(ಶಾಸ್ತ್ರೀಯ) ಕೈಪಿಡಿಗಳೂ ಸಹ ದೇಶದಲ್ಲೆಲ್ಲಾ ಕೊಳಗಳು, ಬಾವಿಗಳು ಮುಂತಾದವುಗಳನ್ನು ಇಟ್ಟಿಗೆ ಗಾರೆಗಳಿಂದ ಕಟ್ಟಬೇಕೆಂದು ಸ್ಪಷ್ಟವಾಗಿ ಶಿಫಾರಸ್ಸು ಮಾಡಿವೆ. ತಳದಿಂದ ಹಿಡಿದು ಭೂಮಿಯ ಅಂಚಿನವರೆಗೆ ಇಡೀ ರಚನೆಯು ಇಟ್ಟಿಗೆಯದಾಗಿದ್ದು ಅವಶ್ಯವಿದ್ದೆಡೆಯಲ್ಲೆಲ್ಲ ಮೆಟ್ಟಿಲು(ಸೋಪಾನ)ಗಳನ್ನೇರ್ಪಡಿಸಬೇಕು. ಬಳಿಕ ಭೂಮಿಯ ಅಂಚಿನಿಂದ ಹಿಡಿದು, ಮೇಲ್ಭಾಗದವರೆಗಿನ ರಚನೆಯನ್ನು ಕಲ್ಲಿಂಚಪ್ಪಡಿಗಳಿಂದ ಕಟ್ಟಿ ಹೊರ ಬಾಯಿಯು ಮಾತ್ರ ಪೂರ್ವ ಇಲ್ಲವೇ ಪಶ್ಚಿಮ ಅಥವಾ ಆ ನಿವೇಶನದ ಪರಿಸ್ಥಿತಿಗಳಿಗನುಗುಣವಾಗಿ ಯಾವುದಾದರೊಂದು ದಿಕ್ಕಿನೆಡೆಗಿರಬೇಕು.

ನೀರೆತ್ತುವ ಯಂತ್ರ ಸ್ಥಾಪನೆಗೆ ಸ್ಥಳವೊಂದನ್ನು ಬಾವಿಯ ಅಂಚಿನ ಮೇಲೆ ಕಲ್ಲು ಚಪ್ಪಡಿಗಳಿಂದ ನಿರ್ಮಿಸಬೇಕು ಹಾಗೂ ನೀರು ಹೊರಹರಿಯುವುದಕ್ಕಾಗಿ ಬಾವಿಯ ಅಂಚಿನಲ್ಲಿ ಒಂದು ಗಟ್ಟಿ ಸ್ಥಳದಲ್ಲಿ ಸಣ್ಣ ನಾಲೆಯೊಂದನ್ನು ಕಟ್ಟಬೇಕು (ಶ್ಲೋ. 138–155).

ನೀರೆತ್ತುವ ಯಂತ್ರಗಳಲ್ಲಿ ಹಲವಾರು ಬಗೆಯವಿವೆ. ಬಲವಾದ ಸರಪಳಿಗಳಿಗೆ ಕಟ್ಟಿದ ಎತ್ತುಗಳಿಂದ ನೀರೆಳೆಯುವ ಸಾಧನವು ಇವುಗಳಲ್ಲಿ ಅತ್ಯುತ್ತಮವಾದುದು. ಆನೆಯ ಸೊಂಡಿಲ ಮೂಲಕ ಎಳೆಯುವ ಸಾಧನವು ಸಾಧಾರಣ(ಮಧ್ಯಮ) ತರಗತಿಯದು. ಮಾನವನು ತನ್ನ ದೈಹಿಕ ಶ್ರಮದಿಂದ ನೀರೆಳೆಯುವ ಯಂತ್ರವೇ ಇವುಗಳಲ್ಲಿ ಕನಿಷ್ಠತರದ್ದಾಗಿದೆ. ನೀರೆತ್ತುಗೆ ಯಂತ್ರ ತಿರುಗುವಿಕೆಯಿಂದ ತೀರ ಆಳದಲ್ಲಿರುವ ನೀರನ್ನು ಬಾವಿಯ ಮೇಲಂಚಿಗೆ ತರುವುದು ಸಾಮಾನ್ಯ ಅನುಭವದ ವಿಚಾರವಾಗಿದೆ. ಈ ನೀರನ್ನು ಸಣ್ಣ ಸಣ್ಣ ನಾಲೆಗಳ ಮೂಲಕ ಸಾಗುವಳಿ ಭೂಮಿಗಳಿಗೆ ಸಾಗಿಸಲಾಗುತ್ತದೆ. ಈ ಕಾರಣದಿಂದಾಗಿಯೇ ವಿಶ್ವದಲ್ಲೇ ಕೃಷಿಕರನ್ನು ಚತುರರೆಂದು ಪರಿಗಣಿಸಲಾಗಿದೆ. ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು ಮತ್ತಿತರರು ಸಹ ಜಲಾಶಯ, ನದೀ ಮೂಲ ಕಾಲುವೆ ಅಥವಾ ಸರೋವರಗಳಿಂದ ಪಡೆದ ತಿಳಿಯಾದ ಪರಿಶುದ್ಧ ನೀರನ್ನು ತಮ್ಮ ಬೇಸಾಯ ಜಮೀನುಗಳು, ತರಕಾರಿ ತೋಟಗಳು ಇಲ್ಲವೇ ಸಂಪಿಗೆ (ಮೈಕೇಲಿಯಾ ಚಂಪಕ) ಮೊದಲಾದ ಹೂವಿನ ಗಿಡಗಳಿಗೆ ಹರಿಸಿಕೊಂಡು ತಮ್ಮ ಕೃಷಿ ಕಾರ್ಯಗಳಲ್ಲಿ ಯಶಸ್ವಿಗಳಾಗುತ್ತಾರೆ. ಆದಕಾರಣ ಬೇಸಾಯಗಾರರು ಮೊದಲು ನೀರು ಪೂರೈಕೆಯ ಮೂಲವನ್ನು ಶೋಧಿಸಬೇಕು. ಭೂಮಿಯ ಮೇಲೆ ನೀರು ಪಡೆಯಬಹುದಾದ ನಿಶ್ಚಿತ ಮೂಲಗಳೆಂದರೆ ಕಾಲುವೆಗಳು, ಬಾವಿಗಳು, ಕೆರೆಗಳು, ಜಲಾಶಯಗಳು, ಮುಂತಾದುವುಗಳಾಗಿವೆ (ಶ್ಲೋ. 156–159; 163).

ಮಳೆಗಾಲದಲ್ಲಿ ಅನಿರೀಕ್ಷಿತವಾಗಿ ಇಲ್ಲವೇ ಋಷಿಮುನಿಗಳ ಮನಶ್ಶಕ್ತಿಯಿಂದ ಮಳೆಯಾಗುವುದು ನಿಶ್ಚಿತ. ಮಳೆಗಾಲದಲ್ಲಿ ಮೋಡಗಳು ಸುರಿಸಿದ ನೀರನ್ನು ರಾಜನು ಕೊಳಗಳು, ಜಲಾಶಯಗಳು ಮುಂತಾದುವುಗಳಲ್ಲಿ ಶೇಖರಿಸಿ ವಿಶೇಷ ಎಚ್ಚರಿಕೆಯಿಂದ ಸಂರಕ್ಷಿಸಿಕೊಂಡು ಬರಬೇಕು. ಏಕೆಂದರೆ, ವ್ಯವಸಾಯವು ನೀರನ್ನವಲಂಬಿಸಿರುವುದರಿಂದ ಸಂಗ್ರಹಿಸಬಹುದಾದ ಎಲ್ಲ ನೀರನ್ನು ರಾಜರುಗಳು ಮತ್ತಿತರ ಎಲ್ಲ ಪ್ರಮುಖ ವ್ಯಕ್ತಿಗಳು 'ಚೆನ್ನಾಗಿ ಸಂರಕ್ಷಿಸಬೇಕು' ಎಂಬುದಾಗಿ ಮಹರ್ಷಿ ಕಶ್ಯಪರು ಅನುಜ್ಞೆ ಕೊಟ್ಟಿದ್ದಾರೆ (ಶ್ಲೋ. 164–167).

ಜಲಮಟ್ಟ ಕಂಡುಹಿಡಿಯುವಿಕೆ

ಮಥುರೆಯ ಬ್ರಾಹ್ಮಣ ಕುಟುಂಬವೊಂದರಲ್ಲಿ ಜನಿಸಿದ ರಾಮಭಕ್ತನಾದ ಖ್ಯಾತ ಚಕ್ರಪಾಣಿಯನ್ನು ರಾಜನು ಪ್ರಜೆಗಳಿಗೆ ಉಪಯುಕ್ತವಾಗುವಂತಹ ಪಂಡಿತಮಾನ್ಯ ಕೃತಿಯೊಂದನ್ನು ರಚಿಸಿಕೊಡಬೇಕೆಂದು ಕೋರಿದನು. 'ವಿಶ್ವವಲ್ಲಭ'ದಲ್ಲಿ ಆತ

ಭೂಮಿಯ ಮೇಲಿನ ಕೆಲವು ಗುಣಲಕ್ಷಣಗಳ ಆಧಾರದ ಮೇಲೆ ವಿವಿಧ ಬಗೆಯ ಭೂಮಿಯ ತಳದಲ್ಲಿರುವ ನೀರಿನ ಬಗೆಗೆ ಸರಿಸುಮಾರು ತಿಳುವಳಿಕೆಯನ್ನು ಹೇಗೆ ಪಡೆಯಬಹುದೆಂದು ಸವಿವರವಾಗಿ ತಿಳಿಸಿದ್ದಾನೆ. ಈ ಮುಂದೆ ಆತನ ವಿವರಣೆಗಳನ್ನು ಕೊಟ್ಟಿದೆ:

ಇದನ್ನು ವರಾಹ, ಸಾರಸ್ವತ, ಗಾರ್ಗ್ಯ, ಲಘು ಸಂಪಸ್ಯ, 'ಹೇಮಾದ್ರಿ ಮುಂತಾದವರ ಕೃತಿಗಳ ಅವಲೋಕನ ಹಾಗೂ ನನ್ನ ಸ್ವಂತ ಅನುಭವಗಳಿಂದ ರಚಿಸಿದ್ದೇನೆ.

ಶಾಸ್ತ್ರೀಯ ಕೃತಿಗಳನ್ನು ಓದಿ ತಿಳಿದನಂತರ ಮಾನವ ಜನಾಂಗದ ಪ್ರಯೋಜನ ದೃಷ್ಟಿಯಿಂದ ಎಲ್ಲ ವಿವರಗಳನ್ನೂ ಎಂದರೆ ನೀರು ಎಷ್ಟು ಆಳದಲ್ಲಿ...., ಎಷ್ಟು ಮೊಳದಾಳದಲ್ಲಿ...., ಹಾಗೂ ನೀರುಸಾಗುಮಾರ್ಗವು ಯಾವ ದಿಕ್ಕಿನಲ್ಲಿ ಹರಿಯುತ್ತದೆ, ಕೆಳಮಣ್ಣಿನಲ್ಲಿ ಕಲ್ಲುಗಳು, ಸಿಹಿ ಇಲ್ಲವೇ ಕಹಿ(ನೀರು), ಶರ್ಕರ(ಶರ್ಕರೆ ಗರಸು)ದಂತಹುವೇ ಮುಂತಾದುವು ಏನೇನು ಎದುರಾಗುತ್ತವೆಂಬುದಾಗಿ ವಿವರಿಸುತ್ತೇನೆ (ಅಧ್ಯಾಯ 1, ಶ್ಲೋ. 10–11).

ನೀರು ಜೌಗು ಪ್ರದೇಶದ ಸಮೀಪದಲ್ಲಿ ಇಲ್ಲವೇ ತಳಭಾಗದಲ್ಲಿ ಸಮುದ್ರದ ಕಡೆ (ಸಗಲ ಸಾಗರ), ತೀರದ ಬಳಿಯಲ್ಲಿ ಹಾಗೂ ಮರುಭೂಮಿ, ಕಲ್ಲು ಮತ್ತು ಪರ್ವತಮಯ ಪ್ರದೇಶಗಳಲ್ಲಿ ಆಳದಲ್ಲಿಯೂ ಕಂಡುಬರುತ್ತದೆಂಬುದು ಸ್ಪಷ್ಟವಾಗಿ ತಿಳಿದ ವಿಷಯವೇ ಆಗಿದ್ದರೂ ಅವೆಲ್ಲವನ್ನೂ ಸಂಗ್ರಹವಾಗಿ (ಗ್ರಹಾತ್–ಸಂಗ್ರಹಾತ್) ತಿಳಿಸುತ್ತೇನೆ. ಇವೆಲ್ಲ ಹಿಂದಿನ ಕೃತಿಗಳಲ್ಲಿ ಕೊಟ್ಟಿರುವ ಸ್ಪಷ್ಟ ಸೂಚನೆಗಳಾಗಿವೆ. ಅವುಗಳನ್ನು ವಾಸ್ತವವೆಂದು ಹಾಗೆಯೇ ಸ್ವೀಕರಿಸಿದ್ದೇನೆಂದು ನನ್ನನ್ನು ಹಳಿಯದಿರಲಿ. ನೀರಿನಲ್ಲಿ ಎಂಟು ಬಗೆಯ ಅಂತರ್ಗತ ಜಲಶಾಖೆಗಳಿವೆ. ಇವು ಕಾಂತಧ್ರುವ ಸೂಚಿಯ ಮೂಲ ಹಾಗೂ ಮಧ್ಯ ಬಿಂದುಗಳನ್ನು ಅನುಸರಿಸುತ್ತವೆ. ಹಾಗೆಯೇ ಮತ್ತೊಂದು ಒಂಬತ್ತನೆಯ ಶಾಖೆಯೂ ಒಂದಿದೆ. ಭೂಮಿಯ ಕೆಳಗೆ ನೇರವಾಗಿದ್ದು ಮೇಲೆ ಹೊಮ್ಮುವ ಶಾಖೆಗೆ ವರ್ಷವಿಡೀ ಜಲಪೂರೈಕೆ ಮಾಡುವ ಸಾಮರ್ಥ್ಯವಿರುತ್ತದೆ.

ಪರ್ವತ ಅಥವಾ ವೃಕ್ಷದ ಬೇರಿನಿಂದ ಕೆಲವುವೇಳೆ ಅಂತರ್ಗತ ಜಲಶಾಖೆಯು ಕೆಳಮುಖವಾಗಿ ಸಾಗಿ ನೀರು ಮೂಲದ ಚಿಲುಮೆಯಾಗುತ್ತದೆ (ನಿರ್ಝರ). ಕೆಲವು ಸ್ಥಳಗಳಲ್ಲಿ ಎಲ್ಲ ಶಾಖೆಗಳೂ ಗುಹೆಗಳಲ್ಲಿ ಕೊನೆಗೊಳ್ಳುವುದನ್ನು(ಸಿದ್ಧಃ) ಕಾಣಬಹುದು (ಅಧ್ಯಾಯ 1, ಶ್ಲೋ. 14–16).

ಅಗೆಯುವಾಗ ಕಲ್ಲಿನಂತೆ ಗಟ್ಟಿಯಾದ ಭೂಮಿ ಸಿಕ್ಕರೆ ಹಾಗೂ ಗುದ್ದಲಿ ಹಾಕಿದಾಗ ತೆಳುವಾದ ಕಲ್ಲುಚಪ್ಪಡಿಯ ಮೇಲೆ ಬಡಿದಂತೆ ಸದ್ದಾದರೆ ಆಗ ಅದರ ಕೆಳಗೆ ವಿಪುಲ ನೀರು ಸಂಗ್ರಹವಿರುವುದು ಖಂಡಿತ. ಯಾವುದೇ ಜಲಾಶಯವಿಲ್ಲದ ಸ್ಥಳದಲ್ಲಿ ವೇತಸ ಸಸ್ಯ(ರತ್ತನ್) ವಿಪುಲವಾಗಿ ಬೆಳೆದಿದ್ದಲ್ಲಿ ಆ ಸ್ಥಳದಲ್ಲಿ ಭೂ ಅಂಚಿನಿಂದ ಎರಡು

ಮೊಳ ಆಳದಲ್ಲಿ ಪಶ್ಚಿಮ ದಿಕ್ಕಿಗೆ ಹರಿಯುತ್ತಿರುವ ನೀರು ಸೆಲೆ ಇರುತ್ತದೆ. ಅಲ್ಲಿಂದ ಎರಡೂವರೆ ಮೊಳದೂರದಲ್ಲಿ ಏಳು ಮೊಳಗಳ ಆಳದಲ್ಲಿ ಹೊಂಬಣ್ಣದ ಶಿಲೆಗಳು ಕಂಡುಬರುತ್ತವಲ್ಲದೆ, ಅವುಗಳ ಕೆಳಗೆ ತೆಳುವಾದ ಚಪ್ಪಡಿ ಇದ್ದು ಅದರ ಕೆಳಗೆ ನೀರಿರುತ್ತದೆ (ಅಧ್ಯಾಯ 1, ಶ್ಲೋ. 17–18).

ನೀರಿನ ಮಡುವೂ ಸಹ ಇಲ್ಲದೆಡೆಯಲ್ಲಿ ವೇತಸ ಸಸ್ಯವು ಬೆಳೆದಿರುವುದು ಕಂಡು ಬಂದರೆ, ಆಗ ಆ ಸಸ್ಯದಿಂದ ಪಶ್ಚಿಮಕ್ಕೆ ಮೂರು ಮೊಳದಷ್ಟು ದೂರದಲ್ಲಿ, ಏಳು ಮೊಳಗಳಷ್ಟು ಆಳ ಅಗೆದಾಗ ನೀರು ಸೆಲೆ ಕಂಡುಬರುತ್ತದೆ. ಆ ಸ್ಥಳದಲ್ಲಿ ಅಗೆಯುತ್ತಿರುವಾಗ ಒಂದುವರೆ ಮೊಳದಾಳದಲ್ಲಿ ಹಳದಿ ಬಣ್ಣದ ಕಪ್ಪೆಗಳು ಕಂಡುಬರುತ್ತವೆ. ಯಾವುದೇ ಬಗೆಯ ಜಲಾಶಯವೂ ಇಲ್ಲದಿರುವ ಸ್ಥಳವೊಂದರಲ್ಲಿ ಅತ್ತಿಮರ (ಫೈಕಸ್ ಅಫೋಸಿಟಫೋಲಿಯ) ಬೆಳೆದಿರುವುದು ಕಂಡುಬಂದರೆ, ಆ ವೃಕ್ಷದಿಂದ ಪಶ್ಚಿಮಕ್ಕೆ ಮೂರು ಮೊಳ ದೂರದಲ್ಲಿ, ಭೂಮಟ್ಟದಿಂದ ಎರಡೂವರೆ ಆಳುದ್ದದ ಕೆಳಭಾಗದಲ್ಲಿ ನೀರಿನ ಸೆಲೆ ಇರುತ್ತದೆ. ಇದಕ್ಕೆ 'ಶ್ಯಾಮವೇತಸ' [ಕಪ್ಪು ಪಟ್ಟೆ(ಗೆರೆ)] ಎಂದು ಹೆಸರು. ಅಂಥಲ್ಲಿ ನೀರಿನ ಬಳಿ ಬಿಳಿಮರಳು ಕಂಡುಬರುತ್ತದೆ. ಜಲಮೂಲ ಶೋಧನೆಗೆ ಇದೊಂದು ಸೂತ್ರವಾಗಿದೆ (ಅಧ್ಯಾಯ 1, ಶ್ಲೋ. 18).

ಅತ್ತಿಮರವಿರುವೆಡೆಯಲ್ಲಿ ಅದರಿಂದ ಪಶ್ಚಿಮಕ್ಕೆ ಮೂರು ಮೊಳ ದೂರದಲ್ಲಿ ಎರಡುವರೆ ಆಳುದ್ದ ಕೆಳಭಾಗದಲ್ಲಿ ದಟ್ಟ ನೀರು ಸೆಲೆ (ಕಪ್ಪು ನೀರಸೆಲೆ) ಇರುತ್ತದೆ. ಅಲ್ಲಿ ಒಂದಾಳು ಕೆಳಭಾಗದಲ್ಲಿ ಬಿಳಿ ಮರಳು ಕಂಡುಬರುತ್ತದೆ. ನೀರು ಸೆಲೆಯು ವೃಕ್ಷದಿಂದ ಪೂರ್ವಕ್ಕೆ ಮೂರುಮೊಳ ದೂರದಲ್ಲಿ ಎರಡಾಳುದ್ದ ಕೆಳಗಡೆ ಕಂಡುಬಂದರೆ ಆಗ ಅಲ್ಲಿನ ಜೇಡಿಮಣ್ಣು ಕೆಂಪು ಮತ್ತು ಮಾಸಲು ಬಿಳಿಯ ಬಣ್ಣವಿದ್ದು ಒಂದಾಳು ಕೆಳಗೆ ಕಪ್ಪೆಗಳು ಕಂಡುಬರುತ್ತವೆ. ಇದು ಈ ದಿಸೆಯಲ್ಲಿ ಎರಡನೆಯ ಸೂತ್ರವಾಗಿದೆ (ಅಧ್ಯಾಯ 1, ಶ್ಲೋ. 19).

ಅರ್ಜುನ ವೃಕ್ಷದ ಉತ್ತರಕ್ಕೆ ಹುತ್ತವು ಕಂಡುಬಂದರೆ ಅಲ್ಲಿ ಆ ವೃಕ್ಷದ ಪಶ್ಚಿಮಕ್ಕೆ ಮೂರುಮೊಳ ದೂರದಲ್ಲಿ, ಮೂರುವರೆ ಆಳುದ್ದ ಕೆಳಗೆ ನೀರು ಸಿಗುವುದು ಖಂಡಿತ. ಒಂದುವರೆ ಆಳುದ್ದ ಕೆಳಗೆ ಅಗೆದಾಗ ಬಿಳಿಬೂದು ಬಣ್ಣದ ಉಡ ಕಂಡುಬರುತ್ತದೆ. ಅದರ ಕೆಳಗೆ ಹಳದಿ ಗರಸು ಮತ್ತು ಅದರ ಕೆಳಗೆ ಬಿಳಿ ಗರಸು ಕಂಡುಬರುತ್ತದೆ. ಅಲ್ಲದೆ, ನೀರೂ ತುಂಬಾ ಸಿಹಿಯಾಗಿರುತ್ತದೆ. ಪನ್ನೇರಳೆ ಮರದ ಸಮೀಪದಲ್ಲಿರುವ ಹುತ್ತದ ದಕ್ಷಿಣ ಭಾಗದಲ್ಲಿ ಎರಡಾಳುದ್ದ ಕೆಳಗೆ ಸಿಹಿನೀರು ಇರುತ್ತದೆ; ಅಲ್ಲಿ ಅರ್ಧ ಆಳುದ್ದ ಅಗೆದಾಗ, ಕೆಳಗೆ ಪಾರಿವಾಳ ಬಣ್ಣದ ಮಣ್ಣು ಸಿಕ್ಕುತ್ತದೆ. ಹುತ್ತವೊಂದರ ಪಶ್ಚಿಮಕ್ಕೆ ಬದರಿ (ಜುಜುಬೆ) ವೃಕ್ಷವಿದ್ದುದಾದರೆ ಆಗ ಪಶ್ಚಿಮಕ್ಕೆ ಎರಡು ಮೊಳದೂರದಲ್ಲಿ, ಮೂರು ಆಳುದ್ದ ಕೆಳಗೆ ನೀರು ಚಿಲುಮೆ ಇರುವುದು ಖಂಡಿತ; ಹುತ್ತದ

ಪಕ್ಕದಲ್ಲಿ 'ಸಿಂಧೂವಾರ' ಮರವಿದ್ದುದಾದರೆ ಆಗ ಅದರಿಂದ ದಕ್ಷಿಣಕ್ಕೆ ಒಂದಾಳುದ್ದ ದೂರದಲ್ಲಿ ಎರಡೂವರೆ ಆಳುದ್ದ ಕೆಳಗೆ ನೀರಿರುತ್ತದೆ ಮತ್ತು ಅನುಕ್ರಮವಾಗಿ ಕಂದು ಬಣ್ಣದ ಜೇಡಿ ಮತ್ತು ಪಾರದರ್ಶಕ ಗರಸು ಕಂಡುಬರುತ್ತದೆ; ಒಂದು ವೇಳೆ ಕೋವಿ ವೃಕ್ಷವಿದ್ದುದಾದರೆ ಆಗ ಪಶ್ಚಿಮಕ್ಕೆ ಮೂರು ಮೊಳ ದೂರದಲ್ಲಿ, ಮೂರುವರೆ ಆಳುದ್ದ ಆಳದಲ್ಲಿ ಬಿಳಿ ... ಗರಸು ಕಂಡುಬರುತ್ತದೆ (ಅಧ್ಯಾಯ 1, ಶ್ಲೋ. 20-22).

ಬಿಲ್ವ ಮತ್ತು ಅತ್ತಿಮರಗಳೆರಡೂ ಪರಸ್ಪರ ಸುತ್ತಿಕೊಂಡಿದ್ದರೆ ಆಗ ದಕ್ಷಿಣಕ್ಕೆ ಮೂರು ಮೊಳ ದೂರದಲ್ಲಿ ಮೂರುವರೆ ಆಳುದ್ದ ತಳದಲ್ಲಿ ನೀರು ಇರುತ್ತದೆ ಮತ್ತು ಅದರ ಕೆಳಗೆ ಕಪ್ಪೆಗಳು ಗೋಚರಿಸುತ್ತವೆ. ನಾಕ ಮತ್ತು ಅತ್ತಿಮರಗಳೆರಡೂ ಒಂದು ಹುತ್ತಕ್ಕೆ ಸಮೀಪದಲ್ಲಿದ್ದುದಾದರೆ ಮೂರುವರೆ ಆಳುದ್ದ ತಳದಲ್ಲಿ ಗೋಧಿಯ ಬಣ್ಣದ ಜೇಡಿ(ಗೋರದ್ವಸಂಗೋ--ಸದೃಶಂ)ಯೊಂದಿಗೆ ನೀರು ಗೋಚರಿಸುತ್ತದೆ (ಅಧ್ಯಾಯ 1, ಶ್ಲೋ. 23).

ಪೂರ್ವದಲ್ಲಿ ... ಅಲ್ಪಸ್ವಲ್ಪ ನೀರಿನ ಸೆಲೆ ... ಮೂರು ಮೊಳ ದೂರದಲ್ಲಿ ... ಉಪ್ಪು ಮತ್ತು ಲೋಹದಂತಹ ಗಟ್ಟಿಭೂಮಿ ಹಾಗೂ ಸೋನ ವೃಕ್ಷವಿದ್ದಲ್ಲಿ ಅಲ್ಲಿಂದ ಉತ್ತರಕ್ಕೆ ನೀರು ಸೆಲೆ ಇರುತ್ತದೆ. ಈ ವೃಕ್ಷದ ಪಶ್ಚಿಮಕ್ಕೆ ಹುತ್ತವಿದ್ದುದಾದರೆ ಒಂದಾಳುದ್ದ ದೂರದಲ್ಲಿ, ನಾಲ್ಕುವರೆ ಆಳುದ್ದ ತಳದಲ್ಲಿ ನೀರು ಸೆಲೆ ಇರುತ್ತವೆ (ಅಧ್ಯಾಯ 1, ಶ್ಲೋ. 24).

ಕಾರಂಜ ವೃಕ್ಷದ ದಕ್ಷಿಣಕ್ಕೆ ಸಪ್ಪಿ ವೃಕ್ಷವಿದ್ದರೆ ಅದೇ ದಿಕ್ಕಿನಲ್ಲಿ ಮೂರು ಮೊಳ ದೂರದಲ್ಲಿ ಮೂರುವರೆ ಆಳುದ್ದ (ಅಥವಾ ನಾಲ್ಕು ಆಳುದ್ದ) ತಳದಲ್ಲಿ ಆಮೆ ಕಂಡು ಬರುವುದಲ್ಲದೆ, ನೀರಿನ ಎರಡು ಸೆಲೆಗಳು ಕಂಡುಬರುತ್ತವೆ. ಉತ್ತರದ ಕಡೆ ಮಧೂಕ ವೃಕ್ಷಗಳೂ, ವಾಯುವ್ಯ ದಿಕ್ಕಿನೆಡೆ ಸರ್ಪ ವೃಕ್ಷವಿದ್ದುದಾದರೆ ಆಗ ಅರ್ಧಾಳುದ್ದ ತಳದಲ್ಲಿ ಧೂಮ ವರ್ಣದ ಮಣ್ಣು ಹಾಗೂ ಕೆಂಬಣ್ಣದ ಕಲ್ಲುಗಳು ಕಂಡುಬರುತ್ತವೆ (ಅಧ್ಯಾಯ 1, ಶ್ಲೋ. 25).

ಕಪಿತ್ಥ (ಬೇಲ) ವೃಕ್ಷದ ದಕ್ಷಿಣದಲ್ಲಿ ಹುತ್ತವು ಕಂಡುಬಂದರೆ, ಮರದ ಕೆಳಗೆ ಕಪ್ಪೆಗಳು ಕಂಡುಬರುತ್ತವೆ; ಬಳಿಕ ಪೂರ್ವದಿಕ್ಕಿನೆಡೆ ಏಳು ಮೊಳದೂರ ಸಾಗಿದಾಗ, ನಾಲ್ಕಾಳುದ್ದ ಆಳದಲ್ಲಿ ನೀರು ಗೋಚರಿಸುತ್ತದೆ. ಸರ್ಪ ಮತ್ತು ಅಥವಾ ಕರ್ಬುರಕ ಗಳೆರಡೂ ಕಂಡುಬಂದರೆ (ಕಪಿತ್ಥ ವೃಕ್ಷದ ದಕ್ಷಿಣಕ್ಕೆ), ಅಲ್ಲಿ ಒಂದಾಳುದ್ದ ತಳದಲ್ಲಿ ಕಲ್ಲು, ಘಟಕ ಮತ್ತು ವಾಯುವ್ಯ ದಿಕ್ಕಿನಲ್ಲಿ ಎರಡು ನೀರು ಸೆಲೆಗಳೂ ಕಂಡುಬರುತ್ತವೆ. ಹುತ್ತದ ಉತ್ತರಕ್ಕೆ ತಿಲಕ ವೃಕ್ಷವಿದ್ದರೆ ಹಾಗೂ ಸ್ಥಳದಲ್ಲಿ ದೂರ್ವೆ ಮತ್ತು ಕುಶ (ದರ್ಭೆ) ಹುಲ್ಲುಗಳು ಇದ್ದುದಾದರೆ ಅಲ್ಲಿಂದ ಪಶ್ಚಿಮಕ್ಕೆ ಐದು ಮೊಳ ಆಳದಲ್ಲಿ

ಪೂರ್ವದಿಕ್ಕಿನತ್ತ ಹರಿಯುವ ನೀರಿನ ಸೆಲೆ ಗೋಚರಿಸುತ್ತದೆ. ಹುತ್ತದ ಬಳಿಯಲ್ಲಿ ತೆಂಗು ಇಲ್ಲವೇ ತಾಳೆ ಜಾತಿಯ ವೃಕ್ಷವಿದ್ದರೆ ಆಗ ಪಶ್ಚಿಮಕ್ಕೆ ಆರು ಮೊಳದೂರದಲ್ಲಿ ನಾಲ್ಕಾಳುದ್ದ ಆಳದಲ್ಲಿ ಸಿಹಿ ನೀರು ಕಂಡುಬರುತ್ತದೆ (ಅಧ್ಯಾಯ 1, ಶ್ಲೋ. 26–27).

ಅಶ್ಮಂತಕ ವೃಕ್ಷದ ಎಡಭಾಗದಲ್ಲಿ ಬದರಿ ಮರ ಇಲ್ಲವೇ ಹುತ್ತವು ಇದ್ದುದಾದರೆ ಆಗ ಪೂರ್ವಕ್ಕೆ ಆರು ಮೊಳದೂರದಲ್ಲಿ ಮೂರುವರೆ ಆಳುದ್ದ ತಳದಲ್ಲಿ, ನೀರು ಕಂಡು ಬರುತ್ತದೆ. ಜೊತೆಗೆ ಇತರ ಲಕ್ಷಣಗಳು ಎಂದರೆ. ಒಂದಾಳುದ್ದ ಆಳದಲ್ಲಿ ಆಮೆ ಅದರ ಕೆಳಗೆ ಬೂದು (ನೆರೆ) ಬಣ್ಣದ ಕಲ್ಲು, ಬಳಿಕ ದಕ್ಷಿಣದ ಕಡೆ ಉತ್ತರ ದಿಕ್ಕಿನತ್ತ ಹರಿಯುತ್ತಿರುವ ನೀರು ಸೆಲೆ ಹಾಗೂ ಅದರ ಕೆಳಗೆ 'ಬಹುವಾರ್ಷಿಕ ನೀರು ಸೆಲೆ' ಇರುತ್ತದೆ (ಅಧ್ಯಾಯ 1, ಶ್ಲೋ. 28).

ಹಾರಿದ್ರ ಸಸ್ಯದ ಎಡಕ್ಕೆ ಹುತ್ತವಿದ್ದುದಾದರೆ ಆಗ ಪೂರ್ವಕ್ಕೆ ಮೂರು ಮೊಳ ದೂರದಲ್ಲಿ ಐದಾಳುದ್ದ ಕೆಳಗೆ ನೀರು ಕಂಡುಬರುತ್ತದೆ. ಅಲ್ಲದೆ, ಒಂದು ತುಂಬಾ ಬಿಳಿ ಬಣ್ಣವಿರುವ ಹಾವು ಇರುತ್ತದೆ; ಒಂದಾಳುದ್ದ ಆಳದಲ್ಲಿ ಹಳದಿ ಚೇಡಿ ಇರುತ್ತದೆ. ಬಳಿಕ ಕಪ್ಪು ಮಣ್ಣಿರುತ್ತದಲ್ಲದೆ, ಪಶ್ಚಿಮಕ್ಕೆ ನೀರು ಸೆಲೆ ಇರುತ್ತದೆ. ಇದರ ಮುಂಭಾಗಕ್ಕೆ ದಕ್ಷಿಣದ ಕಡೆ ಜಲಮೂಲಿಕೆಗಳು, ಸಸ್ಯಗಳು, ಹುಲ್ಲು, ಟಿಸ್ಟಿಕ ಮುಂತಾದವಿದ್ದು ಸಮೀಪದಲ್ಲಿ ನೀರಿರುತ್ತದೆ (ಅಧ್ಯಾಯ 1, ಶ್ಲೋ. 29).

ಅಕ್ಷಿ ಭಾರ್ಗಿ (ಕ್ಲೆರೋಡೆಂಡ್ರಮ್ ಸೈಫೋನ್ಯಾಂಟಸ್), ದಂತಿ (ಕ್ರೋಟಾನ್ ಪೋಲಿಯಾಂಡ್ರಮ್), ಕಪ್ಪು ಎಲೆಗಳ ಸ್ಪಂದನ, ಲಕ್ಷ್ಮಣ (ಹೆಮಿಯೋನಿಟಿಸ್ ಕಾರ್ಡಿಫೋಲಿಯ) ಅಥವಾ ಮಾಲಿಕ (ಎರಡು ಸುತ್ತಿನ ಮಲ್ಲಿಗೆ) ಸಸ್ಯಗಳಿದ್ದುದಾದರೆ ಅದಕ್ಕೆ ದಕ್ಷಿಣದಲ್ಲಿ ಮೂರಾಳುದ್ದ ತಳದಲ್ಲಿ ನೀರಿರುತ್ತದೆ ಅಥವಾ ಕೊಂಬೆಯೊಂದು ಬಾಗಿದ ನಯವಾದ ಎಲೆಗಳುಳ್ಳ (ಸ್ನಿಗ್ಧಪತ್ರ-ಕಾರಂಜ) ಮತ್ತೊಂದು ವೃಕ್ಷವಿದ್ದುದಾದರೆ ಅಲ್ಲಿಯೂ ಮೇಲೆ ಹೇಳಿದ ಆಳದಲ್ಲಿ (ಎಂದರೆ ಮೂರಾಳುದ್ದ ತಳದಲ್ಲಿ) ನೀರಿರುತ್ತದೆ. ಹಾಗೆಯೇ ನಯವಾದ ಕುರುಚಲು ಇಲ್ಲವೇ ಅಸಾಧಾರಣ ಗಾತ್ರದ ವೃಕ್ಷಗಳು ಇಲ್ಲವೇ ಉದ್ದವಾದ ಅಥವಾ ತೂಗಾಡುತ್ತಿರುವ ಕೊಂಬೆಗಳುಳ್ಳ ಗಿಡಮರಗಳಿದ್ದಲ್ಲಿ ನೀರಿರುತ್ತದೆ (ಅಧ್ಯಾಯ 1, ಶ್ಲೋ. 30).

ಪಾದಗಳಿಂದ ಘಟ್ಟಿಸಿದಾಗ (ಇಲ್ಲವೇ ಒದ್ದಾಗ) ಭೂಮಿಯಿಂದ ಟೊಳ್ಳು ಸದ್ದಾದರೆ, ಹಾಗೂ ಅಲ್ಲಿಂದ ಮೂರಾಳುದ್ದ ದೂರದಲ್ಲಿ ಖರ್ಜೂರಿ ಮರ ಅಥವಾ ಚಕ್ರಸಿರಿ ಮರವಿದ್ದರೆ ಅಲ್ಲಿಂದ ಪಶ್ಚಿಮಕ್ಕೆ ಮೂರಾಳುದ್ದ ತಳದಲ್ಲಿ ನೀರಿರುತ್ತದೆ. ಅಲ್ಲಿ ಬಿಳಿಯ ಹೂಗಳ ಪನಸ ವೃಕ್ಷವಿದ್ದುದಾದರೆ ಹಾಗೂ ಅದರಿಂದ ಮೂರಾಳುದ್ದ ದೂರದಲ್ಲಿ ಕರ್ಣಿಕಾರ ಅಥವಾ ಕೋಲ ವೃಕ್ಷವಿದ್ದಲ್ಲಿ ಮೂರುದಿನಗಳೊಳಗೆ ಸುರ-ವಸತಿ ಚಮತ್ಕಾರಿಯು ನಾಶವಾಗುತ್ತದೆ. (ಅಧ್ಯಾಯ 1, ಶ್ಲೋ. 31).

ಶುಷ್ಕ ಪ್ರದೇಶಗಳಲ್ಲಿ ಜಲಮೂಲ ಶೋಧನೆ

ಭೂಮಿಯಿಂದ ಬಿಸಿನೀರ ಹಬೆ (ಉಗಿ) ಹೊರಡುತ್ತಿದ್ದರೆ ಆಗ ಎರಡಾಳುದ್ದ ಆಳದಲ್ಲಿ ಅಂತರ್ಗತ ಸಸ್ಯಗಳೊಂದಿಗೆ ನೀರಿನ ಝರಿ ಕಂಡುಬರುತ್ತದೆ. ಈ ಎರಡಾಳುದ್ದ ಆಳದಲ್ಲಿಯ ನೀರು ಮಾಸಲು ಬಿಳಿಯಾಗಿ ತಿರುಗಿ ಇಂಗಿಹೋಗುತ್ತದೆ. ಪ್ರಾಚೀನ ಆಚಾರ್ಯರು ಶುಷ್ಕ ಪ್ರದೇಶಗಳಲ್ಲಿ ಜಲಮೂಲ ಶೋಧನೆಯನ್ನು ಕುರಿತು ಅನೇಕ ವಿಧಾನಗಳನ್ನು ವಿವರಿಸಿದ್ದಾರೆ. ಅವುಗಳನ್ನೆಲ್ಲಾ ವಿವರಿಸಹೊರಟಲ್ಲಿ ಈ ಪುಸ್ತಕದ ಗಾತ್ರ ಹೆಚ್ಚಾಗಬಹುದೆಂಬ ಶಂಕೆಯಿಂದ ಕೆಲವನ್ನು ಮಾತ್ರ ಇಲ್ಲಿ ವಿವರಿಸಿದ್ದೇನೆ. ಈಗ ಶುಷ್ಕ ಪ್ರದೇಶದಲ್ಲಿ ಜಲಮೂಲ ಶೋಧನೆಗೆ ಮಣ್ಣು ಪರೀಕ್ಷೆ ಮಾಡುವ ಕೆಲವು ವಿಧಾನಗಳು ಈ ಮುಂದೆ ತಿಳಿಸಿದಂತಿರುತ್ತವೆ.

ಜ್ಯೋತಿಷ್ಯ ಶಾಸ್ತ್ರಜ್ಞ ಸನ್ಮುನಿಯು ಕೆಲವು ಜಲಮೂಲ ಶೋಧನೆ ಲಕ್ಷಣಗಳನ್ನು ಒಪ್ಪಿದ್ದಾನೆ. ಅವುಗಳಿಂದಾಗಿ ಈಗ ಸಾಕಷ್ಟು ಅಂತರ್ಗತ ಜಲಸ್ತಾರ್ಯಕೆ ಇದೆಯೋ ? ಇದ್ದಲ್ಲಿ ಅದು ಸಿಹಿ ಇದೆಯೆ ? ಎಂದು ಮುಂಗಾಣುವುದು ಸಾಧ್ಯವಾಗಿದೆ. ಮರುಭೂಮಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನಗಳ ಅನುಕೂಲಕ್ಕಾಗಿ ಅಲ್ಲಿ ಸಾಮಾನ್ಯವಾಗಿ ಆನೆಯ ಸೊಂಡಿಲಗಾತ್ರದಷ್ಟು ದೊಡ್ಡ ನೀರುಹೊನಲಿನ ಅಂತರ್ಗತ ಜಲವಿರುತ್ತದೆ (ಅಧ್ಯಾಯ 1, ಶ್ಲೋ. 32, 1).

ಕರೀರ ಪೊದೆಯು ಉತ್ತರಕ್ಕೆ ಹುತ್ತವಿದ್ದುದಾದರೆ. ಅಲ್ಲಿ ದಕ್ಷಿಣದ ಕಡೆ ಹತ್ತಾಳುದ್ದ ಆಳದಲ್ಲಿ ಸಿಹಿ ನೀರಿರುತ್ತದೆ ಹಾಗೂ ಒಂದಾಳುದ್ದ ತಳದಲ್ಲಿ ಹಳದಿ ಕಪ್ಪೆಗಳಿರುತ್ತವೆ. ಒಂದು ವೇಳೆ ರೋಹಿತ ವೃಕ್ಷದ ಪಶ್ಚಿಮಕ್ಕೆ ಅದೇ ಹುತ್ತವಿದ್ದುದಾದರೆ ಆಗ ಮೂರು ಮೊಳ ದೂರದಲ್ಲಿ ಭೂಮಿಯಿಂದ ಹತ್ತಾಳುದ್ದ ತಳದಲ್ಲಿ ನೀರಿರುತ್ತದಲ್ಲದೆ ಪಶ್ಚಿಮದ ಕಡೆ ಉಪ್ಪು ನೀರಿನಿಂದ ತುಂಬಿ ತುಳುಕುವ ತೊರೆಯಿರುತ್ತದೆ (ಅಧ್ಯಾಯ 1, ಶ್ಲೋ. 32, 2).

ಬಿಳಿ ಬಣ್ಣದ ಹುತ್ತವಿದ್ದುದಾದರೆ ಅದಕ್ಕೆ ಸಮೀಪದಲ್ಲಿ ಪಶ್ಚಿಮಕ್ಕೆ ಐದಾಳುದ್ದ ಆಳದಲ್ಲಿ ನೀರು ಝರಿಯಿರುತ್ತದಲ್ಲದೆ ಪಶ್ಚಿಮದೆಡೆಗೆ ಒಂದಾಳುದ್ದ ಕೆಳಗೆ ಕಲ್ಲುಗಳು ಮತ್ತು ಹಳದಿ ಜೇಡಿ ಕಂಡುಬರುತ್ತದೆ. ಹುತ್ತದ ಪೂರ್ವದಲ್ಲಿ ಪೀಲು ವೃಕ್ಷವಿದ್ದುದಾದರೆ ಅದರಿಂದ ದಕ್ಷಿಣಕ್ಕೆ ಒಂದಾಳುದ್ದ ದೂರದಲ್ಲಿ ಏಳು ಆಳುದ್ದ ಕೆಳಗೆ ನೀರಿರುತ್ತದೆ. ಅಂಥಲ್ಲಿ ಒಂದಾಳುದ್ದ ಅಗೆಯುತ್ತಿದ್ದಂತೆಯೇ ಕಪ್ಪು ಬಿಳಿ ಚುಕ್ಕೆಯ ಸರ್ಪ ಕಂಡುಬರುತ್ತದಲ್ಲದೆ ಮೂರಾಳುದ್ದ ತಳದಲ್ಲಿ ಯಥೇಚ್ಛವಾಗಿ ಉಪ್ಪು (ನೀರು) ಸಹ ಇರುತ್ತದೆ (ಅಧ್ಯಾಯ 1, ಶ್ಲೋ. 32, 3).

ಇಂದ್ರ-ದ್ರು (ಟರ್ಮಿನೇಲಿಯ ಅರ್ಜುನ) ವೃಕ್ಷದ ಪೂರ್ವಕ್ಕೆ ಹುತ್ತವಿದ್ದುದಾದರೆ ಪಶ್ಚಿಮಕ್ಕೆ ಒಂದು ಮೊಳ ದೂರದಲ್ಲಿ ಇಪ್ಪತ್ತು ಆಳುದ್ದದ ಕೆಳಗೆ ನೀರು ಕಂಡುಬರುವುದಲ್ಲದೆ ಒಂದಾಳುದ್ದ ತಳದಲ್ಲಿ ಉಡ ಗೋಚರವಾಗುತ್ತದೆ. ನಿಪ್ಪತ್ರ (ಕ್ಲೋವ್ ಅಥವಾ ಕ್ಯಾಪ್ಪಾರಿಸ್‌ಸ್ಪಿ) ವೃಕ್ಷದ ಬಳಿ ಕಂಟಕಾರೀ ವೃಕ್ಷವು ನಿಕಟ ಸಂಪರ್ಕ ಹೊಂದಿದ್ದುದಾದರೆ ಆಗ ಪಶ್ಚಿಮಕ್ಕೆ ಮೂರು ಮೊಳ ದೂರದಲ್ಲಿ ಹದಿನೇಳು ಮೊಳ ಆಳದಲ್ಲಿ ಈಶಾನ್ಯ ದಿಕ್ಕಿನತ್ತ ಹರಿಯುತ್ತಿರುವ ನೀರು ಸೆಲೆಯಿರುತ್ತದೆ (ಅಧ್ಯಾಯ 1. ಶ್ಲೋ. 32, 4).

ರೋಹಿತ ವೃಕ್ಷವು ಬದರ ವೃಕ್ಷದೊಡನೆ ನಿಕಟ ಸಂಪರ್ಕ ಹೊಂದಿದ್ದರೆ, ಆಗ ಪಶ್ಚಿಮಕ್ಕೆ ಮೂರು ಮೊಳ ದೂರದಲ್ಲಿ ಹದಿನಾರಾಳುದ್ದ ಆಳದಲ್ಲಿ ನೀರಿರುತ್ತದೆ; ಅರ್ಧ ಆಳುದ್ದ ತಳದಲ್ಲಿ ಬಿಳಿ ಜೇಡಿಯೊಂದಿಗೆ ಚೇಳು ಕಂಡುಬರುವುದಲ್ಲದೆ ಅದರ ಕೆಳಗೆ ಪ್ಯಾದೂವಾದ ಶಿಲೆ, ದಕ್ಷಿಣಕ್ಕೆ ಸಣ್ಣ ನೀರು ಝರಿ ಮತ್ತು ಉತ್ತರಕ್ಕೆ ತಂಪಾದ ಸಿಹಿ ನೀರಿನ ಸಮೃದ್ಧ ತೊರೆ ಇರುತ್ತದೆ (ಅಧ್ಯಾಯ 1, ಶ್ಲೋ. 32, 5).

ಕರ್ಕಂಧೂ ವೃಕ್ಷವು ಪೀಲು ವೃಕ್ಷದೊಂದಿಗೆ ನಿಕಟ ಸಂಪರ್ಕ ಹೊಂದಿದ್ದರೆ ಆಗ ಪೂರ್ವಕ್ಕೆ ಮೂರು ಮೊಳ ದೂರದಲ್ಲಿ ಇಪ್ಪತ್ತು ಆಳುದ್ದ ಕೆಳಗೆ ಪುಷ್ಕಲವಾಗಿ ಉಪ್ಪು ನೀರು ದೊರೆಯುತ್ತದೆ. ಬಿಲ್ವ ಅಥವಾ ಕೀರ ವೃಕ್ಷಗಳು ಕಕುಭ (ಟರ್ಮಿನೇಲಿಯ ಅರ್ಜುನ) ವೃಕ್ಷಕ್ಕೆ ಸಮೀಪವರ್ತಿಗಳಾಗಿದ್ದರೆ ಆಗ ಪಶ್ಚಿಮಕ್ಕೆ ಎರಡು ಮೊಳ ದೂರದಲ್ಲಿ ಇಪ್ಪತ್ನಾಲ್ಕು (ಅಥವಾ ಇಪ್ಪತ್ತೈದು) ಆಳುದ್ದ ತಳದಲ್ಲಿ ಸಮೃದ್ಧವಾಗಿ ಸಿಹಿ ನೀರು ಇರುತ್ತದೆ (ಅಧ್ಯಾಯ 1, ಶ್ಲೋ. 32. 6).

ಒಂದೇ ಎಡೆಯಲ್ಲಿ ಐದು ಹುತ್ತಗಳು ಇದ್ದು ಅವುಗಳಲ್ಲಿ ಮಧ್ಯದ್ದು ಬಿಳಿಬಣ್ಣ ಹೊಂದಿದ್ದರೆ ಆಗ ಐವತ್ತೈದು ಆಳುದ್ದ ತಳದಲ್ಲಿ ನೀರಿರುತ್ತದೆ. ಹುತ್ತದ ಮೇಲೆ ಕುಶ ದರ್ಭೆಯು ಬೆಳೆದಿದ್ದುದಾದರೆ ಅಥವಾ ಮಾಸಲು ಬಿಳಿಬಣ್ಣದ ಅಪೂರ್ವ ಕಂಡುಬಂದಲ್ಲಿ ಅದರ ಕೆಳಗೆ ಇಪ್ಪತ್ತೊಂದು ಆಳುದ್ದ ತಳದಲ್ಲಿ ನೀರು ಕಂಡುಬರುತ್ತದೆ (ಅಧ್ಯಾಯ 1, ಶ್ಲೋ. 32, 7).

ಮೂರು ಹುತ್ತಗಳು ಮತ್ತಿತರ ವೃಕ್ಷಗಳ ನಡುವೆ, ಮಧ್ಯದಲ್ಲಿ ರೋಹಿತ ವೃಕ್ಷವಿದ್ದುದಾದರೆ ಅಲ್ಲಿ ನಲವತ್ತು ಆಳುದ್ದ ತಳದಲ್ಲಿ ನೈಸರ್ಗಿಕ ಶಿಲೆಗಳ ಹಾಸಿನ ಕೆಳಗೆ ಯಥೇಚ್ಛವಾಗಿ ನೀರು ದೊರಕುತ್ತದೆ. ಅಲ್ಲಿ ಅರವತ್ತಾಳುದ್ದ ತಳದಲ್ಲಿ ಹಳದಿ ಬಣ್ಣದ ಜೇಡಿ ಇರುತ್ತದೆ. ಪಶ್ಚಿಮಕ್ಕೆ ಶಮಿ ಮತ್ತು ಪಲಾಶ ವೃಕ್ಷಗಳು ಪರಸ್ಪರ ಸಮೀಪದಲ್ಲಿರುವೆಡೆಯಲ್ಲಿ ಒಂದಾಳುದ್ದ ಕೆಳಗೆ ಮರಳಿರುತ್ತದೆ (ಅಧ್ಯಾಯ 1, ಶ್ಲೋ. 32, 7).

ಹುತ್ತದ ದಕ್ಷಿಣಕ್ಕೆ ತಿರುಚು ತಿರುಚಾದ ಶಮಿ ವೃಕ್ಷವಿದ್ದುದಾದರೆ ಅದರ ಪಶ್ಚಿಮಕ್ಕೆ ಹಿಂದಿನವರ ಅಭಿಪ್ರಾಯದಂತೆ ಇನ್ನೂರು ಆಳುದ್ದ ಕೆಳಗೆ ಸಿಹಿ ನೀರಿರು

ತ್ತದೆ ಅಥವಾ ಬಿಳಿ ಮುಳ್ಳುಗಳು ಇದ್ದುದಾದರೆ...ದಕ್ಷಿಣಕ್ಕೆ ಎಂಬತ್ತಾಳುದ್ದ ತಳದಲ್ಲಿ ನೀರಿರುತ್ತದೆ. ಹುತ್ತದ ಸಮೀಪದಲ್ಲಿ ನಿಪ ವೃಕ್ಷವಿದ್ದುದಾದರೆ ಅಲ್ಲಿ ಅರ್ಧಾಳುದ್ದ ತಳದಲ್ಲಿ ಸರ್ಪವಿರುವುದಲ್ಲದೆ ಇಪ್ಪತ್ತೈದಾಳುದ್ದ ಕೆಳಗೆ ನೀರು ಗೋಚರಿಸುತ್ತದೆ (ಅಧ್ಯಾಯ 1, ಶ್ಲೋ. 32, 10).

ಭೂಮಿಯ ಮೇಲೆ ಪಸ(?) ಗಿಡಗಳು ದಟ್ಟವಾಗಿ, ಒರಟಾಗಿ ಬೆಳೆದಿದ್ದಲ್ಲಿ ಇಪ್ಪತ್ತೈದಾಳುದ್ದ ಕೆಳಗೆ ನೀರಿರುವುದಲ್ಲದೆ ಮೂರಾಳುದ್ದ ಕೆಳಗೆ ಕಪ್ಪು ಇಲ್ಲವೆ, ಮಾಸಲು ಬಿಳಿ ಬಣ್ಣ ಜೇಡಿ ಗೋಚರಿಸುತ್ತವೆ. ಮಹಾನಿಂಬ ವೃಕ್ಷದ (ಮಿಲಿಯ ಒಜಾಜನ್) ಎಡಕ್ಕೆ ಎಪ್ಪತ್ತು ಆಳುದ್ದ ದೂರದಲ್ಲಿ ನೀರಿರುತ್ತದಲ್ಲದೆ ಅಲ್ಲಿಗೆ ಬರುವ ಬಹು ಸಂಖ್ಯೆಯ ಪಕ್ಷಿಗಳು ಮಧುರ ಕಂಠದಿಂದ ಕೂಡಿದ್ದು ಅವುಗಳ ಗರಿಗಳು ಮೃದು ಹಾಗೂ ನಯವಾಗಿದ್ದು ಸ್ವಚ್ಛವಾಗಿರುತ್ತವೆ (ಅಧ್ಯಾಯ 1, ಶ್ಲೋ. 32, 11).

ಅತಿ ಹಸುರು ಎಲೆಗಳುಳ್ಳ ಪೊದೆ ಅಥವಾ ನಿಪ–ಸಿಪ(?) ವೃಕ್ಷ ಇರುವೆಡೆಯಲ್ಲಿ ಹದಿನೈದು ಆಳುದ್ದ ಕೆಳಗೆ ನೀರು ಕಂಡುಬರುವುದಲ್ಲದೆ ಪೂರ್ವೀಯ ಸರ್ಪವೂ ಗೋಚರಿಸುತ್ತದೆ. ಈ ಮೇಲೆ ತಿಳಿಸಿದ ಲಕ್ಷಣಗಳೆಲ್ಲ ಮರುಭೂಮಿ ಪ್ರದೇಶದಲ್ಲಿ ನೀರು ಶೋಧನೆಗೆ ಕೆಲವು ಸೂತ್ರಗಳಾಗಿವೆ. ಇನ್ನೂ ಹೆಚ್ಚಿನವುಗಳನ್ನು ಬುದ್ಧಿಮತಿಗಳು ತಮ್ಮ ಸಾಮಾನ್ಯ ಬದುಕಿನಲ್ಲಿ ಗಮನಿಸಬಲ್ಲರಲ್ಲದೆ ಇತರ ಕೃತಿಗಳಿಂದಲೂ ತಿಳಿಯಬಹುದಾಗಿದೆ (ಅಧ್ಯಾಯ 1, ಶ್ಲೋ. 32, 12).

ಜೌಗು ಭೂಮಿಯಲ್ಲಿ ಜಲಮೂಲ ಶೋಧನೆ

ಜೌಗು ಪ್ರದೇಶವು ಹಸಿರು ಸಸ್ಯಗಳಿಂದ ಕೂಡಿದ್ದು ಭೂಮಿಯೆಲ್ಲ ಆರ್ದ್ರ ಯುಕ್ತವಾಗಿರುತ್ತದೆ. ಜೊತೆಗೆ ಸೊಳ್ಳೆಗಳು ತುಂಬಿರುತ್ತವೆ. ಅಂಥಲ್ಲಿ ಆಂಡ್ರೊಪೊಗಾನ್ ಮ್ಯುರಿಕೇಟಸ್ (ವಿರನ) ಅಥವಾ ವಲಯ(?)ಗಳು ಸಹ ಇರುತ್ತವೆ. ಕೆಳಗೆ ಒಂದಾಳುದ್ದ ತಳದಲ್ಲಿ ಬಹಳಷ್ಟು ಸಿಹಿ ನೀರಿರುತ್ತದೆ ಇಲ್ಲವೇ ತಗ್ಗು ಭೂಮಿಯಿದ್ದು ಮೂರು (?) ಆಳದಲ್ಲಿ ನೀರಿರುತ್ತದೆ (ಅಧ್ಯಾಯ 1, ಶ್ಲೋ. 33, 1).

ದಂತಿ, ರುದಂತಿ, (ಒಂದು ಸಣ್ಣ ರಸಭರಿತ ಸಸ್ಯ), ತ್ರಿವೃತ(ಇಪೊಮಿಯ ಟರ್‌ಪಿತಮ್), ಶಿವ(ಮಿಮೋಸಾ ಸುಮು), ಬೆಳವಣಿಗೆಯುಳ್ಳ ಹದ್ದು (ಗರುಡ ಎರಗಿದಂತೆ ಕ್ಷಿಪ್ರ ಬೆಳವಣಿಗೆಯುಳ್ಳ ಸುವರ್ಣ ? ಸುವರ್ಣ ಒಂದು ಬಗೆಯ ಬಳ್ಳಿ), ಜ್ಯೋತಿಷ್ಮತಿ (ಕಾರ್ಡಿಯೊಸ್ಪರ್ಮಮ್ ಹ್ಯಾಲಿಕಕ್ಯಬಮ್), ವ್ಯಾಘ್ರಪದಿ ಮತ್ತು / ಅಥವಾ ವಾರಾಹಿ (ಸೈಪೆರಸ್) ಸಸ್ಯಗಳಿರುವಲ್ಲಿ ಭೂಮಿಯ ಮೇಲ್ಭಾಗದಲ್ಲಿ ಅತಿಸಮೀಪದಲ್ಲೇ ನೀರಿರುತ್ತದೆ. ಮರ್ಕಟ (ಗ್ಲೈಸಿನ್ ಡೆಬಿಲಿಸ್), ಗುಂದ್ರುಕ ಕೆಲವ, ಲಕ್ಷ್ಮಣ (ಹೆಮಿಯೋನಿಟಿಸ್ ಕಾರ್ಡಿಫೋಲಿಯ), ಸಾಲಿಪಾತ (ಗ್ಲೈಸಿನ್ ಡೆಬಿಲೆಸ್), ಏಡಕ, ಬ್ರಾಹ್ಮೀ, ಪಿಂಡಾರಕ, ಸಾರಿವ ಮತ್ತು

ನಾಲ ಮುಂತಾದ ಜೊಂಡುಗಳಿದ್ದಲ್ಲಿ ಸಹ ನೀರು ಭೂಮಿಯಂಚಿಗೆ ತೀರಾ ಸಮೀಪ ದಲ್ಲಿರುತ್ತದೆ (ಅಧ್ಯಾಯ 1, ಶ್ಲೋ. 33, 2).

ದಟ್ಟ ವೃಕ್ಷ ಮತ್ತು ಬಳ್ಳಿಗಳ ದಕ್ಷಿಣದ ಕಡೆ ನಾಲ್ಕು ಮೊಳ ಆಳದಲ್ಲಿ ಸಮೃದ್ಧವಾಗಿ ನೀರಿರುತ್ತದೆ. ಕಣಿವೆ ಪ್ರದೇಶಗಳಲ್ಲಿ ಭೂಮಿಯು ತಗ್ಗಿನಲ್ಲಿದ್ದು ಹಸಿರು ಹುಲ್ಲಿನಿಂದಾವೃತವಾಗಿದ್ದು ಮರಳಿನಿಂದ ಕೂಡಿ ಸಮೃದ್ಧವಾಗಿ ನೀರು ಹೊಂದಿರುತ್ತದೆ (ಅಧ್ಯಾಯ 1, ಶ್ಲೋ. 33, 3).

ಜೌಗು ಪ್ರದೇಶದಲ್ಲಿ ನೀರು ಭೂಮಿಯ ಅಂಚಿಗೆ ತೀರಾ ಸಮೀಪದಲ್ಲಿರುವುದು ನಿಶ್ಚಯವಿರುವುದರಿಂದ ಹಾಗೂ ವಿಫಲವಾಗಿರುವುದರಿಂದ ಇಲ್ಲಿ ಕೆಲವೇ ಪ್ರಕಟ ಲಕ್ಷಣಗಳನ್ನು ವಿವರಿಸಲಾಗಿದ್ದು ಉಳಿದವನ್ನು ಕೈ ಬಿಡಲಾಗಿದೆ (ಅಧ್ಯಾಯ 1, ಶ್ಲೋ. 33, 4).

ಪರ್ವತಮಯ ಪ್ರದೇಶದಲ್ಲಿ ಜಲಮೂಲ ಶೋಧನೆ

ಸಾಕಷ್ಟು ವಿಚಾರಮಾಡಿ 'ಸಾರಸ್ವತ' ನಿಂದ ವಿವರಿತವಾದ ಕೆಲವು ಸ್ಪಷ್ಟ ಸೂತ್ರಗಳನ್ನು ಕೊಟ್ಟಿದ್ದೇನೆ. ಇಲ್ಲಿ ಈಗ ಪರ್ವತಮಯ ಪ್ರದೇಶಗಳಿಗೆ ಸಂಬಂಧಿಸಿದಂತೆ ವರಾಹ ಮಿತ್ರತರರು ಕೊಟ್ಟಿರುವ ವಿವರಗಳನ್ನು ಕೊಡುತ್ತೇನೆ (ಅಧ್ಯಾಯ 1, ಶ್ಲೋ. 34, 1).

ಬೋಧಿ ವೃಕ್ಷ, ಉದುಂಬರಿಕ (ಅತ್ತಿ), ಪಲಾಶ ಮತ್ತು ನ್ಯಗ್ರೋಧ (ಆಲ) ವೃಕ್ಷಗಳು ಒಂದೆಡೆಯಲ್ಲಿ ಕಂಡುಬರುವ ಸ್ಥಳಗಳಲ್ಲಿ ಶುಷ್ಕ ಮತ್ತು ಜೌಗು ಪ್ರದೇಶಗಳೆರಡರಲ್ಲೂ ಮೂರಾಳುದ್ದ ಕೆಳಗೆ ನೀರು ಕಂಡುಬರುತ್ತದೆ (ಅಧ್ಯಾಯ 1, ಶ್ಲೋ. 34, 2).

ಹೊಳಪಿನ ದಪ್ಪ ಎಲೆಗಳನ್ನು ಹೊಂದಿರುವ ವೃಕ್ಷಗಳು ಹಾಗೂ ಕ್ಷೀರ ರಸವನ್ನು ಹೊಂದಿರುವ ಪೊದೆಗಳು ಮತ್ತು ಬಳ್ಳಿಗಳಿರುವ ಸ್ಥಳದಲ್ಲಿ ಅತಿ ಸಮೀಪದಲ್ಲೇ (ಭೂಮಿ ಅಂಚಿನಿಂದ) ಸಿಹಿ ನೀರಿರುತ್ತದಲ್ಲದೆ ಆ ಪ್ರದೇಶವು ಮಧುರ ಕಂಠದ ಹಕ್ಕಿಗಳ ನೆಲೆವೀಡಾಗಿರುತ್ತದೆ (ಅಧ್ಯಾಯ 1, ಶ್ಲೋ. 34, 3).

ಖರ್ಜೂರ, ಜಂಬು, ಶತಪತ್ರ, ನಿಪ, ಸಿಂಧೂವರ, ವಟ, ಸಪ್ತಪಾಲ, ಉದುಂಬರಿ, ಕರಣ್ವ(?) ಮತ್ತು ವಿಭೀತಕ (ತಾರೀಕಾಯಿ) ವೃಕ್ಷಗಳು ಬೆಳೆಯುವ ಪ್ರದೇಶದಲ್ಲಿ ಮೂರಾಳುದ್ದ ತಳದಲ್ಲಿ ನೀರು ಕಂಡುಬರುತ್ತದೆ (ಅಧ್ಯಾಯ 1, ಶ್ಲೋ. 34, 4).

ಜಾತಿ, ಕುಸ್ತುಕ, ಚಂಪಕ (ಸಂಪಿಗೆ) ಇತ್ಯಾದಿ ಹೂ ಬಿಡುವ ಮರಗಿಡಗಳು ಮತ್ತು ದಾಳಿಂಬೆ, ನಿಂಬೆ(ಸಿಟ್ರಸ್ ಆಸಿಡ್) ಮತ್ತು ಮಾದಳ ಮುಂತಾದ ಹಣ್ಣಿನ ಮರಗಳು

ಬೆಳೆಯುವಂತಹ ಸ್ಥಳದಲ್ಲಿ ನೀರು ಭೂಮಿಯ ಕೆಳಗಿರುತ್ತದೆಂದು ಹೇಳಲಾಗಿದೆ (ಅಧ್ಯಾಯ 1, ಶ್ಲೋ. 34, 5).

ಪರ್ವತ ಪ್ರದೇಶದಲ್ಲಿ ತಾಳವೃಕ್ಷ ತೇಗು, ಕಾಂಚನಾರ, ವೇತಸ ಅಥವಾ ಇನ್ನಾವುದೇ ಬಗೆಯ ಮರ ಬೆಳೆದಿರುವುದು ಕಂಡುಬಂದಲ್ಲಿ ಸಿಹಿನೀರು ವಿಪುಲವಾಗಿರುತ್ತದೆ (ಅಧ್ಯಾಯ 1. ಶ್ಲೋ. 34, 6).

ಈ ಹಿಂದೆ ನಿರ್ಝರ(ಜಲಪಾತ ಅಥವಾ ನೀರು ಬೀಳು) ಎಂದು ವಿವರಿಸಲಾಗಿರುವ ಜಲಪಾತಗಳು ಪರ್ವತಮಯ ಪ್ರದೇಶದಲ್ಲಿ ಕಂಡುಬರುತ್ತವೆ. ಇವು ಬಂಡೆಗಳ ನಡುವೆ ಬಿರುಕುಗಳಿಂದ ಇಲ್ಲವೇ ಮರಗಳ ಬೇರುಗಳಿಂದ ಹೊರಕ್ಕೆ ಚಿಮ್ಮುತ್ತವೆ....(?) (ಅಧ್ಯಾಯ 1, ಶ್ಲೋ. 34, 7).

ಆರ್ದ್ರ ಪರ್ವತಮಯ ಪ್ರದೇಶದಲ್ಲಿ ಸಸ್ಯಗಳ ಕೆಳಗೆ ಸಾಮಾನ್ಯವಾಗಿ ವಿಪುಲವಾಗಿ ನೀರು ಹರಿಯುವ ತೊರೆ ಇರುತ್ತದೆ: ಕೆಲವುವೇಳೆ ಇಂತಹ ತೊರೆಗಳು ಮಠಗಳಿರುವ ಪವಿತ್ರ ಸ್ಥಳಗಳಲ್ಲಿ ಸಹ ಇರುವುದು ಕಂಡುಬರುತ್ತದೆ. ಪೂರ್ವಕ್ಕೆ (ಎಂದರೆ ಸೂರ್ಯ) ಚಾಚಿಕೊಂಡಿರುವ ತಾಮ್ರದ ಪಾತ್ರೆಯಂತೆ ಹೊಳೆಯುವ ಬಂಡೆಗಳ ಸಮೀಪದಲ್ಲಿ ಗಾಜು ಮತ್ತು ವೈಢೂರ್ಯ (ಬೆಕ್ಕಿನ ಕಣ್ಣು)ದಂತೆ ಇಲ್ಲವೇ ಮುತ್ತಿನಂತೆ ಪ್ರಕಾಶಮಾನವಾದ ಇಲ್ಲವೇ ಪತಸದಂತೆ ನೆರೆ ಬಣ್ಣವಿರುವ ಅಥವಾ ಕಂದು ಬಣ್ಣವಿರುವ ಬಂಡೆಗಳೆಡೆಯಲ್ಲಿ ವಿಪುಲವಾಗಿ ನೀರಿರುತ್ತದೆ. ರೇಶಿಮೆ, ಜೇನು, ಪಾರಿವಾಳ ಇಲ್ಲವೇ ನಕ್ಷತ್ರ ಬಣ್ಣವಿರುವ ಶಿಲೆಗಳ ಮೇಲೆ ಅವು (ಆ ಶಿಲೆಗಳು)ಗಗನ ಚುಂಬಿಗಳಂತಿದ್ದರೂ ಸಹ ನೀರು ಕಂಡುಬರುತ್ತದೆ. ಆದರೆ ಅದು ಅತಿಶೀಘ್ರದಲ್ಲಿ ಬತ್ತಿ ಹೋಗುತ್ತದೆ(?) (ಅಧ್ಯಾಯ 1, ಶ್ಲೋ. 34, 8–10).

ಗರಸಿನೊಂದಿಗೆ ಕಪ್ಪು ಅಥವಾ ದಟ್ಟನೀಲ ವರ್ಣದ ಮಣ್ಣಿರುವಲ್ಲಿ ಅಥವಾ ಬಿಳಿಬಣ್ಣದ ಮಣ್ಣು ಮತ್ತು ಮರಳಿರುವೆಡೆಯಲ್ಲಿ ಇಲ್ಲವೇ ಹಳದಿ ಬಣ್ಣದ ಮಣ್ಣಿರುವ ಕಡೆ ಸಿಹಿ ನೀರಿರುತ್ತದೆ. ತಾಮ್ರದಂತೆ ಹೊಳಪುಳ್ಳ ಹಾಗೂ ಮರಳಿನೊಡನೆ ಮಿಶ್ರಿತವಾದ ಮಣ್ಣಿನಲ್ಲಿಯೂ ನೀರು,(ಅತ್ಯಲ್ಪವಿರುವುದಲ್ಲದೆ) ಒಗರಾಗಿರುತ್ತದೆ. ಕಂದು ಬಣ್ಣದ ಮಣ್ಣಿನಲ್ಲಿ ನೀರು ಕಹಿಯಾಗಿರುತ್ತದೆ ಮತ್ತು ನುಣುಪು (ನಯ ಅಂಚಿನ) ಮಣ್ಣಿನಲ್ಲಿ ಉಪ್ಪಾಗಿರುತ್ತದೆ (ಅಧ್ಯಾಯ 1, ಶ್ಲೋ. 34, 11–12).

ಪೊದೆಗಳು ಮತ್ತು ಕುರುಚಲುಗಳು ದುರ್ಬಲವಾಗಿದ್ದು, ಒಣಗಿ ತೆಳುವಾಗಿದ್ದು, ವಿರಳವಾಗಿ ಎಲೆಗಳನ್ನು ಪಡೆದಿರುವ ಕಡೆ ನೀರಿರುವುದಿಲ್ಲ. ಹಾಗೆಯೇ ಶ್ರೀಪರ್ಣ, ಸರ್ಜ, ಅಂಜನ, ಸಾಲ, ಬಿಲ್ವ, ಶಿಂಶಪ ಮತ್ತು ಧವಗಳು ಬೆಳೆಯುವಲ್ಲಿಯೂ ಸಹ ನೀರಿರುವುದಿಲ್ಲ. ಪರ್ವ, ಜಂಬು, ಕುಶ, ಪಿಚು, ಮಹಾನಿಂಬ, ಪಿಲು ಮತ್ತು ಯವಸ ಗಿಡಗಳನ್ನು ಶುಷ್ಕ ಜಮೀನಿನಲ್ಲಿ ನೀರೆರೆದು ಅಭಿವೃದ್ಧಿಪಡಿಸಿದಾಗ ಅವುಗಳ ಬೆಳವಣಿಗೆ ಪರ್ವತ

ಪ್ರದೇಶಗಳಲ್ಲಿ ಹೇಳಿದ ಗಿಡಗಳಿಂತ ¼ ಮೊಳ ಕಡಮೆ ಇರುತ್ತದೆ. ಭಾಗಶಃ ಶುಷ್ಕ ಹಾಗೂ ಭಾಗಶಃ ಆರ್ದ್ರವಾಗಿರುವ ಜಮೀನಿನಲ್ಲಿ ಹೇಳಿದ ಗಿಡಗಳಿಗಿಂತ ½ ಮೊಳ ಕಡಮೆಯಾಗಿರುತ್ತದೆ ಹಾಗೂ ಜೌಗು ಪ್ರದೇಶದಲ್ಲಿ ಹೇಳಿದ ಗಿಡಗಳಿಗಿಂತ 1 ಮೊಳ ಕಡಮೆಯಾಗಿರುತ್ತದೆ. ಬುದ್ಧಿವಂತರು ಯಾವ ಪ್ರದೇಶದಲ್ಲಿ ನೀರಿಗೆ ಕೊರತೆ, ಸಾಧಾರಣ ಪೂರೈಕೆ ಹಾಗೂ ಸಮೃದ್ಧಿ ಇದೆಯೆಂದೂ ಹಾಗೆಯೇ ಎಲ್ಲಿ ಇವಾವುದೂ ಇಲ್ಲವೋ ಇಲ್ಲವೆಂದೂ (ನೀರು ಸೌಲಭ್ಯ ಇಲ್ಲವೆಂದು) ತಿಳಿದುಕೊಂಡು ಅವಕ್ಕನುಗುಣವಾಗಿ ಮರಗಿಡಗಳ ಗಾತ್ರಗಳನ್ನು ನಿರ್ಧರಿಸಬೇಕು. ಈ ವಿಚಾರದಲ್ಲಿ ಮೇಲೆ ತಿಳಿಸಿದ ಲಕ್ಷಣಗಳು ಸರಿಯಾಗಿವೆ. ಪೂರ್ವ ಮತ್ತಿತರ ಮರಗಿಡಗಳನ್ನು ಋಷಿಗಳು ತಿಳಿಸಿದಂತೆ, ಅವು ಹೇಳಿರುವ ಪ್ರದೇಶಕ್ಕನುಗುಣವಾದ ಗಾತ್ರಗಳಲ್ಲಿಯ ಅಂತರಗಳಿಗೆ ತಕ್ಕಂತೆ ವಿಂಗಡಿಸಬೇಕು(ಅಧ್ಯಾಯ 1, ಶ್ಲೋ. 34. 13-16).

ಇಲ್ಲಿ (ಈ ಅಧ್ಯಾಯದಲ್ಲಿ) ಋಷಿಮುನಿಗಳಿಂದ ವಿವರಿಸಲ್ಪಟ್ಟಿರುವ ಜಲಮೂಲ ಶೋಧನೆಯ ಸೂತ್ರಗಳನ್ನು ತಿಳಿಸಿದ್ದೇನೆ. ಇಲ್ಲಿಗೆ ವಿಶ್ವಕ್ಕೆ ಪ್ರಿಯವಾದ ಉಲ್ಲಾಸ (ಅಧ್ಯಾಯ) ಮುಕ್ತಾಯವಾಗುತ್ತದೆ.

ಜಲಾಶಯಗಳ ರಚನೆ

ಭೂ ಅಂತರ್ಗತ ಜಲಸ್ಥಾನವನ್ನು ಕಂಡುಹಿಡಿದ ಬಳಿಕ ಚಕ್ರಪಾಣಿಯು ತನ್ನ 'ವಿಶ್ವವಲ್ಲಭ'ದ ಎರಡನೆಯ ಅಧ್ಯಾಯದಲ್ಲಿ ಜಲಾಶಯಗಳ ನಿರ್ಮಾಣ ಬಗೆಯನ್ನು ಕುರಿತು ವಿವರಿಸಿದ್ದಾನೆ.

ಜಲಸ್ಥಾನವನ್ನು ಕಂಡುಹಿಡಿದ ಬಳಿಕ ಹಳ್ಳಿಯ ಹೊರಗಡೆ ವಿವಿಧ ಆಕಾರ ಮತ್ತು ಗಾತ್ರಗಳ ಜಲಾಶಯಗಳನ್ನು ನಿರ್ಮಿಸಬೇಕಾಗುತ್ತದೆ: ಸ್ಥಳಾವಕಾಶದ ಲಭ್ಯತೆಗೆ ತಕ್ಕಂತೆ ಅವುಗಳಿಗಾಗಿ ಸೂಕ್ತ ನಿವೇಶನ ಹಾಗೂ ಆಳತೆಗಳನ್ನು ನಿರ್ದಿಷ್ಟಪಡಿಸಬೇಕು(ಅಧ್ಯಾಯ 2, ಶ್ಲೋ. 1).

ಹೀಗೆ ಕೃತಕವಾಗಿ ಕಟ್ಟಿರುವ ಜಲಾಶಯವನ್ನು ಹತ್ತು (ಆರು) ಆಕಾರಗಳಲ್ಲಿ ಕಟ್ಟಬಹುದಾಗಿದೆ. ಅವು: ವೃತ್ತಾಕಾರ, ಚತುರ್ಭುಜ (ಚಚ್ಚೌಕ), ತ್ರಿಕೋನ, ಬಹುಭುಜ, ದೀರ್ಘ ಚತುರಸ್ರ ಹಾಗೂ ಅರೆ ವೃತ್ತಾಕಾರ (ಅರ್ಧಚಂದ್ರಾಕಾರ) ಜಲಾಶಯಗಳನ್ನು ಅಗೆದ ಬಳಿಕ ಅವುಗಳ ನೀರುಧಾರಣ ಸಾಮರ್ಥ್ಯವನ್ನು ಕಂಡುಕೊಳ್ಳಬಹುದು. ಅತ್ಯುತ್ತಮ ಜಲಾಶಯ ಒಂದು ಸಾವಿರ ಫೋಲ್* (ಅಥವಾ 4000 ಮೊಳ) ಉದ್ದವಾಗಿರಬೇಕು. ಮಧ್ಯಮ ಆಳತೆಯದು ಇದರ ಅರ್ಧದಷ್ಟು,

ಅತಿಚಿಕ್ಕದೆಂಬುದು ಕಾಲು ಭಾಗದಷ್ಟು ಇದ್ದಿರಬೇಕು. ಇತರ ಜಲಾಶಯಗಳ ಗಾತ್ರವನ್ನು ಸ್ಥಳದ ಲಭ್ಯತೆಯ ಮೇಲೆ ನಿರ್ಧರಿಸಲಾಗುತ್ತದೆ. ಯಾವಾಗಲೂ ಹೆಚ್ಚು ನೀರು ಇರುವಂತಹ ದೊಡ್ಡ ಜಲಾಶಯವನ್ನು ಎರಡು ಬೆಟ್ಟಗಳ ನಡುವೆ ಕಟ್ಟುವುದರಿಂದ ಇಲ್ಲವೇ ಪರ್ವತದ ಕಣಿವೆ ಅಥವಾ ಬೆಟ್ಟದ ಮೇಲಿನ ವಿಶಾಲ ಸ್ಥಳದಲ್ಲಿ ಕಟ್ಟುವುದರಿಂದ ಕಡಮೆ ವೆಚ್ಚದಲ್ಲಿ ರಚಿಸಬಹುದಾಗಿದೆ. ಸುತ್ತಲೂ ವಿಶಾಲವಾದ ಎತ್ತರದ ಮೈದಾನ ಪ್ರದೇಶವಿದ್ದು, ವಿಪುಲವಾಗಿ ನೀರಿದ್ದು ನೀರು ಹರಿದು ಹೋಗಲು ನೀರ ಬಹಿದ್ವಾರ (ಕಿಂಡಿ) ವಿದ್ದಲ್ಲಿ ಅಲ್ಲಿ ಅಣೆಕಟ್ಟನ್ನು ಕಟ್ಟಿ ದೊಡ್ಡ ಜಲಾಶಯವನ್ನು ನಿರ್ಮಿಸಬಹುದು. ಬುದ್ಧಿವಂತರು ಅಣೆಕಟ್ಟಿನ ಮೇಲ್ಭಾಗದಿಂದ ಜಲಾಶಯದ ತಳಭಾಗದವರೆಗೆ ಇಳಿಯಲು ಮೆಟ್ಟಿಲುಗಳನ್ನು ಮಾಡಿಸಬೇಕು ಹಾಗೂ ಅನೇಕ ಕಾಲ ಭದ್ರವಾಗಿರಲು ಅಣೆಕಟ್ಟಿನ ಒಳಹೊರ ಭಾಗಗಳೆರಡಕ್ಕೂ ಸುಣ್ಣ ಗಾರೆಯ ಲೇಪನ ಮಾಡಬೇಕು (ಅಧ್ಯಾಯ 2, ಶ್ಲೋ. 3, 6-9).

ಎಲ್ಲ ಕಡೆಯಲ್ಲಿಯೂ ತಗ್ಗಾಗಿರುವ ಜಮೀನು ನೀರಿನಿಂದ ತುಂಬಿಕೊಂಡಾಗ ಕೊಳವಾಗಿ ಪರಿಣಮಿಸಿ ಅದೇ ಒಂದು ನೈಸರ್ಗಿಕ ಜಲಾಶಯವಾಗಿ ಪರಿಣಮಿಸುತ್ತದೆ. ಇದಕ್ಕೆ ಯಾವುದೇ ನಿಶ್ಚಿತ ಅಳತೆಗಳಿಲ್ಲ .... ಚಿಕ್ಕವು ಕುಳಿಗಳು. .... ಇತ್ಯಾದಿ (ಅಧ್ಯಾಯ 2, ಶ್ಲೋ. 10).

ಸರೋವರಗಳ ಮಧ್ಯದಲ್ಲಿ ಹಾಗೂ ದಂಡೆಗಳಲ್ಲಿ ರಾಜರ ಕ್ರೀಡಾ ಗೃಹಗಳಿರುತ್ತವೆ. ವಿಹಾರಾರ್ಥವಾಗಿ ಇಲ್ಲವೇ ಸಂತೋಷದ ಕೂಟಕ್ಕೆ ದೋಣಿಯೊಂದನ್ನು ಅಲ್ಲಿಟ್ಟಿರಬೇಕು ಇಲ್ಲವೇ ವಿಲಾಸ ಗೃಹಕ್ಕೆ ಹೋಗಲು ಸೇತುವೆ ಮಾರ್ಗವಿರಬೇಕು. (ಅಧ್ಯಾಯ 2, ಶ್ಲೋ. 11).

ಮೂರೇಣುಳ್ಳ (ಮೂಲೆ) ಹಾಗೂ ಒಂದೆಡೆ ನೀರುಗಂಡಿ ಇರುವ ತೊಟ್ಟಿಗೆ 'ನಂದ' ಎಂದು ಹೆಸರು. ಹಾಗೆಯೇ ಒಂಬತ್ತು ಏಣು ಮತ್ತು ಮೂರೆಡೆ ನೀರು ಕಿಂಡಿ ಇರುವುದಕ್ಕೆ 'ಜಯ'ವೆಂತಲೂ, ಹನ್ನೆರಡು ಏಣುಗಳಿದ್ದು ನಾಲ್ಕೆಡೆಗಳಲ್ಲಿ ನೀರು ಕಿಂಡಿ ಇರುವುದಕ್ಕೆ ವಿಜಯ ಎಂದೂ ಹೆಸರು (ಅಧ್ಯಾಯ 2, ಶ್ಲೋ. 12).

ಬಾವಿಗಳಲ್ಲಿ ಹಲವಾರು ವಿಧಗಳಿವೆ. ಶ್ರೀಮುಖ, ವಿಜಯ, ಪ್ರಾಂತ್ಯ, ದುಂದುಭಿ, ಮನೋಹರ, ಚೂಡಾಮಣಿ, ಭದ್ರ, ಜಯ, ನಂದ, ಮತ್ತು ಶಂಕರ, ಇವು ಅವುಗಳಲ್ಲಿ ಕೆಲವು. ಬಾವಿಯ ತಳದಲ್ಲಿ ಮರಳು ಇದ್ದುದಾದರೆ ಗಟ್ಟಿಯಾದ ಮರ ಮತ್ತು ಕಗರ (?) ಇತ್ಯಾದಿಯಿಂದ ಇಲ್ಲವೇ ಪುಸ ಇತ್ಯಾದಿಯಿಂದ ತಳಪಾಯವನ್ನು ಅದು ನೀರು ಚಿಲುಮೆಯನ್ನು ಅಡ್ಡಿಪಡಿಸದ ರೀತಿಯಲ್ಲಿ ಹಾಕಬೇಕು. ಒಂದು ಹಳ್ಳಿಯಲ್ಲಿರುವ ಬಾವಿಯು 'ಮುಸ್ಯಭೂತ'(?) ಆಗಿದ್ದರೆ ಆಗ ನೀರಿನ ಜಲಾಶಯವನ್ನು ಮಾಡಬಾರದು. ಅದು ಅಯಸ್ಕಾಂತ ಸೂಜಿಯ ಮಧ್ಯವರ್ತಿ ಸ್ಥಾನದಲ್ಲಿರುವುದರಿಂದ

ಕ್ರಮೇಣ ರೋಗೋತ್ಪತ್ತಿ ಆಗುತ್ತದೆ (?). ಇದು ಮಗು ಪಡೆಯುವ ಹೆಣ್ಣು ಮಕ್ಕಳು ಮತ್ತು ಸ್ತ್ರೀಯರಿಗೆ ಹಾನಿಕಾರಿ. ಯಾವುದೇ ದಿಕ್ಕಿನಲ್ಲೂ ಯಾವುದೇ ಬಗೆಯ ತೊರೆ ಇಲ್ಲದಿದ್ದಲ್ಲಿ ಆಗ ಯಾವುದಾದರೂ ಮಧ್ಯವರ್ತಿ ಸ್ಥಾನದಲ್ಲಿ ಬಾವಿಯೊಂದನ್ನು ತೋಡಬೇಕು ... ಇಲ್ಲವೇ ಹಳ್ಳಿಯಿಂದ ಸಾವಿರ ಕೋಲುಗಳಷ್ಟು (4000 ಮೊಳ) ದೂರದಲ್ಲಿ ತೋಡಿ, ಮರಗಿಡ ಮುಂತಾದವಕ್ಕೆ ನೀರು ಹಾಯಿಸಲು ಬಳಸಿದಾಗ ಹಾನಿಯಾಗುವುದಿಲ್ಲ (ಅಧ್ಯಾಯ 2, ಶ್ಲೋ. 14, 16-18).

ಕುಂಡ (ನೀರುಕುಳಿ, ಹೊಂಡ)ಗಳಲ್ಲಿ ನಾಲ್ಕು ಬಗೆಯಿರುತ್ತವೆ. ಅವು: ಭದ್ರ, ಸುಭದ್ರ, ಪರಿಘ ಮತ್ತು ನಂದ. ಮೊದಲನೆಯದು ನಾಲ್ಕು ಮೂಲೆಗಳನ್ನುಳ್ಳದ್ದು. ಎರಡನೆಯದು ಭದ್ರ. ಮೂರನೆಯದು ಸುಭದ್ರ ಹಾಗೂ ನಾಲ್ಕನೆಯದು ಮಧ್ಯದಲ್ಲಿ ಪೀಠಭದ್ರದೊಡನೆ ಸಂಪರ್ಕಹೊಂದಿರುತ್ತದೆ. ಅವು (ಅಂದರೆ ಕುಂಡಗಳು) ಪ್ರತಿ ಕಡೆಯಲ್ಲೂ 108 ಮೊಳ ಅಳತೆ ಹೊಂದಿರಬೇಕಲ್ಲದೆ ನಾಲ್ಕು ಕಂಡಿಗಳನ್ನು ಪ್ರತಿಯೊಂದೂ ಒಂದೊಂದು ದಿಕ್ಕಿನಲ್ಲಿರುವಂತೆ ಪಡೆದಿರಬೇಕು. ಒಂದು ಮೂಲೆಯಲ್ಲಿ ಆರೆ ಗಂಡಿಯಿರಬೇಕು. ಈ ಆರೆಗಂಡಿಯು ಸುತ್ತ ಚಚ್ಚೌಕ ಸ್ಥಳವಿದ್ದು, ಒಳಭಾಗದಲ್ಲಿ ವಾತಾಯನ ವ್ಯವಸ್ಥೆ ಹೊಂದಿರಬೇಕು (ಅಧ್ಯಾಯ 2, ಶ್ಲೋ. 19-20).

ತಾನಾಗಿ ಉಂಟಾದ ಅಂದರೆ ನೈಸರ್ಗಿಕ ಜಲಮೂಲಗಳು ಅನೇಕ ಆಕಾರ ಹೊಂದಿರಬಹುದು. ಅದರ ದಡಗಳನ್ನು ಕಲ್ಲು ಮತ್ತು ಸುಣ್ಣ ಗಾರೆಗಳಿಂದ ನೆಲಗಟ್ಟು ಮಾಡಬಹುದು (ಅಧ್ಯಾಯ 2, ಶ್ಲೋ. 21).

ಶಿಲೆಗಳನ್ನು ಒಡೆಯುವಿಕೆ (ಸೀಳುವಿಕೆ)

ಜಲಾಶಯವನ್ನು ತೋಡುವಲ್ಲಿ ಅನೇಕ ಶಿಲೆಗಳನ್ನು ಕತ್ತರಿಸಬೇಕಾಗುತ್ತದೆ. ಚಕ್ರಪಾಣಿಯು ತನ್ನ 'ವಿಶ್ವವಲ್ಲಭ'ದಲ್ಲಿಯ ಎರಡನೆಯ ಅಧ್ಯಾಯದಲ್ಲಿ ವಿವಿಧ ಬಗೆಯ ಶಿಲೆಗಳನ್ನು ಭೇದಿಸುವ ವಿವಿಧ ವಿಧಾನಗಳನ್ನು ಕೊಟ್ಟಿದ್ದಾನೆ. ಆ ಅಧ್ಯಾಯದಲ್ಲಿಯ ಕೆಲವು ಭಾಗಗಳನ್ನಿಲ್ಲಿ ಅನುವಾದಿಸಲಾಗಿದೆ.

ಉಳಿಯಿಂದ ಬಂಡೆಗಳನ್ನು ಸೀಳುವ ವಿವಿಧ ಸುಲಭ ವಿಧಾನಗಳು ಹಾಗೂ ಉಳಿಯೇಟು ಹಾಕಿದಾಗ ಕೊನೆಗಳು ಮೊಂಡಾಗದಿರಲು ಬಳಸಬಹುದಾದ ಮೂಲಿಕೆಗಳು ಮತ್ತು ದ್ರವಗಳ ಸೂತ್ರಗಳನ್ನು ಸಹ ತಿಳಿಸುತ್ತೇನೆ (ಅಧ್ಯಾಯ 2, ಶ್ಲೋ. 25).

ಮರದ ಚೂರುಗಳಿಂದ ಶುಭ್ರವಾಗಿ ಬಂಡೆಯನ್ನು ತೊಳೆದು ಪನಸ, ಜಂಬು, ಧವ ಮತ್ತು ಸಾದರ(?) ಹಾಗೂ ಶಿರೀಷ, ಬಂಧುಲಕ(ಅಕೇಶಿಯಂ ಅರೇಬಿಕ), ತಿಂಡುಕ, ಭಲ್ಲಾತಕ,

ಚಿಂಚ (ಹುಣಿಸೆ), ಖದಿರ, ಇತ್ಯಾದಿಗಳ ಕಷಾಯವನ್ನು ಚಿಮುಕಿಸಬೇಕು (ಅಧ್ಯಾಯ 2, ಶ್ಲೋ. 26).

ಈಗ ಜವ, ಹಾಲೊದಕ (ಮೊಸರಿನ ನೀರು) ಮತ್ತು ಕುಲತ್ಥ(?) ಗಳನ್ನು ಹುಳಿ ಅಂಬಲಿಯಲ್ಲಿ ಹಾಕಿ ಏಳು ದಿನಗಳವರೆಗೆ ಇಡಬೇಕು. ಬಳಿಕ ಬಂಡೆಯನ್ನು ಬೆಂಕಿಯಲ್ಲಿ ಕಾಯಿಸಿ(ಬಂಡೆ ಮೇಲೆ ಬೆಂಕಿಹಾಕಿ ಕಾಯಿಸಿ) ಮೇಲೆ ಹೇಳಿದ ಹುಳಿ ಹಿಡಿಸಿದ ದ್ರವವನ್ನು ಸುರಿಯಬೇಕು. ಇದರಿಂದ ಬಂಡೆಯು ಸೀಳೊಡೆಯುತ್ತದೆ (ಅಧ್ಯಾಯ 2, ಶ್ಲೋ. 26).

ಹೀಗೆ, ಬಂಡೆಯನ್ನು ಕಾಯಿಸಿ ಮೇಲೆ ತಿಳಿಸಿದ ವಸ್ತುಗಳ ಪುಡಿಯೊಂದಿಗೆ ಹುಳಿ ಹಿಡಿದ ದ್ರವವನ್ನು ಅದರ ಮೇಲೆ ಚಿಮುಕಿಸಿದ ಬಳಿಕ ಇನ್ನೊಮ್ಮೆ ಇದೇ ಕ್ರಮ ಅನುಸರಿಸಿ ಕಡೆಯಲ್ಲಿ ಹಾಲೊದಕದಿಂದ (?) ಚಿಮುಕಿಸಿದರೆ ಬಂಡೆ ಸೀಳುಬಿಡುವುದು ಖಂಡಿತ (ಅಧ್ಯಾಯ 2, ಶ್ಲೋ. 27 28).

ಕಠಿಣ ಶಿಲೆಯನ್ನು ಮೊದಲು ಚೆನ್ನಾಗಿ ಕಾಯಿಸಿ ಬಳಿಕ ಬೇವು, ಕಾರ್ಬೊನೇಟ್ ಸರ್ಜಿಕ (ಸೋಡಾ), ಅರಿಶಿನ, ಬಾಲಮೆಣಸು, ಸಾಸಿವೆ ಎಣ್ಣೆ ಮತ್ತು ಹುಳಿ ಅಂಬಲಿ ಮಿಶ್ರಿತ ನೀರು ಇವುಗಳ ದ್ರವವನ್ನು ಅದರ ಮೇಲೆ ಚಿಮುಕಿಸುವುದರಿಂದ ಬಂಡೆಯನ್ನು ಅತ್ಯಲ್ಪಶ್ರಮದಲ್ಲಿ ಸೀಳಬಹುದು (ಅಧ್ಯಾಯ 2, ಶ್ಲೋ. 29).

ಬೇವು, ಅಪಮಾರ್ಗ (ಅಖ್ಯರಾಂತಸ್ ಆಸ್ಪೆರಾ), ಗುಡುಂಚಿ (ಕಾಪ್ಸ್ಯುಲಸ್ ಕಾರ್ಡಿಫೋಲಿಯಸ್), ಎಳ್ಳು, ನಾಳ (ಕಮಲದ ದಂಟು), ತಿಂದುಕ ಇವುಗಳ ಬೊಗಟೆ ಮತ್ತು ಎಲೆಗಳ ಬೂದಿ(ಭಸ್ಮ) ಹಾಗೂ ಎಣ್ಣೆ, ಹಾಲೊದಕ ಮತ್ತು ಬೆಲ್ಲಗಳೊಡಗೂಡಿದ ನೀರು, ಬೀಸಾಸುದ ಮತ್ತು ಸರೋವರದುಪ್ಪು ಇವೆಲ್ಲವುಗಳನ್ನು ಹಸುವಿನ ಗಂಜಳ ದಲ್ಲಿ ಹಾಕಿ ಸಿದ್ಧಪಡಿಸಿದ ದ್ರವವನ್ನು ಕಾದ ಶಿಲೆಯಮೇಲೆ ಸುರಿಸಿದಾಗ ಅದು ಬಿರಿಯುತ್ತದೆ (ಅಧ್ಯಾಯ 2, ಶ್ಲೋ. 30–31).

ಶಿಲೆಯನ್ನು ಸೀಳುವ ಮುನ್ನ ಕುರಿಯುಕೊಂಬು, ಅರ್ಕ (ಎಕ್ಕ)ಗಿಡದ ಹಾಲು, ಪಾರಿವಾಳ ಮತ್ತು ಇಲಿಮರಿಗಳ ಹಿಕ್ಕೆ ಇವುಗಳಿಂದ ಉಳಿಯನ್ನು ಲೇಪಿಸಬೇಕು. ಬಳಿಕ ಉಳಿಯಿಂದ ಬಡಿಯತೊಡಗಿದಾಗ ಅದರ (ಉಳಿಯ ತುದಿ) ಮೇಲೆ ಎಣ್ಣೆ ಮತ್ತು ಹಾಲೊದಕ ಮಿಶ್ರಣವನ್ನು ತೊಟ್ಟು, ತೊಟ್ಟಾಗಿ ಸುರಿಯುವುದರಿಂದ ಉಳಿಯತುದಿ ಮೊಂಡಾಗುವುದಿಲ್ಲ (ಅಧ್ಯಾಯ 2, ಶ್ಲೋ. 32).

ಉಳಿಯ ಅಂಚನ್ನು ಕಾಯಿಸಿ, ಎಣ್ಣೆ ಮತ್ತು ಹಾಲೊಡಕಗಳ ಮಿಶ್ರಣದಲ್ಲಿ ಅದ್ದಿದಾಗ ಅದಕ್ಕೆ ತಾಳಿಕೆ ಬರುವ ಹದ ಉಂಟಾಗುತ್ತದೆ. 'ಭೃಂಗಾರಕ' ರಸ ಮತ್ತು ಎಣ್ಣೆ ಇಲ್ಲವೇ ಬೆಲ್ಲ ಮತ್ತು ಎಣ್ಣೆಗಳ ದ್ರಾವಣದಲ್ಲಿ ಅದ್ದುವುದರಿಂದಲೂ ಇದೇ ಪರಿಣಾಮವುಂಟಾಗುತ್ತದೆ (ಅಧ್ಯಾಯ 2, ಶ್ಲೋ. 33).

ಬಾಳೆಯ ಹಣ್ಣಿನ ರಸದಲ್ಲಿ ಕ್ಷಾರವನ್ನು ಬೆರೆಸಿ ಒಂದು ದಿನದವರೆಗೆ ಬಿಟ್ಟು (ಹುಳಿಯಾಗಲು) ಬಳಿಕ ಕೆಂಪಗೆ ಕಾಯಿಸಿದ ಉಳಿಯನ್ನು ಅದ್ದುವುದರಿಂದ ಲೋಹವನ್ನು ಕತ್ತರಿಸುವ ಸಮಯದಲ್ಲಿಯೂ ಸಹ ಉಳಿ ಮುರಿಯುವುದಿಲ್ಲ ಹಾಗೂ ಬಂಡೆಯ ಮೇಲೆ ಹೊಡೆದು ಬಡಿಯುವಾಗಲೂ ಮೊಂಡಾಗುವುದಿಲ್ಲ (ಅಧ್ಯಾಯ 2, ಶ್ಲೋ. 34).

ದ್ರಾಕ್ಷಾರಸ, ಹಾಲು, ಬೂದಿಯಿಂದ ಪಡೆದ ಕ್ಷಾರ, ಜೇನು ಮತ್ತು ಎಕ್ಕದ ಗಿಡದ ಹಾಲು. ಇವುಗಳನ್ನು ಸರಿಯಾದ ಪ್ರಮಾಣದಲ್ಲಿ ಸೇರಿಸಿ (?) ಎಣ್ಣೆಯಲ್ಲಿ ಮಿಶ್ರ ಮಾಡಿದಾಗ, ಉಪಕರಣಗಳ ತುದಿಗಳು (ಕಾಯಿಸಿ ಈ ದ್ರಾವಣದಲ್ಲಿ ಅದ್ದಿದಂಥವು) ಲೋಹಗಳನ್ನು ಕತ್ತರಿಸುವಾಗಲೂ ಸಹ ಮೊಂಡಾಗುವುದಿಲ್ಲ (ಅಧ್ಯಾಯ 2, ಶ್ಲೋ. 35).

ಉಪ್ಪಾಗಿ ಇಲ್ಲವೇ ತೀಕ್ಷ್ಣರುಚಿಯುಳ್ಳ ನೀರಿನ ಬಾವಿಯಲ್ಲಿ [illegible] ಪುಡಿಯನ್ನು ಸುರಿದಾಗ ನೀರು ಸಿಹಿಯಾಗಿ ಪರಿವರ್ತನೆಗೊಳ್ಳುತ್ತದೆ (ಅಧ್ಯಾಯ 2, ಶ್ಲೋ. 36)

ಕಕುಭ್, ಮುಸ್ತ, ಉಶೀರ, ಇವುಗಳ ಪುಡಿ ಮತ್ತು ರಸ, ಧಾತ್ರಿ, ಕತಕ, ರೋಧ್ರ (ಸಿಂಪ್ಲೋಕಸ್ ರೆಸಿಮೋಸ) ಮತ್ತು ರಾಜಾಸನ (?) ಇವುಗಳ ಹಣ್ಣುಗಳು. ಇವನ್ನೆಲ್ಲ ಕಲಕಿ ಬಗ್ಗಡಗೊಂಡ ಘಾಟುವಾಸನೆಯುಳ್ಳ ಮಡುಗಳು ಮುಂತಾದುವುಗಳ ನೀರಿನಲ್ಲಿ ಸುರಿದಾಗ ನೀರು ತಿಳಿಯಾಗುವುದಲ್ಲದೆ ಸಿಹಿಯಾಗುತ್ತದೆ (ಅಧ್ಯಾಯ 2, ಶ್ಲೋ. 37).

ಅಭಯ (ಟರ್ಮಿನೇಲಿಯಾ ಚೆಬುಲ)ದ ರಸ, ಪಥ್ಯ (ಟರ್ಮಿನೇಲಿಯಾ ಸಿಟ್ರಿನ), ಕುಷ್ಠ, ಪಲಕ್ಯ, ಕುಗುಧ್ಮ (?) ಗಳ ಪುಡಿ ಮತ್ತು ಕಟಕದಣ್ಣು (ಸ್ಟ್ರಿಕ್ನಾಸ್ ಪೊಟೆಟೋರಮ್) ಗಳನ್ನು ಖದಿರ ಮತ್ತು ಶ್ರೀಫಲ ಹಣ್ಣುಗಳ ಸಾರದೊಂದಿಗೆ ಕದಡಿ ಬಗ್ಗಡವಾದ ಇಲ್ಲವೇ ಉಪ್ಪುನೀರುಳ್ಳ ಬಾವಿಯಲ್ಲಿ ಹಾಕಬೇಕು. ಇದರಿಂದ ಅದು ಒಮ್ಮೆಲೇ ತಿಳಿಯಾಗುವುದಲ್ಲದೆ ನೀರೂ ಸಿಹಿಯಾಗುತ್ತದೆ (ಅಧ್ಯಾಯ 2, ಶ್ಲೋ. 38).

ಅಧ್ಯಾಯ 3

ಸಾಗುವಳಿ ಮತ್ತು ಸಾಗುವಳಿ ಉಪಕರಣಗಳು

ಕೃಷಿ ಉತ್ಪಾದನೆಯಲ್ಲಿ ಮಣ್ಣಿನ ಸಾಗುವಳಿ ಕಾರ್ಯವು ಮೊದಲ ಮತ್ತು ಮುಖ್ಯ ಕೆಲಸವಾಗಿರುತ್ತದೆ. ಇದು ಬಿತ್ತನೆಗೆ ಮಣ್ಣನ್ನು ಮಣ್ಣಿನ ಹೆಂಟೆಗಳನ್ನು ಒಡೆದು ನಯ ಗೊಳಿಸಿ, ಸಮಗೊಳಿಸುವ ಕಾರ್ಯ. ಇದರಿಂದ, ಬೆಳೆಗಳು ಆರೋಗ್ಯಕರವಾಗಿ ಬೆಳೆಯಲು ಬೇಕಾದ ಮಣ್ಣಿನ ಭೌತಿಕ ಗುಣಧರ್ಮವು ಸುಧಾರಿಸುತ್ತದೆ. ಈ ಕಾರ್ಯಕ್ಕೆ ನಾಗರೀಕತೆ ಉದಯವಾದಾಗಿನಿಂದಲೂ ನೇಗಿಲನ್ನು ಬಳಸಲಾಗುತ್ತಿದೆ.

ನೇಗಿಲು

ನೇಗಿಲು ಮತ್ತು ಕೋಲು ಇವೆರಡೂ ಮಾನವನ ನಾಗರೀಕತೆಯ ವಿಕಾಸದಲ್ಲಿ ಭೌತಿಕ ಹಾಗೂ ಸೌಂದರ್ಯೋಪಾಸನೆಯ ಎರಡು ಸಂಕೇತಗಳಾಗಿರುವಂತೆ ತೋರುತ್ತದೆ. ಹಿಂದೂಗಳ ನಂಬಿಕೆಯಲ್ಲಿ ಬಲರಾಮ ಮತ್ತು ಕೃಷ್ಣರು ಕೋಲನ್ನು ಹಿಡಿದಿರುವಂತೆ ಪ್ರತೀತರಾಗಿದ್ದಾರೆ. ಶತಪಥ ಬ್ರಾಹ್ಮಣದಲ್ಲಿ ಕೃಷಿ ಕೆಲಸ ಕಾರ್ಯಗಳನ್ನು ಚೊಕ್ಕವಾಗಿ ನೇಗಿಲು (ಉಳುಮೆ) ಹೊಡೆಯುವಿಕೆ, ಬಿತ್ತನೆ ಮಾಡುವಿಕೆ, ಕೊಯ್ಲು ಮತ್ತು ಒಕ್ಕಣೆ (ಒಕ್ಕುವಿಕೆ) ಗಳೆಂದು ಸಂಗ್ರಹವಾಗಿ ತಿಳಿಸಲಾಗಿದೆ.

ನೇಗಿಲನ್ನು ಗೌರವದಿಂದ ಕಾಣಲಾಗುತ್ತಿತ್ತು. ಅದೊಂದು ಪವಿತ್ರ ವಸ್ತುವೆಂದು ಪರಿಗಣಿಸಲಾಗುತ್ತಿತ್ತು. ಇದನ್ನು ಜಾತಕ ಕಥೆ ಸಂಖ್ಯೆ 218ರಲ್ಲಿ ನಿರೂಪಣಾ ರೂಪದಲ್ಲಿ ವಿವರಿಸಲಾಗಿದೆ: ಒಬ್ಬ ರೈತನು ತನ್ನ ಗೆಳೆಯನೊಬ್ಬನ ಬಳಿ 500 (ಐದುನೂರು)ನೇಗಿಲುಗಳನ್ನು ಇಟ್ಟಿರುತ್ತಾನೆ. ಆದರೆ ಆ ಗೆಳೆಯ ಕೊನೆಯಲ್ಲಿ ಮಿಥ್ಯಾ ಕಾರಣವೊಂದರಿಂದ ಅವುಗಳನ್ನೆಲ್ಲಾ ದುರುಪಯೋಗಪಡಿಸಿಕೊಳ್ಳಲು ಯತ್ನಿಸುತ್ತಾನೆ. ನೇಗಿಲುಗಳನ್ನು ಕದ್ದರೆ ಇಲ್ಲವೇ ದುರುಪಯೋಗಪಡಿಸಿಕೊಂಡರೆ ಅದರಲ್ಲೂ ಉಳುಮೆ ಕಾಲದಲ್ಲಿ ಈ ರೀತಿ ಮಾಡಿದಲ್ಲಿ ಅತಿ ಕಠಿಣ ಶಿಕ್ಷೆ ವಿಧಿಸಬಹುದಾಗಿತ್ತು. (Manu IX, 291). ಅವುಗಳನ್ನು ಕೊಡುಗೆ (ಬಹುಮಾನ)ಯಾಗಿ ಕೊಡುವುದು ಅತ್ಯಂತ ಶ್ಲಾಘ್ಯ ಕಾರ್ಯವಾಗಿತ್ತು. ಅಗ್ನಿಪುರಾಣದಲ್ಲಿ ನೇಗಿಲಿನ ಕುಳವನ್ನು ಬಂಗಾರದ ಹೊದಿಕೆ ಹಾಕಿಸಿ ದಾನ ಮಾಡಿದಲ್ಲಿ ದಾನಿಗೆ ಸ್ವರ್ಗದಲ್ಲಿ ದಿವ್ಯ ಪದವಿ ದೊರಕುತ್ತದೆ ಎಂದು ತಿಳಿಸಿದೆ (ಅಧ್ಯಾಯ XXXI). ಇದರಿಂದ ಅಂದು ನೇಗಿಲಿಗೆ ಎಷ್ಟು ಪೂಜ್ಯತೆ ಮತ್ತು ಗೌರವಗಳಿದ್ದುವೆಂಬುದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

ಪರಾಶರರ ವಿವರಣೆಯಂತೆ ನೇಗಿಲು ಅವಶ್ಯವಾಗಿ ಈ ಮುಂದೆ ತಿಳಿಸುವ 8 ಭಾಗಗಳನ್ನು ಹೊಂದಿರುತ್ತದೆ: ಈಷ(ನೇಗಿಲ ಈಸು), ಯುಗ (ನೊಗ), ನಿರ್ಯೋಲ (ಈಸು ಮತ್ತು ಕುಳವನ್ನು ಬಿಟ್ಟುಳಿದ ನೇಗಿಲ ಕೋಲು), ನಿರ್ಯೋಲ ಪಾಶಿ (ನಿರ್ಯೋಲವನ್ನು ಕುಳದೊಂದಿಗೆ ಭದ್ರಪಡಿಸುವ ಕಬ್ಬಿಣದ ಫಲಕಗಳು; ಎರಡು ಜೊತೆ ಪಾಶಿಕಗಳಿರುತ್ತವೆ); ಹಲಸ್ಥಾಣು (ನೇಗಿಲ ಕುಳವನ್ನು ಭದ್ರಪಡಿಸುವುದಕ್ಕೆ ಎದುರು ಕೊನೆಯಲ್ಲಿ ನಿರ್ಯೋಲಕ್ಕೆ ಭದ್ರಪಡಿಸಿದ ಬಲವಾದ ಮರದ ತುಂಡು; ಉಳುಮೆ ಮಾಡುವಾಗ ಬೇಸಾಯಗಾರನು ಇದನ್ನು ಹಿಡಿದಿರುತ್ತಾನೆ), ಅಡ್ಡಚಲ್ಲ (ಎತ್ತುಗಳನ್ನು ಕಟ್ಟುವ ನೊಗದ ಕೀಲು ಮೊಳೆಗಳು), ಶೌಲ (ನಿರ್ಯೋಲವನ್ನು ಈಸು ಮತ್ತು ಪಚ್ಚನಿ (ಮೊಳೆಗೋಲು)ಗಳಿಗೆ ಬಿಗಿಯಾಗಿ ಭದ್ರಪಡಿಸುವ ಪೆಟ್ಟಿನ ಮರದತುಂಡು.

ಈಷ ಉದ್ದವು ಐದು ಮೊಳ ಉದ್ದವಿರುತ್ತದೆ. ಸ್ಥಾಣು ಉದ್ದವು ಎರಡೂವರೆ ಮೊಳ, ನಿರ್ಯೋಲ ಒಂದೂವರೆ ಮೊಳ, ಯುಗ (?), ನಿರ್ಯೋಲ ಪಾಶ ಮತ್ತು ಅಡ್ಡಚಲ್ಲ (ಎಂದರೆ, ಬೆರಳಿನ ಅಗಲವು ಸುಮಾರು ¾ ಅಂಗುಲ ಎಂದಿಟ್ಟುಕೊಂಡರೆ ಸುಮಾರು 9 ಅಂಗುಲ) ಮತ್ತು ಶೌಲ (ಒಂದು ಮೊಳ). ಪಚ್ಚನಿ ಎಂಬುದನ್ನು ಬಿದಿರಿನಿಂದ ತಯಾರಿಸಲಾಗುತ್ತದೆ. ಇದಕ್ಕೆ ಮೇಲ್ತುದಿಯಲ್ಲಿ ಕಬ್ಬಿಣದ ಮೊಳೆ ಹಾಕಿರುತ್ತದೆ ಮತ್ತು ಸುಮಾರು 3 ರಿಂದ 4½ ಅಡಿ (ಅಂಗೈ ಮುಷ್ಟಿಯ ಉದ್ದ ಸುಮಾರು 4 ಅಂಗುಲವಿರುತ್ತದೆಂದು ತಿಳಿದರೆ) ಉದ್ದವಿರುತ್ತದೆ.

• ಹಲಧರ (ನಿರ್ಯೋಲವು ಭೂಮಿಯ ಮೇಲಿನಂತೆ ಇರುವ ಕಬ್ಬಿಣದ ಕೋಲು) ಪೀಪಾಯಿ ಆಕಾರದಲ್ಲಿದ್ದು ಸುಮಾರು ಒಂದು ಅಡಿ ಉದ್ದವಿರಬೇಕು. ಯೋಕ್ತ್ರ (ನೊಗದ ಹಗ್ಗ) ನಾಲ್ಕು ಮೊಳ ಉದ್ದವಿದ್ದು ಹಗ್ಗವು 5 ಮೊಳ ಉದ್ದವಿರುತ್ತದೆ ಮತ್ತು ಫಾಲ (ನೇಗಿಲುಗುಳ) ಒಂದು ಅಥವಾ ಒಂದು ಮೊಳ ನಾಲ್ಕು ಅಂಗುಲವಿರುತ್ತದೆ. ಪಾಶ ಹೆಚ್ಚು ಕಡಿಮೆ 7 ಅಂಗುಲ ಉದ್ದ, ಅರ್ಕ (ಎಕ್ಕ) (ಕೆಲೊಟ್ರೋಪಿಸ್ ಜೈಗ್ಯಾಂಟಿಯ)ದ ಎಲೆಯಂತಿರುತ್ತದೆ. ಮಯಿಕ (ಒಂದು ದೊಡ್ಡ ಅಂತರ್ಬೇಸಾಯದ ಉಪಕರಣ)ಕ್ಕೆ ಇಪ್ಪತ್ತೊಂದು ಮೊನಚಾದ ದಂತಗಳಿದ್ದು ಕುಂಟೆಯು ಒಂಬತ್ತು ಮೊಳ ಉದ್ದವಿರುತ್ತದೆ (Loc. cit., verses 110–117 and 96, 97).

ಪರಾಶರರು ವಿವರಿಸಿದ ನೇಗಿಲು ಮತ್ತು ಜೊತೆ ಉಪಕರಣಗಳಲ್ಲದೆ ಈ ಮುಂದೆ ತಿಳಿಸಿದ ಉಪಕರಣಗಳೂ ಸಹ ಕೃಷಿ ಕಾರ್ಯಗಳಲ್ಲಿ ಬಳಕೆಯಾಗುತ್ತಿದ್ದವು ; ಸೃಣಿ (ಕಂಡುಗೋಲು), ಖನಿತ್ರ (ಪಡೆಕುಂಟೆ), ಮುಸಲ (ಒನಕೆ), ಉಲೂಖಲ (ಒರಳು), ಶೂರ್ಪ (ಜಳ್ಳು ತೂರುವ ಮೊರ), ಧಾನ್ಯಕೃತ (ಮೊರ ಬೀಸಣಿಕೆ), ಚಾಲನೀ (ಜರಡಿ), ಸ್ಥಿವಿ (ಕಣಜ). ಮೇಧಿ (ಕಣದಲ್ಲಿ ಧಾನ್ಯವನ್ನು ಒಕ್ಕುವಾಗ ದನಗಳು ಸುತ್ತುವ ಕಂಬ (ಸ್ಥಂಭ).

ನೇಗಿಲು ವೇದಕಾಲದಿಂದಲೂ ತನ್ನ ಸ್ವರೂಪವನ್ನು ಕಾಯ್ದುಕೊಂಡುಬಂದಿದೆ. ಆಯಾ ಪ್ರದೇಶಗಳ ಜನತೆಯ ಪ್ರತಿಭೆಗನುಗುಣವಾಗಿ ಅಲ್ಪಸ್ವಲ್ಪ ಬದಲಾವಣೆಗಳನ್ನು ಹೊಂದಿರುತ್ತವೆ. ನೇಗಿಲುಗುಳದ ಮುಖ್ಯ ಭಾಗವು ಆರ್ಯರ ಕಾಲದಲ್ಲಿ ಭಲ್ಲೆಯಾಕಾರವಿದ್ದುದು ಇನ್ನೂ ಅದೇ ಆಕಾರವನ್ನು ಉಳಿಸಿಕೊಂಡಿವೆ. ಇದನ್ನು ಅನೇಕ ವೇಳೆ ಅಶ್ವತ್ಥ ವೃಕ್ಷದ ಎಲೆಯೊಡನೆ ಹೋಲಿಸಲಾಗುತ್ತದೆ. ಭಾರತೀಯ ನೇಗಿಲುಗಳಲ್ಲಿಯ ನೇಗಿಲುಗುಳದ ಆಕಾರ ಮತ್ತು ಗಾತ್ರಗಳು ಅನೇಕವೇಳೆ ಟೀಕೆಗೆ ಗುರಿಯಾಗಿವೆ. ಆದರೆ ಆಳವಾದ ಇಲ್ಲವೆ ಆಳವಲ್ಲದ ಉಳುಮೆಯ ಉಪಯುಕ್ತತೆಯು ವಿವಿಧ ಸಂದರ್ಭಗಳನ್ನು (ಪರಿಸ್ಥಿತಿಗಳನ್ನು) ಅವಲಂಬಿಸಿರುತ್ತದೆ. ಉದಾಹರಣೆಗೆ, ಅದು ಮಣ್ಣು ಮತ್ತು ಕೆಳಮಣ್ಣುಗಳ ಸ್ವಭಾವ, ಬೆಳೆ, ಋತುಮಾನ, ಗೊಬ್ಬರ ಇತ್ಯಾದಿ ಅಂಶಗಳಿಗೆ ಅನುಗುಣವಾಗಿರುತ್ತದೆ. ಆದುದರಿಂದ ಈ ವಿಚಾರದಲ್ಲಿ ಮುಂದಾಲೋಚನೆಯಿಲ್ಲದೆ ಟೀಕಿಸುವುದು ಯುಕ್ತವಲ್ಲ. ಅಗಲವಾದ ಭಲ್ಲೆಯಾಕಾರದ ನೇಗಿಲುಗುಳಗಳ ಜೊತೆ ಜೊತೆಗೇ ಅಗಲವಾದ ಕಬ್ಬಿಣದ ಚೂಪು ತುದಿಯುಳ್ಳ ಒಂದುವರೆ ಅಂಗುಲ ಅಗಲ ಹಾಗೂ ಮುಕ್ಕಾಲು ಅಂಗುಲ ದಪ್ಪವುಳ್ಳ ನೇಗಿಲು ಗುಳಗಳು ಸಹ ಇವೆ. ಆದರೆ, ಇವುಗಳಲ್ಲಿ ಮಣ್ಣು ಉಳುಮೆಗೆ ಪರದೆಯ ಬಗೆಯುವಷ್ಟೇ ಅರಿಸಿಕೊಳ್ಳಲು ಸಾಕಷ್ಟು ವೈಜ್ಞಾನಿಕ ಕಾರಣಗಳೂ ಇರುತ್ತವೆ. ಏಕೆಂದರೆ, ಅಲ್ಲಿ ಮೊದಲ ಬಗೆಯುದಕ್ಕೆ ಸ್ಥಾನವಿಲ್ಲ. ಪರಿಸ್ಥಿತಿಗಳಿಗೆ ತಕ್ಕಂತೆ ಹೊಂದಾಣಿಕೆ ಮಾಡಿಕೊಳ್ಳಲಾದ ಮತ್ತೊಂದು ಉದಾಹರಣೆಯು 'ಮಾಯ್' ಉಪಕರಣದಲ್ಲಿ ಕಂಡುಬರುತ್ತದೆ. ಇದಕ್ಕೆ ಸಂಸ್ಕೃತದಲ್ಲಿ ಮತಿ ಎಂದು ಹೆಸರು. ಇದನ್ನು ಇಂಗ್ಲಿಷ್‌ನಲ್ಲಿ ತಪ್ಪಾಗಿ ನಿಚ್ಚಣಿಕೆ ಎಂದು ಕರೆಯಲಾಗಿದೆ. ಇದು ಸಾಮಾನ್ಯವಾಗಿ ಒಂದು ಜೊತೆ ಅಥವ ಎದಿರು ಬೊಂಬುಗಳನ್ನು ಹೊಂದಿದ್ದು ಅವೆರಡನ್ನೂ ಸಮಾನಾಂತರದಲ್ಲಿರಿಸಲು ಅಡ್ಡ ಆಧಾರಗಳನ್ನೂ ಹೊಂದಿರುತ್ತವೆ: ಇದನ್ನು ಏಣಿಯಾಗಿಯೂ ಬಳಸಬಹುದಾಗಿದೆ. ಆದರೆ ವಾಸ್ತವವಾಗಿ ಇದು ಮಟ್ಟಸಿಕೆ ಉಪಕರಣವಾಗಿದೆ. ಅನೇಕ ಕಡೆಗಳಲ್ಲಿ ಮಾಯ್ ಎಂಬುದು ಚೌಕಾಕೃತಿಯ ಮರದ ತುಂಡಾಗಿದ್ದು ಮೃದುವಾದ ಗೋಡು ಮಣ್ಣುಗಳಿಗೆ ಸೂಕ್ತವಾಗಿರುತ್ತದೆ. ಬಂಕೂರಾದ ಮೈದಾನ ಪ್ರದೇಶದಲ್ಲಿ ಮಣ್ಣು ಗರಸಾಗಿದ್ದು ಬೆಣಚು ಚೂರುಗಳನ್ನು ಹೊಂದಿರುತ್ತದೆ. ಇಂಥಲ್ಲಿಯ ಮಾಯ್ ಒಂದು ಜೊತೆ ಮರದ ಹಲಗೆಗಳನ್ನು ಹೊಂದಿದ್ದು ಇವು ಮೇಲ್ಮುಖವಾಗಿ ಪರಸ್ಪರ ಬಾಗಿರುತ್ತವೆ. ಇವುಗಳನ್ನು ಕೆಲವೆಡೆ ಕಟ್ಟುವುದರಿಂದ ಕದಲದಂತೆ ಜೋಡಿಸಲಾಗಿರುತ್ತದೆ. ಇದರ ಉದ್ದೇಶವು ದ್ವಿಮುಖವಾದುದಾಗಿರುತ್ತದೆ. ಇದು ಉಳುಮೆ ಮಾಡಿದ ಮಣ್ಣನ್ನೆ ಸಮಮಟ್ಟದಲ್ಲಿರಿಸುತ್ತದೆ ಹಾಗೂ ಹಲಗೆಗಳ ನಡುವೆ ಬರುವ ಕಲ್ಲುಚೂರುಗಳನ್ನು ಒಂದೆಡೆ ಸಂಗ್ರಹಿಸುತ್ತದೆ. ಪರಾಶರರು 'ಮಾಯ್'ಅನ್ನು ಕುರಿತು ವಿವರಣೆ ನೀಡುವುದಿಲ್ಲ; ಆದರೆ ಅದು ಸುಮಾರು 14 (ಹದಿನಾಲ್ಕು) ಅಡಿ ಉದ್ದವಿರುತ್ತದೆ ಎಂದು ಮಾತ್ರ ತಿಳಿಸುತ್ತಾರೆ.

ಅವರ ವಿವರದಂತೆ ಜಮೀನು ವಿಸ್ತಾರವಾಗಿತ್ತೆಂದೂ ಮಾಯ್ ಸಹ ಸಾಮಾನ್ಯ ಸ್ವರೂಪದ್ದೆಂಬುದೂ ವ್ಯಕ್ತವಾಗುತ್ತದೆ. ಅವರು 'ವಿದ್ರ' ಎಂಬ ಮತ್ತೊಂದು ಉಪಕರಣವನ್ನು ಸಹ ತಿಳಿಸುತ್ತಾರೆ. ಇದನ್ನು ಬಂಗಾಳಿ ಭಾಷೆಯಲ್ಲಿ 'ಬಿದ' ಎನ್ನುತ್ತಾರೆ. ಇದು ಹೆಚ್ಚು ಬಳಕೆಯಲ್ಲಿರುವ ಭಾರತದ ಕುಂಟೆಯಾಗಿದೆ. ದಕ್ಷಿಣದಲ್ಲಿ ಇಂಥ ಅನೇಕ ಉಪಕರಣಗಳು ಬಳಕೆಯಲ್ಲಿವೆ. ಇವು ಪ್ರಾಯಶಃ ದ್ರಾವಿಡರು ನಿರ್ಮಿಸಿದವುಗಳು. ಇವುಗಳಲ್ಲಿ ಬಹು ಪಾಲಿನವು ಉತ್ತರ ಭಾರತದಲ್ಲಿ ಅಪರಿಚಿತವಾಗಿವೆ. ಕೃಷಿ ಸಲಕರಣೆ (ಉಪಕರಣ) ಗಳು, ಮನೆಯ ಪೀಠೋಪಕರಣಗಳಂತೆ ಅನೇಕ ಕಾರಣಗಳ ಪರಿಣಾಮವಾಗಿವೆ. ಡಾರ್ವಿನ್ನನ 'ಅತಿ ಯೋಗ್ಯನಷ್ಟೇ ಬಾಳಿಯಾನು' ಎಂಬ ವಾದವು ಜೀವಿ ಪ್ರಪಂಚದಲ್ಲಿ ಮಾತ್ರವಲ್ಲ, ಔದ್ಯಮಿಕ ಯಂತ್ರೋಪಕರಣಗಳಲ್ಲಿಯೂ ಸಹ ವಾಸ್ತವವಾಗಿದೆ. (Ancient Indian Life by J.C. Ray P. 32).

ಕೃಷಿ ಅವಶ್ಯಕತೆಗಳು ಮತ್ತು ಸಾಧನ ಸಾಮಗ್ರಿಗಳು

(ಈ ಭಾಗವನ್ನು ಕಶ್ಯಪರು ಸಂಸ್ಕೃತದಲ್ಲಿ ಬರೆದ ಕೃಷಿ ಪ್ರಕರಣ ಗ್ರಂಥದಿಂದ ಅನುವಾದಿಸಿದೆ). ಅಲ್ಲಿ ಕಶ್ಯಪರು ಈ ರೀತಿ ತಿಳಿಸುತ್ತಾರೆ.

ವ್ಯವಸಾಯದಲ್ಲಿ ಪ್ರವೀಣನಾದ ಬುದ್ಧಿಶಾಲಿ ರೈತನು ಹೊಸವರ್ಷದ ಶುಭ ದಿನವೊಂದರಲ್ಲಿ ಸಂತೋಷಚಿತ್ತದಿಂದ ತ್ರಿಮೂರ್ತಿಗಳ ಧ್ಯಾನಮಾಡಿ ಸಮೃದ್ಧ ಕೊಯ್ಲು ಮಾಡುವೆನೆಂಬ ಉದ್ದೇಶದಿಂದ ಕೃಷಿ ಕಾರ್ಯಗಳಿಗೆ ಕೈಹಾಕಬೇಕು (ಶ್ಲೋ. 230).

ಆತ ನಿಷ್ಕಪಟ ಭಾವನೆಯಿಂದ, ಭಕ್ತಿ ಪೂರ್ವಕವಾಗಿ ಭೂದೇವಿ ಮತ್ತು ಧಾನ್ಯಲಕ್ಷ್ಮಿಯರನ್ನು ನೆನೆದು ಪೂಜಿಸಬೇಕು. ಆ ಬಳಿಕ ಕೃಷಿ ಕಾರ್ಯಗಳಿಗೆ, ಬೇಕಾದ ಅವಶ್ಯಕ ವಸ್ತುಗಳನ್ನು ಸಂಗ್ರಹಿಸಲು ಪ್ರಾರಂಭಿಸಬೇಕು (ಶ್ಲೋ. 231).

ಆತ ದನದ ದೊಡ್ಡಿ ಅಥವಾ ದನಗಳ ಕೊಟ್ಟಿಗೆಯನ್ನು ಸಗಣಿಯಿಂದ ಸಾರಿಸಿ ಹೂಗಳು ಮತ್ತು ಧೂಪಗಳಿಂದ ಸುಗಂಧಮಯವಾಗಿಸಬೇಕು. ಬಳಿಕ ತಿಂದುಕ (ಡಯೋಸ್ಪೈರಸ್ ಎಂಬ್ರಿಯೊಪ್ಟೆರಿಸ್), ತ್ರಿನಿಸ(ಡಾಲ್‌ಬರ್ಜಿಯ ಉಜ್ಜೈನೆನ್ಸಿಸ್), ಸರ್ಜಕ (ಟರ್ಮಿನೇಲಿಯ ಟೊಮೆಂಟೋಸ) ದಂಥ ವೃಕ್ಷಗಳ ಗಟ್ಟಿಮರ ಮತ್ತು ಸರಪಳಿ ಇತ್ಯಾದಿಗಳಿಂದ ದನಗಳನ್ನು ಕಟ್ಟುವ ಗೂಟಗಳನ್ನು ಸ್ಥಾಪಿಸಬೇಕು (ಶ್ಲೋ. 232–233).

ಹೀಗೆ ಸ್ಥಳಗಳನ್ನು ಹೂವುಗಳು, ಕುಂಕುಮ ಹಾಗೂ ಧೂಪಗಳಿಂದ ಸಿಂಗರಿಸಿದ ಬಳಿಕ ಪ್ರದಕ್ಷಿಣೆ ಬರಬೇಕು. ಇಲ್ಲವೇ ಹಸುಗಳು ಅದರ ಮೇಲೆ ಹಾಯ್ದು ಹೋಗುವಂತೆ ಮಾಡಬೇಕು (ಶ್ಲೋ. 234).

ಬಳಿಕ ಹೈನದ ದನಗಳನ್ನು ಕರುಗಳ ಸಮೇತ ಹಾಗೂ ಬಿಳಿಯ ಕಾಲುಗಳುಳ್ಳ ಹೋರಿಗಳನ್ನು ಒಳಕ್ಕೆ ಬಿಡಬೇಕು. ಅವುಗಳ ಕೊಂಬುಗಳಿಗೆ ಚಿನ್ನದ ಇಲ್ಲವೇ ಹಿತ್ತಾಳೆಯ ಕಳಸಗಳನ್ನು ತೊಡಿಸಿದ್ದು ಮೈಗೆಲ್ಲ ಸುಗಂಧ ದ್ರವ್ಯಗಳನ್ನು ಹಚ್ಚಿರಬೇಕು. ಅಲ್ಲದೆ ಎಲ್ಲವೂ ಮಂಗಳದಾಯಕ ಶುಭಲಕ್ಷಣಗಳನ್ನು ಹೊಂದಿರಬೇಕು(ಶ್ಲೋ. 235).

ಬಳಿಕ ಆತ ಒಂದು ಶುಭಗಳಿಗೆಯಲ್ಲಿ ದೊಡ್ಡಿಯ ಒಂದು ನಿರ್ದಿಷ್ಟ ಸ್ಥಳದಲ್ಲಿ ತಾಜಾ ಹಾಲು, ಮೊಸರು ಹಾಗೂ ಬೆಣ್ಣೆಯನ್ನು ಸಂಗ್ರಹಿಸಿಟ್ಟು ಒಳ್ಳೆಯ ತೊಟ್ಟಿಯಲ್ಲಿ ನೀರು ತುಂಬಿಸಿಡಬೇಕು (ಶ್ಲೋ. 236).

ಅನಂತರ ತಾನು ಆಗಲೇ ಕೊಂಡು ತಂದಿರುವ ಶುಭಲಕ್ಷಣಗಳನ್ನು ಹೊಂದಿದ ಬಿಳಿಯ ಹೋರಿಗಳು, ಹೈನದ ದನಗಳು ಮತ್ತು ಎಮ್ಮೆಗಳನ್ನು ಅಲ್ಲಿ ಕಟ್ಟಿಹಾಕಬೇಕು (ಶ್ಲೋ. 237).

ಆ ಬಳಿಕ ಒಂದು ಶುಭ ಸ್ಥಾನದಲ್ಲಿ ಹಗ್ಗಗಳಿಂದ ಬಂಧಿಸಿದ ನೇಗಿಲುಗಳು ಹಾಗೂ ನೇಗಿಲು ಧ್ರುವ ಮತ್ತು ಹಿಡಿಕೆಗಳಿಂದ ಕೂಡಿದ ಇಲ್ಲವೇ ಇಲ್ಲದಿರುವ ನೇಗಿಲುಗಳನ್ನು ಇರಿಸಿ ಧೂಪ, ಮಾಲಿಕೆಗಳು, ಹೂವುಗಳು ಗಂಧ ಇಲ್ಲವೇ ಕುಂಕುಮಗಳಿಂದ ಅಲಂಕರಿಸಿ ಶಂಖವಾದ್ಯ ಮೊಳಗುತ್ತಿರುವಾಗ ಧಾನ್ಯಲಕ್ಷ್ಮಿಯನ್ನು ಪೂಜಿಸಬೇಕು. (ಶ್ಲೋ. 238–239).

ಆಗ ಆತ ಭೂದೇವಿ, ಲಕ್ಷ್ಮಿ, ಸರಸ್ವತಿ, ಪಾರ್ವತಿ, ಇಂದ್ರ, ವರುಣ ಮತ್ತು ಕುಬೇರರನ್ನು ವಿಶೇಷವಾಗಿ ಆರಾಧಿಸಬೇಕು (ಶ್ಲೋ. 240).

ಅನಂತರ ಆತ ಒಂದು ಶುಭಮುಹೂರ್ತದಲ್ಲಿ ಜಮೀನಿಗೆ, ತನ್ನ ಹೋರಿಗಳು ಮತ್ತು ನೇಗಿಲಿನೊಂದಿಗೆ ಹೋಗಿ ಈಶಾನ್ಯ, ಆಗ್ನೇಯ, ಇಲ್ಲವೇ ಪಶ್ಚಿಮದ ಯಾವುದೇ ಮೂಲೆಯಿಂದ ಉಳಲು ಪ್ರಾರಂಭಿಸಬೇಕು. (ಇವುಗಳಿಗೆ ಕ್ರಮವಾಗಿ ಶಿವ, ಅಗ್ನಿ, ಹಾಗೂ ವರುಣ ಅಧಿಪತಿಗಳು) (ಶ್ಲೋ. 241-42).

ಮಣ್ಣಿನಲ್ಲಿ ನೇಗಿಲು ಸಾಲುಗಳನ್ನು ಮಾಡಲು ಭೂಮಿ ಸಡಿಲವಾಗಿ ಸುಲಭವಾಗಿರಬೇಕು. ಆದಕಾರಣ ಉಳುಮೆ ಕಾರ್ಯದಲ್ಲಿ ಪರಿಣತಿಯಿರುವಾತನು ಜಮೀನಿನಲ್ಲೆಲ್ಲಾ ಮೊದಲು ನೀರು ಹಾಯಿಸಬೇಕು. ಆ ಬಳಿಕವೇ ಎತ್ತುಗಳು ಕಟ್ಟಿದ ನೇಗಿಲಿನಿಂದ ಉಳಬೇಕು (ಶ್ಲೋ. 243).

ಹೀಗೆ ಆರೇಳು ದಿನಗಳವರೆಗೆ ಜಮೀನನ್ನು ನೇಗಿಲಿನಿಂದ ನಾಲ್ಕೈದುಸಲ ಉಳುಮೆ ಮಾಡಬೇಕು. ಅನಂತರ ಅದರಲ್ಲಿ ಮಣ್ಣಿನ ಹೆಂಟೆ ಮತ್ತು ಕೂಳೆಯನ್ನು ತೆಗೆದು. ದನಗಳ ಇಲ್ಲವೇ ಆಡಿನ ಸಗಣಿ ಅಥವಾ ಗಂಜಿ ಕಾಂಪೋಸ್ಟ್ (ವಲಗ) ? ಗೊಬ್ಬರ ಹಾಕಿ ಫಲವತ್ತತೆಯನ್ನು ಹೆಚ್ಚಿಸಬೇಕು. (ಶ್ಲೋ. 244–245).

ಅನಂತರ ಸನಿಕೆಗಳು, ಕುಡುಗೋಲು(ಶಂಕುಲ), ಕಳೆಗುದ್ದಲಿ(ಕಲುಕ), ದೊಡ್ಡ ಮತ್ತು ಚಿಕ್ಕ ಚಾಕುಗಳು (ಬಿದ್ಧ ಮತ್ತು ಚೂರಿಕ), ಕೊಯ್ಲು ಕತ್ತಿಗಳು ಹಾಗೂ ಒಕ್ಕಣೆ ಉಪಕರಣ (ಲವ-ಸಾರಕ) ಮುಂತಾದ ಕೃಷಿ ಉಪಕರಣ ಮತ್ತು ಸಲಕರಣೆಗಳನ್ನು ಸರಿಯಾಗಿ ಇಂದಿಟ್ಟುಕೊಳ್ಳಬೇಕು (ಶ್ಲೋ. 246).

ಹಿಂಬಿಗಳ ದೃಷ್ಟಿಯಲ್ಲಿ ಒಂದು ನಿರ್ದಿಷ್ಟ ಪ್ರದೇಶದ ಮೇಲೆ ಮೋಡಬಾರಿ ಮಳೆಯಾದ ಸಮಯವೇ ಉಳುಮೆಗೆ ಅತ್ಯುತ್ತಮ ಕಾಲವಾಗಿರುತ್ತದೆ.

ಅಥವಾ ಚೈತ್ರದ ಕಾಲದಲ್ಲಿ ಉಳುಮೆಗೆ ಮುನ್ನ ಜಮೀನನ್ನು ಕಾಲಿಂದ ನೀರಿನಿಂದ ಚೆನ್ನಾಗಿ ಹದಮಾಡಬೇಕು (ಶ್ಲೋ. 247 48).

ಆದ ಕಾರಣ ದೇಶದಲ್ಲೆಲ್ಲಾ ಬೇಸಾಯಗಾರರು ಬೇಸಾಯ ಕಾಲಕ್ಕನುಗುಣವಾಗಿ ಶುಭಲಕ್ಷಣ ಹಾಗೂ ಘಳಿಗೆ ಕಂಡಾಗ ಜ್ಯೋತಿಷರ ಸಲಹೆಯಂತೆ ತಮ್ಮ ಜಮೀನನ್ನು ಮೊದಲಬಾರಿಗೆ ಸರಿಯಾಗಿ ಉಳಬೇಕು (ಶ್ಲೋ. 249).

ನೇಗಿಲು ಪೂಜೆಯ ವಿವರಣೆ

ಕಶ್ಯಪರಂತೆ —

ಉಳುಮೆಗೆ ಮುನ್ನ ಶುಭಲಕ್ಷಣಾದಿಗಳನ್ನು ತಿಳಿದ ಬೇಸಾಯಗಾರನು ನೇಗಿಲು ಮುಂತಾದ ಕೃಷಿ ಉಪಕರಣಗಳನ್ನು ಅದರಲ್ಲೂ ವಿಶೇಷವಾಗಿ ಎತ್ತುಗಳನ್ನು ಪೂಜಿಸಬೇಕು (ಶ್ಲೋ. 250).

ಜಮೀನು ಎಲ್ಲವೇ ಭೂಮಿಯನ್ನು ಪವಿತ್ರ ನೀರು, ಧೂಪದೀಪಗಳಿಂದ ಆರಾಧಿಸುವುದರಿಂದ ಒಳ್ಳೆಯ ಪ್ರತಿಫಲ ದೊರಕುತ್ತದೆ (ಶ್ಲೋ. 251).

ಓ ಭೂದೇವಿ ಸರ್ವಸಂಪನ್ನಳಾದ ನಿನಗೆ ನನ್ನ ನಮನ. ನಾನೀಗ ಬೇಸಾಯ ಕಾರ್ಯ ಪ್ರಾರಂಭಿಸುತ್ತಿದ್ದೇನೆ. ಸಾಧ್ವಿಯಾದ ನೀನು ಪ್ರಸನ್ನಳಾಗು ತಾಯೆ! (ಶ್ಲೋ. 252).

ಉಳುಮೆ, ಪೆಟ್ಟು ಇತ್ಯಾದಿ ಯಾವುದೇ ಅಪಾಯವನ್ನು ನಿನಗೆ ಮಾಡಿದ್ದರೂ ಕೃಪೆಯಿಂದ ನನ್ನನ್ನು ಕ್ಷಮಿಸಬೇಕಾಗಿ ಕೋರುತ್ತೇನೆ. ನಾನು ಸಮೃದ್ಧ ಕೊಯ್ಲು ಮಾಡುವಂತೆ ಅನುಗ್ರಹಿಸು (ಶ್ಲೋ. 253).

ನೀನೇ ಸಕಲ ಜೀವಕೋಟಿಗಳ ಮಾತೆ. ಆದಕಾರಣ ನನ್ನ ಮೇಲೆ ನಿನ್ನ ಕೃಪಾಕಟಾಕ್ಷಬೀರು, ಓ ಭೂದೇವಿ ನನಗೆ ಅಪಾರ ಫಲ ದೊರಕುವಂತೆ ಮಾಡು (ಶ್ಲೋ. 254).

ಹೀಗೆ ವಿಷ್ಣುವಿನ ಸತಿಯಾದ ಭೂದೇವಿಯನ್ನು ಸ್ತುತಿಸಿ ಆರಾಧಿಸಿದ ಬಳಿಕ, ರೈತನು ಭೂಪ್ರದಕ್ಷಿಣೆ, ನಮಸ್ಕಾರಗಳನ್ನು ಮಾಡಬೇಕು. ಅನಂತರ ದೇವತೆಗಳು, ದಿಕ್ಪಾಲಕರು ಹಾಗೂ ಜೀವದಾತ ಸೂರ್ಯನನ್ನು ಸ್ತುತಿಸಿ ಭೂಮಿ ಉಳುಮೆಯ ಅತ್ಯುತ್ತಮ ಕಾರ್ಯವನ್ನು ಪ್ರಾರಂಭಿಸಬೇಕು (ಶ್ಲೋ. 255).

ಗಟ್ಟಿ ಮುಟ್ಟಾದ ಎತ್ತುಗಳನ್ನು ಪೂಜಿಸುವಿಕೆ

ಕಶ್ಯಪರಂತೆ--

'ಪವಿತ್ರವಾದ ಗೋಮಾತೆಯ ಮಗನಾದ ಪಾಪರಹಿತ ಬಲಿಷ್ಠ ವೃಷಭೇಂದ್ರನೇ, ಭೂಮಿಯ ಉಳುಮೆ ಕಾರ್ಯದಲ್ಲಿ ನೆರವಾಗಬೇಕೆಂದು ಬೇಡುತ್ತೇನೆ' (ಶ್ಲೋ. 257).

'ಧೂಪಮಾಲೆ, ಪುಷ್ಪಾದಿಗಳಿಂದ ಇಂದು ನಿನ್ನನ್ನು ಪೂಜಿಸುತ್ತೇನೆ. ಸದ್ಗುಣಿಯಾದ ನೀನು ನನಗೆ ಲಾಭವನ್ನು ಗಳಿಸಿಕೊಡು. ಹಾಗೆಯೇ ನೀನೂ ಸುಖವಾಗಿರು' (ಶ್ಲೋ. 258).

'ನಾನು ನಿನಗೆ ಗೌರವಾದರಗಳಿಂದ ತಾಜಾ ಹುಲ್ಲು ಮತ್ತು ನೀರುಗಳನ್ನು ಆಹಾರವಾಗಿ ಕೊಡುತ್ತೇನೆ. ನೀನು ಶಿವನ ಕೃಪೆಯಿಂದ ಸದಾಕಾಲವೂ ನನಗೆ ಪ್ರತಿಫಲವನ್ನು ಕರುಣಿಸು' (ಶ್ಲೋ. 259).

'ನಿನ್ನಷ್ಟೇ ಬಲಿಷ್ಠವಾದ ಕರುಗಳ ಸಂತತಿಯನ್ನು ಕೊಟ್ಟು ನನ್ನ ದನಗಳ ದೊಡ್ಡಿಯನ್ನು ವರ್ಧಿಸು. ನಿನಗೆ ಗೌರವಾದರಗಳಿಂದ ಉಣಿಸುತ್ತೇನೆ' (ಶ್ಲೋ. 260).

'ಓ ವೃಷಭೇಂದ್ರನೇ, ಧನಧಾನ್ಯವೃದ್ಧಿಗೆ ನೀನೇ ಕಾರಣನು. ಭೂಮಿಯಲ್ಲಿ ಸಾಧುತ್ವದ ಪ್ರತಿರೂಪವೇ ನೀನಾಗಿರುವೆ. ಅದಕ್ಕಾಗಿಯೇ ನಿನ್ನನ್ನು ಪೋಷಿಸುತ್ತೇನೆ' (ಶ್ಲೋ. 261).

'ದೇವತೆಗಳು ಮತ್ತು ಜೀವಿಗಳಿಗೆ ನಾನು ಮಾಡುವ ತ್ಯಾಗವು ಫಲಕಾರಿಯಾಗುವಂತೆ ನೀನು ದಯೆ ತೋರಿಸು. ನನ್ನ ಸಕಲ ಅಪರಾಧಗಳನ್ನೂ ಮನ್ನಿಸು' (ಶ್ಲೋ. 262).

ಹೀಗೆ ಪ್ರತಿಯೊಂದು ಹೋರಿಯನ್ನು ಸ್ತುತಿಸಿದ ಬಳಿಕ ಅವು ದಣಿದು, ಆಯಾಸಗೊಳ್ಳದಂತೆ ಅವುಗಳನ್ನು ದಂಡಿಸಬೇಕು (ಶ್ಲೋ. 263).

ಹೋರಿಗಳನ್ನು ಹಿಂಸಿಸುವುದರಿಂದ ಖಂಡಿತವಾಗಿಯೂ ವಿನಾಶವುಂಟಾಗುತ್ತದೆ. ಆದಕಾರಣ ಹೋರಿಗಳು ಹಸಿದಿರುವಾಗ ಎಂದೂ ನೇಗಿಲಿಗೆ ಹೂಡಬಾರದು (ಶ್ಲೋ. 264).

ಇಲ್ಲಿಂದ ಮುಂದೆ ಋಷಿಗಳು ಗೋವ್ಯಾಪಾರವನ್ನು ಕುರಿತು ಹೇಳಿದ್ದಾರೆ (ಶ್ಲೋ. 265).

ಪಸುಗಳು ಮತ್ತು ಹೋರಿಗಳ ಶುಭ ಲಕ್ಷಣಗಳು

ಕಶ್ಯಪರಂತೆ —

ಶುಭಲಕ್ಷಣಗಳಿಂದ ಕೂಡಿದ ಪಸುಗಳು ಮತ್ತು ಹೋರಿಗಳು ತಮ್ಮ ಒಡೆಯನಿಗೂ ದೇಶಕ್ಕೂ ರಕ್ಷಣೆ ಹಾಗೂ ಕಲ್ಯಾಣವನ್ನುಂಟುಮಾಡುತ್ತವೆ. ಅಂತಹ ಹೋರಿಗಳು ಕೃಷಿ ಕಾರ್ಯಗಳಿಗೆ ಯುಕ್ತವಾಗಿದ್ದು ಒಳ್ಳೆಯ ಫಲಕೊಡುತ್ತವೆ (ಶ್ಲೋ. 266).

ಬಿಳಿಯ ಮೈಬಣ್ಣ, ಸುಂದರ ಕಣ್ಣುಗಳು, ದೊಡ್ಡ ಗುಟುರು ಧ್ವನಿ ಹಾಗೂ ಸಾಕಷ್ಟು ಎತ್ತರದ ನಿಲುವುಳ್ಳವು ಬ್ರಾಹ್ಮಣ ವರ್ಗಕ್ಕೆ ಸೇರುತ್ತವೆ(ಶ್ಲೋ. 267).

ಕೆಂಪು ಮೈಬಣ್ಣ, ಅತ್ಯಂತ ಎತ್ತರದ ನಿಲುವು, ಗುಡುಗಿನಂಥ ಧ್ವನಿ, ಆವೇಶಯುಕ್ತ ಶಕ್ತಿ, ಹಾಗೂ ಬಲವುಳ್ಳವು (ಹೋರಿಗಳು) ಕ್ಷತ್ರಿಯ ವರ್ಗಕ್ಕೆ ಸೇರುತ್ತವೆ (ಶ್ಲೋ. 268).

ಬಿಳಿ, ಕೆಂಪು ಚುಕ್ಕೆಗಳ ವೃತ್ತಗಳು ಮೈ ಮೇಲಿದ್ದು ಅಷ್ಟು ಎತ್ತರವೂ ಅಲ್ಲ, ಗಿಡ್ಡವೂ ಅಲ್ಲದವು ವೈಶ್ಯ ವರ್ಗಕ್ಕೆ ಸೇರುತ್ತವೆ (ಶ್ಲೋ. 269).

ಕಪ್ಪುಬಣ್ಣವಿದ್ದು ಅಷ್ಟೇನೂ ಎತ್ತರವಿಲ್ಲದೆ ಮುಂಗೋಪ ಹಾಗೂ ಕ್ರೂರವಾಗಿದ್ದು ಹೊಂದಿರುವವು ಶೂದ್ರ ವರ್ಗಕ್ಕೆ ಸೇರುತ್ತವೆ (ಶ್ಲೋ. 270).

ಇವೆಲ್ಲವೂ ಒಳ್ಳೆಯ ತಳಿಗಳೇ ಆಗಿದ್ದು ಕೃಷಿ ಕಾರ್ಯಗಳಿಗೆ ಯುಕ್ತವಾಗಿರುತ್ತವೆ. (ಶ್ಲೋ. 271).

ಅಷ್ಟೇನೂ ಉದ್ದ ಇಲ್ಲವೇ ಗಿಡ್ಡವಿರದೆ ದಪ್ಪವಾಗಿರುವ ಕೊಂಬುಗಳ (ಹೋರಿಯ)ನ್ನು ಶುಭಕರವೆಂದು ಪರಿಗಣಿಸಲಾಗುತ್ತದೆ. ಎರಡೂ ಕೊಂಬುಗಳೂ ಏಕ ಪ್ರಕಾರವಾಗಿ (ಎಂದರೆ ಸಮ ಪ್ರಮಾಣದಲ್ಲಿ)ದ್ದರೆ ಅದಕ್ಕೆ ಹೆಚ್ಚಿನ ಮೌಲ್ಯವಿರುತ್ತದೆ (ಶ್ಲೋ. 272).

ಹೋರಿಗಳ ಗೊರಸು ತೀರಾ ಚಿಕ್ಕವೂ ಇರಬಾರದು ಇಲ್ಲವೇ ತೀರಾ ದೊಡ್ಡದಾಗಿಯೂ ಇರಬಾರದು; ಅವು ಬಲಿಷ್ಠವಾಗಿದ್ದು ಪರಸ್ಪರ ಸಮಪ್ರಮಾಣದಲ್ಲಿರಬೇಕು. ಹಾಗೆಯೇ ಆ (ಹೋರಿ)ಗಳು ಭವ್ಯನಡಿಗೆ ಹಾಗೂ ಉದ್ದನೆಯ ಬಾಲಗಳನ್ನು ಹೊಂದಿರಬೇಕು. ಇಂಥವು ಪ್ರಶಂಸೆಗೆ ಯೋಗ್ಯವಾದವು (ಶ್ಲೋ. 273).

ತೀರಾ ದಪ್ಪ (ಸ್ಥೂಲಕಾಯ) ಇಲ್ಲವೇ ಸಣ್ಣ (ಕೃಶಕಾಯ) ವಿಲ್ಲದೆ ಹೊರೆ (ಭಾರ ಎಳೆಯುವುದು) ಎಳೆಯುವ ಶಕ್ತಿಯಿದ್ದು ಕಷ್ಟಕಾರ್ಯಗಳಲ್ಲಿ ತೊಡಗಿರುವಾಗ ಸುಪ್ರಸನ್ನ ಚಿತ್ತಹೊಂದಿರುವುದು ಹೋರಿಗಳ ಕೆಲವು ಅತ್ಯುತ್ತಮ ಗುಣವಾಗಿದೆ. ಕೊಂಬುಗಳು, ಹಣೆ, ಬಾಲ ಹಾಗೂ ಗೊರಸಿನ ಬಳಿ ಬಿಳಿಯ ಬಣ್ಣ ಹೊಂದಿದ್ದು ಉಳಿದೆಡೆ ಬೇರೆ ಬಣ್ಣ ಹೊಂದಿರುವ ಹೋರಿಯನ್ನು ಶುಭಲಕ್ಷಣಗಳುಳ್ಳದ್ದೆಂದೂ ಅಭ್ಯುದಯಕಾರಿಯೆಂದೂ ಪರಿಗಣಿಸಲಾಗಿದೆ. (ಶ್ಲೋ. 274-75).

ಪ್ರಸನ್ನ ಚಿತ್ತವುಳ್ಳ, ಹೊಳೆಯುವ ಕಾಂತಿಯುಕ್ತ ಬಣ್ಣವಿರುವ ಹಾಗೂ ಉತ್ಸಾಹವುಳ್ಳ, ಸಂತುಷ್ಟವಾಗಿರುವ ಹಾಗೂ ಬಿಂದಕ್ಕೆ ತಿರುಗಿರುವ ಶುಭಲಕ್ಷಣದ ಸುಳಿಯುಳ್ಳ ಹೋರಿಗಳು ಧನಧಾನ್ಯ ಹೆಚ್ಚಳದ ಮೂಲ ಆಕರಗಳಾಗಿರುತ್ತವೆ (ಶ್ಲೋ. 276).

ಸಣ್ಣನೆಯ ತೊಗಲಿದ್ದು ದೊಡ್ಡದಾಗಿ ಗುಟುರು ಹಾಕುವಂತಹ, ಮನೋಹರವಾದ ಕಣ್ಣುಗಳನ್ನು ಹೊಂದಿರುವ ಹೋರಿಗಳನ್ನು ಶುಭಲಕ್ಷಣ ಸೂಚಕವೆಂದು ಪರಿಗಣಿಸಲಾಗುತ್ತದೆ (ಶ್ಲೋ. 277).

ಕೆಂಪು, ಧೂಮ್ರ ಅಥವಾ ಸಪಿದ್ದ (ಕೆಂ...) ಬಣ್ಣವಿದ್ದು ದೊಡ್ಡ ಕೊಂಬುಗಳು, ತತ್ತರದ ನಡಿಗೆ, ನಿಶ್ಶಕ್ತವಾದ ತೆಳ್ಳನೆಯ ದೇಹ, ಒರಟು ಚರ್ಮ ಮತ್ತು ಒರಟಾದ ಗೊರಸನ್ನು ಹೊಂದಿದ್ದು ಬಕಾಸುರನಂತೆ ತಿನ್ನುವ, ಕೆರಳುವ ಹಾಗೂ ಜಡ ಸ್ವಭಾವದ ಹೋರಿಗಳು ತೀರಾ ಕನಿಷ್ಠ ತರನವಾಗಿದ್ದು ಅಂಥವುಗಳನ್ನು ಸಂಪೂರ್ಣವಾಗಿ ತೊರೆಯಬೇಕು. ಎಂದರೆ, ಕೃಷಿ ಕಾರ್ಯಗಳಿಗೆ ಬಳಸಬಾರದು (ಶ್ಲೋ. 278–279).

ಇಡಿಯ ಶರೀರವೆಲ್ಲ ಪೂರ್ಣ ಬಿಳಿ ಇಲ್ಲವೆ ಕೆಂಪು ಬಣ್ಣವುಳ್ಳವನ್ನು ಶುಭಲಕ್ಷಣದವೆಂದೂ ಧನಧಾನ್ಯ ವೃದ್ಧಿಮೂಲಗಳೆಂದೂ ಪರಿಗಣಿಸಲಾಗುತ್ತದೆ (ಶ್ಲೋ. 280).

ಕೃಷಿಕರು (ಎಂದರೆ ಬೇಸಾಯಗಾರರು) ತಮ್ಮ ಸ್ವಂತ ಆಸಕ್ತಿ ಹಾಗೂ ಕಲ್ಯಾಣ ದೃಷ್ಟಿಯಿಂದ ಶುದ್ಧ ತಳಿಯ, ಒಳ್ಳೆಯ ಗುಣಮಟ್ಟದ, ರೋಗರುಜಿನಗಳಿಲ್ಲದ ಹೋರಿಗಳನ್ನು ಪಡೆಯುವುದರಲ್ಲಿ ತುಂಬಾ ಎಚ್ಚರದಿಂದಿರಬೇಕು (ಶ್ಲೋ. 281).

ಅವರು ಕೋಣಗಳು ಮತ್ತು ಯಥೇಚ್ಛವಾಗಿ ಹಾಲು ಕೊಡುವ ಶುಭಲಕ್ಷಣಗಳುಳ್ಳ ಹೈನದ ಹಸುಗಳು ಹಾಗೂ ಎಮ್ಮೆಗಳನ್ನು ಸಂಗ್ರಹಿಸಬೇಕು(ಶ್ಲೋ. 282).

ಈ ದಿಸೆಯಲ್ಲಿ ಅನೇಕವೇಳೆ ಒಂಟೆ ಮತ್ತು ಕುರಿಗಳೂ ಸಹ ಕೃಷಿ ಕಾರ್ಯದಲ್ಲಿ ಉಪಯುಕ್ತವಾಗಿರುತ್ತವೆ (ಶ್ಲೋ. 283).

ಕೃಷಿ ಕಾರ್ಯಗಳ ಯಶಸ್ಸು ಹಾಗೂ ಕೃಷಿಕರ ಕಲ್ಯಾಣ ದೃಷ್ಟಿಯಿಂದ ಬೇಸಾಯಗಾರರು ಲೋಪದೋಷರಹಿತವಾದ ಅಥವಾ ತಪ್ಪಿನಿಂದ ಹಾಗೆಂದು ಸ್ಥಿರಪಟ್ಟ ಹೋರಿ ಮುಂತಾದುವನ್ನು ಇಟ್ಟುಕೊಳ್ಳುವುದರಲ್ಲಿ ಬಹಳ ಎಚ್ಚರದಿಂದಿರಬೇಕು (ಶ್ಲೋ. 284).

ಬುದ್ಧಿಶಾಲಿಯಾದವನು ತನ್ನ ದನಗಳಿಗಾಗಿ ಚರಂಡಿ ವ್ಯವಸ್ಥೆಯುಳ್ಳ ದೊಡ್ಡಿಯನ್ನು ನಿರ್ಮಿಸಬೇಕು. ಮನೆಯ ಹೆಂಗಸರು ಮತ್ತಿತರರು ನಿತ್ಯವೂ ದನಕರುಗಳಿಗೆ ಸಕಾಲದಲ್ಲಿ ತೃಪ್ತಿಕರವಾಗಿ ಮೇವು, ನೀರುಗಳನ್ನು ಕೊಟ್ಟು ಪೋಷಿಸಿ ರೋಗಾದಿಗಳಿಂದ ರಕ್ಷಿಸಬೇಕು(ಶ್ಲೋ. 285).

ಅತಿಶ್ರೇಷ್ಠಗುಣವುಳ್ಳ ಹಾಗೂ ಒಳ್ಳೆಯ ತಳಿಯ ಹೋರಿಗಳು ಮತ್ತು ಹಸುಗಳು ಕೃಷಿ ಕಾರ್ಯಗಳಲ್ಲಿ ಹೆಚ್ಚು ಉಪಯುಕ್ತವಾಗಿರುತ್ತವೆ. ಆದಕಾರಣ ನಗರ ಹಾಗೂ ಗ್ರಾಮೀಣ ಪ್ರದೇಶಗಳ ರೈತರೆಲ್ಲರೂ ನೂರಾರು ಹೈನದ ದನಗಳನ್ನು ಹೊಂದಿ ಸಾಕುವುದರಲ್ಲಿ ಗಮನವಿಟ್ಟಿರಬೇಕು. ಅವುಗಳನ್ನು ಹಸುರು ಹುಲ್ಲು, ಒಣಹುಲ್ಲು ಮತ್ತು ನೀರುಗಳಿಂದ ಪೋಷಿಸಿ ಸಾಕಷ್ಟು ಎಚ್ಚರಿಕೆಯಿಂದ ಪಾಲಿಸಬೇಕು (ಶ್ಲೋ. 286-88).

ಹೈನದ ಹಸುಗಳನ್ನು ಪಾಲಿಸುವುದರಿಂದ ರೋಗರುಜಿನಗಳು ದೂರವಾಗುತ್ತವೆ; ಮಕ್ಕಳು ಮುದುಕರ ರಕ್ಷಣೆ ಮತ್ತು ಪಾಲನೆಯಾಗುತ್ತದೆ ಹಾಗೂ ಮಾನವನ ಬದುಕಿನ ಮೂರು ಪುರುಷಾರ್ಥಗಳು ಎಂದರೆ, ಧರ್ಮ, ಅರ್ಥ, ಕಾಮ, ಸಾಧನೆಯಾಗುತ್ತದೆ (ಶ್ಲೋ. 289).

ಸಾವಿರಾರು ಗೋವುಗಳನ್ನು ಪ್ರೀತಿ ವಾತ್ಸಲ್ಯಗಳಿಂದ ಪಾಲಿಸುವ ದೇಶಗಳಲ್ಲಿ ಮಳೆಯಾಗುವುದು ನಿಶ್ಚಿತ (ಶ್ಲೋ. 290).

ಭಾರ್ಗವ ಮುನಿಗಳು ಗೋಪಾಲನೆ ಹಾಗೂ ಗೋದಾನ (ಗೋವುಗಳನ್ನು ದಾನ ಮಾಡುವುದು)ಗಳಿಂದ ದೇವತೆಗಳು ಸುಪ್ರೀತರಾಗುತ್ತಾರೆ ಹಾಗೂ ಸಾಮಾನ್ಯವಾಗಿ ಜನತಾ ಕಲ್ಯಾಣವಾಗುತ್ತದೆಂದು ಹೇಳಿದ್ದಾರೆ (ಶ್ಲೋ. 291).

ಆದಕಾರಣ ಕೃಷಿಕರು ತಮ್ಮ ಗೋಸಂಪತ್ತನ್ನು ಅದು ಹಳ್ಳಿಯೇ ಇರಲಿ, ಇಲ್ಲವೇ ಕಾಡೇ ಇರಲಿ, ಹೆಚ್ಚು ಗಮನವಿಟ್ಟು ಸಂರಕ್ಷಿಸಬೇಕು (ಶ್ಲೋ. 292).

ಪ್ರತಿವರ್ಷವೂ ಒಂದು ಶುಭ ಸಮಯದಲ್ಲಿ ರೈತರೂ ಇತರ ಆಳುಗಳೂ ಅದರಲ್ಲೂ ಮುಖ್ಯವಾಗಿ ಗೋಪಾಲಕರು ಗೋಪೂಜೆ ಮಾಡುವುದು ಹೆಚ್ಚು ಪ್ರಶಂಸನೀಯ (ಶ್ಲೋ. 293).

ಇದಲ್ಲದೆ ಪ್ರತಿಸಂಜೆಯೂ ಗೋವುಗಳನ್ನು ಧೂಪ ಪುಷ್ಪಾದಿಗಳಿಂದ ಪೂಜಿಸು ವುದರಿಂದ ಯಶಸ್ಸು ಮತ್ತು ಕ್ಷೇಮಾಭಿವೃದ್ಧಿಯುಂಟಾಗುತ್ತದೆ. ಇದನ್ನು ವೇದಗಳೂ ಸಮರ್ಥಿಸಿವೆ(ಶ್ಲೋ. 294).

ವಿವೇಕಿಗಳು ಬೇಸಗೆಯ ಕಾಲದಲ್ಲಿ ತಮ್ಮ ಎಲ್ಲಾ ಹೋರಿಗಳು, ಮೇಕೆಗಳು, ಇತ್ಯಾದಿ ಎಲ್ಲಾ ದುಡಿಮೆಯ ಪ್ರಾಣಿಗಳನ್ನು ಮಧ್ಯಾಹ್ನದ ವೇಳೆಯಲ್ಲಿ ನೆರಳಿನಲ್ಲಿರಿಸಿ ರಕ್ಷಿಸಬೇಕು (ಶ್ಲೋ. 295).

ಚಳಿಗಾಲದಲ್ಲಿ ಅವುಗಳನ್ನು ಕೊಟ್ಟಿಗೆಗಳಲ್ಲಿ ಕಟ್ಟಿ ಸಂಪೂರ್ಣ ಮೇವು ಉಣಿಸ ಬೇಕು. ಇದರಿಂದ ಸರ್ವಜನಿಕರ ಹಾಗೂ ರಾಜ ಕುಟುಂಬದ ಕಲ್ಯಾಣವಾಗುತ್ತದೆ (ಶ್ಲೋ. 296).

ರಾಜನು ಗೋ ಸಂರಕ್ಷಣೆ ಮಾಡಬೇಕು. ಅದು ಆತನ ಶ್ರೇಷ್ಠ ಕರ್ತವ್ಯ ವಾಗಿರುತ್ತದೆ (ಶ್ಲೋ. 297).

ದನಗಳ್ಳರೂ ಹಾಗೂ ಹಿಂಸ್ರಮೃಗಗಳಿಂದ ಮತ್ತು ವಿಶೇಷವಾಗಿ ಕೃಷಿ ಕಾರ್ಯ ಗಳಲ್ಲಿ ಅವುಗಳಿಗೆ ಆಗುವ ಹಿಂಸೆಯನ್ನು ತಡೆದು ಸಂರಕ್ಷಿಸುವುದರಿಂದ ಒಳ್ಳೆಯ ಪ್ರತಿಫಲ ದೊರೆಯುತ್ತದೆ. (ಶ್ಲೋ. 298).

ಇಲ್ಲಿಗೆ ಈ ವಿಷಯದ ಪ್ರಾರಂಭಿಕ ಸಲಹೆ ಮುಗಿಯುತ್ತದೆ.

ಸಾಂಚಿಯ ಪ್ರಾಚ್ಯ ವಸ್ತು ಸಂಶೋಧನಾಲಯದ ವಸ್ತು ಸಂಗ್ರಹಾಲಯದಲ್ಲಿ ಬೌದ್ಧರ ಕಾಲದ ಕೆಲವು ಕೃಷಿ ಉಪಕರಣಗಳನ್ನು ಸಂರಕ್ಷಿಸಿಡಲಾಗಿದೆ. ಅವು (1) ಬಿಯೇರ್ ಅಥವಾ ನಯಗೊಳಿಸುವ ನೇಗಿಲುಗುಳ, (2) ಎರಡು ಬಗೆಯ ನೇಗಿಲಗುಳಗಳು, (3) ಕರಣೆ, ಮತ್ತು (4) ಮೂರು ಬಗೆಯ ಕುಡುಗೋಲುಗಳು. ಇವುಗಳ ವರ್ಣನೆ ಹಾಗೂ ಅಳತೆಗಳನ್ನು ಮಧ್ಯಪ್ರದೇಶ ಸಾಂಚಿಯ ಪ್ರಾಚ್ಯ ವಸ್ತು ಸಂಶೋಧನ ಮತ್ತು ಸಂಗ್ರಹಾಲಯದ ವಿವರ ಪಟ್ಟಿಯಲ್ಲಿ ಕೊಟ್ಟಿದೆ.

ನೇಗಿಲು ಹೂಡುವಿಕೆ

ಕೃಷಿಯನ್ನು ಕುರಿತು ಪರಾಶರರು ನೇಗಿಲನ್ನು ಯಾವಾಗ, ಹೇಗೆ ಕೃಷಿ ಕಾರ್ಯಗಳಿಗೆ ಬಳಸಬೇಕೆಂದು ವಿವರವಾಗಿ ತಿಳಿಸುತ್ತಾರೆ. ಆ ಮೂಲ ಸಂಸ್ಕೃತ ಹಸ್ತಪ್ರತಿಯಿಂದ ಕೆಲವು ಮುಖ್ಯ ಭಾಗಗಳನ್ನು ಅನುವಾದಿಸಿ ಕೊಟ್ಟಿದೆ.

ಸ್ವಾತಿ, ಉತ್ತರ-ರೋಹಿಣಿ, ಮೃಗಶಿರಸ್, ಮೂಲಾ, ಪುನರ್ವಸು, ಪುಷ್ಯ, ಶ್ರವಣ ಮತ್ತು ಹಸ್ತಾ ನಕ್ಷತ್ರಗಳಲ್ಲಿ ನೇಗಿಲನ್ನು ಮೊದಲಬಾರಿಗೆ ಹೂಡಬೇಕು (ಶ್ಲೋ. 122).

ಬೇಸಾಯಗಾರರು ನೇಗಿಲು ಉಳುವ ಕಾರ್ಯವನ್ನು ಶುಕ್ರವಾರಗಳು, ಸೋಮವಾರಗಳು, ಗುರುವಾರಗಳು ಮತ್ತು ವಿಶೇಷವಾಗಿ ಬುಧವಾರಗಳಲ್ಲಿ ಪ್ರಾರಂಭಿಸಬೇಕು. ಇದರಿಂದ ಅವರ ಕೆಲಸ ಸಂತೋಷಗಳು ವರ್ಧಿಸುತ್ತವೆ (?) ಎಂದಿದ್ದಾರೆ. ಭಾನುವಾರ ಮತ್ತು ಶನಿವಾರಗಳಲ್ಲಿ ಬೇಸಾಯಕಾರ್ಯಗಳನ್ನು ಪ್ರಾರಂಭಿಸುವುದರಿಂದ ರಾಜ್ಯದಲ್ಲಿ ಕ್ಷಾಮವುಂಟಾಗುತ್ತದೆ. ಇದೇ ರೀತಿ, ಶುಕ್ಲಪಕ್ಷದ ದಶಮಿ, ಏಕಾದಶಿ, ಬಿದಿಗೆ, ಪಂಚಮಿ, ತ್ರಯೋದಶಿ, ತದಿಗೆ ಹಾಗೂ ಸಪ್ತಮಿ ದಿನಗಳು ಕೃಷಿ ಕಾರ್ಯಾರಂಭಕ್ಕೆ ಶುಭದಿನಗಳಾಗಿರುತ್ತವೆ. ಶ್ಲೋ. 123-125.

ಅಮಾವಾಸ್ಯೆಯಂದು ಪ್ರಾರಂಭಿಸುವುದರಿಂದ ಕೆಲಸವು ನಷ್ಟವಾಗುತ್ತದೆ. ಪ್ರತಿಪದೆಯಾದರೆ ಮರಣ ಭಯದ ಉದ್ಭವವುಂಟಾಗುತ್ತದೆ. ಷಷ್ಠಿಯಾದರೆ ತೀವ್ರ ಕೊರತೆಯೂ, ದ್ವಾದಶಿಯು ಬೇಸಾಯಗಾರರಿಗೆ ಮಾರಕವಾಗಿಯೂ ಪರಿಣಮಿಸುತ್ತದೆ. ಶುಕ್ಲಪಕ್ಷದ ಅಷ್ಟಮಿಯು ಎತ್ತುಗಳಿಗೆ ನಾಶಕಾರಿ; ನವಮಿಯು ಬೆಳೆಗಳಿಗೆ ವಿನಾಶಕಾರಿ. ಚತುರ್ಥಿಯಂದು ಪ್ರಾರಂಭಿಸಿದರೆ ಕೀಟಬಾಧೆ ಹೆಚ್ಚು; ಹಾಗೂ ಚತುರ್ದಶಿಯಾದರೆ ಧನ ಹಾನಿಗೆ ಕಾರಣವಾಗುತ್ತದೆ (ಶ್ಲೋ. 126-127).


ಯಾವಾಗಲೂ ಸೂರ್ಯನು ವೃಷಭ, ಮೀನ, ಕನ್ಯಾ, ಮಿಥುನ, ಧನು ಅಥವಾ ಕರ್ಕಾಟಕ ರಾಶಿಗಳಲ್ಲಿರುವಾಗ ನೇಗಿಲು ಹೂಡಬೇಕು. ಸೂರ್ಯನು ಮೇಷ ರಾಶಿಯಲ್ಲಿರುವಾಗ ನೇಗಿಲು ಹೂಡುವುದರಿಂದ ದನಗಳು ಸಾಯುತ್ತವೆ. ಕಟಕದಲ್ಲಿರುವಾಗ ಈತಿ (ಹೆಚ್ಚು ನೀರಿನ ಕೊರತೆ) ಇಲ್ಲವಾಗಿ ಅಪಾಯ ತಪ್ಪುತ್ತದೆ (ಏಕೆಂದರೆ ಮಳೆ ಇಲ್ಲದಿರುವುದರಿಂದಾಗಿ). ಸಿಂಹರಾಶಿಯಲ್ಲಿರುವಾಗ ಸರ್ಪಭಯವೂ ಕುಂಭದಲ್ಲಿರುವಾಗ ಕಳ್ಳಕಾಕರ ಭಯವೂ ಉಂಟಾಗುತ್ತದೆ.

ಸೂರ್ಯನು ಮಕರ ರಾಶಿಯಲ್ಲಿರುವಾಗ ಪ್ರಾರಂಭಿಸುವುದರಿಂದ ಬೆಳೆಗಳು ನಾಶವಾಗುತ್ತವೆ. ತುಲಾರಾಶಿಯಲ್ಲಿರುವಾಗ ಬೀಜಾಪಾಯವುಂಟಾಗುತ್ತದೆ. ಆದಕಾರಣ ಯಾವಾಗಲೂ ಉಳುಮೆ ಪ್ರಾರಂಭಿಸುವ ಕಾಲದಲ್ಲಿ ಸೂರ್ಯನು ರಾಶಿ ಪ್ರವೇಶಿಸುವ ಶುಭಕಾಲವನ್ನು ಆಯ್ಕೆ ಮಾಡಿಕೊಳ್ಳುವುದರಲ್ಲಿ ತುಂಬಾ ಎಚ್ಚರದಿಂದಿರಬೇಕು. (ಶ್ಲೋ. 128–130).

ಸೂರ್ಯ ಚಂದ್ರ ಸಮ್ಮೇಳನದ ಒಂದು ಪವಿತ್ರದಿನ (ಎಂದರೆ ಅಮಾವಾಸ್ಯೆ ಇಲ್ಲವೇ ಪೌರ್ಣಮಿಯದಿನ) ಸ್ನಾನಮಾಡಿ, ಬಿಳಿಯ ಸುಗಂಧಿತ ಉಡುಪುತೊಟ್ಟು ಮೊದಲಿಗೆ ಪ್ರಜಾಪತಿ (ಬ್ರಹ್ಮ)ಯನ್ನು ಧೂಪದೊಂದಿಗೆ ಪೂಜಿಸಿ, ಅಗ್ನಿ ಪ್ರದಕ್ಷಿಣೆ ಮಾಡಿ ಬ್ರಾಹ್ಮಣರಿಗೆ ದಾನಧರ್ಮ ಮಾಡಬೇಕು. ಅನಂತರ ನೇಗಿಲು ಕುಳವನ್ನು ಬಂಗಾರದಿಂದ ಮುಟ್ಟಿಸಿ ಜೇನಿನಿಂದ ಸವರಿ ಬಳಿಕ ನೇಗಿಲನ್ನು ಎಡ ಭುಜದ ಮೇಲೆ ಹೊತ್ತುಕೊಂಡುಹೋಗಿ ಉಳುಮೆಮಾಡಲು ಪ್ರಾರಂಭಿಸಬೇಕು (ಶ್ಲೋ. 131–133).



ಚಿತ್ರ 1 : ಕುಡುಗೋಲುಗಳು (ಸಾಂಚಿ) (1) 9½ ಅಂಗುಲ ವ್ಯಾಸ, ಕುಡುಗೋಲಿನ ಅಲಗು, ದೀರ್ಘವೃತ್ತಾಕಾರವಾಗಿರುತ್ತದೆ. (2) 7½ ಅಂಗುಲ ವ್ಯಾಸ, ತುದಿ ಮುರಿದಿರುತ್ತದೆ. (3) 11 ಅಂಗುಲ ವ್ಯಾಸ, ಅರ್ಧ ವೃತ್ತಾಕಾರ.



ಚಿತ್ರ 2 : ನಯಗೊಳಿಸುವ ನೇಗಿಲುಗಳು (ಬುಹಿರ್)


ಕೃಪೆ : ಪ್ರಾಚ್ಯವಸ್ತು ಇಲಾಖೆ, ಭಾರತ ಸರ್ಕಾರ.

ನೇಗಿಲುಗಳ ಮತ್ತು ಕರಡಗಳು(ಸಾಂಚಿ)ನಯಗೊಳಿಸುವ ನೇಗಿಲುಗಳ 21¾ ಅಂಗುಲ ಉದ್ದ ಹಾಗೂ 3¼ ಅಂಗುಲ ಅಗಲವಿರುತ್ತದೆ. ಅಲಗು ಪ್ರತಿ ತುದಿಯಲ್ಲೂ ಒಂದೊಂದು ಲಂಬಮೂಲೆಗಳನ್ನು ಹೊಂದಿರುತ್ತದೆ. ಇವುಗಳನ್ನು ಚಪ್ಪಟೆಯಾದ ಮರದ ಆಧಾರಗಳಿಗೆ ಹೊಂದಿಸಲಾಗಿರುತ್ತದೆ.

ಭೂಮಿಯನ್ನು ಉಳುಮೆ ಮಾಡಿದ್ದು ನಂತರ ... ... ಅನುಮಾನಿಸ್ಪಷ್ಟವಿದ್ದಾಗ ಅದನ್ನು ಸಮಮಟ್ಟಗೊಳಿಸಲು ಕೆಗಿದು ನೇಗಿಲನ್ನು ಬಳಸಲಾಗುತ್ತದೆ. ಇದನ್ನು ಸಾವಿರಾರು ನೇಗಿಲ ನಂತೆ ಪಟ್ಟಗಳಿಂದ ಕಟ್ಟಿ ಎಳೆಯಲಾಗುತ್ತದೆ. ಇದನ್ನು ಬಿತ್ತನೆ ಮಾಡಲು ದೊಡ್ಡ ಕಲ್ಲುಗಳನ್ನು ತೆಗೆಯಲು ಸಹ ಬಳಸಲಾಗುತ್ತದೆ. ಇದು 15½ ಅಂಗುಲ ಉದ್ದ ಹಾಗೂ 3½ ಅಂಗುಲ ಅಗಲ ವಿರುತ್ತದೆ. ಇದಕ್ಕೆ ಸ್ಥಿರವಾದ ಆಕಾರದ ತಲೆ ಭಾಗ ಚಪ್ಪಟೆಯಾಗಿರುತ್ತದೆ. ಇದರ ಇನ್ನೊಂದು ತುದಿಯು ಚೂಪಾಗಿರುತ್ತದೆ. ಅಂಚು ಮೊನಚಾಗಿರುತ್ತದೆ. ಒಳ ಮೂಲೆಗಳು ಉದ್ದವಾಗಿ ಚೂಪಾಗಿರುತ್ತವೆ. ಕರಗಳು ಆಳವಾಗಿದ್ದು (ಬೆಳಕಿಗೆ ...) ಉಳಿದಭಾಗಕ್ಕಿರುತ್ತವೆ. ಅಂಚುಗಳು ಚಪ್ಪಟೆಯಾಗಿದ್ದು ಮೊನಚಾಗಿರುತ್ತವೆ.



ಚಿತ್ರ 3 : ಮೀನು ಕೊಕ್ಕೆಗಳು ಮೊಹೆಂಜೊದಾರೊ



ಚಿತ್ರ 4 : ಸುಟ್ಟು ಕಪ್ಪಾದ ಗೋಧಿ ಕಾಳುಗಳು

ಕೃಪೆ : ಪ್ರಾಚ್ಯವಸ್ತು ಇಲಾಖೆ, ಭಾರತ ಸರ್ಕಾರ

ಕಪ್ಪು, ಕೆಂಪು ಅಥವಾ ಕಪ್ಪು ಮತ್ತು ಕೆಂಪು ಹೋರಿಗಳನ್ನು ನೇಗಿಲಿಗೆ ಹೂಡಲು ಶಿಫಾರಸ್ಸು ಮಾಡಲಾಗಿದೆ. ಆದಕಾರಣ ಭೂಮಿ ಉಳುಮೆಯನ್ನು ಪ್ರಾರಂಭಿಸುವಾಗ ಇಂಥ ಬಗೆಯ ಹೋರಿಗಳನ್ನು ಆರಿಸಿಕೊಳ್ಳುವಂತೆ ಎಚ್ಚರಿಕೆ ವಹಿಸಬೇಕು. ಹಾಗೂ ಅವುಗಳ ಬಾಯಿಯ ಎರಡೂ ಪಕ್ಕಗಳನ್ನು ಬೆಣ್ಣೆ ಇಲ್ಲವೇ ತುಪ್ಪದಿಂದ ಸವರಬೇಕು. ದೃಢಕಾಯ (ಬಲಿಷ್ಠ) ಹೋರಿ, ಕೊಂಬುಗಳು ಇಲ್ಲದ, ಗೊರಸುಗಳು ಬಿರಿದಿರುವ ಅಥವಾ ಕೊಂಬುಗಳ ತುದಿ ಸಣ್ಣ ಇಲ್ಲವೇ ಶಿರಾ ಬಿದ್ದ(?) ಮಿಶ್ರ ಹೋರಿಗಳನ್ನು ಒಂದೇ ಕಾರ್ಯಕ್ಕೆ ಬಳಸುವುದನ್ನು ನಿಷ್ಕಾಸನ ಮಾಡಬೇಕು (ಶ್ಲೋ. 134-135).

ಬೇಸಾಯಗಾರರು ಉಳುಮೆಗೆ ಹೋಗಲು ನೆಟ್ಟಗೆ ನಿಂತು ಪೂರ್ವಾಭಿಮುಖವಾಗಿ ನಿಂತು ಕೈಮುಗಿದು ಬಳಿಕ ನೇಗಿಲನ್ನು ಪೂಜಿಸಿ ಹೋರಿಗಳ ಕೊರಳ ಸುತ್ತ ಬಣ್ಣದ ಹಾರ ಹಾಕಬೇಕು (ಶ್ಲೋ. 136).

ಓ ದೇವತೆಗಳ ಒಡೆಯ(ಇಂದ್ರ), ಮರುತ್ತುಗಳ (ಇಂದ್ರ), ಈ ಬಿಳಿಯ ಮೋಡಗಳು, ಹಾಲು ಮೊಸರು, ತುಪ್ಪಗಳ ಕಾಣಿಕೆ (ಆಹುತಿ)ಯನ್ನು ಸ್ವೀಕರಿಸಿ, ಒಳ್ಳೆಯ ಮಳೆಯಾಗುವಂತೆ ಕೃಪೆಮಾಡು (ಶ್ಲೋ. 137).

ಉಳುಮೆ ಮಾಡುತ್ತಿರುವಾಗ ಆ ಹೋರಿಗಳನ್ನು ಹೊಡೆದು, ಅವುಗಳನ್ನು ಕಿರುಕುಳ ನೋಯಿಸಬಾರದು. ಹಾಗೆಯೇ ಪದೇ ಪದೇ ಅವುಗಳನ್ನು ಹೊಡೆದು ನೋಯಿಸಬಾರದು (ಶ್ಲೋ. 138).

ಪರಾಶರರ ಹೇಳಿಕೆಯಂತೆ ಎಂಟು ಅಥವಾ ಸಾಲುಗಳನ್ನು (ನೇಗಿಲಿನಿಂದ) ಮಾಡಬಾರದು. ನೇಗಿಲು ಸಾಲುಗಳು ಒಂದು, ಮೂರು ಇಲ್ಲವೆ ಐದು(?)ಇರುತ್ತವೆ. ಮೊದಲ(?) ಸಾಲು ಸಂಪತ್ತು ಕೊಡುತ್ತದೆ, ಮೂರನೆಯದು ಬೇಸಾಯಗಾರನ ಬಯಕೆಯನ್ನು ಪೂರ್ಣಗೊಳಿಸುತ್ತದೆ ಹಾಗೂ ಐದನೆಯ ಮುಖ್ಯ ಹಾಗೂ ಪ್ರಮುಖ ಸಾಲಿನಿಂದ ಸಮೃದ್ಧ ಫಸಲು ದೊರಕುತ್ತದೆ (ಶ್ಲೋ. 139-140).

ಉಳುಮೆ ಮಾಡುತ್ತಿರುವಾಗ ಆಮೆಯೊಂದನ್ನು ತಗೆದರೆ ಆದರೆ ಆತನ (ಬೇಸಾಯಗಾರನ) ಹೆಂಡತಿ ಸಾಯುತ್ತಾಳೆ ಇಲ್ಲವೇ ಆತ ಬೆಂಕಿಯಿಂದ ನಷ್ಟಕ್ಕೊಳ ಗಾಗುತ್ತಾನೆ. ನೇಗಿಲು ಗುಳ ಸೀಳಿದರೆ ಅಥವಾ ಒಡೆದರೆ ಆತ ದೇಶದಿಂದ ಉಚ್ಚಾಟನೆ ಹೊಂದುತ್ತಾನೆ. ನೇಗಿಲು ಮುರಿದುದಾದರೆ ಒಡೆಯ (ಭೂಮಾಲೀಕ)ನು ಸಾಯುತ್ತಾನೆ, ನೇಗಿಲ ಹಿಡಿಕೆ ಅಥವಾ ನೊಗ ಮುರಿದರೆ ಬೇಸಾಯಗಾರನೂ ಸಹ ಸಾಯುತ್ತಾನೆ. ಇವೆಲ್ಲಕ್ಕೂ ಒಟ್ಟಿಗೆ(?) ಏನಾದರೂ ಆದುದಾದರೆ ಸಹೋದರನೊಬ್ಬ ಸಾಯುತ್ತಾನೆ ಇಲ್ಲವೇ ಮಗನೊಬ್ಬ ನೀರಿನಲ್ಲಿ ಮುಳುಗಿ ಹೋಗುತ್ತಾನೆ.

[illegible] ಬಂಧವು [illegible] ಕಾಯಿಲೆ [illegible] ಮತ್ತು [illegible] ಕಡಿದು(ಹರಿದು) ಹೋದರೆ ನಷ್ಟ ಸಂಭವಿಸುತ್ತದೆ. [illegible](?)ವು [illegible] ತೊಂದರೆ ಇಲ್ಲವೇ ಬಂಧನ(?) ಉಂಟಾಗುತ್ತದೆ. [illegible] ಕಾಲದಲ್ಲಿ ಹೋರಿಗಳ [illegible] (ಬಂಧ ಸಡಿಲಗೊಂಡು) ಓಡಿಹೋದರೆ [illegible] ಹಾಗೂ [illegible] ಹೋರಿಯು [illegible] ಹಾಗೂ ದೈಹಿಕವಾಗಿಯೂ ತೊಂದರೆ ಸಂಭವಿಸುತ್ತದೆ (ಶ್ಲೋ. 141–146).

ಹೋರಿಗಳ [illegible] ಹಾಗೂ [illegible] ಹೋರಿಗಳು [illegible] ಫಲವು [illegible] (?) [illegible]ಗುತ್ತದೆ (ಶ್ಲೋ. 147–148).

[illegible] (?) [illegible] ಮಾರ್ಚ್) [illegible] ಕೊಡುವುದು [illegible] (?) (ಶ್ಲೋ. 149).

[illegible] (—[illegible] ?) [illegible] ([illegible] ಎಪ್ರಿಲ್) [illegible] ? [illegible] ಮೇ) [illegible] (ಜೂನ್) [illegible] ಇರುತ್ತದೆ. ಕಾರ್ತೀಕ(?)ದಲ್ಲಿ [illegible] ದೊರೆಯುವ [illegible]ಗುತ್ತದೆ (ಶ್ಲೋ. 151–152).

ಅಧ್ಯಾಯ 4

ಗೊಬ್ಬರಗಳು ಮತ್ತು ಗೊಬ್ಬರಗಳನ್ನು ಹಾಕುವಿಕೆ

ಪ್ರಾಚೀನ ಭಾರತೀಯ ಬೇಸಾಯಗಾರರು ಶ್ರೀಮಂತ ಗೌರವಾರ್ಹ ಜನತೆಯ ಗುಂಪಿಗೆ ಸೇರಿದ್ದರು. ಬೇಸಾಯಗಾರರು ಸಸ್ಯ ಶರೀರ ಕ್ರಿಯಾಶಾಸ್ತ್ರ, ಮಣ್ಣುಗಳು, ಬೆಳೆಸರದಿ ಹಾಗೂ ಸಸ್ಯ ಸಂರಕ್ಷಣೆ ಮತ್ತು ವಿವಿಧ ಬಗೆಯ ಗೊಬ್ಬರಗಳ ಬಗ್ಗೆ ಸಾಕಷ್ಟು ತಿಳುವಳಿಕೆ ಹೊಂದಿದ್ದರು. ವಾಸ್ತವವಾಗಿ ಬೀಜಗಳ ಆಯ್ಕೆ ಮತ್ತು ಬೀಜೋಪಚಾರ, ಪ್ರಾಣಿಗಳ ಮಲ ಮೂತ್ರಗಳು. ಮೀನು ಮತ್ತು ಮೂಳೆಗಳು, ಗೋಮಾಂಸ ಮತ್ತು ಮೀನುಗಳನ್ನು ತೊಳೆದ ನೀರು. ಕುಡಿ ಮೀನುಗಳು ಮತ್ತು ವಿವಿಧ ಬಗೆಯ ಮಿಶ್ರಣ ಹಾಗೂ ಕಷಾಯಗಳು ಇವುಗಳನ್ನು ರಾಸಾಯನಿಕ ಗೊಬ್ಬರಗಳಾಗಿ ಬಳಸುವ ವಿಚಾರದಲ್ಲಿ ಅರ್ಥಶಾಸ್ತ್ರ, ಬೃಹತ್ ಸಂಹಿತೆ ಮತ್ತು ಅಗ್ನಿ ಪುರಾಣಗಳಲ್ಲಿ ಕಂಡುಬರುವ ಸುದೀರ್ಘ ನಿಯಮಾವಳಿಗಳನ್ನು ನೋಡಿದ ಯಾವ ವ್ಯಕ್ತಿಯೂ ಆಶ್ಚರ್ಯ ಮೆಚ್ಚುಗೆಗಳಿಂದ ಮರುಳಾಗದಿರನು. ಶಾಸನ ತತ್ವಗಳಲ್ಲಿ ಕೊಟ್ಟಿರುವುದನ್ನು ಬಿಟ್ಟರೆ ಇಂದು ನಮಗೆ ಪ್ರಾಚೀನ ಕೃಷಿ ನಿಯಮಗಳಾವುವೂ ತಿಳಿದಿಲ್ಲ. ಈ ದಿಸೆಯಲ್ಲಿ ಪ್ರಾಚೀನ ಭಾರತದ ಜನತೆಗೆ ತಿಳಿದಿದ್ದ ಕೃಷಿ ಪದ್ಧತಿ(ವಿಧಾನ)ಗಳು ಕಾಲಗತಿಸಿದಂತೆ ಮರೆಯಾಗಿ ಹೋಗಿವೆಯೆಂಬುದೂ ಸಹ ಸ್ಪಷ್ಟವಾಗಿದೆ.

ಸಸ್ಯ ಪೋಷಣೆಯ ದೃಷ್ಟಿಯಿಂದ ಅವಶ್ಯವಿರುವ ಗೊಬ್ಬರ ಹಾಕುವಿಕೆಯ ಮೂಲವನ್ನು ಅಥರ್ವವೇದದ (II, 8.3) ಶ್ಲೋಕವೊಂದರಲ್ಲಿ ಗುರುತಿಸಬಹುದಾಗಿದೆ. ಆದರೆ ಬೃಹತ್ ಸಂಹಿತೆ (ಅಧ್ಯಾಯ 58). ಅಗ್ನಿಪುರಾಣ (ಅಧ್ಯಾಯ 281), ಪರಾಶರರ ಕೃಷಿ ಸಂಗ್ರಹ (ಶ್ಲೋಕ 107, 108, 109, ವಂಗ ಭಾಷಾ ಸಂಪಾದಿತ, Cal 1322 B.S.) ಹಾಗೂ ಶುಕ್ರ ನೀತಿ (ಶುಕ್ರ IV)ಗಳಲ್ಲಿ ಈ ವಿಚಾರದಲ್ಲಿ ಇನ್ನೂ ಹೆಚ್ಚಿನ ವಿವರಗಳು ದೊರಕುತ್ತವೆ.

ಗೊಬ್ಬರಗಳು, ಮೇಕೆ, ಕುರಿ ಮತ್ತು ದನಗಳ ಸಗಣಿ ಹಾಗೂ ನೀರಿನಲ್ಲಿ ಕೊಳೆತ ಮಾಂಸಗಳನ್ನೊಳಗೊಂಡಿದ್ದವು. ವರಾಹ, ಶುಕ್ರ ಮತ್ತು ಅಗ್ನಿಪುರಾಣಗಳಲ್ಲಿ ದ್ವಿದಳ ಕಾಳುಗಳು, ಎಳ್ಳು, ಬಾರ್ಲಿ, ಮೇಕೆ ಮತ್ತು ಕುರಿಗಳ ಹಿಚಿಕೆ; ಮೀನು. ದನ ಮತ್ತು ಹಂದಿಗಳ ಮಾಂಸ; ಕೊಬ್ಬು ಇತ್ಯಾದಿ ವಿವಿಧ ವಸ್ತುಗಳಿಂದ ಮಾಡಿದ ಕಾಂಪೋಸ್ಟ್ ಗೊಬ್ಬರವನ್ನು ಕುರಿತು ತಿಳಿಸಲಾಗಿದೆ. ಕೌಟಿಲ್ಯರು ಒಂದು ಮರದ ಸತ್ತ ತಳ್ಳವನ್ನು ತೋಡಿ ಒಳಮಣ್ಣನ್ನು ಸುಟ್ಟು ಅದರಲ್ಲಿ ಮೂಳೆ ಮತ್ತು ಕೊಟ್ಟಿಗೆ ಗೊಬ್ಬರವನ್ನು

ತುಂಬಬೇಕೆಂದು ಸೂಚಿಸುತ್ತಾರೆ. ಅವರ ಅಭಿಪ್ರಾಯದಲ್ಲಿ ವೃಕ್ಷಗಳು ಫಲದಾಯಕವಾಗಲು ಕೆಲವುಸಾರಿ ಹೀಗೆ ಮಾಡುವುದು ಅವಶ್ಯಕ. ಅಗ್ನಿಪುರಾಣದಲ್ಲಿ ವಸ್ತುಲಕ್ಷಣ ವಿಭಾಗದಲ್ಲಿ ಒಂದೆಡೆ ಇತರ ರಾಸಾಯನಿಕ ಗೊಬ್ಬರಗಳ ಬಗ್ಗೆ(ದೋಹದ) ಮಾವಿಗೆ ತಣ್ಣನೆಯ ಮೀನಿನ ನೀರು, ಖರ್ಜೂರ ಮತ್ತು ತೆಂಗಿನ ಮರಗಳಿಗೆ ಉಪ್ಪುನೀರು, ಇತರ ಎಲ್ಲಾ ಮರಗಳಿಗೂ ವಿಡಂಗ, ಮೀನು, ಮತ್ತು ಮಾಂಸದ ನೀರು ಮೊದಲಾದ ಇತರ ಗೊಬ್ಬರಗಳನ್ನು ಹಾಕುವಂತೆ ಸೂಚಿಸಲಾಗಿದೆ. ನೀರೆರೆಯುವ ವಿಚಾರದಲ್ಲಿ ಬೇಸಿಗೆಯಲ್ಲಿ ಬೆಳಗು ಸಂಜೆಗಳೆರಡು ಹೊತ್ತು, ಚಳಿಗಾಲ ಹಾಗೂ ಮಳೆಗಾಲಗಳಲ್ಲಿ ಮಣ್ಣು ಒಣಗಿದಾಗ ದಿನಬಿಟ್ಟುದಿನ (ಎರಡು ದಿನಕೊಮ್ಮೆ) ನೀರು ಹಾಕಬೇಕು. ಇದು ತೋಟದ ಕೆಲಸದ ರೀತಿಯ ಒಂದು ಸಂಕ್ಷಿಪ್ತ ವಿವರವಾಗಿದೆ. ಇವೆಲ್ಲ ಅನುಭವದ ಫಲದಾದವುಗಳಾಗಿರುವುದರಿಂದ ಇವುಗಳ ಬಗ್ಗೆ ಹೆಚ್ಚಿಗೆ ಏನನ್ನೂ ಹೇಳುವಂತಿಲ್ಲ ಹಾಗೂ ಸುಧಾರಣೆ ಮಾಡುವಂತೆಯೂ ಇಲ್ಲ. ಆದರೆ ಎಂದೂ ಎಣ್ಣೆ ಹಿಂಡಿಗಳನ್ನು ಗೊಬ್ಬರವಾಗಿ ಬಳಸದಿರುವುದು ಒಂದು ಆಶ್ಚರ್ಯದ ಸಂಗತಿಯಾಗಿದೆ. ಇಂದಿನ ಕೃಷಿ ರಾಸಾಯನಿಕ ಶಾಸ್ತ್ರದಿಂದಾಗಿ ಬಾರ್ಲಿ, ದ್ವಿದಳಧಾನ್ಯಗಳು ಮತ್ತು ಇತರ ಆಹಾರ ಸಾಮಗ್ರಿಗಳಲ್ಲದೆ ಉಳಿದವುಗಳಿಂದಲೂ ಕಾಂಪೋಸ್ಟ್ ಗೊಬ್ಬರ ತಯಾರಿಸುವುದು ಸಾಧ್ಯವಾಗಿದೆ.

ಗೊಬ್ಬರ ಪದ್ಧತಿ ಮತ್ತು ವಿನಿಯೋಗ

ಪರಾಶರರಂತೆ : ಮಾಘ ಮಾಸದಲ್ಲಿ ಸಗಣಿಯಿಂದ ಸಗಣಿ ರಾಶಿಯನ್ನು ಮಾಡಿ ಬಿಸಿಲಿನಲ್ಲಿ ಒಣಗಿಸಿ ಸಣ್ಣ ಸಣ್ಣ ಉಂಡೆಗಳಾಗಿ ಮಾಡಬೇಕು. ಫಾಲ್ಗುಣ ಮಾಸದಲ್ಲಿ ಇವುಗಳನ್ನು ಅದಕ್ಕಾಗಿಯೇ ಮಾಡಿದ ಗುಂಡಿಗಳಲ್ಲಿ ಇರಿಸಿ ಮುಂದೆ ಬಿತ್ತನೆ ಕಾಲದಲ್ಲಿ ಜಮೀನಿನಲ್ಲಿ ಚೆಲ್ಲಬೇಕು. ಗೊಬ್ಬರ ಹಾಕದಿರುವಾಗ ಬಿತ್ತಿದ ಬೆಳೆ ಸುಮ್ಮನೆ ಬೆಳೆಯುವುದಲ್ಲದೆ ತೆನೆ ಬಿಡುವುದಿಲ್ಲ (ಶ್ಲೋಕ. 107–109).

ಬೇಸಾಯದಲ್ಲಿ ಗೊಬ್ಬರ ಹಾಕುವಿಕೆಯ ಮಹತ್ವವನ್ನು ಭಾರತದಲ್ಲಿ ಋಗ್ವೇದ ಕಾಲದ ವೇಳೆಗಾಗಲೇ ಗಣನೆಗೆ ತೆಗೆದುಕೊಳ್ಳಲಾಗಿದೆ(ಗುರುತಿಸಿದ್ದ ಪ್ರಶಂಸಿಸಲಾಗಿದೆ). ಆದರೆ ಪ್ರಾಚೀನ ಭಾರತೀಯರಿಗೆ, ಕೃತಕ ಗೊಬ್ಬರಗಳಾಗಿ ರಾಸಾಯನಿಕಗಳ ಬಳಕೆಯು ಸ್ಪಷ್ಟವಾಗಿ ತಿಳಿದಿರಲಿಲ್ಲ. ಕೃತಕ ರಾಸಾಯನಿಕ ಗೊಬ್ಬರಗಳು ನೂರು ವರ್ಷಗಳಿಂದೀಚೆಗೆ ಬಳಕೆಗೆ ಬಂದಿವೆ. ಒಂದೆ ಮೂಳೆಗಳು, ಪ್ರಾಣಿಗಳ ಮಾಂಸ, ಮೀನು ತೊಳೆದ ನೀರು; ತರಕಾರಿ ಮತ್ತು ಪ್ರಾಣಿಗಳ ಕೆಲವು ಭಾಗಗಳು ಇತ್ಯಾದಿಗಳಲ್ಲದೇ ಅವರು ಪ್ರಮುಖವಾಗಿ ಉಪಯೋಗಿಸುತ್ತಿದ್ದ ಗೊಬ್ಬರದಲ್ಲಿ ಪ್ರಾಣಿಗಳನ್ನು ಶುಭ್ರವಾಗಿಟ್ಟು ಮೂತ್ರಗಳನ್ನು ಹೀರಿಕೊಳ್ಳಲು ಬಳಸಲಾಗುತ್ತಿದ್ದ ಕಸಕಡ್ಡಿಗಳೊಡನೆ ಮಿಶ್ರಿತ ವಿವಿಧ ಪ್ರಾಣಿಗಳ ಮಲವು ಇರುತ್ತಿತ್ತು.

ಆದರೆ ಕೌಟಿಲ್ಯನಿಗೆ ಗೊಬ್ಬರದಲ್ಲಿರುವ ಸರಿಯಾದ ರಾಸಾಯನಿಕ ಘಟಕಗಳನ್ನು ಕುರಿತು ತಿಳಿದಿತ್ತೋ ಇಲ್ಲವೋ ತಿಳಿಯದು. ಆದರೆ ಅವರು ಅವುಗಳ ಫಲವತ್ತತೆ ಹೆಚ್ಚಿಸುವ ಗುಣ ಹಾಗೆಯೇ ಮಣ್ಣಿನ ರಚನೆ ಹಾಗೂ ನೀರುಧಾರಣ ಸಾಮರ್ಥ್ಯದ ಮೇಲೆ ಅವು ಬೀರುವ ಭೌತಿಕ ಪರಿಣಾಮಗಳನ್ನು ನಿಶ್ಚಿತವಾಗಿಯೂ ತಿಳಿದಿದ್ದರು. ಇಂದು ಕೊಟ್ಟಿಗೆ ಗೊಬ್ಬರವು ಸಸ್ಯಪೋಷಣೆಗೆ ಬೇಕಾದ ಎಲ್ಲಾ ಆವಶ್ಯಕ ಅಂಶಗಳನ್ನೂ ಎಂದರೆ ಸಾರಜನಕ, ರಂಜಕಾಮ್ಲ ಮತ್ತು ಪೊಟ್ಯಾಷ್‌ಗಳನ್ನು ಹೊಂದಿರುತ್ತದೆಂಬ ಅಂಶವು ಕೇವಲ ಆಧುನಿಕ ಸಂಶೋಧನೆಯಾಗಿದೆ. ಗೊಬ್ಬರದಲ್ಲಿ ಸಾರಜನಕ ಸಂಯುಕ್ತಗಳು ಫಲವತ್ತತೆಯ ಮುಖ್ಯ ಘಟಕಗಳಾಗಿರುತ್ತವೆ. ಆದರೆ ಗೊಬ್ಬರದಲ್ಲಿಯ ಸಾರಜನಕಾಂಶವು ಅನಿವಾರ್ಯವಾಗಿ ನಷ್ಟವಾಗುತ್ತದೆ. ಸ್ಥೂಲಮಟ್ಟಿಗೆ ಈ ರೀತಿಯ ನಷ್ಟವನ್ನು ಸಗಣಿರಾಶಿಯನ್ನು ಕದಡಿಸದಿರುವುದರಿಂದ ಮಾತ್ರ ಕಡಿಮೆ ಮಾಡಬಹುದಾಗಿದೆ. ಏಕೆಂದರೆ, ಹಾಗೆ ಕದಡಿಸುವುದರಿಂದ ಗೊಬ್ಬರದಲ್ಲಿಯ ನೀರಿನ ಅಂಶ ಎಂದರೆ ಮೂತ್ರ ಜಲವು ಅಗ್ರದಲ್ಲಿ ಕಲೆಯುವಂತಾಗಿ ತತ್ಫಲವಾಗಿ ಅಮೋನಿಯಾ ಅನಿಲವು ಆವಿಯಾಗಿ ಹೋಗುವುದು ಹೆಚ್ಚುತ್ತದೆ. ಈ ದೃಷ್ಟಿಯಿಂದ ಸಗಣಿ ರಾಶಿಯನ್ನು ಮಾಘ ಮಾಸದವರೆಗೆ ಎಂದರೆ ವರ್ಷದಲ್ಲಿ ಹತ್ತು ತಿಂಗಳವರೆಗೆ ಕದಲದಂತಿರಿಸಬೇಕೆಂಬ ಪರಾಶರರ ಆದೇಶವು ಯುಕ್ತವಾಗಿದೆ. ಅಲ್ಲದೆ, ಯಾವುದಾದರೂ ಸುಲಭವಾಗಿ ಕೊಳೆಯುವಂಥ ಪದಾರ್ಥವು ಇನ್ನೂ ಕ್ರಿಯಾಶೀಲವಾಗಿ ಉಳಿದಿದ್ದುದಾದರೆ ಅಂಥದ್ದನ್ನು ಒಣಗಿಸುವುದರ ಮೂಲಕ ಇಲ್ಲದಂತಾಗಿಸಬೇಕೆಂಬ ಅವರ ಹೇಳಿಕೆಯು ಗಮನಾರ್ಹವಾಗಿದೆ. ಈ ಕ್ರಿಯೆಯಿಂದ ಕ್ರಿಯಾತ್ಮಕ ಅಮೋನಿಯಾವು ಕಡಿಮೆಯಾಗುತ್ತದೆ. ಇಲ್ಲದ ಪಕ್ಷದಲ್ಲಿ ಅದು ಬಿತ್ತನೆ ಬೀಜ ಹಾಗೂ ಸಸ್ಯಗಳ ಎಳೆಯ ಬೇರುಗಳಿಗೆ ಅಪಾಯಕಾರಿಯಾಗಿ ಪರಿಣಮಿಸುತ್ತದೆ. ಇಲ್ಲಿ ಗೊಬ್ಬರ ಸಿದ್ಧಪಡಿಸುವ ವಿಧಾನವೂ ಸಹ ಗೊಬ್ಬರದಷ್ಟೇ ಮುಖ್ಯವಾಗಿರುತ್ತದೆ. ಏಕೆಂದರೆ, ಅದು ಭೂಮಿಯಲ್ಲಿ ವಿಘಟನೆ (ವಿಭಜನೆ)ಗೊಂಡಾಗ ಹ್ಯೂಮಸ್ಸನ್ನು ಹೆಚ್ಚಿಸುತ್ತದೆ. ಹ್ಯೂಮಸ್ ಪ್ರಮಾಣವು ತೇವ ವಾತಾವರಣದಲ್ಲಿ ಉತ್ಕರ್ಷಣೆಗೊಂಡು ಕಡಿಮೆಯಾಗುವ ಸಾಧ್ಯತೆಯಿರುತ್ತದೆ. ಆದರೆ ಮೇಲಿನ ವಿಧಾನ ಅನುಸರಿಸಿ ಗೊಬ್ಬರವನ್ನು ಭೂಮಿಯಲ್ಲಿ ಚೆಲ್ಲಿದಾಗ ಅದರಲ್ಲಿ ತುಲನಾತ್ಮಕವಾಗಿ ಹೆಚ್ಚು ಹ್ಯೂಮಸ್ ಇದ್ದು ಮಣ್ಣಿನ ಫಲವತ್ತತೆಗೆ ಕಾರಣವಾಗುತ್ತದೆ. ಆ ಕಾಲದಲ್ಲಿ ಗೊಬ್ಬರ ಹಾಕುವಿಕೆಯ ಬಗ್ಗೆ ತಿಳಿವಳಿಕೆಯು ಪ್ರಾಯಶಃ ಪ್ರಾಯೋಗಿಕ ತಿಳಿವಳಿಕೆಯಾಗಿದ್ದಿತೇ ಹೊರತು ವೈಜ್ಞಾನಿಕ ಅವಲೋಕನೆಯ ಫಲವಾಗಿರಲಿಲ್ಲ.

ಗೊಬ್ಬರವನ್ನು ಕುರಿತು ಇನ್ನೂ ಅನೇಕ ಲೇಖಕರು ಉಲ್ಲೇಖಿಸಿದ್ದಾರೆ. ವರಾಹ ಮಿಹಿರನು ತನ್ನ ಬೃಹತ್ ಸಂಹಿತೆಯಲ್ಲಿ (ಬೃಹತ್ ಸಂಹಿತೆ ಸಂ. ಡಾ. ಕರ್ನ್, ಅಧ್ಯಾಯ 55, 304) ಹೂವುಗಳು ಮತ್ತು ಹಣ್ಣು ಹೆಚ್ಚಾಗಿ ಬಿಡುವುದಕ್ಕೆ ಒಂದು

ಆಢಕ (64 ಪಲ)ದಷ್ಟು ಎಳ್ಳು, ಎರಡು ಆಢಕಗಳಷ್ಟು ಮೋಕೆ ಇಲ್ಲವೆ ಕಿರು ಪಿಟಕೆ. ಒಂದು ಪ್ರಸ್ಥ (16 ಪಲ)ದಷ್ಟು ಬಾರ್ಲಿಹುಡಿ ಹಾಗೂ ಒಂದು ತೊಲದಷ್ಟು ದನದ ಮಾಂಸ ಇವುಗಳನ್ನು ಒಂದು ದ್ರೋಣ (265 ಪಲ)ನೀರಿನಲ್ಲಿ ಹಾಕಿ ಏಳು ರಾತ್ರಿಗಳ ವರೆಗೆ ಬಿಟ್ಟಿದ್ದು, ಸಸ್ಯದ ಬೇರುಗಳ ಸುತ್ತ ಹಾಕಬೇಕು ಎಂದು ತಿಳಿಸುತ್ತಾನೆ (ಶ್ಲೋ. 17–18). ಅಲ್ಲದೆ, ಬಿತ್ತನೆಗೆ ಮುನ್ನ ಈ ಮುಂದೆ ತಿಳಿಸಿದ ರೀತಿಯಲ್ಲಿ ಬೀಜೋಪಚಾರ ಮಾಡಬೇಕೆಂದು ತಿಳಿಸುತ್ತಾನೆ.

ತುಪ್ಪ ಸವರಿದ ಅಂಗೈಯಲ್ಲಿ ಬೀಜಗಳನ್ನು ತೆಗೆದುಕೊಂಡು ಹಾಲಿಗೆ ಹಾಕಬೇಕು. ಮರುದಿನ ಬೀಜಗಳನ್ನು ತುಪ್ಪ ಸವರಿದ ಕೈಗಳಿಂದಲೇ ಹಾಲಿನಿಂದ ತೆಗೆದು ಬಿಡಿ ಒಂದಾಗಿ ಅಂಟಿದ ಆ ಬೀಜಗಳನ್ನು ಪ್ರತ್ಯೇಕಗೊಳಿಸಬೇಕು. ಈ ವಿಧಾನವನ್ನು ಕ್ರಮವಾಗಿ ಹತ್ತು ದಿನಗಳವರೆಗೆ ಮುಂದುವರಿಸಬೇಕು. ಬಳಿಕ ಬೀಜಗಳನ್ನು ಪುಷ್ಕರ ಪೂರ್ಣವಾಗಿ ಸಗಣಿಯಿಂದ ಉಜ್ಜಿ, ಹಂದಿ ಇಲ್ಲವೆ ಜಿಂಕೆಯ ಮಾಂಸವಿರುವ ಪಾತ್ರೆಯಲ್ಲಿ ಹಾಕಿ ಆವಿಯಲ್ಲಿ ಬೇಯಿಸಬೇಕು. ಅನಂತರ ಅವುಗಳನ್ನು ಮೇಲೆ ತಿಳಿಸಿದ ಮಾಂಸ ಮತ್ತು ಹಂದಿಯ ಕೊಬ್ಬಿನೊಡನೆ ಮಣ್ಣಿನಲ್ಲಿ ಬಿತ್ತಬೇಕು; ಇದಕ್ಕೆ ಮುನ್ನ ಮಣ್ಣಿನಲ್ಲಿ ಎಳ್ಳು ಬಿತ್ತಿ ತೆಗೆದಿರಬೇಕು ಇಲ್ಲವೇ ಮಣ್ಣಿನಲ್ಲಿ ಉತ್ತು ಬಿಟ್ಟಿರಬೇಕು. ಹಾಗೂ ನಿತ್ಯವೂ ಹಾಲು ಬೆರಸಿದ ನೀರನ್ನು ಚಿಮುಕಿಸುತ್ತಿರಬೇಕು (ಶ್ಲೋ. 19–20).

ಬಳ್ಳಿಗಳ (ಎಂದರೆ ಕುಡಿಬೆಳೆಯುವಿಕೆ ಹಾಗೂ ಕಾಂಡ ಮತ್ತು ಎಲೆಗಳು ಚೆನ್ನಾಗಿ ಬೆಳೆಯುವಿಕೆ) ಬೆಳವಣಿಗೆಯನ್ನು ಖಾತ್ರಿಪಡಿಸಿಕೊಳ್ಳಲು ಬಿತ್ತನೆ ಬೀಜಗಳನ್ನು ಪುಡಿಮಾಡಿದ ಬತ್ತ, ಮಾಷ (ಅವರೆ) ಎಳ್ಳು ಮತ್ತು ಬಾರ್ಲಿಯೊಂದಿಗೆ ಕೊಳೆತ ಮಾಂಸ ದಿಂದ ಕೂಡಿದ ಕಷಾಯದಲ್ಲಿ ಸರಿಯಾಗಿ ನೆನೆಸಿ, ಬಳಿಕ ಅರಿಶಿನದೊಂದಿಗೆ ಆವಿಯಲ್ಲಿ ಬೇಯಿಸಬೇಕು. ಈ ಕ್ರಮವು ತಿಂತಿಣಿ (ಟ್ಯಾಮರಿಂಡಸ್ ಇಂಡಿಕ) ರೋಹಣೆಯೂ ಉಪಯುಕ್ತವಾಗುತ್ತದೆ. ಕಪಿತ್ಥ (ಫೆರೋನಿಯ ಎಲಿಫೆಂಟಮ್) ಸಸಿಗೆ, ಬೀಜಗಳನ್ನು ಸುಮಾರು ಎರಡು ನಿಮಿಷಗಳ ಕಾಲ ನೆನೆಸಬೇಕು. ಬಾಹ್ಯಾರ್ಥದಲ್ಲಿ ಹೇಳುವುದಾದರೆ ನೂರು ಬಾರಿ ಕೈ ಚಪ್ಪಾಳೆ ತಟ್ಟುವವರೆಗೆ. ಹಾಲಿನಲ್ಲಿ ಬೇಯಿಸಿದ ಎಂಟು ಬೇರುಗಳ ಎಂದರೆ ಅತಿಮುಕ್ತ (ಮಲ್ಲಿಗೆ), ಆಮಲಕ (ಫಿಲ್ಲಾಂತಸ್ ಎಂಬ್ಲಿಕಸ್), ಧವ (ಗ್ರಿಸ್ಲಿಯಾ ಟೊಮೆಂಟೋಸ), ವಾಸಕ (ಜಸ್ಟಿಕ ಗಾಂಡರುಸ್ಸ), ವೇತಸ (ಕ್ಯಾಲಮಸ್ ರೊಟಾಂಗ್), ಸರ್ಪವಳಿ (ಗೈನಾಂಡ್ರೊಪ್ಸಿಸ್ ಪೆಂಟಾಫಿಲ್ಲಾ), ಶ್ಯಾಮ (ಎಕ್ಬಿಟಸ್ ಫ್ರುಟಿಕೋಸ) ಮತ್ತು ಅತಿಮುಕ್ತಕ (ಅಗನೋಸ್ಮ ಕ್ಯಾರ್ಯೋಫಿಲ್ಲೇಟ)ಗಳ ಕಷಾಯದಲ್ಲಿ ನೆನೆಯಬಿಡಬೇಕು. ಬಳಿಕ ಬೀಜಗಳನ್ನು ಬಿಸಿಲಿನಲ್ಲಿ ಒಣಗಿಸಬೇಕು. ಈ ಕ್ರಮವನ್ನು ಮೂವತ್ತು ದಿವಸಗಳವರೆಗೆ ಪುನರಾವರ್ತಿಸಬೇಕು. ಭೂಮಿಯಲ್ಲಿ ಒಂದು ಮೊಳ ವ್ಯಾಸ ಹಾಗೂ ಎರಡು ಮೊಳ ಆಳವಿರುವ ಹಳ್ಳವನ್ನು(ಗುಂಡಿಯನ್ನು)ತೋಡಿ ಅದರಲ್ಲಿ ಈ ಹಾಲಿನಂಥ ಕಷಾಯ ವನ್ನು ತುಂಬಬೇಕು. ಈ ಹಳ್ಳವು ಒಣಗಿದಾಗ ಅದನ್ನು ಬೆಂಕಿಯಿಂದ ಸುಟ್ಟು ತುಪ್ಪ

ಮತ್ತು ಜೇನು ಬೆರಸಿದ ಬೂದಿಯನ್ನು ಲೇಪಿಸಬೇಕು. ಈಗ ಮೂರು ಅಂಗುಲಗಳಷ್ಟು ಮಣ್ಣನ್ನು ಒಳಗೆ ಹಾಕಿ, ಬಳಿಕ ಅವರೆ, ಎಳ್ಳು ಮತ್ತು ಬಾರ್ಲಿ ಪುಡಿಯನ್ನು ಹಾಕಿ ಮೇಲೆ ಮತ್ತೆ ಮೂರು ಅಂಗುಲದಷ್ಟು ಮಣ್ಣು ಹಾಕಬೇಕು. ಕೊನೆಯದಾಗಿ ಮೀನು ತೊಳೆದ ನೀರನ್ನು ಚಿಮುಕಿಸಿ ಮಣ್ಣನ್ನು ಚೆನ್ನಾಗಿ ಬಡಿದು ಒಂದೇಸಮನೆ ಗಟ್ಟಿಯಾಗಿರುವಂತೆ ಮಾಡಬೇಕು. ಬಳಿಕ ಹಿಂದೆ ಸಿದ್ಧಗೊಳಿಸಿದ ಬಿತ್ತನೆ ಬೀಜಗಳನ್ನು ಮೀನು ತೊಳೆದ ನೀರು ಹಾಗೂ ಮೂರು ಅಂಗುಲ ಮಣ್ಣಿನ ಕೆಳಗೆ (ಮೀನುಗಳೊಂದಿಗೆ) ಇರಿಸಬೇಕು.

ಇದರಿಂದ ಆಶ್ಚರ್ಯಚಕಿತರಾಗುವಂತೆ ಸಮೃದ್ಧವಾಗಿ ಕವಲೊಡೆದು ಎಲೆಗಳಾಗುವುದಕ್ಕೆ ಎಡೆಯಾಗುತ್ತದೆ[1] (ಶ್ಲೋ. 26–27).

ಅಗ್ನಿಪುರಾಣದಲ್ಲಿ ಮುಂದೆ ಹೇಳುವ ಸೂಚನೆಗಳು ಕಂಡುಬರುತ್ತವೆ. ಪುಡಿ ಮಾಡಿದ ಬಾರ್ಲಿ, ಎಳ್ಳು ಮತ್ತು ಆಡು ಪಿಚಿಕೆ (ಹಿಕ್ಕೆ)ಗಳನ್ನು ಒಟ್ಟಿಗೆ ಬೆರಸಿ, ದನ ತೊಳೆದ ನೀರಿನಲ್ಲಿ ಕ್ರಮವಾಗಿ ಏಳು ರಾತ್ರಿಯವರೆಗೆ ನೆನೆಸಲಾದ ಗೊಬ್ಬರವನ್ನು ಮಣ್ಣಿಗೆ ಹಾಕುವುದರಿಂದ ಮರವು ಫಲಪುಷ್ಪಭರಿತವಾಗುತ್ತದೆ. ಮೀನು ತೊಳೆದ ನೀರು ಚಿಮುಕಿಸುವುದರಿಂದ ಮರವು ಚೆನ್ನಾಗಿ ಸಮೃದ್ಧವಾಗಿ ಬೆಳೆಯುತ್ತದೆ (ಅನುವಾದ ಎಮ್. ಎನ್ ದತ್, ಸಂ. II, ಪು. 1038). ಖಾನಾ ಬೇಸಾಯಗಾರರಿಗೆ ಈ ರೀತಿ ಸೂಚಿಸುತ್ತಾಳೆ:

'ಓ ಆರ್ಯ ರೈತನೇ (ಬೇಸಾಯಗಾರನೇ). ಬಿದಿರು ಬೆಳೆ ಸತ್ವಪೂರ್ಣವಾಗಿ ಕಸುವಿನಿಂದ ಬೆಳೆಯಬೇಕಾದರೆ ಬೇರುಗಳಿಗೆ ಬತ್ತದ ಪುಡಿಯನ್ನು 'ಹುರು'ಗೆ ಬೂದಿಯನ್ನು ತೆಂಗಿನ ಸಸಿಗೆ ಉಪ್ಪನ್ನೂ ಹಾಕು'.

ಅರ್ಥಶಾಸ್ತ್ರದಲ್ಲಿ ಈ ರೀತಿ ಹೇಳಲಾಗಿದೆ. ಧಾನ್ಯದ ಬೀಜಗಳನ್ನು ಏಳುರಾತ್ರಿಗಳವರೆಗೆ ಮಂಜು ಮತ್ತು ಬಿಸಿಲಿಗೆ (ತುಷಾರಪಾಯನ ಉಷ್ಣಂ ಚ) ತೆರೆದಿಡಬೇಕು: ಮುದ್ಗ, ಮಾಷ ಇತ್ಯಾದಿ ಕೋಶೀ ಬೀಜಗಳನ್ನು ಇದೇ ರೀತಿ ಮೂರು ರಾತ್ರಿಗಳವರೆಗೆ ಉಪಚರಿಸಬೇಕು. ಕಬ್ಬಿನ ಕಾಂಡ ಹಾಗೂ ಅಂತಹ ಇತರ ಕಾಂಡಗಳ ತುದಿಗಳನ್ನು ಜೇನು, ಶುದ್ಧಗೊಳಿಸಿದ ಬೆಣ್ಣೆ, ಹಂದಿಕೊಬ್ಬು ಮತ್ತು ಸಗಣಿ ಮಿಶ್ರಣದಿಂದ ಲೇಪಿಸಬೇಕು. ಗೆಡ್ಡೆ ಬೇರು (ಕಾಂಡಬೇರು)ಗಳನ್ನು ಜೇನು ಮತ್ತು ಶುದ್ಧ ಬೆಣ್ಣೆಯಿಂದಲೂ ಹತ್ತಿ ಬೀಜಗಳನ್ನು ಸಗಣಿಯಿಂದಲೂ ಲೇಪಿಸಬೇಕು, ಮರಗಳ ಬೇರಿನೆಡೆ ಇರುವ ನೀರು ಕುಳಿಗಳನ್ನು ಸುಟ್ಟು, ಸರಿಯಾದ ಹಂಗಾಮಿನಲ್ಲಿ ಮೂಳೆಗಳು

[1] ಬೃಹತ್‌ಸಂಹಿತೆಯ ಈ ಅನುವಾದಿತ ಭಾಗಗಳನ್ನು ಡಾ। ಸೀಲ್‌ರವರ 'ಪಾಸಿಟಿವ್ ಸೈನ್ಸಸ್ ಆಫ್ ದಿ ಹಿಂದೂಸ್' ಕೃತಿಯಿಂದ ತೆಗೆದುಕೊಂಡಿದೆ.

ಮತ್ತು ಆಕಳ ಸಗಣಿಯ ಗೊಬ್ಬರ ಕೊಡಬೇಕು. ಬೀಜದಿಂದ ಹೊರಟ ಕುಡಿಗಳು ಬೆಳೆದಾಗ, ಆಗತಾನೇ ಹಿಡಿದ ಅತಿಸಣ್ಣ ಮೀನುಗಳನ್ನು ಗೊಬ್ಬರದಂತೆ ಹಾಕಿ ಸ್ನುಹಿ (ಯುಫೋರ್ಬಿಯ ಆ್ಯಂಟಿಕೋರಮ್) ಹಾಲಿನಿಂದ ನೀರಾವರಿ ಮಾಡಬೇಕು (ಶಾಮಾಶಾಸ್ತ್ರಿ ಅನುವಾದಿತ ದ್ವಿತೀಯ ಸಂಪಾದನೆ, ಪುಟ 141).

ಶುಕ್ರಾಚಾರ್ಯರು (ಶುಕ್ರ iv. vv. 94, 107, 112) ಈ ಮುಂದೆ ತಿಳಿಸಿದ ವಿವರಗಳನ್ನು ಕೊಟ್ಟಿದ್ದಾರೆ. ಸಾಮಾನ್ಯವಾಗಿ ಸಸ್ಯಗಳು ಆರೋಗ್ಯವಾಗಿ ಬೆಳೆಯಬೇಕಾದರೆ ಅವುಗಳಿಗೆ ಆಡು ಮತ್ತು ಕುರಿ ಹಿಚಿಕೆಗಳು, ದನಗಳ ಸಗಣಿ, ನೀರು ಮತ್ತು ಮಾಂಸಗಳನ್ನು ಹಾಕಿ ಪೋಷಿಸಬೇಕು. ಮರಗಳಲ್ಲಿ ಹಣ್ಣುಗಳು ನಾಶವಾದುದಾದರೆ ಕುಲತ್ಥ, ಮಾಷ, ಮುದ್ಗ (ಎಲ್ಲಾ ದ್ವಿದಳ ಕಾಳುಗಳು), ಯವ ಮತ್ತು ತಿಲ (ಎಳ್ಳು) ಗಳೊಂದಿಗೆ ಬೇಯಿಸಿ ಆರಿಸಿದ ತಣ್ಣನೆಯ ನೀರನ್ನು ಹಾಕುವುದರಿಂದ ಮರಗಳ ಹೂವು ಹಣ್ಣುಗಳ ಬೆಳವಣಿಗೆಗೆ ನೆರವಾಗುತ್ತದೆ. ಮೀನುಗಳನ್ನು ತೊಳೆದು ಶುಚಿಮಾಡಿದ ನೀರನ್ನು ಹಾಕುವುದರಿಂದ ಮರದ ಬೆಳವಣಿಗೆ ವೃದ್ಧಿಯಾಗುತ್ತದೆ. ಆಡು ಮತ್ತು ಕುರಿ ಹಿಚಿಕೆ ಪುಡಿ, ಯವ ಮತ್ತು ತಿಲ (ಎಳ್ಳು)ಗಳ ಪುಡಿ, ಗೋಮಾಂಸ ಹಾಗೂ ನೀರುಗಳನ್ನು (ಒಟ್ಟಿಗೆ ಕಲಕಿದ) ಏಳು ರಾತ್ರಿಗಳವರೆಗೆ ಇಟ್ಟಿರಬೇಕು. ಇಂಥ ನೀರನ್ನು ಹಾಕುವುದರಿಂದ ಎಲ್ಲಾ ಮರಗಳಲ್ಲಿಯೂ ಫಲಪುಷ್ಪಗಳ ಬೆಳವಣಿಗೆಗೆ ತುಂಬಾ ಸಹಕಾರಿಯಾಗುತ್ತದೆ. ಈ ವಸ್ತುಗಳಲ್ಲಿ ಸಸ್ಯಪೋಷಣೆಗೆ ಅತ್ಯವಶ್ಯವಾಗಿರುವ ಸಾರಜನಕ ಮತ್ತು ರಂಜಕಗಳು ಇರುತ್ತವೆ.

ಸಸ್ಯಪೋಷಣೆ

'ಉಪವನ ವಿನೋದ'ದಲ್ಲಿ ಗೊಬ್ಬರ ಹಾಕುವುದರ ಬಗ್ಗೆ ಸುದೀರ್ಘವಾದ ವಿವರ ಸಿಕ್ಕುತ್ತದೆ. ಜಿ. ಪಿ. ಮಜುಂದಾರರು ಅನುವಾದಿಸಿದ ಉಪವನ ವಿನೋದ ಪುಸ್ತಕದಲ್ಲಿಯ ಕೆಲವು ಮುಖ್ಯ ಭಾಗಗಳನ್ನು ಕೆಳಗೆ ಕೊಡಲಾಗಿದೆ :

ಮರಗಳನ್ನು ನೆಡುವುದರಿಂದ ಮಾತ್ರವೇ ಫಲಪುಷ್ಪಗಳನ್ನು ಕೊಡುವುದಿಲ್ಲ; ಇಲ್ಲಿ ಋಷಿಗಳು ತಿಳಿಸಿದ ಸಸ್ಯ ಪೋಷಣೆ ನಿಯಮಗಳನ್ನು ನಿರೂಪಿಸಲಾಗಿದೆ (ಶ್ಲೋ. 147).

ಪುಡಿಮಾಡಿದ ಬಿಳಿಸಾಸುವೆ ಅಥವಾ ಎಳ್ಳಿನ ಹಿಂಡಿಯನ್ನು ಹಾಕಿದರೆ ಬಿಜೂರ, ಬಿಲ್ವ ಮತ್ತು ಲಕುಚ ಈ ಮೂರು ಮರಗಳ ಬೇರುಗಳು ಚೆನ್ನಾಗಿ ವೃದ್ಧಿಯಾಗುತ್ತವೆ. ಮಾವಿನ ಮರವು ಚೆನ್ನಾಗಿ ಬೆಳೆಯುತ್ತದೆ. ಐರಾವತ ಮತ್ತು ನಿಚುಲಪತ್ರಗಳು ಕೇವಲ ನೀರು ಕೊಡುವುದರಿಂದಲೇ ಬೆಳೆಯುತ್ತವೆ. ಆದರೆ ಮಾಂಸ ಮತ್ತು ಬತ್ತ ತೊಳೆದ ನೀರು ಕೊಡುವುದರಿಂದಲೂ ಸಹ ಅವು ಚೆನ್ನಾಗಿ ಬೆಳೆಯುತ್ತವೆ (ಶ್ಲೋ. 148).

ಮಳೆಯ ಆಧಾರಿತ ವೃಕ್ಷಗಳಿಗೆ(ಬೆಳವಣಿಗೆಗೆ) ದ್ವಿದಳಕಾಳು ಅತ್ಯುಪಯುಕ್ತವಾಗಿರುತ್ತದೆ. ಮಳೆಯ ಆಧಾರಿತ ವೃಕ್ಷಗಳಿಗೆ ನೀರು ಮತ್ತು ಹಾಲು ಹಾಕುವುದು ತುಂಬಾ ಉಪಯುಕ್ತವಾಗಿರುತ್ತದೆ. ತೆಂಗಿನ ಮರಗಳ ಬೆಳವಣಿಗೆಗೆ ಬಾರ್ಲಿಪುಡಿ ಸಹಕಾರಿ. ಎಲ್ಲಾ ವೃಕ್ಷಗಳು ಮೈದಾನ ಪ್ರದೇಶದಲ್ಲಿ ಬೆಳೆದಾಗ ಕ್ಷಿಪ್ರವಾಗಿ ಬೆಳೆಯುತ್ತವೆ (ಶ್ಲೋ. 149).

ಮಾವಿನ ಮರಗಳಿಗೆ ಹಾಲು, ಪಂಚಪಲ್ಲವ ಎಂದರೆ ಮಾವು, ಅಶ್ವತ್ಥ, ಆಲ, ಪ್ಲಕ್ಷ ಮತ್ತು ಅತ್ತಿ ಮುಂತಾದ ವೃಕ್ಷಗಳ ಎಲೆ; ಹಾಗೂ ಜಿಂಕೆ, ಗುಳ್ಳೆನರಿ, ಆನೆ, ಕುದುರೆ, ಇತ್ಯಾದಿ ಪ್ರಾಣಿಗಳ ಕೊಬ್ಬಿನೊಂದಿಗೆ ಸಿದ್ಧಪಡಿಸಿದ ಕಷಾಯದ ನೀರು ಹಾಯಿಸುವುದರಿಂದ ಕ್ಷಿಪ್ರವಾಗಿ ಒಳ್ಳೆಯ ಸುವಾಸನೆಯಿಂದ ಕೂಡಿದ ಸಿಹಿಯಾದ ಹಣ್ಣುಗಳನ್ನು ಬಿಡುತ್ತವೆ(ಶ್ಲೋ. 150).

ಶುದ್ಧಗೊಳಿಸಿದ ಬೆಣ್ಣೆ, ಬಿಸಿ ನೀರು, ವಚ ಮತ್ತು ಹಂದಿ ಪಿಚಿಕೆಗಳಿಂದ ಸಿದ್ಧಗೊಳಿಸಿದ ಕಷಾಯವು ದಾಳಿಂಬ (ದಾಡಿಮ) ವೃಕ್ಷಗಳಲ್ಲಿ ಹಣ್ಣುಗಳು ಬೆಳೆಯುವುದಕ್ಕೆ ಅತ್ಯನುಕೂಲಕರವಾಗಿರುತ್ತದೆ. ಹಾಲು, ಪ್ರತಿಯ ನೀರು ಇಲ್ಲವೇ ಕಷಾಯವು ದಾಳಿಂಬ ವೃಕ್ಷದ ಬೇರು ಬೆಳವಣಿಗೆಗೆ ಅನುಕೂಲಕರ (ಶ್ಲೋ. 151).

ದಾಳಿಂಬ ವೃಕ್ಷದ ಕಾಂಡಕ್ಕೆ ಇಂಗು ಮೀನು ಮತ್ತು ತ್ರಿಫಲಗಳ ಪುಡಿ (ಆಮಲಕ (ನೆಲ್ಲಿ, ಹರಿತಕಿ ಮತ್ತು ಬಿಭೀತಗಳ ಹಣ್ಣುಗಳು) ಯನ್ನು ಸವರಿದ ಬಳಿಕ ಮೇಲಿನದೇ ತ್ರಿಫಲಗಳ ಪುಡಿ ಮತ್ತು ಮಾವಿನ ಹಿಟ್ಟು (ಕಣಕ)ಗಳನ್ನು ಬೇರುಗಳಿಗೆ ಹಾಕಿ ಸಾಂಬ್ರಾಣಿ ಧೂಪ ಕೊಟ್ಟಿದ್ದಾದರೆ ಆ ಮರದ ಹಣ್ಣು ಖಂಡಿತವಾಗಿಯೂ ತಾಳೆ ಹಣ್ಣಿನಷ್ಟು ದೊಡ್ಡದಾಗಿರುತ್ತದೆ (ಶ್ಲೋ. 152).

ಫಲದಾಯಕವಾದ ಕದಂಬ ಅಥವಾ ನಾಗಕೇಸರ ವೃಕ್ಷಗಳಿಗೆ ಮೊಸರು ಮತ್ತು ಹುಳಿಗೊಂಡ ಅಕ್ಕಿನೀರು, ಅಕ್ಕಿಯಿಂದ ತಯಾರಿಸಿದ ಮದ್ಯ, ದ್ವೀಪ ದ್ರಾಕ್ಷಿ, ಎಳ್ಳು, ಮೆಂತೆ ಮತ್ತು ಕುಣಪ ನೀರುಗಳಿಂದ ಸಿದ್ಧಗೊಳಿಸಿದ ಮದ್ಯ ಹಾಗೂ ಹಾಲು ಮತ್ತು ಸಕ್ಕರೆಯಿಂದ ತಯಾರಿಸಿದ ಮದ್ಯ ಇವೆಲ್ಲವುಗಳ ಸಂಯುಕ್ತದ್ರವ ಹಾಕುವುದರಿಂದ ಅವು ಅಸಂಖ್ಯಾತ ಪರಿಮಳಭರಿತ ಪುಷ್ಪಗಳನ್ನು ಬಿಡುವುದು ನಿಶ್ಚಯ(ಶ್ಲೋ. 153).

ನಾಗಕೇಸರ ಅಥವಾ ಚಂಪಕ ವೃಕ್ಷದ ಸುತ್ತಲೂ ತಳ್ಳತೋಡಿ ಅದನ್ನು ಪ್ರಿಯಂಗು, ಗುಂಜಫಲ, ನಿಂಬೆ, ಪಿಪ್ಪಲಿ, ವಚ, ಹರಿದ್ರ, ತಿಲ(ಎಳ್ಳು) ಮತ್ತು ಸರ್ಸಪ (ಸೊಗದೆ ಬೇರು)ಗಳನ್ನು ಸಮಪ್ರಮಾಣದಲ್ಲಿ ತೆಗೆದುಕೊಂಡು ಶುದ್ಧ ಬೆಣ್ಣೆ ಹಾಗೂ ಅಶ್ವಕರ್ಣ (ತೊಗಟೆ)ದ ಸಾರಗಳಿಂದ ತಯಾರಿಸಿದ ಕಷಾಯದಿಂದ ತುಂಬಿದಾಗ ಆ ವೃಕ್ಷಗಳು ನಿಶ್ಚಯವಾಗಿಯೂ ಹುಲುಸಾಗಿ ಬೆಳೆಯುತ್ತವೆ (ಶ್ಲೋ. 154).

ದ್ರಾಕ್ಷಿ ಬಳ್ಳಿಗಳ ಬೇರಿಗೆ ಪಕ್ಷಿಗಳ ಹಿಕ್ಕೆ (ಮಾಂಸ ಮತ್ತು ಮೀನು), ಬತ್ತದ ಒಣಹುಲ್ಲು ಮತ್ತು ಹೊಟ್ಟುಗಳಿಂದ ಮಾಡಿದ ಸಂಯುಕ್ತ ದ್ರಾವಣವನ್ನು ಹಾಕುವುದರಿಂದ ಫಲಪುಷ್ಪಗಳನ್ನು ಬಿಟ್ಟು ಚೆನ್ನಾಗಿ ಬೆಳೆಯುತ್ತವೆ. ಅರು ಮೂಗ. ಮತ್ತು ಸೀರು ಗಾರುಡಿ ಬಳ್ಳಿ ಮತ್ತು ಎಲೆಗಳಿಂದ ತಯಾರಿಸಿದ ಸಂಯುಕ್ತ ರಸವನ್ನು ಹಲಸಿನ ಹಣ್ಣಿನ ಮರಕ್ಕೆ ತುದಿಯಿಂದ ಬುಡದವರೆಗೂ ಲೇಪಿಸುವುದರಿಂದ ಹಾಗೂ ಬೇರಿಗೆ ನೀಲಿ ಸಾರದೊಡನೆ ನೀರು ಹಾಯಿಸುವುದರಿಂದ ಅದು ತುದಿಯಿಂದ ಬುಡದವರೆಗೂ ಹಣ್ಣುಗಳನ್ನು ಬಿಡುತ್ತದೆ (ಶ್ಲೋ. 155).

ಕಪಿತ್ಥ ಅಥವಾ ಬಿಲ್ವ ವೃಕ್ಷಕ್ಕೆ ಬಿಸಿ ಬೆಣ್ಣೆ ಹಾಲು ಮತ್ತು ಜೇನುತುಪ್ಪಗೂಡಿದ ನೀರು ಹಾಯಿಸುವುದರಿಂದ ಸಿಹಿಯಾದ, ರುಚಿಯುಳ್ಳ, ಅತಿಕಡಿಮೆ ಬೀಜಗಳಿಂದ ಕೂಡಿದ ರಸಭರಿತ ಹಣ್ಣುಗಳನ್ನು ಬಿಡುತ್ತದೆ (ಶ್ಲೋ. 156).

ಮಾಧೂಕ ವೃಕ್ಷಕ್ಕೆ ಕೋಣನಕೊಂಬು ಮತ್ತು ಪಕ್ಷಿಗಳ ಬೇರುಗಳು. ಬಿಸಿ ನೀರು ಮತ್ತು ಪುಡಿಮಾಡಿದ ಬೇಳೆಗಳ ಸಂಯುಕ್ತವನ್ನು ನೀರಿನೊಡನೆ ಹಾಯಿಸಿದಾಗ ಸ್ತ್ರೀ ವ್ಯಕ್ತಿಯಂತಹ ಗಾಂಭೀರ್ಯಪೂರ್ಣ ಸುಂದರ ರೂಪ ತಾಳುತ್ತದೆ (ಶ್ಲೋ. 157).

ದ್ವಿಪದಾಕ್ಷಿ(ಪ್ಲಮ್) ವೃಕ್ಷದ ಬೇರಿಗೆ ಎಳ್ಳು ಮತ್ತು ಯಷ್ಟಿಮಧು ಕಷಾಯ ಹಾಗೂ ಕೂಪ ಜಲದ ನೀರೆರೆದು ಬೆಳೆಸುವುದರಿಂದ ಸಕ್ಕರೆಯಂತೆ ಸಿಹಿಯಾದ ಹಣ್ಣುಗಳು ಬಿಡುತ್ತವೆ (ಶ್ಲೋ. 158).

ಬೀಜಪೂರ ವೃಕ್ಷದ ಬೇರಿಗೆ ಆಡು, ಕುರಿ, ಹಂದಿ ಇತ್ಯಾದಿಗಳ ಹಿಕ್ಕೆ, ಹಿಂಗ ಹಾಗೂ ಮಾನವ ಮಲಗಳ ಸಂಯುಕ್ತ ಮಿಶ್ರಣವನ್ನು ಹಾಕಿ ಬಳಿಕ ಕುದುರೆ ಮತ್ತು ಕುರಿಗಳ ಮೂತ್ರಜಲವನ್ನು ಎರೆಯುವುದರಿಂದ ಅದು ಮತ್ತೆ ಮತ್ತೆ ಹಣ್ಣುಗಳನ್ನು ಬಿಡುತ್ತದೆ (ಶ್ಲೋ. 159).

ಬೇರನ್ನು ಚೇಳುಗಳು ಕಡಿಯುವುದರಿಂದ ಹಾಗೂ ಬಿಸಿ ಎಣ್ಣೆಯ ಧೂಪ ಹಾಕುವುದರಿಂದ ಮತ್ತು ಇಲಿಗಳು ಹಾಗೂ ಹಂದಿಗಳ ಕೊಬ್ಬಿನೊಡನೆ ನೀರೆರೆಯುವುದರಿಂದ ಎಲ್ಲ ಬಳ್ಳಿಗಳೂ ಹಣ್ಣುಗಳ ಭಾರದಿಂದ ತೂಗಿ ತೊನೆಯುತ್ತವೆ(ಶ್ಲೋ. 160).

ಕೇತಕಿ ವೃಕ್ಷಕ್ಕೆ ಬೇಸಗೆಯಲ್ಲಿ ಗಂಜಿ ಹಾಗೂ ಕೂಪದ ಜಲದ ನೀರೆರೆಯುವುದರಿಂದ ಮಳೆಗಾಲದಲ್ಲಿ ಸುಗಂಧಿತ ಪುಷ್ಪಗಳನ್ನೂ ಚೂಪಾದ ಮುಳ್ಳುಗಳ ಎಲೆಯನ್ನೂ ಬಿಡುತ್ತದೆ (ಶ್ಲೋ. 161).

ಎಲ್ಲ ವೃಕ್ಷಗಳ ಬೇರುಗಳಿಗೂ ಸುಗಂಧ ಪುಷ್ಪವಾಸನೆ ಹಿಡಿಸಿದ ಮಣ್ಣನ್ನು ಹೇರಳವಾಗಿ ಹಾಕಬೇಕು (ಶ್ಲೋ. 162).

ಯಾವುದೇ ಹೂವಿನ ಮರವೂ ಕುಷ್ಠ, ಪತ್ರ, ಮುರ, ಮುಸ್ತ, ತಗರ ಮತ್ತು ಉಶೀರ ಪುಡಿಗಳ ಸಂಯುಕ್ತ ದ್ರಾವಣದಿಂದ ನೀರೆರೆದಾಗ ತಿಂಗಳವಧಿಯಲ್ಲಿ ಪರಿಮಳ ಯುಕ್ತ ಪುಷ್ಪಗಳನ್ನು ಬಿಡುತ್ತದೆ (ಶ್ಲೋ. 163).

ಬರಡಾದ ಕಮಲದ ಬಳ್ಳಿಯ ಬೇರಿಗೆ ಕುಲತ್ಥ ಮತ್ತು ಆನೆಯ ದಂತದ ಪುಡಿಯನ್ನು ಹಾಕುವುದರಿಂದ ಅದು ನಿತ್ಯವೂ ಸುಂದರ ಕಮಲಗಳನ್ನು ಬಿಡುವುದು ಖಂಡಿತ (ಶ್ಲೋ. 164).

ಹೂವಿನ ಮರಗಳ ಬೇರುಗಳಿಗೆ ಬಿಳಿಸಾಸಿವೆ, ಬಾಳೆ ಎಲೆ, ಸಫಾಲಿ ಮೀನು, ಹಂದಿ ಮತ್ತು ಬೆಕ್ಕಿನ ಮಾಂಸಗಳನ್ನು ಸಮಪ್ರಮಾಣದಲ್ಲಿ ತೆಗೆದುಕೊಂಡು ಶುದ್ಧ ಬೆಣ್ಣೆಯೊಂದಿಗೆ ಮಿಶ್ರಮಾಡಿ ಹಾಕಿ ಕಾಂಡಗಳಿಗೆ ಸವರಿ. ಧೂಪ ಹಾಕುವುದರಿಂದ ಅವು ಎಲ್ಲ ಬಗೆಯ ರೋಗರುಜಿನಾದಿಗಳಿಂದಲೂ ಮುಕ್ತವಾಗಿ ಹುಲುಸಾಗಿ ಬೆಳೆಯುತ್ತವೆ. ಕೊಂಬೆಗಳಲ್ಲಿ ಹೂವುಗಳು ತುಂಬಿ, ದುಂಬಿಗಳು ಝೇಂಕರಿಸುತ್ತವೆ (ಶ್ಲೋ. 165).

ಬಿರಿಡಿ(ಸಿಸಿವೆ) ಮರಕ್ಕೆ ಹಾಲು, ಮದ್ಯ, ಹುಳಿಗೊಂಡ ಅಕ್ಕಿನೀರು ಮತ್ತು ಶುದ್ಧ ಬೆಣ್ಣೆಯಿಂದ ಧೂಪಿಸಿದ ಬಳಿಕ ಹಾಲು ಇಲ್ಲವೇ ಕುಣಪ ಜಲದಲ್ಲಿ ತೊಳೆದ ವಿಡಂಗ ಮತ್ತು ಎಳ್ಳುಹಿಂಡಿಯನ್ನು ಕಾಂಡದ ಸುತ್ತ ಸವರುವುದರಿಂದ ತುಂಬಾ ಹುಲುಸಾಗಿ ಬೆಳೆಯುತ್ತದೆ (ಶ್ಲೋ. 166).

ಕೆಲವು ವೃಕ್ಷಗಳ ಹೊರತಾಗಿ ಉಳಿದೆಲ್ಲ ವೃಕ್ಷಗಳೂ ಶುದ್ಧ ಬೆಣ್ಣೆ ಮತ್ತು ಜೇನು ತುಪ್ಪದೊಡನೆ ಬೆರೆಸಿದ ಅಂಕೋಲ ಹೂವಿನ ಕಷಾಯ, ಹಂದಿ ಮತ್ತು ಜಿಂಕೆ ಕೊಬ್ಬುಗಳಿಗೆ ಬಿಳಿ ಸಾಸುವೆಪುಡಿ ಸೇರಿಸಿ ಹಾಕಿ, ಚೆನ್ನಾಗಿ ನೀರೆರೆಯುವುದರಿಂದ ಪುಷ್ಕಲವಾಗಿ ಎಲೆ, ಹೂ, ಹಣ್ಣುಗಳಿಂದ ತುಂಬುತ್ತವೆ ಹಾಗೂ ರೋಗ ನಿರೋಧಕವಾಗಿರುತ್ತವೆ. ಉತ್ಪಾದಕರ ನೆರಳನ್ನೂ ಕೊಡುತ್ತವೆ (ಶ್ಲೋ. 167-168).

ಯಷ್ಟಿಮಧು, ಮಧೂಕ ಪುಷ್ಪಗಳು, ಬಿಳಿಕುಷ್ಠ ಮತ್ತು ಜೇನು ತುಪ್ಪಗಳ ಹಿಟ್ಟು(ಕಣಕ) ತಯಾರಿಸಿ ಗುಳಿಗೆಗಳಾಗಿ ಮಾಡಿ ಎಲ್ಲ ವೃಕ್ಷಗಳ ಬೇರಿನ ಸುತ್ತಲೂ ಚೆಲ್ಲಬೇಕು (ಶ್ಲೋ. 169).

ಯಾವುದೇ ಫಲದಾಯಕ ವೃಕ್ಷಕ್ಕೆ ಯಾವನೇ ಅನುಭವಶಾಲಿ ಇಲ್ಲವೇ ವಿವೇಕಿಯು ಅವರ ಬೇರುಗಳಿಗೆ ಹಾಲಿನಿಂದ ಎರೆಯುವುದರಿಂದ ಕ್ಷಿಪ್ರದಲ್ಲಿ ತುಂಬಾ ಸಿಹಿಯಾದ ಹಣ್ಣುಗಳನ್ನು ಬಿಡುತ್ತದೆ (ಶ್ಲೋ. 170).

ಜಿಂಕೆ, ಹಂದಿ, ಮೀನು, ಕುರಿ, ಆಡು ಮತ್ತು ಖಡ್ಗಮೃಗಗಳ ಮಾಂಸ ಕೊಬ್ಬು ಮತ್ತು ಎಲುಬಿನ ನೆಣ(ಮಜ್ಜೆ)ಗಳನ್ನು ಕುದಿಸಿ ಸರಿಯಾಗಿ ಬೆಂದಾಗ ಮಿಶ್ರಣವನ್ನು ಮಣ್ಣಿನ ಮಡಕೆಯಲ್ಲಿ ಹಾಕಬೇಕು. ಇದಕ್ಕೆ ಎಳ್ಳಿನ ಎಣ್ಣೆಹಿಂಡಿ, ಜೇನುತುಪ್ಪದಲ್ಲಿ

ಕುದಿಸಿದ ಮಸ (ದ್ವಿದಳಧಾನ್ಯ). ದ್ವಿದಳ ಕಾಳುಗಳ ಕಷಾಯ, ಶುದ್ಧ ಬೆಣ್ಣೆ ಮತ್ತು ಬಿಸಿನೀರನ್ನು ಹಾಕಬೇಕು. ಈ ಮೇಲಿನ ವಸ್ತುಗಳ ಪ್ರಮಾಣದಲ್ಲಿ ಯಾವುದೇ ಒಂದು ನಿರ್ದಿಷ್ಟ ನಿಯಮವಿಲ್ಲ. ಮಡಕೆಯನ್ನು ಒಂದು ಬೆಚ್ಚಗಿನ ತಾಣದಲ್ಲಿ ಹದಿನೈದು ದಿವಸಗಳ ಕಾಲ ಬಿಡಬೇಕು. ಆಗ ಈ ಮಿಶ್ರಣವು ಕುಣಪ ಜಲ(ನೀರು)ವೆನ್ನಿಸುತ್ತದೆ. ಈ ನೀರು ತುಂಬಾ ಆರೋಗ್ಯದಾಯಕವಾಗಿರುತ್ತದೆ(ಸಾಮಾನ್ಯವಾಗಿ ಸಸ್ಯ ವೃಕ್ಷಗಳಿಗೆ) (ಶ್ಲೋ. 171–174).

ಗೊಬ್ಬರ ಹಾಕುವ ವಿಚಾರದಲ್ಲಿಯೂ ಈ ಸಾಮಾನ್ಯ ನಿರ್ದೇಶನಗಳನ್ನುಳಿದಂತೆ ವಿಶಿಷ್ಟ ಬೆಳೆಗಳಿಗಾಗಿ ಗೊಬ್ಬರ ಹಾಕುವ ವಿಶೇಷ ಪದ್ಧತಿಗಳನ್ನು ಸಹ ಸೂಚಿಸಲಾಗಿದೆ. ಪ್ರತ್ಯೇಕ ಬೆಳೆಗಳ ವಿಚಾರ ಬರುವಾಗ ಅವುಗಳನ್ನು ವಿವರಿಸಲಾಗಿದೆ.

ಸುರಪಾಲನ ವೃಕ್ಷಾಯುರ್ವೇದ ಗ್ರಂಥದಲ್ಲಿ ಗೊಬ್ಬರ ತಯಾರಿಕೆ ಮತ್ತು ವಿನಿಯೋಗಗಳನ್ನು ಕುರಿತು ಕುತೂಹಲಕಾರಿ ವಿವರಗಳಿವೆ. ಆತನ ಪ್ರಕಾರ ಕುಣಪ ಜಲವನ್ನು ಈ ಮುಂದೆ ತಿಳಿಸುವ ವಿವಿಧ ರೀತಿಗಳಲ್ಲಿ ಸಿದ್ಧಪಡಿಸಲಾಗುತ್ತದೆ. ಈ ಮುಂದಿನ ಪುಟಗಳಲ್ಲಿ ಸುರಪಾಲನು ವಿವರಿಸಿದ ಗೊಬ್ಬರ ಹಾಕುವ ತತ್ವಗಳನ್ನು ಕೊಟ್ಟಿದೆ.

ಸಗಣಿ, ಹಂದಿಯ ಕೊಬ್ಬು, ಮಾಂಸ, ಮನುಜನ ನೆಣ ಮಿದುಳು ಹಾಗೂ ರಕ್ತಗಳನ್ನು ಹಾಕಿದ ನೀರನ್ನು ಭೂಮಿಯೊಳಗೆ ಒಂದು ಪಕ್ಷಕಾಲ (ಹದಿನೈದುದಿನ) ಹೂತಿಟ್ಟು ತೆಗೆಯಬೇಕು. ಇದಕ್ಕೆ ಸತ್ವಪ್ರಾಣಿ ಜಲ(ಕುಣಪ)ವೆನ್ನುತ್ತಾರೆ (ಶ್ಲೋ. 101).

ಸತ್ವ ಪ್ರಾಣಿಜಲ ತಯಾರಿಸುವ ಇನ್ನೊಂದು ವಿಧಾನದಂತೆ ಸಾಧ್ಯವಾದಷ್ಟು ಲಭ್ಯ ರಕ್ತರಸ (lymph). ಮನುಜನ ಹಾಗೂ ಕುದುರೆ, ಹಂದಿ, ಮೀನು, ಕುರಿ ಮತ್ತಿತರ ಕೊಂಬು ಪ್ರಾಣಿಗಳ ಮಾಂಸವನ್ನು ಸಂಗ್ರಹಿಸಿ ನೀರಿನಲ್ಲಿ ಹಾಕಿ ಬೇಯಿಸಬೇಕು. ಬಳಿಕ ಹಾಗೆ ಬೇಯಿಸಿದ ಮಾಂಸ ಇತ್ಯಾದಿಗಳನ್ನು ಜಿಡ್ಡು ಸವರಿದ ಪಾತ್ರೆಗೆ ಹಾಕಿ ಜೇನುತುಪ್ಪದೊಡನೆ ಎಳ್ಳೆಣ್ಣೆ, ಹಿಂಡಿಪುಡಿಯನ್ನು ಸೇರಿಸಬೇಕು. ಜೊತೆಗೆ ಬೇಯಿಸಿದ ಮಾಂಸಗಳು, ಅವುಗಳ ಸಾರ, ಮೂತ್ರ ಮತ್ತು...(?)ಗಳನ್ನು ಸಹ ಒಂದಾದ ನಂತರ ಒಂದರಂತೆ ಅದಕ್ಕೆ ಸೇರಿಸಿ ಪಾತ್ರೆಯನ್ನು ಬೆಚ್ಚಗಿನ ಸ್ಥಳದಲ್ಲಿರಿಸಬೇಕು. ಈ ರೀತಿ ಕುಣಪವನ್ನು ತಯಾರಿಸಲಾಗುತ್ತದೆ. ಇದು ವೃಕ್ಷಗಳಿಗೆ ತುಂಬಾ ಪೋಷಣಕಾರಿಯಾದುದು. ಪ್ರಾಚೀನ ಋಷಿಗಳ ನಿಯಮಕ್ಕೆ ಅನುಗುಣವಾಗಿದೆ (ಶ್ಲೋ. 102–106).

ಎಳೆಯ ವೃಕ್ಷದ ಕ್ಷಿಪ್ರ ಬೆಳವಣಿಗೆಗೆ ಮೀನು ಮಾಂಸ ಮತ್ತು ಎಳ್ಳುಗಳಿಂದ ತಯಾರಿಸಿ ತಣ್ಣನೆಯ ಅಂಬಲಿಯನ್ನು ಪ್ರತಿವಾರಕೊಮ್ಮೆ ಹಾಕಬೇಕು(ಶ್ಲೋ. 107).

ಮೂಲಿಕಾ ಫಲಗಳಿಂದ ತೆಗೆದ ರಸ, ಮೂತ್ರ, ಕೊಬ್ಬು, ಹಾಲು, ಸತ್ತಪ್ರಾಣಿ ಜಲ, ಸಗಣಿ(ಮಲ) ಮತ್ತು ಮಾಂಸ ಇವು ವೃಕ್ಷ ಪೋಷಣೆಗೆ ಉಪಯುಕ್ತವಾದುವು (ಶ್ಲೋ. 112b: 113a).

ಎಲ್ಲ ವೃಕ್ಷಗಳೂ ಮಾಂಸ ಮತ್ತು ಕಿಣ್ವ(ಹುಳಿಬರಿಸುವ ಪದಾರ್ಥ)ಗಳಿಂದ ಕೂಡಿಸಿದ ನೀರಿನಲ್ಲಿ ಕುಣಪ ಜಲವನ್ನು ಮಿಶ್ರಮಾಡಿ, ಎರೆದು ಪೋಷಿಸುವುದರಿಂದ ಫಲಪುಷ್ಪಗಳನ್ನು ಬಿಡುವಂತಾಗುತ್ತದೆ (ಶ್ಲೋ. 113b, 114).

ವೃಕ್ಷಗಳನ್ನು ಜಿಂಕೆ ಮತ್ತು ಹಂದಿಕೊಬ್ಬು, ಜೇನುತುಪ್ಪ, ತುಪ್ಪ, ಮತ್ತು ಸಿಹಿಬೇಲ(?) ವೃಕ್ಷದ ಎಲೆಗಳಿಂದ ತೆಗೆದ ರಸಗಳಿಂದ ಪೋಷಿಸಿದಾಗ ಕ್ಷಿಪ್ರವಾಗಿ ಫಲಪುಷ್ಪಗಳ ಭಾರದಿಂದ ಬಾಗಿ ತೊನೆಯುತ್ತವೆ (ಶ್ಲೋ. 118).

ತುಪ್ಪ, ಬಿಡಂಗ, ನೀರು ಬೆರೆಸಿದ ಹಾಲು ಮತ್ತು ಜೇನು ತುಪ್ಪಗಳಿಂದ ಪೋಷಿಸಿ ಅನಂತ (ಕೃಷ್ಣ ಚಿತ್ರಮೂಲ), ಕುತ ಹಾಗೂ ಅಜ(?) ಮರಾಗ (ಅಥವಾ ಮಾಂಸ) ದಿಂದ ಧೂಪಿಸಿದ ವೃಕ್ಷಗಳು ಬೇಗನೆ ಅತ್ಯುತ್ತಮ ಹೂಹಣ್ಣುಗಳಿಂದ ತುಂಬುತ್ತವೆ (ಶ್ಲೋ. 119).

ಯಾವಾಗಲೂ ಹೆಬ್ಬಾವಿನ (ಅಜಗರ) ಕೊಬ್ಬಿನಿಂದ..... ಮತ್ತು ಮೀನಿನಿಂದ ಪೋಷಿಸುವುದರಿಂದ ಸಸ್ಯಗಳು ಸ್ವರ್ಗದ ಕಲ್ಪವೃಕ್ಷದಂತೆ ಹೂ ಹಣ್ಣುಗಳಿಂದ ತುಂಬುತ್ತವೆ (ಶ್ಲೋ. 120).

ಬಳ್ಳಿಗಳಿಗೆ (ಬೇರಿನ ಬಳಿ) ಬೇಳೆಯಿಂದ ಕಟ್ಟಿಸಿ ಮೀನು (ಮೀನು ಮಾಂಸ) ಮತ್ತು ತುಪ್ಪದಿಂದ ಧೂಪಿಸಿ, ಹಂದಿ ಮತ್ತು ಇಲಿಯ ಕೊಬ್ಬಿನಿಂದ ಪೋಷಿಸಿದುದಾದರೆ ಹೂ ಹಣ್ಣುಗಳನ್ನು ಬಿಡುತ್ತವೆ (ಶ್ಲೋ. 121).

ದ್ರಾಕ್ಷಿ ಬಳ್ಳಿಯ ಬೇರಿಗೆ, ಹಂದಿಗಳ ಪಿಕ್ಕೆಯ ಪುಡಿ ಗೊಬ್ಬರ ಹಾಕಿ, ಮೀನು ಮಾಂಸದ ಸಾರದಿಂದ ಪೋಷಿಸಿದುದಾದರೆ ಹೂಹಣ್ಣುಗಳ ಭಾರದಿಂದ ಬಾಗಿ ತೂಗುತ್ತವೆ (ಶ್ಲೋ. 122).

ಪಕ್ವವಾದ ಅಂಕೋಲ ಹಣ್ಣಿನ ರಸ, ತುಪ್ಪ, ಜೇನುತುಪ್ಪ ಮತ್ತು ಹಂದಿಯ ಕೊಬ್ಬುಗಳಿಂದ ಪೋಷಿಸುವುದರಿಂದ ಮಾವಿನ ಮರಗಳು ಸಿಹಿ ರಸಭರಿತವಾದ ದೊಡ್ಡ ದೊಡ್ಡ ಮಾವಿನ ಹಣ್ಣುಗಳಿಂದ ತೂಗುತ್ತವೆ (ಶ್ಲೋ. 123).

ತಾಳೆ ಮತ್ತು ತೆಂಗಿನ ಮರಗಳಿಗೆ ಹಸು, ಹಂದಿ, ಕಡಲಹಂದಿ, ಬಕ(?)ಗಳ ಮಾಂಸವನ್ನು ಬೇಯಿಸಿದ ರಸವೆರೆದು ಮೀನು (ಮೀನು ಮಾಂಸ) ಮತ್ತು ಕುಟ್ಟಿದ ಎಳ್ಳುಗಳಿಂದ ಅಭಿಷೇಕಿಸಬೇಕು. ಇದರಿಂದ ಸಮೃದ್ಧವಾಗಿ ಹಣ್ಣುಕಾಯಿಗಳನ್ನು ಬಿಡುತ್ತವೆ (ಶ್ಲೋ. 124).

ತೆಂಗಿನ ಮರಗಳಿಗೆ ರಾತ್ರಿಯವೇಳೆ ಮೈರೇಯ ದ್ರಾಕ್ಷಾರಸ, ಕಿಣ್ವ (ಹುಳಿ ಬರಿಸುವ ಔಷಧಿ), ಎಳ್ಳು, ಮಾಂಸ ಮತ್ತು ಜೇನುತುಪ್ಪ, ಉಪ್ಪು ಮತ್ತು ವಿಡಂಗಗಳನ್ನು ಬೆರಸಿದ ಮುರ ಮದ್ಯದಿಂದ ತಯಾರಿಸಿದ ಹಿಟ್ಟನ್ನು (ಕಣಕ) ರಾತ್ರಿಯ ವೇಳೆ ಲೇಪಿಸುವುದರಿಂದ ರೋಗಮುಕ್ತವಾಗಿ ದೊಡ್ಡ ದೊಡ್ಡ ಕಾಯಿಗಳಿಂದ ತೂಗುತ್ತವೆ (ಶ್ಲೋ. 125).

ತೆಂಗಿನ ಮರಗಳನ್ನು ನೀರು ಬೆರಸಿದ ಹಾಲಿಗೆ ಬಾರ್ಲಿ ಹುಡಿ ಅಥವಾ ಹುಳಿ ಅಕ್ಕಿಗಂಜಿ ಬೆರಸಿ ಪೋಷಿಸುವುದರಿಂದ ಸದಾ ಉರುಳಿ (ಜಾಡಿ) ಯಾಕಾರದ ದೊಡ್ಡ ದೊಡ್ಡ ಕಾಯಿಗಳನ್ನು ಬಿಡುತ್ತವೆ. ಪಸ್ಯ ಮಂಲಗಳು(?) ಮಾಂಸಸಾರದೊಂದಿಗೆ ಪೋಷಿಸಿದಾಗ ಸಮೃದ್ಧವಾಗಿ ಹಣ್ಣುಗಳನ್ನು ಬಿಡುತ್ತವೆ (ಶ್ಲೋ. 126).

ದಾಳಿಂಬೆ ಮರವನ್ನು ಜಿಕ್ಕ, ನೀಲಪಕ್ಷಿ (ಬ್ಲೂ ಜೇ), ಜಿಂಕೆ ಮತ್ತು ಹಂದಿಗಳ ಮಾಂಸ, ಪಿತ್ತಲ ಕೊಬ್ಬು ಹಾಗೂ ಮಜ್ಜೆಯ ಹಾಲುಗಳಿಂದ ಪೋಷಿಸಿದಾಗ ತುಂಬಾ ದೊಡ್ಡದಾದ, ಅತಿ ಸಿಹಿಯಾದ ಮಧುರ ಬೀಜಗಳನ್ನುಳ್ಳ ಹಣ್ಣುಗಳ ಭಾರದಿಂದ ತೂಗುತ್ತದೆ (ಶ್ಲೋ. 128).

ದಾಳಿಂಬ ವೃಕ್ಷಕ್ಕೆ ಸಂತೃಪ್ತವಾಗಿ ಗುಳ್ಳೆನರಿಯ ಮಾಂಸದಿಂದ ಪೋಷಿಸಿ, ಸಕ್ಕರೆ ಕರಗಿಸಿದ ನೀರನ್ನು ವಿಪುಲವಾಗಿ ಹಾಯಿಸಬೇಕು. ಇದರಿಂದ ಕ್ಷಿಪ್ರವಲ್ಲಿ ಹೇರಳವಾಗಿ ಸ್ವಾದಿಷ್ಟಪೂರ್ಣ ರಸಭರಿತ ಹಣ್ಣುಗಳಿಂದ ತುಂಬಿ ಬಾಗುತ್ತದೆ (ಶ್ಲೋ. 129).

ದಾಳಿಂಬ ವೃಕ್ಷವನ್ನು ಅರಿಶಿನ, ತುಪ್ಪ, ಜೇನು ತುಪ್ಪ ಹಾಗೂ ಮೀನುಗಳಿಂದ ಲೇಪಿಸಿ ಬಳಿಕ ತುಪ್ಪದೊಡನೆ ಬೆರಸಿದ ಮೂರು ಅರಳೆಕಾಯಿ ಹುಡಿಯಿಂದ ಧೂಪಿಸಿದಾಗ ದೊಡ್ಡ ದೊಡ್ಡ ಹಣ್ಣುಗಳನ್ನು ಬಿಡುತ್ತದೆ (ಶ್ಲೋ. 130).

ದಾಳಿಂಬ ವೃಕ್ಷಕ್ಕೆ ಹಾಲಿನಲ್ಲಿ ಬೇಯಿಸಿದ ನಿರ್ವಿಷಕಾರಿ ಹಾವು(ಡುಂಡುಭ)ಗಳು ಮತ್ತು ಮೀನುಗಳನ್ನು ಬೇಯಿಸಿದ ಸಾರವೆರೆದು ಪೋಷಿಸಿದಾಗ ದೊಡ್ಡ ದೊಡ್ಡ ಸ್ವಾದಿಷ್ಟಪೂರ್ಣ ಹಣ್ಣುಗಳನ್ನು ಬಿಡುತ್ತದೆ (ಶ್ಲೋ. 131).

ದಾಳಿಂಬ ವೃಕ್ಷದಲ್ಲಿ ನೀಲಪಕ್ಷಿಯ ರುಂಡವನ್ನು ತೂಗುಹಾಕುವುದರಿಂದ ಅದು ಹಣ್ಣುಗಳಿಂದ ತುಂಬಿ ಹೋಗುತ್ತದೆ. ಹಾಗೆಯೇ ಅಮೃಟ ಮರದ ಮೇಲ್ತುದಿಯಲ್ಲಿ ಒಡೆದ ಜಾಡಿಯ ಕುತ್ತಿಗೆ ಭಾಗವನ್ನು ತೂಗುಹಾಕಿದಾಗ ಹೇರಳವಾಗಿ ಹಣ್ಣು ಬಿಡುತ್ತದೆ (ಶ್ಲೋ. 132).

ಹಲಸಿನ ಮರವು ಅರಳೆಕಾಯಿತ್ರಯಗಳ (ಮೂರು ಅರಳೆ ಕಾಯಿ) ಕಷಾಯದಿಂದ ನೀರೆರೆದು ಕೂಡಲೇ ಬಣಕಡ್ಡಿಗಳಿಂದ ಅಲಂಕರಿಸಿದಾಗ(?) ಹೇರಳವಾಗಿ ರುಚಿಕರವಾದ ಹಣ್ಣುಗಳನ್ನು ಬಿಡುತ್ತದೆ (ಶ್ಲೋ. 133).

ಕೋಲಿ ವೃಕ್ಷವು ಅತಿಮಧುರದ ಬೇರು, ಮಧೂಕ, ಎಳ್ಳು ಮತ್ತು ಜೇನಿನೊಡನೆ ಬೆರಸಿದ ನೀರಿನಿಂದ ಪೋಷಿಸಿ, ಬೇರಿಗೆ ನಿತ್ಯಪ್ರಾಣಿ ಜಲ ಎರೆದು ಪೋಷಿಸುವುದರಿಂದ ಸ್ವಾದಿಷ್ಟಪೂರ್ಣವಾದ ಹಾಗೂ ಅಮೃತದಂತೆ, ಪರಿಮಳಯುಕ್ತವಾದ ಬೇಲದ ಹಣ್ಣುಗಳನ್ನು ಗಾತ್ರದ ಕಾಯಿಗಳನ್ನು ಬಿಡುತ್ತದೆ (ಶ್ಲೋ. 134).

ಕರ್ಕಂಧುಕ, ಲಕುಚ, ಬದರಿ, ಧಾತ್ರಿಕ, ಮತ್ತು ಪನ್ನೀರಳೆ ಮರಗಳು ತಂಪುದಿಂದ ಅಭಿಷೇಕಿಸಿ, ಜೇನುತುಪ್ಪ, ಕೃಸರ (ಬೇಯಿಸಿದ ಅನ್ನ ಮತ್ತು ದ್ವಿದಳ ಕಾಳು) ಹಾಗೂ ಬಾರ್ಲಿಗಳೊಡನೆ ಬೆರೆಸಿದ ರಾಗಿ ಹಿಟ್ಟಿನ ಕಂಕವನ್ನು ಚೆನ್ನಾಗಿ ಲೇಪಿಸಿ, ಎಳ್ಳು, ಜೇನುತುಪ್ಪ ಮತ್ತು ಬಾರ್ಲಿಗಳಿಂದ ಹನ್ನೆರಡು ದಿವಸಗಳವರೆಗೆ ಧೂಪಿಸುವುದರಿಂದ, ಹಾಗೂ ಹೂವರಳುವ ಕಾಲದಲ್ಲಿ ನೀರುಹಾಲು ಎರೆಯುವುದರಿಂದ, ಅತ್ಯುತ್ತಮ ಹಣ್ಣುಗಳನ್ನು ಬಿಡುತ್ತವೆ (ಶ್ಲೋ. 135).

ಇದರ ಜೊತೆಗೆ ಧಾರಾಳವಾಗಿ ಮದ್ಯದ ನೀರೆರೆಯುವುದರಿಂದ ಅಮೃತದಷ್ಟು ರುಚಿಕರವಾದ ದೊಡ್ಡ, ದೊಡ್ಡ ಹಣ್ಣುಗಳನ್ನು ಬಿಡುತ್ತವೆ (ಶ್ಲೋ. 136).

ಬಿಲ್ವ ಮತ್ತು ಕಪಿತ್ಥ ವೃಕ್ಷಗಳು ಬೆಲ್ಲ, ತುಪ್ಪ, ಹಾಲು ಮತ್ತು ಜೇನಿನಿಂದ ಪೋಷಿಸಿದಾಗ ರುಚಿಕರವಾದ ಹಣ್ಣುಗಳು ಮತ್ತು ಸುಂದರ ಎಲೆಗಳನ್ನು ಬಿಡುತ್ತವೆ (ಶ್ಲೋ. 137).

ಬಾಳೆಯ ಗಿಡಗಳ ಬೇರಿಗೆ ಹಳೆಯ ಮಳ್ಳಂಕಡ್ಡಿ, ಒಣಗಿದ ಸಗಣಿ ಮತ್ತು ಬೂದಿಗಳನ್ನು ಹಾಕಿ, ಕಷಾಯ (?) ನೀರು ಚಿಮುಕಿಸುವುದರಿಂದ ದೊಡ್ಡದಾದ ಹಣ್ಣುಗಳನ್ನು ಹೇರಳವಾಗಿ ಬಿಡುತ್ತವೆ (ಶ್ಲೋ. 138).

ತಿಂಡುಕ ವೃಕ್ಷಗಳು ಅಕ್ಕಿ ಮತ್ತು ಮಸಗಳ ಸಾರ(?) ಎರೆಯುವುದರಿಂದ ಬೆಳೆಯುತ್ತವೆ; ಪರವತ ವೃಕ್ಷಗಳು ನಿಚುಲವೃಕ್ಷದ ಎಲೆಗಳ ಸಾರ ಉಣಿಸುವುದರಿಂದ ಫಲಭಾರದಿಂದ ಬಾಗುತ್ತವೆ (ಶ್ಲೋ. 139).

ಮಾತುಲುಂಗ (ಮಾದಾಳ) ವೃಕ್ಷಗಳು ಹಾಲು, ಮಾಂಸ, ಮೀನು, ಸಗಣಿ ಸಾಲಿ ಬತ್ತ ಮತ್ತು ಕಿಣ್ವಗಳ (ಹುಳಿಬರಿಸುವ ಔಷಧಿ) ಕಷಾಯ ಹಾಗೂ, ನೀರಿನಲ್ಲಿ ಕಲೆಸಿದ ಎಳ್ಳಿನ ಹಿಂಡಿಗಳನ್ನು ಯಥೇಚ್ಛವಾಗಿ ಹಾಕಿ ಚೆನ್ನಾಗಿ ಉಣಿಸಿದಾಗ ಮೃದುವಾದ ತಿರುಳು ಭರಿತವಾದ ನೀರಿನ ಜಾಡಿಗಳಷ್ಟು ದೊಡ್ಡ ಗಾತ್ರದ ಹಣ್ಣುಗಳಿಂದ ಜಗ್ಗುತ್ತದೆ (ಶ್ಲೋ. 140).

ಬೀಜಪೂರಕ (ಮಾದಳ)ವು ಸಕ್ಕರೆ ಲೇಪಿತ ಗುಳ್ಳೆನರಿ ಮಾಂಸದಿಂದ ಪೋಷಿಸಿದಾಗ ಹಣ್ಣುಗಳನ್ನು ಬಿಡುತ್ತದೆ. ಕಿತ್ತಳೆಯು ಮಾಂಸದ ಸಾರ, ಬೆಲ್ಲ ಮತ್ತು ಹಾಲುಗಳಿಂದ ಪೋಷಿಸುವುದರಿಂದ ಅತ್ಯುತ್ತಮ ಮಟ್ಟದ ಹಣ್ಣುಗಳನ್ನು ಬಿಡುತ್ತದೆ (ಶ್ಲೋ. 141).

ಕಿತ್ತಳೆ ಮರಗಳು ಮಿದಂಗ, ಮಸ, ಎಳ್ಳು, ಸಾಸುವೆ ಮತ್ತು ಬಿಲ್ವಗಳನ್ನು ಸುರಿದು ಸಮಾಸಾಸಕ(?) ಮಾಂಸದೊಂದಿಗೆ ಬೆರೆಸಿದ ನೀರೆರೆಯುವುದರಿಂದ ಹಾಗೂ ಮೊಲದ ಮಾಂಸ ಬೇಯಿಸಿ ಧೂಪಿಸುವುದರಿಂದ ಹಣ್ಣುಗಳ ಭಾರದಿಂದ ತೂಗುತ್ತವೆ (ಶ್ಲೋ. 142).

ಮಾಧೂಕ ವೃಕ್ಷಕ್ಕೆ ಅಂಕೋಲ ತೊಗಟೆ ಮತ್ತು ಕಲಾಮ (—ಕಲಮ—ಅಕ್ಕಿ ?) ಪುಡಿಗಳನ್ನು ಮಿಶ್ರಮಾಡಿ ಪಾದಲ (?—ಪಾಟಲ) ದಿಂದ ಸಂಸ್ಕರಿಸಿದ ಮಾಂಸದ ರಾಶಿಯಿಂದ ಧೂಪಿಸಬೇಕು. ಇದರಿಂದ ಕರ್ಪೂರದ ಪುಡಿಯಂತೆ ಪ್ರಕಾಶಮಾನವಾದ ಸುಂದರ ಪುಷ್ಪಗಳನ್ನು ಬಿಡುತ್ತದೆ (ಶ್ಲೋ. 143).

ಶ್ಯಾಮ, ನಾಗಕೇಸರ, ಕಾಶ ಮತ್ತು ದ್ರಾಕ್ಷಿ ಬಳ್ಳಿಗಳು. ಸಬ್ಬಸಿಗೆ, ಮೊಸರಿನ ನೀರು, ಮೊಸರು, ಕೋಲ ಮತ್ತು ಮದ್ಯದೊಡನೆ ಬೆರೆಸಿದ ಎಳ್ಳು, ಹಾಲು, ಇಂಡಿಕ(?) ಮತ್ತು ಸತ್ತ ಪ್ರಾಣಿಜಲದಿಂದ ಪೋಷಿಸಿದಾಗ ತುಂಬಾ ಸುವಾಸನಾಯುಕ್ತ ಹೂವುಗಳ ಗೊಂಚಲಿನಿಂದ ತುಂಬಿ ಬಾಗುತ್ತವೆ (ಶ್ಲೋ. 144).

ಪನ್ನೇರಳೆ ಎಲೆಗಳು, ಉಶೀರ ಮತ್ತು ಮದ್ಯದೊಡನೆ ಬೆರೆಸಿದ ಮುಸ್ತಗಳ ಕಷಾಯದಿಂದ ಪೋಷಿಸಿದಾಗ ಎಲ್ಲ ಬಗೆಯ ಹೂವಿನ ಗಿಡಗಳು ಹೆಚ್ಚು ಹೂಗಳನ್ನು ಬಿಡುತ್ತವೆ (ಶ್ಲೋ. 145).

ಕೇತಕಿ ಗಿಡವು ಎಲಕ್ಕಿಯಂಥ ಸಾಂಬಾರ ವಸ್ತು ಸೇರಿಸಿದ ಮಾಂಸದ ಸಾರದಿಂದ ಪೋಷಿಸಿದಾಗ ಪುಷ್ಪ ಸಂಪತ್ತಿಯಿಂದ ಮೆರೆಯುತ್ತದೆ (ಶ್ಲೋ. 146).

ಹರೆಯದ ಹೆಣ್ಣು ಮಕ್ಕಳು ಒಮ್ಮೆ ಬಾಯಿಯಿಂದ ನೀರುಗುಳುವುದರಿಂದ ಕೇಸರ ಗಿಡವು ಹೂವು ಬಿಡುವಂತಾಗುತ್ತದೆ ಹಾಗೂ ಬಕುಳ ವೃಕ್ಷವು ಹರೆಯದ ಹೆಣ್ಣು ಮಕ್ಕಳು ಬಾಯಲ್ಲಿ ಮದ್ಯ ತುಂಬಿಕೊಂಡು ಗಿಡಕ್ಕೆ ಉಗುಳಿದಾಗ ಹೂಬಿಡುತ್ತದೆ (ಶ್ಲೋ. 147).

ಹರೆಯದ ಹೆಣ್ಣುಮಕ್ಕಳು ಬೆರಳ ತುದಿಯ ಉಗುರಿನಿಂದ ಕೆರೆದರೂ ಸಹ ಮಾವಿನ ಮರವು ಅದು ಹೂಬಿಡುವ ರೂಪದಲ್ಲಿದೆಯೋ ಎಂಬಂತೆ ಆನಂದದಿಂದ ರೋಮಾಂಚನಗೊಳ್ಳುತ್ತದೆ (ಶ್ಲೋ. 148).

ಹರೆಯದ ಕನ್ಯೆಯು ಸುಂದರವಾದ ಧ್ವನ್ಯಾತ್ಮಕ ನೂಪುರಗಳನ್ನು ತೊಟ್ಟು ತನ್ನ ಕಡುಗೆಂಪು ಬಣ್ಣದ ಅರಗುಲೇಪಿತ ಪಾದಕಮಲಗಳಿಂದ ಪ್ರಣಯಾಸಕ್ತಳಾಗಿ ಅಶೋಕ ವೃಕ್ಷವನ್ನು ತಾಡಿಸಿದಾಗ ಅದು ವಿಪುಲವಾಗಿ ಹೂವುಗಳನ್ನು ಬಿಡುತ್ತದೆ (ಶ್ಲೋ. 149).

ಕುರುಬಕ ವೃಕ್ಷಗಳು ಆಕೆ ಝಣತ್ಕರಿಸುವ ಕಂಕಣ (ತೋಳ್ಬಂದಿ) ತೊಟ್ಟು ಹಾವ ಭಾವ ವಿಲಾಸಗಳಿಂದ ತನ್ನ ಕಮಲದ ದಂಟಿನಂತಹ ನಳಿದೋಳ್ಗಳ ಬಳ್ಳಿಯಿಂದ ತಬ್ಬಿ ಆಲಂಗಿಸಿದಾಗ ತಮ್ಮ ಪುಷ್ಪ ಸೌಂದರ್ಯವನ್ನು ಪ್ರಕಟಿಸುತ್ತವೆ. ತಿಲಕ ವೃಕ್ಷವಾದರೆ ಅವಳ ಒಂದು ನೋಟ ಮಾತ್ರದಿಂದಲೇ ಹೂ ಬಿಡುತ್ತದೆ (ಶ್ಲೋ. 150).

ಮರಕ್ಕೆ ನಿಕಟವಾಗಿ ಅಂಟಿಕೊಂಡಿರುವ ಶ್ಯಾಮ ಬಳ್ಳಿಯು ಹೂ ಬಿಟ್ಟಾಗ, ಸೊಗಸಾದ ಉಡುಗೆಯುಟ್ಟು ಮಂಗಳಸೂತ್ರ ಧರಿಸಿ ಮದುವೆಗೆ ಸಿದ್ಧಳಾಗಿರುವ ಕನ್ಯೆಯಂತೆ ಶೋಭಿಸುತ್ತದೆ (ಶ್ಲೋ. 151).

ಮಾಧವೀ ಬಳ್ಳಿ, ಕರವೀರ ಮತ್ತು ಕುರಂಟಗಳಿಗೆ ಸೂಕ್ತರೀತಿ ವಿವರಿಸಿದಂತೆ ಸಂಜೆಯ ವೇಳೆ ಮೂತ್ರದಿಂದ ಚಿಮುಕಿಸುವುದರಿಂದ ಅತಿಶಯವಾಗಿ ಹೂ ಬಿಡುತ್ತವೆ (ಶ್ಲೋ. 152).

ಮುಕ್ಲಿನ (ಅಲಗು) ಹಾಗೂ ಬೆಂಕಿ(ಉರಿ)ಯಂತೆ ನಡುಗುವ ಕಿತಕಲಪ(?)ವನ್ನು ಬಾಯಿತುಂಬುವಷ್ಟು ತೆಗೆದುಕೊಂಡು ಚಿಮುಕಿಸುವುದರಿಂದ ಮಲ್ಲೀ ಬಳ್ಳಿಯು ತನ್ನ ಹೂಗಳ ವೈಭವವನ್ನು ಪ್ರಕಟಿಸುತ್ತದೆ. ಕಿತಕಲಪ(?)ದೊಂದಿಗೆ ಬೆರೆಸಿದ ನೀರಿನಿಂದ ನೀರಾವರಿ ಮಾಡಿದಾಗ ಪಟಾಟಿಪ್ರ ದುಂಬಿಗಳ ಆರಾಧ್ಯಸ್ಥಾನ(ಎಂದರೆ ಹೂವುಗಳನ್ನು ಬಿಡುತ್ತವೆ)ವಾಗುತ್ತದೆ (ಶ್ಲೋ. 153).

ಮೀನು ಮಾಂಸದಿಂದ ಪೋಷಿಸಿದಾಗ ಪತ್ರಿಗಿಡವು ಸುಂದರ ಹೂವುಗಳನ್ನು ಬಿಡುತ್ತದೆ. ಯೂಥಿ(ಮಲ್ಲಿಗೆ)ಯು, ಹಾಲಿನಿಂದ ಎರೆದಾಗಲೂ, ತಿಲಕ ಮತ್ತು ಸಪ್ತಚ್ಛದಗಳು ಸಗಣಿ ಬೆರಸಿದ ನೀರು ದ್ರಾವಣ ಹಾಕಿದಾಗಲೂ, ಸಿಫಲಿಕೆಯು ಮಾಂಸ ಮತ್ತು ಮೀನುಸಾರದಿಂದ ಪೋಷಿಸಿದಾಗಲೂ ಹೂವುಗಳನ್ನು ಬಿಡುತ್ತವೆ (ಶ್ಲೋ. 154).

ಕುಂಬಳ ಮತ್ತು ಕುಂಬಳ ಜಾತಿ ತರಕಾರಿ ಬಳ್ಳಿಗಳು (ಉದಾ: ಚಿರ್ಭಟಿ (ಸೌತೆ ಕಾಯಿ); ಲಾಬು (ಕರೆ ಕುಂಬಳಕಾಯಿ), ಕರ್ಕಾರೂ (ಮುಳ್ಳು ಸೌತೆ), ತ್ರಪುಸ (ಸೌತೆ) ಇತ್ಯಾದಿಗಳು ಒಂದು ಭಾನುವಾರ ಹಂದಿಯ ಮೂಳೆ ಮತ್ತು ಪಿಚಿಕೆಗಳಿಂದ ಧೂಪಿಸಿವಾಗ ವಿಪುಲಕಾಯಿಗಳನ್ನು ಬಿಡುತ್ತವೆ (ಶ್ಲೋ. 155).

ಒಂದು ರಾತ್ರಿಯಿಟ್ಟ ಅನ್ನದ ಮೇಲಿನ ಹಳಸಿದ ನೊರೆಯನ್ನು ಚಿಮುಕಿಸಿದಾಗ ಅಲಾಬು (ಈಸು ಕುಂಬಳ) ಕುಂಬಳ ಬಳ್ಳಿಯು ವಿಪರೀತ ಕಾಯಿಗಳನ್ನು ಬಿಡುತ್ತದೆ (ಶ್ಲೋ. 156).

ಪಟೋಲ ಬಳ್ಳಿಗಳು ಫಾಲ್ಗುಣ ಮಾಸದಲ್ಲಿ ಒಣಹುಲ್ಲುಕಡ್ಡಿ ಹೊತ್ತಿಸಿ ಧೂಪ ಹಾಕಿ ಕಮರಿಸಿ, ಚೈತ್ರದಲ್ಲಿ ಎಣ್ಣೆ ಹಿಂಡಿಗಳನ್ನು ನೀರಿನಲ್ಲಿ ಕರಗಿಸಿ ಅದಕ್ಕೆ ಮದ್ಯಸಾರ

ವನ್ನು ಬೆರಸಿದ ದ್ರಾವಣ ಚುಮುಕಿಸುವುದರಿಂದ ಹಣ್ಣುಗಳನ್ನು ಬಿಡುತ್ತವೆ (ಶ್ಲೋ. 157).

ಬೇಯಿಸಿದ ಸಾಲಿ-ಅನ್ನ ಮತ್ತು ಮೊಸರು ಕಲಸಿ ಭೂಮಿಯ ಮೇಲೆಲ್ಲ ಚೆಲ್ಲುವುದರಿಂದ ಆಲಿಕಲ್ಲು ಬೀಳುವುದು ತಪ್ಪುತ್ತದೆ (ಶ್ಲೋ. 159).

ಇಲ್ಲಿಗೆ ಸಸ್ಯಪೋಷಣೆಯನ್ನು ಕುರಿತ ಅಧ್ಯಾಯವು ಮುಗಿಯುತ್ತದೆ.

ಸುರಪಾಲನ ವೃಕ್ಷಾಯುರ್ವೇದದಲ್ಲಿ ವಿವಿಧ ಬಗೆಯ ಗೊಬ್ಬರಗಳನ್ನು ಸಿದ್ಧಪಡಿಸುವ ಕುತೂಹಲಕಾರಿ ವಿವರಗಳು ದೊರಕುತ್ತವೆ. ಹಾಗೆಯೇ ವಿವಿಧ ಬೆಳೆಗಳಿಗೆ ಮತ್ತು ಮರಗಿಡಗಳಿಗೆ ಅವುಗಳನ್ನು ಹಾಕಬೇಕಾದ ವಿಧಾನವನ್ನು ಸಹ ಶಿಫಾರಸ್ಸು ಮಾಡಲಾಗಿದೆ. ಈ ಸಂಸ್ಕೃತ ಮೂಲ ಪುಸ್ತಕದ ಕೆಲವು ಮುಖ್ಯ ಭಾಗಗಳ ಅನುವಾದವನ್ನು ಕೆಳಗೆ ಕೊಡಲಾಗಿದೆ.

ಸತ್ತ ಪ್ರಾಣಿಜಲ: ಜಿಂಕೆ, ಹುಲ್ಲೆಗಳು, ಮೀನು, ಕುರಿ, ಆಡು ಮತ್ತು ಬಿದ್ದ ಮೃಗಗಳ ಮಾಂಸ, ರಕ್ತಸಾರ, ಮಿದುಳಿನ ನೀರು ಹಾಗೂ ಕೊಬ್ಬುಗಳನ್ನು ಸಂಗ್ರಹಿಸಿ ನೀರಿನಲ್ಲಿ ಹಾಕಿ, ಒಲೆಯ ಮೇಲೆ ಬೇಯಿಸಬೇಕು. ಚೆನ್ನಾಗಿ ಬೆಂದಮೇಲೆ, ಅದನ್ನು ದೊಡ್ಡ ನೀರು ಕಡಾಯಿಗೆ ಸುರಿಯಬೇಕು. ಬಳಿಕ ಇದಕ್ಕೆ ಹಾಲು, ಪುಡಿಮಾಡಿದ ಎಳ್ಳೆಣ್ಣೆ ಹಿಂಡಿ, ಜೇನುತುಪ್ಪ, ಅವಯಲ್ಲಿ ಸಾರಸಮೇತವಾಗಿ ಬೇಯಿಸಿದ ಮಾಷ (ಫೇಸಿಯೋಲಸ್ ರೇಡಿಯೋಟಸ್), ತುಪ್ಪ ಮತ್ತು ಬಿಸಿ ನೀರುಗಳನ್ನು ಸೇರಿಸಬೇಕು. ಈ ಯಾವುದೇ ವಸ್ತುಗಳನ್ನು ಹಾಕುವಾಗಲೂ ಇಂತಿಷ್ಟೇ ಪ್ರಮಾಣವೆಂಬ ನಿಯಮವಿಲ್ಲ. ವಿವೇಕಿಯಾದವನು, ಈ ಕಡಾಯಿಯನ್ನು ಒಂದು ಬೆಚ್ಚನೆಯ ತಾಣದಲ್ಲಿ ಒಂದು ಪಕ್ಷಕಾಲ ಇರಿಸಬೇಕು. ಆಗ ಈ ಮಾಂಸವು ಸಸ್ಯ ಪೋಷಣೆಗೆ ಯುಕ್ತವಾಗಿರುತ್ತದೆ. (ಶ್ಲೋ. 82–85).

ಅಂಕೋಲ ಎಣ್ಣೆ: ಹೊಟ್ಟು (ಸಿಪ್ಪೆ) ತೆಗೆದ ಅಂಕೋಲ ಬೀಜ (ಅಲಾಂಜಿಯಂ ಹೆಕ್ಸಪೆಟಲಮ್)ಗಳನ್ನು ತೆಗೆದುಕೊಂಡು ಪುಡಿಮಾಡಿ ಹಲಬಾರಿ ಎಳ್ಳೆಣ್ಣೆಯಲ್ಲಿ ನೆನೆಸಬೇಕು. ಅನಂತರ ಬಿಸಿ ನೀರಿನಲ್ಲಿ ಉಜ್ಜಿ (ತೊಳೆದು), ಗಾಣದಲ್ಲಿ ಎಣ್ಣೆ ತೆಗೆಸಬೇಕು ಇಲ್ಲವೇ ಗಂಜಿಯನ್ನು ಎರಡು ಕಂಚಿನ ಫಲಕಗಳ ನಡುವೆ ಇರಿಸಿ ಅವು ಪರಸ್ಪರ ಎದುರುಬದುರಾಗುವಂತೆ (ಓರೆಯಾಗಿ) ಬಿಸಿಲಿನಲ್ಲಿ ಇರಿಸಬೇಕು. ಅನಂತರ ಅವುಗಳ ತಳದಲ್ಲಿರಿಸಿದ ಮತ್ತೊಂದು ಕಂಚಿನ ಪಾತ್ರೆಯಲ್ಲಿ ತೊಟ್ಟಿಡುವ ಎಣ್ಣೆಯನ್ನು ಸಂಗ್ರಹಿಸಬೇಕು (ಶ್ಲೋ. 112–114).

ಜಾತಿ ಮತ್ತು ಮಲ್ಲಿಕ ತಳಿಗಳ ಮಲ್ಲಿಗೆಯು ಹೂಬಿಡಲು ಸಂವಾಸಿತ ನೀರು ಹಾಯಿಸುವುದು ಉಪಯುಕ್ತ. ಸದಾ ಹೂ ಬಿಡುವ ಜಾತಿ(ನಿತ್ಯಮಲ್ಲಿಗೆ) ಗಾದರೆ ಆಮೆಯ ಮಾಂಸವನ್ನು ಶಿಫಾರಸ್ಸು ಮಾಡಲಾಗಿದೆ (ಶ್ಲೋ. 115).

ಮಾಧವಿ (ವಸಂತ ಪುಷ್ಪ, ಗಾರ್ಟ್ನೆರಾ ರೆಸಿಮೋಸ), ಕಣಗಿಲೆ (ನೀರಿಯಮ್ ಒಡೋರಮ್) ಹಾಗೂ ಹಳದಿ ಅಮರಪುಷ್ಪಗಳು ದಿನದ ಕೊನೆಯಲ್ಲಿ (ಸಂಜೆ) ಮದ್ಯದಿಂದ ಎರೆದಾಗ ಸದಾ ಮೋಹಕವಾದ ಹೂಗಳನ್ನು ಬಿಡುತ್ತವೆ (ಶ್ಲೋ. 116).

ಗಿಡಗಳಿಗೆ ಆಡು, ಕುರಿ ಮತ್ತು ದನಗಳ ಸಗಣಿಯ ಗೊಬ್ಬರ ಹಾಕಿ, ನೀರೆರೆದು ಪೋಷಿಸಬೇಕು. ಈ ರೀತಿ ಮಾಡುವುದರಿಂದ ಎಲ್ಲ ರೀತಿಯ ಮರಗಿಡಬಳ್ಳಿ ಮುಂತಾದುವು ಸದಾ ಹಣ್ಣು ಬಿಡುವುದನ್ನು ಮುಂದುವರಿಸುತ್ತವೆ (ಶ್ಲೋ. 117).

ಈ ಮುಂದೆ ತಿಳಿಸುವಂತಹವು ಗಿಡ, ಮರ, ಪೊದೆ ಇತ್ಯಾದಿಗಳ ಸಾಮಾನ್ಯ ಅವಶ್ಯಕತೆಗಳಾಗಿವೆ. ಹಿಂಗ ಮತ್ತು ಅಕ್ಕಿಯೊಡನೆ ಬೆರೆಸಿದ ಮೀನು ಮಾಂಸವನ್ನು ಹಸುವಿನ ಗಂಜಲ ಮತ್ತು ಸಗಣಿಯೊಡನೆ ಬೆರಸಿ ಹಾಕುವುದು ಹಾಗೂ ನೀರೆರೆಯುವುದಕ್ಕೆ ಬಳಸುವುದರಿಂದ ಹೂ ಹಣ್ಣುಗಳ ಬೆಳವಣಿಗೆ ಹೆಚ್ಚುತ್ತದೆ (ಶ್ಲೋ. 118-119).

ಬಾರ್ಲಿ, ಮುದ್ಗ, ಎಳ್ಳು, ಮಾಷ ಮತ್ತು ಕುಲತ್ಥಗಳ ಕಷಾಯವನ್ನು ತಣ್ಣಗೆ ಆರಿರುವಾಗ ಗಿಡಗಳಿಗೆ ಎರೆಯಬೇಕು. ಇದರಿಂದ ಚಿಗುರು, ಎಲೆ, ಹೂವು, ಹಣ್ಣುಗಳು ಹುಲುಸಾಗಿ ಬೆಳೆಯುತ್ತವೆ (ಶ್ಲೋ. 120).

ಖರ್ಜೂರ, ತೆಂಗು, ಬಿದಿರು ಮತ್ತು ತಾವರೆ ಗಿಡಗಳ ಬೆಳವಣಿಗೆಗೆ ನೀರಿನಲ್ಲಿ ಬೇಯಿಸಿದ ಮಾಂಸವನ್ನು ಬಳಸಲಾಗುತ್ತದೆ (ಶ್ಲೋ. 121).

ತೆಂಗಿನ ಮರವು ಮಾಷ, ಮುದ್ಗ, ಮತ್ತು ಮುರ (ಒಂದು ಸುವಾಸನೆಯ ಗಿಡ) ಬೀಜಗಳನ್ನು ನೀರಿನಲ್ಲಿ ಹಾಕಿ ಬೇಯಿಸಿದ ಕಷಾಯ ಹಾಗೂ ಅವುಗಳನ್ನು ಬಳಿಕ ಪುಡಿಮಾಡಿ ಮದ್ಯ ಹಾಗೂ ಉಪ್ಪಿನೊಡನೆ ಬೆರಸಿ ಹಾಕುವುದರಿಂದ ಯಾವಾಗಲೂ ಕ್ಷಿಪ್ರದಲ್ಲಿ ಕಾಯಿಗಳನ್ನು ಬಿಡುತ್ತದೆ (ಶ್ಲೋ. 122),

ರೊಟ್ಟಿ ಹಣ್ಣಿನ ಮರವು ಕ್ರಮುಕ (ಅಡಕೆ ಮರ, ಅರೆಕ ಫಾಫೆಲ್) ಎಲೆಗಳಿಂದ ಸುತ್ತಿದಾಗ ಸಂತಸದಿಂದ ರೋಮಾಂಚನಗೊಂಡಂತೆ, ಮುಳ್ಳಿನ ಗಡಸು ಸಿಪ್ಪೆಯಿಂದ ಕೂಡಿದ ಹಣ್ಣುಗಳನ್ನು ಬಿಡುತ್ತದೆ (ಶ್ಲೋ. 123).

ಮಾವಿನ ಮರದ ಪಾತಿಯಲ್ಲಿ ಒಂದು ಬಾರಿಯಾದರೂ ಗುಳ್ಳೆನರಿ, ಉಡ, ಜಿಂಕೆ ಮತ್ತು ಹಂದಿಗಳ ಕೊಬ್ಬನ್ನು ಪಂಚಪಲ್ಲವ, [ಆಮ್ರ (ಮಾವು), ಜಂಬು, ಕಪಿತ್ಥ, ಬೀಜಪೂರಕ ಮತ್ತು ಬಿಲ್ವ] ಗಳೊಡನೆ ಬೆರಸಿ, ಹಾಲಿನಲ್ಲಿ ಬೇಯಿಸಿ ಎರೆದರೆ ಹಣ್ಣಿನ ಕಾಲದಲ್ಲಿ ಸಮೃದ್ಧವಾಗಿ ಫಲದೊರೆಯುತ್ತದೆ (ಶ್ಲೋ. 124-125).

ಮಾವಿನ ಮರಕ್ಕೆ ನೀರು, ಹಾಲು ಮತ್ತು ಮೊಸರಿನಲ್ಲಿ ಪಂಚಪಲ್ಲವಗಳು ಹಾಗೂ ಹಂದಿ, ಗುಳ್ಳೆನರಿ, ಇಲಿ, ಜಿಂಕೆ ಮತ್ತು ಕುದುರೆಗಳ ಕೊಬ್ಬುಗಳನ್ನು ಸೇರಿಸಿ

ಕುದಿಸಿ ಎರೆದು ಪೋಷಿಸುವುದರಿಂದ ಸಮೃದ್ಧವಾಗಿ ಹಣ್ಣುಗಳನ್ನು ಬಿಡುತ್ತವೆ (ಶ್ಲೋ. 126).

ದಾಳಿಂಬೆ ಹಣ್ಣುಗಳನ್ನು ಹೇರಳವಾಗಿ ಪಡೆಯಲು ಅದಕ್ಕೆ ಕುರಿಮಾಂಸದ ಸಾರವೆರೆದು ಕುರಿಯ ಉಣ್ಣೆ ಮತ್ತು ಮಾಂಸದ ಹೊಗೆಯಿಂದ ಧೂಪಿಸುವುದು ಅತ್ಯುತ್ತಮ ವಿಧಾನವಾಗಿದೆ (ಶ್ಲೋ. 127).

ಜೇನು ತುಪ್ಪ, ತುಪ್ಪ ಮತ್ತು ಅಗಳಿಕಾಯಿಗಳನ್ನು ಉತ್ತಮ ಬಗೆಯ ಮಾಂಸದ ರಕ್ತ ಸಾರದೊಂದಿಗೆ ಮಿಶ್ರಮಾಡಿ ಬಿಸಿ ಬೇರುಗಳೆಡೆಯಲ್ಲಿ ಧೂಪಿಸುವುದರಿಂದ ತಳಿಮರದ ಹಣ್ಣುಗಳಂತಹ ದೊಡ್ಡ ದಾಳಿಂಬೆ ಹಣ್ಣುಗಳನ್ನು ಬಿಡುತ್ತದೆ (ಶ್ಲೋ. 128).

ಕುರಿಯ ಹೃದಯದೊಂದಿಗೆ ಸಿಂಹದ ಮಾಂಸ ಬೆರೆಸಿದ ಸಿಹಿನೀರಿನ ಮೀನು (ಸ್ವೀಟ್ ಫಿಷ್) ಕಷಾಯವನ್ನು ದಾಳಿಂಬೆ ಗಿಡಕ್ಕೆ ಎರೆಯುವುದರಿಂದ ಹಣ್ಣು ದುಂಡಗಾಗಿ ಬೆಳೆಯಲು ನೆರವಾಗುತ್ತದೆ (ಶ್ಲೋ. 129).

ಜಂಬೀರ (ಅಥವಾ ನಿಂಬೆ) ಹಣ್ಣುಗಳು ಗುಳ್ಳೆನರಿ ಮಾಂಸದಿಂದಲೂ, ಮರಗಳು ಸಾಮಾನ್ಯವಾಗಿ) ಬೆಲ್ಲ, ಹಾಲು ಮತ್ತು ಮಾಂಸಸಾರ (ಅಥವಾ ರಕ್ತಸಾರ) ಗಳಿಂದ ಪೋಷಿಸುವುದರಿಂದಲೂ ದೊಡ್ಡ ಹಣ್ಣುಗಳನ್ನು ಬಿಡುತ್ತವೆ (ಶ್ಲೋ. 130).

ಕಿತ್ತಳೆಯು ಯಾವುದೇ ಪ್ರಾಣಿಯ ಮಾಂಸವನ್ನು ಬೆಲ್ಲ ಮತ್ತು ಗೋಕ್ಷೀರದೊಡನೆ ಬೆರಸಿ ಪೋಷಿಸಿದಾಗ ಹಣ್ಣುಗಳನ್ನು ಬಿಡಬೇಕು. ಇದು ನಿಶ್ಚಯ (ಶ್ಲೋ. 131).

ಜಾಂಬ (ರೋಸ್-ಆಪ್ಲ್) ಮರದಡಿ ಜಂಬೀರ ವೃಕ್ಷದ ಸುತ್ತುಪಾತಿಯೊಂದನ್ನು ಅಗೆದು ಅದರಲ್ಲಿ ಎಣ್ಣೆ ಹಿಂಡಿ ತುಂಬಿಸುವುದರಿಂದ ಪುಷ್ಕಲವಾಗಿ ಹಣ್ಣುಗಳನ್ನು ಬಿಡುತ್ತದೆ (ಶ್ಲೋ. 132).

ಮಧು, ತುಪ್ಪ, ಕಾಳುಗಳನ್ನು ಬೇಯಿಸಿ ಅರೆದು, ಹಿಟ್ಟಿನಂತೆ (ಕಣಕ) ಮಾಡಿದ ಲೇಪನವನ್ನು ರಾತ್ರಿಯ ವೇಳೆ ತೆಂಗಿನಮರಕ್ಕೆ ಲೇಪಿಸಿದ್ದಾದರೆ ಸತ್ವಯುಕ್ತ ಕಾಯಿಗಳನ್ನು ಬಿಡುತ್ತದೆ (ಶ್ಲೋ. 133).

ಉಪ್ಪು, ಕಪಾಲ, ಹೊಟ್ಟು ಮತ್ತು ಸಕ್ಕರೆಗಳನ್ನು ಬೇರಿಗೆ ಹಾಕುವುದರಿಂದ ತೆಂಗಿನಕಾಯಿ ಇಳುವರಿ ಹೆಚ್ಚುವುದು ಖಂಡಿತ (ಶ್ಲೋ. 134).

ಪ್ರತಿವರ್ಷವೂ ಮಳೆಗಾಲದಲ್ಲಿ ಅಡಕೆ ಮರದ ಪಾತಿಗಳಲ್ಲಿ ಮಲಗಳನ್ನು ತುಂಬುವುದರಿಂದ ಹೇರಳವಾಗಿ ಹಣ್ಣುಗಳನ್ನು ಕೊಡುತ್ತದೆ (ಶ್ಲೋ. 135).

ದಂತ(ಆನೆದಂತ)ದ ಪುಡಿಯು ಬೆಂಕಿಯಲ್ಲಿ ಕಾಯಿಸಿದ ಕಬ್ಬಿಣದ ಕೋಲಿನಿಂದ ಹಣ್ಣಿನ ಗೊನೆಯ ಮೂಲ ಹಾಗೂ ಗಿಡದ ಬೇರುಗಳ ಬಳಿ ರಂಧ್ರಮಾಡುವುದರಿಂದ ಬಾಳೆಯು ಹಣ್ಣುಗಳನ್ನು ಬಿಡುತ್ತದೆ (ಶ್ಲೋ. 136).

ಬಾಳೆಯ ಬೇರಂಗಳಿಗೆ ಹಂದಿ ಇಲ್ಲವೆ ಕುದುರೆ ಲದ್ದಿಯು ಬೆಂಕಿಯಲ್ಲಿ ಕಾಯಿಸಿದ ಕಬ್ಬಿಣದ ಕೋಲಿನಿಂದ ಚಿಟಿಕೆ ಹಾಕುವುದರಿಂದ ವಿಪುಲ ಇಳುವರಿ ಕೊಡುತ್ತದೆ (ಶ್ಲೋ. 137).

ಬಾಳೆಯ ಬೇರಿಗೆ ಹೊಟ್ಟು, ಸಿಪ್ಪೆಗಳು ಮತ್ತು ಒಣಗಿಸಿದ ಹಳೆಯ ಸಗಣಿಯೊಡನೆ ಮಿಶ್ರಮಾಡಿದ ಬೂದಿಯನ್ನು ಹಾಕಿ, ಸಕಾಲದಲ್ಲಿ ನೀರೆರೆದಾಗ ಹೆಚ್ಚಿನ ಇಳುವರಿ ಕೊಡುತ್ತದೆ (ಶ್ಲೋ. 138).

ಅತಿ ಮಧುರದ ಬೇರಿನ ನೀರು (ಅಥವಾ ಜೇನುತುಪ್ಪ ಮತ್ತು ಅತಿಮಧುರದ ಬೇರು ನೀರು) ಜುಜುಬೆ ವೃಕ್ಷಗಳಿಗೆ ಅತ್ಯುತ್ತಮವಾದುದು: ಪುಡಿಮಾಡಿದ ಎಳ್ಳು ಮತ್ತು ಅತಿ ಮಧುರದ ಬೇರಂಗಳನ್ನು ಸಮ ಪ್ರಮಾಣದಲ್ಲಿ ತೆಗೆದುಕೊಂಡು ಜೇನು ತುಪ್ಪ ಮತ್ತು ನೀರಿನೊಡನೆ ಬೆರೆಸಿ ಆ ದ್ರಾವಣವನ್ನು ಜುಜುಬೆ ವೃಕ್ಷದಲ್ಲಿ ಅದು ಹೂ ಬಿಡುವ ಕಾಲದಲ್ಲಿ ಬೇರುಗಳಿಗೆ ಚುಮುಕಿಸಬೇಕು. ಇದರಿಂದ ಶೀಘ್ರದಲ್ಲಿ ದೊಡ್ಡದಾದ ಸಿಹಿಯಾದ ಸುವಾಸನಭರಿತ ಹಣ್ಣುಗಳನ್ನು ಬಿಡುತ್ತದೆ (ಶ್ಲೋ. 139–140).

ಚಂಪ (ಕಾಂಚನ ವೃಕ್ಷ)ಗಳು ಬಾಲ ಮೆಣಸು (ಕನ), ಎಬ್ರಸ್ ಪ್ರಿಕೆಟೋರಿಯಸ್ (ಗುಂಜ), ಶ್ಯಾಮ, ಬಿಳಿಸಾಸಿವೆ, ಜಂಗತಿ (ಮುಚುನ ಪ್ರುರಿಟಸ್), ಹಾಗೂ ಪುಡಿಮಾಡಿದ ಎಳ್ಳುಗಳೊಡನೆ ಮಿಶ್ರಮಾಡಿದ ನೀರೆರೆದು ಪೋಷಿಸಿದಾಗ ಹೂಗಳಿಂದ ತುಂಬಿ ಸಮೃದ್ಧವಾಗುತ್ತದೆ. ಚಂಪಕ ವೃಕ್ಷಗಳಿಗೆ ಗುಳ್ಳೆನರಿ ಮತ್ತು ಮೀನು ಇತ್ಯಾದಿಗಳ ಮಾಂಸವನ್ನು ಸಹ ಕೊಡಬೇಕು (ಶ್ಲೋ. 141).

ವಲ್ಲಿ ಬಳ್ಳಿಗಳು ಪೊದೆಗಳ ನಡುವೆ ಒಣಹುಲ್ಲು ಕಡ್ಡಿಯನ್ನು ವಿರಳವಾಗಿ ಹರಡಿ ಬೆಂಕಿ ಹಚ್ಚುವುದರಿಂದ ಬಳ್ಳಿಗಳು ಅತಿ ಮನೋಹರ ಹೂವುಗಳನ್ನು ಬಿಡುತ್ತವೆ (ಶ್ಲೋ. 142).

ದ್ರಾಕ್ಷಿ ಬಳ್ಳಿಗೆ ಒಮ್ಮೆಯಾದರೂ ಮೊಲದ ಮಾಂಸ (ಅಥವಾ ಮಾಂಸಸಾರ)ದ ನೀರೆರೆಯಬೇಕು. ಇದರಿಂದ ಸಿಹಿಯಾದ ರಸಭರಿತ ಹಣ್ಣುಗಳ ಸಮೃದ್ಧ ಬೆಳೆ ದೊರಕುತ್ತದೆ (ಶ್ಲೋ. 143).

ಖರ್ಜೂರ, ಬಿಲ್ವ ಮತ್ತು ಲಿಕುಚ (ನಿಂಬೆ)ಗಳು ಬಿಳಿಸಾಸಿವೆಯಿಂದಲೂ ಮಾವಿನ ವೃಕ್ಷಗಳು ನೀರಿನಲ್ಲಿ ಕರಗಿಸಿದ ಎಣ್ಣೆ ಹಿಂಡಿಗಳು ಮತ್ತು ಹೊಟ್ಟು ಸಿಪ್ಪೆಗಳಿಂದಲೂ

ಹುಲುಸಾಗಿ ಬೆಳೆಯುತ್ತವೆ. ಬಲಿಕ್ಕ ಗಿಡವು ನಕುಲ ಎಲೆಗಳು ಮತ್ತು ಅಥವಾ ವ್ರೀಹಿ ಅಕ್ಕಿಯಿರುವ ನೀರು ಸಿಂಪಡಿಸುವುದರಿಂದ ವರ್ಧಿಸುತ್ತದೆ (ಶ್ಲೋ. 144).

ಹಳತಾದ .... ಅರಳೀಕಾಯಿ ಮರಗಳಿಗೆ 'ಮಾಸ' ಆವರೆಯು ಪ್ರಿಯವಾದುದು. ಎಳೆಯ ತೆಂಗಿನ ಸಸಿಗಳಿಗೆ ನೀರು ಬೆರೆಸಿದ ಹಾಲು ಒಳ್ಳೆಯದು. ತೆಂಗಿನ ವೃಕ್ಷಗಳು ಬಾರ್ಲಿ ಹಾಕುವುದರಿಂದ ಸುಪ್ರೀತವಾಗುತ್ತವೆ. ಇವೆಲ್ಲವೂ ಬಗ್ಗು ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುತ್ತವೆ (ಶ್ಲೋ. 145).

ಸಹಕಾರ ಮಾವಿನ ತಳಿಯು ಪಂಚಪಲ್ಲವ ಜಲ ಹಾಗೂ ಜಿಂಕೆ, ಹಂದಿ, ಚುಕ್ಕೆ ಜಿಂಕೆ, ಗುಳ್ಳೆನರಿ, ಕುದುರೆ ಇತ್ಯಾದಿಗಳ ಕೊಬ್ಬನ್ನು ಬೇಯಿಸಿದ ಹಾಲುಗಳಿಂದ ಪೋಷಿಸಿದಾಗ ಶೀಘ್ರದಲ್ಲಿ ಅತ್ಯಂತ ಸುವಾಸನಾಯುಕ್ತ ಹಣ್ಣುಗಳ ಇಳುವರಿಯನ್ನು ಕೊಡುತ್ತದೆ (ಶ್ಲೋ. 146).

ಮಾಂಸಸಾರ ಹಾಗೂ, ತುಪ್ಪದೊಡನೆ ಬೆರೆಸಿದ ಹಂದಿಯ ಮಲ ಹಾಗೂ ನೀರು ಇವು ದಾಳಿಂಬೆ ಗಿಡಗಳಿಗೆ ತುಂಬಾ ಉಪಯುಕ್ತವಾದುವು. ಬೇಯಿಸಿದ ಕುಲತ್ಥ ಅಥವಾ ಅವರ ಪುಡಿಯು ಸಹ ಹೇರಳ ಹಣ್ಣು ಇಳುವರಿ ಪಡೆಯಲು ಉಪಯುಕ್ತವಾಗಿರುತ್ತದೆ (ಶ್ಲೋ. 147).

ಅರಳೀಕಾಯಿ ತ್ರಯಗಳಿಂದ ಹಾಗೂ ಮೀನು ಮಾಂಸದಿಂದ ಲೇಪಿಸಿ, ತುಪ್ಪ ಮತ್ತು ಅರಳೀಕಾಯಿ ತ್ರಯಗಳಿಂದ ಧೂಪಿಸುವುದರಿಂದ ದಾಳಿಂಬೆ ವೃಕ್ಷವು ತಾಳೆ ಹಣ್ಣಿನೊಡನೆ ಸ್ಪರ್ಧಿಸುವಂತಹ ಹಣ್ಣುಗಳಿಂದ ಸಂಪದ್ಭರಿತವಾಗುತ್ತದೆ (ಶ್ಲೋ. 148).

ಮೊಸರು, ಮೊಸರಿನ ನೀರು, ಹುಳಿಗಂಜಿ, ಮದ್ಯ, ಜಂಬುವೆ, ಎಳ್ಳು, ಮೆಂತೆ, (ಟ್ರೈಗೊನೆಲ್ಲ ಫೋಣಮ್ ಗ್ರೇಕಮ್). ಮಾಂಸ ಮತ್ತು ಹಾಲು ಇವೆಲ್ಲ ಫಲಿನೀ, ಕದಂಬ, ಕುಬ್ಜಾ ಹಾಗೂ ಕೇಸರಿಕ (ಮೆಸುವಫೆರಿಯಾ)ಗಳು ಸುಗಂಧ ಪುಷ್ಪಭರಿತವಾಗಲು ನೆರವಾಗುತ್ತವೆ (ಶ್ಲೋ. 149).

ಪುಡಿಮಾಡಿದ ಎಳ್ಳು (ಪಲಲ) ಮತ್ತು ಮೀನಿನ ಸಾರದಿಂದ ಪೋಷಿಸಿ ಹಂಜದ ಮಲದ ಗೊಬ್ಬರ ಹಾಕುವುದರಿಂದ ಗೋಸ್ತನಿ (ಕೆಂಪು ದ್ರಾಕ್ಷಿ) ಬಳ್ಳಿಯು ಹೂ ಹಣ್ಣುಗಳಿಂದ ಕೂಡಿ ಹುಲುಸಾಗಿ ಬೆಳೆಯುತ್ತದೆ (ಶ್ಲೋ. 150).

ಕಾಂಡಗಳನ್ನು ಎಳ್ಳುಪುಡಿ ಮುದ್ದೆಯಿಂದ ಲೇಪಿಸಿ ವಚ(ಏಕೋರಸ್ ಕೋಲಮಸ್) ಜಲದಿಂದ ಪೋಷಿಸಿದ್ದೇ ಆದರೆ ಬ್ರೆಡ್ ಹಣ್ಣಿನ ಮರಗಳು ತುದಿಯಿಂದ ಬುಡದವರೆಗೆ ಹಣ್ಣುಗಳನ್ನು ಬಿಡುತ್ತವೆ (ಶ್ಲೋ. 151).

ಕಪಿತ್ಥ ಮತ್ತು ಬಿಲ್ವ ವೃಕ್ಷಗಳಿಗೆ ತುಪ್ಪ, ಬೆಲ್ಲ, ಹಾಲು ಮತ್ತು ಜೇನು ತುಪ್ಪಗಳಿಂದ ಉಪಚರಿಸಿದ ಬಳಿಕ ನೀರು ಹಾಯಿಸುವುದರಿಂದ ಅವು ಸದಾ ಜೇನಿನಷ್ಟು ಸಿಹಿಯಾದ ರಸಭರಿತ ಹಣ್ಣುಗಳನ್ನು ಅಧಿಕ ಪರಿಮಾಣದಲ್ಲಿ ಕೊಡುತ್ತವೆ (ಶ್ಲೋ. 152).

ಕೋಶಾತಕಿ (ಟ್ರೈಕೊಸ್ಯಾಂಥಸ್ ಡೈಯೋಕ) ಎಲೆಗಳು, ನೀರುಹೂವಿನ (ನೈದಿಲೆ) ಬೇರುಗಳು ಮತ್ತು ತಿರುಳು ಮತ್ತು ಬಾಲ ಮೆಣಸಿನ ಪುಡಿಗಳನ್ನು ಬೆರೆಸಿದ ನೀರು ಹಾಗೂ ಸುವಾಸನಾ ದ್ರವ್ಯ ಬೆರಸಿದ ನೀರುಗಳಿಂದ ಉಪಚರಿಸಿ ಪೋಷಿಸುವುದರಿಂದ ಮಧೂಕ (ಬ್ಯಾಸಿಯ ಲ್ಯಾಟಿಫೋಲಿಯ) ವೃಕ್ಷವು ಅಚ್ಚರಿಯಾಗುವಂತಹ ಕಾಂತಿ ವೈಭವಗಳಿಂದ ಮೆರೆಯುತ್ತದೆ (ಶ್ಲೋ. 153).

ಹುಣಸೆ ವೃಕ್ಷಕ್ಕೆ ಎಳ್ಳು, ಅತಿಮಧುರದ ಬೇರು, ಮತ್ತು ಜೇನು ಬೆರಸಿದ ನೀರಿನಿಂದ ಪೋಷಿಸಿ ಬೇರುಗಳಿಗೆ ಹೊಲಸು ನೀರು ಹರಿಸುವುದರಿಂದ ಅದು ಸಕ್ಕರೆಯಂತೆ ಸಿಹಿಯಾದ ಹಣ್ಣುಗಳನ್ನು ಬಿಡುತ್ತದೆ (ಶ್ಲೋ. 154).

ಮಾದಳ ವೃಕ್ಷವು ಆಡು, ಕುರಿ, ಹಂದಿಗಳ ಮಲ ಮತ್ತು ಕುಕ್ಕುಟಾದಿ ಪಕ್ಷಿ ಮಲಗಳ ಗೊಬ್ಬರ ಹಾಕಿ ಕಂದುರೆ ಮೂತ್ರ ಮತ್ತು ಆಮಿಷಗಳ ನೀರೆರೆದಾಗ ವಿಪುಲವಾಗಿ ಹಣ್ಣುಗಳನ್ನು ಬಿಡುತ್ತದೆ (ಶ್ಲೋ. 155).

ವೃಂತಾಕ (ಬೊಹೇರಿಯ ಫ್ಲೋರಿಬಂಡ್ಸ್) ಗಿಡದ ಮುಳ್ಳಿನಿಂದ ಚುಚ್ಚಿ ಸುಗಂಧದ್ರವ್ಯಗಳ ಹೊಗೆ ಹಾಕಿ, ಕುರಿ ಮತ್ತು ಹಂದಿಗಳ ಕೊಬ್ಬಿನಿಂದ ಪೋಷಿಸಿದಾಗ ಎಲ್ಲ ಬಗೆಯ ಬಳ್ಳಿಗಳೂ ಹಣ್ಣುಗಳ ಭಾರದಿಂದ ಬಾಗುತ್ತವೆ (ಶ್ಲೋ. 156).

ಧನಿಯ (ಸೌರಭ)ವು ಕುಷ್ಠ (ಕಾಸ್ಟಸ್ ಸ್ಪೀಸಿಯೋಸಸ್), ಪತ್ರ (ಲಾರಸ್ ಕ್ಯಾಸಿಯ), ಮುಸ್ತ (ಸೈಪ್ರಸ್ ರೊಟುಂಡಸ್), ತಗರ (ಟೇಬರ್ನೇಮೊಂಟಾನ ಕೊರೊನೇರಿಯ), ಉಶೀರ (ಆಂಡ್ರೊಪೊಗಾನ್ ಮ್ಯೂರಿಕೇಟಸ್) ಮತ್ತು ದ್ರಾಕ್ಷಾ ಮದ್ಯಗಳನ್ನು ಬೆರೆಸಿದ ನೀರೆರೆದು ಪೋಷಿಸಿದಾಗ ತಿಂಗಳೊಳಗೆ ಬೆಳೆಯುತ್ತದೆ (ಶ್ಲೋ. 157).

ಬಿಳಿಸಾಸುವೆ, ಬಾಳೆ ಎಲೆಗಳು, ಮೀನು ಮತ್ತು ಹಂದಿ ಹಾಗೂ ಬೆಕ್ಕಿನ ಮಲಗಳ ಪುಡಿಗಳನ್ನೆಲ್ಲಾ ಸಮಪ್ರಮಾಣದಲ್ಲಿ ತೆಗೆದುಕೊಂಡು, ತುಪ್ಪ ಮತ್ತು ದ್ರಾಕ್ಷಾ ಮದ್ಯಗಳೊಡನೆ ಬೆರೆಸಿ ಹಾಕುವುದು (ಮರಗಳ ಬೆಳವಣಿಗೆಗೆ ಲಾಭದಾಯಕ.) ಸುಗಂಧ ದ್ರವ್ಯ ಧೂಪನ ಹಾಗೂ ಲೇಪನಗಳಿಂದ ರೋಗ ವಿಮುಕ್ತವಾಗಿ, ಕೊಂಬೆಗಳು ಎಲೆಗಳು ಮತ್ತು ಹೂವುಗಳಿಂದ ಇಡಿ ಕಿರಿದು (ಸಂತಸದಿಂದ) ದುಂಬಿಗಳು ಹಾರಾಡುವಂತಾಗುತ್ತದೆ (ಶ್ಲೋ. 158).

ತುಪ್ಪವನ್ನು ಮಣ್ಣಿನೊಡನೆ ಬೆರಸಿ, ಹಾಲು ನೀರು ಚಿಮುಕಿಸಿ, ಅವರ ಧೂಪ ಹಾಕಿ ಹೊಲಸು ನೀರು ಮತ್ತು ನೀರು ಬೆರೆಸಿದ ಹಾಲುಗಳಿಂದ ಎರೆದು ಪೋಷಿಸಿ ವಿಡಂಗ ಹಾಗೂ, ಎಳ್ಳಿನ್ನ ಹಿಂಡಿಗಳ ಲೇಪನಕೊಡುವುದು ಎಲ್ಲಾ ಗಿಡಗಳ ಕ್ಷಿಪ್ರ ಬೆಳವಣಿಗೆಗೆ ಉಪಯುಕ್ತವಾಗಿರುತ್ತದೆ (ಶ್ಲೋ. 159).

ಅಂಕೋಲ (ಅಲಾಂಜಿಯಮ್ ಹೆಕ್ಸಾಪೆಟಲಮ್) ಕಷಾಯ ಬೆರೆಸಿದ ತುಪ್ಪ ಮತ್ತು ಜೇನು ತುಪ್ಪಗಳನ್ನು ಬೆರಸಿ ಹಾಕಿ ಹಂದಿ, ಜಿಂಕೆಗಳ ಕೊಬ್ಬು ಹಾಗೂ, ಬಳಸಾಸುವೆಗಳಿಂದ ಪೋಷಿಸಿದಾಗ, ಮರಗಳು ಸದಾ ಫಲ, ಹೂ, ಹಣ್ಣುಗಳೊಡಗೂಡಿ, ವೃಥಪೋಷಿತವಾಗಿ ಷೇಡು ರೋಗಮುಕ್ತವಾಗಿರುತ್ತವೆ ಹಾಗೂ ದಟ್ಟವಾದ ನೆರಳು ಕೊಡುತ್ತವೆ (ಶ್ಲೋ. 160–161).

ಮಿತ್ರಚಕ್ರಪಾಣಿಯು 'ವಿಶ್ವವಲ್ಲಭ'ದ ಐದನೆಯ ಅಧ್ಯಾಯದಲ್ಲಿ ವಿವಿಧ ಗಿಡಗಳಿಗೆ ಗೊಬ್ಬರ ಹಾಕುವಿಕೆಯನ್ನು ಕುರಿತು ವಿವರಿಸಿದ್ದಾನೆ. ಅದರ ಕೆಲವು ಮುಖ್ಯ ಭಾಗಗಳ ಅನುವಾದವನ್ನಿಲ್ಲಿ ಕೊಟ್ಟಿದೆ :

ಬಿಜೂರ, ಬಿಲ್ವ, ಲಕುಚ, ಅಸನ, ಕೆಂಗಿದಾರ, ಅಕ್ಷೋಟ, ದಾಳಿ, ಮಾವು, ಮಧೂಕ, ಮತ್ತು ಚಂಪ ಈ ಎಲ್ಲ ವೃಕ್ಷಗಳೂ ... ಎಳ್ಳು ಮತ್ತು ಸಾಸುವೆ ಪುಡಿಯನ್ನು ಹಾಕಿ, ಎಣ್ಣೆ ಹಿಂಡಿಯನ್ನು ಕರಗಿಸಿ ಹಾಕಿದ ಬಳಿಕ ಅಕ್ಕಿಯ ತೊಳೆ(ಕಟ್ಟಿ)ಯ ನೀರೆರೆಯುವುದರಿಂದ ಚೆನ್ನಾಗಿ ಬೆಳೆಯುತ್ತವೆ (ಶ್ಲೋ. 11).

ಯಾವಾಗಲೂ ಬೆಲಸು ನೀರಿನ ಸಾರದಿಂದ ನೀರೆರೆಯುವುದು ಎಲ್ಲ ಮರಗಳಿಗೆ ಅದರಲ್ಲೂ ವಿಶೇಷವಾಗಿ ದಾಳಿಂಬೆ ಗಿಡ ಹೂ ಬಿಡುವುದಕ್ಕೆ ಒಳ್ಳೆಯದು. ಅದಕ್ಕೆ ಧೂಪ ಹಾಕುವುದರಿಂದಲೂ ಸದಾ ಕ್ಷಿಪ್ರದಲ್ಲಿ ದೊಡ್ಡ ಹಣ್ಣುಗಳನ್ನು ಬಿಡುವಂತಾಗುತ್ತದೆ (ಶ್ಲೋ. 12).

ಹಣ್ಣುಗಳು ಇನ್ನೂ ಮಾಗಿರದ ದಾಳಿಂಬೆ ವೃಕ್ಷಕ್ಕೆ ಬಿದಿರು, ತುಪ್ಪ, ಮತ್ತು ಅರಳಿಕಾಯಿತ್ರಯಗಳ ಲೇಪನ ಕೊಟ್ಟು ತುಪ್ಪ ಹಾಗೂ ಅರಳಿ ಕಾಯಿತ್ರಯಗಳ ಧೂಪ ಕೊಡುವುದರಿಂದ ತುಂಬಾ ದೊಡ್ಡ ಹಣ್ಣುಗಳನ್ನು ಬಿಡುತ್ತದೆ (ಶ್ಲೋ. 13).

ಕುಲತ್ಥ ಪುಡಿ ಅಥವಾ ಹತ್ತಿ ಬೀಜಗಳ ಪುಡಿಯು ಕಷಾಯದ ನೀರೆರೆದು ಮಣ್ಣಿನೊಡನೆ ಸೆಗಣಿ ಬೆರೆಸಿ ಬುಡಕ್ಕೆ ಹಾಕುವುದರಿಂದ ದಾಳಿಂಬೆ ವೃಕ್ಷಗಳ ಬೆಳವಣಿಗೆಗೆ ಅನುಕೂಲವಾಗುತ್ತದೆ (ಶ್ಲೋ. 14).

ರಸ(ಸಾರ) ಸಮೇತವಾಗಿ ಬೇಯಿಸಿದ ಮಾಂಸ ಬಲಿತ ಆಕಳಿಕಾಯಿ ವೃಕ್ಷದಲ್ಲಿ ಸದಾ ಹಣ್ಣುಗಳನ್ನು ಹೆಚ್ಚಿಸುತ್ತದೆಯೆಂದು ಹೇಳಲಾಗಿದೆ. ಜಂಬೀರದ ವೃಕ್ಷದ ಹಣ್ಣು ಯಾವಾಗಲೂ ಮಾಗಿದಾಗ ಸಿಹಿಯಾಗಿರುತ್ತದೆ (ಶ್ಲೋ. 15).

ಹಂದಿಗಳ ಮಲವನ್ನು ಬುಡಕ್ಕೆ ಹಾಕಿ, ಮೀನು ಮಾಂಸ ತೊಳೆದ ನೀರೆರೆಯುವುದರಿಂದ ದ್ರಾಕ್ಷಿಬಳ್ಳಿಯು ಕ್ಷಿಪ್ರದಲ್ಲಿ ಚೆನ್ನಾಗಿ ಬೆಳೆದು ಸಮೃದ್ಧವಾಗಿ ಹೂ ಹಣ್ಣುಗಳನ್ನು ಬಿಡುತ್ತದೆ (ಶ್ಲೋ. 16).

ಪ್ರಿಯಂಗು, ಬಿಳಿಸಾಸುವೆ, ವಚ, ಅರಿಶಿನ, ವಿಡಂಗ, ಗುಂಜ, ಎಳ್ಳು, ನಿಂಬೆ, ಕೃಷ್ಣ (ಪೈಪರ್ ಲಾಂಗಮ್) ಇವೆಲ್ಲವುಗಳನ್ನು ತುಪ್ಪ ಮತ್ತು ಅಶ್ವಕರ್ಣ (ವಟಿಕಾ ರೋಬುಸ್ಟಾ) ರಸದಲ್ಲಿ ಕಡೆಯು ಹಾಕುವುದರಿಂದ ಚಂಪಕ ಮತ್ತು ಕೇಸರ (ರಾಟ್ಲೇರಿಯಾ ಟಿಂಕ್ಟೋರಿಯಾ) ವೃಕ್ಷಗಳು ಬೆಳವಣಿಗೆಯನ್ನು ಹೆಚ್ಚಿಸುತ್ತವೆ (ಶ್ಲೋ. 17).

ಪನಸ (ಹಲಸು ?) ವೃಕ್ಷದ ಕಾಂಡದ ಮೇಲೆ ಪತಸ (?) ಜಲವನ್ನು ಚಿಮುಕಿಸಿ 'ವಚ' ಕಷಾಯದ ನೀರೆರೆಯುವುದರಿಂದ ವೃಕ್ಷವು ಚೆನ್ನಾಗಿ ಬೆಳೆದು ಕ್ಷಿಪ್ರದಲ್ಲಿ ರಸಭರಿತ ಹಣ್ಣುಗಳನ್ನು ಬಿಡುತ್ತದೆ (ಶ್ಲೋ. 18).

ಮಧೂಕ ವೃಕ್ಷಕ್ಕೆ ಕೊಸತಕಿ (ಟ್ರೈಕೋಸ್ಯಾಂತಸ್ ಡಯೋಕ) ಎಲೆಗಳ ಕಷಾಯ ಮತ್ತು ಮೀನಿನ ಮಾಂಸದೊಡನೆ ಬೆರಸಿದ ನೀರನ್ನು ಎರೆಯುವುದರಿಂದ ಅದು ಹೇರಳವಾಗಿ ಹೂವುಗಳನ್ನು ಬಿಡುತ್ತದೆ ಹಾಗೂ ಧೂಪಿಸುವುದರಿಂದ ಮನೋಹರವಾದ ಹಣ್ಣುಗಳನ್ನು (?) ಬಿಡುತ್ತದೆ (ಶ್ಲೋ. 19).

ಕಪಿತ್ಥ ಮತ್ತು ಬಿಲ್ವ ವೃಕ್ಷಗಳು ಮಧೂಕ ಪುಡಿಯನ್ನು ಹಾಲು ತುಪ್ಪ ಮತ್ತು ಜೇನು ತುಪ್ಪಗಳೊಡನೆ ಬೆರಸಿ ಆಗಾಗ್ಗ (?) ಬೇರಿನ ಸುತ್ತ ಹಾಕುವುದರಿಂದ ಓಟೆಯಿಲ್ಲದ ಸವಿಯಾದ ಹಣ್ಣುಗಳನ್ನು ಬಿಡುತ್ತವೆ (ಶ್ಲೋ. 20).

ವಿದಂಗ ಜಲ ಹಾಗೂ ಆಡು, ಕುರಿ ಮತ್ತು ಹಂದಿಗಳ ಮಲಗಳನ್ನು ಬೇರಿನ ಸುತ್ತ ಹಾಕಿ, ಮೂತ್ರ ಹಾಗೂ ಬಗ್ಗಡದ ನೀರೆರೆದು ಪೋಷಿಸುವುದರಿಂದ ಮಾದಳ ವೃಕ್ಷವು ವಿಪ್ರಲವಾಗಿ ಹಣ್ಣುಗಳನ್ನು ಬಿಡುತ್ತದೆ (ಶ್ಲೋ. 21).

ನೀರಿನಲ್ಲಿ ಜೇನುತುಪ್ಪ, ಅತಿ ಮಧುರದ ಬೇರು ಮತ್ತು ಎಳ್ಳುಗಳನ್ನು ಬೆರಸಿ ಹಾಕಿ ಪೋಷಿಸುವುದರಿಂದ ಬದರಿ ವೃಕ್ಷವು ಸಮೃದ್ಧವಾಗಿ ಹಣ್ಣುಗಳನ್ನು ಬಿಡುತ್ತದೆ. ಪಾಟಲ (ಬಿಗ್ನೋನಿಯಾ ಸವಿಯೊಲೆನ್ಸ್)ವು ಹತ್ತಿಗಿಡದ (ಬೀಜ?) ಹಾಗೂ ಮೀನು ಕಷಾಯದ ನೀರೆರೆಯುವುದರಿಂದ ಹೇರಳವಾಗಿ ಹೂವುಗಳನ್ನು ಬಿಡುತ್ತದೆ (ಶ್ಲೋ. 22).

ಎಳ್ಳು, ತುಪ್ಪ ಮತ್ತು ಮೀನು ಮಾಂಸದ ಕಷಾಯದಿಂದ ಉಪಚರಿಸಿ ನೀರೆರೆಯುವುದರಿಂದ ಸಿಘಾಟಿ (ವೈಟೆಕ್ಸ್ ನೆಗುಂಡೋ) ಮತ್ತು ಪಿಟಿಕ (ಅರಿಸಿನ ಅಥವಾ ಹಳದಿ ಮಲ್ಲಿಗೆ ಇಲ್ಲವೆ ಕೇಸರಿ)ಗಳು ಒಂದು ದಿನದಲ್ಲಿ ಹೂ ಬಿಡುತ್ತವೆ(ಶ್ಲೋ. 23).

ಮಸ, ಮಾಂಸ, ಜೆಲ್ಲಿ ಮತ್ತು ಹಾಲುಗಳ ಕಷಾಯದಿಂದ ನೀರೆರೆಯುವುದರಿಂದ ಕಿತ್ತಳೆ ಮರದಲ್ಲಿ ದೊಡ್ಡ ಹಾಗೂ ರಸಭರಿತಹಣ್ಣುಗಳು ಬಿಡುತ್ತವೆ (ಶ್ಲೋ. 24).

ಕರ್ಕಂಧು, ಮೆಂತೆ (ಟ್ರೈಗೊನೆಲ್ಲಾ ಫೋನಮ್ ಗ್ರೇಕಮ್), ಎಳ್ಳು, ಮಸ್ತು (ಮೊಸರಿನ ನೀರು), ರೋಧ್ರ (ಸಿಂಪ್ಲೊಕೋಸ್ ರೆಸಿಮೋಸ), ಧಮ್ಮಾರ(?) ಮತ್ತು ನಾಳ (ಕಮಲ ದಂಟು)ಗಳಿಂದ ಸಿದ್ಧಪಡಿಸಿದ ಸಾರನ್ನು ಎರೆದು ಪೋಷಣೆ ಮಾಡುವುದರಿಂದ ಪ್ರಿಯಂಗು, ಪುನ್ನಾಗ ಮತ್ತು ಕಮಾಜ ವೃಕ್ಷಗಳು ಹತ್ತುದಿನಗಳಲ್ಲಿ ಸುವಾಸನಾಭರಿತ ಪುಷ್ಪಗಳನ್ನು ಬಿಡುತ್ತವೆ (ಶ್ಲೋ. 25).

ಪನ್ನೇರಳೆ ಅಶೋಕ, ಧಾತ್ರಿ (ಮುಂಟಿಕ ಅಫಿನಲಿಸ್), ಕಮರಾಕ ಮತ್ತು ಲಕುಚ ವೃಕ್ಷಗಳು ಬರಡಾದಾಗ ಅವುಗಳ ಬೇರುಗಳಲ್ಲಿ ಗಾಯಮಾಡಿ ಜಂಬಾಪ (ಪ್ಲೈಕ್ಸ ಅಕ್ಯೂಂಟ್ರ)ದ ಕ್ಷೀರರಸ, ರೋಧ್ರ, ಜೇನುತುಪ್ಪ, ತುಪ್ಪ ಮತ್ತು ಎಳ್ಳುಗಳಿಂದ ಸಿದ್ಧಪಡಿಸಿದ ಕಣಕದ ಹಿಟ್ಟಿನಿಂದ ಲೇಪಿಸಿ ಹತ್ತುದಿನಗಳವರೆಗೆ ಜೇನುತುಪ್ಪ, ಹಾಲು ಮತ್ತು ನೀರುಗಳ ದ್ರಾವಣದಿಂದ ಆರೈಕೆ ಮಾಡಬೇಕು. ಹೀಗೆ ಮಾಡುವುದರಿಂದ ಜೇನಿನಷ್ಟು ಮಧುರವಾದ ಹಣ್ಣುಗಳನ್ನು ಬಿಡಲು ಪ್ರಾರಂಭಿಸುತ್ತವೆ (ಶ್ಲೋ. 26).

ಎಳ್ಳು, ಜೆಲ್ಲಿ ಮತ್ತು ಹಿಂಗ ಮಿಶ್ರಣದ ಗೊಬ್ಬರವನ್ನು ಬಕುಳ ವೃಕ್ಷದ ಬೇರಿಗೆ ಹಾಕಿ, ಬಳಿಕ ಮಧೂಕ ಪುಷ್ಪದ ಹುಡಿ ಹಾಗೂ ಪ್ಯಾದು ಹಣ್ಣುಗಳ ಮಿಶ್ರಣ ಹಾಕಿ ಅನಂತರ ಕೋಲದ ಬೇರಿನ ಕಷಾಯದ ನೀರೆರೆಯುವುದರಿಂದ ಹತ್ತು ದಿನಗಳಲ್ಲಿ ಅತ್ಯಂತ ಸುವಾಸನಾಭರಿತ ಹೂವುಗಳಿಂದ ತುಂಬಿ ಹೋಗುತ್ತದೆ (ಶ್ಲೋ. 27).

ನೇರಳೆ ವೃಕ್ಷದಲ್ಲಿ ವಸಂತದಲ್ಲಿ ಕೊಡಲಿಯಿಂದ ಕಚ್ಚು ಹಾಕುವುದು ಹೂ ಬಿಡುವುದಕ್ಕೆ ಉಪಯುಕ್ತ ಅಥವಾ ಅನುಕೂಲಕರವೆಂದು ಋಷಿಗಳು ಹೇಳುತ್ತಾರೆ (ಶ್ಲೋ. 28).

ಬಾಳೆಯ ಗಿಡಗಳಿಗೆ ಅಕ್ಕಿಯ ಬೂದಿ ಮತ್ತು ವನಗಳ ಸಗಣಿ ಉಪಯುಕ್ತ ಹಾಗೂ ತಾಳೆ ಜಾತಿ ವೃಕ್ಷಗಳಿಗೆ (ತೃಣ-ದ್ರು) ಹೊಟ್ಟಿನ ಬತ್ತವು ವಿಶೇಷವಾಗಿ ಉಪಯುಕ್ತವೆನ್ನಲಾಗಿದೆ (ಶ್ಲೋ. 29).

ತಂಪು ಮತ್ತು ಕೆಮ್ಮಣ್ಣು ಲೇಪನ ಹಾಗೂ ಅರಗು ದ್ರಾವಣದೊಡನೆ ಬೆರಸಿದ ನೀರನ್ನು ಲೇಪಿಸುವುದರಿಂದ ಅಶೋಕ ವೃಕ್ಷವು ಹರೆಯದ ಕನ್ಯೆಯ ಪಾದಾಘಾತದಿಂದ ಬಿಡುವಾಗಿನಷ್ಟೇ ಸಮೃದ್ಧವಾಗಿ ಹೂವುಗಳನ್ನು ಬಿಡುತ್ತದೆ (ಶ್ಲೋ. 30).

ಬಕುಳ (ಮಿಮೋಸಪ್ಸ್ ಎಲೆಂಗಿ) ವು ಸುಂದರ ಹೆಣ್ಣುಮಕ್ಕಳ ಬಾಯಿಯಲ್ಲಿ ದ್ರಾಕ್ಷಾಪಾನ ತುಂಬಿಟ್ಟುಕೊಂಡು ಉಗುಳಿದಾಗ ಹೂವುಗಳನ್ನು ಬಿಡುತ್ತದೆ; ತಿಲಕವು ಅವರ

ಆಲಿಂಗನದಿಂದಲೂ ಅಶೋಕವು ಪಾದತಾಡನದಿಂದಲೂ ಹೂ ಬಿಡುತ್ತದೆ (ಶ್ಲೋ. 31).

ಕೆಸರಿನಲ್ಲಿ ಬೆಳೆಯುತ್ತಿರುವ ಕಮಲದ ಬಳ್ಳಿಗೆ (ನೆಲುಂಬಿಯಮ್ ಸ್ಪೆಸಿಯೋಸಮ್) ಹಸ್ತಿದಂತದ ಪುಡಿ, ಕಲ್ಕ (ಹುಳಿಗಂಜಿ) ಮತ್ತು ಜೇನಿನ ಲೇಪನವನ್ನು ನಿತ್ಯವೂ ಕೊಟ್ಟರೆ ನಳನಳಿಸುವ ಕಮಲಗಳನ್ನು ಬಿಡುತ್ತದೆ (ಶ್ಲೋ. 32).

ಕೇತಕಿಗೆ ಬೇಸಗೆಯಲ್ಲಿ, ಸುಗಂಧಜಲ ಹಾಗೂ, ಹೊಲಸು ಸಾರಗಳ ನೀರೆರೆಯುವುದರಿಂದ ಮಳೆಗಾಲದ ಪ್ರಾರಂಭದಲ್ಲಿ ಸುಮಧುರ ವಾಸನೆಯ (ಸುಗಂಧ ದ್ರವ್ಯ) ಪುಷ್ಪಗಳಿಂದ ತುಂಬಿ ತುಳುಕುತ್ತದೆ (ಶ್ಲೋ. 33).

ಸರಿಯಾಗಿ ನೆಟ್ಟ ಪರ್ವತ ಪ್ರದೇಶಗಳ ಎಲ್ಲಾ ಬಗೆಯ ಬಳ್ಳಿಗಳು (ಅಥವಾ ಗಿಡಗಳು) ಹಸುವಿನ ತುಪ್ಪದಿಂದ ಧೂಪಿಸಿ ವರಾಹ ಕೊಬ್ಬು ಮತ್ತು ನೀರುಗಳಿಂದ ಪೋಷಿಸಿ ಪಾಲಿಸಿದಾಗ ಸಮೃದ್ಧವಾಗಿ ಹಣ್ಣುಗಳನ್ನು ಬಿಡುತ್ತವೆ (ಶ್ಲೋ. 34).

ಆಮ್ರಾಟಕ ವೃಕ್ಷದ ಪೊಟರೆಯಲ್ಲಿ ಬಿಡದ ಮಡಿಕೆಯ ಕುತ್ತಿಗೆ ಭಾಗವನ್ನು ಇರಿಸುವುದರಿಂದ ಅದು ಅಪಾಯದಿಂದ ರಕ್ಷಿತವಾಗಿರುತ್ತದೆ(ಸುಖ). ಹಾಗೆಯೇ ಇಡಿಯ(?) ಮಡಿಕೆಯನ್ನೇ ದಾಳಿಂಬೆ ವೃಕ್ಷದಲ್ಲಿರಿಸುವುದರಿಂದ ಹಣ್ಣುಗಳ ಬೆಳವಣಿಗೆ ಹೆಚ್ಚುವುದೆಂದು ಋಷಿಗಳ ಹೇಳಿಕೆ (ಶ್ಲೋ. 35).

ಫಿಲ್ಲೇಟು (ಸಿಂಫ್ಲೋಕಸ್ ರೆಸಿಮೋಸ)ದ ಬೇರು ಬಾರ್ಲಿ, ಹಾಲು, ವಿಡಂಗ, ವಣ್ಣೆ ರಿಗ್ಗಿ, ಆಂಟಿಪೈಸಟಿರಿಕ (ಇಂಥ-ಬೀಜ)ದ ಬೀಜಗಳನ್ನು ಮಿಶ್ರಣಮಾಡಿದ ನೀರಿನಿಂದ ಪೋಷಿಸುವುದು, ಬೂದಿ ಸಗಣಿ ಮತ್ತು ಗೋಡು ಬೆರಸಿ ಬೇರು ಮತ್ತು ಪಾತಿಗಳಿಗೆ ಹಾಕುವುದು ಮತ್ತು ಧೂಪಿಸುವಿಕೆಗಳು ಮರಗಳನ್ನು ರೋಗಮುಕ್ತಗೊಳಿಸಿ ಬೆಳವಣಿಗೆಯನ್ನು ಹೆಚ್ಚಿಸುವ ಕೆಲವು ವಿಧಾನಗಳಾಗಿವೆ (ಶ್ಲೋ. 36).

ಬಿಳಿಸಾಸುವೆ, ಬಾಳೆ ಎಲೆಗಳು, ಮೀನು ಮತ್ತು ಹಂದಿ ಮತ್ತು ಬೆಕ್ಕಿನ ಮಲಗಳನ್ನು ಸಮಪ್ರಮಾಣದಲ್ಲಿ ತೆಗೆದುಕೊಂಡು ತುಪ್ಪದೊಡನೆ ಬೆರಸಿ ಸಿದ್ಧಮಾಡಿದ ಕಣಕ (ಹಿಟ್ಟು) ವೃಕ್ಷಗಳಿಗೆ ಉಪಯುಕ್ತವಾಗಿರುತ್ತದೆ. ಧೂಪನ ಹಾಗೂ ಲೇಪನಗಳಿಂದ ಕೊಟ್ಟ ಪೋಷಣೆಯಿಂದ ಅವುಗಳನ್ನು ರೋಗ ಮುಕ್ತಗೊಳಿಸುತ್ತವೆ. ತತ್ಫಲವಾಗಿ ರೆಂಬೆಗಳು, ಕಾಂಡ ಮತ್ತು ತೊಗಟೆಗಳು ಮನೋಹರವಾಗಿ ಪರಿಣಮಿಸಿ, ಎಲೆಗಳು ಮತ್ತು ಹೂವುಗಳು ಉಲ್ಲಾಸದಿಂದ ತೂಗುತ್ತವೆ (ಶ್ಲೋ. 37).

ವಿಡಂಗ, ಜೇನುತುಪ್ಪ ಮತ್ತು ಎಳ್ಳುಗಳ ಲೇಪನ, ತುಪ್ಪದಿಂದ ಧೂಪನ, ಪಾತಿಯನ್ನು ಗೋಡು ಮಣ್ಣಿನಿಂದ ತುಂಬಿಸುವಿಕೆ ಮತ್ತು ಬಾರ್ಲಿ, ಹಾಲು, ನೀರು ಹಾಗೂ

ಹೊಲಸು(?)ಗಳಿಂದ ಪೋಷಿಸುವುದು ಇವು ಎಲೆಯ ಗಿಡಗಳ ಬೆಳವಣಿಗೆಗೆ ಅನುಕೂಲವಾಗುತ್ತವೆ (ಶ್ಲೋ. 38).

ಮುಳ್ಳುಸೇಬು (ಡಟೂರ ಮೆಟೆಲ), ವಟಿ (ರಿಸಿನಸ್ ಕಮ್ಯುನಿಸ್) ಮತ್ತು ಮಸ್ಕಿರಗಳನ್ನು ಸಿಂಧೂವರ, ಎಳ್ಳು, ಮತ್ತು ಮಸ ಹಾಗೂ ಬಾರ್ಲಿ, ತುಪ್ಪ, ಜೇನು ಮತ್ತು ಹಾಲುಗಳ ಕಣಕದ ಲೇಪನಕೊಟ್ಟು ಇದೇ ಮಿಶ್ರಣವನ್ನೇ ನೀರಿನಲ್ಲಿ ಬೆರಸಿ ಕರಗಿಸಿ ಎರೆದು ಪೋಷಿಸಬಹುದು (ಶ್ಲೋ. 39).

ಒಣಶುಂಠಿ, ತುಪ್ಪ, ಜೇನು, ಬಿಡಂಗ ಮತ್ತು ಕುಷ್ಠಗಳ ಲೇಪನ ಹಾಗೂ ಕ್ರಿಮಿರೇಚಕಗಳ ... (?) ಧೂಪನ ಮತ್ತು ನೀರು ಅಥವಾ ಹೊಲಸು ಸಾರಗಳನ್ನೆರೆದು ಪೋಷಿಸುವಿಕೆಯು ವಿಶೇಷವಾಗಿ ಅಂಜೂರ ವೃಕ್ಷಕ್ಕೆ (ಕ್ಷೀರ–ತರು) ಒಳ್ಳೆಯದು (ಶ್ಲೋ. 40).

ಗೋದು ಮಣ್ಣು ಹಾಕಿದ, ಆಡಿನ ಮೂತ್ರದಿಂದ ಬೇರುಗಳಿಗೆ ನೀರೆರೆದು ಧೂಪಿಸಿ, ನೀರು ಚಿಮುಕಿಸಲಾದ ವೃಕ್ಷಗಳು ಚೆನ್ನಾಗಿ ಬೆಳೆಯುತ್ತವೆ (ಶ್ಲೋ. 41).

ಗಿಡಗಳಿಗೆ ಹಂದಿ ಮತ್ತು ಜಿಂಕೆಗಳ ಕೊಬ್ಬು ಹಾಗೂ ತುಪ್ಪ ಮತ್ತು ಜೇನು ಬೆರಸಿದ ಕೋಳಿ (ಜುಂಜುಟೆ ಅಥವಾ ಹಂದಿ ಮಾಂಸ)ಗಳ ಕಷಾಯದ ನೀರೆರೆದು ಪೋಷಿಸಿದ್ದರೆ ಅವು ಚೆನ್ನಾಗಿ ಬೆಳೆದು ರೋಗಮುಕ್ತವಾಗುತ್ತವೆ (ಶ್ಲೋ. 42).

ಅಧ್ಯಾಯ 5

ಬೆಳೆಗಳ ಬೇಸಾಯ

ಪ್ರಾಚೀನ ಕಾಲದಿಂದಲೂ ಅಕ್ಕಿ, ಗೋಧಿ, ಮತ್ತು ತೃಣಧಾನ್ಯಗಳು ಭಾರತದ ಬಹುತೇಕ ಜನತೆಯ ಮುಖ್ಯ ಆಹಾರ ಪದಾರ್ಥಗಳಾಗಿವೆ. ಇವುಗಳ ಜೊತೆಗೆ ಅನೇಕ ಇತರ, ಅಂದರೆ ಕಬ್ಬು, ಬಾರ್ಲಿ, ಮಾವು, ಸೆಣಬು, ಶುಂಠಿ, ಅರಿಶಿನ, ಕುಂಬಳ, ತಿರುಳ್ಳಾಯಿ, ಸೌತೆಕಾಯಿ, ಮೆಣಸು, ಟರ್ನಿಪ್, ಎಳ್ಳು, ಸಾಸಿವೆ, ಎಲೆಕೋಸು, ಆಲೂಗೆಡ್ಡೆ, ಮೂಲಂಗಿ, ಬಟಾಣಿ ಕಲಾಯ್ (ದ್ವಿದಳಕಾಳು) ಮುಂತಾದ ಆರ್ಥಿಕ ಪ್ರಾಮುಖ್ಯತೆಯುಳ್ಳ ಇತರ ಬೆಳೆಗಳು ಮತ್ತು ಅವುಗಳ ಬಳಕೆಯನ್ನು ಕುರಿತು ಪ್ರಾಚೀನ ಸಾಹಿತ್ಯದಲ್ಲಿ ವಿಫುಲವಾಗಿ ಆಧಾರಗಳು ದೊರೆಯುತ್ತವೆ.

ಆಧುನಿಕ ತಳಿ ಶಾಸ್ತ್ರದೃಷ್ಟಿಯಿಂದ ಒಂದು ನಿರ್ದಿಷ್ಟ ಬೆಳೆಯ ವಿವಿಧ ತಳಿಗಳು ಅಥವಾ ವಿಭೇದಗಳನ್ನು ತಳೀಕರಣದಿಂದಾಗಲಿ ಇಲ್ಲವೇ ಒಂದು ನಿರ್ದಿಷ್ಟ ಬಗೆಯ ಮಣ್ಣು ಮತ್ತು ಹವಾಮಾನ ಪರಿಸ್ಥಿತಿಗಳಿಗೆ ಹೊಂದುವಂತೆ ಆಯ್ಕೆ ಮಾಡುವುದರಿಂದಾಗಲೀ ಬೆಳೆಸಬೇಕಾಗುತ್ತದೆ. ಭಾರತದಲ್ಲಿ ಕಂಡುಬರುವ ಮಣ್ಣು ಮತ್ತು ಹವಾಮಾನಗಳ ವೈವಿಧ್ಯತೆಗಳನ್ನು ಪರಿಗಣಿಸಿದಾಗ ಒಂದು ಬೆಳೆಯಲ್ಲಿ ಅನೇಕ ತಳಿಗಳನ್ನು ಪಡೆಯಬಹುದೆಂದು ನಿರೀಕ್ಷಿಸಬಹುದು. ಅಕ್ಕಿಯೊಂದನ್ನೇ ಉದಾಹರಣೆಯಾಗಿ ತೆಗೆದುಕೊಂಡಾಗ ಪ್ರಾಚೀನ ಸಾಹಿತ್ಯದಲ್ಲಿ ಅಸಂಖ್ಯಾತ ಬಗೆಯ ಬತ್ತದ ತಳಿಗಳು ಇರುವುದು ಕಂಡು ಆಶ್ಚರ್ಯವಾಗುತ್ತದೆ. ಭಾರತೀಯ ವಸ್ತು ಸಂಗ್ರಹಾಲಯದಲ್ಲಿ ಸುಮಾರು 5000 (ಐದು ಸಾವಿರ) ಬಗೆಯವನ್ನು ಸಂಗ್ರಹಿಸಲಾಗಿದೆ. ಇದನ್ನು ಕುರಿತು 'ಸರ್ ಜಾರ್ಜ್‌ವ್ಯಾಟ್' ರವರು "ಪ್ರಾಯಶ ಇವೆಲ್ಲವೂ ಬೇರೆ ಬೇರೆ, ಬಗೆಯವೇ ಇರಲಾರವು, ಆದಾಗ್ಯೂ ಇವುಗಳಲ್ಲಿ ಅರ್ಧದಷ್ಟು ಸಂಖ್ಯೆಯನ್ನು ತೆಗೆದುಕೊಂಡಾಗಲೂ ಸಹ ಅದು ಕೃಷಿಯ ಸುದೀರ್ಘ ಪ್ರಾಚೀನತೆಯ ಸಾಕಷ್ಟು ಗಣನೀಯ ಅಂಶವಾಗಿದೆ" ಎಂದು ತಿಳಿಸಿದ್ದಾರೆ.

ಬತ್ತವನ್ನು ವರ್ಷವಿಡೀ ಬೆಳೆಯಲಾಗುತ್ತಿತ್ತು ಮತ್ತು ಕೊಯ್ಲು ಕಾಲವನ್ನು ಆಧರಿಸಿ ಅವುಗಳನ್ನು ನಾಲ್ಕು ಪ್ರಮುಖ ಗುಂಪುಗಳಾಗಿ ವಿಂಗಡಿಸಲಾಗಿತ್ತು. ಅವು ಗ್ರೀಷ್ಮಕ (ಬೇಸಿಗೆಯದು), ವಾರ್ಷಿಕ (ಮಳೆಗಾಲದ್ದು), ಶರದ (ಮಾಗಿಕಾಲದ್ದು) ಹಾಗೂ ಹೇಮಂತ (ಚಳಿಗಾಲದ್ದು)ಗಳಾಗಿವೆ.

ಪ್ರಾಚೀನ ಆಯುರ್ವೇದ ಕೃತಿಕಾರರು ಹಾಗೂ ಕೌಟಿಲ್ಯ ಮುಂತಾದವರುಗಳು ಶರತ್‌ಕಾಲದ ವರ್ಗವನ್ನು ಸ್ಪಷ್ಟವಾಗಿ ಬಿಂಗಡಿಸಿ ಹೇಳಿಲ್ಲ. ಪ್ರಾಯಶಃ ಅವರುಗಳೆಲ್ಲ ಉತ್ತರ ಭಾರತ ನಿವಾಸಿಗಳಾಗಿದ್ದುದೇ ಇದಕ್ಕೆ ಕಾರಣವಿರಬಹುದು. ಅಲ್ಲಿ ಶೀತಪ್ರಿಯ (ಅಪ್ರಾಕೆ ಬೇಕಿರುವ) ಬತ್ತದ ಬೆಳೆಗೆ ಪರಿಸ್ಥಿತಿಗಳು ಅನುಕೂಲಕರವಾಗಿರುವುದಿಲ್ಲ. ಅವರುಗಳು ಈ ಮುಂದೆ ತಿಳಿಸುವ ವರ್ಗಗಳನ್ನು ಗುರುತಿಸಿದ್ದಾರೆ. ಅವು: ಬೇಸಿಗೆಯಲ್ಲಿ 60 ದಿವಸಗಳಲ್ಲಿ ಮಾಗುವ 'ಷಷ್ಟಿಕ', ಮಳೆಗಾಲದ ವ್ರೀಹಿ ಮತ್ತು ಚಳಿಗಾಲದ 'ಶಾಲಿ'. ಕೆಲವರು ಇದರಲ್ಲಿ ಮೊದಲೆರಡು ವರ್ಗವನ್ನು ಒಂದೇ ಎಂದು ಪರಿಗಣಿಸಿದ್ದಾರೆ. ಏಕೆಂದರೆ ಇಲ್ಲಿ ಒಂದೇ ಬಿತ್ತನೆಯು ಎರಡೂ ಬೆಳೆಗಳಿಗೂ ಉಪಯುಕ್ತವಾಗುತ್ತದೆ. ಆದರೆ ವೇದಸಾಹಿತ್ಯದಲ್ಲಿ ಹೇಳಲಾದ ವ್ರೀಹಿಯನ್ನು ಮಾತ್ರ ಬೇಸಗೆಯ ಬತ್ತವೆಂದು ಹೇಳಬಹುದು. ಪೂರ್ವ ಮತ್ತು ಪಶ್ಚಿಮ ಪಂಜಾಬಿನ ಹವಾಮಾನ ಪರಿಸ್ಥಿತಿಗಳು ಬಹಳಷ್ಟು ವ್ಯತ್ಯಾಸವಾಗುತ್ತವೆ. ವೇದಕಾಲದ ಆರ್ಯರು ಈ 'ಸಪ್ತ ಸಿಂಧೂ ಭೂಮಿ' (ಸಪ್ತಸಿಂಧು)ಯನ್ನು ನಿವಾಸಸ್ಥಾನವಾಗಿ ಆಕ್ರಮಿಸಿದಾಗ ಬತ್ತವು ಅಲ್ಲಿಯ ಮುಖ್ಯ ಬೆಳೆಯಾಯಿತು. ಇದಕ್ಕೆ ಕಾರಣ ಅಲ್ಲಿ ಆಗಾಗ ಪ್ರವಾಹ ಉಕ್ಕಿ ನೀರಾವರಿಗೆ ಸಾಧ್ಯತೆಗಳಿದ್ದುದೇ ಆಗಿದೆ. ಬೇಸಾಯ ಮಾಡುತ್ತಿದ್ದ ವರ್ಗವೆಂದರೆ ವ್ರೀಹಿ ಆಗಿತ್ತು, ಕೆಲವು ಭಾಗಗಳಲ್ಲಿ ಷಷ್ಟಿಕ ಸಹ ಬೆಳೆಯಲಾಗುತ್ತಿತ್ತು. ಮೂಲ ಕಾಡು ತಳಿಯನ್ನು ನಿವಾರ ವೆಂದು ಕರೆಯುತ್ತಿದ್ದರು. ವಂಗ ಭಾಷೆಯಲ್ಲಿ ಇದನ್ನು 'ಉರಿಧನ್' ಎಂದು ಕರೆಯುತ್ತಿದ್ದರು. ಇದು ಆಗಾಗ್ಗೆ ಕೀಟ ಬಾಧೆಗಳಿಗೊಳಪಟ್ಟು ನಾಶವಾಗುವ ಕೃಷಿ ಉತ್ಪನ್ನವಲ್ಲದ್ದರಿಂದ ಕಟು ವಿಮರ್ಶಕರು, ಪರಿಶುದ್ಧ ಬಗೆಯದೆಂದು ಪರಿಗಣಿಸಿದ್ದರು. ಅಲ್ಲದೆ ಭಾರತದಲ್ಲಿ ಕಂಡುಬರುವ ಸಾಗುವಳಿ ತಳಿಗಳಿಗಿಂತ ಈ ಕಾಡು ತಳಿಯಲ್ಲಿ ಹೆಚ್ಚು ಸಸಾರಜನಕವಿರುತ್ತದೆಂಬುದು ಇಲ್ಲಿ ಗಮನಾರ್ಹ.

ಕಶ್ಯಪರು ತಮ್ಮ ಕೃತಿಯಲ್ಲಿ ಕೆಲವು ಅತಿ ಮುಖ್ಯ ಬೆಳೆಯ ಬೇಸಾಯ ಪದ್ಧತಿಗಳನ್ನು ಕುರಿತು ವಿವರಿಸಿದ್ದಾರೆ. ಆ ಪುಸ್ತಕದಿಂದ ಸಂಬಂಧಪಟ್ಟ ಭಾಗಗಳ ಅನುವಾದವನ್ನು ಕೆಳಗೆ ಕೊಟ್ಟಿದೆ:

ವಿಶ್ವದ ಎಲ್ಲೆಡೆಯಲ್ಲೂ ಕೃಷಿ ಪರಿಣತಮತಿಗಳು, ಎತ್ತುಗಳು, ದನಗಳು, ಎಮ್ಮೆಗಳು, ಸೇವಕರು ಮತ್ತು ತಮ್ಮ ತಮ್ಮ ಕಾರ್ಯ ಚಟುವಟಿಕೆಗಳನ್ನರಿತ ಕೂಲಿಯಾಳುಗಳಿಗೆಲ್ಲಾ ಮೊದಲು ಊಟಬಡಿಸಿ ಅನಂತರ ಆಯಾ ಭೂಮಿಯ ಅವಶ್ಯಕತೆಗಳಿಗೆ ಹೊಂದುವಂತೆ ವಿವಿಧ ಬೇಸಾಯ ಪದ್ಧತಿಗಳನ್ನನುಸರಿಸಿ ಭೂಮಿಯಲ್ಲಿ ಬಿತ್ತನೆ ಮಾಡಿದ ಕಾಳುಗಳ ಬೆಳವಣಿಗೆಗೆ ಗಮನ ಹರಿಸಬೇಕು. ಮೊದಲು ಬಿತ್ತನೆಗೆ ಸರಿಯಾದ ಸಮಯ ಯಾವುದೆಂಬುದನ್ನು ಕಂಡುಕೊಳ್ಳಬೇಕು. ಕಾಶ್ಮೀರ ವಂಗ (ಬಂಗಾಳ), ನೇಪಾಳ, ಪಾಂಚಾಲ, ಕೋಸಲ (ಓಢ್) ಕುರು, (ಡೆಲ್ಲಿಯ ಸಮೀಪದಲ್ಲಿದೆ), ವಿರಾಟ, ಅವಂತೀ (ಉಜ್ಜಯಿನಿ), ಮಾಳವ (ಮಧ್ಯಭಾರತ), ಶಾಕ್ಯ-ದೇಶ, ಸಿಂಧು-ಸನ್‌ವೀರ

(ಸಿಂಧ್ ಮತ್ತು ಸಿಂಧೂ ನದಿಯ ಸೆರೆಯ (ಪ್ರದೇಶಗಳು), ಸೂರಸೇನ (ಮಥುರಾ), ಚೇದಿ (ಬುಂದೇಲ್‌ಖಂಡ), ಕೊಂಕಣ ಮತ್ತು ಆಂಧ್ರಪ್ರದೇಶಗಳಲ್ಲಿ ಮಳೆಗಾಲದಲ್ಲಿ ಮಾತ್ರ ಬೇಸಾಯ ಮಾಡಬೇಕೆಂದು ಸೂಚಿಸಲಾಗಿದೆ (ಶ್ಲೋ. 299-303).

ನದೀಮಾತೃಕ ಪ್ರದೇಶಗಳಲ್ಲಿ (ನದೀ ಕಾಲುವೆ ಮೂಲಕ ನೀರು ಸೌಲಭ್ಯವಿರುವೆಡೆಗಳಲ್ಲಿ) ಬೇಸಗೆಯಲ್ಲಿ ಕಾಲುವೆ ನೀರನ್ನು ನೀರಾವರಿಗೆ ಬಿಡುಗಡೆಮಾಡಿದಾಗ ಬೇಸಾಯ ಪ್ರಾರಂಭಿಸಬೇಕು. ಹಾಗೆಯೇ ದೊಡ್ಡ ದೊಡ್ಡ ಜಲಾಶಯಗಳಿಗೆ ಸಂಪರ್ಕಿಸಿದ ನೀರ್ಗೊಳವೆ (ಅಡಿಗಾಲುವೆ)ಗಳ ಮೂಲಕ ನೀರಾವರಿ ಸೌಲಭ್ಯವುಳ್ಳ ಎಲ್ಲ ಪ್ರದೇಶಗಳಲ್ಲಿಯೂ ಸಹ ಬೇಸಾಯ ಮಾಡಬಹುದು (ಶ್ಲೋ. 304–305).

ವಿವೇಕಶಾಲಿ ರೈತ(ಬೇಸಾಯಗಾರ)ನು ಸರಿಯಾದ ರೀತಿಯಲ್ಲಿ ಬೇಸಾಯ ಪ್ರಾರಂಭಿಸಬೇಕು. ಆದರೆ ಮಣ್ಣಿನ ಫಲವತ್ತತೆಯನ್ನು ಗಮನದಲ್ಲಿರಿಸಿಕೊಂಡು ಹಾಗೂ ಮಳೆ ಇಲ್ಲವೇ ದೊಡ್ಡ ಜಲಾಶಯ ಅಥವಾ ನಾಲೆಯ ಮೂಲಕ ಬೇಕಾದ ಅವಶ್ಯ ನೀರು ಪೂರೈಕೆಯನ್ನು ಕುರಿತು ಖಾತ್ರಿಪಡಿಸಿಕೊಂಡ ಬಳಿಕ ಬೇಸಾಯಕ್ಕೆ ಕೈಯಿಡಬೇಕು (ಶ್ಲೋ. 306).

ಭೂಮಿಯಲ್ಲಿ ನದೀ ದಡಗಳ ಮೇಲೆ, ಹಳ್ಳಗಳ, ಕಾಡುಪ್ರದೇಶಗಳ, ಪರ್ವತದ ಇಳಿಜಾರುಗಳ ಹಾಗೂ ಎತ್ತರದ ಮತ್ತು ತಗ್ಗು ಮೈದಾನ ಪ್ರದೇಶಗಳಲ್ಲಿಯ ಜಮೀನುಗಳನ್ನು ಅವುಗಳ ಮೂಲ ಸ್ವಭಾವಕ್ಕನುಗುಣವಾಗಿ ಎರಡು ವಿಧವಾಗಿ ವಿಂಗಡಿಸಲಾಗಿದೆ (ಶ್ಲೋ. 307).

ಇವುಗಳಲ್ಲಿ ಮೊದಲನೆಯದು 'ಸಾಲಿಭೂಮಿ' (ಬತ್ತದ ಜಮೀನು), ಇದನ್ನು ಅತ್ಯುತ್ತಮ ಜಮೀನೆಂದು ಋಷಿಗಳು ಸಾರಿದ್ದಾರೆ. ಎರಡನೆಯದೇ 'ಅಧಕ ಭೂಮಿ', ಇದು ಮಧ್ಯಮ ಗುಣಮಟ್ಟವಾಗಿದ್ದರೂ ಒಳ್ಳೆಯ ಬೆಳೆ ಕೊಡುತ್ತದೆ (ಶ್ಲೋ. 308).

ಬತ್ತದ ಜಮೀನು ಸತತವಾಗಿ ನೀರಿನಿಂದ ತುಂಬಿದ್ದು ಜೌಗು ಹಾಗೂ ಮೃದು ಜೇಡಿಯಿಂದ ಕೂಡಿರುತ್ತದೆ. ಅದಕ್ಕೆ ಕಿರುನಾಳಗಳ ಬಲೆ ಹಾಗೂ ಸಣ್ಣ ನಾಲೆಗಳ ಮೂಲಕ ನೀರಾವರಿ ಮಾಡಲಾಗುತ್ತದೆ: ರಕ್ಷಣೆಗಾಗಿ ಸುತ್ತಲೂ ಮಣ್ಣಿನ ಒಡ್ಡು (ಬದು) ಗಳಿಂದ ಆವೃತವಾಗಿರುತ್ತದೆ (ಶ್ಲೋ. 309).

ಬತ್ತದ ಜಮೀನಿನ ಸ್ಥಾನವನ್ನು ಅದು ಪಾಳುಭೂಮಿ, ಗ್ರಾಮನಿವಾಸ ಅಥವಾ ಇತರ ಬಗೆಯ ಜಮೀನುಗಳಿಗೆ ಇರುವ ಸಾಮೀಪ್ಯತೆಯಿಂದ ನಿರ್ಧರಿಸಲಾಗುತ್ತದೆ (ಶ್ಲೋ. 310).

ನೀರು ಹರಿಯುವ (ತನ್ನ ಮೂಲದಿಂದ) ನಾಲೆಯ ಇಳಿಜಾರು ಪೂರ್ವ, ಪಶ್ಚಿಮ, ಉತ್ತರ ಇಲ್ಲವೇ ದಕ್ಷಿಣಗಳಲ್ಲಿ ಎತ್ತಲೋ ಒಂದೆಡೆ ಇರುತ್ತದೆ. ಕೆಲವೆಡೆ ಅದು ಬಹುತೇಕ ಸಮಮಟ್ಟದ ಪಾತ್ರವನ್ನು ಹೊಂದಿರುತ್ತದೆ; ಮತ್ತೆ ಕೆಲವೆಡೆ ಹರಿಯುವ ನೀರನ್ನು ಒಂದು ಜಮೀನಿನಿಂದ ಮತ್ತೊಂದು ಜಮೀನಿಗೆ ಹಾಯಿಸುವುದೂ ಸಾಧ್ಯವಿರುತ್ತದೆ. ಇವುಗಳಿಗನುಗುಣವಾಗಿ ಬಿತ್ತದ ಜಮೀನಿನ ಸ್ಥಾನವನ್ನು ನಿರ್ಧರಿಸಲಾಗುತ್ತದೆ (ಶ್ಲೋ. 311–312).

ಬಿತ್ತದ ಜಮೀನನ್ನು ಮೊದಲ ಬಾರಿ ಉಳುಮೆಮಾಡಿದ ಪ್ರಾರಂಭದಿಂದ ಹಿಡಿದು ಬಿತ್ತಿದ್ದು ಮೊಳೆಯುವವರೆಗೆ ಜಮೀನಿನಲ್ಲಿ ನೀರು ತುಂಬಿದ್ದಾದರೆ ಸಮೃದ್ಧವಾದ ಕೊಯ್ಲಾಗುತ್ತದೆ (ಶ್ಲೋ. 313)

ಗ್ರಾಮನಿವಾಸ ಅಥವಾ ಕಾಡು ಪ್ರದೇಶದ ಅಂಚಿನಲ್ಲಿ ಹಾಗೂ ನದೀ ಸಮೀಪದ ಕೆಲವೆಡೆ ಸಾಗುವಳಿ ಮಾಡಿದ ಭೂಮಿಯು 'ಅಧಕ' ಎಂಬ ಹೆಸರಿನ ಬಗೆಯದಾಗಿರುತ್ತದೆ. ಇದಕ್ಕೆ ಹೇರಳವಾಗಿ ನೀರಾವರಿ ಮಾಡಿದರೆ ಸಾಕು. ಇದು ಕಡಲೆ ಬೆಳೆಯ ಸಮೃದ್ಧ ಬೆಳವಣಿಗೆಯುಕ್ತವಾಗಿರುತ್ತದೆ. ಇಂಥಲ್ಲಿ ನಾಲೆಗಳು ಅಥವಾ ಇನ್ನಿತರ ವಿಧಾನದಿಂದ ನೀರಾವರಿಮಾಡುವ ಆವಶ್ಯಕತೆಯಿರುವುದಿಲ್ಲ. ಸ್ವಲ್ಪವೇ ನೀರಿನ ಪೂರೈಕೆಯಿಂದ ಅದು ಸಾಮಾನ್ಯವಾಗಿ ಬೇಸಾಯಯೋಗ್ಯವಾಗುತ್ತದೆ. ಆದ ಕಾರಣ ಅಲ್ಲಿ ಬಿತ್ತನೆ ಮಾಡುವಾಗ (ತುಸು ಮಾತ್ರ) ನೀರು ಹಾಯಿಸಬೇಕು. ಇಂಥ ಭೂಮಿಯಲ್ಲಿ ಸಕಾಲದಲ್ಲಿ ನೀರೆರೆಯುವುದರಿಂದ ಬಿತ್ತನೆಗೆ ಜೀವದಾನ (ಎಂದರೆ ಬೀಜಗಳು ಮೊಳೆಯುವುದಕ್ಕೆ ನೆರವಾಗುತ್ತದೆ) ವಾಗುತ್ತದೆ. ಹೀಗೆ ಅಧಕ ಭೂಮಿಯು ಮೇಲೆ ಹೇಳಿದ ಗುಣಲಕ್ಷಣಗಳನ್ನು ಹೊಂದಿರುತ್ತದೆ (ಶ್ಲೋ. 314–317).

ರೈತರು ಕ್ರಮವಾಗಿ 'ಸಾಲಿ' ಮತ್ತು ಅಧಕ ಜಮೀನುಗಳಲ್ಲಿಯೂ ಬಿತ್ತನೆಗೆ ಯೋಗ್ಯವಾದ ವಿವಿಧ ಬಗೆಯ ಬೀಜಗಳನ್ನು ಸಂಗ್ರಹಿಸಬೇಕು (ಶ್ಲೋ. 318).

ಬಿತ್ತನೆ ಬೀಜಗಳ ಸಂಗ್ರಹಣೆ

ಕಶ್ಯಪರು ಈ ಕೆಳಗಿನಂತೆ ಬೀಜ ಸಂಗ್ರಹಣೆಯ ವಿಧಾನಗಳನ್ನು ತಿಳಿಸಿದ್ದಾರೆ:

ಪ್ರಾರಂಭದಲ್ಲಿ (ಸೃಷ್ಟಿಯ ಆದಿ) ಮನುಕುಲದ ಮೂಲ ಪುರುಷನನ್ನು ಭೂದೇವಿಯು ಕೋರಲಾಗಿ ಆತ ವಿವಿಧ ಬಗೆಯ ಬೀಜಗಳನ್ನು ಸೃಷ್ಟಿಸಿ ಬಳಿಕ ಆ ಬಗ್ಗೆ (ಅದರ ಉಪಯುಕ್ತತೆ ಕುರಿತು) ವಿವರಿಸ ತೊಡಗಿದ (ಶ್ಲೋ. 319).

ಆತನ ಉದ್ದೇಶವನ್ನು ಮುಂಗಂಡು ಭೂದೇವಿಯು ಹರ್ಷದಿಂದ ಆತನಿಗೆ, 'ಜೀವಿಗಳ ಸಂತೋಷಕ್ಕಾಗಿ ನಿನ್ನಿಂದ ಸೃಷ್ಟಿಗೊಂಡ ಈ ಬಗೆಯ ಬೀಜಗಳನ್ನು ನನ್ನಲ್ಲಿ

ಎಚ್ಚರದಿಂದ ಬಿತ್ತಿದಾಗ ಶೀಘ್ರವಾಗಿ ಕುಡಿಯೊಡೆಯುವುದು ನಿಸ್ಸಂದೇಹ ಎಂದು ತಿಳಿಸಿವೆ (ಶ್ಲೋ. 320-321).

ದೇವತೆಗಳ ಅದರಲ್ಲೂ ವಿಶೇಷವಾಗಿ ಇಂದ್ರನ ಕೃಪೆ ಹಾಗೂ ಶಕ್ತಿಗಳಿಂದ ಪ್ರತಿ ವರ್ಷವೂ ಸಕಾಲದಲ್ಲಿ ಮಳೆಯಾಗುತ್ತದೆ (ಶ್ಲೋ. 322).

ಭೂಮಿಯ ಮೇಲೆ ಎಲ್ಲ ದೇಶಗಳ ಎಲ್ಲೆಡೆಯಲ್ಲಿಯೂ ಸಕಾಲದಲ್ಲಿ ಮಳೆಯಾದಾಗ ಸಾಮಾನ್ಯ ಜನತೆ ಮತ್ತು ಬೇಸಾಯಗಾರರು ಚೆನ್ನಾಗಿ ಬೆಳೆಗೆ ಹೊಂದಿ ಸಂತಸಚಿತ್ತರಾಗುತ್ತಾರೆ. ಅವರು ತಮ್ಮ ಫಲವತ್ತಾದ ಜಮೀನುಗಳಲ್ಲಿ ಬೀಜಗಳನ್ನು ಬಿತ್ತಿ ಹುಲುಸಾದ ಬೆಳೆಕೊಯ್ಲುಮಾಡುತ್ತಾರೆ (ಶ್ಲೋ. 323-324).

ದೇವತೆಗಳು ಅಪರಿಮಿತ ಆನಂದ ಪಡೆಯುತ್ತಾರೆ. ಯಜ್ಞಯಾಗಾದಿಗಳು ಹೆಚ್ಚುತ್ತವೆ. ಜನತೆಯೂ ಅವರ ಅತಿಥಿಗಳೂ ಯಥೇಚ್ಛ ಆಹಾರದಿಂದ ಸಂತೃಪ್ತರಾಗುತ್ತಾರೆ. ಹಾಗೆಯೇ ದನಕರುಗಳೂ ಸಹ ಸಕಾಲದಲ್ಲಿ ಮೇವು ನೀರು ಪಡೆದು ತೃಪ್ತಿಗೊಳ್ಳುತ್ತವೆ. ಭೂತಯಜ್ಞಗಳೂ ಸಹ ಯಶಸ್ವಿಯಾಗಿ ಜರುಗುತ್ತವೆ (ಶ್ಲೋ. 325).

ಹೀಗೆ ಭೂದೇವಿ ನುಡಿಯಲು ಕಮಲಾಸನನು (ಬ್ರಹ್ಮ) 'ತಥಾಸ್ತು' ಎಂದನು. ಇದು ಎಲ್ಲ ಜೀವಿಗಳ ಕಲ್ಯಾಣ ದೃಷ್ಟಿಯಿಂದ ನುಡಿದ ಮಾತು (ಶ್ಲೋ. 326).

ಅಂದಿನಿಂದ ಚುರುಕು ಬುದ್ಧಿಯ ಬೇಸಾಯಗಾರರು ಭೂಮಿಯ ಮೇಲೆ ಎಲ್ಲೆಡೆಯಲ್ಲೂ ಎಚ್ಚರದಿಂದ ವಿವಿಧ ಬಗೆಯ ಬಿತ್ತನೆ ಬೀಜಗಳನ್ನು ಸಂರಕ್ಷಿಸುತ್ತಾರೆ (ಶ್ಲೋ. 327).

ಋಷಿಗಳು ಅಕ್ಕಿ ಮುಂತಾದುವುಗಳನ್ನು ಮೊದಲನೆಯ, ಅಧಮ (ತೃಣಧಾನ್ಯ)ವನ್ನು ಎರಡನೆಯ, ತರಕಾರಿಗಳನ್ನು ಮೂರನೆಯ ಮತ್ತು ಬಳ್ಳಿಗಳು (ಮರಗಳನ್ನೂ ಒಳಗೊಂಡಂತೆ) ಹಾಗೂ ಹೂಗಿಡಗಳನ್ನು ನಾಲ್ಕನೆಯ ವರ್ಗದವು (ಬೀಜಗಳು) ಗಳೆಂದು ಸಾರಿದ್ದಾರೆ (ಶ್ಲೋ. 328).

ನಾರದರೇ ಮುಂತಾದ ಯೋಗಿ (ಮುನಿವರ್ಯ)ಗಳಿಂದ ವಿವರಿಸಲ್ಪಟ್ಟ, ಭೂಮಿಯ ಮೇಲೆ ನಡೆಸುವ ಈ ನಾಲ್ಕು ಬಗೆಯ ಬೇಸಾಯಗಳಿಂದ ಪೌಷ್ಟಿಕ ಆಹಾರ ಫಲದೊರೆಯುತ್ತದೆ. ದೇವತೆಗಳು ಸಂತುಷ್ಟರಾಗುತ್ತಾರೆ ಹಾಗೂ ವಿಶೇಷವಾಗಿ ಹಾಗೂ ಜನತೆಯೂ ಎಲ್ಲ ಋತುಗಳಲ್ಲೂ ಸಂತೃಪ್ತರಾಗುತ್ತಾರೆ. ಗೋವುಗಳು, ಎತ್ತುಗಳು, ಒಂಟೆಗಳು, ಕುದುರೆಗಳು ಮತ್ತು ಆನೆಗಳು ಮುಂತಾದ ಪ್ರಾಣಿಗಳ ಜೀವನಾಧಾರವಾಗಂತ್ತದೆ (ಶ್ಲೋ. 329-330).

ರಾಜಾಧಿರಾಜರೂ ಸಹ ತಮ್ಮ ರಾಜ್ಯಗಳಲ್ಲಿ ಅತೀವ ಶ್ರದ್ಧೆಯಿಂದ ಭೂ ವ್ಯವಸಾಯ ನಡೆಸಿದ್ದು ಸೇವಕರೂ ಅವುಗಳನ್ನು ಪಾಲಿಸಿದ್ದಾರೆ (ಶ್ಲೋ. 331).

ಅಂದಿನಿಂದ ಮುಖ್ಯವಾಗಿ ಬಿತ್ತನೆ ಬೀಜಗಳನ್ನೇ ಅವಲಂಬಿಸಿದ ಈ ಬೇಸಾಯ ಕಲೆಯನ್ನು ಬ್ರಾಹ್ಮಣರು, ಕ್ಷತ್ರಿಯರು ವೈಶ್ಯರು, ಶೂದ್ರರು, ಮತ್ತಿತರರು ವಹಿಸಿಕೊಂಡು ಸಕಾಲದಲ್ಲಿ ಒಳ್ಳೆಯ ಜಮೀನುಗಳಲ್ಲಿ ವಿವಿಧ ಬೇಸಾಯ ಕಾರ್ಯಗಳನ್ನು ನಡೆಸಿದ್ದಾರೆ (ಶ್ಲೋ. 332).

ಆದಕಾರಣ ಪ್ರಪಂಚದಲ್ಲಿ ಎಲ್ಲಿಯೂ ಮಾತ್ರ ಸಮರ್ಥ ಬೇಸಾಯಗಾರರು ಬಿತ್ತನೆ ಬೀಜಗಳನ್ನು ಸರಿಯಾಗಿ ಸಂಗ್ರಹಿಸಬೇಕು (ಶ್ಲೋ. 333).

ನಿಮ್ಮ (ಪಾಠಕರ) ಅನುಕೂಲಕ್ಕಾಗಿ ವಿವಿಧ ಬೀಜಗಳ ಹೆಸರುಗಳನ್ನು ಸಂಕ್ಷೇಪವಾಗಿ ಈಗ ತಿಳಿಸುತ್ತೇನೆ (ಶ್ಲೋ. 334).

ಕೃಷಿ ತಜ್ಞರು ರುಚಿ ಹಾಗೂ ಬಣ್ಣಗಳ ಆಧಾರದ ಮೇಲೆ ಮೂರು ಬಗೆಯ ಅಕ್ಕಿಯನ್ನು ಗುರುತಿಸಿದ್ದಾರೆ. ಅವು ಸಾಲಿ, ಕಲಮ, ಮತ್ತು ಷಷ್ಟಿಕ ಗಳು. ಇವುಗಳಲ್ಲಿ ಕಲಮ ಅಕ್ಕಿಯು ಸ್ವಲ್ಪ ಗಟ್ಟಿಯಾಗಿದ್ದು ಹೊಳಪುಳ್ಳದ್ದಾಗಿರುತ್ತದೆ ಹಾಗೂ ಹೆಚ್ಚು ರುಚಿಕರವಾಗಿರುತ್ತದೆ. ಆದರೆ ಷಷ್ಟಿಕವನ್ನು ಬ್ರಹ್ಮನು ರುಚಿರಹಿತವಾಗಿ (ಸಪ್ಪೆ) ಮಾಡಿದ್ದಾನೆ. ತಜ್ಞರು ಸಾಲಿ ಅಕ್ಕಿಯಲ್ಲಿ ಅದು ಬೆಳೆಯುವ ವಿವಿಧ ದೇಶಗಳು ಹಾಗೂ ಮಣ್ಣುಗಳಿಗನುಗುಣವಾಗಿ ಇಪ್ಪತ್ತಾರು ಬಗೆಯ ತಳಿ ಪ್ರಭೇದಗಳನ್ನು ಪ್ರಕಟಿಸಿದ್ದಾರೆ. ಅವು :

1. ಬಿಳಿ ಸಾಲಿ. 2. ಕೆಂಪು ಸಾಲಿ. 3. ದಪ್ಪ ಸಾಲಿ. 4. ಉದ್ದ ಸಾಲಿ (ಸಿಹಿ ರುಚಿಯುಳ್ಳದ್ದು). 5. ಬಿಳಿ ಬಣ್ಣದ ಕಲಮ, 6. ಕೆಂಪು ಬಣ್ಣದ ಕಲಮ. 7. ದಪ್ಪ ಕಾಳಿನ ಕಲಮ. 8. ಉದ್ದ ಗಾತ್ರದ ಕಲಮ. 9. ಹೇಮ (ಬಂಗಾರ) ಎಂಬ ಸಂಬಾಕ ಅಕ್ಕಿ, 10. ಕೆಂಗಂದು ಸಂಬಾಕ. 11. ಕೆಂಪು ಸಂಬಾಕ. 12. ಕಪ್ಪು ಸಂಬಾಕ, ಬಹಳ ರುಚಿಕರವಾದುದೆಂದು ಪರಿಗಣಿತವಾದ ಮತ್ತೊಂದು ತಳಿ, 13. ಸುಕ ಅಕ್ಕಿ, 14. ವ್ರೀಹಿಯ ಮತ್ತೊಂದು ದಪ್ಪ ತಳಿ. 15. ಗಟ್ಟಿ ವ್ರೀಹಿ. 16. ಪಟಸವ್ರೀಹಿ. ತುಂಬ ರುಚಿಯುಳ್ಳದ್ದು, 17. ಸ್ವಾದುವ್ರೀಹಿ–ತುಂಬ ಸಿಹಿಕರವಾದುದು. 18. ಘಾಲವ್ರೀಹಿ. 19. ದ್ರಾಕ್ಷಾ ವ್ರೀಹಿ. 20. ಸಿಪದ. ಕಪ್ಪು ಮತ್ತು ಬಿಳಿ ಚುಕ್ಕೆಗಳುಳ್ಳದ್ದು. 21. ಮತ್ತು 22. ಬಿಳಿ ಯವ ಮತ್ತು ಕಪ್ಪು ಯವ, ಎರಡೂ ದಪ್ಪವಿರುತ್ತವೆ, 23. ಸಮ್ಮರ್ ವ್ರೀಹಿ, ಚೆನ್ನಾಗಿ ಬೆಳೆಯುತ್ತದೆ, ಅಥವಾ ಬೇಯಿಸಿದಾಗ ಚೆನ್ನಾಗಿ ಉಬ್ಬುತ್ತದೆ. 24. ಕಲ ವ್ರೀಹಿ, ಹೆಚ್ಚು ಪುಷ್ಟಿಕರವಾದುದು, 25. ಬಿಳಿ ವ್ರೀಹಿ ಮತ್ತು 26. ಹಳದಿ ವ್ರೀಹಿ, –ಅಜೀರ್ಣ ಪರಿಹಾರಕ. ಇವೆಲ್ಲ ಅಕ್ಕಿಯ ಇಪ್ಪತ್ತಾರು ಬಗೆಯ

ತಳಿಗಳಾಗಿವೆ. ಇವೆಲ್ಲವುಗಳ ಬಿತ್ತನೆ ಬೀಜಗಳನ್ನು ಸಂಗ್ರಹಿಸಬೇಕು (ಶ್ಲೋ. 335-346).

ಈ ಎಲ್ಲ ವಿವಿಧ ಬಗೆಯ ಬಿತ್ತಗಳು ಮಾಗಿದಾಗ ಒಕ್ಕುವ ನೆಲದಲ್ಲಿ ಹರಡಿ ಬಿಸಿಲಿನಲ್ಲಿ ಒಣಗಿಸಬೇಕು. ಇವನ್ನು ಮನೆಯ ಬಳಕೆಯ ದೃಷ್ಟಿಯಿಂದ ದಾಸ್ತಾನು ಮಾಡುವುದು ಮೊದಲ ಕರ್ತವ್ಯ ಅಥವಾ ಅವು ಒಂದು ದೊಡ್ಡ ಅದೃಷ್ಟವೂ ಕೃಷಿಯ ಮೂಲ ಸಂಪತ್ತೂ ಆಗಿರುವುದರಿಂದ ರಾಜನೇ ಅವುಗಳನ್ನು ದಾಸ್ತಾನು ಮಾಡಿಟ್ಟು ಸಕಾಲದಲ್ಲಿ (ಸರಿಯಾದ ಹಂಗಾಮಿನಲ್ಲಿ) ಹಂಚಿಕೆ ಮಾಡಬೇಕು. ಅವು ದೇವತೆಗಳು ಮತ್ತು ಮಾನವರ ಆನಂದದ ಮೂಲವಾಗಿದ್ದು ದಾನಕ್ಕೆ (ಕೊಡಿಗೆಗೆ) ಯೋಗ್ಯ ಸರಕಾಗಿರುತ್ತವೆ. ಆದಕಾರಣ, ಕೃಷಿಕರು ಬಿತ್ತನೆಯನ್ನು ಸರಿಯಾಗಿ "ಸಂರಕ್ಷಿಸಬೇಕಾದುದು ಒಳಿತು (ಶ್ಲೋ. 347-349).

ಇವು ಹೇರಳವಾಗಿ ಬೆಳೆಕೊಡುವ ಬಿತ್ತನೆಗಳಾಗಿವೆ. ಇವುಗಳಲ್ಲಿ ಕೆಲವು ಮೂರು ತಿಂಗಳುಗಳಲ್ಲಿಯೂ ಉಳಿದವು, ನಾಲ್ಕು, ಐದು, ಆರು, ಏಳು ಅಥವಾ ಎಂಟು ತಿಂಗಳುಗಳು ಅಥವಾ ಇನ್ನೂ ಹೆಚ್ಚಿನ ಕಾಲಾವಧಿಯಲ್ಲಿ ಮಾಗುತ್ತವೆ (ಶ್ಲೋ. 350-351).

ಆದಕಾರಣ ಒಂದು ದೇಶದ ಜಮೀನಿನಲ್ಲಿ ನೀರಾವರಿಯ ಸರಿಯಾದ ವ್ಯವಸ್ಥೆಯೊಡನೆ ಬಿತ್ತದ ಬೇಸಾಯ ಮಾಡುವುದರಿಂದ ಆನಂದ ಲಭಿಸುವುದು ನಿಶ್ಚಿತ (ಶ್ಲೋ. 352).

ಕೆಲವು ಸ್ಥಳಗಳಲ್ಲಿ ಬೇಸಾಯವು ಕೃತಕ ವಿಧಾನದ ನೀರಾವರಿಯನ್ನವಲಂಬಿಸಿದ್ದರೆ ಇತರೆಡೆಗಳಲ್ಲಿ ಮಳೆಯನ್ನೇ ಆಶ್ರಯಿಸಿರುತ್ತದೆ (ಶ್ಲೋ. 353).

ಬೇಸಾಯವನ್ನು ಸರಿಯಾದ ಹಂಗಾಮಿನಲ್ಲಿ ಯುಕ್ತ (ಯೋಗ್ಯ) ಭೂಮಿಯಲ್ಲಿ (ಮಣ್ಣಿನಲ್ಲಿ) ಮಾಡಿದಾಗ ಅತ್ಯುತ್ತಮವಾಗಿದ್ದು ರಾಜ ಮತ್ತು ಪ್ರಜೆಗಳೆಲ್ಲರಿಗೂ ಫಲದಾಯಕವಾಗುತ್ತದೆ (ಶ್ಲೋ. 354).

ಅದು ಪಶುಪಕ್ಷಿಗಳಿಗೂ ಸಹ ಬದುಕಿಗೆ ಅವಿನಷ್ಟ ಸೌಖ್ಯವನ್ನು ಒದಗಿಸಿ ಕೊಡುತ್ತದೆ (ಶ್ಲೋ. 355).

ಈ ಮುಂದೆ ತಿಳಿಸುವ ಗಿಡಗಳ ಬೀಜಗಳನ್ನು ಸಂರಕ್ಷಿಸಿಡುವುದರಿಂದಲೂ ಸಹ ಸಂತಸವುಂಟಾಗುತ್ತದೆ :

1. ಅಧಿಕ ಬೀಜಗಳು, 2. ಮಾಷ (ಫೆಸಿಯೊಲಸ್ ರೇಡಿಯೇಟಸ್), 3. ಮುದ್ಗ (ಫೇಸಿಯೊಲಸ್ ಮುಂಗೊ), 4. ಕಡಲೆ (ದ್ವಿದಳ ಕಾಳುಗಳು), 5. ವಿಶೇಷವಾಗಿ

ಗೋಧಿ, 6. ಎಳ್ಳು. 7. ಕಿರಕ (?) 8. ಕೋದ್ರವ (ಪಸ್ಪಲಮ್ ಸ್ಕ್ರೊಬಿಕ್ಯುಲೇಟಮ್). 9. ಯವರ (?). 10. ಕುಲತ್ಥ (ಡಾಲಿಕಸ್, ಯುನಿಫ್ಲೋರಸ್). 11. ಶ್ಯಾಮ (ಅರ್ಟೆಮಿಸಿಯ ಇಂಡಿಕ). 12. ಕೃಷ್ಣ ಸರಿಸ್ಸ (ಅಕೇಸಿಯ ಕ್ಯಟೆಚು). 13. ರಸದ ಇಳುವರಿಗೆ ಅನುಗುಣವಾಗಿ ಇಕ್ಷು ಮತ್ತು ಪುಂಡರ ತಳಿಯ ಕಬ್ಬುಗಳು, 14. ವಿವಿಧ ಬಗೆಯ ಸಂಭಾರ ಪದಾರ್ಥಗಳು, (ಉಷ್ಣ-ತುಜಕ) ಧನಿಯಾ, ಜೀರಿಗೆ, ಸಾಸುವೆ ಮತ್ತು ಕರಿಮೆಣಸು. 15. ಮೊಪದೇಶದ ಹತ್ತಿ. 16. ಹರಳೆಣ್ಣೆ ಬೀಜಗಳು ಸೌತೇಕಾಯಿ ಮತ್ತು ಬಿಳಿ ಬದನೆಗಿಡ (ಶ್ಲೋ. 356–360),

ಜಾತಿಕ, ರಾಜಿ ಜಾತಿಕ, ಪಿಪ್ಪಿಕ, ಪನಪಕ್ಕಿಕ ಮತ್ತು ಸಪಕ ಗಳಂತಹ ಬಳ್ಳಿ ಗಿಡಗಳೂ ಇರುತ್ತವೆ. ಇವುಗಳಲ್ಲಿ ವಿವಿಧ ಬಗೆಗಳಿದ್ದು, ರಸಭರಿತವಾಗಿರುತ್ತವೆ. (ಶ್ಲೋ. 361)

ಎಲ್ಲಾ, ರುಚಿ ಹಾಗೂ ಜಾತಿಗಳಿಂದ ಬೇರೆಬೇರೆಯಾಗಿ ವಿಂಗಡಿಸಲ್ಪಟ್ಟ ವಿವಿಧ ಬಗೆಯ ಆಕಾರಗಳಿವೆ. ವಿವಿಧ ಬಗೆಯ ಕುಂಬಳ-ತಿರುಳುಗಾಯಿಗಳು, ಕಟುಟ, ಕುಸ್ತುಂಬು, ಕಟು, ಧಾನ್ಯಕ, ಅರಿಶಿನ ಮತ್ತು ಶುಂಠಿಗಳ ಬೀಜಗಳನ್ನು ಸಹ ಸಂರಕ್ಷಿಸಿಡಬೇಕು (ಶ್ಲೋ. 362–363).

ಅನುಭವಿ ಕೃಷಿಕರು ಸುರಸ (ಸುವರ್ಣಗೆಡ್ಡೆ) (ಅಮೊರ್ಫೋಫಾಲಸ್ ಕಂಪ್ಯಾನುಲೇಟಸ್), ಗೆಡ್ಡೆ ಬೇರುಗಳು, ಸಕುಟ, ರಸಕ ಮತ್ತು ಬಾಳೆಯ ಬೀಜಗಳನ್ನು ಸಹ ಸಂಗ್ರಹಿಸಿಡಬೇಕು : ವಿಲಕ್ಕಿ, ದ್ರಾಕ್ಷಿ, ನಾಳದ, ಮತ್ತು ರಸಭರಿತ ನಾಗವಲ್ಲಿ ಇವುಗಳ ಮತ್ತು ಪೂಗ ಮತ್ತು ಕ್ರಮುಕಗಳ ಬೀಜಗಳನ್ನು ಸಹ ಸಂರಕ್ಷಿಸಿಡಬೇಕು. ಅಲ್ಲದೆ, ಕೆಳಗಿನ ಪುಷ್ಪದಾಯಕ ಗಿಡಮರಗಳ ಬೀಜಗಳನ್ನು ಸಹ ಸಂರಕ್ಷಿಸಿಡಬೇಕು ;

1. ನಾದಿ ಹೂವುಗಳ ಮಲ್ಲಿಕ. 2 ಕುಂದ. 3. ಅತಿಮುಕ್ತ. 4. ಚಾಂಪೇಯ. 5. ಸಿಗ್ರು. 6. ಭೂರ್ಜ (ಬರ್ಚ್) ಮರ. 7. ಕಾರಂಜ. 8. ಶಮಿ (ಬನ್ನಿ ಮರ), 9. ನಕ್ತಮಾಲ (?), 10. ದಿದೋದಾರ್, 11. ವಿಭಿತಕ, 12. ಪ್ರಿಯಂಗು, 13. ಅಳಲೆಕಾಯಿ (ಮಿಂಬ್ಲಿಕ್ ಮೈರೊಬಲಾನ್), 14. ಪಿಂಡಿಟಕ. 15. ನಿಂಬ, 16. ಬಕುಚ, 17. ಶಿರೀಷ, 18. ಅಶೋಕ, 19. ದಾಳಿಂಬೆ, 20. ಶ್ರೀಪರ್ಣ, 21. ತಮಾಲ, 22. ಸಿಂಧೂವರ, 23. ಕಪಿತ್ಥ, 24. ಪನ್ನೇರಳೆ, ಮತ್ತು 25. ಸಪ್ತಪರ್ಣ (ಶ್ಲೋ. 364–370).

ಈ ಮುಂದೆ ತಿಳಿಸುವ ಎಲೆ, ಹೂ, ಹಣ್ಣುಗಳನ್ನು ಬಿಡುವ ಎಲ್ಲ ಬಗೆಯ ಮರಗಳ ಬೀಜಗಳನ್ನು ಸಂರಕ್ಷಿಸಿಡಬೇಕು. ಇವು ಮಾನವರ ಹಾಗೂ ಪಕ್ಷಿಗಳ ವಿಶೇಷವಾಗಿ ಸಾಮಾನ್ಯ ಕಲ್ಯಾಣ ದೃಷ್ಟಿಯಿಂದ ಒಳ್ಳೆಯವು :

1. ಉದುಂಬರ (ಫೈಕಸ್ ಗ್ಲೊಮೆರಟ), 2. ಚಲದಲ (ಫೈಕಸ್ ರಿಲಿಜಿಯೋಸ), 3. ಪಿಚುಲ (ಡಾಲ್ಬರ್ಜಿಯ ಉಜ್ಜೈನೆನ್ಸಿಸ್), 4. ಪಾರಿಭದ್ರಕ (ಎರಿತ್ರಿನ ಇಂಡಿಕಾ), ಪಲಾಶ (ಬ್ಯುಟಿಯ ಫ್ರಾಂಡೋಸ), ಮಧೂಕ (ಬ್ಯಾಸ್ಸಿಯ ಲ್ಯಾಟಿಫೋಲಿಯ), ವಟ (ಆಲದ ಮರ), ಪ್ಲಾಕ್ಷ (ಫೈಕಸ್ ಇನ್ ಫೆಕ್ಟೋರಿಯ) ಮಾವು, ತಿಂದುಕ (ಡಯೋಸ್ಪೈರಸ್ ಎಂಬ್ರಿಯೊಪ್ಟೆರಿಸ್), ತಿಲಕ (ಕ್ಲೆರೋಡೆಂಡ್ರಮ್ ಫ್ಲೋಮಾಯಿಡಿಸ್), ನೀಪ (ನಾಲಿಯ ಕದಂಬ), ಅರ್ಜುನ (ಟರ್ಮಿನೇಲಿಯ ಅರ್ಜುನ), ಸರ್ಜಕ (ಟರ್ಮಿನೇಲಿಯ ಟೊಮೆಂಟೋಸ), ಬದರ ಜುಜುಬಿ ವೃಕ್ಷ), ಪೀಲು (ಸಾಲ್ವಡೋರ ಪರ್ಸಿಕ), ಜಂಬೀರ (ಮಾದಳ ವೃಕ್ಷ), ಪುನ್ನಾಗ (ರೊಟ್ಟಿಬ್ರಿಯ ಟಿಂಕ್ಟೋರಿಯ), ಬಿದಿರು, ವಿವಿಧ ಬಗೆಯ ಕಸ (ಸಕ್ಕೇರಮ್ ಸ್ಪಾಂಟೇನಿಯಂ), ಮತ್ತು ಮಾತುಲಿಂಗ, (ಮಾದಳ ವೃಕ್ಷ) (ಶ್ಲೋ. 371–374.)

ರೈತನು ಚೆನ್ನಾಗಿ ಬಲಿತ ವಿವಿಧ ಬಗೆಯ ಬೀಜಗಳನ್ನು ತೆಗೆದುಕೊಂಡು ಬಿಸಿಲಿನಲ್ಲಿ ಒಣಗಿಸಿ ವಿವಿಧ ಬಗೆಯ ಪಾತ್ರೆಗಳು, ಹುಲ್ಲುರಾಶಿ, ಅಥವಾ ಬೋಗುಣಿಗಳಲ್ಲಿ ಸಂರಕ್ಷಿಸಿಡಬೇಕು. ಅವು ಮೊಲಗಳು, ಇಲಿಗಳು, ಮತ್ತು ಪಕ್ಷಿಗಳು ಅಥವಾ ತುಂತುರು ನೀರು, ಗಾಳಿ, ಮಳೆ ಇತ್ಯಾದಿಗಳಿಂದ ಹಾಳಾಗದಂತೆ ನೋಡಿಕೊಳ್ಳಬೇಕು ಒಕ್ಕಣೆಯ ಬಳಿಕ ನೇರವಾಗಿ ಮನೆಯಲ್ಲಿ ಬೀಜಗಳನ್ನು ದಾಸ್ತಾನಿಸಬೇಕು ಹಾಗೂ ಯಾವುದೇ ಬಗೆಯ ಪೀಡೆನಾಶಕಗಳ ಬಾಧೆಗೂ ಒಳಗಾಗಿ ನಾಶವಾಗಲು ಅವಕಾಶ ಮಾಡಿಕೊಡಬಾರದು (ಶ್ಲೋ. 375-377)

ಅತ್ಯುತ್ತಮ ಬಗೆಯ ಬೀಜಗಳ ಸಂರಕ್ಷಣೆಯಿಂದ ಬೇಸಾಯಗಾರರಿಗೆ ನ್ಯಾಯಬದ್ಧವಾಗಿ ಸರ್ವತೋಮುಖ ಅಭಿವೃದ್ಧಿಯಾಗುತ್ತದೆಯೆಂದು ಋಷಿಗಳು ಹೇಳಿದ್ದಾರೆ. ಬೇಸಾಯಗಾರನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಇಲ್ಲವೇ ಯಾವುದೇ ಮಿಶ್ರಜಾತಿಯವನಿರಲಿ ಅಕ್ಕಿ, ತರಕಾರಿಗಳು, ವೃಕ್ಷಗಳು, ಗಡ್ಡೆಬೇರುಗಳು, ಇತ್ಯಾದಿಗಳ ಬೀಜಗಳನ್ನು ಕೊಂಡು ದಾಸ್ತಾನಿಸಬೇಕು ಹಾಗೂ ಅವುಗಳನ್ನು ಸರಿಯಾದ ಸ್ಥಳದಲ್ಲಿ ಸರಿಯಾಗಿ ಎತ್ತುಗಳಿಂದ ಉಳುಮೆಯಾದ ಜಮೀನಿನಲ್ಲಿ ಸಕ್ರಮವಾಗಿ ಬಿತ್ತನೆ ಮಾಡಬೇಕು ಹಾಗೂ ಸಕಾಲದಲ್ಲಿ ನೀರೆರೆದು ಅವುಗಳ ಬೆಳವಣಿಗೆಯನ್ನು ಪ್ರೋತ್ಸಾಹಿಸಬೇಕು (ಶ್ಲೋ. 378–382).

ಬಿತ್ತನೆಗಾಗಿ ಭೂಮಿ ಉಳುಮೆಮಾಡುವಿಕೆ

ಕಶ್ಯಪರು ತಮ್ಮ ಕೃತಿಯಲ್ಲಿ ಕೃಷಿಶಾಸ್ತ್ರದಲ್ಲಿ ಪರಿಣತರಾದವರು ಬಿತ್ತನೆ ಮಾಡುವ ವಿವಿಧ ವಿಧಾನಗಳನ್ನು ಹೇಳಿರುವರೆಂದು ತಿಳಿಸುತ್ತಾರೆ. ಅವುಗಳ ವಿವರಗಳನ್ನು ಕೆಳಗೆ ಕೊಟ್ಟಿದೆ:

ಎಲ್ಲ ಬಗೆಯ ಬತ್ತದ ಬಿತ್ತನೆಗೆ ಬತ್ತದ ಜಮೀನುಗಳನ್ನು ಅತ್ಯುತ್ತಮ ಹೋರಿಗಳಿಂದ ಉಳುಮೆ ಮಾಡಬೇಕು (ಶ್ಲೋ. 384).

ಗಡ್ಡೆ ಬೇರುಗಳು ಇತ್ಯಾದಿಗಳನ್ನು ಮುಚ್ಚಿ ಭೂಮಿಯಲ್ಲಿ ಮೊದಲಿಗೆ ಸಸಿ ಬಿಡಬೇಕೆಂದು ಸಹ ಕೃಷಿ ಪಂಡಿತರು ತಿಳಿಸುತ್ತಾರೆ (ಶ್ಲೋ. 385).

ಬಳಿಕ ಪ್ರತ್ಯೇಕ ಒರಿ ಜಮೀನು ಅಥವಾ ಚೆನ್ನಾಗಿ ನೀರಾವರಿ ಮಾಡಿದ ಮುಚ್ಚಿ ಜಮೀನುಗಳನ್ನು ಸಿದ್ಧಪಡಿಸಿ ಎತ್ತುಗಳಿಂದ ಉಳುಮೆಮಾಡಿ ಸಮಗೊಳಿಸಿ ಬಿತ್ತನೆಗೆ ಸಿದ್ಧಪಡಿಸಬೇಕು. ಅನಂತರ ಸಸಿಗಳನ್ನು ಶೀಘ್ರವಾಗಿ ನಡುವೆ ಸರಿಯಾಗಿ ಸ್ಥಳಬಿಟ್ಟು ನಾಟಿಮಾಡಬೇಕು (ಶ್ಲೋ. 386-387).

ಭೂಮಿ ತೃಪ್ತಿಕರ ಬೆಳೆ ನೀಡಲು ತೋಟಗಳು, ಅರಮನೆ ತೋಟಗಳು, ಅಥವಾ ಹಳ್ಳಿ ಇಲ್ಲವೇ ಪಟ್ಟಣದ ಎಲ್ಲೆಯೊಳಗೆ ಇಲ್ಲವೇ ಹೊರಗೆ ಎಲ್ಲೇ ಇರಲಿ ಜಮೀನು ಉಳುಮೆಯನ್ನು ಎತ್ತುಗಳ ನೆರವಿನಿಂದ ಮಾಡಲಾಗುತ್ತದೆ. ನಯ ಹಾಗೂ ಸಮಮಟ್ಟಗೊಳಿಸುವಿಕೆಯನ್ನು ಗುದ್ದಲಿ ಮತ್ತು ಕೈಕುಂಟೆ(ಹೆಂಟೆ)ಗಳಿಂದ ನೆರವೇರಿಸಲಾಗುತ್ತದೆ (ಶ್ಲೋ. 388-389).

ಜಮೀನಿನಲ್ಲಿ ಬೀಜ ಬಿತ್ತನೆ ಮಾಡಲು ಕೆಲವೆಡೆ ಚೆಲ್ಲಲು, ಸಾಲು ಮಾಡಲು, ಇತರೆಡೆ ಸಮಗೊಳಿಸುವಿಕೆ (ಅಥವಾ ಪಾತಿಯಲ್ಲಿ ಹಾಕುವಿಕೆ). ಮತ್ತೆ ಕೆಲವೆಡೆಗಳಲ್ಲಿ ಅಗೆಯುವಿಕೆ ಶಿಫಾರಸು ಮಾಡಿದ್ದಾರೆ. ಗಡ್ಡೆಬೇರುಗಳನ್ನು ಹೂಳಲು (ನೆಡಲು) ಕುಣಿಗಳನ್ನು ತೋಡಬೇಕಾಗುತ್ತದೆ (ಶ್ಲೋ. 390).

ಬಳಿಕ ಅಂತಹ ಔಷಧೀಯ ಗಿಡಗಳ ಬೀಜ ಸಸಿಗಳನ್ನು ಸರಿಯಾಗಿ ಮಣ್ಣಿನಲ್ಲಿ ಹೂಳುವುದರಿಂದ, ನಾಟಿ ಮಾಡುವುದರಿಂದ ಇಲ್ಲವೇ ಕಸಿ ಮಾಡುವುದರಿಂದ ಬೆಳೆಸಲಾಗುತ್ತದೆ(ಶ್ಲೋ. 391).

ಸರಿಯಾದ ಗ್ರಹಗಳ ಶಕ್ತಿಯುಳ್ಳ ಋತುಗಳು, ನೀರುಣಿಕೆಯು ಸರಿಯಾದ ಕಾಲದಲ್ಲಿ ಸಮಗೊಳಿಸಿ ಸಿದ್ಧಪಡಿಸಿದ ಬೆಳೆಯು ಜಮೀನಿನಲ್ಲಿ ಮಾತ್ರ ಫಲಕಾರಿಯಾಗುತ್ತದೆಂದಿದ್ದಾರೆ(ಶ್ಲೋ. 392).

ಅವಕಾಶ ಎಲ್ಲೆಡೆಯಲ್ಲೂ ಇದ್ದರೆ ಬಿತ್ತುವ ಜಮೀನೇ ಇರಲಿ ಅಥವಾ ಸಸ್ಯ ಮತ್ತು ತರಕಾರಿ ಇಲ್ಲವೇ ಮರಗಳು ಮತ್ತು ತೋಟಗಳ ಬೇಸಾಯಕ್ಕೆ ಯೋಗ್ಯವಾದ ಮುಚ್ಚಿ ಜಮೀನೇ ಇರಲಿ ಉಳುಮೆ ಮಾಡುವಿಕೆಯನ್ನು ಶಿಫಾರಸು ಮಾಡಲಾಗಿದೆ (ಶ್ಲೋ. 393).

ಅನುಭವಿ ಬೇಸಾಯಗಾರನು ತನ್ನ ಜಮೀನಿನ ಅವಶ್ಯಕತೆಗಳಿಗನುಗುಣವಾಗಿ ಉಳುಮೆ ಮಾಡಬೇಕು, ಸಾಲು ಮಾಡಬೇಕು ಅಥವಾ ಕುಳಿ ತೋಡಬೇಕು (ಶ್ಲೋ. 394).

ಬಿತ್ತನೆ ಮಾಡಲು ಮೊದಲು ನೀರಾವರಿ ಮಾಡಿ ಬಳಿಕ ಹೆಚ್ಚಾದ ನೀರನ್ನು ಬಸಿದು ತೆಗೆದು ಅಥವಾ ಕ್ರಮೇಣ ಬಿಸಿಲಿನಲ್ಲಿ ಒಣಗಿದ ಭೂಮಿಯನ್ನು ಆಯ್ಕೆ ಮಾಡಬೇಕು. ತನ್ನ ಕ್ರಮ ಫಲಕಾರಿಯಾಗಬೇಕೆಂದು ಮರಗಳು, ಬಳ್ಳಿಗಳು, ಬಾಳೆ, ಗೆಡ್ಡೆಬೇರು ಮತ್ತು ಸಸಿಗಳು ಇತ್ಯಾದಿಗಳನ್ನು ನೆಡಲು ಸಾಂಪ್ರದಾಯಿಕವಾಗಿ ಬಳಕೆಯಲ್ಲಿರುವ ಉಳುಮೆ ಮತ್ತಿತರ ಕೃಷಿ ಕೆಲಸಗಳನ್ನು ಆಸೆ ಇದ್ದಲ್ಲಿ ತ್ವರಿತವಾಗಿ ಮಾಡಿ ಮುಗಿಸಬೇಕು (ಶ್ಲೋ. 395–397).

ವಿವಿಧ ಆಹಾರ ಧಾನ್ಯಗಳ ಬೇಸಾಯ

ಜಮೀನಿಗೆ ನದಿ ನೀರಿನಿಂದ ನೀರಾವರಿಮಾಡುವ ಕೋಸಲ ಮುಂತಾದ ದೇಶಗಳಲ್ಲಿ ಬತ್ತದ ಬೇಸಾಯವು ಚೆನ್ನಾಗಿ ಆಗುತ್ತದೆಂದು ಋಷಿಗಳು ಹೇಳಿದ್ದಾರೆ. ಆದಕಾರಣ ಕಲಮ ಮತ್ತು ಪ್ರಿಯಂಘ ವಿವಿಧ ಬಗೆಯ ಬತ್ತದ ಕೊಯ್ಲು ಮಾಡಲು ನಿರ್ಧರಿಸಿರುವ ವಿವೇಕಿ ರೈತನು ಮೊದಲು ಜಲಾಶಯಗಳು, ನದಿಗಳು ಅಥವಾ ಕೆರೆಗಳಿಂದ ಹಾಕಿದ ಕಾಲುವೆ ನೀರುಗಳಿಂದ ತಮ್ಮ ಜಮೀನನ್ನು ಚೆನ್ನಾಗಿ ನೀರಾವರಿ ಮಾಡಬೇಕು; ಬಳಿಕ ಎತ್ತುಗಳಿಂದ ಉಳುಮೆ ಮಾಡಬೇಕು (ಶ್ಲೋ. 398–400).

ನೀರು ಹಾಯಿಸಿದ ಜಮೀನುಗಳಲ್ಲಿ ಈಶಾನ್ಯ ಮೂಲೆ ಅಥವಾ ಪೂರ್ವ ಇಲ್ಲವೇ ಪಶ್ಚಿಮ ಭಾಗಗಳಿಂದ ಉಳುಮೆ ಮಾಡುವುದು ಉಪಯುಕ್ತ (ಶ್ಲೋ. 401).

ಬಳಿಕ ಬೇಸಾಯಗಾರನು ಬೇರೆಡೆಯಲ್ಲಿ ಪೋಷಿಸಿ ಚೆನ್ನಾಗಿ ಬೆಳೆಸಲಾದ ಬತ್ತದ ಸಸಿಗಳನ್ನು ಬೇರು ಸಮೇತ ತೆಗೆದು ಕಂತೆ ಕಟ್ಟಿಸಬೇಕು. ಅನಂತರ ಪ್ರತಿ ಸಸಿಯನ್ನು ಒಂದು ಶುಭ ಗಂಟೆಯಲ್ಲಿ ಉಳುಮೆಯಿಂದ ಮೃದು ಮಾಡಿದ ಮತ್ತು ದನಗಳು ಹಾಗೂ ಆಡುಗಳ ಸಗಣಿ ಗೊಬ್ಬರ ಇಲ್ಲವೇ ಕೊಳೆತ ತರಕಾರಿ ವಸ್ತುಗಳ ಗೊಬ್ಬರಗಳನ್ನು ಲಕ್ಷ್ಯಪೂರ್ವಕವಾಗಿ ಸೇರಿಸಿದ ಭೂಮಿಯಲ್ಲಿ ಕೂಲಿಯಾಳುಗಳಿಂದ ಸಮನಾಗಿ ಸಾಲು ನಾಟಿಮಾಡಿಸಬೇಕು (ಶ್ಲೋ. 402–404).

ಅನಂತರ ಸ್ವಲ್ಪವೇ ಸ್ವಲ್ಪ ನೀರು ಜಮೀನಿನಲ್ಲಿ ಉಳಿಯುವಂತೆ ನೋಡಿಕೊಂಡು ಹೆಚ್ಚಿನ ನೀರು ಸಾಗಿಹೋಗಲು ಹೊರಮಾರ್ಗ(ಬಹಿರ್ದ್ವಾರ)ಗಳನ್ನು ಒದಗಿಸಲು ಎಚ್ಚರವಹಿಸಬೇಕು(ಶ್ಲೋ. 405).

ಅನಂತರ ದುಡಿಮೆಯು ಫಲಕಾರಿಯಾಗಲು ಸಸಿಗಳಿಗೆ ಯಾವುದೇ ರೀತಿಯಿಂದಲೂ ಹಾನಿತಟ್ಟದಂತೆ ಬೇಕಾದ ರಕ್ಷಣೆಯೊದಗಿಸಲು ಎಚ್ಚರವಹಿಸಬೇಕು. ಆದರೆ ಅಧಿಕ ಮಳೆ ಮುಂತಾಗಿ ವಿವಿಧ ಕಾರಣಗಳಿಂದ ಸಸಿಗಳಿಗೆ ಹಾನಿ ತಟ್ಟಿದಾಗ ವಿವೇಕಿಯಾದವನು ಅಂತಿಮವಾಗಿ ಲಾಭಗಳಿಸಲು ಹೊಸ ಸಸಿಗಳನ್ನು ಒಂದು ನಾಟಿ ಮಾಡಬೇಕು (ಶ್ಲೋ. 406–408).

ಬಹಳಷ್ಟು ಹಳ್ಳಿಯ ಜಮೀನುಗಳಲ್ಲಿ ಅಥವಾ ಕಾಡು ಪ್ರದೇಶ ಇಲ್ಲವೇ ಬಯಲು ಭೂಮಿಯಲ್ಲಿ ಬೇಸಾಯ ಯೋಗ್ಯ ಜಮೀನನ್ನು ಒಂದು, ಎರಡು, ಮೂರು, ನಾಲ್ಕು, ಇಲ್ಲವೇ ಐದು ಕುಟುಂಬಗಳ ಸದಸ್ಯರು ಇಪ್ಪತ್ತು ಎತ್ತುಗಳಿಂದ ಹತ್ತು ನೊಗಗಳನ್ನು ಹೂಡಿ ಸಾಮೂಹಿಕವಾಗಿ ಉಳುಮೆ ಮಾಡುವುದು ಕೃಷಿಗೆ ಉಪಯುಕ್ತ (ಶ್ಲೋ. 409 410).

ಹಳ್ಳಿಯ ಜನರೆಲ್ಲ ಒಟ್ಟಾಗಿ ಅನೇಕ ನೊಗಗಳನ್ನು ಹೂಡಿ ಒಂದೇ ಕಾಲದಲ್ಲಿ ಬೀಜ ಬಿತ್ತನೆ ಮಾಡುವುದು ತುಂಬಾ ಉಪಯುಕ್ತವೆಂದು ಪರಿಗಣಿಸಲಾಗಿದೆ (ಶ್ಲೋ. 411).

ಈ ರೀತಿಯ ಒಂದು ಹಳ್ಳಿ, ಪಟ್ಟಣ, ಕಾಡು ಅಥವಾ ಅರಣ್ಯ ಪ್ರದೇಶದಲ್ಲಿ ಚೌಳು ನೀರಿನಿಂದ ಕೂಡಿದ ಬತ್ತದ ಜಮೀನನ್ನು ಚೆನ್ನಾಗಿ ಉಳುಮೆ ಮಾಡಿ 'ನಾಲಾ' ನೀರಿನಿಂದ ನೀರಾವರಿ ಮಾಡಿ ಹೆಚ್ಚಿನ ನೀರು ಬಸಿದುಹೋಗುವುದಕ್ಕೆ ಅನೇಕ ಬಸಿರ್ ದ್ವಾರಗಳನ್ನು ನಿರ್ಮಿಸಿ, ಸಾಲಾಗಿ, ನಾಟಿ ಮಾಡಲಾದ ಬತ್ತದ ಸಸಿಗಳನ್ನು ಸೃಷ್ಟಿಯು ಎಂದರೆ ಪ್ರಕೃತಿಯು ಏಳು ಇಲ್ಲವೇ ಹತ್ತು ದಿನಗಳಲ್ಲಿ ಬೇರಿಡುವಂತೆ ಮಾಡುತ್ತದೆ. ಬಳಿಕ ಹೊಸ ಚಿಗುರು ಕುಡಿಯೊಡೆದು ತಲೆದೋರುತ್ತವೆ. ಆಗ ಪೃಥ್ವಿಯು ಗಿಳಿಗಳ ಪುಕ್ಕಗಳ ಮೇಲಿನ ಅಥವಾ ಹರೆಯದ ಹೊಸ್ತಿಲಲ್ಲಿರುವ ಕನ್ಯೆಯ ಶರೀರದ ಕಾಂತಿಯಂತೆ ಮನಮೋಹಕವಾಗಿ ಅರಳಿ ಪ್ರಕಾಶಿಸುತ್ತದೆ (ಶ್ಲೋ. 412–416).

ಈ ರೀತಿಯಲ್ಲಿ ಮೊದಲ ತಿಂಗಳ ಕೊನೆಯಲ್ಲಿ ಕ್ರಮೇಣ ಬತ್ತದ ಎಲೆಗಳ ಬೆಳವಣಿಗೆಯು ಗೋಚರಿಸುತ್ತದೆ (ಶ್ಲೋ. 417).

ಕಾಂಡದ ಸರ್ವತೋಮುಖ ಬೆಳವಣಿಗೆಯುಂಟಾಗಿ ದಟ್ಟ ಹಸಿರಿನಿಂದ ಸಸ್ಯಗಳು ಕಾಂತಿಯಿಂದ ಪ್ರಜ್ವಲಿಸುತ್ತವೆ ಹಾಗೂ ಸಮೃದ್ಧ ಕೊಯ್ಲಿನ ಭರವಸೆ ಹುಟ್ಟಿಸುತ್ತವೆ (ಶ್ಲೋ. 418).

ಆ ಸಮಯದಲ್ಲಿ ಬತ್ತದ ಕೆಸರಿನಲ್ಲಿ ವಿಪುಲವಾಗಿ ಕಾಡು ಹುಲ್ಲು ಮತ್ತು ಕಳೆಗಳು ಅನಿವಾರ್ಯವಾಗಿ ಹೊರಬರುತ್ತವೆ. ಇವು ಖಂಡಿತವಾಗಿಯೂ ಬೆಳೆಗೆ ಹಾನಿಕರವೆಂದು ಋಷಿಗಳು ತಿಳಿಸಿದ್ದಾರೆ (ಶ್ಲೋ. 419).

ಆದಕಾರಣ ಬೇಸಾಯಗಾರರು ಕ್ರಮಬದ್ಧವಾಗಿ ಶ್ರದ್ಧೆಯಿಂದ ಈ ಕಾಡು ಹುಲ್ಲು ಕಳೆಗಳು ಹಾಗೂ ಮುಂತಾದಂತಹ ಇತರ ಹಾನಿಕರ ಜೊಂಡುಗಳನ್ನು ತಮ್ಮ ಜಮೀನಿನಿಂದ ತೆಗೆದುಹಾಕಬೇಕು. ಈ ಕಾಡು ಸಸ್ಯ, ಜೊಂಡು, ಕಳೆ ಇತ್ಯಾದಿಗಳು ಕಾಳಿನ ಬೆಳವಣಿಗೆಗೆ ಅಡಚಣೆಯುಂಟುಮಾಡಿ ಬೆಳೆ ಇಳುವರಿಯನ್ನು ಕಡಿಮೆಮಾಡುವುದರಿಂದ ಅವುಗಳನ್ನು ಬೇರುಸಮೇತ ಕಿತ್ತು ತೆಗೆದು ನಾಶಪಡಿಸುವುದು ಉತ್ತಮ. ಅನುಭವಿಯಾದವನು ಮೊದಲು ಬತ್ತದ ಜಮೀನನ್ನು ನೀರಿನಿಂದ ತುಂಬಿಸಿ, ಬಳಿಕ

ಸಾಲಾಗಿ ಕಳೆ ಮುಂತಾದುವುಗಳನ್ನು ನಿಧಾನವಾಗಿ ಬೇರು ಸಹಿತ ಕಿತ್ತು ತೆಗೆಯಬೇಕು ಇಲ್ಲವೇ ಆಳುಗಳು ನಿತ್ಯವೂ ಈ ಪೀಡೆಗಳನ್ನು ಕಿತ್ತು ತೆಗೆಯುವುದು ಉತ್ತಮ. ಬೇಸಾಯಗಾರರು ಈ ಉಪಜೀವಿ ಸಸ್ಯ ಬೆಳವಣಿಗೆಗಳನ್ನು ಕಿತ್ತು ತೆಗೆದಾಗಲೇ ಜಮೀನು ಕಾಂತಿಯಿಂದ ಪ್ರಜ್ವಲಿಸುವಂತಾಗುತ್ತದೆ (ಶ್ಲೋ. 420–423).

ಹೀಗೆ ಮಾಡಿದಾಗ ಎರಡನೆಯ ತಿಂಗಳಲ್ಲಿ ಬತ್ತದ ಬೆಳವಣಿಗೆಯು ಖಚಿತವಾದಂತಾಗುತ್ತದೆ. ಆದರೆ ಆ ಸಮಯದಲ್ಲಿಯೂ ಸಹ ಪರೋಪಜೀವಿ ಕಳೆಗಳು ಕಂಡುಬಂದಲ್ಲಿ ಅವುಗಳನ್ನೂ ಸಹ ಸಕ್ರಮವಾಗಿ ತೆಗೆದು ನಾಶಪಡಿಸಬೇಕು. ಇದರಿಂದ ಎಲ್ಲ ಬಗೆಯ ಬತ್ತದ ಬೆಳೆಗಳಲ್ಲೂ ಸಮೃದ್ಧ ಕೊಯ್ಲಿನ ಭರವಸೆ ಪಡೆಯಬಹುದು (ಶ್ಲೋ. 424-425).

ಬಿಳಿಸಾಲಿ, ಕೆಂಪು ಸಾಲಿ, ಕಲಮ, ಇತ್ಯಾದಿ ಮೇಲೆ ಹೇಳಿದ ವಿವಿಧ ಬಗೆಯ ಬತ್ತದ ಬೇಸಾಯವನ್ನು ಒಂದೇ ರೀತಿಯಲ್ಲಿ ಮಾಡಲಾಗುತ್ತದೆ (ಶ್ಲೋ. 426).

ಸಾಲಿ, ಸಂಬ, ಕಲಮ, ಇತ್ಯಾದಿ ವಿವಿಧ ತಳಿ ಬತ್ತಗಳು ವಿವಿಧ ಕಾಲಾವಧಿಗಳಲ್ಲಿ ಎಂದರೆ ತಮ್ಮ ಜಾತಿ ಹಾಗೂ ಬಣ್ಣಗಳಿಗನುಗುಣವಾಗಿ ಕೆಲವು ಮೂರು ತಿಂಗಳಲ್ಲಿ ಮತ್ತೆ ಕೆಲವು ನಾಲ್ಕು ಐದು ತಿಂಗಳಲ್ಲಿ ಮತ್ತೆ ಕೆಲವು ಆರು ತಿಂಗಳುಗಳಲ್ಲಿ ಮಾಗುತ್ತವಾದರೂ ಮೊದಲಿಗೆ ಭೂಮಿಯ ಉಳುಮೆ, ಬಳಿಕ ಬೀಜ ಬಿತ್ತನೆ, ಅನಂತರ ಕಳೆ ತೆಗೆಯುವಿಕೆ ಹಾಗೂ ವಿಪುಲ ನೀರು ಹಾಯಿಸುವಿಕೆ ಮತ್ತು ಕಡೆಯದಾಗಿ ಬೆಳೆಯನ್ನು ಪೀಡೆಗಳಿಂದ ಸಂರಕ್ಷಿಸಿ ಕಾಪಾಡುವಿಕೆ ಈ ಎಲ್ಲ ಪ್ರಕ್ರಿಯೆಗಳು ಒಂದೇ ಆಗಿರುತ್ತವೆ (ಶ್ಲೋ. 427-430).

ಆದಕಾರಣ ನೀರಿನ ವಿಷಯದಲ್ಲೂ ಪರಿಣತರಾದ ಕೃಷಿಕರು ವಿವಿಧ ಬತ್ತದ ತಳಿಗಳಲ್ಲಿ ತೆನೆಬರುವ ಕಾಲವನ್ನು ನಿಶ್ಚಿತಪಡಿಸಿಕೊಂಡು ಬಳಿಕ ಸೂಕ್ತ ಸಮಯಗಳಲ್ಲಿ ನೀರನ್ನು ಪೂರೈಸಬೇಕೆಂದು ಹೇಳುತ್ತಾರೆ (ಶ್ಲೋ. 431).

ಸಾಲು ಪೈರುಗಳ ತುದಿಯಲ್ಲಿಯ ತೆನೆಗಳು ಕ್ರಮೇಣ ಗಟ್ಟಿಯಾಗುತ್ತಾ ಹಾಲು (ರಸ) ತುಂಬಿ, ಬಾಗಿದಂತೆ ಕಂಡಾಗ ಅವುಗಳನ್ನು ಮುಖ್ಯವಾಗಿ ಗಿಳಿಗಳ ಕಾಟದಿಂದ ಸಂರಕ್ಷಿಸಬೇಕು. ಈ ಎಚ್ಚರಿಕೆಯು ಎಲ್ಲ ಬತ್ತಗಳಿಗೂ ಸಮನಾಗಿ ಅನ್ವಯಿಸುತ್ತದೆ (ಶ್ಲೋ. 432-433).

ಬಳಿಕ ಕ್ರಮೇಣವಾಗಿ ತೆನೆಗಳಲ್ಲಿಯ ಹಾಲು ಕಾಳುಗಳು ಮಧ್ಯಭಾಗದಲ್ಲಿ ಗಟ್ಟಿಯಾಗುತ್ತಾ ಬಂದು ಕೊನೆಗೆ ಬತ್ತದ ಕಾಳುಗಳಾಗಿ ಮಾಗುತ್ತವೆ. ಅಲ್ಲಿಯವರೆಗೂ ನಿಯತವಾಗಿ ನೀರಾವರಿ ಮಾಡುವುದನ್ನು ಶಿಫಾರಸ್ಸು ಮಾಡಲಾಗಿದೆಯಲ್ಲದೆ ಉಪಯುಕ್ತವೂ ಹೌದು. ಇಲ್ಲದ ಪಕ್ಷದಲ್ಲಿ ಬೆಳೆಗೆ ನಷ್ಟವುಂಟಾಗುತ್ತದೆ (ಶ್ಲೋ. 434-435).

ಆದಕಾರಣ ಬೇಸಾಯಗಾರರು ಆಗಾಗ್ಗೆ ಹಾಲು ತುಂಬಿದ ಕಾಳುಗಳ ಬೆಳವಣಿಗೆಯನ್ನು ಗಮನಿಸುವುದನ್ನು ಮುಂದುವರಿಸಿ, ಕಾಳುಗಳಲ್ಲಿ ಬತ್ತದ ಹಾಲು ಹೆಚ್ಚಿಸುವುದಕ್ಕಾಗಿ ಸಕಾಲದಲ್ಲಿ ತಮ್ಮ ಜಮೀನುಗಳಲ್ಲಿ ನೀರು ಹಾಯಿಸಿ ಪೋಷಣೆ ಮಾಡಬೇಕು (ಶ್ಲೋ. 436).

ಆಯಾ ಸ್ಥಳಕ್ಕೆ ಅನುಗುಣವಾಗಿ ನದಿ, ಜಲಾಶಯ, ಕೆರೆ ಅಥವಾ ಬಾವಿ ನೀರುಗಳಿಂದ ಜಮೀನಿಗೆ ನೀರಾವರಿ ಮಾಡಲು ವಿಶೇಷ ಪ್ರಯತ್ನಪಡಬೇಕು. ಆಗ ಮಾತ್ರ ಭೂದೇವಿಯ ಪ್ರಸಾದದಿಂದ ಹಾಗೂ ಸೃಷ್ಟಿಕರ್ತನ ಇಚ್ಛೆಯಿಂದ ಬೇಸಾಯವು ಫಲಕಾರಿಯಾಗಿ ಜೀವಿಗಳಿಗೆಲ್ಲ ಆನಂದಪ್ರದಾಯಕವಾಗುತ್ತದೆ (ಶ್ಲೋ. 437-438).

ಈ ಪೃಥ್ವಿಯ ಮೇಲೆ, ಮೇಲೆ ತಿಳಿಸಿದ ರೀತಿಯಲ್ಲಿ ವಿವಿಧ ಬಗೆಯ ಬೀಜಗಳನ್ನು ಉಳುಮೆ (ಬೇಸಾಯ) ಮಾಡಿದ ಭೂಮಿಯಲ್ಲಿ ಬಿತ್ತಿದಾಗ ಅವು ಬೆಳೆದು ಅಧಿಕ ಇಳುವರಿ ಕೊಡುತ್ತವೆ (ಶ್ಲೋ. 439).

ಬೆಳೆಯನ್ನು ಇಲಿಗಳು, ಮಿಡತೆಗಳು, ಗಿಳಿಗಳು, ಮತ್ತಿತರ ಪ್ರಾಣಿಗಳಿಂದ ರಕ್ಷಿಸುವುದು ಅತ್ಯಂತ ಲಾಭಕಾರಿ (ಶ್ಲೋ. 440).

ಬಲಿತು ಮಾಗಿದ ಬತ್ತವು ಜೀವಿಗಳಿಗೆ ಬಹಳ ಉಪಯುಕ್ತವಾದುದು. ಅದನ್ನು ಉಂಡು ಬದುಕುವ ಜನತೆ ಮೊದಲು ಅದಕ್ಕೆ ಪ್ರದಕ್ಷಿಣೆ ಬಂದು ನಮಿಸಿ, ಗೌರವಿಸಬೇಕು. ಬಳಿಕ, ಬತ್ತದ ಬಾಹ್ಯಲಕ್ಷಣಗಳು, ಕಾಳುಗಳ ಶಕ್ತಿಸಾಮರ್ಥ್ಯ, ಅದನ್ನು ಉತ್ಪಾದಿಸಲಾದ ಮಣ್ಣಿನ ಗುಣಧರ್ಮಗಳನ್ನು ನಿರ್ಧರಿಸಿದ ಬಳಿಕ ಅಥವಾ ವಾಸ್ತವ ಅನುಭವಗಳಿಂದ ಕಂಡು, ಅನಂತರ ಸೂಕ್ತ ರೀತಿಯಲ್ಲಿ ಸಂರಕ್ಷಿಸಬೇಕು (ಶ್ಲೋ. 441–442).

ಬತ್ತದ ತೆನೆಗಳು ತಮ್ಮ ನಿಯತ ಕಾಲಾವಧಿಗನುಗುಣವಾಗಿ ಕ್ರಮೇಣ ಮಾಗಿದಾಗ ಜಮೀನಿಗೆ ನೀರು ಹಾಯಿಸುವುದನ್ನು ನಿಲ್ಲಿಸಬೇಕು. ಇದು ಕೃಷಿತಜ್ಞರ ಉಪದೇಶವಾಗಿದ್ದು ಎಲ್ಲ ಬತ್ತದ ಜಮೀನುಗಳ ವಿಚಾರದಲ್ಲೂ ಅನುಸರಿಸಬೇಕಾದ ಅಂಶ (ಶ್ಲೋ. 443-444).

ಆದಕಾರಣ ಬೇಸಾಯಗಾರರು ಬೆಳೆ ಮಾಗುವ ಕಾಲದಲ್ಲಿ ತಮ್ಮ ಬೆಳೆಯನ್ನು ಎಲ್ಲ ಬಗೆಯ ವಿನಾಶದಿಂದಲೂ ಸಂರಕ್ಷಿಸುವುದರಲ್ಲಿ ಎಚ್ಚರದಿಂದಿರಬೇಕು (ಶ್ಲೋ. 445).

ಬತ್ತದ ಪೈರಿನ ಮೇಲ್ಭಾಗದ ತೆನೆಗಳು ಮಾಗಿದಾಗ ದಂಟು (ಕಾಂಡತಾಳ) ಭೂಮಿಯತ್ತ ಹೆಚ್ಚು ಬಾಗುತ್ತದೆ. ಅವು ಹೀಗೆ ಜೋಲುವುದನ್ನು ಕಂಡಾಗ ರೈತ

ತಾನೇ ಸ್ವತಃ ಇಲ್ಲವೇ ತನ್ನ ಕೂಲಿಗಾರರ ಮೂಲಕ ಜಮೀನಿನಲ್ಲಿ ಅವುಗಳನ್ನು ಇಪ್ಪತ್ತು ದಿನಗಳವರೆಗೆ ರಕ್ಷಿಸಬೇಕು. ಈಗ ಕಾಂಡ(ದಂಟು)ವೂ ಸಹ ಮಾಗಿ ಹೊಂಬಣ್ಣ ತಾಳಿದಾಗ ಬೇಸಾಯಗಾರರು ಅದನ್ನು ಕುಡುಗೋಲು ಮುಂತಾದವುಗಳಿಂದ ಕೊಯ್ಲು ಮಾಡಬೇಕು. ಹೀಗೆ ಕೊಯ್ಲು ಮಾಡಿ ಮೆದೆ ಮಾಡುವಿಕೆಯನ್ನು ಒಂದೇ ದಿನದಲ್ಲಿ ಇಲ್ಲವೇ ತಮ್ಮ ಮನೆಯವರು ಮತ್ತಿತರ ಆಳುಗಳ ಸಹಕಾರದಿಂದ ನಿರಂತರವಾಗಿ ಹಲವಾರು ದಿನಗಳಲ್ಲಿ ಮಾಡಿಮುಗಿಸಬಹುದು (ಶ್ಲೋ. 446-449).

ಕೊಯ್ಲು ಮಾಡುವ ಕಾಲದಲ್ಲಿ ಕಾಂಡ (ದಂಟು) ಗಳಿಗೆ ಪೆಟ್ಟಾಗದಂತೆ, ಎಚ್ಚರ ವಹಿಸುವುದರಿಂದ ಪ್ರಯೋಜನವಾಗುತ್ತದೆ. ಇಲ್ಲದ ಪಕ್ಷದಲ್ಲಿ ಫಸಲು ಹಾಳಿಯಿಂದ ನಾಶವಾಗುತ್ತದೆ ಇಲ್ಲವೇ ಕಳ್ಳರು ಹೊತ್ತುಕೊಂಡು ಹೋಗಬಹುದು(ಶ್ಲೋ. 450).

ಬೇಸಾಯಗಾರನು ತನ್ನೊಡನೆ ಕೊಯ್ಲು ಮಾಡಿದ ಪೈರನ್ನು ಸೇವಕರು ಮತ್ತು ಕೂಲಿಯಾಳುಗಳ ನೆರವಿನಿಂದ ಒಕ್ಕಣೆಯ ಕಣಕ್ಕೆ ಸಾಗಿಸಬೇಕು. ಕಣದಲ್ಲಿ ಕೊಯ್ಲನ್ನು ಮೂರರಿಂದ ಐದು ದಿನಗಳವರೆಗೆ ಬಿಡುವುದು ಒಳ್ಳೆಯದು. ಬಲಿತ ಕಾಂಡಗಳನ್ನು ಒಕ್ಕುವುದರಿಂದ ತೆನೆಗಳು ಸಡಿಲಗೊಂಡು ಕಾಳುಗಳು ಒಕ್ಕಣೆ ನೆಲದಲ್ಲಿ ಉದುರಿ, ಹೊಳೆವ ಮುತ್ತಿನಂತೆ ಶೋಭಿಸುತ್ತವೆ. ಬಳಿಕ ಎರಡನೆಯ ಬಾರಿಗೆ ಎತ್ತುಗಳು ಇಲ್ಲವೇ ಎಮ್ಮೆಗಳಿಂದ ಪೈರನ್ನು ತುಳಿಸುವುದರಿಂದ ಉಳಿದ ಕಾಳುಗಳೂ ಸಹ ನೆಲದಲ್ಲಿ ಉದುರುತ್ತವೆ. ಈ ರೀತಿ ಕಣದಲ್ಲಿ ಬತ್ತವನ್ನು ಒಕ್ಕಣೆಮಾಡಿದ ಬಳಿಕ ಅವರು (ಬೇಸಾಯಗಾರರು) ಹೀಗೆ ವಿಂಗಡಿಸಿದ ದಪ್ಪ ದೃಢ ಕಾಳುಗಳನ್ನು ಸಂಗ್ರಹಿಸಿಟ್ಟು ಕೊಳ್ಳಬೇಕು(ಶ್ಲೋ. 451–455).

ಬಳಿಕ ರೈತನು ಎಚ್ಚರಿಕೆಯಿಂದ ಮೊರ ಇತ್ಯಾದಿಗಳಿಂದ ಕೇರಿ, ಜಳ್ಳು ತೂರಿ, ಗಟ್ಟಿ ಕಾಳನ್ನು ರಾಶಿಯಲ್ಲಿ ಸಂಗ್ರಹಿಸಬೇಕು. ವಿವೇಕಶಾಲಿಯು ಇವುಗಳನ್ನು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ, ಅದರಲ್ಲಿಯ ಕಸಕಡ್ಡಿಗಳನ್ನು ಪ್ರತ್ಯೇಕಿಸಬೇಕು. ಬಳಿಕ ಅವುಗಳಲ್ಲಿ ಒಂದು ಪಾಲನ್ನು ದೇವರುಗಳಿಗೆ, ಒಂದು ಪಾಲು ರಾಜನಿಗೆ, ಒಂದು ಪಾಲು ವೇದಪಾರಂಗತ ಬ್ರಾಹ್ಮಣನಿಗೆ ಹಾಗೂ ಒಂದು ಪಾಲು ಆಳುಕಾಳುಗಳ ಪೋಷಣೆಗೆಂದು ಮೀಸಲಾಗಿಟ್ಟು ಉಳಿದ ಬತ್ತವನ್ನು ತನ್ನ ಮನೆಯಲ್ಲಿ ಸಂಗ್ರಹಿಸಿಟ್ಟುಕೊಳ್ಳಬೇಕು (ಶ್ಲೋ. 456-458).

ಆ ಕಾಳುಗಳನ್ನು ಎಚ್ಚರಿಕೆಯಿಂದ ಆಯಾ ಪ್ರದೇಶಗಳ ಸಂಪ್ರದಾಯಕ್ಕನುಗುಣವಾಗಿ ಕಾಥಿನ್ಯ (ಅಥವಾ ಕಾತಿಸಿ), ಚೆನ್ನಾಗಿ ಬೇಯಿಸಿ ಸುಟ್ಟ ಜೇಡಿಮಡಕೆಗಳು (ವಾಡೆ, ಗುಡಾಣ), ಗಟ್ಟಿ ಗಾಜಿನ ಪಾತ್ರೆಗಳು ಅಥವಾ ಮೂಡೆ (ಹುಗ್ಗದಿಂದ ಹೆಣೆದ ಧಾರಕಕ್ಕೆ ಮಣ್ಣು ಲೇಪಿಸಲಾಗುತ್ತದೆ) ಗಳಲ್ಲಿ ಸಂಗ್ರಹಿಸಿಡಬೇಕು. ಕೆಲವೆಡೆಗಳಲ್ಲಿ

ಗಟ್ಟಿನೆಲದಾಳದಲ್ಲಿ ಕುಳಿತೋಡಿ ಇಳಿಯಲು ಸೋಪಾನಗಳನ್ನೇರ್ಪಡಿಸಿ, ಅದರಲ್ಲಿ ಬಿತ್ತ ಸಂಗ್ರಹಣೆ ಮಾಡಬೇಕಾಗುತ್ತದೆ. ಇಂತಹ ಹಗೇವು ನಿರ್ಮಿಸುವಾಗ ಅದು ತೇವಾಂಶ, ಕಳ್ಳಕಾಕರು, ಗಿಳಿಗಳು, ಇಲಿಗಳು ಮತ್ತಿತರ ಹಾನಿಕಾರಕ ಪ್ರಾಣಿಗಳ ಬಾಧೆಯಿಲ್ಲದೆ ಸುಭದ್ರವಾಗಿದೆಯೇ ಎಂದು ವಿಚಾರವಹಿಸಿ ಖಾತ್ರಿ ಪಡಿಸಿಕೊಳ್ಳಬೇಕು (ಶ್ಲೋ. 459-462).

ಎಲ್ಲಾ ಉತ್ತಮ ಬೇಸಾಯಗಾರರೂ ಕಳಮ, ವ್ರೀಹಿ ಇತ್ಯಾದಿ ಬಿತ್ತಗಳನ್ನು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿದ ಬಳಿಕ ಈ ರೀತಿಯಲ್ಲಿ ಸಂಗ್ರಹಿಸಬೇಕೆಂದು ಸಮರ್ಥಿಸುತ್ತಾರೆ. ಹೀಗೆ ಕಾಳುತ್ಪಾದನೆಯನ್ನು ಮನೆಯಲ್ಲಿ ಸಂಗ್ರಹಿಸಿದ ಬಳಿಕ ರೈತರು ಬಿಸಿಲಿನಲ್ಲಿ ಒಣಗಿಸಿ ಎತ್ತುಗಳಿಂದ ತುಳಿಸಿದಂತಹ ಬಿತ್ತದ ಕಾಂಡ (ದಂಟು) ಗಳಿಂದ ಒಳ್ಳೆಯ ಒಣ ಕಡ್ಡಿಗಳನ್ನು ಸಂಗ್ರಹಿಸಿ ಸಣ್ಣ ಕಂತೆ (ಹೊರೆ)ಗಳಾಗಿ ಕಟ್ಟಿ, ಮನೆ ಇಲ್ಲವೇ ದನದ ಕೊಟ್ಟಿಗೆಯಲ್ಲಿ ಸಂಗ್ರಹಿಸಬೇಕು(ರಕ್ಷಿಸಬೇಕು). ಈ ಹುಲ್ಲು(ಮೇವರೆ ಮೇವು) ದನಗಳು, ಎತ್ತುಗಳು, ಎಮ್ಮೆಗಳು, ಕೋಣಗಳು, ಆಡು ಮತ್ತು ಜಿಂಕೆಗಳಿಗೂ ಸಹ ಆಹಾರವಾಗುತ್ತದೆ (ಶ್ಲೋ. 463-466).

ಜಮೀನು ಹೊಂದಿದ್ದು ಬೇಸಾಯದಲ್ಲಿ ತೊಡಗಿರುವ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು ಹಾಗೂ ಮಿಶ್ರಜಾತಿ ಜನಗಳು ಮತ್ತಿತರರು ಬೆಳೆದ ಕಾಳುಗಳನ್ನು ತಮ್ಮ ಮನೆಗಳಲ್ಲಿ ದಾಸ್ತಾನು ಮಾಡಿಕೊಂಡ ಬಳಿಕ ಧಾನ್ಯಲಕ್ಷ್ಮೀ ಹಾಗೂ ಧನಲಕ್ಷ್ಮೀಯರನ್ನು ಶಾಸ್ತ್ರೋಕ್ತವಾಗಿ ಸುಗಂಧದ್ರವ್ಯದ ಧೂಪ, ಪುಷ್ಪ ಮತ್ತು ಬಿಳಿ ವಸ್ತುಗಳಿಂದ ಪೂಜಿಸಿ, ಬ್ರಾಹ್ಮಣ ಭೋಜನ ಮಾಡಿಸಿ, ದಕ್ಷಿಣೆಯಿತ್ತು ಜಗತ್ತಿನಲ್ಲಿ ಕೀರ್ತಿ, ಸಂತೋಷ, ಸಂಪತ್ತುಗಳನ್ನು ಪಡೆದು ದೈವಕೃಪೆ ಪಡೆಯುತ್ತಾರೆ ಹಾಗೂ ತಮ್ಮ ಪತ್ನಿ ಮತ್ತು ಕರ್ತವ್ಯನಿಷ್ಠ ಮಕ್ಕಳು, ಮೊಮ್ಮಕ್ಕಳ ಸಾನಿಧ್ಯದಲ್ಲಿ ಸದಾ ಹರ್ಷೋಲ್ಲಾಸದಲ್ಲಿರುತ್ತಾರೆ (ಶ್ಲೋ. 469–473).

ಉದ್ಯಮ ಶೀಲರಾದವರು ತಮ್ಮ ಸ್ವಂತ ಸ್ಥಳ, ಅರಣ್ಯ ಪ್ರದೇಶಗಳು ಅಥವಾ ಹಳ್ಳಿಗಳಲ್ಲಿಯೂ ಸಹ ಒಳ್ಳೆಯ ಮಣ್ಣು, ಶುಷ್ಕ ಭೂಮಿ ಇಲ್ಲವೇ ಸದಾ ನೀರು ತುಂಬಿ ಸೌಕರ್ಯವಿರುವ ಫಲವತ್ತಾದ ಭೂಮಿಗಳಲ್ಲಿ ಎರಡನೆಯ ಬಾರಿ ಶೀಘ್ರ ಬೇಸಾಯಮಾಡಿ, ಎರಡನೆಯ ಬೆಳೆಯನ್ನೂ ಸಹ ತೆಗೆಯುತ್ತಾರೆ. ಆದಕಾರಣ ವಿಪುಲ ಉತ್ಪನ್ನಕ್ಕಾಗಿ ಎಲ್ಲೆಡೆಗಳಲ್ಲೂ ಎಲ್ಲ ಬಗೆಯ ಜಮೀನುಗಳಲ್ಲಿ ಪ್ರತಿವರ್ಷವೂ ಎರಡುಬಾರಿ ಬೇಸಾಯ ಮಾಡಬೇಕೆಂದು ಶಿಫಾರಸ್ಸುಮಾಡಲಾಗಿದೆ. ಆದರೆ ಎರಡನೆಯಬಾರಿ ಬೇಸಾಯಮಾಡುವ ಮುನ್ನ ಆಡು ಇಲ್ಲವೇ ದನಗಳ ಸಗಣಿ ಅಥವಾ ಕಾಂಪೋಸ್ಟ್ (?) ಗೊಬ್ಬರ ಹಾಕಿ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವುದು ಅಪೇಕ್ಷಣೀಯ. ಸಕಾಲದಲ್ಲಿ (?) ಕೆಲಸಮಾಡುವಿಕೆ ಹಾಗೂ ಬೇಡವಾದಾಗ ಮಾಡದಿರುವಿಕೆಗಳಿಂದೂ ಫಲಕಾರಿಯಾಗುತ್ತವೆ (ಶ್ಲೋ. 474-478).

ತಮ್ಮ ಬತ್ತದ ಜಮೀನಿನ ಮೇಲೆ ನಿರಂತರ ಕಾವಲಿರುವುದು, ಬೇಸಾಯವನ್ನು ಗೌರವಾದರಗಳಿಂದ ಕಾಣುವುದು, ಅದನ್ನು ಸರಿಯಾದ ವಿಧಾನಗಳಿಂದ ಅನುಸರಿಸುವುದು, ದನಕರುಗಳನ್ನು ಎಚ್ಚರವಹಿಸಿ ಕಾಪಾಡುವುದು–ಇವುಗಳಿಂದ ಬೇಸಾಯಗಾರರು ಅಧಿಕ ಫಲ ಹಾಗೂ ಚಿತ್ತಶಾಂತಿಗಳನ್ನು ಪಡೆಯುತ್ತಾರೆ. ಆದಕಾರಣ ಅನುಭವಿ ಕೃಷಿಕರು ತಮ್ಮಲ್ಲಿ ಪರಸ್ಪರ ಸೌಹಾರ್ದ ಬಾಂಧವ್ಯವಿಟ್ಟುಕೊಂಡು ಪ್ರತಿವರ್ಷ ಎರಡು ಬೆಳೆ ತೆಗೆಯುವ ಉದ್ದೇಶದಿಂದ, ತಮ್ಮ ದನಗಳು, ಆಳುಗಳು, ಬಿತ್ತನೆ, ನೀರ್ಗಾಲುವೆಗಳು, ಜಲಾಶಯಗಳು, ನೀರುತೊಟ್ಟಿ (ಕೊಳ)ಗಳು, ಕೆರೆ [illegible], ಗುದ್ದಲಿ, ಕುಡುಗೋಲು, ಇತ್ಯಾದಿಗಳು: ಕಣದನೆಲ, ಬೇಲಿ ಮತ್ತು ಜಮೀನುಗಳನ್ನು ಶ್ರದ್ಧೆಯಿಂದ ರಕ್ಷಿಸಿಕೊಳ್ಳುವುದು ತಮ್ಮ ಪ್ರಧಾನ ಕರ್ತವ್ಯವೆಂದು ಪರಿಗಣಿಸಬೇಕು. ಅಲ್ಲದೆ, ತಮ್ಮ ಸ್ಥಳೀಯ ಸಂಪ್ರದಾಯಗಳಿಗನುಗುಣವಾಗಿ ಬೇಸಾಯದ ವಿಧಾನ ಕಲೆಯನ್ನು ಅನುಸರಿಸುವುದರಿಂದ ಜೀವನದ ಮೂರು ಪುರುಷಾರ್ಥಗಳನ್ನು ಸಾಧಿಸಿದ ತೃಪ್ತಿಯಿಂದ ಅತ್ಯಂತ ಸಂತೋಷವಾಗಿರುತ್ತಾರೆ (ಶ್ಲೋ. 479-480).

ಕಶ್ಯಪರು ಹೀಗೆ ಹೇಳುತ್ತಾರೆ: ಅವರೆ ಮತ್ತು ಮಾಷ (ಫೇಸಿಯೋಲಸ್ ರೇಡಿಯೇಟಸ್), ಚನಕ (ಕಡಲೇಕಾಳು), ಮುದ್ಗ (ಫೇಸಿಯೋಲಸ್ ಮುಂಗೊ), ಕುಲುತ್ಥ (ಡೋಲಿಕಸ್ ಯೂನಿಫ್ಲೋರಸ್) ಗಳಂತಹ ಬೇರೊಂದು ದ್ವಿದಳ ಕಾಳುಗಳು : ತಿಲ, (ಎಳ್ಳು), ಮೆಣಸು ಮತ್ತು ಚಿರಕ (?)ಗಳ ಬೀಜಗಳ ಬೇಸಾಯವನ್ನು ಸಹ ಕೆಲವು ಪ್ರದೇಶಗಳಲ್ಲಿ ಮಾಡಬೇಕು (ಶ್ಲೋ. 484–485).

ಬಿತ್ತನೆ ಕಾಲದಲ್ಲಿ 'ಚತುರ' ಬೇಸಾಯಗಾರರು ಅಢಕ, ಮಾಷ, ಮುದ್ಗಗಳ ಬೀಜಗಳನ್ನು ಅವುಗಳ ಕಾಲಾನುಗುಣವಾಗಿ ಹಳ್ಳಗಳು ಮತ್ತು ಅರಣ್ಯ ಪ್ರದೇಶಗಳಲ್ಲಿ ನೇಗಿಲಿನಿಂದ ಉಳುಮೆ ಮಾಡಿ ಸಣ್ಣ ಮಳೆ ಅಥವಾ ನಾಲೆ ನೀರಿನಿಂದ ನೀರಾವರಿ ಮಾಡಲಾದ ಭೂಮಿಯಲ್ಲಿ ಬಿತ್ತಬೇಕು (ಶ್ಲೋ. 490–491).

ಆ ಕೃತಿಪಾಠಗಳಲ್ಲಿ ಅಢಕ, ಮಾಷ, ಮುದ್ಗ, ತಿಲ, ಮತ್ತು ಚನಕಗಳಲ್ಲಿ ದೊಡ್ಡ ಮತ್ತು ಸಣ್ಣಗಾತ್ರದವುಗಳೆಂಬ ಎರಡು ಬಗೆಯವೆಂದು ಹೇಳಲಾಗಿದೆ (ಶ್ಲೋ. 492).

ಎಳ್ಳು (ತಿಲ) ಬೀಜಗಳು, ಇತ್ಯಾದಿಗಳ ಬಿತ್ತನೆಯನ್ನು ನೀರಾವರಿ ಮಾಡಲಾದ ಪ್ರಸ್ಥಭೂಮಿ (ಎತ್ತರದ ಬಯಲು ಪ್ರದೇಶ)ಗಳಲ್ಲಿ ಮಾಡಲು ಶಿಫಾರಸುಮಾಡಲಾಗಿದೆ. ನಾಲ್ಕೈದು ಇಲ್ಲವೇ ಆರು ದಿನಗಳ ಬಳಿಕ ಅಢಕ ಇತ್ಯಾದಿಗಳ ಕಾಂಡಭಾಗಗಳು ಸಾಲುಗಳಲ್ಲಿ ಕಂಡುಬರುತ್ತವೆ. ವಿವಿಧ ದೇಶಗಳ ತಜ್ಞರ ವೈಯಕ್ತಿಕ ಅನುಭವಗಳ ಜೊತೆಗೆ ಗೊಬ್ಬರ ಸೇರಿಸುವುದರಿಂದ ಬೀಜಗಳು ಕುಡಿಯೊಡೆಯುವುದು ನಿಶ್ಚಿತ (ಶ್ಲೋ. 493–495).

ಬತ್ತದ ಜಮೀನುಗಳನ್ನು ತಗ್ಗು ಜಮೀನು (ಜೌಗು)ಗಳೆಂದೂ ಮುಸ ಇತ್ಯಾದಿಗಳನ್ನು ಬೆಳೆಯುವ ಜಮೀನಿಗೆ ಮೈದಾನ ಪ್ರದೇಶ (ಪ್ರಸ್ಥ ಭೂಮಿ)ಗಳೆಂದೂ ಕರೆಯಲಾಗುತ್ತದೆ. ಆದಕಾರಣ ಭಾರ್ಗವರು ಅಢಕ, ಮುಸ ಇತ್ಯಾದಿಗಳ ಬೇಸಾಯವನ್ನು ಮೈದಾನ ಪ್ರದೇಶದ ಜಮೀನುಗಳಲ್ಲಿ ಮಾಡಬೇಕೆಂದು ಶಿಫಾರಸುಮಾಡಿದ್ದಾರೆ. ಆದರೆ, ಕೆಲವು ಪ್ರದೇಶಗಳಲ್ಲಿ ಮುಸ ಇತ್ಯಾದಿಗಳ ಬಿತ್ತನೆಯನ್ನು ಬತ್ತದ ಜಮೀನು (ಎಂದರೆ ತಗ್ಗು ಭೂಮಿ)ಗಳಲ್ಲಿ ಮಾಡಬೇಕಾಗಿ ಬಂದರೆ ಅಲ್ಲಿಯ ಆ ಭೂಮಿಯಲ್ಲಿ ನೆಲೆಯಾದ ಸಂಪ್ರದಾಯಗಳ ಮೂಲಕ ಅಥವಾ ಭೂಮಿಯ ಸ್ಥಿತಿಗತಿಯ ಕಾರಣದಿಂದ ಯೋಗ್ಯವಿದ್ದು, ಕಶ್ಯಪರ ಪ್ರಕರಣಗ್ರಂಥದಲ್ಲಿ ಹೇಳಿದಂತೆ ಫಸಲುಕೊಡುತ್ತವೆ (ಶ್ಲೋ. 496–498).

ಪ್ರಚಲಿತ ಸಂಪ್ರದಾಯ, ಕಾಲ ಮತ್ತು ಪರಿಸ್ಥಿತಿಗಳಿಗನುಗುಣವಾಗಿ ಸಕಾಲದಲ್ಲಿ ಉಳುಮೆಮಾಡಿದ ತಗ್ಗು ಇಲ್ಲವೇ ಪ್ರಸ್ಥಭೂಮಿ ಜಮೀನುಗಳಲ್ಲಿ ಬೆಳೆ ತೆಗೆಯುವಂತೆಯೇ ಮೈದಾನ ಪ್ರದೇಶದಲ್ಲಿಯೂ ಸಹ ಸಾಮಾನ್ಯವಾಗಿ ಬೆಳೆ ತೆಗೆಯಲಾಗುತ್ತದೆ (ಶ್ಲೋ. 499).

ಬೇಸಾಯಗಾರರು ಪ್ರಸ್ಥಭೂಮಿ ಜಮೀನುಗಳಲ್ಲಿ ಸರಿಯಾದ ಹಂಗಾಮಿನಲ್ಲಿ ನಿಯತ ಸಾಲುಗಳಲ್ಲಿ ದೊಡ್ಡ ಅಢಕ, ಮುಸ, ಮುದ್ಗ, ಚನಕ, ಗೋಧಿ, ಕುಲತ್ಥ, ತಿಲ, ಕೋದ್ರವ, ಯವರ, ಮರೀಚಿ, ಹತ್ತಿ, ಪರಳೆಣ್ಣೆ, ಜೀರಿಗೆ, ಸಾಸುವೆ ಇತ್ಯಾದಿಗಳ ಬೀಜಗಳನ್ನು ಬಿತ್ತನೆಮಾಡಬಹುದು (ಶ್ಲೋ. 500–503).

ಅನುಭವಿ ಬೇಸಾಯಗಾರರು, ತಮ್ಮ ತಮ್ಮ ದೇಶಗಳ ಸಂಪ್ರದಾಯಗಳಿಗನುಗುಣವಾಗಿ ಸರಿಯಾದ ಹಂಗಾಮಿನಲ್ಲಿ ಆಯ್ಕೆಮಾಡಿದ ಬಿತ್ತನೆ ಬೀಜಗಳನ್ನು ಅವುಗಳನ್ನು ಪೂರ್ವಭಾವಿಯಾಗಿ ನೀರಿನಲ್ಲಿ ನೆನೆಸಿರಲಿ, ಇಲ್ಲದಿರಲಿ, ಜಮೀನಿನ ನಿಯತ ಸಾಲುಗಳಲ್ಲಿ ಅಥವಾ ಬೇರೆ ಬೇರೆ ನಿಯತ ಸಾಲುಗಳಲ್ಲಿ ಬಿತ್ತನೆಮಾಡಬೇಕು (ಶ್ಲೋ. 504–505).

ಈ ಎರಡೂ ಬಗೆಯ ಜಮೀನು (ಎಂದರೆ ಪ್ರಸ್ಥಭೂಮಿ ಮತ್ತು ತಗ್ಗು ಪ್ರದೇಶ)ಗಳಲ್ಲಿ ಬಿತ್ತಿದ ಬೀಜಗಳು ಮೊಳೆತಾಗ ಬೇಸಾಯಗಾರರು ಹೆಚ್ಚು ಕಡಮೆ ಒಂದು ತಿಂಗಳ ಅವಧಿಯಲ್ಲಿ ಜಮೀನಿನ ತುಂಬ ಕಳೆಗಳು ವಿಪುಲವಾಗಿ ಬೆಳೆದಿರುವುದನ್ನು ಕಾಣಬಹುದು. ಅವುಗಳನ್ನು ಇಡಿಯಾಗಿ (ಬೇರು ಮತ್ತು ರೆಂಬೆ) ಕಿತ್ತು ತೆಗೆದು ಬಳಿಕ ಜಮೀನಿಗೆ ನೀರು ಹಾಯಿಸಬೇಕು (ಶ್ಲೋ. 506–508).

ಅಢಕ ಭೂಮಿಯಲ್ಲಿ ಬಿತ್ತನೆಯ ಬಳಿಕ ಬಹಳಷ್ಟು ಮಳೆಯಾದರೆ, ಬೀಜಗಳು ನಾಶವಾಗುವುದು ಖಂಡಿತ. ಆದಕಾರಣ ಜಮೀನಿಗೆ ಲಘುವಾಗಿ ನೀರು ಸಿಂಪರಣೆ

ಮಾಡುವುದು ಇಲ್ಲವೇ ನಾಲಾ ನೀರಿನಿಂದ ಮಿತವಾಗಿ ನೀರಾವರಿಮಾಡುವುದು ಉತ್ತಮ (ಶ್ಲೋ. 509–510).

ಎಳ್ಳು, ಗೋಧಿ, ಕಡಲೆ, ಮಸ, ಮುದ್ಗ, ಅಢಕ ಇತ್ಯಾದಿ ಬೀಜಗಳ ಬೆಳವಣಿಗೆಗೆ ಹಾನಿಕರವಾದ ಕಾಡು ಕಳೆಗಳ ಬೆಳವಣಿಗೆಯನ್ನು ಬೇರುಸಮೇತ ನಾಶಪಡಿಸಿದ ಬಳಿಕ ಬೇಸಾಯುಗಾರನು ಪ್ರತಿಯೊಂದು ಎಳೆಯ ಸಸಿಗಳ ಬೇರಿಗೂ ಸಾರಯುಕ್ತ ಗೊಬ್ಬರ ಹಾಕಬೇಕು (ಶ್ಲೋ. 511–512).

ಪರೋಪಜೀವಿ ಬೇರು ಮತ್ತು ಹುಲ್ಲುಗಳ ಬೆಳವಣಿಗೆಯನ್ನು ಸಂಪೂರ್ಣವಾಗಿ ನಿರ್ಮೂಲಗೊಳಿಸಿದ ಬಳಿಕ ಮಸ ಇತ್ಯಾದಿಗಳ ಸಸ್ಯಗಳು ಚೆನ್ನಾಗಿ ಬೆಳೆಯುವುದು ಖಂಡಿತ. ಆನಂತರ ಅವು ಕಾಂತಿಯಿಂದ ನಳನಳಿಸಿ ಹೂಗಳು ತಲೆದೋರುತ್ತವೆ (ಶ್ಲೋ. 513).

ಹೂ ಬಿಟ್ಟನಂತರ ತೆನೆಗಳು ಕಾಣಿಸಿಕೊಳ್ಳುತ್ತವೆ, ಇವು ಕೆಂಗಂದು ಬಣ್ಣ ತಳೆದಾಗ ಅಢಕ ಇತ್ಯಾದಿಗಳು ಬಲಿತು ಮಾಗಿದ ಕಾಳುಗಳು ರೂಪುಗೊಳ್ಳುತ್ತವೆ. ಮಸ, ಅಢಕ. ಚನಕ, ಗೋಧಿ ಇತ್ಯಾದಿಗಳು ಮೂರು ತಿಂಗಳಲ್ಲಿ ಕೊಯ್ಲಿಗೆ ಬರುತ್ತವೆ. ಮತ್ತೆ ಕೆಲವಡೆ ಇನ್ನೂ ಹೆಚ್ಚು ಕಾಲಾವಧಿ ತೆಗೆದುಕೊಳ್ಳುತ್ತವೆ (ಶ್ಲೋ. 514-515).

ತೆನೆಗಳು ಕೆಂಗಂದು ಬಣ್ಣಕ್ಕೆ ತಿರುಗಿದಾಗ ಪೈರುಗಳ ಬೇರಿಗೆ ನೀರು ಚುಮುಕಿಸುವುದು ಕಾಳುಗಳ ಸಾರವನ್ನು ಹೆಚ್ಚಿಸುವುದೆನ್ನಲಾಗಿದೆ (ಶ್ಲೋ. 516).

ಈ ರೀತಿಯಲ್ಲಿ ದೈವಕೃಪೆಯಿಂದ ಪೃಥ್ವಿಯ ಎಲ್ಲೆಡೆಯಲ್ಲಿ ಮಸ, ಅಢಕ, ಎಳ್ಳು ಇತ್ಯಾದಿಗಳನ್ನು ಬೆಳೆಯಲಾಗುತ್ತದೆ.

ತೆನೆಗಳೊಳಗಿನ ಕಾಳುಗಳು ಗಟ್ಟಿಯಾದಾಗ ಸಾಲಿನಲ್ಲಿ ಬೆಳೆಸಲಾದ ಮಸ ಇತ್ಯಾದಿ ಬೆಳೆಗಳು ಕೊಯ್ಲಿಗೆ ಸಿದ್ಧವಾಗಿರುತ್ತವೆ. ಆ ಸಮಯದಲ್ಲಿ ಪೈರಿನ ಎಲೆಯಲುಗುಗಳು ಬಾಡತೊಡಗಿ ಸೊರಗುತ್ತವೆ ಹಾಗೂ ತೆನೆಗಳು ಬಾಗಿ ಜೋಲುತ್ತವೆ (ಶ್ಲೋ. 518–519).

ಆಗ, ಸರಿಯಾದ ಕಾಲಕ್ಕೆ ತಕ್ಕಂತೆ ಪ್ರಸ್ಥಭೂಮಿಯಲ್ಲಿ ಬೆಳಯಲಾದ ಎಳ್ಳು ಮತ್ತು ಗೋಧಿ ಬೆಳೆಗಳಿಗೆ ನೀರೆರೆಯಬೇಕು (ಶ್ಲೋ. 520).

ತೆನೆಗಳು (ವಿವಿಧ ಕಾಳುಗಳ) ಮೈದೋರುವ ಹಂಗಾಮು ಮತ್ತು ಕಾಲಗಳು ನಿಶ್ಚಿತವಾಗಿರುತ್ತವೆ. ವಿವಿಧ ಪ್ರಭೇದಗಳು, ವಿವಿಧ ಬೇಸಾಯ ಪ್ರಕ್ರಿಯೆಗಳು ಹಾಗೂ

ಬೆಳೆಗಳ ತೋರಿಕೆ ಭೂಮಿಯ ಗುಣಮಟ್ಟಕ್ಕನುಗುಣವಾಗಿರುತ್ತದೆ. ಕೃಷಿಯಲ್ಲಿ ಈ ಎಲ್ಲಾ ವಿಚಾರಗಳನ್ನು ಪರಿಗಣಿಸಲಾಗುತ್ತದೆ (ಶ್ಲೋ. 521).

ಆಢಕ ಇತ್ಯಾದಿಗಳ ಕಾಳುಗಳು ತೆನೆಯಲ್ಲಿ ಬಲಿತು ಗಟ್ಟಿಯಾದಾಗ ಸೇವಕರು, ಬಲಶಾಲಿಗಳಾದ ಆಳುಗಳು ಮತ್ತು ಕಾವಲುಗಾರರ ನೆರವಿನಿಂದ ಫಸಲನ್ನು ಕೊಯ್ಲು ಮಾಡಿ ಮುಂದಿನ ಉಪಯೋಗಕ್ಕಾಗಿ ಸಂರಕ್ಷಿಸುವುದಕ್ಕೆ ಸರಿಯಾದ ಸಮಯವಾಗಿರುತ್ತದೆ. ಕಾಂಡದ ದಂಟಿ (ದೇಟು) ಸಿಂದ ಕತ್ತರಿಸಿ ತೆಗೆದ ತೆನೆಗಳನ್ನು ಕಣದಲ್ಲಿ ಒಕ್ಕ (ಬಡಿಯ)ಬೇಕು. ಅನಂತರ ಬಿಸಿಲಿನಲ್ಲಿ ಒಣಗಿಸಬೇಕು. ರೈತನು ಆಢಕದ ಕಾಂಡ (ದೇಟು) ಇತ್ಯಾದಿಗಳನ್ನೂ ಸಹ ದನಗಳ ಮೇವಿಗಾಗಿ ಸಂರಕ್ಷಿಸಬೇಕು (ಶ್ಲೋ. 521–525).

ಕಣದ ನೆಲದಲ್ಲಿ ಸಂಗ್ರಹಿಸಿದ ಆಢಕದ ದೇಟು ಇತ್ಯಾದಿಗಳನ್ನು ಮನೆಯಲ್ಲಿ ಇಲ್ಲವೇ ಕೊಟ್ಟಿಗೆಯಂಗಳದಲ್ಲಿಯ ಸೂಕ್ತ ಸ್ಥಳದಲ್ಲಿ ಸಂಗ್ರಹಿಸುವುದರಿಂದ ಬಹಳಷ್ಟು ಚಿಂತೆಯ ನಿವಾರಣೆಯಾಗುತ್ತದೆ (ಶ್ಲೋ. 526).

ತನ್ನ ಕರ್ತವ್ಯವೇನೆಂದು ತಿಳಿದಿರುವ ರೈತನು ಬತ್ತ, ಆಢಕ, ಮಾಷ, ಗೋಧಿ ಮತ್ತು ಕಡಲೆಗಳ ಒಣಕಡ್ಡಿಗಳು, ಎಲೆಯಲಗುಗಳು ಮತ್ತು ದೇಟುಗಳನ್ನು ಸಹ ಸಂಗ್ರಹಿಸಿ ಸುರಕ್ಷಿತವಾಗಿಡಬೇಕು. ಇವು ಎಲ್ಲಾ ಕಾಲದಲ್ಲಿಯೂ ದನಕರುಗಳಿಗೆ ಜೀವ ಸಾಧಾರಿತ ಪೋಷಕವಾಗಿದ್ದು ಅವು ಆರೋಗ್ಯವಾಗಿ ದೃಢಕಾಯವಾಗಿರುವಂತೆ ಮಾಡುತ್ತವೆ (ಶ್ಲೋ. 527–528).

ಆತ ಗೋಧಿ, ಎಳ್ಳು, ಮಾಷ, ಆಢಕ, ಸಾಸುವೆ, ಕಿರ, ಮುದ್ಗ ಮತ್ತಿತರ ಕಾಳು ಬೆಳೆಗಳನ್ನು ಅವುಗಳಲ್ಲಿರುವ ಮರಳಕಲ್ಲುಗಳು (? ಕ್ಷುದ್ರಗ್ರಾವ), ಕಾಟು ಮತ್ತು ಗ್ರಾವ (? ಗ್ರಾವ–ಕಲ್ಲುಗಳು) ಗಳನ್ನೆಲ್ಲ ಮೊರಗಳಲ್ಲಿ ಕೇರಿ ತೂರುವುದರಿಂದ ಶೋಧಿಸಿ ಪಚನ (?) ಮತ್ತು ಚಮನ (?) ಕ್ರಿಯೆಗಳಿಂದ ಶುದ್ಧಮಾಡಿದ ಬಳಿಕ ಕಣದಲ್ಲಿ ಸಂಗ್ರಹಿಸಬೇಕು.

ಇವುಗಳನ್ನು ಶುದ್ಧಮಾಡಿ, ಬಿಸಿಲಿನಲ್ಲಿ ಒಣಗಿಸಿದ ಬಳಿಕ, ಕಡಲೆ, ಆಢಕ, ಮುದ್ಗ ಇತ್ಯಾದಿಗಳನ್ನು ಮನೆಗೆ ತಂದು ಬೇಕಾದ ಅಡಿಗೆಗೆ ಸಿದ್ಧವಾಗಿರುವಂತೆ ಬೇರೆ ಬೇರೆ ಧಾರಕಗಳಲ್ಲಿ ದಾಸ್ತಾನುಮಾಡಿ, ರಕ್ಷಿಸಬೇಕು (ಶ್ಲೋ. 531–532).

ಅನುಭವಿ ಬೇಸಾಯಗಾರರು, ಬತ್ತ, ಆಢಕ, ಮೆಣಸು ಇತ್ಯಾದಿ ಎಲ್ಲ ಬೇಸಾಯ ಸಾಧ್ಯ ಸರಕುಗಳನ್ನೆಲ್ಲ ಹಳ್ಳಿ, ಪಟ್ಟಣ, ನಗರಗಳಲ್ಲಿರುವ ಪ್ರತಿ ಬೆಳೆಗೆ ಅನು

ಕೂಲಕರವಾದ ಜಮೀನುಗಳ ವಿವಿಧ ಬಗೆಯ ಮಣ್ಣುಗಳಲ್ಲಿ ಬೇಸಾಯಮಾಡಬೇಕು. ಈ ದಿಸೆಯಲ್ಲಿ ಬೇಸಾಯ ಕಾರ್ಯಗಳನ್ನು ಆಯಾ ಸ್ಥಳೀಯ ಪದ್ಧತಿಗಳಿಗನುಗುಣವಾಗಿ ಸಕಾಲದಲ್ಲಿ ಉಚಿತ ರೀತಿಯಲ್ಲಿ ನಡೆಸಬೇಕು. ಏಕೆಂದರೆ, ಕೃಷಿ ಉದ್ಯಮವು ತಗ್ಗು ಇಲ್ಲವೇ ಪ್ರಸ್ಥಭೂಮಿಗಳಲ್ಲಿಲ್ಲೇ ನಡೆಸಲಿ ವಿಪುಲ ಲಾಭಗಳಿಸಿಕೊಡುವ ಒಂದು ಭರವಸೆಯ ಮಾರ್ಗವಾಗಿದೆ (ಶ್ಲೋ. 533–536).

ಎಲ್ಲಾ ದೇಶ ಮತ್ತು ಹಳ್ಳಿಗಳಲ್ಲಿ ಕೊದ್ರವ, ಯವರ ಮತ್ತು ಬಾರ್ಲಿಗಳನ್ನು ಸರಿಯಾದ ಹಂಗಾಮಿನಲ್ಲಿ ಬೆಳೆಯಬೇಕು. ಇವೂ ಸಹ ತುಂಬಾ ಸತ್ವಪೂರ್ಣ ಪೌಷ್ಟಿಕ ಆಹಾರವಾಗಿದ್ದು, ಅವುಗಳ ದೇಟು ದನಕರುಗಳ ಮೇವಾಗುತ್ತದೆ (ಶ್ಲೋ. 537).

ಆದಕಾರಣ ಎಲ್ಲಾ ದೇಶಗಳಲ್ಲಿಯೂ ಬೇಸಾಯಗಾರರು ವಿಶೇಷವಾಗಿ ಕೊದ್ರವ, ಯವರ ಮತ್ತು ಬಾರ್ಲಿಗಳಂತಹ ಪೌಷ್ಟಿಕವಾದ ಅಮೂಲ್ಯ ಧಾನ್ಯಗಳನ್ನು ಹಾಗೂ ಆಗಸ್ತಿ ಗ್ರಾನ್ಯ್ಡಿಪ್ಲೋರ ಮತ್ತು ಕಬ್ಬಿನ ಬೆಳೆಗಳನ್ನು ಸಹ ಬೆಳೆಯಬೇಕು (ಶ್ಲೋ. 538).

ಕಬ್ಬಿನ ಬೇಸಾಯವನ್ನು ಬಹುವಾಗಿ ಬೇಸಾಯಕ್ಕೆ ಶಿಫಾರಸ್ಸುಮಾಡಲಾಗುತ್ತದೆ. ಏಕೆಂದರೆ, ಅದು ಪೊದೆ ಸ್ವರೂಪದ ಬೆಳವಣಿಗೆ ಹೊಂದಿದ್ದು, ಬೆಲ್ಲ ಮತ್ತು ಸಕ್ಕರೆಗೆ ಮೂಲವಾಗಿರುವುದಲ್ಲದೆ ಆನೆಗಳಿಗೆ ಅತ್ಯುತ್ತಮ ಆಹಾರವಾಗಿರುತ್ತದೆ. ತಗ್ಗು ಪ್ರದೇಶ (ತರಿ) ದಲ್ಲಿ ಬೆಳೆಯಲಾದ ಕಬ್ಬು ಗಡಸಾಗಿದ್ದು ಬೆಳವಣಿಗೆಗೆ ಹೆಚ್ಚಿನ ಕಾಲಾವಧಿಯನ್ನು ತೆಗೆದುಕೊಳ್ಳುತ್ತದೆ. ಆದರೆ ಅದನ್ನು ಪ್ರಸ್ಥಭೂಮಿ ಪ್ರದೇಶಗಳಲ್ಲೂ ಸಹ ಲಾಭದಾಯಕವಾಗಿ ಬೆಳೆಸಬಹುದಾಗಿದೆ (ಶ್ಲೋ. 539–540).

ಜಮೀನಿನಲ್ಲಿ ಸಾಲು ಕುಣಿಗಳನ್ನು ತೋಡಿ ಕಬ್ಬು ಮತ್ತು ಬಾಳೆಯ ಕಸಿ (ತುಂಡು)ಗಳನ್ನು ಹೂಳಬೇಕು (ಶ್ಲೋ. 541).

ಇವುಗಳ ಬೆಳೆಗೆ ಎಲ್ಲಿಯೂ ಬೀಜಬಿತ್ತನೆಮಾಡುವುದಿಲ್ಲ. ಆಯಾ ಪ್ರದೇಶದ ಹವಾಮಾನ ಪರಿಸ್ಥಿತಿಗನುಗುಣವಾಗಿ ಕಬ್ಬಿನ ಕಸಿತುಂಡುಗಳನ್ನು ಮಾತ್ರ, ಶರತ್ಕಾಲ ಇಲ್ಲವೇ ಇನ್ಯಾವುದೇ ತಿಂಗಳಿನಲ್ಲಿ ನಾಟಿಮಾಡಿ ಅನಂತರ ಜಮೀನಿಗೆ ನೀರನ್ನು ಹಾಯಿಸಲಾಗುತ್ತದೆ. ಹತ್ತು ದಿನಗಳು ಕಳೆದ ಬಳಿಕ ಮೊಳಕೆಯೊಡೆದು ಅವುಗಳಿಂದ ಎಲೆಯಲಗು ಇತ್ಯಾದಿ ಕಾಂಡ ಭಾಗಗಳು ಬೆಳೆಯುತ್ತವೆ. ಈ ಸಸಿಗಳು ಎರಡು ತಿಂಗಳುಗಳಲ್ಲಿ ಕೊಯ್ಲಿಗೆ ಬರುತ್ತವೆ. ಮತ್ತೆ ಕೆಲವೆಡೆ ಮೂರು ತಿಂಗಳ ಕಾಲಾವಧಿ ಬೇಕಾಗುತ್ತದೆ (ಶ್ಲೋ. 542–545).

ಕಬ್ಬಿನ ಬೆಳೆ ಒಂದಾಳೆತ್ತರ ಇಲ್ಲವೇ ಇನ್ನೂ ಎತ್ತರ ಬೆಳೆದು ನಿಂತಾಗ ರೈತನು ಸಮಯಕ್ಕೆ ಸರಿಯಾಗಿ ಅವುಗಳ ಬೇರುಪಾತಿಗಳಿಗೆ [illegible] ನೀರು ಹಾಯಿಸಿ, ಬಲವಾದ ಬೀಸುಗಾಳಿ ಇತ್ಯಾದಿಗಳ ಹೊಡೆತದಿಂದ ತುಂಬಾ ಎಚ್ಚರಿಕೆವಹಿಸಿ ರಕ್ಷಿಸಬೇಕು (ಶ್ಲೋ. 546–547).

ವಾರ್ಷಿಕ ಫಸಲುಕೊಡುವ ವಿವಿಧ ಜಾತಿ ಬಾಳೆಗಿಡಗಳ ಬೇಸಾಯದಲ್ಲಿಯೂ ಸಹ ಇದೇ ರೀತಿಯ ಕ್ರಮಗಳನ್ನು ಅನುಸರಿಸಬೇಕು (ಶ್ಲೋ. 548).

ಆಯಾ ದೇಶಗಳ ಸ್ಥಿತಿಗತಿ ಮತ್ತು ಹವಾಮಾನಗಳಿಗನುಗುಣವಾಗಿ ಅನುಭವಿಗಳಾದ ಬೇಸಾಯಗಾರರು ಕಬ್ಬು ಮತ್ತು ಬಾಳೆಯ ಗಿಡಗಳನ್ನು ಎಲ್ಲ ಹಂಗಾಮುಗಳಲ್ಲೂ ಬೆಳೆಯಬೇಕು. ಅವು ಎಲ್ಲ ಸ್ಥಳಗಳಲ್ಲಿಯೂ ನಿರಂತರ ಫಸಲುಕೊಡುತ್ತವೆ (ಶ್ಲೋ. 549).

ಅನುಭವಶಾಲಿ ಬೇಸಾಯಗಾರನು, ಮಣ್ಣಿನ ಸ್ವಭಾವ (ಗುಣ) ಪರೀಕ್ಷೆಮಾಡಿದ ಬಳಿಕ, ಬೆಟ್ಟದ ಇಳಿಜಾರು, ಗುಡ್ಡದ ಮೇಲ್ಭಾಗ ಇಲ್ಲವೇ ಗಟ್ಟಿಭೂಮಿಯ ಮೇಲೆ ತನ್ನ ಒಳಿತಿಗಾಗಿ ಬಾಳೆ ಮತ್ತು ಕಬ್ಬುಗಳನ್ನು ಬೆಳೆಯಬೇಕು. ಅವು ಎಲ್ಲ ಬಗೆಯ ಮಣ್ಣುಗಳಲ್ಲಿಯೂ ನಿಯತ ಇಳುವರಿ ಕೊಡುತ್ತವೆ. ಆದರೆ ಅವುಗಳನ್ನು ಎಂದೂ ಜೌಗು ಅಥವಾ ದೋಷಯುಕ್ತ ಕುಂದುಕೊರತೆಯುಳ್ಳ, ಅಪರಿಪಕ್ವ ಮಣ್ಣಿನಲ್ಲಿ ಬೆಳೆಯಬಾರದು (ಶ್ಲೋ. 550–551).

ಆದಕಾರಣ, ರೈತನು ಕದಳೆ ಅಗಸೆ, ಸಣಬು ಇತ್ಯಾದಿ ನಾರು ತಯಾರಿಕೆಗೆ ಯುಕ್ತವಾದ ಧಾನ್ಯಬೆಳೆಗಳನ್ನು ಬೆಳೆದು, ಬೆಳೆ ಸಂರಕ್ಷಣೆಮಾಡಿ ಬಲಿತಾಗ ಮನೆಗೆ ಸಾಗಿಸಬೇಕು (ಶ್ಲೋ. 552).

ಕೆಲವೆಡೆಗಳಲ್ಲಿ, ಅತ ನಾರುಮ (ಲಿನನ್) ತಯಾರಿಕೆಗಾಗಿ ಪಿಚು ಮತ್ತು ತೂಲ ತಳಿಯ ಹತ್ತಿಯನ್ನು ಪ್ರಸ್ಥಭೂಮಿಗಳಲ್ಲಿ ಬೆಳೆಯಬೇಕು (ಶ್ಲೋ. 553).

ಉಷ್ಣ ಪ್ರದೇಶಗಳಲ್ಲಿ ಸಾಂಪ್ರದಾಯಿಕವಾಗಿ ಇಲ್ಲವೇ ಅನುಭವದಿಂದಾಗಿ ಯಾವ ಬೆಳೆ ಉಪಯುಕ್ತವೆಂದು ಕಂಡುಬಂದಿರುತ್ತದೋ ಅಂಥದನ್ನೇ ಬೆಳೆಯಬೇಕು (ಶ್ಲೋ. 554).

ಈ ವಿಚಾರದಲ್ಲಿ ಅಧಿಕೃತರೆನಿಸಿದ ಋಷಿಗಳು ಹತ್ತಿ ಮತ್ತಿತರ ಬೆಳೆಗಳ ಬೇಸಾಯವನ್ನು ಹಳ್ಳಿಯ ಸಮೀಪ ಅಥವಾ ಸುತ್ತಲೂ, ತೋಪಿನೊಳಭಾಗ ಅಥವಾ

ಜಲಾಶಯ ಇಲ್ಲವೇ ಪ್ರಸ್ಥಭೂಮಿಯ ಮೇಲಿನ ಗ್ರಾಮದ ಸಮೀಪದಲ್ಲಿ ಮಾಡಬೇಕೆಂದು ಶಿಫಾರಸುಮಾಡುತ್ತಾರೆ (ಶ್ಲೋ. 555–556).

ತರಕಾರಿ ಬೇಸಾಯ

ತರಕಾರಿ ಬೇಸಾಯವನ್ನು ಕುರಿತು ಕಶ್ಯಪರು ಈ ಮುಂದೆ ತಿಳಿಸಿದ ವಿವರಗಳನ್ನು ಕೊಟ್ಟಿದ್ದಾರೆ.

ವಿವಿಧ ಪ್ರದೇಶಗಳ ಅಕ್ಕಿ ಮತ್ತು ಅಢಕ ಇತ್ಯಾದಿ ಇತರ ಸರಕುಗಳಿದ್ದಾಗ್ಯೂ ವಿಶ್ವದಲ್ಲೆಲ್ಲಾ ಇನ್ನೂ ಆಹಾರದ ಕೊರತೆ ಕಂಡುಬರುತ್ತದೆ. ಆದಕಾರಣ, ರೈತರು ರುಚಿಕರವಾದ ತರಕಾರಿಗಳಾದ ವಾರ್ತಿಕ, ರಾಜವಾರ್ತಿಕ, ಪಾಟ್ಲಕ, ನಾಗ–ವಲ್ಲಿಕ, ಪಟೋಲಿಕ, ಬಿಳಿಬದನೆ, ಸವಕ, ಕುಂಬಳ–ತಿರುಳುಗಾಯಿಗಳು, ಕಲಟಿ, ಕುಸ್ತುಂಬರು, ಸೂರಣ, ಸಕುಟ ಮತ್ತು ಅರಿಶಿನ ಮತ್ತು ಶುಂಠಿಗಳಲ್ಲಿ ಕೆಂಪು ಮತ್ತು ಬಿಳಿಯ ಬಗೆಗಳೆರಡನ್ನೂ ಅಡುಗೆಗಾಗಿ ಬೇಸಾಯಮಾಡಬೇಕು. ಜೊತೆಗೆ ಇನ್ನಿತರ ರುಚಿಕರ ಸಸ್ಯಗಳನ್ನು ಸಹ ಬೆಳೆಯಬೇಕು, ಲೌಕಿಕನ ದೃಷ್ಟಿಯಲ್ಲಿ ಇವು ಮುಖ್ಯ ತರಕಾರಿಗಳಾಗಿವೆ (ಶ್ಲೋ. 558-563).

ಕೆಲವು ದೇಶಗಳಲ್ಲಿ ಜಾತಿ, ಆಕಾರ, ರುಚಿ ಮತ್ತು ಬಣ್ಣಗಳಿಗನುಗುಣವಾಗಿ ತರಕಾರಿ ಬಗೆಗಳು ವಿವಿಧವಾಗಿರುತ್ತವೆ (ಶ್ಲೋ. 564).

ಬೇಸಾಯಗಾರರು ದ್ರಾಕ್ಷ ಬಳ್ಳಿ, ಭಾರತೀಯ ತಪಸ್ವಿನೀ ಸಸ್ಯ (ಸುಗಂಧ ಸಸ್ಯ), ಬಿಲಕ್ಕಿ ಮುಂತಾದವನ್ನು ತಮ್ಮ ಬೇಸಾಯ ಪ್ರದೇಶಗಳಲ್ಲಿ ಬೆಳೆಸಬೇಕು (ಶ್ಲೋ. 565).

ವಿವೇಕಶಾಲಿಯಾದವನು, ಬೇಸಾಯ ಪದ್ಧತಿಗಳನ್ನು ತಿಳಿದುಕೊಂಡ ಬಳಿಕ, ತಗ್ಗು ಹಾಗೂ ಪ್ರಸ್ಥಭೂಮಿಗಳಲ್ಲೂ ಸಹ ಸ್ವಾಭಾವಿಕ ಸ್ಥಿತಿಯ ತರಕಾರಿಗಳನ್ನು ಬೆಳೆಸಬೇಕು (ಶ್ಲೋ. 566).

ಬೇಸಾಯಸಾಧ್ಯ ಸರಕುಗಳಲ್ಲಿ ಬತ್ತದ ತಳಿಗಳು ಮೊದಲ ಸ್ಥಾನವನ್ನೂ ಬೇಳೆ ಕಾಳು ಬೆಳೆಗಳು ಎರಡನೆಯ ಸ್ಥಾನವನ್ನೂ ಗಳಿಸಿದ್ದು ತರಕಾರಿಗಳು ಮೂರನೆಯ ಸ್ಥಾನ ಪಡೆಯುತ್ತವೆ. ನಾಲ್ಕನೆಯ ಸ್ಥಾನದಲ್ಲಿ ತುಪ್ಪ, ಹಾಲು, ಮೊಸರು ಇತ್ಯಾದಿಗಳು ಸೇರುತ್ತವೆ. ಈ ನಾಲ್ಕು ಬಗೆಯ ಉತ್ಪನ್ನಗಳು ಇಡಿಯ ಆಹಾರ ಸಾಮಗ್ರಿಗಳೆನಿಸುತ್ತವೆ. ಇವು ಸಕಲ ದೇವತೆಗಳ ಸಂತೋಷವರ್ಧಕವಾಗಿದ್ದು ಇಡೀ ಮಾನವ ಜನಾಂಗದ


ಬದುಕಿಗೆ ಆಧಾರವಾಗಿವೆ. ಇವುಗಳಿಂದ ಪೋಷಣೆ, ಆರೋಗ್ಯ ಮತ್ತು ದೀರ್ಘಾಯುಸ್ಸು ಲಭಿಸುತ್ತವೆ. ಇವು ಸೃಷ್ಟಿಯ ಆದಿಯಲ್ಲಿ ಪೃಥ್ವಿಯ ಮೇಲೆ ಬ್ರಹ್ಮನಿಂದ ಸೃಷ್ಟಿಗೊಂಡವು (ಶ್ಲೋ. 567–570).



ಚಿತ್ರ 5 : ಬೋಧಿವೃಕ್ಷದ ಪೂಜೆ-ಸಾಂಚಿ
ಕೃಪೆ : ಪ್ರಾಚ್ಯ ವಸ್ತು ಸಂಶೋಧನ ವಿಭಾಗ, ಭಾರತ ಸರ್ಕಾರ

ಈ ಆಹಾರ ಪದಾರ್ಥಗಳಿಂದಾಗಿ ಇಡೀ ವಿಶ್ವವು ಜೀವಂತವಾಗಿದೆ ಹಾಗೂ ಅವುಗಳ ಸೃಷ್ಟಿಮಾಡುವಾಗಿನ ಬ್ರಹ್ಮನ ಉದ್ದೇಶವು ಪ್ರಾರಂಭದಿಂದಲೇ ಸಾಫಲ್ಯಗೊಂಡಿದೆ.

ಎಲ್ಲಿ ದೇಶಗಳ ವಿವಿಧ ಬಗೆಯ ಜಮೀನುಗಳಲ್ಲಿ ಬೆಳೆಯಲಾಗುವ ಈ ಆಹಾರ ಪದಾರ್ಥಗಳು ಋಷಿಗಳು, ತಪಸ್ವಿ (ಸನ್ಯಾಸಿ) ಗಳು ಮತ್ತು ಸಕಲ ಜನತೆಯ ಬದುಕಿನ ಮೂರು




6 7 8 9

ಚಿತ್ರ 6: ಸೀದ ಬತ್ತದ ಕಾಳುಗಳು. 1 . ಸ್ವಾಭಾವಿಕ ಗಾತ್ರದ (c) ಕದಿರು ಗೊಂಚಲಿನ(s) ಸುಟ್ಟು ಕರಿಕಾದ ಚೂರುಗಳು. 2. ಊಬುಳ್ಳ (a) ಒಡೆದ ಕದಿರುಗೊಂಚಲು. ಹೊಟ್ಟು ಸುಲಿದು ಹೋಗಿರುವುದರಿಂದಾಗಿ ಕಾಳಿನ ಕೆಳಭಾಗ ತೆರೆದುಕೊಂಡಿದೆ(x8). 3. ಫಲವತ್ತಾದ ಲೆಮ್ಮ(fl) ಮತ್ತು ಪೇಲಿಯ (p)ಗಳನ್ನು ತೋರಿಸುತ್ತಿರುವ ಕದಿರುಗೊಂಚಲು, (x8). 4. ಫಲವತ್ತದ ಲೆಮ್ಮ(sl) ಮತ್ತು ಗರಿಕಾಂಡ (ರಾಚಿಲ್ಲ)ದ (r) ಉಬ್ಬಿಕೆಯನ್ನು ತೋರಿಸುತ್ತಿರುವ ಕದಿರು ಗೊಂಚಲು(x8). 5. ಊಬುಸಹಿತವಾದ ಚಪ್ಪಟೆಯಾದ ಕದಿರುಗೊಂಚಲು. 6. ತಾರಿನಂಥ ವಸ್ತುವಿನಲ್ಲಿ ಮುಳುಗಿದ ಕಾಳು (x15). 7. ಏಪಿಕ್ಯುಲಸ್(ap)ನ ಟ್ರೈಡೆಂಟೇಟ್ ಸ್ವಭಾವ ತೋರಿಸುತ್ತಿರುವ ಕದಿರು ಗೊಂಚಲಿನ ಭಾಗ (x20). 8. ಒಂದು ಊಬುಳ್ಳ (a), ಎರಡು ಕದಿರು ಗೊಂಚಲುಗಳು. ಅವುಗಳ ಆಕಾರ ಮತ್ತು ಗಾತ್ರವನ್ನು ಗಮನಿಸಿ(x8). 9. ಚದುರಂಗದ ಹಲಗೆ (c.b), ಮಾದರಿಯೊಡಗೂಡಿದ ಬತ್ತದ ಹೊರ ಅಂಚು.

ಪುರುಷಾರ್ಥ (ಧರ್ಮ, ಅರ್ಥ ಮತ್ತು ಕಾಮ) ಸಾಧನೆಗೆ ನೆರವಾಗುತ್ತವೆ. ಆದಕಾರಣ, ಬೇಸಾಯಗಾರರು ಹಳ್ಳಿಗಳು, ಪಟ್ಟಣಗಳು, ಅರಣ್ಯಪ್ರದೇಶಗಳು ಮತ್ತು ವಾಸಸ್ಥಾನ

ಗಳಲ್ಲಿ ಅದರಲ್ಲೂ ಜಲಾಶಯಗಳ ಸಮೀಪದ ಒಳ್ಳೆಯ ಮಣ್ಣಿನಲ್ಲಿ ತರಕಾರಿ ಇತ್ಯಾದಿಗಳ ಬೇಸಾಯದಲ್ಲಿ ನಿರತರಾಗಬೇಕು (ಶ್ಲೋ. 571–574).




13 14 15

ಚಿತ್ರ 6 (ಮುಂದುವರಿದಿದೆ): 10. ಗರಿಕಾಂಡ ದಪ್ಪವಾಗಿರುವ (h)ದನ್ನು ತೋರಿಸುವ ಕದಿರುಗೊಂಚಲು ಭಾಗ (x30). 11. ಬೀಜಕೋಶ(pc) ಅಂಟಿಕೊಂಡಿರುವ ಹೊಟ್ಟಿನ ಒಳನೋಟ (x32). 12. ಹೊಟ್ಟುಗಳ ಅಂಚುನೋಟ (x18). 13. ಕಾಳುಗಳು, ಅವುಗಳ ಆಕಾರ ಹಾಗೂ ಗಾತ್ರ ಗಮನಿಸಿ (x35). 14. ಕಾಳುಗಳ ಬೃಹದೀಕೃತ ನೋಟ (x8). 15. ಭ್ರೂಣ ಪ್ರವೇಶ (e)ತೋರಿಸುವ ಕಾಳಿನ ತಳಭಾಗ (x30).

ಕೃಪೆ: ಪ್ರಾಚ್ಯ ವಸ್ತು ಸಂಶೋಧನ ವಿಭಾಗ, ಭಾರತ ಸರ್ಕಾರ

ವಸಂತದಲ್ಲಿ, ಬೇಸಿಗೆಯಲ್ಲಿ ಹಾಗೂ ಕೆಲವೆಡೆ ಮಂಜುಕಾಲದಲ್ಲಿ ತರಕಾರಿ ಬೇಸಾಯಮಾಡುವುದರಿಂದ ಒಳ್ಳೆಯ ಫಲ ದೊರಕುವುದು ಖಂಡಿತ (ಶ್ಲೋ. 175).

ಬಿಳಿ ಬದನೆ, ಪಳಿ, ಜಾತಿಕ, ಮೆಣಸು, ಸವಕ ಇತ್ಯಾದಿಗಳ ಬೀಜಗಳು ಚೆನ್ನಾಗಿ ಕುಡಿಯೊಡೆಯಬೇಕಾದರೆ ಚೆನ್ನಾಗಿ ಒಣಗಿಸಿ, ಬಳಿಕ ಉಳುಮೆಮಾಡಿದ ಜಮೀನಿನಲ್ಲಿ



ಚಿತ್ರ 7: ಬೀಸುವ ಕಲ್ಲು-ಮೊಹೆಂಜೊದಾರೊ
ಕೃಪೆ: ಪ್ರಾಚ್ಯ ವಸ್ತು ಸಂಶೋಧನ ವಿಭಾಗ, ಭಾರತ ಸರ್ಕಾರ

ಬಿತ್ತಬೇಕು. ಬಿಸಿಲಿನಲ್ಲಿ ಒಣಗಿಸಲಾದ ಬಿಳಿ ಬದನೆ ಬೀಜಗಳು ಮುಂತಾದವು ಕುಡಿಯೊಡೆಯಲು, ದನಗಳ ಸಗಣಿ ಗೊಬ್ಬರ ಹಾಕಿದ ಮಣ್ಣಿನಲ್ಲಿ ಬಿತ್ತಬೇಕು. ಅವುಗಳನ್ನು ನಿಯತವಾಗಿ ನೀರೆರೆದು ಪೋಷಿಸಿ ಬಳಿಕ ಹುಲ್ಲು ಹೊದಿಕೆಯಿಂದ ಮುಚ್ಚಬೇಕು. ಮೂರು ದಿನಗಳಲ್ಲಿ ಬೀಜಗಳನ್ನು ಬಿತ್ತಿದ ತಗ್ಗುಗಳಲ್ಲಿ ಚಿಗುರು ಮೊಳಕೆಗಳು ಕಂಡುಬರುತ್ತವೆ. ಇಪ್ಪತ್ತು ದಿನಗಳ ಬಳಿಕ, ಸಸಿಗಳು ನೆಲದಲ್ಲಿ ಭದ್ರವಾಗಿ ಬೇರುಬಿಟ್ಟ ಮೇಲೆ ವಿವೇಕಶಾಲಿ ರೈತನು ಅವುಗಳನ್ನು ಸರಿಯಾಗಿ ಉಳುಮೆಮಾಡಿದ ಜಮೀನಿನಲ್ಲಿ ನಾಟಿ ಮಾಡಬೇಕು (ಶ್ಲೋ. 576–580).

ಅದೇ ಸಮಯದಲ್ಲಿ ಬೇರುಗಳಿಗೆ ನೀರುಣಿಸುವುದರಿಂದ ಸಸಿಗಳಿಗೆ ಜೀವದಾನವಾಗುತ್ತದೆ. ಬಿಳಿ ಬದನೆ ಗಿಡವು ಮಡಿ (ಪಾತಿ) ಯ ತುಂಬ ನೀರು ತುಂಬಿರುವುದರಿಂದ ಚೆನ್ನಾಗಿ ಬೆಳೆಯುತ್ತದೆ (ಶ್ಲೋ. 581).

ನೀರು ಹಾಯಿಸುವುದರಿಂದ ಪಟೋಲಿಕ, ವಲ್ಲಿಕಗಳಂತಹ ಬಳ್ಳಿಗಿಡಗಳೂ ಸಹ ಸಂಪೂರ್ಣ ಬೆಳವಣಿಗೆ ಹೊಂದಲು ನೆರವಾಗುತ್ತದೆ (ಶ್ಲೋ. 582).



ಚಿತ್ರ 8 : ಹೋರಿಯ (ಗೂಳಿಯ) ಲಾಂಛನ–ಮೊಹೆಂಜೊದಾರೊ
ಕೃಪೆ : ಪ್ರಾಚ್ಯ ವಸ್ತು ಸಂಶೋಧನ ವಿಭಾಗ, ಭಾರತ ಸರ್ಕಾರ

ತಗ್ಗು ಪ್ರದೇಶಗಳಲ್ಲಿ, ಬೇಸಿಗೆಯಲ್ಲಿ ಮಾತ್ರ ತರಕಾರಿ ಬೇಸಾಯವು ಚೆನ್ನಾಗಿರುತ್ತದೆ. ಆದರೆ ಮಳೆಗಾಲದಲ್ಲಿ ಅಷ್ಟು ಉಪಯುಕ್ತವಾಗಿರುವುದಿಲ್ಲ. ಆದಾಗ್ಯೂ ಇನ್ನಿತರ ಹಂಗಾಮುಗಳಲ್ಲಿ ಸಹ ಅದನ್ನು ಯಶಸ್ವಿಯಾಗಿ ಬೆಳೆಸಬಹುದಾಗಿದೆ (ಶ್ಲೋ. 583).

ಇದೇ ರೀತಿಯಲ್ಲಿ ಸಕೂಟಿ, ಸುರನ ಮತ್ತು ಅರಿಶಿನ ಗೆಡ್ಡೆಗಳನ್ನು ಸಹ ತಗ್ಗುಗಳಲ್ಲಿ ಅಥವಾ ಬಾಗಿದ ಕಾದ ಮಣ್ಣಿನ ಮಡಿಗಳಲ್ಲಿ ಹೂಳಬೇಕು. ಆಗ ಅವು ಚೆನ್ನಾಗಿ ಬೆಳೆಯುತ್ತವೆ. ಈ ರೀತಿ ಬಳ್ಳಿಗಿಡಗಳ ಬೇಸಾಯವು ಹಲವು ಬಗೆಯದಾಗಿರುತ್ತದೆ (ಶ್ಲೋ. 584–585).

ಕುಂಬಳ–ತಿರುಳುಗಾಯಿಗಳು, ಕಾಡುಗುಂಬಳ, ಏಲಕ್ಕಿ, ತಪಸ್ವಿನೀ ಸುಗಂಧಸಸ್ಯ ಮತ್ತು ಆಗವಳ್ಳಿಗಳನ್ನು ಸಹ ಪ್ರಸ್ಥಭೂಮಿಗಳಲ್ಲಿ ಬೆಳೆಸಬಹುದು (ಶ್ಲೋ. 586).

ಬುದ್ಧಿವಂತನಾದವನು ತಗ್ಗುಭೂಮಿ, ತೋಟ ಅಥವಾ ತೋಪುಗಳಲ್ಲಿ ಬಾಳೆ, ಕಬ್ಬು, ಅಗಸೆ (ಗೆಣ್ಣು ನೆಟ್ಟು ಬೆಳೆಸಿದ ವೀಳೆಯದೆಲೆ) ಮತ್ತು ಅಡಿಕೆ (ಪೂಗ) ಗಳನ್ನು ಬೆಳೆಸಬಹುದು. ಅತಿ ಬಾಳೆ, ಪನಸ, [illegible] (ಮೋಚ), ಬ್ರೆಡ್ ಫ್ರೂಟ್ (ಪನಸ, ರೊಟ್ಟಿ ಹಣ್ಣಿನ ಮರ), ಲಕುಚ, (ಆರ್ಟೋಕಾರ್ಪಸ್ ಲಕುಚ), ರಸಾಲ ಮತ್ತು ಅಪ್ರ ತಳಿಗಳ ಮಾವು, ಪನ್ನೇರಳೆ ಮತ್ತು ತೆಂಗಿನ ಮರಗಳನ್ನು ಮನೆಯ ಹಣ್ಣು ತೋಟ, ತೋಟಗಳು ಇಲ್ಲವೇ ಪ್ರಸ್ಥಭೂಮಿ ಅಥವಾ ತಗ್ಗು ಪ್ರದೇಶಗಳಲ್ಲಿ ಸಹ ಬೆಳೆಸಬಹುದು (ಶ್ಲೋ. 587–588).

ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು, ಮಿಶ್ರಜಾತೀಯರು, ಬೇಡರು ಮತ್ತು ಸೈನಿಕ (ಯೋಧ) ರು ಸಹ ಸಾಮರ್ಥ್ಯಕ್ಕನುಗುಣವಾಗಿ ಧನಿಯಾ, ಸೂರಣ, ವಳ್ಳಿ, ಕುಂಬಳ–ತಿರುಳುಗಾಯಿ ಮತ್ತು ಪಟೋಲಿಕ ಗಳನ್ನು ತಮ್ಮ ಸ್ವಂತ ಭೂಮಿಯಲ್ಲಿ ಅದು ಎಂತೇ ಇರಲಿ ಬೆಳೆಸಬೇಕು (ಶ್ಲೋ. 589–591).

ಮೊದಲಿಗೆ ಭೂಮಿಯನ್ನು ಉಳುಮೆಮಾಡಬೇಕು. ಬಳಿಕ ಫಲವತ್ತತೆ ಹೆಚ್ಚಿಸಲೋಸುಗ ಅದಕ್ಕೆ ದನಗಳ ಸಗಣಿಗೊಬ್ಬರ ಹಾಕಿ ಸಮಗೊಳಿಸಬೇಕು. ಅನಂತರ ನೀರ್ಗಾಲುವೆ ಅನುಕೂಲವಿರುವಂತೆ ಅಲ್ಲಲ್ಲಿ ಕುಳಿ (ತಗ್ಗು) ಗಳನ್ನು ಮಾಡಿ ಬಿಳಿಬದನೆ ಇತ್ಯಾದಿಗಳನ್ನು ನಾಟಿಮಾಡಬೇಕು. ಹಾಗೆಯೇ ಮಾಲತಿ, ಕಿಂದ, ಚಾಂಪೇಯ, ಕುಟಜ ಇತ್ಯಾದಿಗಳ ನಾಟಿಗೂ ಸಹ ನೀರ್ಗಾಲುವೆ ಸೌಲಭ್ಯವಿರುವಂತೆ ತಗ್ಗುಗಳನ್ನು ತೋಡಬೇಕಾಗುತ್ತದೆ. ಬಳಿಕ ಬೇಸಾಯಗಾರನು ಸ್ಥಳೀಯ ಪ್ರಚಲಿತ ವಿಧಾನ ಅಥವಾ ಹಂಗಾಮಿನ ಅವಶ್ಯಕತೆಗಳಿಗನುಗುಣವಾಗಿ ಕುಳಿಗಳಲ್ಲಿ ಬೀಜ ಬಿತ್ತನೆಮಾಡಬೇಕು ಇಲ್ಲವೇ ಸಸಿಗಳನ್ನು ನಾಟಿಮಾಡಬೇಕು. ಅನಂತರ ತಿಂಗಳ ಬಳಿಕ ಬಿಳಿ ಬದನೆ ಇತ್ಯಾದಿಗಳ ಬೇರುಗಳು ಸುತ್ತ ಬೆಳೆದಿರಬಹುದಾದ ಕಳೆಗಳು ಮತ್ತಿತರ ಅನಪೇಕ್ಷಣೀಯ ಬೆಳವಣಿಗೆಗಳನ್ನು ತೆಗೆದು ಶುದ್ಧಪಡಿಸಬೇಕು (ಶ್ಲೋ. 592–596).

ವಿವೇಕಿಯಾದವನು ಪ್ರತಿ ಐದು, ಆರನೆಯ ದಿನಕ್ಕೊಮ್ಮೆ ಅದರಲ್ಲೂ ವಿಶೇಷವಾಗಿ ಬೇಸಿಗೆಯಲ್ಲಿ ಕಾಲುವೆಗಳ ಮೂಲಕ ಬೇರುಗಳ ಸುತ್ತ ಮಡಿ ಪಾತಿಗಳಲ್ಲಿ ನೀರುಹಾಯಿಸಬೇಕು. ಜಮೀನಿಗೆ ಆಗಾಗ್ಗೆ ನೀರುಣಿಸಿ, ಕಳೆರಹಿತವಾಗಿಟ್ಟುಕೊಂಡಲ್ಲಿ ಇಳುವರಿ ಅಧಿಕವಾಗಿರುತ್ತದೆ (ಶ್ಲೋ. 597–898).

ಕೆಲವು ವೇಳೆ ಪರೋಪಜೀವಿ ಕೀಟಗಳು ಬಿಳಿ ಬದನೆ, ಪಟೋಲಿಕ, ವಾಲ್ಕಿ, ಸವಕ, ಸೋರೆ, ಕಲಟ, ಸೂರಣ, ಸಕಟಿ, ಅರಿಶಿನ, ಶುಂಠಿ ಇತ್ಯಾದಿಗಳ ಎಲೆಗಳ ಮೇಲೆ ಬೆಳೆಯು

ತ್ತವೆ. ಈ ಕೀಟಗಳನ್ನು ನಾಶಪಡಿಸಲು, ಬೇಸಾಯಗಾರರು ಗಿಡಗಳ ಎಲೆಗಳ ಮೇಲೆ ಬೂದಿ, ಧೂಳು ಅಥವಾ ಸುಣ್ಣದ ನೀರನ್ನು ಸ್ಥಳೀಯ ಬಳಕೆಗಳಿಗನುಗುಣವಾಗಿ ಚಿಮುಕಿಸಬೇಕು (ಶ್ಲೋ. 599–601).

ಅನುಭವಿ ಬೇಸಾಯಗಾರರು ಬೀಜಬಿತ್ತನೆ, ಅನಪೇಕ್ಷಿತ ಕಳೆಗಳ ನಿರ್ಮೂಲನ, ಹಾಗೂ ಹೂಬಿಡುವ ಕಾಲದವರೆಗೆ ಗಿಡಗಳನ್ನು ಸಂರಕ್ಷಿಸುವಿಕೆಗಳಿಗೆ ಮಾಡಬೇಕಾದ ಎಲ್ಲ ಕೆಲಸಕಾರ್ಯಗಳನ್ನು ತಮ್ಮ ಸ್ವಂತ ಮೇಲ್ವಿಚಾರಣೆಯಲ್ಲಿ ಸಾಂಪ್ರದಾಯಿಕ ಪದ್ಧತಿಗಳಿಗನುಗುಣವಾಗಿ ನಡೆಸುತ್ತಾರೆ (ಶ್ಲೋ. 602–603).

ರುಚಿಕರವಾದ ಖಾದ್ಯ ಪದಾರ್ಥಗಳನ್ನು ಪಡೆಯಲು ವಿವೇಕಿಗಳಾದವರು ಪಟೋಲಿಕ, ಬಿಳಿಬದನೆ, ತಿರುಳುಗಾಯಿಗಳು, ಜಂಬೀರ, ಮಾದಳ ಲಕೂಚ, ಪಲಕ್ಕಿ, ದ್ರಾಕ್ಷಿ ಬಳ್ಳಿ, ಖರ್ಜೂರ ಇತ್ಯಾದಿಗಳ ಬೇಸಾಯವನ್ನು ಸ್ಥಳೀಯ ಪದ್ಧತಿಗಳಿಗನುಗುಣವಾಗಿ ಸರಿಯಾದ ಹಂಗಾಮಿನಲ್ಲಿ ಕೈಗೊಳ್ಳಬೇಕು. ಈ ತರಕಾರಿಗಳು ಹೂಬಿಡುವ ಪ್ರಾರಂಭ, ಮಧ್ಯಾವಧಿ ಅಥವಾ ಅದರ ಕೊನೆಯ ಕಾಲದಲ್ಲಿ ಸಂದರ್ಭೋಚಿತವಾಗಿ ಅವುಗಳ ಎಲೆಗಳು, ಹೂವುಗಳು, ಹಣ್ಣು, ಕಾಯಿ ಅಥವಾ ಗೆಡ್ಡೆ ಬೇರುಗಳನ್ನು ಉಪಯೋಗಿಸಲಾಗುತ್ತದೆ (ಶ್ಲೋ. 604–607).

ಕೆಲವು ಹಣ್ಣುಗಳು ತಿನ್ನಲು ರುಚಿಕರವಾಗಿರುತ್ತವೆ. ಮತ್ತೆ ಕೆಲವು ರಸಹೀರುವುದಕ್ಕೆ ಚೆನ್ನಾಗಿರುತ್ತವೆ. ಇವುಗಳಲ್ಲಿ ವಿಶೇಷವಾಗಿ ಬಾಳೆಗಿಡದ ಎಲ್ಲಾ ಭಾಗಗಳು– ಬೇರು, ಕಾಂಡ, ಹೂವು, ಬಾಳೆಕಾಯಿ ಮತ್ತು ಬಾಳೆಯ ಹಣ್ಣು ಎಲ್ಲವೂ ರುಚಿಕರವಾಗಿದ್ದು ತಿನ್ನಲು ಯೋಗ್ಯವಾಗಿರುತ್ತವೆ. ಅದು ಒಂದು ಅತ್ಯುತ್ಕೃಷ್ಟ ಆಹಾರವೆಂದು ಋಷಿಗಳು ಶಿಫಾರಸ್ಸು ಮಾಡುತ್ತಾರೆ (ಶ್ಲೋ. 608–609).

ಪಟೋಲಿಕ, ಬಿಳಿಬದನೆ, ಶಾಖ (ಹಸುರು ಎಲೆಯಂತಹ ತರಕಾರಿಗಳು) ಮತ್ತು ಸವರಗಳ ಇನ್ನೂ ಮಾಗಿರದ ಎಳೆಯ ಕಾಯಿಗಳು ರುಚಿಯಾಗಿರುತ್ತವೆ. ಆದಕಾರಣ ಅವುಗಳನ್ನೂ ಹೆಚ್ಚಾಗಿ ಶಿಫಾರಸ್ಸು ಮಾಡಲಾಗಿದೆ (ಶ್ಲೋ. 610).

ಅರೆಮಾಗಿದ ಬ್ರೆಡ್ ಫ್ರೂಟ್ ರೊಟ್ಟಿ ಹಣ್ಣು, ಮಾವು ಮತ್ತು ತಿರುಳುಗಾಯಿಗಳೂ ಸಹ ತುಂಬಾ ಸ್ವಾದಿಷ್ಟವಾಗಿರುತ್ತವೆ (ಶ್ಲೋ. 611).

ಆದರೆ ಚೆನ್ನಾಗಿ ಬಲಿತು ಪಕ್ವವಾದ ಕಬ್ಬು, ತೆಂಗಿನಕಾಯಿ, ಲಕೂಚ, ಮಾವು ಇತ್ಯಾದಿಗಳ ರಸಗಳು ಹುದುಗಿಸಲು ಯೋಗ್ಯವಾದವುಗಳೆಂದು ಪರಿಗಣಿಸಲಾಗಿದೆ (ಶ್ಲೋ. 612).

ಈ ರೀತಿಯಲ್ಲಿ, ಈ ಎಲ್ಲ ತರಕಾರಿಗಳು ಮತ್ತು ಹಣ್ಣುಗಳನ್ನು ಅವುಗಳ ಜಾತಿ, ಬಿಡುವ ಕಾಲ, ಸ್ಥಳೀಯ ಬಳಕೆ ಮತ್ತು ಪಾಕಶಾಸ್ತ್ರ ಪುಸ್ತಕಗಳ ಶಿಫಾರಸ್ಸುಗಳು ಹಾಗೂ ಪಿತ್ತಾದಿ ಶಾರೀರಿಕ ಪ್ರವೃತ್ತಿಗಳಿಗನುಗುಣವಾಗಿ ಬಳಸಬಹುದಾಗಿದೆ (ಶ್ಲೋ. 613).

ಬೇಸಾಯಗಾರರು ತಮ್ಮ ಮನೆಗಳ ಸುತ್ತ, ವಿಹಾರ ಸ್ಥಾನಗಳಲ್ಲಿ, ಭೂಮಿಯಲ್ಲಿ, ಜಮೀನು ಅಂಚುಗಳಲ್ಲಿ ಕೆರೆಕೊಳಗಳ ದಂಡೆಗಳಲ್ಲಿ, ಜಲಾಶಯಗಳ ಕೆಳಭಾಗಗಳಲ್ಲಿ ಹಾಗೂ ಅವುಗಳ ತೂಬಿಗೆ ಸಮೀಪದಲ್ಲಿ ಇವುಗಳನ್ನು ಬೆಳೆದು ಬೇಸಾಯ ಕಲೆಯನ್ನು ಪಾಲಿಸಬೇಕು (ಶ್ಲೋ. 614–615).

ಅವರು ಬಾಳೆಗಿಡಗಳು, ಅಡಕೆ ಮರಗಳು, ಪುನ್ನಾಗ(ರೋಟ್ಲೇರಿಯ ಟಿಂಕ್ಟೋರಿಯಾ) ತೆಂಗು, ಮಾವು, ಬ್ರೆಡ್ (ರೊಟ್ಟಿ) ಫ್ರೂಟ್, ಏಲಕ್ಕಿ, ದ್ರಾಕ್ಷಿಬಳ್ಳಿ ಮತ್ತು ಮಾಲತಿ ಮಲ್ಲಿಗೆ ಹಾಗೂ ಬಿಳಿಬದನೆ, ವಾಲ್ಟ್, ತಿರುಳುಗಾಯಿಗಳು ಇತ್ಯಾದಿಗಳನ್ನು ಸರಿಯಾದ ರೀತಿಯಲ್ಲಿ ಬೆಳೆಯಬೇಕು (ಶ್ಲೋ. 616).

ಅಲ್ಲದೆ ತಿನ್ನಲು, ಹೀರಲು ಮತ್ತು ಜಗಿಯಲು ಯುಕ್ತವಾಗಿರುವ ವಿವಿಧ ಶಾಖ (ಕುಂಡಮೂಲಿಕೆ, ಸಸ್ಯ)ಗಳನ್ನು ಸಹ ಬೇಸಾಯಮಾಡಿ, ಪೋಷಿಸಿ, ಪಾಲಿಸಬೇಕು (ಶ್ಲೋ. 617).

ಬೇಸಾಯಗಾರರು ತಮ್ಮ ವಿವಿಧ ಜಮೀನುಗಳಲ್ಲಿ ತಗ್ಗು ಇತ್ಯಾದಿಗಳನ್ನು ಮಾಡಿದ ಬಳಿಕ ವಸಂತ, ಬೇಸಗೆ, ಮಳೆಗಾಲ, ಶರತ್ಕಾಲ, ಮಂಜುಕಾಲ ಮತ್ತು ಮಾಗಿಗಳಲ್ಲಿ ಎಲೆಗಳು, ತೊಗಟೆ, ಹೂವುಗಳು ಅಥವಾ ಗೆಡ್ಡೆ ಬೇರುಗಳು (ಖಾದ್ಯವಾಗಿದ್ದು) ರುಚಿಕರವಾಗಿ ಪೌಷ್ಟಿಕವಾಗಿರುವ ಕುಂಡಮೂಲಿಕೆ ಸಸ್ಯ ಮತ್ತಿತರ ತರಕಾರಿಗಳನ್ನು ಬೆಳೆಸಬೇಕು. ಅವುಗಳಿಂದ ಕ್ರಮಕ್ಕೆ ತಕ್ಕಂತೆ ಫಲ ಪಡೆಯಬೇಕು. ಅವರು ಹಂಗಾಮಿಗನುಗುಣವಾಗಿ ಬಳಕೆಗೆ ತಕ್ಕಂತೆ, ಹಿಂದಿನ ಋಷಿಗಳ ಸೂಚನೆ ಹಾಗೂ ಮಣ್ಣಿನ ಸ್ವಭಾವಕ್ಕನುಗುಣವಾಗಿ ಏಲಕ್ಕಿ, ಲವಂಗ, ಶುಂಠಿ, ಅಡಕೆ, ವೀಳ್ಯದೆಲೆ ಬಳ್ಳಿ, ಕಬ್ಬು, ಬಾಳೆ ಮತ್ತಿತರ ಜೀವಪೋಷಕ ಹಾಗೂ ಬಾಲ ಮೆಣಸಿನಂತಹ ಉಪಯುಕ್ತ ಸಸ್ಯಗಳನ್ನು ತಮ್ಮ ಜಮೀನು ಹಾಗೂ ಪ್ರಸ್ಥಭೂಮಿಗಳಲ್ಲಿ (ಎಂದರೆ ತರಿ ಅಥವಾ ಖುಷ್ಕಿ ಸಂದರ್ಭೋಚಿತವಾಗಿ ಬೆಳೆಯಬೇಕು (ಶ್ಲೋ. 618–623).

ಹಿಂದಿನ ಋಷಿಗಳು ತಮ್ಮ ಪ್ರಕರಣದ ಗ್ರಂಥಗಳಲ್ಲಿ ಬೇಸಾಯ ಯೋಗ್ಯವಾದುವು ಹಾಗೂ ಯುಕ್ತವೆಂದು ಸಾರಿರುವ ಎಲ್ಲವನ್ನೂ ತಮ್ಮ ಜಮೀನುಗಳಲ್ಲಿ ಸರಿಯಾಗಿ ಶ್ರದ್ಧೆಯಿಂದ ಬೆಳೆಯಬೇಕು (ಶ್ಲೋ. 624).

ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು ಮತ್ತಿತರರು ತಮ್ಮ ಕುಟುಂಬ ಜೀವನಸಾಗಣೆ ಹಾಗೂ ದೇವತೆಗಳ ಸಂತೋಷಕ್ಕಾಗಿ ಬೇಸಾಯ ಕಲೆಯನ್ನು ಸಾಧಿಸಬೇಕೆಂದು ಅಧಿಕೃತ ಗ್ರಂಥಗಳನ್ನು ಬರೆದ ಋಷಿಗಳು ಸಲಹೆಮಾಡಿದ್ದಾರೆ (ಶ್ಲೋ. 625–626).

ಸೃಷ್ಟಿಯ ಆದಿಯಲ್ಲಿ ಸೃಷ್ಟಿಕರ್ತನಾದ ಬ್ರಹ್ಮನು ಭೂಮಿಯಲ್ಲಿ ಅನೇಕ ಬಗೆಯ ಬೀಜಗಳನ್ನು ಸೃಷ್ಟಿಸಿದನು. ಅವುಗಳನ್ನು ಸೃಷ್ಟಿಯ ಎಲ್ಲ ಜೀವಿಗಳ ಅವಶ್ಯಕತೆಗಳ ಪೂರೈಕೆಗಾಗಿ ಭೂದೇವಿಯು ಎಚ್ಚರದಿಂದ ಕಾಪಾಡಿದಳು (ಶ್ಲೋ. 627).

'ಒಂದು ಬೀಜವು ನಿಸ್ಸಂದೇಹವಾಗಿಯೂ ಸಂತಾನವೃದ್ಧಿ ದ್ವಿಗುಣಗೊಂಡು ಜನತೆಗೆ ಅನೇಕ ಫಲಗಳನ್ನು ಕೊಡುತ್ತದೆ'- ಇವು ಭೂದೇವಿಯು ಮೊದಲು ನುಡಿದು, ಕೇಳಿಬಂದಂತಹ ಮಾತುಗಳು (ಶ್ಲೋ. 628).

ಭೂದೇವಿಯಿಂದ ವರ್ಣಿತವಾದ ಬೇಸಾಯ ಶಾಸ್ತ್ರವನ್ನು ಋಷಿಗಳು ಭೂಮಿಗೆ ಮುಟ್ಟಿಸಿದರು. ಅದನ್ನು ತಮ್ಮ ಪ್ರಜೆಗಳ ಪಾಲನೆಯ (ರಕ್ಷಣೆ) ಹೊಣೆಹೊತ್ತ ರಾಜರು ರಕ್ಷಿಸಿಕೊಂಡು ಬಂದರು. ಕಾಲಕ್ರಮೇಣ ಅದನ್ನು ವಿಶೇಷವಾಗಿ ಶೂದ್ರರು ಕಲಿತರು (ಶ್ಲೋ. 629).

ಆ ಮೂಲ ಕೃಷಿಪ್ರಕರಣ ಗ್ರಂಥವನ್ನೇ ಮಳೆಗಾಲಕ್ಕನುಗುಣವಾಗಿ ಭೂಸ್ವಾಮಿಗಳು ಬಹಳಷ್ಟು ಅಭಿವೃದ್ಧಿಪಡಿಸಿ ವಿಸ್ತರಿಸಿದ್ದಾರೆ (ಶ್ಲೋ. 630).

ಈ ರೀತಿಯಲ್ಲಿ ಯುಗಗಳುರುಳಿದಂತೆ, ವಿವಿಧ ದೇಶಗಳ ಜನತೆ ತಮ್ಮ ಕೃಷಿಗ್ರಂಥಗಳನ್ನು ಶ್ರದ್ಧೆಯಿಂದ ಅಭ್ಯಸಿಸಿ, ತಮ್ಮ ಜಮೀನುಗಳ ಹಾಗೂ ಸಸಿಮಡಿಗಳಲ್ಲಿ ಬೆಳೆಸಿ ಆಚರಣೆಗೆ ತಂದರು. ಇದರಿಂದಾಗಿ ಸಮೃದ್ಧ ಫಸಲು ತೆಗೆದು ರಾಜನ ನೆರವು ಹಾಗೂ ದೈವಕೃಪೆಗಳಿಂದಾಗಿ ಜೀವಿಗಳನ್ನು ಅದರಲ್ಲೂ ವಿಶೇಷವಾಗಿ ತಮ್ಮ ವಾಸಸ್ಥಾನಗಳಲ್ಲಿಯ (ನಿವಾಸಿ) ವನ್ನು ಉಳಿಸಿ ಪೋಷಿಸಿದರು (ಶ್ಲೋ. 631–632.)

ಆದಕಾರಣ, ಋಷಿಗಳು ಮತ್ತು ರಾಜರಾದವರು ಕೃಷಿ ಉದ್ಯಮಕ್ಕೆ ತಮ್ಮಿಂದಾದಷ್ಟೂ ಹೆಚ್ಚು ನೆರವು ನೀಡಬೇಕೆಂದು ಸೂಚಿಸಿದ್ದಾರೆ. ಏಕೆಂದರೆ, ಪ್ರಜೆಗಳು ಮತ್ತು ಕೂಲಿಯಾಳುಗಳ ಅನುಭವದಲ್ಲಿ ರಾಜನ ಎಂದರೆ ರಾಜ್ಯದ ನೆರವಿಲ್ಲದ ಹಳ್ಳಿ, ಪಟ್ಟಣ ಹಾಗೂ ದೇಶಗಳಲ್ಲಿ ಬೇಸಾಯವು ಸಂಪೂರ್ಣ ಏಳಿಗೆ ಹೊಂದುವುದು ಸಾಧ್ಯವಿಲ್ಲ (ಶ್ಲೋ. 633–634).

ಆದುದರಿಂದ ತಮ್ಮ ಸೀಮೆ ನಾಡಿನಲ್ಲಿಯ ಎಲ್ಲಾ ಪ್ರಾಂತ ಹಾಗೂ ಜಿಲ್ಲೆಗಳ ಒಳಿತಿಗಾಗಿ ರಾಜರಾದವರು ನೆರವಿತ್ತು ಎಲ್ಲೆಡೆಯಲ್ಲೂ ಬೇಸಾಯಕ್ಕೆ ಪ್ರೋತ್ಸಾಹ ನೀಡಬೇಕು (ಶ್ಲೋ. 635).

ತಮ್ಮ ಹಾಗೂ ಇತರರ ಕಲ್ಯಾಣವೃದ್ಧಿಗಾಗಿ, ಕೀರ್ತಿಗಾಗಿ ಯಶೋಭಿವೃದ್ಧಿ, ಸೌಶೀಲ್ಯವರ್ಧನೆ ಹಾಗೂ ದೇವತೆಗಳ ಸಂತೋಷಕ್ಕಾಗಿ ರಾಜರಾದವರು ಜಮೀನು ಹಾಗೂ ಗೋಸಂಪತ್ತುಗಳನ್ನು ವೇದಪಾರಂಗತ ಬ್ರಾಹ್ಮಣರು ಮತ್ತಿತರರಿಗೆ ಮಾನ್ಯ ಮಾಡ ಕೊಡಬೇಕಲ್ಲದೆ, ಕೃಷಿಕಾರ್ಯ ನಡೆಸಲು ಅಸಮರ್ಥರಾಗಿರುವ ಬ್ರಾಹ್ಮಣರು, ವೈಶ್ಯರು ಮತ್ತು ಶೂದ್ರರಿಗೆ ಅನುಕೂಲವಾಗುವಂತೆ ಕಾಲುವೆಗಳನ್ನು ತೋಡಿಸುವುದು ಮತ್ತಿತರ ಉಪಯುಕ್ತ ಕಾರ್ಯಗಳನ್ನು ಮಾಡಿಸಬೇಕಾದುದು ರಾಜರ ಪವಿತ್ರ ಕರ್ತವ್ಯವಾಗಿರುತ್ತದೆ (ಶ್ಲೋ. 636–638).

ಜಲಾಶಯಗಳು ಮತ್ತು ನೀರೆತ್ತುವ ಯಂತ್ರಗಳನ್ನು ಸ್ಥಾಪಿಸುವುದು ಹಾಗೂ ಅನೇಕ ರೀತಿಗಳಲ್ಲಿ ಫಸಲಿಗೆ ಹಾನಿಯುಂಟುಮಾಡುವ ಕಳ್ಳಕಾಕರ ದಂಡನೆ ಇವು ಕುಲೀನರಿಗೆ (ಉತ್ತಮರಿಗೆ) ಕೀರ್ತಿ ಹಾಗೂ ಶ್ರೇಷ್ಠತೆಗಳನ್ನು ತಂದುಕೊಡುವ ಕೆಲವು ಕಾರ್ಯಗಳಾಗಿವೆ (ಶ್ಲೋ. 639–640).

ಈ ರೀತಿಯಲ್ಲಿ ರಾಜರು, ಋಷಿಗಳು ತಿಳಿಸಿದ ವಿವಿಧ ಸಹಾಯಕಾರ್ಯಗಳನ್ನು ಮಾಡಬೇಕು (ಶ್ಲೋ. 641).

ಹಳ್ಳಿ, ನಗರ ಅಥವಾ ದೇಶಗಳಲ್ಲಿ ಕೃಷಿಕಾರ್ಯ ನಡೆಸಲು ಅಸಮರ್ಥರಾಗಿರುವ ಪ್ರಜೆಗಳ ರಕ್ಷಣೆ ಹಾಗೂ ರಾಜಧಾನಿ ಮತ್ತು ಜನಸಂದಣಿ ದಟ್ಟವಾಗಿರುವ ಪಟ್ಟಣಗಳಲ್ಲಿ ವಾಸಿಸುವವರ ಅನುಕೂಲಕ್ಕಾಗಿ ರಾಜರು ಫಲವತ್ತಾದ ಎರಡೂ ಬಗೆಯ ಜಮೀನುಗಳನ್ನು (ಎಂದರೆ) ಪ್ರಸ್ಥಭೂಮಿ ಹಾಗೂ ತಗ್ಗುಭೂಮಿ ಅಥವಾ ಶರಿ ಮತ್ತು ಖುಷ್ಕಿ ಪಡೆದುಕೊಂಡು ಬೇಸಾಯಕ್ಕಾಗಿ ತನ್ನ ಸೇವಕರು, ಸಾಮಾನ್ಯ ಪ್ರಜೆಗಳು ಹಾಗೂ ವಿವಿಧ ಮಿಶ್ರ ಜಾತಿಯ ನಿರುದ್ಯೋಗಿಗಳು ಹಾಗೂ ಶೂದ್ರರನ್ನು ನೇಮಿಸಿ ವಿವಿಧ ಆಹಾರ ಪದಾರ್ಥಗಳು, ಅಥಳ, ತರಕಾರಿಗಳು ಮತ್ತು ಮಲ್ಲಿ ಹಾಗೂ ಚಂಪಕ ಗಳಂತಹ ಉತ್ಕೃಷ್ಟ ಹೂವುಗಳ ಸಮೃದ್ಧ ಫಸಲು ತೆಗೆಯಬೇಕು (ಶ್ಲೋ. 642–646).

ತರಕಾರಿಗಳು, ಧಾನ್ಯಗಳು, ಅಥಳ, ಕಡಲೆ, ಎಳ್ಳು, ಮಸ, ಸಾಸುವೆ, ದ್ರಾಕ್ಷಿ ಮತ್ತಿತರ ಆಯಾ ಕಾಲೋಚಿತ ಹಣ್ಣುಗಳನ್ನು ಸಂಗ್ರಹಿಸಿ ಪ್ರಜಾನುಕೂಲಕ್ಕಾಗಿ ಅಂಗಡಿ

ಗಳು, ಮಾರುಕಟ್ಟೆ ಪ್ರದೇಶಗಳು, ಮಳಿಗೆ ಮತ್ತಿತರ ವಿಶೇಷವಾಗಿ ಮಾರಾಟಕ್ಕೆಂದೇ ಕಟ್ಟಿರುವ ಪ್ರದೇಶಗಳಲ್ಲಿ ಎಂದರೆ ಬೀದಿ ಚೌಕಗಳಲ್ಲಿ ವಿಶಾಲ ಅಂಗಳವಿದ್ದು ಚಾವಣಿ ಇರುವ ಅಥವಾ ಇಲ್ಲದಿರುವೆಡೆಗಳಲ್ಲೆಲ್ಲಾ ಸಂಗ್ರಹಿಸಿ, ಗ್ರಾಹಕರಿಗೆ ಅನುಕೂಲಮಾಡಿ ಕೊಡಬೇಕು (ಶ್ಲೋ. 647–650).

ಮೇಲೆ ತಿಳಿಸಿದ ಎಲ್ಲ ಸರಕುಗಳು ಮತ್ತು ಉಪಯುಕ್ತ ಅವಶ್ಯಕ ವಸ್ತುಗಳಾದ ಕಂಬಳಿಗಳು, ಬಟ್ಟೆ, ಮೊಸರು, ಹಾಲು ಮತ್ತಿತರ ಆಹಾರ ವಸ್ತುಗಳು, ಬೆಲ್ಲ, ಎಣ್ಣೆ ಮತ್ತಿತರ ಉಪಯುಕ್ತ ಕೃಷಿ ಉತ್ಪನ್ನಗಳನ್ನು ರಾಜನು ಹಳ್ಳಿ, ಪಟ್ಟಣ, ನಗರ ಹಾಗೂ ವಿಶೇಷವಾಗಿ ರಾಜಧಾನಿಯ ಮಾರುಕಟ್ಟೆ ಪ್ರದೇಶಗಳಲ್ಲಿ ಮಾರಾಟಕ್ಕಿರಿಸಬೇಕು. ಅಲ್ಲಿ (ಮಾರಾಟಕ್ಕಾಗಿ) ವ್ಯಾಪಾರದಲ್ಲಿ ಪರಿಣಿತರಾದ ಶ್ರೀಮಂತ ವಣಿಕರನ್ನು ಸರಕುಗಳ ಮಾರಾಟ ಹಾಗೂ ಖರೀದಿಗಳಿಗಾಗಿ ನೇಮಿಸಬೇಕ (ಶ್ಲೋ. 651–654).

ವಸಂತ ಹಾಗೂ ಇತರ ಹಂಗಾಮುಗಳಲ್ಲಿ ಬೆಳೆಯಲಾದ ಬೆಳೆಗಳು ಮತ್ತು ಯಂತ್ರಗಳು, ನೇಕಾರರು, ಗಾಣಿಗರು, ಹೂವಾಡಿಗರು, ಸುಗಂಧ ದ್ರವ್ಯಕಾರರು (ಗಂಧಿಗರು) ಮುಂತಾದವರು ಸಿದ್ಧಪಡಿಸಿದ ಎಲ್ಲಾ ಸರಕುಗಳನ್ನು ಸಂಗ್ರಹಿಸಿ, ಪ್ರಜಾನುಕೂಲಕ್ಕಾಗಿ ಮಾರುಕಟ್ಟೆ ಪ್ರದೇಶಗಳು, ಮಳಿಗೆ ಮತ್ತಿತರ ಎಲ್ಲ ಬಗೆಯ ಮಾರಾಟ ಸ್ಥಾನಗಳಲ್ಲಿ ಸಂರಕ್ಷಿಸಿಡಬೇಕು. ಆತ (ರಾಜ) ಅಂಥಲ್ಲಿ ನೇಮಿಸಲಾದ ವೈಶ್ಯರಿಗೆ ಅಳತೆಮಾನಗಳಾದ ಪ್ರಸ್ಥ, ಕುಂಜ, ದ್ರೋಣ, ನದಿಕ ಮತ್ತು ಕ್ಷುದ್ರಗಳನ್ನು ಅಕ್ಕಿ, ಅಥಕ ಇತ್ಯಾದಿ ಸರಕು ಅಳತೆಗಾಗಿ ಒದಗಿಸಿಕೊಡಬೇಕು(ಶ್ಲೋ. 655–659).

ರಾಜನು ಪ್ರಸ್ಥದಂತಹ ಅಳತೆಮಾನಗಳನ್ನು ಕಬ್ಬಿಣದ ಹಾಳೆ ಇಲ್ಲವೇ ಗಟ್ಟಿಮರದ ಫಲಕಗಳಿಂದ ತಯಾರಿಸಿದ್ದು ತನ್ನ ಸಾಮ್ರಾಜ್ಯದ ತುಂಬ ಅದನ್ನೇ ಬಳಕೆಗೆ ತರಬೇಕು (ಶ್ಲೋ. 660).

ಅದೇ ರೀತಿಯಲ್ಲಿ ತುಲ ಮತ್ತು ಕಾಗಳಂಥ ಅಳತೆಮಾನಗಳನ್ನು ಸಹ ಕಬ್ಬಿಣದಿಂದ ಮಾಡಿಸಿದ್ದು ರಾಜ್ಯದಲ್ಲಿ ಜಾರಿಗೆ ತರಬೇಕು. ಇವು ಒಂದೇ ಆಕಾರ, ಧಾರಣ ಸಾಮರ್ಥ್ಯ ಹಾಗೂ ಬಾಯಳತೆಗಳನ್ನು ಹೊಂದಿರಬೇಕು(ಶ್ಲೋ. 661).

ಆತ ಅಳತೆಮಾನಗಳ ಧಾರಣ ಸಾಮರ್ಥ್ಯವನ್ನು ಕುರಿತು ವೈಶ್ಯರಿಗೆ ಮತ್ತು ವಿಶೇಷವಾಗಿ ಗ್ರಾಮೀಣ ಜನತೆಗೆ ತನ್ನ ದೂತರು ಅದರಲ್ಲೂ ಬ್ರಾಹ್ಮಣರ ಮುಖೇನ ಪ್ರಚುರಪಡಿಸಬೇಕು (ಶ್ಲೋ. 662).

[illegible] ([illegible] 603).

[illegible] ([illegible] 604).

[illegible] ([illegible] 605).

[illegible] ([illegible] 666–667).

[illegible] ([illegible] 668–[illegible]).

[illegible] ([illegible] 670).

[illegible] ([illegible] 671–672).

ನರ (ನಾಯಿ) [illegible] ಗಳನ್ನು [illegible] (ಶ್ಲೋ. 673).

[illegible] (ಶ್ಲೋ. 674-675).

[illegible] (ಶ್ಲೋ. 676-677).

[illegible] (ಶ್ಲೋ. 678).

[illegible] (ಶ್ಲೋ. 679-680).

[illegible] ಅಥವಾ [illegible] (ಶ್ಲೋ. 681).

ಈ ಕಾರಣದಿಂದ ಪ್ರಾಣಿಗಳು [illegible] ಗಳನ್ನು [illegible] ಗಳನ್ನು ಸಹ [illegible] (ಶ್ಲೋ.682).

[illegible] ವಿಸ್ತಾರ [illegible] ವಲ್ಲಿ ಅಥವಾ [illegible] ಅಲ್ಲಿ ಈ ಮುಂದೆ [illegible] ನಿಯಮಗಳನ್ನು [illegible]:

ಕಾರಂಜಕ
ನಕ್ತಮಾಲ -ಪೊಂಗೇಮಿಯ ಗ್ಲಾಬ್ರ

ಇರಾಂಡ- ಹರಳೆಣ್ಣೆ ಮರ

ಭೂರ್ಜಕ-ಭೂರ್ಜ, ಬಿಟುಲ ಭೋಜಪತ್ರ

ಅರ್ಜುನ-ಟರ್ಮಿನೇಲಿಯ ಟೊಮೆಂಟೋಸ

ಸರ್ಜಕ-ಟರ್ಮಿನೇಲಿಯ ಟೊಮೆಂಟೋಸ- ವೆಟಿಕ ರೋಬಸ್ಟ

ನಿಪ-ನ್ಯೂಕ್ಲಿಯ ಕದಂಬ

ಕಾದಂಬರ್-ನ್ಯೂಕ್ಲಿಯ ಕದಂಬ

ಸಿಗ್ರು-ಮೊರಿಂಗ ಪ್ಟೆರಿಗೊಸ್ಪರ್ಮ

ವಿಭಿತಕ-ಟರ್ಮಿನೇಲಿಯ ಬೆಲ್ಲಿರಿಕ

ಆಮಲಕಿ-ಎಂಬ್ಲಿಕ್ ಮೈರೊಬಲನ್

ಹೈಮವತಿ-

ಕರ್ಣಿಕಾರ-ಪ್ಟೆರೊಸ್ಪರ್ಮಮ್ ಅಸಿರಿ ಫೋಲಿಯಮ್

ಲಿಕುಚ-ಆರ್ಟೋಕಾರ್ಪಸ್ ಲಕುಚ

ನಿಂಬ-ಅಜದಿರಚ್ತ ಇಂಡಿಕ, ಬೇವು

ಅಶೋಕ- ಜೋನೇಸಿಯ ಅಶೋಕ

ರಾಕ್ಸ್‌ಬುರ್ಗಿ ಮತ್ತು ಸರಚ ಇಂಡಿಕ

ಶಿರೀಷ-ಅಕೇಸಿಯ ಸಿರಿಸ್ಸ

ದಾಡಿಮ-ದಾಳಿಂಬೆ

ಜಂಬು-ಪನ್ನೇರಲೆ

ಕಪಿತ್ಥ-ಫೆರೋನಿಯ ಎಲಿಫೆಂಟಮ್

ಸರ್ವತೋಭದ್ರಕ-ಗ್ಮೆಲಿನ ಆರ್ಬೋರಿಯ

ಚಾಂಪೇಯಕ-ಮೈಕೆಲಿಯ ಚಂಪಕ

ಕುಶಾಕ-

ವರಾಜ-

ಸಮ-ಪ್ರೊಸಾಪಿಸ್ ಸ್ಪೈಸಿಗೇರ, ಮಿಮೋಸ ಸಮ

ಮರುವಾಕ-ಮಾರ್ಜೋರಮ್, ಒಂದು ಬಗೆಯ ಓಸಿಮಮ್

ದೇವದಾರು-ತೇಗದ ಮರ

ಶ್ರೀಪರ್ಣಕ-ಪ್ರಿಮ್ನ ಸ್ಪೈನೋಸ ಅಥವಾ ಲಾಂಜಿಫೋಲಿಯ

ತಿಂಡುಕ-ಡಯಾಸ್ಪಿರಾಸ್ ಎಂಬ್ರಿಯೊ ಪೆಟ್ರಿಸ್

ವಟ-ಆಲದ ಮರ

ಪ್ಲಾಕ್ಷ-ಫಿಕಸ್ ಇನ್‌ಫೆಕ್ಟೋರಿಯ

ಭದ್ರದಾರು-ಪೈನಸ್ ಡಿಯೊಡೋರ,ಪೈನಸ್ ಲಾಂಜಿಫೋಲಿಯ

ಪ್ರಿಯಂಗು-ಪಾನ್ಸಿಕಮ್ ಇಟಾಲಿಕಮ್- ಅಗ್ಲೇಯ ಒಡೊರೇಟ

ಕರ್ಣಿಕ-

ಟಿಪಿಂಚ-

ತಮಾಲ-ಕ್ಸಾಂತೊಕೈಮಸ್ ಪಿಕ್ಟೋರಿಯಸ್

ಸಿಂದೂವರ-ವೈಟೆಕ್ಸ್ ನೆಗುಂಡೊ

ತಿಂತ್ರಿಣಿ-

ವಂಶ-ಬಿದಿರು

ಕುಟ-

ರಸಾಲ
ಆಮ್ರ -ಮಾವು ತಳಿಗಳು

ಬದರಿ-ಜುಜುಬೆವೃಕ್ಷ, ಜಿಜಿಪಸ್ ಜುಜುಬಿ

ರಕ್ತ-ದ್ರುಮ-ಡಾಲ್ಬರ್ಗಿಯ ಔಜೈನೆನ್ಸಿಸ್

ಮಧೂಕ-ಬ್ಯಾಸಿಯ ಲ್ಯಾಟಿಫೋಲಿಯ

ಪಿಲು-ಕರೆಯ ಆರ್ಬೋರಿಯ, ಸಾಲ್ವಡೊರ ಪರ್ಸಿಕ

ಪುನ್ನಾಗ-ರಾಟ್ಲೇರಿಯ ಟಿಂಕ್ಟೋರಿಯ, ಕೆನೊಫಿಲ್ಲಂ ಇನೊಫಿಲ್ಲಂ

ಕೋವಿಂದಾರ-ಬೊಹೆನಿಯ ವರ್ಸಿಗೇಟ

ಪರಿಭದ್ರ-ಎರಿತ್ರಿನ ಇಂಡಿಕ

ಆತ ನಿಯತವಾಗಿ ನೀರು ಹಾಯಿಸುವುದರಿಂದ ರಕ್ಷಿಸಿ, ಕಾಳ್ಗಿಚ್ಚು, ಹಾನಿಕಾರಕ ಪ್ರಾಣಿಗಳು ಮತ್ತು ಕಳ್ಳರಿಂದ ಕಾಪಾಡಬೇಕು (ಶ್ಲೋ. 683-692).

ಈ ರೀತಿಯಲ್ಲಿ ಆತ ಬೇಸಾಯಗಾರರು ಮತ್ತಿತರರು ನೆಟ್ಟ ಮರಗಳ ತೋಪಿನಿಂದ ಶೋಭಿಸುವ ದೊಡ್ಡ ಬೃಹತ್ಕಾಡುಗಳನ್ನು ನಿರ್ಮಿಸಬೇಕು. ಇವು ನದೀದಂಡೆಗಳು ಮತ್ತು ಗಾಂಧಾರ, ಕುಂತಿ, ಪಾಂಚಾಲ, ಕಾಶ್ಮೀರ, ಅವಂತಿ, ಸಿಂಧು, ನೇಪಾಲ, ನಿಷಧ, ಕೋಸಲ, ಅಂಗ, ಘೂರ್ಜರ (ಗುರ್ಜರ) ಮತ್ತು ಸೌರಾಷ್ಟ್ರ ದೇಶಗಳ ಫಲವತ್ತಾದ ಭೂಮಿಗಳಲ್ಲಿರಬೇಕಲ್ಲದೆ ಸುತ್ತೂ ಕೆರೆ, ಕಾಲುವೆ ಇಲ್ಲವೇ ಕೊಳ ಇತ್ಯಾದಿಗಳನ್ನು ಹೊಂದಿರಬೇಕು. ರಾಜನು ಜನತೆಯ ಅನುಕೂಲಕ್ಕಾಗಿ ಈ ಕಾಡುಗಳನ್ನು ಕಾದು ರಕ್ಷಿಸಲು ಧೀರ ಸೈನಿಕರು ಮತ್ತು ಯೋಧರನ್ನು ನೇಮಿಸಬೇಕು (ಶ್ಲೋ. 693-696).

ರಾಜನು ಕಲ್ಲುಬಂಡೆಗಳು, ಕಾಡು ಮತ್ತಿತರ ಸ್ಥಳಗಳ ಸಮೀಪದಲ್ಲಿ ಭೂಪದರಗಳ ಪರೀಕ್ಷೆಮಾಡಿಸಿ, ಲೋಹದ ಅದುರಿನ ಗಣಿಗಳಿಗಾಗಿ ಶೋಧಿಸಬೇಕು (ಶ್ಲೋ. 697).

ಕಬ್ಬಿಣ, ತಾಮ್ರ, ಚಿನ್ನ, ಬೆಳ್ಳಿ, ಕೆಮ್ಮಣ್ಣು ಇತ್ಯಾದಿಗಳ ಗಣಿಗಳನ್ನು ಶೋಧನೆ ಮಾಡಿಸಿದ ಬಳಿಕ ಹಳ್ಳಿ ಮತ್ತು ನಗರಗಳಲ್ಲಿಯ ಪರಿಣತ ಕಮ್ಮಾರರು, ಕಲ್ಲುಕುಟಿಗರು, ಮತ್ತು ಅಕ್ಕಸಾಲಿಗರಿಂದ ವಿವಿಧಬಗೆಯ ಯುದ್ಧ ಶಸ್ತ್ರಾಸ್ತ್ರಗಳು ಮತ್ತು ಕೃಷಿ ಉಪಕರಣಗಳನ್ನು ಮಾಡಿಸಬೇಕು. ಶಸ್ತ್ರಾಸ್ತ್ರಗಳನ್ನು ಸೈನಿಕರಿಗೆ ಹಂಚಬೇಕಲ್ಲದೆ ಪಟ್ಟಣ, ಅರಮನೆ ಹಾಗೂ ಕೋಟೆಗಳ ರಕ್ಷಣೆಗಾಗಿ ಸೇನಾಶಿಬಿರಗಳಲ್ಲಿ ಸಹ ಇಟ್ಟಿರಬೇಕು. ಹಾಗೆಯೇ ಕೃಷಿ ಉಪಕರಣಗಳನ್ನು ಗ್ರಾಮೀಣ ಜನತೆಗೆ ಹಂಚಬೇಕು (ಶ್ಲೋ. 698–701).

ಆತ ಗಣಿಗಳಿಂದ ತೆಗೆದ ಚಿನ್ನಬೆಳ್ಳಿ ಹಾಗೂ ಸಾಗರದಿಂದ ತೆಗೆದ ಹವಳ ಮತ್ತು ಮುತ್ತುಗಳಿಂದ ಬಗೆಬಗೆಯ ಆಭರಣಗಳನ್ನು ಮಾಡಿಸಿ, ಮೊದಲಿಗೆ ದೇವತೆಗಳಿಗೂ, ಬ್ರಾಹ್ಮಣರಿಗೂ ದಾನವಿತ್ತ ಬಳಿಕ ತಾನೂ ಅವುಗಳನ್ನು ಧರಿಸಿ, ತನ್ನ ರಾಣಿ ಮತ್ತು ಅಂತಃಪುರದ ಸ್ತ್ರೀಯರಿಗೆ ಅಲಂಕರಿಸಿಕೊಳ್ಳಲು ಇತ್ತು ಆನಂದಿಸಬೇಕು (ಶ್ಲೋ. 703-704.)

ಈ ರೀತಿಯಲ್ಲಿ ತನ್ನ ದೇಶದಲ್ಲೆಲ್ಲಾ ಜನತೆಯ ನೆಮ್ಮದಿಗೆ ಅವಶ್ಯವಿರುವ ಎಲ್ಲ ವಸ್ತುಗಳನ್ನೂ ಒದಗಿಸಬೇಕು (ಶ್ಲೋ. 705).

ಬೇಸಾಯಕಾರ್ಯ, ಬಿತ್ತನೆ ಇತ್ಯಾದಿಗಳನ್ನು ಕಾಲ, ಹಂಗಾಮು, ಶೀತ ಮತ್ತು ಉಷ್ಣ ಪ್ರದೇಶಗಳು-ಇವುಗಳಿಗನುಗುಣವಾಗಿ ನಿಯತಗೊಳಿಸಿ ಬೇಸಾಯವನ್ನು ಅಭಿವೃದ್ಧಿ ಪಡಿಸಬೇಕು (ಶ್ಲೋ. 706).

ಎಲ್ಲ ಪರಿಣಾಮಗಳನ್ನೂ ಗಮನದಲ್ಲಿರಿಸಿಕೊಂಡು, ಮಣ್ಣಿನ ಸಾಮರ್ಥ್ಯ ಹಾಗೂ ಗೋಪಾಲ ಪರಿಸ್ಥಿತಿ, ಜಲಾಶಯ ಮತ್ತು ಮಳೆಗಾಲ ಇತ್ಯಾದಿಗಳಿಗನುಗುಣವಾಗಿ ಆತ ಬೇಸಾಯಕಾರ್ಯಗಳನ್ನು ನಡೆಸಬೇಕು(ಶ್ಲೋ. 707).

ರಾಜನು ಸಂತೋಷಚಿತ್ತನಾಗಿದ್ದರೆ, ಜಗತ್ತಿನಲ್ಲಿ ಎಲ್ಲವೂ ಸುಗಮವಾಗಿ ಜರುಗುತ್ತದೆ. ಆದರೆ ಆತ ದುಃಖಿಯಾಗಿದ್ದರೆ ಎಲ್ಲವೂ ನಾಶವಾಗುತ್ತದೆ(ಶ್ಲೋ. 708).

ಆದಕಾರಣ, ಸಂತೋಷಚಿತ್ತನಾದ ರಾಜನು ತನ್ನ ರಾಜ್ಯದಲ್ಲಿ ಸಮೃದ್ಧಿಯನ್ನು ಬಯಸಿ, ಬೇಸಾಯಗಾರರಿಂದ ನಗದು ಇಲ್ಲವೇ ಸರಕುರೂಪದಲ್ಲಿ ಭೂಕಂದಾಯ ವಸೂಲುಮಾಡಿ, ಸಕಲ ಚರಾಚರಜೀವಿಗಳನ್ನು ತನ್ನ ಸ್ವಂತ ಕುಟುಂಬದವರಂತೆ ನ್ಯಾಯ ನಿಷ್ಠೆಯಿಂದ ಪಾಲಿಸಬೇಕು (ಶ್ಲೋ. 709–710).

ಗೋಧಿ ಬೇಸಾಯ

ಕ್ರಿಸ್ತಶಕದ ಪೂರ್ವದಲ್ಲಿಯೇ ಗೋಧಿಬೆಳೆ ಪರಿಚಿತವಾಗಿದ್ದರೂ, ಅದು ಅಲ್ಲಿಂದೀಚೆಗೇ ಪ್ರಾಮುಖ್ಯತೆಯನ್ನು ಪಡೆಯಿತು. ಅದು 'ಮ್ಲೇಚ್ಛ'(ನಾಸ್ತಿಕರು)ರು 'ಅನಾಗರಿಕರು', ಪ್ರಾಯಶಃ ಗ್ರೀಕರು ಮತ್ತು ಭಾರತದ ಹೊರಗಿನ ಜನಗಳ ಪ್ರಮುಖ ಆಹಾರವಾಗಿದ್ದು 'ಮ್ಲೇಚ್ಛಭೋಜನ' (ನಾಸ್ತಿಕ ಆಹಾರ) ಎಂಬ ಹೆಸರುಪಡೆದಿತ್ತು. ಬಹಳ ಕಾಲದವರೆಗೆ 'ಯವನ'-ಒಂದುಬಗೆಯ ಬಾರ್ಲಿ ಎಂದೇ ಹೆಸರಾಗಿದ್ದಿತು. ಒಬ್ಬ ಗ್ರೀಕ್ ಇತಿಹಾಸಕಾರನೂ ಸಹ ಗೋಧಿಯ ಬಗ್ಗೆ ತಿಳಿಸಿದ್ದಾನೆ. ಪರಾಶರರು ಕೃಷಿಸೂತ್ರದಲ್ಲಿ ಗೋಧಿಯು ಚಳಿಗಾಲದ ಬೆಳೆಯೆಂದಿದ್ದಾರೆ.

ಕಬ್ಬಿನ ಬೇಸಾಯ

ಭಾರತದಲ್ಲಿ ಕಬ್ಬಿನ ಬೇಸಾಯವು ಬಹಳಷ್ಟು ಪುರಾತನವಾದುದು. ಋಗ್ವೇದ ಕಾಲದ ಆರ್ಯರು ಸಹ ಕಬ್ಬು ತಿಳಿದಿದ್ದರು. ಪ್ರಾಯಶಃ ಇಕ್ಷ್ವಾಕು ವಂಶದ ಹೆಸರೂ ಸಹ ದೊಡ್ಡ ಕಬ್ಬಿನ ತೋಟದೊಡನೆ ಸಂಬಂಧಿಸಿರಬೇಕು. ಬಹುಶಃ ಕಬ್ಬನ್ನು ಬಹುವಾಗಿ ಜಗಿದು ತಿನ್ನುತ್ತಿದ್ದರು ಹಾಗೂ ಕೆಲವುವೇಳೆ ಹಿಂಡಿ ರಸವನ್ನು ಕುಡಿಯುತ್ತಿದ್ದರು. ಕಬ್ಬಿನ ರಸವನ್ನು ಬಿಸಿಮಾಡಿರಿಸಿ ಇಂಗಿಸುವ ಆಲೋಚನೆ ಹೊಳೆದುದು ಕಾಲಾಂತರದಲ್ಲಿಯೇ. ಈ ವಿಧಿಯಲ್ಲಿಯ ಪ್ರಾಚೀನ ಕಬ್ಬು ಉತ್ಪನ್ನವನ್ನು 'ಗುಳ' ಅಥವಾ 'ಗುಡ' ಉಂಡೆಗಳೆನ್ನಲಾಗುತ್ತಿತ್ತು. ಬಂಗಾಳಪ್ರದೇಶದಲ್ಲಿ ಅದನ್ನು ಬುರುಡೆ–ಮುದ್ದೆಯ ಹೋಲಿಕೆ ಆಧಾರದ ಮೇಲೆ 'ಭೇರಿ' ಅಥವಾ 'ಭೇಲಿ' ಎನ್ನಲಾಗುತ್ತಿತ್ತು. ಅಂದು ಹರಳುಗೊಳಿಸುವ ಪ್ರಯತ್ನವಿರಲಿಲ್ಲ. ಕಾಲಕ್ರಮೇಣ ಮುಂದಿನ ಘಟ್ಟ ಆರಂಭವಾಯಿತು, ಅಲ್ಲಿಂದೀಚೆಗೆ

ಹರಳುಗೊಳಿಸುವಿಕೆಗೆ ಅವಕಾಶವಾಗಿ 'ಸಿತಫಲ' ಎಂಬ ಶಿಲಾಸ್ಫಟಿಕದಂತೆ ಬೆಳ್ಳಗಿರುವ ಹರಳುಗಳ ಉತ್ಪನ್ನದಲ್ಲಿ ಕೊನೆಗೊಂಡಿತು. ಈ ಹರಳುರೂಪದ ಸಕ್ಕರೆ ತಯಾರಿಕೆಯ ವಿವಿಧ ಉತ್ಪನ್ನಗಳನ್ನು ಕುರಿತ ನಿಖರ ವೈಜ್ಞಾನಿಕ ವರ್ಗೀಕರಣವು ವೈದ್ಯಕೀಯ ಪುಸ್ತಕಗಳಲ್ಲಿ ದೊರೆಯುತ್ತದೆ. ಚರಕನಿಗೆ ಎರಡು ಬಗೆಯವು ಮಾತ್ರ ತಿಳಿದಿದ್ದರೆ, ಸುಶ್ರುತನ ಕಾಲದ ವೇಳೆಗೆ ಈ ಸಂಖ್ಯೆಯು ಹನ್ನೆರಡಕ್ಕೇರಿದ್ದುದು ಕುತೂಹಲಕಾರಿಯಾಗಿದೆ. ಸುಶ್ರುತನು ಹೇಳುವ ಹನ್ನೆರಡುಬಗೆಗಳಲ್ಲಿ 'ತಫಸ' ಎಂಬುದು ಒಂದು. ಇದು ಈಚಿನ ಆಧುನಿಕ ಬಗೆಗಳ ಕಾಡುಮೂಲವೆಂಬುದು ವಿದಿತ. ಬಂಗಾಳದ ವಾಯುವ್ಯ ಭಾಗದಲ್ಲಿ ಇನ್ನೂ 'ಉರಿಅಖ್' ಎಂಬ ತಳಿಯ ಕಬ್ಬಿರುವುದು ಗಮನಾರ್ಹ ಅಂಶವಾಗಿದೆ. ಇದು ವಿಪುಲವಾಗಿ ದೊರೆಯುತ್ತಿದ್ದಲ್ಲಿ ಬೇಸಾಯಗಾರರು ಬೀಜಗಳನ್ನು ಬೇಸಾಯವೃದ್ಧಿಗೆ ಬಳಸುತ್ತಾರೆ. ಇಲ್ಲಿ 'ಉರಿ' ಎಂಬ ವಿಶೇಷಣದ ಅರ್ಥ ಕಾಡುಬಗೆ (ಹಳಗಿಲ್ಲದ್ದು) ಎಂದು. ಇದು 'ಉರಿಧನ್' ಎಂಬಲ್ಲಿರುವ ವಿಶೇಷಣಕ್ಕೆ ಹೋಲಿಕೆಯಾದುದು. ಸುಶ್ರುತ ಹೇಳಿರುವ ಹನ್ನೆರಡು ಬಗೆಯ ತಳಿಗಳಲ್ಲಿ 'ಪೌಂಡ್ರಕ' ಅಥವಾ 'ಪೌಂಡ' ಎಂಬುದೂ ಒಂದು. ಇದು ನಮ್ಮ ಬೇಸಾಯಗಾರರಲ್ಲಿ ಬಳಕೆಯಲ್ಲಿರುವ 'ಪೌಂಡ' ಮತ್ತು 'ಪುಂಡ್ರಿ' ತಳಿಗಳಾಗಿವೆ. ಇವು ಸ್ಥಳೀಯ ಕಬ್ಬುತಳಿಗಳಲ್ಲಿ ಅತ್ಯುತ್ತಮವಾದವುಗಳೆಂಬುದು ನಿಸ್ಸಂದೇಹವಾದುದು. ಅಮರಕೋಶದ ವ್ಯಾಖ್ಯಾನಕಾರರು ಈ ತಳಿಯನ್ನು ಪುಂಡ್ರ ಅಥವಾ ಉತ್ತರ ಬಂಗಾಳದಲ್ಲಿ ಬೆಳೆಯಲಾಗುತ್ತಿದ್ದುದರಿಂದಾಗಿ ಅದಕ್ಕೆ ಅದೇ ಹೆಸರು ಬಂದಿದೆಯೆಂದು ತಿಳಿಸುತ್ತಾರೆ. ದೇಶವೂ ಇದರಿಂದಾಗಿಯೇ ಆ ಹೆಸರನ್ನು ಪಡೆದಿರುವಂತೆ ತೋರುತ್ತದೆ. ಇದನ್ನು 'ಗುಡ' ಎಂಬುದರಿಂದ 'ಗೌಡ' ಎಂಬ ಹೆಸರು ಬಂದಿರುವುದಕ್ಕೆ ಹೋಲಿಸಬಹುದಾಗಿದೆ. ಈ ತಳಿಯನ್ನು ಬೇಸಾಯಮಾಡುವ ಜನಕ್ಕೆ 'ಪೌಂಡ' ರೆಂಬ ಹೆಸರು ಬಂದಿದೆ.

ಕೌಟಿಲ್ಯನು ಕಬ್ಬು ಬೇಸಾಯವು ಅನೇಕತೊಂದರೆಗಳು ಹಾಗೂ ವೆಚ್ಚಬಾಬತ್ತನ್ನೊಳಗೊಂಡ ಬೆಳೆಯಾಗಿದೆಯೆಂಬುದನ್ನು ಗಮನಿಸಿದ್ದಾನೆ. ಈ ತೊಂದರೆಗಳನ್ನು ಪರಸ್ಪರ ಸಹಕಾರದಿಂದಾಗಿ ಪರಿಹರಿಸಿಕೊಳ್ಳಲಾಗುತ್ತಿತ್ತು. ಬೇಸಾಯಗಾರರು ಕಬ್ಬು ಬೇಸಾಯ ಹಾಗೂ ಸಕ್ಕರೆ ತಯಾರಿಕೆಗಾಗಿಯೇ ತಮ್ಮ ತಮ್ಮಲ್ಲಿ 'ಗ್ರಂಥ' ಅಥವಾ ಕೂಟ ಇಲ್ಲವೇ ಸಂಘಗಳನ್ನು ಮಾಡಿಕೊಳ್ಳುತ್ತಿದ್ದರು. ಇಂಥಲ್ಲಿ ಸದಸ್ಯರು ತಾವೇ ಸ್ವಂತವಾಗಿ ತಮ್ಮ ಆವಶ್ಯಕತೆಗಳನ್ನು ಪೂರೈಸಿಕೊಳ್ಳಲು ಅಸಮರ್ಥರಾದಾಗ ಸಹಕಾರವನ್ನು ನೀಡಲಾಗುತ್ತಿತ್ತು. ಇದಕ್ಕೆ ಬಂಗಾಳಿಯಲ್ಲಿ 'ಗಂತ' ಎಂದು ಹೆಸರು. ಇದು ಇತ್ತೀಚೆಗೆ ಬಳಕೆಗೆ ಬಂದಂತಹ ಹೊಸ ಆಲೋಚನೆಯೇನಲ್ಲ. ನಮ್ಮ ದೇಶದಲ್ಲಿ ತೀರ ಸಾಮಾನ್ಯವಾಗಿರುವ ಹಾಲುಗಾರಿಕೆ–ಉತ್ಪನ್ನ ಪದ್ಧತಿಯೂ ಸಹಕಾರದ ಒಂದು ರೂಪವಾಗಿದೆ.

ಹಣ್ಣುಗಳ ಬೇಸಾಯ

ಕಾಡುಗಳಲ್ಲಿ ಅನೇಕ ಬಗೆಯ ಖಾದ್ಯ ಹಣ್ಣುಗಳು ದೊರೆಯುತ್ತಿದ್ದವು. ಅವುಗಳಲ್ಲಿ–ಮಾವು, ದಾಳಿಂಬೆ, ಹಲಸು, ಬಾಳೆ, ಖರ್ಜೂರ, ಬಿಲ್ವ, ಕಪಿತ್ಥ, ಪನ್ನೇರಳೆ, ಜುಜುಬೆ, ಅದೃಷ್ಟಫಲ, ತೆಂಗು, ತಾಳೆ ಇತ್ಯಾದಿಗಳು ಅತಿಸಾಮಾನ್ಯವಾದ ಉತ್ತಮಫಲಗಳಾಗಿವೆ. ದ್ರಾಕ್ಷಿ, ಖರ್ಜೂರ ಮತ್ತು ತಾಳೆಜಾತಿಮರಗಳನ್ನು ವಿಶೇಷವಾಗಿ ಪಂಜಾಬ್ ಹಾಗೂ ವಾಯುವ್ಯದ ಗಡಿಪ್ರದೇಶಗಳಲ್ಲಿ ಬೆಳೆಯಲಾಗುತ್ತಿತ್ತು. ಪಾಣಿನಿಯು ಕಪಿಸ ಎಂಬುದು ಭಾರತದಲ್ಲಿ ದ್ರಾಕ್ಷಿಬೆಳೆಯ ಒಂದು ಪ್ರಮುಖ ಜಿಲ್ಲೆಯೆಂದು ತಿಳಿಸಿದ್ದಾನೆ. (also. str. XV. i. 8) ಈ ದಿಸೆಯಲ್ಲಿ ಆನೆಯ ದಂತಗಳಷ್ಟು ಗಾತ್ರದ ಬಾಳೆಯ ಹಣ್ಣುಗಳು, ನೀರು ಗುಂಡಿಗಳಷ್ಟು ಗಾತ್ರದ ಹಲಸಿನಹಣ್ಣುಗಳು ಎಂಬುವಲ್ಲ ಹಣ್ಣುಗಳ ಅಸಾಮಾನ್ಯಗಾತ್ರದ ಬೆಳವಣಿಗೆಯನ್ನು ಕುರಿತು ತಿಳಿಸಿರುವ ಅತಿಶಯೋಕ್ತಿಗಳಾಗಿವೆ. ಗ್ರೀಕರೇ ಒಪ್ಪಿಕೊಂಡಿರುವಂತೆ ಅನೇಕ ವೃಕ್ಷಉತ್ಪನ್ನಗಳು ಅವರಿಗೆ ತಿಳಿದಿರಲಿಲ್ಲ. ವಿವರಣಾತ್ಮಕ ಗ್ರಂಥಗಳಲ್ಲಿ ಕೊಟ್ಟಿರುವ ವಿವಿಧ ಹೆಸರುಗಳನ್ನು ಇಂದು ಗುರುತಿಸುವುದೂ ಅಷ್ಟೇ ಕಷ್ಟವಾಗಿದೆಯಲ್ಲದೆ, ಅಲ್ಲಿ ವಿವರಿತವಾಗಿರುವ ಹಣ್ಣುಗಳಲ್ಲಿ ಕೆಲವು ಇಂದು ಇಲ್ಲದೆಯೂ ನಾಶವಾಗಿಹೋಗಿರುವುದು (ಮಹಾಭಾರತ III,157.44 ff; lx.37. 58-61; ಜಾತಕ. v. 405,VI. 527 f, ಆಯರಂಗಸುತ್ತ II. i. 8. 1).

ಅಧ್ಯಾಯ 6

ಬೆಳೆ ಸರದಿ

ಯಜುರ್ವೇದದಲ್ಲಿ, ಬೆಳೆಸರದಿಯನ್ನು ಕುರಿತ ಸ್ಪಷ್ಟ ಆಧಾರಗಳು ದೊರೆಯುತ್ತವೆ. ಋಗ್ವೇದದ VIII. 91, 5-6, ರಲ್ಲಿಯಂತೆ ಒಂದೇ ಜಮೀನಿನಲ್ಲಿ ಬೆಳೆಗಳನ್ನು ಸರದಿಯಲ್ಲಿ ಬೆಳೆಯಲಾಗುತ್ತಿತ್ತೆಂಬ, ಪಡಬಿಡುವ ಪದ್ಧತಿಯು ತಿಳಿದಿದ್ದಂತೆ ತೋರುತ್ತದೆ. ತೈತ್ತಿರೀಯ ಸಂಹಿತದಲ್ಲಿ ವರ್ಷದಲ್ಲಿ ಒಂದೇ ಜಮೀನಿನಲ್ಲಿ ಎರಡು ಬೆಳೆಗಳನ್ನು ತೆಗೆಯಲಾಗುತ್ತಿತ್ತೆಂದು ಸ್ಪಷ್ಟವಾಗಿ ಹೇಳಲಾಗಿದೆ (V, 1, 7, 3). ಅಲ್ಲಿ ವಿವಿಧ ಬೆಳೆಗಳು ಮಾಗುವ ವಿವಿಧ ಕಾಲಗಳನ್ನು ತಿಳಿಸಲಾಗಿದೆ. ಅವುಗಳನ್ನು ಕೊಯ್ಲು ಮಾಡುವ ಸರಿಯಾದ ಕಾಲವನ್ನು ಸಹ ತಿಳಿಸಿದೆ. ಕೌಟಿಲ್ಯನು ಕಾಲೋಚಿತ ಬೇಸಾಯ ಹಾಗೂ ಕೊಯ್ಲು ಮಾಡುವಿಕೆಯ ಬಗ್ಗೆ ಸೂಚನೆಗಳನ್ನು ಕೊಟ್ಟಿದ್ದಾನೆ.

ಗ್ರೀಕ್ ಕೃತಿಕಾರರು ಭಾರತ ಭೂಮಿಯ ಮೂಲ ಕೃಷಿ ಉತ್ಪನ್ನಗಳನ್ನು ಕುರಿತು ವಿವರಿಸುವಾಗ ಭಾರತದ ಮಣ್ಣಿನ ಫಲವತ್ತತೆ, ಅನುಕೂಲಕರ ಹವಾಮಾನ ಮತ್ತು ಬೇಸಾಯ ಪದ್ಧತಿಗಳನ್ನು ಕುರಿತು ಬಹುವಾಗಿ ಪ್ರಶಂಸಿಸಿದ್ದಾರೆ. ಪ್ರತಿ ವರ್ಷವೂ ಎರಡುಬಾರಿ ಎಂದರೆ ಇತರ ದೇಶಗಳಲ್ಲಿ ಗೋಧಿ ಬಿತ್ತನೆ ಆರಂಭವಾಗುವಾಗ ಒಮ್ಮೆ ಹಾಗೂ ಬತ್ತ, ಬಾಸ್ಪೊರಮ್ ಹಾಗೂ ಎಳ್ಳು ಮತ್ತು ತೃಣಧಾನ್ಯಗಳ ಬಿತ್ತನೆಗೆ ಯುಕ್ತಕಾಲವಾದ ಬೇಸಗೆಯ ಕರ್ಕಾಟಕ ಸಂಕ್ರಾಂತಿಯಲ್ಲಿ ಇನ್ನೊಮ್ಮೆ ಮಳೆಯಾಗುತ್ತದೆ. ಆದಕಾರಣ ಭಾರತೀಯರು ಸಾಮಾನ್ಯವಾಗಿ ಯಾವಾಗಲೂ ವಾರ್ಷಿಕವಾಗಿ ಎರಡು ಫಸಲು ಪಡೆಯುತ್ತಾರೆ (Diodorus II.36).

ಗ್ರೀಕ್ ಕೃತಿಕಾರರು ಭಾರತದಲ್ಲಿ ವಾರ್ಷಿಕವಾಗಿ ಎರಡುಬಾರಿ ಮಳೆಯಾಗುತ್ತಿದ್ದು ಜನತೆ ಸಾಮಾನ್ಯವಾಗಿ ಎರಡು ಬೆಳೆ ತೆಗೆಯುವರೆಂದು ಒತ್ತಿಹೇಳಿದ್ದಾರೆ. ಮೆಗಾಸ್ತನೀಸನು, ಚಳಿಗಾಲದ ಮಳೆಗೆ ಮುನ್ನ ಗೋಧಿ ಹಾಗೂ ಬೇಸಗೆಯ ಕರ್ಕಾಟಕ ಸಂಕ್ರಾಂತಿಯಲ್ಲಿ ಬತ್ತ, ಬಾಸ್ಪೊರಮ್, ಎಳ್ಳು ಮತ್ತು ತೃಣಧಾನ್ಯಗಳ ಬಿತ್ತನೆಮಾಡುವುದನ್ನು ಕಂಡಿದ್ದಾನೆ (Diod. II. 36). ಅಲ್ಲದೆ, ಮೆಗಾಸ್ತನೀಸನು ಚಳಿಗಾಲದ ಬೆಳೆಗಳ ಜೊತೆಗೆ 'ಗೋಧಿ, ಬಾರ್ಲಿ, ಬೇಳೆಕಾಳುಬೆಳೆ ಮತ್ತಿತರ ನಮಗೆ ತಿಳಿದಿಲ್ಲದ ಖಾದ್ಯಯೋಗ ಹಣ್ಣುಗಳನ್ನು' ಹೆಸರಿಸುತ್ತಾನೆ (cf. Str., XV. i. 13). ರಾಮಾಯಣದ ವಿವರಣಾತ್ಮಕ ಭಾಗದಲ್ಲಿ ಶಾಲಿ, ಗೋಧೂಮ ಮತ್ತು ಯವಗಳು ಚಳಿಗಾಲದ ಆರಂಭದಲ್ಲಿ ಕೊಯ್ಲಿಗೆ ಸಿದ್ಧವಾಗಿನಿಂತ ವಿವರ ಬರುತ್ತದೆ (III. 16.16 f). ಆದರೆ ಗೋಧಿ ಮತ್ತು ಬಾರ್ಲಿಗಳು ಚಳಿಗಾಲ ಅಥವಾ ಹಿಂಗಾರಿ ಬೆಳೆಗಳಾಗಿದ್ದು

ಅಕ್ಟೋಬರ್ ತಿಂಗಳಿನಲ್ಲಿ ಬಿತ್ತನೆಮಾಡಿ ಮೇ ತಿಂಗಳ ಕೊನೆಯಲ್ಲಿ ಕೊಯ್ಲು ಮಾಡಲಾಗುತ್ತದೆ. ಶರತ್ಕಾಲದಲ್ಲಿ ಉಳುಮೆಮಾಡುವುದು Sn. III. 155 ರಲ್ಲಿ ಕಂಡು ಬರುತ್ತದೆ. ಅರ್ಥಶಾಸ್ತ್ರದಲ್ಲಿ ಈ ಎರಡೂ ಬಗೆಯ ಕೊಯ್ಲು ಸುಪರಿಚಿತವಾಗಿದ್ದುದು ಪ್ರಕಟವಾಗಿದೆಯಲ್ಲದೆ (II. 24; V.2) ಮತ್ತೊಂದು ಕೊಯ್ಲಿನ ವಿಚಾರದ ಸೂಚನೆಯಿದೆ. ಅಲ್ಲಿ ರಾಜನಾದವನು ತನ್ನ ಶತ್ರುವಿನ ವಿರುದ್ಧ ದಂಡೆತ್ತಿ ಹೋಗಿ ಮಾರ್ಗಶಿರ (ಜನವರಿ)ದಲ್ಲಿ ಮಳೆಗಾಲದ ಬೆಳೆ ಹಾಗೂ ಶರತ್ಕಾಲದ ಪೂರ್ಣ ಬೆಳೆ ನಾಶಪಡಿಸಬೇಕು; ಚೈತ್ರ (ಮಾರ್ಚ್)ದಲ್ಲಿ ಶರತ್ಕಾಲದ ಬೆಳೆ ಹಾಗೂ ವಸಂತದ ಪೂರ್ಣಬೆಳೆ ಹಾಗೂ ಜ್ಯೇಷ್ಠಾಮೂಲದಲ್ಲಿ (ಜೂನ್) ವಸಂತದ ಬೆಳೆ ಹಾಗೂ ಮಳೆಗಾಲದ ಪೂರ್ಣ ಬೆಳೆಗಳನ್ನು ನಾಶಪಡಿಸಬೇಕೆಂದಿದೆ (IX.1). ಈ ರೀತಿ ವರ್ಷದಲ್ಲಿ ಮೂರು ಬೆಳೆಗಳನ್ನು ಬೆಳೆಯಲಾಗುತ್ತಿತ್ತು—ಮಳೆಗಾಲದಲ್ಲಿ ಬಿತ್ತಿ ಮಾಘಕ್ಕೆ ಮುನ್ನ ಕಣಜಕ್ಕೆ ಸೇರಿಸುವುದು ಒಂದು, ಶರತ್ಕಾಲದಲ್ಲಿ ಬಿತ್ತಿ ಚೈತ್ರಕ್ಕೆ ಮೊದಲು ಕಣಜ ತುಂಬುವುದು ಇನ್ನೊಂದು ಹಾಗೂ ವಸಂತದಲ್ಲಿ ಬಿತ್ತಿ, ಜ್ಯೇಷ್ಠದಲ್ಲಿ ದಾಸ್ತಾನು ಮಾಡುವುದು ಮೂರನೆಯ ಬೆಳೆ (Cf. ಚಳಿಗಾಲದಲ್ಲಿ ಬಿತ್ತಿದ ಬಾರ್ಲಿಯು ಬೇಸಗೆಯಲ್ಲಿ ಮಾಗುತ್ತಿತ್ತು, ಮಳೆಗಾಲದಲ್ಲಿ ಬಿತ್ತಿದ ಬತ್ತ ಶರತ್ಕಾಲದಲ್ಲಿ ಮಾಗುತ್ತಿತ್ತು, ಹಾಗೂ ಅವರೆ ಮತ್ತು ಎಳ್ಳುಗಳು ಚಳಿಗಾಲದಲ್ಲಿ ಮಾಗುತ್ತಿದ್ದುವು (Tait. Sam. VII. 2.10.2). ಅರ್ಥಶಾಸ್ತ್ರದಲ್ಲಿ ಮತ್ತೊಂದು ಕಡೆ, ವಿವಿಧ ಹಂಗಾಮುಗಳಲ್ಲಿ ಬೆಳೆಯುವ ಬೆಳೆಗಳ ಪಟ್ಟಿಕೊಡಲಾಗಿದೆ. ಬತ್ತ, ಕೊದ್ರುವ, ಎಳ್ಳು, ನವಣೆ, ವರಕ ಮತ್ತು ವರಕಗಳನ್ನು ಮೊದಲ ಹಂಗಾಮಿನಲ್ಲಿ (ಪೂರ್ವಾವಪ) ಬಿತ್ತಲಾಗುತ್ತಿತ್ತು. ಮುದ್ಗ, ಮಾಷ ಮತ್ತು ಶೈಬ್ಯಗಳನ್ನು ಎರಡನೆಯ ಹಂಗಾಮಿನಲ್ಲಿ (ಮಧ್ಯಾವಪ) ಬೆಳೆಯಲಾಗುತ್ತಿತ್ತು ಹಾಗೂ ಕುಸುಂಬ, ಅವರೆ, ಚೆನ್ನಂಗಿ, ಕುಲತ್ಥ, ಬಾರ್ಲಿ, ಗೋಧಿ, ಕಲಾಯ, ಅಗಸೆ ಮತ್ತು ಸಾಸುವೆಗಳನ್ನು ಕಡೆಯ ಹಂಗಾಮಿನಲ್ಲಿ (ಪಶ್ಚಾದಾವಪ, II.24) ಬಿತ್ತಲಾಗುತ್ತಿತ್ತು. ಅರ್ಥಶಾಸ್ತ್ರದಲ್ಲಿ ಹೇಳಲಾದ ಪೂರ್ವಾವಪ ಮತ್ತು ಪಶ್ಚಾದವಪಗಳು ಕ್ರಮವಾಗಿ ಇಂದಿನ ಮುಂಗಾರು ಮತ್ತು ಹಿಂಗಾರು ಬೆಳೆಗಳಿಗೆಹೊಂದುತ್ತವೆ. ಹಂಗಾಮಿಗನುಗುಣವಾಗಿ, ಮುಂಗಾರಿಯು Bk.IX.Ch.1) ನಲ್ಲಿಯ ಪಟ್ಟಿಯಲ್ಲಿಯ ವಸ್ಸಿಕವ್ ಹಾಗೂ ಹಿಂಗಾರಿಯು ಹೈಮನವ್ ಆಗಿವೆ. ಮಿಲಿಂದನು ಬೇಸಗೆಕೊನೆಯ ಹಾಗೂ ಚಳಿಗಾಲಪೂರ್ವದ ನಿಯತ ಮಳೆಗಳಲ್ಲದೆ ಮತ್ತೊಂದು ಮೂರನೆಯ ವಾಣಿಜ್ಯಮಳೆಯನ್ನು ಹೇಳುತ್ತಾನೆ (ಪು. 114). ಈ ಮೂರು ವಾಣಿಜ್ಯ ಮಳೆಗಳು ಪ್ರತಿ ವರ್ಷವೂ ದೇಶದ ಎಲ್ಲ ಭಾಗಗಳಲ್ಲೂ ಆಗುತ್ತಿರಲಿಲ್ಲ; ಹೀಗಾಗಿ ಒಂದು ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದ, ಒಂದು, ಎರಡು ಇಲ್ಲವೇ ಮೂರು ಬೆಳೆಗಳು ಮಳೆ, ಹವಾಮಾನ ಪರಿಸ್ಥಿತಿಗಳು ಮತ್ತು ಮಣ್ಣಿನ ಗುಣಧರ್ಮಗಳನ್ನು ಅವಲಂಬಿಸಿದ್ದುವು.

ಅನೇಕ ಸ್ಥಳಗಳಲ್ಲಿ ಆಹಾರಬೆಳೆಗಳು ಹಾಗೂ ಖಾದ್ಯ ಹಣ್ಣು ಮತ್ತು ತರಕಾರಿಗಳು ಉಳುಮೆ ಕಾರ್ಯವಿಲ್ಲದೆಯೇ ತಂತಾನೇ ನಿರಂತರವಾಗಿ ಬೆಳೆಯುತ್ತಿದ್ದವು. ಗ್ರೀಕ್ ವೀಕ್ಷಕರಿಗೆ ಈ ಘಟನೆಗಳು ವಿಚಿತ್ರವಾಗಿ ತೋರಿದವು. ಮಹಾಕಾವ್ಯ (ರಾಮಾಯಣ III. 16. 16f ; ಮಹಾಭಾರತ III. 157. 44 ff, IX 37. 58 ff.) ಹಾಗೂ ಜಾತಕ (V.37 f, 405)ಗಳಲ್ಲಿ ಬರುವ ಅರಣ್ಯವೃಕ್ಷ ವಿವರಗಳಲ್ಲಿ ಆಗಾಗ್ಗೆ ಮಾನವರ ಶ್ರಮವಿಲ್ಲದೆ ಬೆಳೆದ ಬೆಳೆಗಳು ಹಾಗೂ ಹಣ್ಣುಗಳ ವಿವರ ಬರುತ್ತದೆ.

ಅರ್ಥಶಾಸ್ತ್ರದಲ್ಲಿ ಬೇಸಾಯಗಾರರು ಎರಡನೆಯ ಬೆಳೆ ತೆಗೆಯುವುದನ್ನು ಕೆಲವು ವೇಳೆ ಕಂಡಾಗ್ಯೂ ಹಸುವಿನ ಕಡೆಯ ಮೂಲವಾಗಿ ಕಷ್ಟವಾಗಿ ವಿಧಿಸಲಾಗುತ್ತಿತ್ತೆಂದು ತಿಳಿದುಬರುತ್ತದೆ. ಹವಾಮಾನ ವರದಿಗಳ ಎಚ್ಚರಪೂರ್ಣ ವೀಕ್ಷಣೆಯು ಬೆಳೆ ಬಿತ್ತುವಿಕೆಗೆ ಎಷ್ಟು ನೀರು ಬೇಕಾಗುತ್ತದೆ ಎಂದು ಸೂಚಿಸಿದ್ದು ಬೇಸಾಯಗಾರನು ಮಳೆಯಾಗುವ ಕಾಡು ಪ್ರದೇಶಗಳ ಸಮೀಪದಲ್ಲಿ ವಿವಿಧ ಬೆಳೆಗಳನ್ನು ಬೆಳೆಯಬೇಕೆಂದು ನಿರ್ದೇಶಿಸಲಾಗಿದೆ.

ಋಗ್ವೇದದಲ್ಲಿ ಬೆಳೆಸರದಿ

ಋಗ್ವೇದದಲ್ಲಿ ಬೆಳೆಸರದಿ ವಿಚಾರ ಬಂದಿದೆಯೋ ಇಲ್ಲವೋ ಎಂಬುದು ವಿವಾದಾತ್ಮಕ ಹಾಗೂ ವ್ಯಾಖ್ಯಾನಕ್ಕೆ ಸಂಬಂಧಿಸಿದ ವಿಚಾರವಾಗಿದೆ. ನಿರಂತರ ಬೆಳೆಬೆಳೆಯುವುದು ಮಣ್ಣಿನ ಫಲವತ್ತತೆಯನ್ನು ಕುಂದಿಸುತ್ತದೆ. ಆದರೆ, ಬೇಳೆಕಾಳು ಬೆಳೆ ಮತ್ತಿತರ ಬೆಳೆಗಳನ್ನು ಸಹ ಉತ್ಪನ್ನಮಾಡಲಾಗುತ್ತಿತ್ತು. ಬೆಳೆಗಳಲ್ಲಿ ಸಾಮಾನ್ಯವಾಗಿ ಕೊಯ್ಲು ಮಾಡುವ, ಪ್ರತ್ಯೇಕವಾಗಿ ಕೊಯ್ಲುಮಾಡುವ ಹಾಗೂ ಕ್ರಮಬದ್ಧವಾಗಿ ಕೊಯ್ಲು ಮಾಡುವ (X.131.2) ಬೇಸಾಯಗಾರರನ್ನು ಕುರಿತ ವ್ಯಾಖ್ಯಾನದಲ್ಲಿ ಬೆಳೆ – ಕ್ರಮ ಅಥವಾ ಬೆಳೆಸರದಿ (ಅನುಕ್ರಮ) ಮತ್ತು ಸಾಲುಬಿತ್ತನೆ ಹಾಗೂ ಕೊಯ್ಲುಕಾಲದಲ್ಲಿ ತಾಕಲಾಟಗಳನ್ನು ತಪ್ಪಿಸುವಿಕೆಗಳನ್ನು ಕುರಿತ ಸೂಚನೆಯೆಂದು ಅರ್ಥಮಾಡಲಾಗುತ್ತದೆ. ನೆಲಗೊಂಡ ಬೆಳೆಗಳ ಅಧ್ಯಯನಗಳು ಹಾಗೂ ಆಚರಣೆ ಘಟ್ಟದಲ್ಲಿಯ ಅನುಭವಗಳ ಪರಿಣಾಮವಾಗಿ ಮುಂದೆ ಪ್ರಾಚೀನ ಬೇಸಾಯದಲ್ಲಿ ಬಹುಮಾನಗಳ ಅರಕ್ಷಿತ ಪಡಬಿಡುವಿಕೆ ಸರದಿಯು ಆಚರಣೆಗೆ ಬಂದಂತೆ, ಬೇಳೆಕಾಳು ಬೆಳೆಗಳು ಮತ್ತಿತರ ಬೆಳೆಗಳ ಸರದಿಪದ್ಧತಿಗಳು ಸಹ ಮಿಶ್ರಬೇಸಾಯ ಹಾಗೂ ಎರಡನೆಯ ಹಂತದ ಹವಾಮಾನ ಪರಿಸ್ಥಿತಿಗಳ ಪರಿಣಾಮವಾಗಿ ಸಂಭವಿಸಿತು. ಈ ಅನುಭವಗಳು ಸಾಂಪ್ರದಾಯಿಕ ಕೃಷಿಗೆ ನಾಂದಿಯಾದುವು. ಈ ಅವಧಿಯಲ್ಲಿ ಸಾಕಷ್ಟು ಉನ್ನತ ಮಟ್ಟದ ಪರಿಪೂರ್ಣತೆಯನ್ನು ಸಾಧಿಸುವ ಹಂತದಲ್ಲಿ ಕೃಷಿಶಾಸ್ತ್ರದ ಬಹುತೇಕ ತತ್ವಗಳು ಹೊರಬಂದುವು.

ಅನ್ನಸೂಕ್ತ (I/187) ದಲ್ಲಿ ಆಹಾರ ಪರಿಮಾಣಕ್ಕೆ ಕೊಟ್ಟಿರುವ ಪ್ರಾಮುಖ್ಯತೆಯನ್ನು ಗಮನಿಸಿದಾಗ ಜಾನುವಾರು ಬೇಸಾಯಕ್ಕೆ ಕೊಟ್ಟಿರುವಷ್ಟೇ ಪ್ರಾಮುಖ್ಯತೆಯನ್ನು ಸಾಗುವಳಿಗೂ ಕೊಟ್ಟಿರುವುದು ವ್ಯಕ್ತವಾಗುತ್ತದೆ. ವಿವಿಧ ಋಕ್ಕು (ಸ್ತೋತ್ರಗೀತೆ) ಗಳಲ್ಲಿ ಬಂದಿರುವ ಜಮೀನು, ಎತ್ತುಗಳು, ಬಿತ್ತನೆಬೀಜ ಮತ್ತು ರೈತರನ್ನು ಕುರಿತ ಸ್ತುತಿಗಳಿಂದ ಸಾಗುವಳಿಬೇಸಾಯ, ಹಾಗೂ ಜನತೆ ಮತ್ತು ಜಾನುವಾರುಗಳೆರಡಕ್ಕೂ ಆಹಾರ ಹಾಗೂ ಮೇವಿನ ದೃಷ್ಟಿಯಿಂದ ಬೆಳೆಗಳ ಬೇಸಾಯ ಮತ್ತು ವಿವಿಧ ಬಗೆಯ ಹುಲ್ಲುಗಾವಲು ಹಾಗೂ ಬೆಳೆ ಸಂಗೋಪನೆಗಳಿಗೆ ನೀಡಲಾಗಿದ್ದ ಪ್ರಾಮುಖ್ಯತೆ ಪ್ರಕಟವಾಗುತ್ತದೆ (X.27.8).

'ಯವ' ಎಂಬುದು ಶಬ್ದಶಃ ಬಾರ್ಲಿ ಎಂಬರ್ಥ ಕೊಡುತ್ತದೆಯಾದರೂ ಅನೇಕ ವೈದಿಕ ಅನುವಾದಗಳಲ್ಲಿ ಅದನ್ನು ಕಾಳುಬೆಳೆಯೆಂದೇ ಪರಿಗಣಿಸಲಾಗಿದೆ. ಇದನ್ನು ಆರ್ಯರು ಬೆಳೆ ಜಮೀನಿನಲ್ಲಿರುವಾಗಲೇ ಹಸುರು ಮೇವಾಗಿ ಜಾನುವಾರುಗಳಿಗೆ ಬಳಸುತ್ತಿದ್ದಿರಬಹುದು ಇಲ್ಲವೇ ಸೊಪ್ಪನ್ನು ತಮ್ಮ ಆಹಾರಕ್ಕೂ ಹಾಗೂ ಒಣಹುಲ್ಲು ಕಡ್ಡಿ ಮತ್ತು ಬೂಸ (ಹೊಟ್ಟು)ವನ್ನು ಜಾನುವಾರು ಮೇವಾಗಿಯೂ ಉಪಯೋಗಿಸುತ್ತಿದ್ದಿರಬಹುದು. ಆಹಾರ ಪದಾರ್ಥಗಳ ದಾನ (X.117) ಹಾಗೂ ಯಜ್ಞಯಾಗಾದಿಗಳಲ್ಲಿ ತರಕಾರಿಗಳ ಮೌಲ್ಯವನ್ನು ಕುರಿತು ಬಂದಿರುವ ಪ್ರಾಮುಖ್ಯತೆಯು ಮಾಂಸಾಹಾರಕ್ಕಿಂತಲೂ ಸಸ್ಯಾಹಾರಕ್ಕಿದ್ದ ಬಲವನ್ನು ತೋರಿಸುತ್ತದೆ. ಈ ಪ್ರವೃತ್ತಿಯು ಆಹಾರ ಪದಾರ್ಥಗಳ ಉತ್ಪಾದನೆಯು ಸಾಕಷ್ಟಿದ್ದಾಗ ಮಾತ್ರ ಬೆಳೆದುಬಂದಿರಬೇಕು. ಉತ್ತಮ ಫಸಲುಗಳಿಸಲು ಒಳ್ಳೆಯ ಮಣ್ಣು ನಿರ್ವಹಣೆ ಕಾರ್ಯಮಾಡಬೇಕೆಂಬ(II.47.21 ರಿಂದ 28) ಆಲೋಚನೆಯು ಬೆಳೆದು ಬಂದುದು ಈ ಹಂತದಲ್ಲಿಯೇ ಎಂದು ಹೇಳಬಹುದು. ಈ ದಿಸೆಯಲ್ಲಿ ಮಣ್ಣು ಸುಧಾರಣೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಭಾರತವು ಚೆನ್ನಾಗಿ ಬಗೆಹರಿಸುತ್ತದೆ.

ಅಧ್ಯಾಯ 7

ರೋಗ ಮತ್ತು ಪೀಡೆಗಳಿಂದ ಬೆಳೆಸಂರಕ್ಷಣೆ

ಬೆಳೆಗಳನ್ನು ಕೀಟ, ಪೀಡೆ ಮತ್ತು ರೋಗರುಜಿನಾದಿಗಳಿಂದ ಹಾನಿಯಾಗದಂತೆ ತಡೆದು ಸಂರಕ್ಷಿಸುವುದನ್ನು ಕುರಿತು ಗ್ರಂಥಗಳಲ್ಲಿ ಅನೇಕ ನಿಯಮಾವಳಿ ಹಾಗೂ ಸೂಚನೆಗಳು ಕಂಡುಬರುತ್ತವೆ. ಕಾಳುಗಳು ಮಿಡತೆ, ಇಲಿಗಳು ಮತ್ತು ಕಾಳುಕೊರೆಯುವ ಕೀಟಗಳಿಂದ ನಾಶವಾಗುವಿಕೆ ಹಾಗೂ ಅವುಗಳ ಸಂರಕ್ಷಣೆಗಳನ್ನು ಕುರಿತು ಅಥರ್ವಣವೇದದಲ್ಲಿ ವಿವರಿಸಲಾಗಿದೆ (Hymn 50 of Book VI).

ಕೇಶವ ಮತ್ತು ಸಾಯಣರು, ಈ ಋಕ್ಕಿನ ಕೌಶಿಕ 51, 17-22ಕ್ಕೆ ಸಂಬಂಧಿಸಿದಂತೆ ನಡೆಸಬೇಕಾದ ಆಚರಣೆಗಳನ್ನು ಕುರಿತ ತಮ್ಮ ಪೀಠಿಕೆಯಲ್ಲಿ ಹಾನಿಕಾರಕಕೀಟಗಳ ಸುದೀರ್ಘ ಪಟ್ಟಿಯನ್ನೇ ಉಲ್ಲೇಖಿಸಿದ್ದಾರೆ. ಆಚರಿಸಬೇಕಾದ ವಿಧಿಗಳು ಹೀಗಿವೆ. 17. ಋಕ್ಕನ್ನು ಪಠಿಸುತ್ತಿರುವಾಗ ವಿಧಿಗಳನ್ನು ಆಚರಿಸುವಾತನು ಜಮೀನಿನಲ್ಲಿ ಒಂದು ಸಾಲನ್ನು ಕಬ್ಬಿಣದ ನೇಗಿಲಿನಿಂದ ಉಳುತ್ತಾನೆ. 18. ಆತ ಜಮೀನಿನಲ್ಲಿ ಕಲ್ಲುಗಳನ್ನು ಚೆಲ್ಲುತ್ತಾನೆ. 19. ತಾರ್ದ(ಕೀಟ)ದ ಬಾಯಿಗೆ ಕೂದಲೆಳೆಯನ್ನು ಕಟ್ಟಿ, ತನ್ನ ಜಮೀನಿನ ಮಧ್ಯದಲ್ಲಿ ತಲೆಕೆಳಗು ಮಾಡಿ ಹೂಳುತ್ತಾನೆ. 20. ಹಾಗೆಯೇ ನಡೆದಾಡುತ್ತಾ ಅಶ್ವಿನೀ ದೇವತೆಗಳಿಗೆ ತನ್ನಂತಹುದೇ ಬಣ್ಣವುಳ್ಳ ಕರುವಿರುವ ಗೋವಿನ ಹಾಲನ್ನು ಅರ್ಪಿಸುತ್ತಾನೆ. 21. ಆತ ಆಸ (ಪ್ರದೇಶ), ಆಸಪತಿ, ಅಶ್ವಿನೀದ್ವಯ ಹಾಗೂ ಕ್ಷೇತ್ರಪತಿಗಳಿಗೆ ಬಲಿದಾನ ಕೊಡುತ್ತಾನೆ. 22. ಈ ವಿಧಿಗಳನ್ನು ಆಚರಿಸುವ ದಿನ ಸೂರ್ಯಾಸ್ತವಾಗುವವರೆಗೆ ಆತ ಮೌನಿಯಾಗಿರುತ್ತಾನೆ.

ಕಲ್ಲವಗ್ಗದಲ್ಲಿ (X. 1 6) ಬತ್ತದ ಪೈರು ಬೂಷ್ಟು(ಶಿಲೀಂಧ್ರರೋಗ)ಗಳಿಂದ ಹಾಳಾಗುತ್ತದೆಂದೂ ಹಾಗೆಯೇ ಬೆಂಕೀರೋಗ ತಗುಲಿದರೆ ಕಬ್ಬಿನ ಪೈರು ನಾಶವಾಗುತ್ತದೆಂದೂ ಉಲ್ಲೇಖಿವಿದೆ.

ಋಗ್ವೇದ ಕಾಲದಲ್ಲಿ (X. 68. 1) ಬೇಸಾಯಗಾರರು ಗದ್ದಲ ಸಪ್ಪಳಗಳನ್ನು ಮಾಡುವುದರಿಂದ ಜೋಳದ ಜಮೀನಿನಿಂದ ಹಕ್ಕಿಗಳನ್ನು ದೂರವಿರಿಸುತ್ತಿದ್ದರು. ಮಾತ್ರವಗ್ಗ (I.50) ದಲ್ಲಿ ಇವಕ್ಕಾಗಿ ಬೆದರುಬೊಂಬೆಗಳನ್ನು ಬಳಸುತ್ತಿದ್ದರು.

ಜಾತಕ (ಸಂ. 11) ದಲ್ಲಿ ಬೇಸಾಯಗಾರರು ಕಾಡುಪ್ರಾಣಿಗಳ ಆಕ್ರಮಣದಿಂದ ತಮ್ಮ ಬೆಳೆಗಳನ್ನು ರಕ್ಷಿಸಲು ಜಮೀನಿನಲ್ಲಿ ಬಲೆಗಳು, ಇರಿಸಲು (ಕೆಡ್ಡ) ಹಾಗೂ ತಡೆಗಟ್ಟುಗಳನ್ನು ಬಳಸುತ್ತಿದ್ದರೆಂದು ಉಲ್ಲೇಖವಿದೆ.

ಬೇಸಾಯಕಾಲದಲ್ಲಿ ಸಾಕುಪ್ರಾಣಿಗಳನ್ನು ಹುಲ್ಲುಗಾವಲುಗಳಲ್ಲಿ ಮೇಯಲು ಕಳಿಸಲಾಗುತ್ತಿತ್ತು. ಅವುಗಳನ್ನು ಗೋಪಾಲಕರ ಮೇಲ್ವಿಚಾರಣೆಗೆ ಒಪ್ಪಿಸಲಾಗುತ್ತಿತ್ತು. ಅವರ ಬೇಜವಾಬ್ದಾರಿಯಿಂದೇನಾದರೂ ಆಕಸ್ಮಿಕವಾಗಿ ಬೆಳೆನಾಶವಾದುದಾದರೆ ಅವರಿಗೆ ಉಗ್ರಶಿಕ್ಷೆ ವಿಧಿಸಲಾಗುತ್ತಿತ್ತು. ಈ ಬಗೆಯ ದಂಡನೆಗೆ ಕಾನೂನು ಪುಸ್ತಕಗಳಿದ್ದುವು.

ಕಾಳುಗಳಿಗೆ ಹಾನಿ ಅಥವಾ ನಷ್ಟ ಸಂಭವಿಸಿದಲ್ಲಿ ಮಾಲೀಕನು ಸಾಮಾನ್ಯವಾಗಿ ಅಷ್ಟೇ ಪ್ರಮಾಣದ ಕಾಳಿಗಾಗಿ ವಾದಿಸುತ್ತಿದ್ದನು. ಮಾಲೀಕ ಹಾಗೂ ಗೋಪಾಲಕರಿಬ್ಬರಿಗೂ ದೇಹದಂಡನೆ ವಿಧಿಸಲಾಗುತ್ತಿತ್ತು. ಹಾಗೆಯೇ ವಿಧಿಸುವ ಜುಲ್ಮಾನೆ ಹಣವೂ ಸಹ ಬೆಳೆಗೆ ಹಾನಿಮಾಡಿದ ಜಾನುವಾರು ಬಗೆ ಹಾಗೂ ಬೆಳೆಗೆ ತಗುಲಿರುವ ನಷ್ಟಗಳನ್ನು ಅವಲಂಬಿಸಿರುತ್ತಿತ್ತಲ್ಲದೆ 'ಮಾಸ' ರೂಪದಲ್ಲಿ ವಸೂಲಿ ಮಾಡಲಾಗುತ್ತಿತ್ತು. ನಷ್ಟವು ಒಂದು ಹಸುವಿನಿಂದಾಗಿದ್ದರೆ ಜುಲ್ಮಾನೆಯು ಒಂದು ಮಾಸ; ಎಮ್ಮೆಯಿಂದಾಗಿದ್ದರೆ ಎರಡು ಮಾಸ, ಹಾಗೂ ತನ್ನ ಮರಿಗಳೊಡನೆ ಅತಿಕ್ರಮಿಸಿದ ಆಡು ಇಲ್ಲವೇ ಕುರಿಗಳಿಂದಾಗಿದ್ದರೆ ಅರ್ಧ ಮಾಸ(ಮನು VIII. 241, ಯಾಜ್ಞವಲ್ಕ್ಯ ಸ್ಮೃತಿ II, 161; ನಾರದ ಮತ್ತು ಬೃಹಸ್ಪತಿ, XI.29; ವಿಷ್ಣುಪುರಾಣ V,146). ಜಮೀನು ಮೇಲ್ವಿಚಾರಕನೇ ಹೀಗೆ ಅತಿಕ್ರಮಿಸಿದ ಜಾನುವಾರನ್ನು ಪರಿಹಾರಧನ ಸಂದಾಯವಾಗುವವರೆಗೆ ಹಿಂದಿರುಗಿಸದೆ ತನ್ನ ಸ್ವಾಧೀನದಲ್ಲಿಯೇ ಇಟ್ಟುಕೊಂಡಿರಬಹುದು (ನಾರದ ಸ್ಮೃತಿ XI, 39). ಆದರೆ ಜಮೀನುಗಳನ್ನು ಬೇಲಿಹಾಕದೆ ರಕ್ಷಿಸದಿದ್ದಲ್ಲಿ ಜುಲ್ಮಾನೆಯನ್ನು ವಿನಾಯಿತಿ ಮಾಡಲಾಗುತ್ತಿತ್ತು. ಹಾಗೂ ಜಮೀನು ಹಳ್ಳಿಯ ಗಡಿಯಲ್ಲಿ ಅಥವಾ ಹುಲ್ಲುಗಾವಲ ಮಗ್ಗುಲಲ್ಲಿದ್ದಾಗಲೂ ಜುಲ್ಮಾನೆ ವಿನಾಯಿತಿ ನೀಡಲಾಗುತ್ತಿತ್ತು. ಅಲ್ಲದೆ ಗಬ್ಬದ ಇಲ್ಲವೇ ಹೊಸದಾಗಿ ಕರು ಹಾಕಿದ ದನ, ಇತರೇ ಹಿಡಿತಕ್ಕೆ ಸಿಕ್ಕದೆ ನಿರ್ವಹಿಸಲಾಗದ ದನಗಳಿಗೂ ಸಹ ವಿನಾಯಿತಿ ಕೊಡಲಾಗುತ್ತಿತ್ತು.

ಅಗ್ನಿಪುರಾಣದಲ್ಲಿಯೂ ಸಹ ಈ ಬಗೆಯ ಜುಲ್ಮಾನೆಗಳು ವಿಧಿಸಲ್ಪಟ್ಟಿವೆ. ಅಲ್ಲಿ ಜುಲ್ಮಾನೆಯ ಪ್ರಮಾಣವು ಒಂದಕ್ಕೆ ನಾಲ್ಕು ಪಟ್ಟಿದೆ.

ವೃಕ್ಷ ಸಂರಕ್ಷಣಾ ವಿಧಾನ

'ವೃಕ್ಷಾಯುರ್ವೇದ'ದಲ್ಲಿ ಗಿಡಗಳಿಗೆ ಔಷಧಿ ಕೊಡುವ ಶಾಸ್ತ್ರವನ್ನು ವಿವರಿಸಲಾಗಿದೆ. ಸಂಬಂಧಿಸಿದ ಭಾಗಗಳನ್ನು ಕೆಳಗೆ ಉದ್ಧರಿಸಲಾಗಿವೆ:

'ಓಂ ಸಕಲರಿಗೂ ಕಲ್ಯಾಣವಾಗಲಿ! ಕಿಷ್ಕಿಂಧೆಯಲ್ಲಿ ತನ್ನ ಪರಾಕ್ರಮವನ್ನು ತೋರಿಸಿದ ಹಾಗೂ ಸೂರ್ಯವಲಯದಲ್ಲಿ ಬದುಕಿ ಅದನ್ನೇ ಕಬಳಿಸಿದ ವೀರಹನುಮಂತನು ಅನುಜ್ಞೆಯಿತ್ತು ಇಲಿಗಳು, ಪಕ್ಷಿಗಳು ಮತ್ತು ಇರುವೆ ಇತ್ಯಾದಿಗಳನ್ನು ನಾಶಪಡಿಸಲಿ'.

ಮಿಡತೆ, ಇಲಿಗಳು, ಹಕ್ಕಿಗಳು, ಇರುವೆಗಳು ಇತ್ಯಾದಿಗಳಿಂದ ಬೆಳೆಗೆ ಹಾನಿಯುಂಟಾಗುವ ಸಂಭವವಿದ್ದಲ್ಲಿ ಮೇಲಿನ ಮಂತ್ರವನ್ನು ನೂರೆಂಟು ಬಾರಿ ಪಠಿಸಿ, ತಾಳೆ ಪತ್ರದ ಮೇಲೆ ಬರೆಯಬೇಕು. ಬಳಿಕ ಪತ್ರದ ಮೇಲೆ ಮಾನ ಎಂಬ ಶಬ್ದ ಬರೆದು ಅದನ್ನು ಭೂಮಿಯಲ್ಲಿ ಹೂತಿಡಬೇಕು. ಹೀಗೆ ಮಾಡುವುದರಿಂದ ಜಮೀನಿನಲ್ಲಿರುವ ಕೀಟಗಳು, ಹಕ್ಕಿಗಳು, ಇಲಿಗಳು, ಇರುವೆಗಳು ಮುಂತಾದುವು ನಾಶವಾಗುತ್ತವೆ (ಶ್ಲೋ. 73–74).

ಮರಗಿಡಗಳನ್ನು ಇಬ್ಬನಿ, ಬಿರುಗಾಳಿ, ಹೊಗೆ, ಬೆಂಕಿ ಮತ್ತು ಜಾಲಪಾದದ ಪಕ್ಷಿ (ಬಾತುಕೋಳಿಗಳಂತಹವು) ಗಳಿಂದ ಎಚ್ಚರವಹಿಸಿ ಕಾಪಾಡಬೇಕು (ಶ್ಲೋ. 75).

ಮರಗಳ ಸಂರಕ್ಷಣೆಗಾಗಿ, ಸಿಡಿಲುಬಡಿದ ಮರದ ಬೂದಿಯನ್ನು ತೆಗೆದುಕೊಂಡು, ಮರಗಳ ಸುತ್ತ ಎರಚಬೇಕು. ಹೀಗೆ ಮಾಡುವುದರಿಂದ ಇಬ್ಬನಿಯಿಂದ ಹಾಳಾಗುವ ಭಯವಿರುವುದಿಲ್ಲ (ಶ್ಲೋ. 76).

ಜನಗಳ ಕುದೃಷ್ಟಿ ಪರಿಹಾರಕ್ಕಾಗಿ, ಬೇಯಿಸಿದ ಸಾಲಿ ಅಕ್ಕಿಯ ಗಂಜಿಯನ್ನು ಮೊಸರು ಮತ್ತು ಸೈಂಧವ ಉಪ್ಪಿನೊಡನೆ ಬೆರೆಸಿ ಮರಗಳ ತೋಪಿನಲ್ಲೆಲ್ಲ ಚೆಲ್ಲಬೇಕು (ಶ್ಲೋ. 77).

ಮನುಷ್ಯರಂತೆಯೇ ಗಿಡಗಳೂ ಸಹ ವಾತ, ಪಿತ್ತ ಹಾಗೂ ಶ್ಲೇಷ್ಮ (ಕಫ) ಗಳೆಂಬ ರಸಧಾತುಗಳ ಅತಿರೇಕಕ್ಕೊಳಗಾಗುತ್ತವೆ. ಅವುಗಳನ್ನು ಗಮನಿಸಿ ಪರಿಹಾರಕ್ಕಾಗಿ ಚಿಕಿತ್ಸೆ ನೀಡಬೇಕಾಗುತ್ತದೆ. ಈ ವಿಷಯದಲ್ಲಿ ಹಾನಿಕಾರಿ ಪಶುಪಕ್ಷಿಕೀಟಗಳು ತಿಂದು ಹಾಕಿದ, ಬೆಂಕಿಯಿಂದ ಸುಟ್ಟ, ಬಿರುಗಾಳಿಯಿಂದ ಮುರಿದ ಇಲ್ಲವೇ ಸಿಡಿಲೊಡೆದ ಮರಗಳನ್ನು ಕಡಿದು ಹಾಕುವುದೊಂದೇ ಮಾರ್ಗ. ಇನ್ನಿತರ ಕ್ಲೇಶಗಳಿಗೆ ವಿವಿಧ ಪರಿಹಾರಗಳಿವೆ (ಶ್ಲೋ. 87–88).

ವಾತಪೀಡಿತ ವೃಕ್ಷವು ಸಣ್ಣಗೆ ಕೃಶವಾಗಿದ್ದು, ತೀರ ಎತ್ತರ ಇಲ್ಲವೇ ತೀರ ಕುಬ್ಜವಾಗಿದ್ದು ಶುಷ್ಕವಾಗಿರುತ್ತದೆ ಹಾಗೂ ನಿಸ್ರಾವವಿಲ್ಲದೆ, ಜಡವಾಗಿದ್ದು ಹೂಹಣ್ಣುಗಳನ್ನು ಬಿಡುವುದಿಲ್ಲ (ಶ್ಲೋ. 89).

ಬಿಸಿಲ ತಾಪವನ್ನು ದುರಿಸಲಾರದ, ಕಳೆಗುಂದಿದ ಅಕಾಲದಲ್ಲಿ ಹಣ್ಣು ಬಿಡುವ ಬೋಳು ಕೊಂಬೆಗಳುಳ್ಳ ಮರವು ಪಿತ್ತವಿಕಾರದಿಂದ ನರಳುತ್ತಿರುತ್ತದೆ (ಶ್ಲೋ. 90).

ಥಳುಕಿನ ರೆಂಬೆಕೊಂಬೆಗಳಿಂದ ಕೂಡಿದ್ದು ಹೂಹಣ್ಣುಗಳಿಂದ ತುಂಬಿದ್ದರೂ ಇಡಿಕಿರಿದ ಬಳ್ಳಿಬಂಧನದಿಂದ ಕಳಾಹೀನವಾಗಿರುವ ವೃಕ್ಷವು ಶ್ಲೇಷ್ಮವ್ಯಾಧಿಯಿಂದ ನರಳುತ್ತಿರುತ್ತದೆ (ಶ್ಲೋ. 91).

ವಾತವಿಕಾರಗಳನ್ನು ಕಹಿ, ಘಾಟು ಹಾಗೂ ಬಿರುಸಾದ ಹೊಟ್ಟೆಕಟ್ಟುವ ಒಗರು ಔಷಧಿಗಳಿಂದ ಪರಿಹರಿಸಲಾಗುತ್ತದೆ. ಪಿತ್ತವಿಕಾರಗಳನ್ನು ಕಹಿ, ಖಾರ, ಉಪ್ಪು ಮತ್ತು ಆಮ್ಲ (ಹುಳಿ) ಔಷಧಿಗಳಿಂದಲೂ ಶ್ಲೇಷ್ಮ ವ್ಯಾಧಿಗಳನ್ನು ಜಿಡ್ಡು, ಸಿಹಿ, ಆಮ್ಲ (ಹುಳಿ) ಮತ್ತು ಉಪ್ಪು ಔಷಧಿಗಳಿಂದ ಪರಿಹರಿಸಲಾಗುತ್ತದೆ (ಶ್ಲೋ. 92).

ವಾತವಿಕಾರಗಳು ಸಪ್ಪೆಯಾದ ಮಾಂಸಸಾರದಿಂದ ದೂರವಾಗುತ್ತವೆ. ಪಿತ್ತವು ಮಧುವಾದ, ತಣ್ಣನೆಯ ಸಿಹಿನೀರಿನಿಂದಲೂ ಶ್ಲೇಷ್ಮ ಬಾಧೆಯನ್ನು ಕಹಿಯಾದ, ಆಮ್ಲ ಮತ್ತು ತಣ್ಣನೆಯ ನೀರುಗಳನ್ನು ಸರಿಯಾಗಿ ಕೊಡುವುದರಿಂದಲೂ ಪರಿಹಾರವಾಗುತ್ತದೆ (ಶ್ಲೋ. 93).

ಹೊರನೋಟಕ್ಕೆ ಯಾವುದೇ ಕುಂದು ಕೊರತೆ ಕಾಣದಿದ್ದಾಗಲೂ, ಎಲೆ ಮತ್ತು ಹೂವುಗಳೆಲ್ಲ ಉದುರಿ ವಿರೂಪಗೊಳ್ಳುವ ವೃಕ್ಷದ ಬೇರಿನಲ್ಲಿ ಸಾಮಾನ್ಯವಾಗಿ ಹಾನಿಕಾರಕ ಕೀಟಗಳಿರುತ್ತವೆ. ಅವುಗಳನ್ನು (ಎಂದರೆ ಕೀಟಗಳನ್ನು) ವಿಶೇಷ ಶ್ರಮದಿಂದ ನಾಶಪಡಿಸಬೇಕು. ಅವುಗಳನ್ನು ನಿರ್ಮೂಲಗೊಳಿಸಿದ ಬಳಿಕ, ಮರವನ್ನು ಗೋಮೂತ್ರ, ತುಪ್ಪ, ವಿದಂಗ, ಸಾಸುವೆ ಮತ್ತು ಎಳ್ಳುಗಳ ಮಿಶ್ರ ಪಿಟ್ಟಿ (ಕಣಕ)ನಿಂದ ಲೇಪಿಸಿ, ತಿಳಿಹಾಲು ನೀರೆರೆದು, ಸುಗಂಧದ್ರವ್ಯ ಧೂಪನ ಕೊಡುವುದರಿಂದ ಕ್ಷಿಪ್ರದಲ್ಲಿ ಚೇತನಗೊಳ್ಳುತ್ತದೆ (ಶ್ಲೋ. 94).

ಕಾರಂಜ, ಆರಗ್ವಧ, ಅಂಟವಾಳ (ಸೀಗೆಕಾಯಿ) ಮರ, ಸಪ್ತಪರ್ಣಗಳ ತೊಗಟೆಯನ್ನು ಮುಸ್ತ (ಸೈಪೆರಸ್ ರೋಟುಂಡಸ್) ಮತ್ತು ವಿದಂಗಗಳೊಡನೆ ಗೋಮೂತ್ರದಲ್ಲಿ ಜಜ್ಜಿ ಹಾಕುವುದರಿಂದ ಹಾನಿಕರ ಕೀಟನಾಶವಾಗುತ್ತದೆ (ಶ್ಲೋ. 95).

ಬೆಂಕಿಯ ತಾಪಕ್ಕೊಳಗಾದ ವೃಕ್ಷವು ಬೇರುಗಳಿಗೆ ಮಾಂಸಸಾರ ಮತ್ತು ಹಾಲೆರೆದು, ಇಡೀ ವೃಕ್ಷಕ್ಕೆ ಕಮಲ ಮತ್ತು ಕಂದ (ಅಮರ್ ಫೊಫ್ಯಾಲಸ್ ಕೆಂಪಾನುಲೇಟಸ್) ಗಳ ಕಣಕದಿಂದ ಲೇಪಿಸುವುದರಿಂದ ಪಚ್ಚೆಯಂತೆ ಹೊಳೆಯುವ ಎಲೆಗಳನ್ನು ಬಿಡುತ್ತದೆ (ಶ್ಲೋ. 96).

ಬಿರುಗಾಳಿಯಿಂದ ಮುರಿದ ವೃಕ್ಷವನ್ನು ಕೋಲುಗಳ ಆಧಾರದಿಂದ ಊರೆಕೊಟ್ಟು ಹಗ್ಗಗಳಿಂದ ಬಿಗಿದುನಿಲ್ಲಿಸಿ ಬಿರುಕುಗಳನ್ನೆಲ್ಲ ಪ್ಲಾಕ್ಷ ಮರದ ಮಣ್ಣಿನಿಂದ ತುಂಬಿಸಿ ಬಳಿಕ ಪ್ಲಾಕ್ಷ, ಅರ್ಕ (ಕೆಲೊಟ್ರೋಪಿಸ್ ಗೈಗ್ಯಾಂಟಿಯ) ಮತ್ತು ಔದುಂಬರ ವೃಕ್ಷಗಳ ತೊಗಟೆಯನ್ನು ತುಪ್ಪ, ಜೇನು ಮತ್ತು ಸಿಹಿಯಾದ ತಂಗುಳುಹಾಲುಗಳಲ್ಲಿ ಜಜ್ಜಿ ಮಾಡಿದ ಕಣಕದಿಂದ ಲೇಪಿಸಿ ಪದೇ ಪದೇ ಹಾಲೆರೆಯುತ್ತಿರಬೇಕಲ್ಲದೆ ಬೇರುಸುತ್ತಿನ ಮಡಿಯೆಲ್ಲ ನೀರಿನಿಂದ ತುಂಬಿರಬೇಕು. ಹೀಗೆ ಮಾಡುವುದರಿಂದ ಮರವು ಪುನರಾರೋಗ್ಯ ಹೊಂದುವುದಲ್ಲದೆ ಹೆಚ್ಚು ಫಲನೀಡುತ್ತದೆ (ಶ್ಲೋ. 97).

ಸಿಡಿಲೆರಗಿ ಹಾಳಾದ ಮರಕ್ಕೆ ಜೀವದಾತ ಸಂಜೀವಿನಿಯಂತಿರುವ ಔಷಧಿಯನ್ನು ಕೇಳಿ. ಮುದ್ಗ, ಮಾಷ, ಬಾರ್ಲಿ ಮತ್ತು ಘಾಸ (ಸೈಪ್ರಸ್ ಹೆಕ್ಸಾಸ್ಟೇಕಿಸ್ ಕಮ್ಯೂನಿಸ್ ನ ಗೆಡ್ಡೆ ಬೇರು) ಮೊದಲಾದ ಎಳ್ಳು, ಉಶಿರ (ಆ್ಯಂಡ್ರೊಪೊಗಾನ್ ಮ್ಯುರಿಕೇಟಸ್) ಮತ್ತು ಮಧೂಕಗಳನ್ನು ತಿಳಿಹಾಲಿನಲ್ಲಿ ಜಜ್ಜಿ ಪುಡಿಮಾಡಿ ಈ ಮಿಶ್ರಣವನ್ನು ಪದೇಪದೇ ಮರಗಳ [illegible] ಚಿಮುಕಿಸುತ್ತಿರಬೇಕು. ಇದರಿಂದ ಪೋಷಣೆಗೊಂಡು ಮರಗಳು ತಮ್ಮ ಸ್ವಾಭಾವಿಕ ಸ್ಥಿತಿಗೆ ಬರುತ್ತವೆ (ಶ್ಲೋ.98–99).

ಹೂ ಹಣ್ಣುಗಳನ್ನು ಬಿಟ್ಟ ಮೇಲೆ (ತನ್ನ ಜೀವನಾವಧಿಯಲ್ಲಿ ಒಂದು ಸಾಮಾನ್ಯ ಘಟ್ಟದವರೆಗೆ) ಮರವು ಹಳೆಯದಾಗುತ್ತದೆ. ಇಂಥವಕ್ಕೆ ಹಾಲು ಮತ್ತು ಮಾಂಸ ಸಾರದ ನೀರೆರೆಯುವುದರಿಂದ ಇನ್ನೊಮ್ಮೆ ಫಲಕಾರಿಯಾಗುವಂತೆ ಮಾಡಬಹುದು (ಶ್ಲೋ. 100).

ನೀರಿನ ಕೊರತೆ ಇಲ್ಲವೇ ವೈಪರೀತ್ಯತೆಯಿಂದಾಗಿ ಮರದ ರೆಂಬೆಗಳೆಲ್ಲಾ ಮುರುಟಿ ಬಾಡತೊಡಗಿದರೆ, ಕೂಡಲೇ ಅದಕ್ಕೆ ತುಪ್ಪ, ವಿಡಂಗ ಮತ್ತು ಹಾಲುಗಳಿಂದ ಒಂದು ವಾರದವರೆಗೆ ನೀರೆರೆಯಬೇಕು (ಶ್ಲೋ. 101).

ಮರವು ನಿದ್ರೆಯಿಲ್ಲದಿರುವುದು, ಮೀನಿನಂತೆ ವಾಸನೆ ಬರುವುದು, ಎಲೆಗಳಿಲ್ಲದೆ ಬೋಳಾಗಿರುವುದು ಇಲ್ಲವೇ ಇರುವೆಗಳಿಗೆ ತುತ್ತಾಗಿರುವುದು ಹಾಗೂ ತೊಗಟೆಯು ನೀರು ನಿಂತು ಅಜೀರ್ಣದಿಂದಾಗಿ ಚಕ್ಕೆ ಏಳುವುದು ಇತ್ಯಾದಿಗಳನ್ನು ಗಮನಿಸಿದಾಗ ಅದಕ್ಕೆ ವೈದ್ಯಕೀಯ ಚಿಕಿತ್ಸೆ ನೀಡಬೇಕು (ಶ್ಲೋ. 102).

ಬೇರುಗಳಿಗೆ ಕೊಡಲಿಯೇಟುಕೊಟ್ಟು ಅಲ್ಲಿರುವ ಹಾನಿಕರ ಸಸ್ಯಸಾರವನ್ನು ಕಳೆದು ತೆಗೆದು ಬಳಿಕ ತುಪ್ಪ ಮತ್ತು ಜೇನು ಮಿಶ್ರಣದ ಕೀಟನಾಶಕವನ್ನು ಚಿಮುಕಿಸಿ, ಬಳಿಕ ಸೀಳುಗಾಯುಗಚ್ಚುಗಳನ್ನು ಜೇಡಿಯಿಂದ ಮುಚ್ಚಿ ತಿಳಿನೀರು ಹಾಲಿನಿಂದ ಮರಕ್ಕೆ ನೀರೆರೆಯಬೇಕು (ಶ್ಲೋ. 103).

ಸಕ್ಕರೆ, ಎಳ್ಳು ಮತ್ತು ಹಾಲು ಮಿಶ್ರಿತ ಜಲದಿಂದ ನೀರೆರೆದು, ಅದೇ ಕಣಕದಿಂದ ಲೇಪಿಸಿ, ಧೂಪಿಸುವುದರಿಂದ ಮರಗಳು ಒಣಗುವಿಕೆಯು ನಿಲ್ಲುತ್ತದೆ (ಶ್ಲೋ. 104).

ಪ್ರಿಯಂಗು, ವತ್ಸ (ರಿಗ್ಟಿಯ ಆ್ಯಂಟಿಡಿಸೆಂಟಿರಿಕ), ತರ್ಕಾರಿ (ಸೆಸ್ಬೇನಿಯ ಈಜಿಪ್ಟಿಕ), ವೇತಸ ಮತ್ತು ಅರ್ಜುನ ವೃಕ್ಷಗಳ ತೊಗಟೆಯ ಕಷಾಯವನ್ನು ಹಾಲಿನಲ್ಲಿ ಕುದಿಸಿ ಹಾಕುವುದರಿಂದ ವೃಕ್ಷದ ಅನಾರೋಗ್ಯ ಲಕ್ಷಣಗಳು ನಿಲ್ಲುತ್ತವೆ (ಶ್ಲೋ. 105).

ಪೀಡೆ(ಅಥವಾ ಹಾನಿಕಾರಕಗಳು) ನಿವಾರಣಾ ಮಂತ್ರಗಳು

ಪೀಡೆ ಮುಂತಾದವುಗಳ ನಿವಾರಣೆಗಾಗಿ ಪರಾಶರರು ತಮ್ಮ ಕೃಷಿ-ಪ್ರಸರಣ ಗ್ರಂಥದಲ್ಲಿ ಈ ಮುಂದೆ ತಿಳಿಸಿದ ಮಂತ್ರಗಳನ್ನು ಕೊಟ್ಟಿದ್ದಾರೆ :

"ಓಂ ಸಿದ್ಧಿರಸ್ತು! ಗುರು ಪಾದಾರವಿಂದಗಳಿಗೆ ವಂದನೆಗಳು. ಜಯವಾಗಲಿ! ಶಂಖದಂತೆ, ಕುಂದ ಪುಷ್ಪದಂತೆ, ಚಂದ್ರನಂತೆ ಶುಭ್ರವಾಗಿರುವ ಸ್ವರ್ಗದ ನಂದನವನವನ್ನು ಹೋಲುವ, ಮಹಾದೇವನ ಪೂಜ್ಯಸ್ಥಾನವಾಗಿರುವ ಹಿಮಗಿರಿಯ ಉತ್ತುಂಗಶಿಖರದಿಂದ ಪರಮಭಟ್ಟಾರಕ ಮಹಾರಾಜಾಧಿರಾಜನೆನಿಸಿದ ಕೀರ್ತಿಶಾಲಿ ರಾಮಚಂದ್ರನು ಸಾಗರತೀರದಲ್ಲಿ ಸಕಲದೇಶಗಳಿಂದ ಆಗಮಿಸಿದ ಅಗಣಿತ ಕಪಿಗಳಲ್ಲಿ ಅಗ್ರಗಣ್ಯನಾದ, ವಜ್ರಮುಷ್ಟಿ ಹಾಗೂ ಹರಿತ ಉಗುರುಗಳನ್ನುಳ್ಳ ನೇರನಿಲ್ಲುವ ಬಾಲದ, ಹಾಗೂ ತನ್ನ ಸಾಮಾನ್ಯ ಗಮನ ಶಕ್ತಿಯಿಂದಲೇ ವಾಯುವೇಗವನ್ನು ಮೀರಿ, ನೂರಾರು ಪರ್ವತಗಳನ್ನು ಅದುರಿಸಿ, ಶತ್ರುಸಾಮರ್ಥ್ಯವನ್ನು ದಮನಗೊಳಿಸಬಲ್ಲವನಾದ ವಿಜಯಶಾಲಿ ಹನುಮಂತನಿಗೆ ಹೀಗೆಂದು ಅನುಜ್ಞೆ ಕೊಡಲಿ-ನತ, ಭೊಮ್ಮ, ಉದ, ಗಂಧಿಯ, ಭೊಂಭೊ, ಗಂಧಿ, ದ್ರೊಧಿ, ಪಂಡರಮುಖ, ಮಹಿಷವಟುಂಡಿ, ಧೂಳಿಶೃಂಗ, ಕಪ್ಪೆ ಇತ್ಯಾದಿ ದುಷ್ಟಶಕ್ತಿಗಳು ಹಾಗೂ ಬೆಳೆಗಳಿಗೆ ನಾಶಕಾರಿಗಳಾದ ತಾಳಜಂಘಗಳು, ಗುಬ್ಬಿಗಳು, ಗಿಳಿಗಳು, ಜಿಂಕೆಗಳು, ಎಮ್ಮೆಗಳು, ಇಲಿಗಳು, ಹಂದಿಗಳು, ಮಿಡತೆಗಳು ಮುಂತಾದವು ಇಂತಿಂತಹ ಹಳ್ಳಿಗಳಲ್ಲಿರುವ ಇಂತಿಂತಹ ಕುಟುಂಬಗಳಿಗೆ ಸೇರಿದ ಇಂತಿಂತಹ ಖ್ಯಾತನಾಮಗಳವರ ಜಮೀನಿನಿಂದ ಹೊರಬೀಳದಿದ್ದರೆ ನಿನ್ನ ವಜ್ರಪ್ರಾಯ ಬಾಲದಿಂದ ಆ ಜಮೀನುಗಳನ್ನು ತಾಡಿಸು, 'ಓಂ, ಅಂ, ಶ್ರಿಂ, ಗ್ರಿಂ, ನಮಃ'"

ಮತ್ತೊಂದು ಪಂಥದಂತೆ ಪೀಡೆನಿವಾರಣೆ ಮಂತ್ರವು ಹೀಗಿದೆ :

"ಓಂ ಸಿದ್ಧಿರಸ್ತು ! ಗುರುಪಾದಾರವಿಂದಗಳಿಗೆ ವಂದನೆಗಳು. ಕೀರ್ತಿಶಾಲಿ ರಾಮಚಂದ್ರನಪಾದಗಳಿಗೆ ವಂದನೆಗಳು. ಜಯವಾಗಲಿ : ....

ಇಂತಹ ಹಳ್ಳಿಯಲ್ಲಿ ಇಂತಹ ಕುಟುಂಬದ ಇಂತಹವರ ಇಡಿಯ ಜಮೀನನ್ನು ತ್ರಿಪುಟಿ ರಕ್ಕಸಿ (ಕ್ಷುದ್ರದೇವತೆ)ಯು ತನ್ನ ಹಳುಮಕ್ಕಳೊಂದಿಗೆ ಭೊಂಭ, ಭೊಂಭಿ, ಪಂಡರಮುಖ, ಗಂಧಿ, ಧೂಳಿಶೃಂಗಿ ಇತ್ಯಾದಿ ಪೀಡೆ ರೂಪದಲ್ಲಿ ಬಂದುದಾದರೆ ಹಾಗೂ ಬೆಳೆಗೆ ಅನೇಕ ಬಗೆಯಲ್ಲಿ ಹಾನಿಯುಂಟುಮಾಡುತ್ತಿದ್ದರೆ, ನೀನು ನಿನ್ನ ದಂಡದಂತಹ ವಜ್ರಾಯುಧಕ್ಕಿಂತಲೂ ಕಠಿಣವಾದ ಬಾಲದಿಂದ ಅವಳನ್ನು ಮಕ್ಕಳು, ಬಂಧುಗಳಾದಿಯಾಗಿ ಸದೆಬಡಿದು ನಿನ್ನ ಕಠಿಣ ಉಗುರುಗಳಿಂದ ಛಿದ್ರಗೊಳಿಸಿ, ದಕ್ಷಿಣಸಾಗರದ

ಉಪ್ಪು ನೀರಿಗೆಸೆ. ಈ ಕಾರ್ಯದಲ್ಲಿ ಒಂದುಕ್ಷಣ ಅಲಕ್ಷ್ಯ ಮಾಡಿದಾಗ್ಯೂ ನಿಮ್ಮ ತಂದೆ ಕೇಸರಿ ವಾಯು ಹಾಗೂ ನಿನ್ನ ತಾಯಿ ಅಂಜನ ದೇವಿಯರಿಂದ (ಅಥವಾ ಅವರ ಹೆಸರಿನಲ್ಲಿ) ಶಾಪಗ್ರಸ್ತನಾಗು. ಇಲ್ಲದಪಕ್ಷದಲ್ಲಿ, ನಾನು ನಿನ್ನ ಸ್ವಾಮಿಯೂ ಅಲ್ಲ, ನೀನು ನನ್ನ ದೂತನೂ ಅಲ್ಲ" ಓಂ, ಗೃಹಂ, ಗ್ರಿಂ, ಗ್ರಟಿ!

ಈ ಮಂತ್ರವನ್ನು ಕೇತಕಿಪತ್ರದ ಮೇಲೆ ಈಲ್ವ ಮುಳ್ಳಿನಿಂದ ಬರೆದು, ಒಂದು ಭಾನುವಾರ ತಲೆಕೂದಲನ್ನು ಸಡಿಲವಾಗಿ ಬಿಟ್ಟುಕೊಂಡು (ತನ್ನ ಜಮೀನಿಗೆ ಹೋಗಿ) ಜಮೀನಿನ ಈಶಾನ್ಯ ಮೂಲೆಯಲ್ಲಿ ಬೆಳೆ (ಪೈರು)ಗಳ ನಡುವೆ ಗಿಡದ ಹೂವುಗಳಿಗೆ ಕಟ್ಟಬೇಕು.

ಆತ ಮಂತ್ರದ ಇನ್ನೊಂದು ಪಾಠಾಂತರವನ್ನು ಅರಗಿನ ಬಣ್ಣದಿಂದ ಬರೆದು ಬೆಳೆಗಳಿಗೆ ಕಟ್ಟಬೇಕು. ಇದರಿಂದ ರೋಗ, ಕೀಟ ಹಾಗೂ ಕಾಡುಪ್ರಾಣಿಗಳಿಂದ ಬೆಳೆಗೆ ಅಪಾಯದ ಭೀತಿಯಿರುವುದಿಲ್ಲ.

ಮಿಶ್ರಚಕ್ರಪಾಣಿಯು ತನ್ನ ಕೃತಿ ವಿಶ್ವ-ವಲ್ಲಭದಲ್ಲಿ ಸಸ್ಯ ಸಂರಕ್ಷಣೆಯನ್ನು ಕುರಿತು ಸವಿವರವಾಗಿ ಸೂಚಿಸಿದ್ದಾನೆ. ಅದರ ಕೆಲವು ಮುಖ್ಯಭಾಗಗಳ ಅನುವಾದವನ್ನು ಕೆಳಗೆ ಕೊಟ್ಟಿದೆ:

ಬಲವಾದ ಗಾಳಿ, ಮಂಜು, ಹೊಗೆ, ಬೆಂಕಿ, ಹಾನಿಕಾರಕ ಕೀಟಗಳು, ಮುಳ್ಳು ಹಂದಿಗಳಿಂದ ತುಂಬಾ ಎಚ್ಚರವಹಿಸಿ ಸಸ್ಯಗಳನ್ನು ಸಂರಕ್ಷಿಸಬೇಕು. ಇವು ಸಸ್ಯಪೀಡೆಗಳಾಗಿವೆ(ಶ್ಲೋ. 1).

ಸಸ್ಯಗಳ ಹತ್ತಿರ ಆಸರೆ ಹಾಗೂ ಆಧಾರಗಂಬಗಳನ್ನು ನೆಟ್ಟಿದಾದರೆ ಬಿರುಗಾಳಿಯ ಹಾನಿ ತಪ್ಪುತ್ತದೆ. ಇತ್ತೀಚೆಗೆ ನಾಟಿಮಾಡಿದ ಸಸ್ಯಗಳಿಗೆ ಮಳೆಗಾಲದಲ್ಲಿ ಬೆಳಗಿನ ಹೊತ್ತೂ ಚಳಿಗಾಲದಲ್ಲಿ ಮಧ್ಯಾಹ್ನವೂ ನೀರೆರೆಯಬೇಕು. ವಸಂತದಲ್ಲಿ ಬೆಳಿಗ್ಗೆ ಇಲ್ಲವೇ ಮಧ್ಯಾಹ್ನದ ವೇಳೆಯಲ್ಲಿ ನೀರೆರೆಯಬಹುದು (ಶ್ಲೋ. 2).

ಸಾಕಷ್ಟು ತಡೆಗಳನ್ನು ಹಾಕುವುದರಿಂದ......ಉರಿಯುವ ಬೆಂಕಿ.... (ಎಂದರೆ ಸಸ್ಯಗಳಿಗೆ) ಅವುಗಳನ್ನು ಹೊಗೆಯಿಂದ ರಕ್ಷಿಸಬಹುದು. ಸಾಕಷ್ಟು ಹುಲ್ಲು ಮತ್ತು ಒಣ ಕಡ್ಡಿಗಳಿರುವ ಜಾಗದಲ್ಲಿ ಬೆಂಕಿಯು ಹತ್ತಿಕೊಂಡು ಉರಿಯುವುದನ್ನು(ಅಪಾಯವನ್ನು) ತಪ್ಪಿಸಲು ಮುಂಜಾಗರೂಕ ಕ್ರಮ ಕೈಗೊಳ್ಳಬೇಕು(ಅಧ್ಯಾಯ 7, ಶ್ಲೋ. 1.)

ಹಾನಿಕಾರಿ ಕೀಟ ಹಾಗೂ ಇಲಿಗಳನ್ನು ಸಹ ಅವುಗಳ ವಾಸದ ಬಿಲಗಳನ್ನು ಮುಚ್ಚುವ ಔಷಧಿಗಳು, ಮಾಟಮಂತ್ರಗಳು ಹಾಗೂ ಮಾಯಾ (ಐಂದ್ರಜಾಲಿಕ)

ಚಿತ್ರಗಳನ್ನು ಬಿಡಿಸುವುದರಿಂದ ನಾಶಪಡಿಸಬಹುದು. ಔಷಧಿಗಳಲ್ಲಿ ಹಲವಾರು ಬಗೆಗಳಿವೆ; ಅವುಗಳಲ್ಲಿ ಅಸಹ್ಯಕರ ವಾಸನೆ ಬೀರುವಂತಹವು, ಅಥವಾ ತೀಕ್ಷ್ಣ ರುಚಿಯುಳ್ಳವು ಕೆಲವು. ಹಾಗೆಯೇ, ಮಾಯಾಚಿತ್ರಗಳೂ ಸಹ ಅತೀಂದ್ರಿಯ ಚಿತ್ರ ಇತ್ಯಾದಿಗಳನ್ನು ಒಳಗೊಂಡಿದ್ದು ಪ್ರಾಣಿಯನ್ನು ಬಂಧಿಸುತ್ತವೆ (ಅಥವಾ ಬಲಿಯನ್ನು ನಿಶ್ಚೇತನಗೊಳಿಸುತ್ತವೆ). ಮಂತ್ರಗಳಲ್ಲಿಯೂ ಸಹ ಅನೇಕ ಬಗೆಯಿವೆ. ಉದಾಹರಣೆಗೆ ಶಾರಂಗಧರ-ಪದ್ಧತಿಯಲ್ಲಿ ಉಲ್ಲೇಖಿಸಿದವುಗಳನ್ನು ಹೆಸರಿಸಬಹುದು :— ಮಿಡತೆ, ಇಲಿಗಳು, ಹಕ್ಕಿಗಳು ಮತ್ತು ಇರುವೆ ಇತ್ಯಾದಿಗಳಿಂದ ಬೆಳೆಗೆ ಅಪಾಯದ ಶಂಕೆಯಿರುವಾಗ, ಈ ಮುಂದೆ ತಿಳಿಸಿದ ಮಂತ್ರವನ್ನು ನೂರೆಂಟುಬಾರಿ ಜಪಿಸಿ, ಬರೆಯಬೇಕು (ಪತ್ರದ ಮೇಲೆ): ಓಂ, ಜಯಮಸ್ತು! ಕೀರ್ತಿಶಾಲಿ ಹನುಮಂತನು(ಕಪಿದೇವ) ಕಿಷ್ಕಿಂಧೆಯಲ್ಲಿರುವಾಗ ತನ್ನ ಪರಾಕ್ರಮವನ್ನು ಪ್ರಕಟಿಸಿದಾತನು ಸೂರ್ಯನನ್ನೇ ಮರೆಮಾಡಿದಾತನು, ಕ್ರಿಮಿಕೀಟಗಳಿಗೆ ಆಜ್ಞಾಪಿಸಲಿ– 'ಇಲಿಗಳು, ಪಕ್ಷಿಗಳು, ಇರುವೆಗಳು, ಮಿಡತೆಗಳು, ಪ್ರಾಯದ ಆನೆಗಳು, ಕೊಕ್ಕರೆಗಳು, ಕೀಟಗಳು, ಗಂಧಿಕ (?), ಜಿಂಜ (?) ಮುಂತಾದುವು ಇಲ್ಲಿ ಇನ್ನು ವಾಸಿಸದಿರಲಿ. ಹನುಮಂತನ ಅನುಜ್ಞೆಯಾಗಿ ಅವರಂತೆ ಚಲಿಸುವ ಕೀಟಗಳ ಶರೀರವು ಜಡವಾಗುತ್ತವೆ. ಆತ ಅವುಗಳನ್ನು ಓಡಿಸುತ್ತಾನೆ. ಸಾಗರದ ಆವರಣದತ್ತ ಸಾಗಿದ ನರಸಿಂಹನ ದಾಪುಗಾಲಿನ ಹೆಜ್ಜೆಯ ರಭಸಕ್ಕೆ ಉಂಟಾದ ಗಾಳಿಯ ವೇಗವು ಮೋಡಗಳನ್ನು ನಾಶಪಡಿಸಿದಂತೆ ಅವುಗಳನ್ನು ನಾಶಗೊಳಿಸುತ್ತಾನೆ. ಓಂ ಫಟ್। ನಮಃ :— ಈ ಮಂತ್ರವನ್ನು ಪತ್ರದಮೇಲೆ ಬರೆದು, ಜಪಿಸಿ ಬಳಿಕ ಪತ್ರವನ್ನು ಭೂಮಿಯಲ್ಲಿ ಹೂತಿಡಬೇಕು. ಹೀಗೆ ಮಾಡುವುದರಿಂದ ಜಮೀನಿನಲ್ಲಿರಬಹುದಾದ ಕೀಟಗಳು, ಹಕ್ಕಿಗಳು, ಇಲಿಗಳು, ಇರುವೆಗಳು ಮುಂತಾದುವೆಲ್ಲ ನಾಶವಾಗುತ್ತವೆ (ಅಧ್ಯಾಯ 7, ಶ್ಲೋ. 2).

ವಿವೇಕಿಯಾದವನು ವೃಕ್ಷಗಳ ನಡುವಣ ಭೂಮಿಯಲ್ಲಿ ಶತಪುಷ್ಪ (ಅನೆತಮ್ ಸೊವ) ಮತ್ತು ಕುವೇರಾಕ್ಷಿ(ಬಿಗ್ನೋನಿಯ ಸುವಿಯೊಲೆನ್ಸ್)ಗಳನ್ನು ದಟ್ಟವಾಗಿ ಬಿತ್ತಬೇಕು. ಇದರಿಂದ ಕೀಟಗಳು ನಿವಾರಣೆಯಾಗುತ್ತವೆ.

ಎಳೆಯ ಸಸ್ಯಗಳನ್ನು ಯಾವಾಗಲೂ ಕೊಟ್ಟಿಗೆ(ಜೋಪಡಿ)ಗಳಲ್ಲಿ ಅಥವಾ ಒಣಹುಲ್ಲು ಅಥವಾ ಎಲೆ ಹೊದಿಕೆಗಳಿಂದ ಕಾಪಾಡಬೇಕು ....(ಅಧ್ಯಾಯ 7, ಶ್ಲೋ. 4).

ಮರದ ಬೇರುಗಳಿಗೆ ನುಣ್ಣಗೆ ಪುಡಿಮಾಡಿದ ಎಳ್ಳನ್ನು ಹಾಕಿ, ಅವುಗಳ ಬೂದಿಯನ್ನು ಮರದ ಎಲ್ಲ ಭಾಗಗಳಿಗೂ ಚೆಲ್ಲಬೇಕು. ಬಳಿಕ ಒಂದು ಕೋಲಿನ ತುದಿಗೆ ಸ್ವಲ್ಪ ಬಟ್ಟೆ ಇಲ್ಲವೇ ಹುಲ್ಲು ಕಟ್ಟಿ ಅಥವಾ ನವಿಲುಗರಿಯಿಂದ ಬಡಿಯುವುದರಿಂದ ಪೀಡೆಗಳು (?) ನಾಶವಾಗುತ್ತವೆ (ಅಧ್ಯಾಯ 7, ಶ್ಲೋ.5).

ಮರಗಳ ಸುತ್ತ ಮುಳ್ಳುಕಂಟೆಗಳನ್ನು ಬೆಳೆಸುವುದು ಇಲ್ಲವೇ ಕುಳಿಗಳನ್ನು ತೋಡುವುದರಿಂದಲೂ ಸಂರಕ್ಷಿಸಬಹುದು. ಬುದ್ಧಿಶಾಲಿಗಳು ತುರ್ತುಸ್ಥಿತಿಗೆ ಅನುಗುಣವಾಗಿ ಇತರ ಎಲ್ಲ ವಿಧಾನಗಳನ್ನು ಅನುಸರಿಸಬೇಕು (ಅಧ್ಯಾಯ 7, ಶ್ಲೋ. 6).

ವಾತಪೀಡಿತ ಸಸ್ಯವು ಒರಟಾಗಿದ್ದು, ಛಿನ್ನಗಿದಂತಿರುತ್ತದೆ (ಎಂದರೆ ಕೊಬ್ಬುರಹಿತವಾರುತ್ತವೆ), ಕುಬ್ಜವಾಗಿ, ತೆಳ್ಳಗಿರುತ್ತದೆ ಇಲ್ಲವೇ ಉದ್ದವಾಗಿರುತ್ತದೆ. ತೂಕಡಿಕೆ, ಜಡತೆಗಳಿಂದ ತುಂಬಿದ್ದು ಹೂವು, ಹಣ್ಣು ಇಲ್ಲವೇ ವಲ್ಕ (?), ಗಳನ್ನು ಬಿಡುವುದಿಲ್ಲ (ಅಧ್ಯಾಯ 8, ಶ್ಲೋ. 10).

ಉಷ್ಣ ಪರಿಣಾಮವುಳ್ಳ ಉಗುರುಬೆಚ್ಚನೆಯ ದ್ರವಗಳು ಹಾಗೂ ಮಾಂಸ ಮತ್ತು ಕೊಬ್ಬುಸಾರಗಳಿಂದ ಪೋಷಿಸಿ, ದನುವಿನ ಸಗಣಿಯ ಬೂದಿಯನ್ನು ಧೂಳಿಸುವುದರಿಂದ ವಾತಪೀಡೆಯಿಂದ ನರಳುತ್ತಿರುವ ಸಸ್ಯಗಳಿಗೆ ಪ್ರಯೋಜನವಾಗುತ್ತದೆ (ಅಧ್ಯಾಯ 8, ಶ್ಲೋ. 11).

ನಿರ್ಗುಂಡಿಕ (ವೈಟೆಕ್ಸ್ ನೆಗುಂಡೊ), ಆರಗ್ವಧ (ಕೆಶಿಯೋ ಕಾರ್ಪಸ್ ಕೆಸಿಯ, ಫಿಸ್ಟುಲ), ಪಂಚಪಲ್ಲವಗಳು, ದಾಲ್ಚಿನ್ನಿ (ಚಕ್ಕೆ), ಮತ್ತು ಆಂಡ್ರೋಪೋಗಾನ್‌ಗಳ ಕಷಾಯದ ನೀರೆರೆದು, ಇದೇ ಕಷಾಯಕ್ಕೆ ಎಳ್ಳು ಸೇರಿಸಿದ ಕಣಕವನ್ನು ಬೇರುಗಳಿಗೆ ಲೇಪಿಸುವುದರಿಂದ ಮರಗಳ ವಾತಬಾಧೆಯು ಉಪಶಮನಗೊಳ್ಳುತ್ತದೆ (ಅಧ್ಯಾಯ 8, ಶ್ಲೋ. 12).

ಎಳೆಯ ಸಸಿಗಳಿಗೆ ಹೊದಿಕೆ ರಕ್ಷಣೆ ಕೊಡುವುದು ಹಾಗೂ ಬೇರುಗಳಿಗೆ ಎಣ್ಣೆ ಹಿಂಡಿಗೊಬ್ಬರಹಾಕಿ, ಆಡುಮೂತ್ರದ ನೀರೆರೆಯುವುದು ಉಪಯುಕ್ತವಾಗಿರುತ್ತದೆ. ಮಾವಿನಸಸಿಗಳಿಗೆ ಹುಳಿಗಂಜಿ, ಕುರಿಹಿಕ್ಕೆ ಗೊಬ್ಬರ ಹಾಗೂ ದಾಲ್ಚಿನ್ನಿ ಮತ್ತು ಅಶ್ವಗಂಧ (ಫಿಸೇಲಿಸ್ ಫ್ಲೆಕ್ಸೋಸ) ಗಳ ಕಷಾಯದ ನೀರೆರೆಯುವುದು ಉಪಯುಕ್ತ. (ಅಧ್ಯಾಯ 8, ಶ್ಲೋ. 13).

ವಾತವಿಕಾರದಿಂದಾಗಿ, ಮರಗಳ ಪಕ್ಕಗಳಲ್ಲಿ ಗೆಡ್ಡೆಗಳು ಮತ್ತು ಊದಿದ ಗಂತಿಗಳಿದ್ದಲ್ಲಿ, ಗೋಸಗಣಿ, ಭಿಲ್ಲಾಟಕ (ಸಿಂಪ್ಲೋಕಸ್ ರೆಸಿಮೋಸ) ಮತ್ತು ಕೊಬ್ಬುಗಳ ಲೇಪನ ಮಾಡಿ, ಹೊಲಸುಸಾರದ ನೀರೆರೆಯಬೇಕು. (ಅಧ್ಯಾಯ 8 ಶ್ಲೋ. 14).

ರಸ್ನ (ಇಕ್ಸ್ಯುಮನ್ ಗಿಡ ಅಥವಾ ವಿನೆಟಸ ಒಕ್ಸ್ಯಾಂಡ್ರ), ಅಶ್ವಗಂಧ, ಪವನಾರಿ (ರಿಸಿನಸ್ ಕಮ್ಯುನಿಸ್), ನಾಗ (ಮೆಸುವ ರಾಕ್ಸ್‌ಬರ್ಗಿ), ಪುಂತು ಕನೆ ಗಳ ಊರಿದ ಕಷಾಯದ ನೀರೆರೆಯುವುದು ಒಳ್ಳೆಯದು (ಮರಗಳ ವಾತರೋಗಗಳಿಗೆ) ಹಾಗೂ ಸಿತಪುಷ್ಪಿಕ

(ಅನೆಕಮ್ ಸೊಪ) ಊರುಕಪಾಯವು ತೀವ್ರ ವಾತಬಾಧೆಗಳನ್ನು ಸಹ ಉಪಶಮನ ಗೊಳಿಸುತ್ತದೆ (ಅಧ್ಯಾಯ 8, ಶ್ಲೋ. 15).

ವಿಗರ್ಂಡಿಕ, ಗುಗ್ಗುಲ(ಡೆಲಿಯಂ), ಸೊಫ (?ಸೋಪುಬೀಜ?), ತುಪ್ಪ, ಕುವರ(?), ಸೆತ್ರ (?) ಮತ್ತು ಅಸನ (ಟರ್ಮಿನೇಲಿಯ ಟೊಮೆಂಟೋಸ) ಬೀಜಗಳ ಹೊಗೆಯಿಂದ ಧೂಪಿಸುವುದು ಹಾಗೂ ಬೇರುಗಳಿಗೆ ಆಡುಪಿಕ್ಕೆ ಮತ್ತು ಎಣ್ಣೆ ಹಿಂಡಿಗಳ ಗೊಬ್ಬರ ಹಾಕುವುದು ವಾತಪೀಡಿತ ಮರಗಳಿಗೆ ಒಳ್ಳೆಯದು (ಅಧ್ಯಾಯ 8, ಶ್ಲೋ. 16).

ಪಿತ್ತಬಾಧೆಯಿಂದ ನರಳುತ್ತಿರುವ ವೃಕ್ಷವು, ಕಾಂತಿಹೀನ ಎಲೆಗಳು ಮತ್ತು ಶುಷ್ಕ ರೆಂಬೆಗಳಿಂದ ಕೂಡಿದ್ದು ತೆಳ್ಳಗೆ ಪ್ರಾಜ್ಞ (?) ವಾಗಿರುತ್ತದೆ. ಅದು 'ಸೂರ್ಯನ ತಾಪವನ್ನು ತಾಳಲಾರದುದಾಗಿದ್ದು, ಹಣ್ಣುಗಳೂ ಅಕಾಲದಲ್ಲಿ (ಕಾಲಮೀರಿ) ಮಾಗುತ್ತವೆ (ಅಧ್ಯಾಯ 8, ಶ್ಲೋ. 17).

ಜಿಡ್ಡಿನ, ತಂಪು ಹಾಗೂ ಸಿಹಿಗುಟುಕಿನಿಂದ ಹಾಗೂ ತಣ್ಣನೆಯ ಸುಗಂಧ ಜಲದಲ್ಲಿ ಸಿಹಿ ಮತ್ತು ವಿಡಂಗಗಳನ್ನು ಕರಗಿಸಿದ ನೀರಿನ ಪೋಷಣೆಗಳಿಂದ ಮರಗಳ ಪಿತ್ತವ್ಯಾಧಿಯು ಕೂಡಲೇ ಪರಿಹಾರವಾಗುತ್ತದೆ (ಅಧ್ಯಾಯ 8, ಶ್ಲೋ. 18).

ಉಸಿರ, ಮುಸ್ತ (ಸೈಪೆರಸ್ ರೊಟಂಡಸ್), ಜೇನು, ಹಾಲು ಮತ್ತು ತುಪ್ಪಗಳಿಂದ ಚಿಕಿತ್ಸೆ ಮಾಡಲಾಗುತ್ತದೆ ಅಥವಾ ಜಂಬಲ (ಜಿಕ್ಸ್ ಒಕ್ಕ್ಯಾಂಡ್ರ) ಮತ್ತು ವೇತಲ (?)ಗಳ ಲೇಪನ ಕೊಟ್ಟು ಸಿಹಿ, ಜೇನು, ತುಪ್ಪ ಇತ್ಯಾದಿಗಳ ಹೊಗೆಯ ಧೂಪಹಾಕಿ ಚಿಕಿತ್ಸೆ ಮಾಡಲಾಗುತ್ತದೆ (ಅಧ್ಯಾಯ 8, ಶ್ಲೋ. 19).

ಮರದ ಎಲೆ ಮತ್ತು ತೊಗಟೆಯು ಥಳುಕಿನಿಂದ ಹೊಳೆಯುತ್ತಿದ್ದು, ಹೂಗಳು ಪ್ರಕಾಶಮಾನವಾದ ಬಣ್ಣದಿಂದ ಕೂಡಿ, ಹಣ್ಣುಗಳು ನಿಸ್ಸಾರ (ಸಪ್ಪೆ) ವಾಗಿದ್ದು, ಕಲೆಗಳಿಂದ ಕೂಡಿದ್ದು ಬಳ್ಳಿಗಳಿಂದ ಸುತ್ತುವರಿಯಲ್ಪಟ್ಟು ಎಳೆಯ ಚಿಗುರುಗಳ ಕುಡಿ ಬಿಡುವುದರಲ್ಲಿ ತಡವಾದುದಾದರೆ ಆ ವೃಕ್ಷವು ಶ್ಲೇಷ್ಮವ್ಯಾಧಿ ಪೀಡಿತವಾಗಿರುತ್ತದೆ. ಘಾಟಾದ, ಉಷ್ಣ ಪರಿಣಾಮವುಳ್ಳ ಜಿಡ್ಡುರಹಿತ, ಕಹಿ ಇಲ್ಲವೇ ಹೊಟ್ಟೆಕಟ್ಟುವ ಒಗರಿನ ಔಷಧಿಯ ಗುಟುಕಿನಿಂದ ಬಾಧೆಯು ಕೂಡಲೇ ನಿವಾರಣೆಯಾಗುತ್ತದೆ. ಉಗುರು ಬೆಚ್ಚಗಿನ ನೀರೆರೆಯುವುದರಿಂದಲೂ ಸಹ ಶ್ಲೇಷ್ಮಪೀಡಿತ ಮರಗಳಿಗೆ ಆರಾಮ ವಾಗುತ್ತದೆ(ಅಧ್ಯಾಯ 8, ಶ್ಲೋ. 20–21).

ಪ್ಲಕ್ಷ , ಅರ್ಜುನ, ಔದುಂಬರಿ, ಸಪ್ತಪರ್ಣಿ ಮತ್ತು ನಿಂಬ (?)ಹಾಗೂ ವಮ(?), ಘಾಸ (ಸೈಪೆರಸ್ ಹಕ್ಸ್ಪೈಕಿಸ್ ಕಮ್ಯುನಿಸ್ ನ ಗೆಡ್ಡೆಬೇರು) ಮತ್ತು ರೋಹಿಸ (?)

ರೊಹಿತ? ಸೈಪೆರಸ್ ರೋಟುಂಡಸ್)ಗಳ ತೊಗಟೆಯ ಊರಿದ ಕಷಾಯದ ಚಿಕಿತ್ಸೆಯನ್ನು ಶ್ಲೇಷ್ಮವ್ಯಾಧಿ ಪೀಡಿತ ವೃಕ್ಷಗಳಿಗೆ ಸೂಚಿಸಲಾಗಿದೆ(ಅಧ್ಯಾಯ 8, ಶ್ಲೋ. 22).

ವಾಕ್ರ(ಸೊಲಾನಮ್ ಜಾಕ್ವಿನಿ), ಸಹಚರ(ಬರ್ಲೇರಿಯ ಪ್ರಯೋನಿಟಿಸ್ ಅಥವಾ ಕ್ರಿಸ್ಟೇಟ), ಅರಿಷ್ಟ(ಸೀಗೆಕಾಯಿ), ವಸ(ಗೆಂಡರುಸ್ಸ ವಲ್ಗಾರಿಸ್), ಖದಿರ ಮತ್ತು ರೊಹಿಸ (?) ಗಳ ಕಷಾಯವನ್ನು ಏಳುದಿನಗಳವರೆಗೆ ಎರೆಯುವುದರಿಂದ ಶ್ಲೇಷ್ಮಪೀಡಿತ ವೃಕ್ಷಗಳಿಗೆ ಪ್ರಯೋಜನವಾಗುತ್ತದೆ (ಅಧ್ಯಾಯ 8, ಶ್ಲೋ. 23).

ವಾತಪೀಡಿತ ವೃಕ್ಷವು ಮರುದ್ಭಾವ(ರೂಬಿಯಾ ಮಂಜಿಷ್ಠ), ಅವ್ಯುಟ (?), ವಸ (ಗೆಂಡರುಸ್ಸ ವಲ್ಗಾರಿಸ್), ವ್ಯಾಘ್ರಿ ಮತ್ತು ರೋಹಿಸ (?) ಗಳ ಕಷಾಯದಿಂದ ಚಿಕಿತ್ಸೆ ಮಾಡಿದಾಗ ಎಂದಿನಂತೆ ಆರೋಗ್ಯಕರವಾಗಿ ಚೇತರಿಸಿಕೊಳ್ಳುತ್ತದೆ (ಅಧ್ಯಾಯ 8, ಶ್ಲೋ. 24).

ವ್ಯಾಘ್ರಿ ರಸದಲ್ಲಿ ಕಕ್ಕಲ (ಸಾಮಾನ್ಯವಾಗಿ ಕಯಫಾಲ ಎಂದು ಹೆಸರು) ವನ್ನು ಮಿಶ್ರಮಾಡಿ ಏಳುದಿನಗಳವರೆಗೆ ಲೇಪನಕೊಡುವುದು ಶ್ಲೇಷ್ಮಬಾಧಿತ ಘನಪತ್ರ (ಬೊಹೇವಿಯ ಪ್ರೊಕುಂಬೆನ್ಸ್) ಮತ್ತು ಕರ (?) ವೃಕ್ಷಗಳಿಗೆ ಉಪಯುಕ್ತವಾಗಿರುತ್ತದೆ (ಅಧ್ಯಾಯ 8, ಶ್ಲೋ. 25).

ನಿದ್ರಾಹೀನತೆ, ಕಳೆಗುಂದಿರುವಿಕೆ, ಎಲೆಗಳು ಉದುರುವಿಕೆ, ರೆಂಬೆಗಳ ಕೊನೆಗಳು ಮುರುಟಿ ಸೊರಗುವಿಕೆ ಹಾಗೂ ಹಣ್ಣುಗಳಲ್ಲಿ ದುರ್ವಾಸನೆ ಸೂಸುವಿಕೆ ಇವೆಲ್ಲ ಸಾಮಾನ್ಯವಾಗಿ ಹೆಚ್ಚು ನೀರೆರೆಯುವಿಕೆ ಹಾಗೂ ಇರುವೆ (ಗೆದ್ದಲು) ಪೀಡನೆಗಳಿಂದ ಸಂಭವಿಸುತ್ತವೆ. (ಅಧ್ಯಾಯ 8, ಶ್ಲೋ. 26).

ರೋಗಪೀಡಿತ ಮರದ ಬೇರುಗಳಿಗೆ ಲಘುವಾಗಿ ಅಲ್ಲಲ್ಲಿ ಕತ್ತರಿಸಿ (ಕಚ್ಚುಮಾಡಿ) ಅದರ ಗಾತ್ರಕ್ಕನುಗುಣವಾಗಿ ಅಲ್ಲಿರುವ ವ್ಯಾಧಿಸೂಚಕ ಸಸ್ಯರಸವು ಹೊರಹೋಗುವಂತೆ ಮಾಡಬೇಕು. ಬಳಿಕ ಕಚ್ಚುಗಳಿಗೆ ಎಳ್ಳು ಮತ್ತು ತುಪ್ಪದೊಡನೆ ಬೆರೆಸಿದ ವಿಡಂಗದಿಂದ ಮುಚ್ಚಿಕೆಹಾಕಿ, ಮರದ ಬುಡದ ಪಾತಿಗೆ ಗೋಡುಮಣ್ಣು ತುಂಬಿ, ಹಾಲು ಮತ್ತು ನೀರೆರೆದು ಪೋಷಿಸಬೇಕು. ಆಗ ಮರವು ರೋಗರಹಿತವಾಗಿ ಚೆನ್ನಾಗಿ ಬೆಳೆಯುತ್ತದೆ(?) (ಅಧ್ಯಾಯ ಶ್ಲೋ. 27).

ಕ್ಷೌಳ (?), ಅರ್ಜುನ, ಟ್ವಾಕ್ (ದಾಲ್ಚಿನ್ನಿ), ಕೃಮಿಭೂಜ್ (ಎಂಬೆಲಿಯ ರಿಬ್ಸ್) ಮತ್ತು ಹಾಲುಗಳಿಂದ ಸಿದ್ಧಪಡಿಸಿದ ಕಣಕದಿಂದ ಲೇಪನ (ಪಟ್ಟು) ಹಾಕಿ, ಬೇರಿಗೆ

ಬೂದಿಯ ಗೊಬ್ಬರಕೊಟ್ಟು, ವಿರಳವಾಗಿ ನೀರುಹಾಯಿಸುವಿಕೆಗಳು ಮರಕ್ಕೆ ಉಪಯುಕ್ತ ಚಿಕಿತ್ಸೆಗಳಾಗಿವೆ(ಅಧ್ಯಾಯ 8, ಶ್ಲೋ. 28).

ಪೋಷಣೆಯ ಕೊರತೆಯಿಂದಾಗಿ ಉಂಟಾಗುವ ಅಜೀರ್ಣತೆಯಿಂದ ಮರಗಳಲ್ಲಿ ಎಲೆಗಳು ಹುಟ್ಟುವುದಿಲ್ಲ. ಇರುವೆಗಳಿಂದ ಮುತ್ತಿದ್ದುದಾದರೆ ಎಲೆಗಳೆಲ್ಲ ಸುಕ್ಕಾಗಿ ಮುದುಡುತ್ತವೆ(ಅಧ್ಯಾಯ 8, ಶ್ಲೋ. 29).

ಆಗ ಬೇರುಗಳಿಗೆ ಮೂರು ಅಳಲೆಕಾಯಿಗಳು ಮತ್ತು ಕುಟೀರಕಾಯ್ (ಬಿಗ್ನೋನಿಯ ಸವಿಯೊಲಿನ್ಸ್) ಗಳ ಗೊಬ್ಬರ ಹಾಕಿ, ಬಳಿಕ ನೀರೆರೆಯಬೇಕು. ಹಾಗೆಯೇ ವಿಡಂಗ, ಇಂಗಡಿ ಮತ್ತು ಜೇನುತುಪ್ಪಗಳ ಲೇಪನವೂ ಸಹ ಉಪಯುಕ್ತವಾಗಿರುತ್ತದೆ (ಅಧ್ಯಾಯ 8, ಶ್ಲೋ. 30).

ಮರದ ಬೇರುಗಳಿಗೆ ವೈಕಂಕತ (ಪ್ಲಕೋರ್ಟಿಯ ಸಪಿಡ) ಎಲೆಗಳ ಪುಡಿಯನ್ನು ಹಾಕಿ, ತುಪ್ಪ ಮತ್ತು ಜೇನುತುಪ್ಪಗಳಿಂದ ಪೋಷಿಸಿ, ಧೂಪಿಸುವುದರಿಂದ ಅಜೀರ್ಣತೆಯೂ ಪರಿಹಾರವಾಗುತ್ತದೆ(ಅಧ್ಯಾಯ 8, ಶ್ಲೋ. 31).

ಮರದ ಕೊಂಬೆಗಳು ತುದಿಯಲ್ಲಿ ಒಣಗಿದ್ದು, ತೊಗಟೆಯು ಸುಲಿಯತೊಡಗಿ ಎಲೆಗಳೆಲ್ಲ ಮುರುಟಿ ಬಾಡಿದ ಮರವು ವೈದ್ಯಕೀಯ ಚಿಕಿತ್ಸೆಯಿಂದ ಚೆನ್ನಾಗಿ ಬೆಳೆದು ದಟ್ಟವಾಗಿ ಎಲೆಗಳನ್ನು ಪಡೆಯುತ್ತದೆ. ಈ ವಿಷಯದಲ್ಲಿ ಕರ್ಕಂಧು ಮತ್ತು ವರ (ಅಮ್ಯರ್ಯಾಂತಸ್ ಆಸ್ಪರ) ಗಳ ಬೀಜಗಳನ್ನು ಹಸುವಿನ ಹಾಲಿನಲ್ಲಿ ನೆನೆಸಿ ಸಿದ್ಧಪಡಿಸಿದ ಕಣಕದ ಹಿಟ್ಟಿನ ಲೇಪನದಿಂದ ಔಷಧಿಗಳ ವಿನಾಶಕಾರಿ ಪರಿಣಾಮಗಳನ್ನು ಪರಿಹರಿಸಲಾಗುತ್ತದೆ(ಅಧ್ಯಾಯ 8, ಶ್ಲೋ. 32-33).

ರೋಗಪೀಡಿತ ಮರದ ಬೇರುಗಳಿಂದ ಆರ್ದ್ರ ಜೇಡಿಮಣ್ಣನ್ನು ಅಗೆದು ತೆಗೆದು ಮಡಿಗಳನ್ನು ಹೊಸ ಗೋಡಿನಿಂದ ತುಂಬಿಸಬೇಕು. ಮರಕ್ಕೆ ದಟ್ಟವಾಗಿ ಜೇನು, ತುಪ್ಪ ಮತ್ತು ಹಾಲುಗಳ ಲೇಪನವಿತ್ತು, ಹಾಲು ನೀರುಗಳೆರೆದು ಪೋಷಿಸಬೇಕು (ಅಧ್ಯಾಯ 8, ಶ್ಲೋ. 34).

ಸಿಕ, ತುಪ್ಪ ಮತ್ತು ಗುಗ್ಗುಳಗಳಿಂದ ಧೂಪಿಸಿದ ಮರವು ನಿರೋಗಿಯಾಗಿ ಮನೋಹರವಾದ ಎಲೆಗಳು ಮತ್ತು ತೊಗಟೆಯನ್ನು ಹೊಂದುತ್ತದೆ (ಅಧ್ಯಾಯ 8, ಶ್ಲೋ. 35).

ಯಾವುದೇ ತೋರಿಕೆಯ ಲೋಪದೋಷವೂ ಕಾಣದೆ ಮರದ ಎಲೆಗಳೆಲ್ಲ ಉದುರತೊಡಗಿ, ರೆಂಬೆಗಳು ತುದಿಯಲ್ಲಿ ಮುರುಟಿ ಬಾಡಿ, ತೊಗಟೆಯೂ ಸುಲಿಯ

ಬೆಕ್ಕುಗಳು, ನರಿಗಳು ಮತ್ತು ಹಂದಿಗಳ ಮಲವನ್ನು ಬಿಳಿಸಾಸುವೆ ಮತ್ತು ಹಸುವಿನ ಗಂಜಳದೊಡನೆ ಸೇರಿಸಿದ(ಕಣಕದ ಹಿಟ್ಟಿನ) ಧೂಪಹಾಕುವುದರಿಂದ ಮರಗಳ ಒಳಾಂಗಗಳಲ್ಲಿ(ಅಂತರ್ಭಾಗ) ಸೇರಿ ಹಾನಿಯುಂಟುಮಾಡುವ ಕೀಟಗಳು ನಾಶವಾಗುತ್ತವೆ. ಇದರೊಟ್ಟಿಗೆ ತುಪ್ಪದ ಹೊಗೆ ಹಾಕುವುದರಿಂದ ಬಾಹ್ಯಕೀಟಬಾಧೆ ನಿವಾರಣೆಯಾಗುತ್ತದೆ(ಅಧ್ಯಾಯ 8, ಶ್ಲೋ. 43).

ಎಲೆಗಳು ಮತ್ತು ರೆಂಬೆಗಳ ಮೇಲೆಲ್ಲ ಹಾಲು ಮತ್ತು ನೀರುಗಳಿಂದ ಧೂಪನ, ಪೋಷಣೆ ಹಾಗೂ ಪ್ರೋಕ್ಷಣೆಗಳನ್ನು ಮಾಡಿ, ಬಿಳಿಸಾಸುವೆ, ವಚ, ವಿಡಂಗ, ಹಿಂಗು, ಅರ್ಜುನ, ದಾಲ್ಚಿನ್ನಿ, ಎಳ್ಳು ಮತ್ತು ಹಾಲುಗಳ.........ಕಣಕದ ಲೇಪನ ಕೊಡಬೇಕು (ಅಧ್ಯಾಯ 8, ಶ್ಲೋ. 44).

ಇಂಗುಡೀ- ಹಣ್ಣು ಮತ್ತು ದಾಲ್ಚಿನ್ನಿ ಬೆರೆಸಿದ ನೀರಿನಿಂದ ಪೋಷಿಸುವುದರಿಂದ ಎಲ್ಲ ಮರಗಳಲ್ಲಿಯ ಹುಳುಹುಪ್ಪಟೆ ಮತ್ತು ಕೀಟಗಳನ್ನು ನಾಶಮಾಡಬಹುದು. ಹಾಲು, ತುಪ್ಪ, ಇಂಗುಡಿ ಮತ್ತು ಬೆಲ್ಲಗಳ ಧೂಪನವು ಅವುಗಳನ್ನು ಎಂದಿನ ಸ್ಥಿತಿಗೆ ತರುವುದರಲ್ಲಿ ಉಪಯುಕ್ತವಾಗಿರುತ್ತದೆ (ಅಧ್ಯಾಯ 8, ಶ್ಲೋ. 45).

ಇತರ ಮರಗಳ ನಡುವೆ ಹಾಕಿರುವ ಪಲಾಶ(ಮುತ್ತುಗ) ವೃಕ್ಷವು ಸಂಪೂರ್ಣ ಬೆಳೆದಾಗ ಅಶೋಕ ವೃಕ್ಷದಂತೆಯೇ ನೀರು ಮತ್ತು ಜಲಕೀಟಗಳಿಂದ ಬರುವ ರೋಗಗಳನ್ನು ನಿವಾರಿಸುತ್ತದೆ (ಅಧ್ಯಾಯ 8, ಶ್ಲೋ. 46).

ನೀರಿನಿಂದ ಪೋಷಣೆ, ಮೇಲ್ಭಾಗದಲ್ಲಿ ದನದ ಸಗಣಿ ಇಡುವಿಕೆ (ಮುರಿದ ಮೋಟುಗಳ), ಮಡಿಗಳನ್ನು ದನದ ಸಗಣಿ ಮತ್ತು ಗೋಡುಗಳಿಂದ ತುಂಬುವಿಕೆ, ಹಾಗೂ ವಿಡಂಗ, ಜೇನು, ತುಪ್ಪ ಮತ್ತು ಎಳ್ಳುಗಳನ್ನು ಮಿಶ್ರ ಮಾಡಿದ ಹಾಲಿನ ಲೇಪನವು–ಮುರಿದ ಮರವು ಮತ್ತೊಮ್ಮೆ ಬೆಳೆಯುವಂತೆ ಮಾಡುತ್ತದೆ (ಅಧ್ಯಾಯ 8, ಶ್ಲೋ. 47).

ಮುರಿದ ಮರಕ್ಕೆ ಮೊದಲು ಅಂಕೋಲ ಎಣ್ಣೆಯನ್ನು ಹಚ್ಚಿ, ಮುಂದೆ ಬಾವಿ ಮಣ್ಣನ್ನು ಲೇಪಿಸಿ, ಹಾಲುನೀರುಗಳಿಂದ ಪೋಷಿಸುವುದರಿಂದ ಕ್ಷಿಪ್ರವಾಗಿ ಬೆಳೆಯುತ್ತದೆ (ಅಧ್ಯಾಯ 8, ಶ್ಲೋ. 48).

ಮಂಜು (ಹಿಮ) ಹೊಡೆದ ಮರವು ಅಂಕೋಲ, ಹಾಲು, ತುಪ್ಪ ಮತ್ತು ಜೇನು ತುಪ್ಪಗಳಿಂದ ಲೇಪಿಸಿ, ಬೇರುಗಳಿಗೆ ಗೋಡು ಮತ್ತು ಎಣ್ಣೆ ಹಾಕಿ, ಹಾಲು ಮತ್ತು ಎಳ್ಳು ಲೇಪನವಿತ್ತು ಬಳಿಕ ನೀರೆರೆಯುವುದರಿಂದ ಮತ್ತೊಮ್ಮೆ ಬೆಳೆಯುತ್ತದೆ. (ಅಧ್ಯಾಯ 8, ಶ್ಲೋ. 49).

ಹಿಮಹಿಡಿದು ಹಾಳಾದ ಮರದ ಬೇರುಗಳಿಗೆ ಎಳ್ಳಿನ ಪುಡಿ, ವಿಡಂಗ, ಕುಲ್ಮಾಷ ಮತ್ತು ಹಾಲು ಮಿಶ್ರಣಗಳನ್ನು ಹಾಕಿ ಎಳ್ಳು ಮತ್ತು ಅಂಕೋಲ ಎಣ್ಣೆಗಳ ಕಣಕದಿಂದ ಲೇಪನಕೊಡುವುದರಿಂದ ಮತ್ತೊಮ್ಮೆ ಚಿಗುರೊಡೆಯುತ್ತದೆ(ಅಧ್ಯಾಯ8, ಶ್ಲೋ. 50).

ಬೇರುಗಳಿಗೆ ಹಸುವಿನ ಸಗಣಿ ಮತ್ತು ಬೂದಿಗಳನ್ನು ಹಾಕಿ ನಿರ್ಗುಂಡಿಕ ಮತ್ತು ಸೂಫ (? ಅಶೋಕ ಅಥವಾ ಸೋಪುಬೀಜ ?) ಗಳನ್ನು ಊರಿಸಿದ ನೀರೆರೆದು, ಹಂದಿ ಕೊಬ್ಬಿ(?)ನ ಲೇಪನ ಹಾಗೂ ಪಾಲನೆಗಳಿಂದ ಮರವು ವಿಪುಲವಾಗಿ (ತುಂಬಾ ಅದ್ಧೂರಿಯಿಂದ) ಚಿಗುರೊ(ಎಲೆ, ರೆಂಬೆ, ಕೊಂಬೆ ಇತ್ಯಾದಿ)ಡೆಯುತ್ತದೆ (ಅಧ್ಯಾಯ 8, ಶ್ಲೋ. 51).

ಬೆಂಕಿಯಿಂದ ಕಮರಿದ ಮರವು ಹಾಲು ಮತ್ತು ನೀರುಗಳಿಂದ ಪೋಷಿಸಿ, ಜೇನು, ಕಮಲದ ಬೇರು ಮತ್ತು ಹಾಲುಗಳ ಲೇಪನಮಾಡಿ, ಮಡಿಯಲ್ಲಿ ಗೋಡುತುಂಬುವುದರಿಂದ ಮತ್ತೊಮ್ಮೆ ಎಲೆಗಳನ್ನು ಬಿಡುವಂತಾಗುತ್ತದೆ(ಅಧ್ಯಾಯ 8, ಶ್ಲೋ. 52).

ಉರಿಗೆಸಿಕ್ಕಿ ಕಮರಿದ ವೃಕ್ಷವು ಕರ್ಕಂಧೂ, ಎಲುಬುಸೇಣ, ಮತ್ತು ಜೇನು, ಮಣ್ಣು ಹಾಗೂ ಹಾಲೂ ಮತ್ತು ಅತಸಿ (ಅಗಸೆ, ಲಿನಮ್ ಉಸಿಟೇಟಿಸ್ಸಿಮಮ್)ಗಳ ಲೇಪನವಿತ್ತು ಹೊಲಸುಸಾರದ ನೀರೆರೆಯುವುದರಿಂದ ಪುನಃ ಬೆಳೆಯಲಾರಂಭಿಸುತ್ತದೆ (ಅಧ್ಯಾಯ 8, ಶ್ಲೋ. 53).

ಸಿಡಿಲೊಡೆದ ಮರದ ಬೇರುಗಳಿಗೆ ಹಾಲು ಮತ್ತು ಮಧೂಕ, ಮುದ್ಗ, ಎಳ್ಳು ಮತ್ತು ಮಾಷಗಳ ಪುಡಿಬೆರೆಸಿದ ನೀರೆರೆದು ತುಪ್ಪ ಮತ್ತು ಜೇನುತುಪ್ಪಗಳ ಲೇಪನಕೊಡುವುದರಿಂದ ಕೂಡಲೇ ಪುನಃ ಬೆಳೆಯಲಾರಂಭಿಸುತ್ತದೆ (ಅಧ್ಯಾಯ 8, ಶ್ಲೋ. 54).

ಸಿಡಿಲುಬಡಿದ ಮರವು ಉಸೀರ, ಮುಸ್ತ, ಜೇನು ಮತ್ತು ಹಾಲುಗಳ ಲೇಪನವಿತ್ತು ಆರ್ದ್ರಕಮಾಡಿ, ಸಿತ, ವಿದರಿ, ಎಳ್ಳು ನಾಗ-ಜಹ್ವ (?), ಕುಮುದ್ವತಿ (ನೀರುಹೂವಿ (ನೈದಿಲೆ)ನ ದಂಟು ? ಅಥವಾ ವಿಲ್ಲರ್ಸಿಯಾ ಇಂಡಿಕ?), ಸುನ (? ಮೊಗ್ಗು ?), ಹಾಲು ಮತ್ತು ನೀರುಗಳಿಂದ ಪೋಷಿಸಿದರೆ ಪುನಃ ಬೆಳೆಯುತ್ತದೆ (ಅಧ್ಯಾಯ 8, ಶ್ಲೋ. 55).

ಬಿರುಗಾಳಿಯಿಂದ ಮುರಿದ ಮರವು ಮೊದಲು ಆಧಾರ ಕೋಲು (ಗೂಟ) ಗಳನ್ನು ನಿಲ್ಲಿಸಿ ಅವುಗಳಿಗೆ ಹಗ್ಗಗಳ ಮೂಲಕ ಕಟ್ಟಿ ನಿಲ್ಲಿಸಿ ಬಳಿಕ ಪ್ಲಾಕ್ಷ, ಆಮ್ಲ (? = ಆಮ್ಲ = ಹುಣಸೆಹುಳಿ?), ಔದುಂಬರ, ದಾಲ್ಚಿನ್ನಿ, ಜೇನು, ತುಪ್ಪ, ಸಿತ ಮತ್ತು

ಹಾಲುಗಳ ಲೇಪನ ಹಾಕುವುದರಿಂದ ದಟ್ಟವಾಗಿ ಎಲೆಗಳು, ರೆಂಬೆಕೊಂಬೆಗಳನ್ನು ಬಿಟ್ಟು ಹೂಹಣ್ಣುಗಳನ್ನು ಬಿಡುತ್ತದೆ. ಬಳಿಕ ಅವರ ಬೇರುಗಳಿಗೆ ಒಣಸಗಣಿ ಮತ್ತು ಗೋಡು ಗಳನ್ನು ಹಾಕಿ ನೀರುಹಾಲೆರೆಯಬೇಕು (ಅಧ್ಯಾಯ 8, ಶ್ಲೋ. 56-57).

ಹಳೆಯದಾದ ಜೀರ್ಣವಾದ ಮರ ಇಲ್ಲವೇ ಒತ್ತಡಕ್ಕೆ ಸಿಲುಕಿ ಜಜ್ಜಿದ ಮರವು ಹಾಲು ಮತ್ತು ನೀರು ಇಲ್ಲವೇ ವಿಡಂಗ, ಹಾಲು ಮತ್ತು ನೀರುಗಳನ್ನು ಉಣಿಸುವುದರಿಂದ ಪುನಶ್ಚೇತನಗೊಳ್ಳುತ್ತದೆ (ಅಧ್ಯಾಯ 8, ಶ್ಲೋ. 58).

ಬೇರುಸಮೇತ ತೆಗೆದ ಮತ್ತು ಬೇರೆಡೆಯಲ್ಲಿ ನಾಟಿಮಾಡಿದ ಗಿಡದ ಬೇರುಗಳಿಗೆ ಮಧೂಕ ಮತ್ತು ಎಳ್ಳು ಪುಡಿಗಳ ಗೊಬ್ಬರಹಾಕಿ ಮಡಿಯಲ್ಲಿ ಗೋಡು ಮತ್ತು ಪಸುವಿನ ಸಗಣಿ ತುಂಬಬೇಕು (ಅಧ್ಯಾಯ 8, ಶ್ಲೋ. 59).

ಆನೆಯಂಥ ಹುಚ್ಚೆದ್ದ ಪ್ರಾಣಿಗಳು ಜಜ್ಜಿಹಾಕಿದ ಮರದ ಬೇರಿಗೆ ಒಣಸಗಣಿಹಾಕಿ, ಸುತ್ತಲೂ ಮಡಿತೋಡಿ ಗೋಡುತುಂಬಬೇಕು. ಬಳಿಕ ಮರಕ್ಕೆ ಜೇನು ಮತ್ತು ತುಪ್ಪ ಗಳನ್ನು ಸವರಿ ನೀರು ಮತ್ತು ಹಾಲುಗಳಿಂದ ಪ್ರೋಕ್ಷಿಸಬೇಕು (ಅಧ್ಯಾಯ 8, ಶ್ಲೋ. 60)

ಸೋಂಕುಜಾಡ್ಯಕ್ಕೆ ತುತ್ತಾದ ಮರವು ಪಕ್ಕದಲ್ಲಿ ಸಿಂತ (?) ರೋಗಪೀಡಿತ ಮರವನ್ನು ಬೇರುಸಮೇತ ಕಿತ್ತು ತೆಗೆದು, ಕೆಳಮಣ್ಣನ್ನು ಅಗೆದುತೆಗೆದು ಫಲವತ್ತಾದ ಮಣ್ಣು ಹಾಕಿ, ಬಳಿಕ ನೀರೆರೆಯುವುದರಿಂದ ಶೀಘ್ರವಲ್ಲಿ ಚೇತರಿಸಿಕೊಳ್ಳುತ್ತದೆ (ಅಧ್ಯಾಯ 8, ಶ್ಲೋ. 61).

ಅಥವಾ ಒಂದು ಮರವನ್ನು ಸ್ಥಳಾಂತರಿಸಬೇಕಿದ್ದಲ್ಲಿ, ಮೊದಲು ಒಂದು ಕುಳಿ ತೋಡಿ, ಶುದ್ಧಮಾಡಿ, ಗೋಡಿನಿಂದ ತುಂಬಿಸಿ ಬಳಿಕ ಅಗೆದು ತೆಗೆದು (ಸ್ಥಳಾಂತರಿಸ ಬೇಕಾದ) ಮರವನ್ನು ಅಲ್ಲಿ ನೆಟ್ಟು ನೀರಿನಿಂದ ಪ್ರೋಕ್ಷಿಸಬೇಕು (ಅಧ್ಯಾಯ 8, ಶ್ಲೋ. 62).

ಮರವು ಕಾಲಿಕವಾಗಿ ಹೂಹಣ್ಣುಗಳನ್ನು (ಸಂತಾನೋತ್ಪಾದನ ಕ್ರಿಯೆ) ಬಿಡ ದಿದ್ದಲ್ಲಿ ಅದಕ್ಕೆ ವೈದ್ಯಕೀಯ ಚಿಕಿತ್ಸೆ ಇಲ್ಲವೇ ಮಾಂತ್ರಿಕರ ಮಾಟಚಿತ್ರ ಮತ್ತು ಮಂತ್ರ ಗಳನ್ನು ಹಾಕಿಸಬೇಕು (ಅಧ್ಯಾಯ 8, ಶ್ಲೋ. 63).

ಒತ್ತಟ್ಟಿಗೆ ತಂದ (?) ಗಿಡಗಳ ಮಡಿಗಳಲ್ಲಿ ಗೋಡು ತುಂಬಿ ಅವುಗಳ ಸುತ್ತಲ ಭೂಮಿಯಲ್ಲಿ ನೇಗಿಲುಸಾಲುಮಾಡಿ ಎಳ್ಳು ಬಿತ್ತನೆಮಾಡಬೇಕು. ಅಲ್ಲದೆ ಅವು ಗಳಿಗೆ (ಗಿಡಗಳಿಗೆ) ಜೇನು, ತುಪ್ಪ, ಮತ್ತು ಹಾಲುಗಳ ಲೇಪನಹಾಕಿ ದೀರ್ಘ ಅಂತರ ಗಳಲ್ಲಿ ನೀರೆರೆಯಬೇಕು (ಅಧ್ಯಾಯ 8, ಶ್ಲೋ. 64).

ಬತ್ತ ಮತ್ತು ಮಲ್ಲುಗಳನ್ನು ಊರಿಸಿದ ನೀರೆರೆದು, ಎಳ್ಳು, ತುಪ್ಪ ಮತ್ತು ಹಾಲುಗಳ ಲೇಪನಮಾಡಿ, ಹಾಲು, ಅರ್ಜುನ, ದಾಲ್ಚಿನ್ನಿ, ಕೃಮಿನುವ್ (ಎಂಬ್ಲಿಯಾ ರೈಬ್ಸ್) ಮತ್ತು ನೀರುಗಳ ಕಷಾಯವೆರೆದು ಪೋಷಿಸುವುದರಿಂದ ಹೂಹಣ್ಣುಗಳು ವಿಪುಲವಾಗಿ ಬೆಳೆಯಲು ಅನುಕೂಲವಾಗುತ್ತದೆ (ಅಧ್ಯಾಯ 8, ಶ್ಲೋ. 65).

ಅಯುಕ್ತ (ತಪ್ಪು, ದೋಷಪೂರಿತ) ಚಿಕಿತ್ಸೆಯಿಂದ ದುಷ್ಪರಿಣಾಮಕ್ಕೊಳಗಾದ ಮರವು ಹೂಹಣ್ಣು ಬಿಡುವುದಕ್ಕೆ ಹಾಲು ಮತ್ತು ನೀರುಗಳ ಪೋಷಣೆಮಾಡುವುದೂ ಸಹ ಉಪಯುಕ್ತವಾಗಿರುತ್ತದೆ. ಎಳ್ಳು, ಹಾಲು ಮತ್ತು ತುಪ್ಪಗಳ ಲೇಪನ, ಪೋಷಣೆಗಳೂ ಸಹ ತಪ್ಪು ಚಿಕಿತ್ಸೆಯಿಂದಾದ ದುಷ್ಪರಿಣಾಮ ಪರಿಹಾರಕ್ಕೆ ಒಳ್ಳೆಯವು (ಅಧ್ಯಾಯ 8, ಶ್ಲೋ. 66).

ಕಾಂತಿಹೀನವಾಗಿ, ಮುರುಟಿ ಉದುರುವ ಎಲೆಗಳು ಮತ್ತು ಹಣ್ಣುಗಳನ್ನು ಹೊಂದಿರುವ, ವಿರಳ ರೋಗಗಳುಳ್ಳ ಮತ್ತು ಕಾಂಡ ಮತ್ತು ಕೊಂಬೆಗಳ ಬೆಳವಣಿಗೆ ಸಂಪೂರ್ಣ ಸ್ಥಗಿತಗೊಂಡಿರುವ ವೃಕ್ಷವು ಚಿಮುಕಿಸುವಿಕೆ ? ಇಲ್ಲವೇ ಪೋಷಣೆಗಳಿಂದ ಸಾಮಾನ್ಯ ಎಲೆಗಳನ್ನು (?) ಬಿಡುವಂತಾಗುತ್ತದೆ (ಅಧ್ಯಾಯ 8, ಶ್ಲೋ. 67).

ಜೇನು ಮತ್ತು ತುಪ್ಪಗಳ ಧೂಪಹಾಕಿದ ಹಾಗೂ ಹಾಲು ಮತ್ತು ಬಾರ್ಲಿ ಹಿಟ್ಟಿನ ಕಷಾಯದ ನೀರೆರೆದು ಪೊಲಸು ಸಾರದಿಂದ ಪೋಷಿಸಿದ ಮರವು ಹಸುರೆಲೆಗಳನ್ನು ಬಿಟ್ಟು ಒಂದೇ ಸಮನೆ ಹಣ್ಣುಗಳನ್ನು ಬಿಡುತ್ತದೆ(ಅಧ್ಯಾಯ 8, ಶ್ಲೋ. 68).

ಮರಗಳು ಒಣಗುವಿಕೆ (ನಶಿಸುವಿಕೆ)ಯು ಸಕ್ಕರೆ, ಎಳ್ಳು ಮತ್ತು ಗೋಕ್ಷೀರಗಳ ಲೇಪನ ಮತ್ತು ಪೋಷಣೆಗಳಿಂದ ಸಂಪೂರ್ಣವಾಗಿ ನಿವಾರಣೆಯಾಗುತ್ತದೆ (ಅಧ್ಯಾಯ 8, ಶ್ಲೋ. 69).

ಕಾಟು (ಸ್ಟ್ರೈಕ್-ಸ್ಯಾಂಕಸ್ ಡಯೊರ) ಅಂಗ (?)ಫಿಲ್ಲೋಟಿ, ವಚ, ವಿಡಂಗ, ಬಿಳಿ ಸಾಸುವೆ, ಕೃಷ್ಣ (ಪೈಪರ್ ಲಾಂಗಮ್) ಮತ್ತು ಹರಿದ್ವಯ (ಕುರ್ಕುಮ ಲಾಂಗ ಮತ್ತು ಆರೊಮ್ಯಾಟಿಕ)ಗಳನ್ನು ಬೇಯಿಸಿದ ತುಪ್ಪಕ್ಕೆ ಹಾಲು ಸೇರಿಸಿ ಲೇಪಿಸುವುದರಿಂದ ಮರಗಳು ಬಹಳಷ್ಟು ಅಸ್ವಸ್ಥ (ತೊಂದರೆ)ಗೊಳ್ಳುತ್ತವೆ(ಅಧ್ಯಾಯ 8, ಶ್ಲೋ. 70).

ರೋಗ ಚಿಕಿತ್ಸೆ ಮಾಡಿದಾಗ್ಯೂ ಮರವು ಗುಣಹೊಂದಿ ಚೆನ್ನಾಗಿ ಬೆಳೆಯದಿದ್ದಲ್ಲಿ, ಬೆಳವಣಿಗೆಯನ್ನು ಪ್ರಚೋದಿಸಲು ಅದನ್ನು ಅಲ್ಲಿಂದ ಸ್ಥಳಾಂತರಿಸಿ ಬೇರೆಡೆನಾಟಿ ಮಾಡಬೇಕು (ಅಧ್ಯಾಯ 8 ಶ್ಲೋ. 71).

ಮರಗಳ ರೋಗಸೂಚನೆ (ಅಥವಾ ಫಲಸಾಧನೆಯ ಕೊರತೆ)ಯು ಧವ (ಗ್ರಿಸ್ಲಿಯಾ ಟೊಮೆಂಟೋಸ), ವೇತಸ, ಶರ್ಕಾರಿ, ಪ್ರಿಯಂಗು ಮತ್ತು ಅರ್ಜುನಗಳ ತೊಗಟೆಯನ್ನು ಹಾಲಿನಲ್ಲಿ ಬೇಯಿಸಿ ಸಿದ್ಧಪಡಿಸಿದ ಕಣಕಲೇಪನದಿಂದ ನಿಲ್ಲುತ್ತದೆ (ಅಧ್ಯಾಯ 8, ಶ್ಲೋ. 72.)

ಎಳ್ಳು, ಬಾರ್ಲಿ, ಶತಪುಷ್ಪ(ಅನೆತಮ್ ಸೊವ), ಮಾಸ ಮತ್ತು ದತ್ತೂರ (ದತ್ತೂರ ಅಲ್ಬ, ಬಿಳಿ ಉಮ್ಮತ್ತಿಕಾಯಿ) ಗಳ ಕಷಾಯದ ನೀರೆರೆಯುವುದರಿಂದ ಮರಗಳ ರೋಗ ಸೂಚಕಗಳು ನಿಲ್ಲುತ್ತವೆ ಹಾಗೂ ಬೆಲ್ಲ, ನೀರು ಮತ್ತು ಹಾಲುಗಳ ಮಿಶ್ರದ್ರಾವಣದಿಂದ ಪೋಷಿಸುವುದರಿಂದ ಉಲ್ಲಾಸಗೊಳ್ಳುತ್ತವಲ್ಲದೆ ಎಲೆಗಳೂ ಅದ್ದೂರಿಯಿಂದ ಬೆಳೆಯುತ್ತವೆ (ಅಧ್ಯಾಯ 8, ಶ್ಲೋ. 73).

ಸುರಭಿತೃಣ (? ಸುವಾಸಿತ ಹುಲ್ಲು), ಬಿದರಿ, ಪದ್ಮಕ (ಕಮಲ), ಉಸಿರ, ತಕ್ಕ (ಟರ್ಬಿನೇಲಿಯಾ ಚೆಬುಲ ಅಥವಾ ಸಿಟ್ರಿನ), ತಗರ, ರಜನಿ (ಕರ್ಕುಮ ಲಾಂಗ), ಕುಷ್ಠ, ಶ್ರೀ-ದ್ರು (ಬೇಲ, ಅಥವಾ ಕ್ಲೋವ್), ಜಂತುಘ್ನ (ಎಂಬೆಲಿಯಾ ರೈಬ್ಸ್) ಮತ್ತು ಲೋಧ್ರ-ಇವೆಲ್ಲವನ್ನು ಒಂದು ಪ್ರಸ್ಥ ಅಳತೆಯಷ್ಟು ತೆಗೆದುಕೊಂಡು ಸುರತರು (?), ನೀರು ಮತ್ತು ಹಾಲು ಹಾಗೂ ಎಳ್ಳೆಣ್ಣೆಗಳಲ್ಲಿ ಬೇಯಿಸಿ ಹಾಕುವುದು ಸಸ್ಯರೋಗ ನಿವಾರಣೆಯಲ್ಲಿ ಉಪಯುಕ್ತ (ಅಧ್ಯಾಯ 8, ಶ್ಲೋ. 74).

ವಿದಂಗ ಮತ್ತು ಲೋಧ್ರ ಗಳನ್ನು ಬೆರೆಸಿದ ಸಿತ, ಹಾಲು ಮತ್ತು ನೀರುಗಳಿಂದ ಪೋಷಿಸಿ, ಧೂಪಿಸುವುದು ಮರಗಳು ಮತ್ತು ಬಳ್ಳಿಗಳಿಗೆ ಯಾವಾಗಲೂ ಒಳ್ಳೆಯದು. ಚಳಿಗಾಲದಲ್ಲಿ ವಿಶೇಷವಾಗಿ ಬಳ್ಳಿ ಮತ್ತು ಮರಗಳ ಮಡಿಗಳನ್ನು ಗೋಡಿನಿಂದ ತುಂಬಿಸಿ, ಎಳ್ಳು, ಹಾಲು ಮತ್ತು ನೀರುಗಳೆರೆದು ಪೋಷಿಸಬೇಕು(ಅಧ್ಯಾಯ 8, ಶ್ಲೋ. 75–76).

ಸುರಪಾಲನು ಹೇಳಿರುವ ಸಸ್ಯರೋಗಚಿಕಿತ್ಸೆ

ಸುರಪಾಲನು ತನ್ನ ಕೃತಿ ವೃಕ್ಷಾಯುರ್ವೇದದಲ್ಲಿ ಸಸ್ಯರೋಗ ಚಿಕಿತ್ಸೆಯನ್ನು ಕುರಿತು ಕುತೂಹಲಕಾರಿ ವಿವರಗಳನ್ನಿತ್ತಿದ್ದಾನೆ. ಆ ಕೃತಿಯ ಕೆಲವು ಮುಖ್ಯಭಾಗಗಳನ್ನು ಕೆಳಗೆ ಕೊಟ್ಟಿದೆ:

ವಾತವೈಪರೀತ್ಯತೆಗಳನ್ನು ಮಾಂಸ, ದುಗ್ಧರಸ, ಕೊಬ್ಬು ಮತ್ತು ತುಪ್ಪಗಳಿಂದ

ಉಪಚರಿಸಿ ಗುಣಪಡಿಸಬೇಕು. ಇವುಗಳಿಂದ ಒದಗುವ ಪೌಷ್ಟಿಕಾಂಶವು ಎಲ್ಲ ವಾತ ಬಾಧೆಗಳನ್ನು ನಿವಾರಿಸುತ್ತದೆ (ಶ್ಲೋ. 185).

ಸೀಗೆ-ಕಾಯಿ (ಅಂಟವಾಳಕಾಯಿ), ಹಸುವಿನ ಕೊಂಬು, ಕುದುರೆಕೂದಲು ಕರಿಮೆಣಸು, ತುಪ್ಪ ಮತ್ತು ಕಡಲಹಂದಿಗಳನ್ನು ಬೇಯಿಸಿದ ಎಣ್ಣೆಗೆ ಹಂದಿಯು ದುಗ್ಧರಸ ಸೇರಿಸಿ ಸಮೃದ್ಧವಾಗಿ ಧೂಪಹಾಕುವುದರಿಂದ ವಾತರೋಗಗಳು ಶೀಘ್ರವಾಗಿ ಗುಣವಾಗುತ್ತವೆ(ಶ್ಲೋ. 186).

ಶ್ಲೇಷ್ಮ (ಕಫ) ವೈಪರೀತ್ಯದಿಂದಾದ ರೋಗಗಳನ್ನು ಕಟುವಾಸನೆಯ, ಕಹಿ ಹಾಗೂ ಘಾಟುವಸ್ತುಗಳು, ಪಂಚಮೂಲ (ಐದು ಬೇರುಗಳು) ಕಷಾಯ ಮತ್ತು ಸುಗಂಧ ಜಲಗಳಿಂದ ವಾಸಿಮಾಡಬೇಕು(ಶ್ಲೋ. 187).

ಶ್ಲೇಷ್ಮ ಮೂಲದ ಸಕಲವ್ಯಾಧಿಗಳ ನಿವಾರಣೆಗೆ ಮರದ ಬೇರಿಗೆ ಬಿಳಿಸಾಸುವೆಯ ಎಣ್ಣೆ ಹಿಂಡಿಯನ್ನು ಹಾಕಿ, ಎಳ್ಳು ಮತ್ತು ಬೂದಿಗಳನ್ನು ಕರಗಿಸಿದ ನೀರು ಹಾಯಿಸ ಬೇಕು (ಶ್ಲೋ. 188).

ವಾತಬಾಧೆಗೊಳಗಾದ ಮರಗಳ ಬೇರಿನಬಳಿ ಮಣ್ಣನ್ನು ಅಗೆದು ತೆಗೆದು ವಿವೇಕಿ ಯಾದವನು ಅಲ್ಲಿ ರೋಗನಿವಾರಣೆಗಾಗಿ ಹೊಸ ಒಣಮಣ್ಣನ್ನು ತುಂಬಬೇಕು. (ಶ್ಲೋ. 189).

ವಿವೇಕಶಾಲಿಯಾದವನು ಎಲ್ಲ ಜಾತಿಯ ಮರಗಳಲ್ಲೂ ಪಿತ್ತಾವಿಕಾರದಿಂದಾದ ರೋಗಗಳನ್ನು ಬಹುವಾಗಿ ತಂಪಾದ ಶೀತಪರಿಣಾಮಕಾರಿ ಸಿಹಿವಸ್ತುಗಳಿಂದ ನಿವಾರಿಸ ಬೇಕು (ಶ್ಲೋ. 190).

ಅತಿಮಧುರದ ಬೇರು, ಜೇನು ಮತ್ತು ಮಧೂಕ ಹಾಗೂ ಜೇನಿನೊಡನೆ ಬೆರೆಸಿದ ಹಾಲಿನ ಕಷಾಯಗಳ ನೀರೆರೆಯುವುದರಿಂದ ಮರಗಳ ಪಿತ್ತವ್ಯಾಧಿಗಳು ನಿವಾರಣೆಯಾಗುತ್ತವೆ(ಶ್ಲೋ. 191).

ಮೂರು ಅಳಲೆಕಾಯಿಗಳ ಕಷಾಯ (?)ದಲ್ಲಿ ತುಪ್ಪ ಮತ್ತು ಜೇನುಗಳನ್ನು ಬೆರೆಸಿದ ನೀರೆರೆಯುವುದರಿಂದ ಎಲ್ಲ ಬಗೆಯ ಮರಗಳಲ್ಲಿಯೂ ಪಿತ್ತವ್ಯಾಧಿ ನಿವಾರಣೆ ಯಾಗುತ್ತದೆ (ಶ್ಲೋ. 192).

ವಿವೇಕಶಾಲಿಯಾದವನು ಮರದ ಬೇರುಗಳಿಂದ ಕಾಂಡರಕ ? ದಂತಹ ಕೀಟಗಳನ್ನು ಅಗೆದು ತೆಗೆದು ಏಳುದಿನಗಳವರೆಗೆ ತಣ್ಣೀರು ಹಾಯಿಸಬೇಕು (ಶ್ಲೋ. 193).

ಹಾಲು, ಸತ್ತಪ್ರಾಣಿಜಲ, ವಚ ಮತ್ತು ಪಶುವಿನ ಸಗಣಿಯಿರುವ ನೀರೆರೆಯುವುದರಿಂದ ಹಾಗೂ ಬಿಳಿಸಾಸುವೆ, ಮುಸ್ತ, ಮಲ್ಲು, ವಚ, ಕುಷ್ಠ ಮತ್ತು ಅತಿವಿಷಗಳಿಂದ ಸಿದ್ಧಪಡಿಸಿದ ಕಣಕ ಲೇಪನದಿಂದ ಕೀಟಗಳು ನಾಶವಾಗುತ್ತವೆ (ಶ್ಲೋ. 194).

ಬಿಳಿಸಾಸುವೆ, ರಾಮವ(?), ವಿಡಂಗ, ವಚ, ಕರಿಮೆಣಸು, ಗೋಮಾಂಸ, ಅಂಬು (?)ಲೋಧ್ರ ದೊಡನೆ ಮಿಶ್ರಮಾಡಿದ ಎಮ್ಮೆಕೊಂಬು ಮತ್ತು ಪಾರಿವಾಳದ ಮಾಂಸಗಳ ಹೊಗೆಯ ಧೂಪಹಾಕುವುದರಿಂದ ಮರಗಳನ್ನು ಮುತ್ತುವ ಕೀಟಸಮುದಾಯವು ಒಮ್ಮೆಗೆ ನಿರ್ಮೂಲವಾಗುತ್ತದೆ(ಶ್ಲೋ. 195).

ತುಪ್ಪದೊಡನೆ ಬೆರೆಸಿದ ವಿಡಂಗ ಲೇಪನ, ಏಳುದಿನಗಳವರೆಗೆ ನೀರು ಬೆರೆಸಿದ ಹಾಲು ಹಾಯಿಸುವಿಕೆ ಹಾಗೂ ಗೋಮಾಂಸ, ಬಿಳಿಸಾಸುವೆ ಮತ್ತು ಎಳ್ಳುಗಳ ಕುದಿ ಹಿಟ್ಟು ಕಟ್ಟುವಿಕೆ(ಪೌಲ್ಟೀಸು ಕಟ್ಟುವಿಕೆ)ಗಳು ಕಾಂಡರ (?) ದಂತಹ ಕೀಟನಿರ್ಮೂಲನೆಯಲ್ಲಿ ಪರಿಣಾಮಕಾರಿಗಳು(ಶ್ಲೋ. 196).

ಹುಳುತಿಂದ ಗಿಡಕ್ಕೆ ನೀರಿನಲ್ಲಿ ಕರಗಿಸಿದ ಎಣ್ಣೆಹಿಂಡಿ ದ್ರಾವಣದ ನೀರುಹಾಕಬೇಕು. ಎಲೆಗಳ ಮೇಲಿನ ಕೀಟಗಳು ಬೂದಿ ಮತ್ತು ಇಟ್ಟಿಗೆ ಪುಡಿಗಳನ್ನು ಧೂಳಿಸುವುದರಿಂದ ನಾಶವಾಗುತ್ತವೆ(ಶ್ಲೋ. 197).

ಕೀಟಗಳಿಂದಾದ ಬಾಧೆ (ಹಾನಿ)ಯು ವಿಡಂಗ, ಎಳ್ಳು, ಗೋಮೂತ್ರ, ತುಪ್ಪ ಮತ್ತು ಬಿಳಿಸಾಸುವೆಗಳ ಲೇಪನ ಪಟ್ಟು ಹಾಕಿ ಹಾಲೆರೆಯುವುದರಿಂದ ಶಮನವಾಗುತ್ತದೆ (ಶ್ಲೋ. 198).

ಹಿಮ ಮತ್ತು ಬಿರುಗಾಳಿಗಳಿಂದಾಗಿ ನಾಶವಾದ ಮರಗಳನ್ನು ಮೊದಲು ಬಾಹ್ಯ ರಕ್ಷಣೆಯಿಂದ ಸಂರಕ್ಷಿಸಿ ಬಳಿಕ ಸತ್ತಪ್ರಾಣಿಜಲ ಮತ್ತು ಹಾಲುಗಳನ್ನೆರೆದು ಪೋಷಿಸುವುದು ಲಾಭದಾಯಕ (ಶ್ಲೋ. 199).

ಮುರಿದ ಮರಗಳ ಮುರಿದ ಬಿರುಕು ಸ್ಥಳಗಳನ್ನು ಫಲವತ್ತಾದ ಮಣ್ಣಿನಿಂದ ತುಂಬಿಸಿ, ಪ್ಲಾಕ್ಷ ಮತ್ತು ಔದುಂಬರ ತೊಗಟೆಗಳನ್ನು(ಪುಡಿ, ಹುಡಿಗಳನ್ನು) ತುಪ್ಪ, ಜೇನು, ದ್ರಾಕ್ಷಾರಸ ಮತ್ತು ಹಾಲುಗಳೊಡನೆ ಬೆರೆಸಿದ ಕಣಕದ ಲೇಪನ(ಪಟ್ಟು) ಹಾಕಿ

ಬಳಿಕ ಪಗ್ಗಗಳಿಂದ ಬಿಗಿದುಕಟ್ಟಿ, ಎಮ್ಮೆಹಾಲನ್ನು ಚಿಮುಕಿಸಿ, ಕೊನೆಯಲ್ಲಿ ಬೇರುಗಳಿಗೆ ಯಥೇಚ್ಛವಾಗಿ ನೀರೆರೆಯಬೇಕು(ಶ್ಲೋ. 200–201).

ಮರದ ರೆಂಬೆಕೊಂಬೆಗಳು ಉಮುರಿಬಿದ್ದಿದ್ದಲ್ಲಿ, ಅಂಥ ರೆಂಬೆಗಳ ಮುರಿದ ತುದಿಗೆ ಜೇನು ಮತ್ತು ತುಪ್ಪಗಳ ಪಟ್ಟುಹಾಕಿ, ನೀರುಹಾಲು ಎರೆಯುವುದರಿಂದ ಆಕಾಶವೇ ಕಾಣದಷ್ಟು ಸಮೃದ್ಧವಾಗಿ ರೆಂಬೆ, ಕವಲುಗಳನ್ನು ಬಿಡುತ್ತವೆ(ಶ್ಲೋ. 202).

ಬೆಂಕಿಯಿಂದ ಕಮರಿದ ಮರಗಳ ಸುಟ್ಟಭಾಗವನ್ನು ಕೆರೆದು (ಅಥವಾ ಕತ್ತರಿಸಿ) ತೆಗೆದು, ನೀರುಹಾಲು ಚಿಮುಕಿಸಿ, ಪಿಡಿ ಇತ್ಯಾದಿಗಳ ಕಪಾಲ (ತಲೆಬುರುಡೆ)ದ ಧೂಪಹಾಕುವುದರಿಂದ ಚೆನ್ನಾಗಿ ಎಲೆಗಳನ್ನು ಬಿಡುತ್ತದೆ (ಶ್ಲೋ. 203).

ಬೆಂಕಿಯು ಹಾನಿಗೀಡಾದ ಮರಗಳು ಕಮಲದಗಿಡದ ಕಣಕದ ಹಿಟ್ಟಿನಿಂದ ಪೂರ್ತಿಯಾಗಿ ಪಟ್ಟುಹಾಕಿ ಸತ್ತಪ್ರಾಣಿಜಲದಿಂದ ಪೋಷಿಸುವುದರಿಂದ ಮುಗಿಲನ್ನು ಮರೆಮಾಡುವಷ್ಟು ವಿಪುಲವಾಗಿ ಎಲೆಗಳನ್ನು ಬಿಡುತ್ತವೆ(ಶ್ಲೋ. 204).

ಸಿಡಿಲು ಬಡಿದ ಮರಗಳು ವಿದರಿ, ಸಕ್ಕರೆ, ಕೆಂಪು ಶಂಖಪಾಷಾಣ ಮತ್ತು ಎಳ್ಳುಗಳ ಪಟ್ಟುಹಾಕಿ, ನೀರುಹಾಲೆರೆಯುವುದರಿಂದ ಸುಂದರವಾದ ಎಲೆಗಳನ್ನು ಬಿಡುತ್ತವೆ (ಶ್ಲೋ. 205).

ಬೆಂಕಿಯು ಹಬೆಯಿಂದ ಮುದುರಿ ಉಂಟಾದ ಸುಕ್ಕುಗಳು ಎಲ್ಲೆಡೆಯಲ್ಲೂ ಸಕ್ಕರೆ, ನೀರು, ಎಳ್ಳು ಮತ್ತು ಹಾಲುಲೇಪನ(ಪಟ್ಟು)ಹಾಕಿ, ಅವುಗಳಿಂದಲೇ ಪೋಷಿಸುವುದರಿಂದ ಮಾಯವಾಗುತ್ತವೆ. ಕಮಲದ ಗಿಡಗಳ ಲೇಪನವೂ ಸಹ ಇದೇ ಪರಿಣಾಮ ಉಂಟುಮಾಡುತ್ತದೆ(ಶ್ಲೋ. 206).

ಬರಡುಮಣ್ಣಿನ(ನಿಸ್ಸಾರ ಮಣ್ಣಿನ) ದೆಸೆಯಿಂದಾಗಿ ಸುಕ್ಕುಗಳುಂಟಾಗಿದ್ದಲ್ಲಿ, ಬೇರುವಲಯದಿಂದ ಅಂಥ ಮಣ್ಣನ್ನು ತೆಗೆದು ಫಲವತ್ತಾದ ಮಣ್ಣನ್ನು ಹಾಕಬೇಕಲ್ಲದೆ ಮರಕ್ಕೆ ನೀರು ಹಾಲೆರೆದು ಪೋಷಿಸಬೇಕು(ಶ್ಲೋ. 207).

ಮುದುಡು(ಸುಕ್ಕು)ವಿಕೆಯು ನೀರಿನ ಕೊರತೆಯಿಂದಾಗಿದ್ದರೆ, ಆಗ ಮರಕ್ಕೆ ನೀರು ಸೇರಿಸಿದ ಹಾಲು ಹಾಯಿಸಬೇಕಲ್ಲದೆ ಅವುಗಳಿಗೆ(ಎಂದರೆ ಮುದುಡಿದ ಮರಗಳಿಗೆ) ಪಿಡಿ ಇತ್ಯಾದಿಗಳ ಧೂಪಹಾಕಬೇಕು(ಶ್ಲೋ. 208).

ಮರಗಳ ಕಟ್ಟು(ದಾರುಗಟ್ಟುವಿಕೆ) ಆಲ ಮತ್ತು ಔದುಂಬರ ತೊಗಟೆಗಳ(ಪುಡಿ, ಹುಡಿ)ನ್ನು ಗೋಸಗಣಿ, ಜೇನು ಮತ್ತು ತುಪ್ಪಗಳೊಡನೆ ಬೆರೆಸಿ ಸರಿಯಾಗಿ ಪಟ್ಟು ಹಾಕುವುದರಿಂದ ಮಾಯವಾಗುತ್ತದೆ(ಶ್ಲೋ. 209).

ಮರಗಳ ಜೋಲುವಿಕೆಯು ಧಾವ, ಶ್ರೀಪರ್ಣಿಕ, ಶ್ಯಾಮ, ವೇತಸ, ಮತ್ತು ಅರ್ಜುನ ವೃಕ್ಷಗಳ ತೊಗಟೆ(ಪುಡಿ, ಹುಡಿ)ಯನ್ನು ತುಪ್ಪ ಮತ್ತು ಜೇನುಗಳೊಡನೆ ಬೆರೆಸಿ ಪಟ್ಟು ಹಾಕುವುದರಿಂದ ನಿಲ್ಲುತ್ತದೆ(ಶ್ಲೋ. 210).

ಸರಿಯಾಗಿ ಆರೈಕೆ ಮಾಡದಿರುವುದರಿಂದ ಉಂಟಾದ ರೋಗಗಳು ಸಸ್ಯ(?)ವನ್ನು ವಿಡಂಗ ಪುಡಿಯೊಡನೆ ಬೆರೆಸಿದ ಕಣಕದ ಪಟ್ಟು ಹಾಕಿ ನೀರುಹಾಲು ಹಾಯಿಸುವುದರಿಂದ ಗುಣವಾಗುತ್ತವೆ(ಶ್ಲೋ. 211).

ಮರಗಳ ಕಾವಮಾಲಿ ಜಾಡ್ಯವು ಬಾರ್ಲಿ ಮತ್ತು ಗೋಧಿ ಹಿಟ್ಟುಗಳು ಹಾಗೂ ಜೇನನ್ನು ನೀರು ಹಾಲಿನಲ್ಲಿ ಕರಗಿಸಿ ನಿಯತವಾಗಿ ಹಾಕಿ ಪೋಷಿಸುವುದರಿಂದ ಒಂದು ವಾರದಲ್ಲಿ ಗುಣವಾಗುತ್ತದೆ (ಶ್ಲೋ. 212).

ಬರಡು ವೃಕ್ಷಗಳಿಗೆ ಹಾಲು ಮತ್ತು ಸತ್ತಪ್ರಾಣಿಜಲವೆರೆದು ಪೋಷಿಸುವುದರಿಂದ ಹೂಹಣ್ಣುಗಳನ್ನು ಬಿಟ್ಟು ಎಲ್ಲ ಆಕಾಂಕ್ಷೆಗಳನ್ನು ಪೂರೈಸತೊಡಗುತ್ತವೆ(ಶ್ಲೋ. 213).

ಬರಡುವೃಕ್ಷಗಳು ಎಳ್ಳು, ಬಾರ್ಲಿ, ಕುಲತ್ಥ, ಮಾಷ, ಮತ್ತು ಮುದ್ಗ ಗಳ ತರಕಾರಿ ಮಾಂಸ ಪಲ್ಯ (ಹುಳಿ) ವನ್ನು ತಣಿಸಿ(ಆರಿಸಿ) ಹಾಕಿ ಪೋಷಿಸುವುದರಿಂದ ಹೂ ಹಣ್ಣುಗಳನ್ನು ಬಿಟ್ಟು ಭರವಸೆ ನೀಡುತ್ತವೆ (ಶ್ಲೋ. 215).

ಎಳ್ಳು ಮತ್ತು ಕುರಿ ಹಾಗೂ ಆಡುಪಿಚಿಕೆಗಳ ಹುಡಿಯನ್ನು ಪ್ರತಿಯೊಂದು ಒಂದು ಆಢಕ ದಷ್ಟು ತೆಗೆದುಕೊಂಡು, ಒಂದು ಪ್ರಸ್ಥದಷ್ಟು ಬಾರ್ಲಿಹಿಟ್ಟು, ಒಂದು ದ್ರೋಣ ನೀರು ಹಾಗೂ ಇವೆಲ್ಲಕ್ಕೂ ತೂಕದಲ್ಲಿ ಸಮವಾಗಿರುವಷ್ಟು ಗೋ ಮಾಂಸ-ಇವೆಲ್ಲವನ್ನೂ (ಮಿಶ್ರಮಾಡಿ) ಒಂದು ವಾರದವರೆಗಿಟ್ಟು ಬಳಿಕ ಬರಡು ವೃಕ್ಷಗಳಿಗೆ ಹಾಕಿ ಪೋಷಿಸುವುದರಿಂದ ಅವು ಹೂ ಹಣ್ಣು ಬಿಡುವಂತಾಗುತ್ತವೆ (ಶ್ಲೋ. 216-217).

ಹೆಣ್ಣಾನೆ ಇಲ್ಲವೇ ಎಮ್ಮೆಯ ಹಾಲಿಗೆ ಯಥೇಚ್ಛವಾಗಿ ಹುಲಿ, ಚಿರತೆ ಮತ್ತು ಗುಳ್ಳೆನರಿ ಮಾಂಸಸಾರವನ್ನು ಸೇರಿಸಿಹಾಕಿ ಪೋಷಿಸುವುದರಿಂದ ಬರಡು ವೃಕ್ಷಗಳು ಹೂ ಹಣ್ಣುಗಳನ್ನು ಬಿಡಲಾರಂಭಿಸುತ್ತವೆ (ಶ್ಲೋ. 218).

ನೀರು ನಿಂತು ಅಜೀರ್ಣವುಂಟಾದ ಸಂದರ್ಭಗಳಲ್ಲಿ ನೆಲವನ್ನು ಅಗೆದು ಬೇರುಗಳನ್ನು ಹೊರಗೆಳೆದು ಪ್ರತಿಯೊಂದಕ್ಕೂ ಜೇನು ಮತ್ತು ವಿಡಂಗಗಳ ಪಟ್ಟು (ಲೇಪನ) ಹಾಕಿ, ನೀರೆರೆಯಬೇಕು (ಶ್ಲೋ. 219).

ಸೌತೆಕಾಯಿಗಳಂತಹ ತರಕಾರಿಗಳು, ಹಸು ಮತ್ತು ನಾಯಿಮೂಳೆಗಳು ಹಾಗೂ ಬೆಕ್ಕಿನ ಮಲಗಳ ಹೊಗೆಯಿಂದ ಧೂಪಿಸುವುದರಿಂದ ರೋಗಮುಕ್ತವಾಗುತ್ತವೆ (ಶ್ಲೋ. 220).

ಚುರುಕುಬುದ್ಧಿಯುಳ್ಳಾತನು ಎಳೆಯ ಸಸಿಗಳಿಗೆ ಘಾಟುವಸ್ತುಗಳ ಇಲ್ಲವೇ ಧೂಪ ಹಾಕಬಾರದು. ಲಘುವಾಗಿ ಲೇಪನಕೊಡುವುದನ್ನು ಸಹ ತಪ್ಪಿಸಬೇಕು (ಶ್ಲೋ. 221).

ಅನೇಕ ರೀತಿಯಿಂದ ಹಾಕಲಾದ (ಮೇಲಿನ) ಔಷಧಗಳಿಗೂ ಬಾಗದ ರೋಗಪೀಡಿತ ವೃಕ್ಷವನ್ನು ಬುದ್ಧಿವಂತನಾದವನು ಒಳ್ಳೆಯ ಗುಣಮಟ್ಟವುಳ್ಳ ಇನ್ನೊಂದು ಮಣ್ಣಿನಲ್ಲಿ ನಾಟಿಮಾಡಬೇಕು (ಶ್ಲೋ. 222).

ವಿಖ್ಯಾತನಾದ ಶ್ರೀ ರಾಮಚಂದ್ರನ ಕೃಪೆಯಿಂದ ಸಂತೋಷದಿಂದಿರುವವರು, ಸಾಗರ ತೀರದಲ್ಲಿ ನೂರಾರು ಕಪಿಗಳ ನಡುವೆ ಇರುವ ವಾಯುಪುತ್ರ, ಪವನವೇಗಿ, ಹರಿತ ಉಗುರು, ಹಲ್ಲುಗಳುಳ್ಳ ಹಾಗೂ ಅಭಿಜಾತ ಅಂಶಿ, ಅತಿದೊಡ್ಡ ಅದ್ಭುತವಾದ ಬಾಲವುಳ್ಳ, ದುಷ್ಟಶಕ್ತಿ ದಮನಶಾಲಿಯಾದ ಶ್ರೀ ಹನುಮಂತನಿಗೆ ಆಜ್ಞಾಪಿಸಬೇಕು :

"ಓ ಹನುಮಂತನೆ! ಫಸಲು ನಾಶಮಾಡುವ ತಾರಕಾಸುರನ ಸಂತಾನಗಳಾದ ಸಿಮುಸಿರ, ರಾತ್ರಿ, ಹರ (?) ಪಂಡರ, ಭೂದಿಕ (?), ಲಪೋಳ (?), ಧೂಲಿ, ಸಿಂಹ, ಗಭಂದಕ ಮತ್ತಿತರರು ಹಾಗೂ ಸುಭ್ರನಕ (?), ಜಕಟ (?), ಕಾಟ (?), ಹಂದಿಗಳು ಜಿಂಕೆ, ಎಮ್ಮೆಗಳು, ಇಲಿಗಳು ಮುಂತಾದವು ಇಂಥ ಕುಟುಂಬದ ಇಂಥ ವ್ಯಕ್ತಿಯ ಜಮೀನಿಗೆ ಮುತ್ತಿದ್ದಲ್ಲಿ ನನ್ನ ಅನುಜ್ಞೆಯಿಲ್ಲದೆ ಒಳಗೆ ಬಿಡಬೇಡ. ಅವುಗಳನ್ನು ನಿನ್ನ ಬಾಲದಿಂದ ಬಡಿದು ನಾಶಪಡಿಸಬೇಕೆಂದು ಪ್ರಾರ್ಥಿಸುತ್ತೇನೆ. ಓಂ, ಧಂ, ಧಿಂ ನಮಃ (ನಿನಗೆ), ನಾಶಪಡಿಸು ಪ್ರಾರ್ಥಿಸುತ್ತೇನೆ, ಅವುಗಳನ್ನು ನಾಶಪಡಿಸು.

ಈ ಮಂತ್ರವನ್ನು ಬರೆದು ಅದನ್ನು ಜಮೀನಿನ ಮಧ್ಯದಲ್ಲಿ ಕಟ್ಟಬೇಕು. ಆಗ ಎಂದಿಗೂ ರೋಗ(ಸಸ್ಯ)ಕೀಟ ಮತ್ತು ಹಾನಿಕರ ಪ್ರಾಣಿಗಳ ಭೀತಿಯಿರುವುದಿಲ್ಲ.

ಸುರಪಾಲನ ವೃಕ್ಷಾಯುರ್ವೇದದಿಂದ

ಎಲ್ಲ ಜಾತಿಯ ಮರಗಳಲ್ಲಿಯೂ ತಲೆದೋರುವ ರೋಗಗಳನ್ನು ಸ್ಥೂಲವಾಗಿ ಎರಡು ಗುಂಪುಗಳಾಗಿ ವಿಂಗಡಿಸಬಹುದು. ಒಂದು ಅಂತರ್ಜನ್ಯ (ಶರೀರದೊಳಗಿನಿಂದ ಉದ್ಭವಿಸುವವು) ರೋಗಗಳು ಹಾಗೂ ಎರಡು ಬಾಹ್ಯಜನ್ಯ (ಹೊರಶಕ್ತಿಗಳ ಆಕ್ರಮಣ ದಿಂದಾದುವು) ರೋಗಗಳು(ಶ್ಲೋ. 165).

ಅಂತರ್ಜನ್ಯ (ಆಂತರಿಕ) ರೋಗಗಳು ವಾತ, ಪಿತ್ತ ಮತ್ತು ಕಫಗಳ ವೈಪರೀತ್ಯತೆ (ಅಸ್ವಸ್ಥತೆ) ಯಿಂದಾಗುತ್ತವೆ. ಬಾಹ್ಯಜನ್ಯ ರೋಗಗಳು ಮತ್ತು ಕ್ಲೇಶ (ಬಾಧೆ) ಗಳು ಹಾನಿಕಾರಿ ಕೀಟಗಳು, ಹಿಮ ಇತ್ಯಾದಿಗಳಿಂದುಂಟಾಗುತ್ತವೆ(ಶ್ಲೋ. 166).

ಮರಗಳ ರೋಗಗಳು ಮತ್ತು ಬಾಧೆಗಳು ಸಾಮಾನ್ಯವಾಗಿ ಒಣ(ಶುಷ್ಕ), ಘಾಟಿನ (ಒಗರು)ಇಲ್ಲವೇ ಅಂತಹ ಇತರ ವಸ್ತುಗಳ ಆಧಿಕ್ಯತೆ, ಜಮೀನಿನ ಶೋಷಣೆ ಇಲ್ಲವೇ ಬೆಂಕಿಯಿಂದಾಗಿ ಉಂಟಾಗುತ್ತವೆ(ಶ್ಲೋ. 167).

ತತ್ಪರಿಣಾಮವಾಗಿ ಮುದುರುವಿಕೆ(ಅಥವಾ ಕೃಶಕಾಯ), ವಿರೂಪ, ಊತ, ಗೆಡ್ಡೆ (ಗಂಟು), ಎಲೆಗಳ ವೈಪರೀತ್ಯತೆ, ಒರಟುತನ, ಸಸ್ಯರಸಶೂನ್ಯತೆ ಇಲ್ಲವೇ ಸಪ್ಪೆ (ನಿಸ್ಸಾರ) ಯಾದ ಹಣ್ಣುಗಳು ಉಂಟಾಗುತ್ತವೆ (ಶ್ಲೋ. 168).

ಕಫದಿಂದಾಗಿ ತಲೆದೋರುವ ರೋಗಗಳು ಸಿಹಿ, ಜಿಡ್ಡು, ಹುಳಿ ಮತ್ತು ಶೀತ ಪದಾರ್ಥಗಳ ಆಧಿಕ್ಯತೆಯಿಂದ ಉಂಟಾಗುತ್ತವೆ. ಇವು ಸಾಮಾನ್ಯವಾಗಿ ಚಳಿಗಾಲದ ಪ್ರಾರಂಭ ಇಲ್ಲವೇ ವಸಂತಕಾಲದಲ್ಲಿ ತಲೆದೋರುತ್ತವೆ (ಶ್ಲೋ. 169).

ಅವು ಹಣ್ಣು ಬಿಡುವುದು ನಿಧಾನವಾಗುವಿಕೆ, ಎಲೆಗಳು ಮುದುರಿ, ಹಳದಿಬಣ್ಣ ತಿರುಗುವಿಕೆ, ಕುಬ್ಜ ಇಲ್ಲವೇ ಸ್ಥಗಿತ ಬೆಳವಣಿಗೆ, ಹಣ್ಣು ಬಿಡದಿರುವಿಕೆ ಮತ್ತು ರಸ ಇಲ್ಲವೇ ಸಾರವಿಲ್ಲದಿರುವಿಕೆಗಳಲ್ಲಿ ವ್ಯಕ್ತವಾಗುತ್ತವೆ(ಶ್ಲೋ. 170).

ಪಿತ್ತೋದ್ರೇಕದ ರೋಗಗಳು ಕಹಿ, ಹುಳಿ, ಉಪ್ಪು ಮತ್ತು ಘಾಟುವಸ್ತುಗಳ ಆಧಿಕ್ಯತೆಯಿಂದಾಗಿ ಉಂಟಾಗುತ್ತವಲ್ಲದೆ ಸಾಮಾನ್ಯವಾಗಿ ಬೇಸಿಗೆ ಇಲ್ಲವೇ ಮಳೆಗಾಲದ ಕೊನೆಯಲ್ಲಿ ತಲೆದೋರುತ್ತವೆ (ಶ್ಲೋ. 171).

ಅವು, ಎಲೆಗಳಲ್ಲಿ ಕಡುಹಳದಿ ಬಣ್ಣ ತಾಳುವುದು, ಅಕಾಲದಲ್ಲಿ ಫಲಬಿಡುವಿಕೆ,

ವಕ್ರ ಬೆಳವಣಿಗೆ, ಒಣಗು(ಬತ್ತು)ವಿಕೆ, ಎಲೆ ಹೂ ಹಣ್ಣುಗಳು ಸುಕ್ಕಾಗಿ ಸೊರಗುವಿಕೆ ಮತ್ತು ಕೊಳೆಯುವಿಕೆಗಳ ರೂಪದಲ್ಲಿ ಪ್ರಕಟವಾಗುತ್ತವೆ(ಶ್ಲೋ. 172).

ವಾತ ವಿಕಾರದಿಂದ ಹಾನಿಗೊಳಗಾದ ಗಿಡಗಳ ಬೇರುಗಳು ಹುಳುಗಳಿಂದ ತಿನ್ನಲ್ಪಟ್ಟಿರುತ್ತವೆ, ಒಣಗಿರುತ್ತವೆ, ಅವುಗಳ ಎಲೆಗಳು ಹಳದಿ ಬಣ್ಣವಿರುತ್ತವೆ ಮತ್ತು ಅವು ಅತಿ ಬಾಡುವಿಕೆಗೆ ತುತ್ತಾಗುತ್ತವೆ (ಶ್ಲೋ. 173).

ಬಿರುಗಾಳಿಯ ರಭಸದಿಂದ ಮರಗಳು ಮುರಿಯುತ್ತವೆ ಅಥವಾ ಬುಡಮೇಲಾಗುತ್ತವೆ ಇಲ್ಲವೇ ಬಾಗುತ್ತವೆ. ಇಲ್ಲಿಯೂ ಸಹ ಎರಡು ವಿಧಗಳಿವೆ : ಒಂದು ಪಾರ್ಶ್ವಿಕ ಮುರಿತ (ಅಷ್ಟೇನೂ ತೀವ್ರವಲ್ಲದ್ದು) ಹಾಗೂ ಇನ್ನೊಂದು ತೀವ್ರಸ್ವರೂಪದ್ದು (ಪೂರ್ಣಭೇದ) (ಶ್ಲೋ. 174).

ಮರಗಳು ಒಣಗುವಿಕೆ ಅಥವಾ ಮುದುರಿ ಸೊರಗುವಿಕೆಗಳು ಬೆಂಕಿ, ಸಿಡಿಲು, ಬರಡುಮಣ್ಣು ಮತ್ತು ಬರಪರಿಸ್ಥಿತಿಗಳಿಂದುಂಟಾಗಬಹುದು(ಶ್ಲೋ. 175).

ಕೊಡಲಿಪೆಟ್ಟು ಇತ್ಯಾದಿಗಳು ಮರಗಳಿಗೆ ಗಾಯ ಉಂಟುಮಾಡುತ್ತವೆ ಹಾಗೂ ತತ್ಫಲವಾಗಿ ಎಲ್ಲ ಬಗೆಯ ಮರಗಳೂ ಒಣಗುವಂತಾಗುತ್ತವೆ(ಶ್ಲೋ. 176).

ವಕ್ರ (ವಿರೂಪ, ಓರೆ) ಬೆಳವಣಿಗೆಯು ಕಫ ಮತ್ತು ವಾತ ವೈಪರೀತ್ಯ ಪರಿಣಾಮ ಇತ್ಯಾದಿಗಳಿಲ್ಲದಿರುವಾಗಲೂ ಸಹ ಉಂಟಾಗುತ್ತದಲ್ಲದೆ ಅಪ (ತಪ್ಪು) ಆರೈಕೆಯಿಂದ ಉಂಟಾಗುತ್ತವೆ (ಶ್ಲೋ. 177).

ದೈನಿಕವಾಗಿ ಎಲೆ, ಹೂವು ಮತ್ತು ಹಣ್ಣುಗಳಲ್ಲಿ ಅನುಕ್ರಮ ಇಳಿಮುಖತೆಯು ಕಂಡುಬಂದಾಗ ಅದು ನೀರು ನಿಲ್ಲುವಿಕೆ, ಉಷ್ಣ, ಮಣ್ಣಿನಲ್ಲಿಯ ದೋಷಗಳು ಹಾಗೂ ಕಠಿಣ ಹವಾಮಾನಸ್ಥಿತಿಯ ಪರಿಣಾಮವೆಂದು ತಿಳಿಯಬೇಕು (ಶ್ಲೋ. 178).

ವಾತ(ಗಾಳಿ)ದ ಆಧಿಕ್ಯತೆಯಿಂದಾಗಿ ಉಂಟಾಗುವ ಅಸ್ವಸ್ಥತೆಯು ಕಾಮಾಲೆಗೆ ಕಾರಣವಾಗುತ್ತದೆ. ಇದಕ್ಕೆ ಗುರಿಯಾದ ಮರಗಳ ಕಾಂಡ, ಎಲೆಗಳು ಮತ್ತು ಹಣ್ಣುಗಳು ಹಳದಿ (ಪೀತ)ವರ್ಣಕ್ಕೆ ತಿರುಗುತ್ತವೆ (ಶ್ಲೋ. 179).

ಎಲ್ಲ ಬಗೆಯ ಮರಗಳೂ ಸಹ ಬೀಜ ದೋಷ, ಸರಿಯಾದ ಆರೈಕೆಯ ಕೊರತೆ, ತಪ್ಪು ಆರೈಕೆ, ಇಲ್ಲವೇ ಅಪಾಯಕರ ರೀತಿಯ ಆರೈಕೆ ಅಥವಾ ಬಲವಾದ ಬೀಸುಗಾಳಿ

ಗಳಿಂದಾಗಿ ಬರಡಾಗಿ ಪರಿಣಮಿಸುತ್ತವೆ (ಶ್ಲೋ. 180).

ಕೊಳೆತ ವಾಸನೆ, ವಾಸನಾರಾಹಿತ್ಯತೆ (ನಿರ್ಗಂಧತೆ) ಮತ್ತು ಎಲೆ ಮತ್ತು ಕುಡಿಗಳು ಮುದುರಿಕೊಳ್ಳುವಿಕೆಗಳು ಇರುವೆ, ಕೀಡೆ ಇಲ್ಲವೇ ಹೆಚ್ಚು ನೀರು ಹಾಯಿಸುವಿಕೆಯಿಂದಾದ ಅಜೀರ್ಣತೆಯಿಂದುಂಟಾಗುತ್ತವೆ(ಶ್ಲೋ. 181).

ಬೆಂಕಿ, ಗಾಳಿ, ಮತ್ತೊಂದು ಮರದೊಡನೆ ಮಥನ (ಉಜ್ಜಿಕೊಳ್ಳುವಿಕೆ, ತಾಕಲಾಟ), ನಿರಂತರ ನೆರಳುಪ್ರದೇಶ ಅಥವಾ ಆಡುಮಂದೆಯ ಸಾಮಿಪ್ಯತೆಯಲ್ಲಿರುವಿಕೆ, ಮರ ಇಲ್ಲವೇ ಬಳ್ಳಿಗಳೊಡನೆ ಹೆಣೆದುಕೊಂಡಿರುವಿಕೆ ಹಾಗೂ ದಟ್ಟವಾಗಿ ಬೆಳೆದ ಪೊದೆಗಳ ಸಾಮಿಪ್ಯ ಇವು ಮರಗಳು ನಾಶವಾಗಲು ಕೆಲವು ಕಾರಣಗಳಾಗಿವೆ(ಶ್ಲೋ. 182).

ಅತಿ ಬುದ್ಧಿವಂತನಾದವನು ಮೇಲೆ ತಿಳಿಸಿದ ಸಂಬಂಧಪಟ್ಟ ಲಕ್ಷಣಗಳಿಂದ ವಿವಿಧ ರೋಗಗಳನ್ನು ನಿದಾನಿಸಿ (ನಿರ್ಧರಿಸಿ) ಶ್ರದ್ಧೆಯಿಂದ ವೈದ್ಯಕೀಯ ಚಿಕಿತ್ಸೆ ಮಾಡಬೇಕು (ಶ್ಲೋ. 183–184).

ಇಲ್ಲಿಂದ ವೃಕ್ಷಾಯುರ್ವೇದ ಪ್ರಾರಂಭವಾಗುತ್ತದೆ

ತಮ್ಮ ತಡಿ(ತೀರ)ಗಳಲ್ಲಿ ನೆರಳಿಲ್ಲದ ಜಲಾಶಯಗಳು ಆಹ್ಲಾದಕರಗಳಲ್ಲ (ಹಿತವಾದುದಲ್ಲ). ಆದಕಾರಣ ನೀರುಜಲಾಶಯಗಳ ಆವರಣದಲ್ಲಿ ತೋಟಗಳನ್ನು ನಿರ್ಮಿಸಬೇಕು. (ಶ್ಲೋ. 1).

ಎಲ್ಲ ಬಗೆಯ ಮರಗಳಿಗೂ ಮೃದುವಾದ ಮಣ್ಣು ಒಳ್ಳೆಯದು. ಮೊದಲು ಆ ಮಣ್ಣಿನಲ್ಲಿ ಎಳ್ಳು ಬೆಳೆಯಬೇಕು. ಅವು ಬೆಳೆದು ಹೂಬಿಟ್ಟಾಗ, ಅವುಗಳನ್ನು ಬುಡಮೇಲು ಮಾಡಿ ಕೀಳಬೇಕು. ಇದು ಜಮೀನು ಸಿದ್ಧತೆಯ ಮೊದಲ ಕ್ರಿಯೆಯಾಗಿದೆ (ಶ್ಲೋ. 2).

ಸೀಗೆಕಾಯಿಮರ, ಅಶೋಕ, ಪುನ್ನಾಗ, ಶಿರೀಷ, ಪ್ರಿಯಂಗು, ಇವು ಶುಭ (ಮಂಗಳಕಾರಿ)ಕಾರಿ ಮರಗಳಾಗಿವೆ. ಆದಕಾರಣ ತೋಟಗಳು ಇಲ್ಲವೇ ಮನೆಗಳಲ್ಲಿ ಮೊದಲು ನೆಡಬೇಕು (ಶ್ಲೋ. 3).

ರೊಟ್ಟಿಹಣ್ಣು (ಬ್ರೆಡ್‌ಫ್ರೂಟ್) ಮರ, ಅಶೋಕ, ಬಾಳೆ, ಪನ್ನೇರಳೆ, ಲಕುಚ, ದಾಳಿಂಬೆ, ದ್ರಾಕ್ಷಿ, ಪಟಿವಟ, ಮಾದಳ ಮತ್ತು ಅತಿಮುಕ್ತಕ ಇವೆಲ್ಲ ಮಣ್ಣು ಲೇಪಿಸಿದ

ಕಸಿಗೊಂಬೆಗಳಿಂದ ಬೆಳೆಯುವ ಮರಗಳು. ಅವುಗಳನ್ನು ಕಾಂಡ ಇಲ್ಲವೇ ಕಾಂಡಭಾಗಗಳನ್ನು ಬೇರುಗಳಿಂದ ಅಗೆದು ಎಚ್ಚರಿಕೆಯಿಂದ ನಾಟಿಮಾಡಬೇಕು (ಶ್ಲೋ. 4–5).

ಕವಲೊಡೆಯದ ಗಿಡಗಳನ್ನು ಚಳಿಗಾಲದಲ್ಲಿ ನಾಟಿಮಾಡಬೇಕು: ಕವಲೊಡೆದವನ್ನು ಚಳಿಗಾಲದ ಪ್ರಾರಂಭದಲ್ಲಿ(ಎಂದರೆ ಹಿಮಕಾಲದಲ್ಲಿ); ಕಾಂಡಬಿಟ್ಟವನ್ನು ಮಳೆಗಾಲದ ಆರಂಭದಲ್ಲಿ ಅವುಗಳ ಸ್ಥಾನಕ್ಕನುಗುಣವಾಗಿ ನಾಟಿಮಾಡಬೇಕು (ಶ್ಲೋ. 6).

ಮರಗಳ ಬೇರು ಮತ್ತು ರೆಂಬೆಗಳಿಗೆ ತುಪ್ಪ, ಉಸಿರ, ಎಳ್ಳು, ಜೇನುತುಪ್ಪ, ವಿದಂಗ, ಹಾಲು ಮತ್ತು ದನದ ಸಗಣಿಗಳ ಲೇಪನ ಹಾಕಿದ ಬಳಿಕ ನಾಟಿಮಾಡಬೇಕು (ಶ್ಲೋ. 7).

ಸ್ನಾನಮಾಡಿ ಪರಿಶುದ್ಧನಾಗಿ ಲೇಪನಗೊಂಡು ಬಳಿಕ ನಾಟಿಮಾಡಲಿರುವ ಮರವನ್ನು ಆರಾಧಿಸಿದ ಬಳಿಕ ಅದನ್ನು ನಾಟಿಮಾಡಬೇಕು. ಹೀಗೆ ಮಾಡುವುದರಿಂದ ಆ ವೃಕ್ಷವು ಆಗಲೇ ಇರುವ ಎಲೆಗಳೊಟ್ಟಿಗೇ ಬೆಳೆಯಲಾರಂಭಿಸುತ್ತವೆ(ಶ್ಲೋ. 8).

ನಾಟಿಮಾಡಿದ ಮರಗಳಿಗೆ ಬೇಸಿಗೆಯಲ್ಲಿ ಬೆಳಿಗ್ಗೆ ಮತ್ತು ಸಂಜೆ ಎರಡು ಹೊತ್ತೂ, ಚಳಿಗಾಲದಲ್ಲಿ ದಿನ ಬಿಟ್ಟು ದಿನವೂ ಹಾಗೂ ಮಳೆಗಾಲದಲ್ಲಿ ಮಣ್ಣು ಒಣಗಿದಾಗಲೂ ನೀರೆರೆಯಬೇಕು(ಶ್ಲೋ. 9).

ಪನ್ನೇರಳೆ, ವೇತಸ, ಪನಿರ, ಕದಂಬ, ಔದುಂಬರ, ಅರ್ಜುನ, ಮಾದಳ, ದ್ರಾಕ್ಷಿ, ಲಕುಚ, ದಾಳಿಂಬೆ, ವಂಜುಲ, ನಕ್ತಮಾಲ, ತಿಲಕ, ಪನಸ, ತಿಮಿರ ಮತ್ತು ಆಮ್ರಾತಕ ಇವು ಹದಿನಾರು ಮರಗಳು ಆರ್ದ್ರ ಇಲ್ಲವೇ ಜೌಗು ಮಣ್ಣುಗಳಲ್ಲಿ ಬೆಳೆಯುತ್ತವೆ (ಶ್ಲೋ. 10–11).

ಮರಗಳನ್ನು ಪರಸ್ಪರ 20ಮೊಳ ಅಂತರದಲ್ಲಿ ನಾಟಿಮಾಡುವುದು ಉತ್ತಮ. 16 ಮೊಳಗಳ ಅಂತರದಲ್ಲಿ ನೆಡುವುದು ಮಧ್ಯಮ ಹಾಗೂ 12 ಮೊಳಗಳ ಅಂತರದಲ್ಲಿ ನೆಡುವುದು ಕನಿಷ್ಠ (ಅಧಮ) ಬಗೆಯ ನಾಟಿಯೆನಿಸುತ್ತದೆ (ಶ್ಲೋ.12).

ಪರಸ್ಪರ ತೀರಸಮೀಪದಲ್ಲಿ ಬೆಳೆದಿದ್ದು ಪರಸ್ಪರ ತಾಗುತ್ತಿದ್ದರೆ, ತಳದಲ್ಲಿ ಅವುಗಳ ಬೇರುಗಳು ಹೆಣೆದುಕೊಂಡು ಒಂದಕ್ಕೊಂದು ಹಾನಿಮಾಡುವುದರಿಂದ (ಭೂಮಿಯೊಳಗೆ)ಸಾಕಷ್ಟು ಫಲಕೊಡುವುದಿಲ್ಲ(ಶ್ಲೋ. 13).

ಎಲೆಗಳು ಬತ್ತುವಿಕೆ, ಎಲೆಗಳ ಬೆಳವಣಿಗೆ ಕುಂಠಿತಗೊಳ್ಳುವಿಕೆ, ರೆಂಬೆಗಳು ಒಣಗುವಿಕೆ ಹಾಗೂ ಸಸ್ಯರಸ ಅಧಿಕವಾಗಿ ಒಸರುವಿಕೆಗಳು ಶೀತಗಾಳಿ ಮತ್ತು ಬಿಸಿಲುಗಳಿಗೆ ಗುರಿಯಾಗುವುದರಿಂದ ಮರಗಳನ್ನು ಬಾಧಿಸುತ್ತವೆ (ಶ್ಲೋ. 14).

ಶಾಸ್ತ್ರಕೃತಿಗಳಂತೆ ಅವುಗಳನ್ನು ಕತ್ತರಿಸಿ (ರೋಗಬಾಧಿತ ಭಾಗಗಳನ್ನು) ಬಳಿಕ ವಿಡಂಗ ಮತ್ತು ತುಪ್ಪಗಳ ಪಟ್ಟು ಹಾಕಿ, ಹಾಲು ಬೆರೆಸಿದ ನೀರೆರೆದು ಪೋಷಿಸುವುದೇ ಪರಿಹಾರವಾಗಿದೆ (ಶ್ಲೋ. 15).

ಹಣ್ಣು ಬಿಡುವುದು ನಿಲ್ಲುವಿಕೆ (ಎಂದರೆ ಬರಡಾಗುವಿಕೆ)ಯು ಕುಲತ್ಥ, ಮಾಷ, ಮುದ್ಗ, ಎಳ್ಳು ಮತ್ತು ಬಾರ್ಲಿ ಚಿಕಿತ್ಸೆಗಳಿಂದ ಗುಣವಾಗುತ್ತದೆ. ಇದರೊಟ್ಟಿಗೆ, ಕಾಯಿಸಿ ಆರಿಸಿದ ಹಾಲೆರೆದು ಪೋಷಿಸುವುದು ಸಹ ಹೂಹಣ್ಣುಗಳ ಹೆಚ್ಚಳಕ್ಕೆ ಉಪಯುಕ್ತವಾಗಿರುತ್ತದೆ (ಶ್ಲೋ. 16).

ಎರಡು ಆಢಕದಷ್ಟು ಕುರಿ ಮತ್ತು ಆಡುಗಳ ಹಿಕ್ಕೆ (ಪಿಚಿಕೆ), ಒಂದು ಆಢಕ ಎಳ್ಳು, ಒಂದು ಪ್ರಸ್ಥ ಹಿಟ್ಟು, ಒಂದು ದ್ರೋಣ ನೀರು ಮತ್ತು ಸಮತೂಕದ ಗೋಮಾಂಸ– ಇವೆಲ್ಲವನ್ನು (ಒಟ್ಟಿಗೆ ಮಿಶ್ರಮಾಡಿ) ಒಂದು ವಾರದವರೆಗೆ (ಅರ್ಥಾತ್ ಏಳು ರಾತ್ರಿಗಳು) ಇಟ್ಟಿದ್ದು ಬಳಿಕ ಮರಗಳು, ಬಳ್ಳಿಗಳು, ಪೊದೆ(ಮೆಳೆ) ಮತ್ತು ಪೈರುಗಳಿಗೆ ಎಲ್ಲ ಕಾಲದಲ್ಲೂ ಹೂಹಣ್ಣುಗಳನ್ನು ಬಿಡಲು ಪೋಷಕ ಆಹಾರವಾಗಿ ಹಾಕಬೇಕು (ಶ್ಲೋ. 17–18).

ಹತ್ತು ದಿನಗಳವರೆಗೆ ಹಾಲಿನಲ್ಲಿ ನೆನೆಸಿ, ಎರಡು ಹಸ್ತ ತುಪ್ಪದಲ್ಲಿಟ್ಟಿದ್ದು, ಹಂದಿ ಮತ್ತು ಜಿಂಕೆಗಳ ಮಾಂಸದ ಹೊಗೆಯ ಧೂಪಹಾಕಿ ಮೀನು ಮತ್ತು ಹಂದಿಯ ಕೊಬ್ಬು ಬೆರೆಸಿದ ಬೀಜಗಳನ್ನು ಹದಮಾಡಿ, ಚೊಕ್ಕಟಮಾಡಿದ ಮಣ್ಣಿನಲ್ಲಿ ಬಿತ್ತಿ ಹಾಲಿನೊಡನೆ ಬೆರೆಸಿದ ನೀರೆರೆದು ಪೋಷಿಸುವುದರಿಂದ, ಹೂವುಗಳನ್ನು ಜೊತೆಜೊತೆಗೇ ಬಿಡುತ್ತಾ ಬೆಳೆಯುತ್ತವೆ (ಶ್ಲೋ. 19–20).

ತಿಂತಿಡಿ ವೃಕ್ಷವು ಅಕ್ಕಿ, ಮಾಷ ಮತ್ತು ಎಳ್ಳುಗಳ ಕುಟ್ಟಿದ ಹಿಟ್ಟನ್ನು ಕೊಳೆತ ಮಾಂಸದೊಡನೆ ಬೆರೆಸಿಹಾಕಿ ಪೋಷಿಸಿ, ನಿಯತವಾಗಿ ಅರಿಶಿನ ಹೊಗೆಯಿಂದ ಧೂಪಿಸುವುದರಿಂದ ಬಳ್ಳಿಯಾಗಿ ಪರಿವರ್ತನೆಗೊಳ್ಳುತ್ತದೆ (ಶ್ಲೋ. 21).

ಕಪಿತ್ಥ ವೃಕ್ಷವನ್ನು ಬಳ್ಳಿಯಾಗಿ ಪರಿವರ್ತಿಸಲು, ಆಸ್ಫೋಟ (?), ಧಾತ್ರಿ, ಧವ ಮತ್ತು ವಸಿಕ ಬೇರುಗಳು ಮತ್ತು ಪಲಸಿನಿ, ವೇತಸ, ಸೂರ್ಯವಳ್ಳಿ, ಶ್ಯಾಮ ಹಾಗೂ

ಅಸ್ತವಮೂಲಿಯೊಡನೆ ಅತಿಮುಕ್ತಕಗಿಡಗಳನ್ನು ಬೇಯಿಸಿದ್ದಂತಹ ಹಾಲನ್ನು ಆರಿಸಿ (ತಣಿಸಿ) ಅದರಲ್ಲಿ ಕಪಿತ್ಥ ಬೀಜಗಳನ್ನು ಹಾಕಬೇಕು. ಈ ಕ್ರಿಯೆಯನ್ನು ಒಂದು ತಿಂಗಳ ವರೆಗೆ ಪುನರಾವರ್ತಿಸಬೇಕಲ್ಲದೆ ಪ್ರತಿಬಾರಿ ಬಿತ್ತನೆಗೆ ಮುನ್ನ ಬೀಜವನ್ನು ಬಿಸಿಲಿನಲ್ಲಿ ಒಣಗಿಸಬೇಕು (ಶ್ಲೋ. 22–23).

ಒಂದು ಮೊಳ ಅಗಲ ಹಾಗೂ ಎರಡು ಮೊಳ ಆಳದ ಕುಳಿತೋಡಿ ಅದರಲ್ಲಿ ನೀರುತುಂಬಿಸಬೇಕು. ಅದು ಬತ್ತಿ ಒಣಗಿದಾಗ, ಬೆಂಕಿಯಿಂದ ಕಾಯಿಸಿ ಬಳಿಕ ಬೂದಿಯೊಡನೆ ಜೇನು ಮತ್ತು ತುಪ್ಪಗಳನ್ನು ಮಿಶ್ರಮಾಡಿ ಪಟ್ಟು(ಲೇಪನ) ಹಾಕಬೇಕು (ಶ್ಲೋ. 24).

ಅನಂತರ ಅದರಲ್ಲಿ ಮಸ, ಎಳ್ಳು ಮತ್ತು ಬಾರ್ಲಿಗಳ ಕುಟ್ಟಿದ ಪುಡಿಯನ್ನು ಮಣ್ಣಿನೊಡನೆ ಬೆರೆಸಿ ತುಂಬಬೇಕು. ಇದರ ಮೇಲೆ ಮೀನು ಮಾಂಸಸಾರವನ್ನು ಸುರಿದು ಅದು ಗಟ್ಟಿಯಾಗಿ ಒತ್ತಾಗುವವರೆಗೂ ಬಡಿಯಬೇಕು (ಶ್ಲೋ. 25).

ಬೀಜಗಳನ್ನು (ಮೇಲೆ ಹೇಳಿದ್ದು) ನಾಲ್ಕು ಬೆರಳಾಳಗಳಲ್ಲಿ ಬಿತ್ತಿ, ಮೀನುಸಾರ ಮತ್ತು ಮಾಂಸರಸಸಾರಗಳಿಂದ ಪೋಷಿಸುವುದರಿಂದ ಪ್ರಕಾಶಮಾನವಾದ ಎಲೆಗಳೊಡನೆ, ಅಚ್ಚರಿಯುಂಟಾಗುವಂತೆ ಬಳ್ಳಿಯಾಗಿ ಬೆಳೆಯುತ್ತದೆ ಹಾಗೂ ಶೀಘ್ರದಲ್ಲಿ ಲತಾಕುಂಜ (ಬಳ್ಳಿಮಾಡ)ದ ಮೇಲೆಲ್ಲ ಹಬ್ಬುತ್ತದೆ (ಶ್ಲೋ. 26).

ಅಂಕೋಲಹಣ್ಣು ಇಲ್ಲವೇ ಅಂಕೋಲಎಣ್ಣೆ ಅಥವಾ, ಶ್ಲೇಷ್ಮಟಕ ಹಣ್ಣಿನ ತಿರುಳಿನ ಕುಟ್ಟಿದ ಪುಡಿರಾಶಿಯಲ್ಲಿ ಬೀಜಗಳನ್ನು ನೂರುಬಾರಿಯಿರಿಸಿ ಬಳಿಕ ಆಲಿಕಲ್ಲು ಬೆರೆಸಿ, ಮಣ್ಣಿನಲ್ಲಿ ಬಿತ್ತುವುದರಿಂದ ಶೀಘ್ರದಲ್ಲಿ (ತಕ್ಷಣ) ಬೆಳೆಯುವುದಲ್ಲದೆ ಫಲಭಾರ ದಿಂದ ತೂಗುವ ರೆಂಬೆಗಳನ್ನು ಬಿಡುತ್ತವೆ. ಎಂತಹ ಅದ್ಭುತ! (ಶ್ಲೋ. 27–28).

ಶ್ಲೇಷ್ಮಟಕ ಬೀಜಗಳ ಕವಚವನ್ನು ತೆಗೆದು, ವಿವೇಕಿಯಾದವನು ಅದನ್ನು ಅಂಕೋಲ ವ್ಯಂಜನ(ಗೊಜ್ಜು) ರಸದಲ್ಲಿ ಏಳುಬಾರಿ ನೆನೆಸಬೇಕು. ಪ್ರತಿಬಾರಿಯೂ ಅವುಗಳನ್ನು ನೆರಳಿನಲ್ಲಿ ಒಣಗಿಸಿ, ಎಮ್ಮೆಸಗಣಿಯಲ್ಲಿ ಉಜ್ಜಬೇಕು. ಬಳಿಕ ಅವುಗಳನ್ನು ಎಮ್ಮೆಯ ಒಣಸಗಣಿಯಲ್ಲಿರಿಸಿ ಅವುಗಳ ಜೊತೆಗೆ ಆಲಿಕಲ್ಲು ಮತ್ತು ಮಣ್ಣುಗಳನ್ನು ಮಿಶ್ರಮಾಡಬೇಕು. ಹೀಗೆ ಮಾಡಿ ಬಿತ್ತುವುದೇ ತಡ, ಅವು ಕುಡಿಯೊಡೆದು ಅಂದೇ ಹಣ್ಣು(ಫಲ) ಬಿಡುತ್ತವೆ (ಶ್ಲೋ. 29–30).

ಜ್ಯೋತಿಷ್ಯಶಾಸ್ತ್ರಜ್ಞರು ಧ್ರುವ, ಮೃದು, ಮೂಲ, ವಿಶಾಖ, ಬೃಹತ್ಪತಿ, ಶ್ರವಣ, ಅಶ್ವಿನಿ ಮತ್ತು ಹಸ್ತ ನಕ್ಷತ್ರಗಳು ಮರ ಇತ್ಯಾದಿಗಳನ್ನು ನಾಟುವುದಕ್ಕೆ ಪ್ರಶಸ್ತವಾದುವೆಂದು ಸಾರಿದ್ದಾರೆ (ಶ್ಲೋ. 31).

ಅಧ್ಯಾಯ 8

ಬೀಜಬಿತ್ತನೆ

ಪ್ರಾಚೀನ ಭಾರತದಲ್ಲಿ ಬೀಜಬಿತ್ತನೆಯು ಚೆನ್ನಾಗಿ ಬೆಳೆದುಬಂದ ಕಲೆಯಾಗಿದ್ದಿತು. ಹಿಂದಿನ ಕಾಲದಲ್ಲೂ ಸಹ ಗಿಡಗಳನ್ನು ಬೀಜ, ಕಸಿಕೊಂಬೆ ಮತ್ತು ಗೆಡ್ಡೆ ಬೇರುಗಳಿಂದ ಬೆಳೆಯುತ್ತಿದ್ದರು. 'ಸುರಪಾಲ'ನು ತನ್ನ ವೃಕ್ಷಾಯುರ್ವೇದ ಕೃತಿಯಲ್ಲಿ ವಿವಿಧ ಬಗೆಯ ಗಿಡಗಳನ್ನು ಬೆಳೆಸುವ ವಿಧಾನವನ್ನು ಕುರಿತು ವಿವರವಾಗಿ ತಿಳಿಸಿದ್ದಾನೆ. ಅದರಲ್ಲಿಯ ಮುಖ್ಯಭಾಗಗಳ ಅನುವಾದವನ್ನು ಕೆಳಗೆ ಕೊಟ್ಟಿದೆ:

ವನಸ್ಪತಿಗಳೆಂಬ ದೊಡ್ಡ ಮರಗಳು ದ್ರುಮ ಗಳೆನ್ನಲಾಗುವ ಇತರ ಮರಗಳು, ಬಳ್ಳಿಗಳು ಮತ್ತು ಗುಲ್ಮಗಳೆಂಬ ಪೊದೆಗಳು ಗಿಡಗಳಲ್ಲಿಯ ವಿವಿಧ ಜಾತಿಗಳಾಗಿವೆ. ಇವುಗಳನ್ನು (ವಿವಿಧ ಗಿಡಗಳನ್ನು) ಬೆಳೆಸಲು ಮೂರು ವಿಧಾನಗಳಿವೆ, ಅವು–ಬೀಜ ಬಿತ್ತುವಿಕೆ, ಕಸಿಗಳನ್ನು ಮಣ್ಣಿನಲ್ಲಿ ನೆಡುವಿಕೆ ಮತ್ತು ಗೆಡ್ಡೆಬೇರುಗಳನ್ನು ನಾಟಿಮಾಡುವಿಕೆಗಳಾಗಿವೆ (ಶ್ಲೋ. 45).

ಹೂವುಗಳನ್ನು ಬಿಡದೆಯೇ ಹಣ್ಣುಗಳನ್ನು ಬಿಡುವಂತಹವು ವನಸ್ಪತಿ ವೃಕ್ಷಗಳು. ದ್ರುಮ ಎಂಬುವು ಹೂಗಳಿಂದ ಹಣ್ಣು ಬಿಡುವಂತಹ ಮರಗಳು (ಶ್ಲೋ. 46).

ಹಬ್ಬಿ, ಸುತ್ತಲೂ ತನ್ನ ಲತಾತಂತು(ಅಡರು)ಗಳನ್ನು ಹರಡುವ ಗಿಡಗಳಿಗೆ ಬಳ್ಳಿಗಳೆಂದು ಹೆಸರು. ವಿಪುಲವಾಗಿ ಕಾಂಡಬಿಡುವಂತಹವಕ್ಕೆ ಪೊದೆ (ಗುಲ್ಮ)ಗಳೆಂದು ಹೆಸರು (ಶ್ಲೋ. 47).

ಪನ್ನೇರಳೆ, ಚಂಪಕ, ಪುನ್ನಾಗ, ನಾಗಕೇಸರ, ಸಿರಿಸಿನಿ(ಸಿಂಸಿಪ) (?) ಕಪಿತ್ಥ, ಬದರಿ, ಬಿಲ್ವ, ಕುಂಭಕಾರಿ, (?), ಪ್ರಿಯಂಗು, ಪನಸ, ಮಾವು, ಮಧೂಕ, ಕರಮರ್ದ ಮುಂತಾದುವು ಬೀಜವೃಕ್ಷಗಳು, ಎಂದರೆ ಬೀಜಗಳಿಂದ ಬೆಳೆಯುವ ಮರಗಳು, ವೀಳ್ಯೆದೆಲೆ, ಸಿಂಧೂವರ, ತಗರ ಇತ್ಯಾದಿಗಳು ಕಸಿಕೊಂಬೆ (ತುಂಡು)ಯಿಂದ ಬೆಳೆಯುವಂತಹವು (ಶ್ಲೋ.48–49).

ಪಾಟಲ, ದಾಳಿಂಬೆ ಪ್ಲಾಕ್ಷ, ಕರವೀರ, ಆಲ, ಮಲ್ಲಿಕ, ಔದುಂಬರ, ಕುಂದ ಮುಂತಾದುವು ಬೀಜ ಹಾಗೂ ಕಸಿತುಂಡುಗಳೆರಡರಿಂದಲೂ ಬೆಳೆಯುತ್ತವೆ (ಶ್ಲೋ.50).

ಕೇಸರಿ, ಶುಂಠಿ, ಬೆಳ್ಳುಳ್ಳಿ, ಆಲಕದ (ಆಲೂ ಮತ್ತು ಕಂದ)ಗಳು ಗೆಡ್ಡೆ ಬೇರುಗಳಿಂದ ಬೆಳೆಯುತ್ತವೆ ಮತ್ತು ಏಲ(ಏಲಕ್ಕಿ), ಕೆಂದಾವರೆ ಮತ್ತು ಕನ್ನೈದಿಲೆಗಳು ಬೀಜ ಹಾಗೂ ಗೆಡ್ಡೆ ಬೇರು(ಬೇರುಕಾಂಡ) ಗಳೆರಡರಿಂದಲೂ ಬೆಳೆಯುತ್ತವೆ (ಶ್ಲೋ. 51).

ಸಕಾಲದಲ್ಲಿ ಮಾಗಿ ಒಣಗಿದ ಹಣ್ಣಿನಿಂದ ಬೀಜವನ್ನು ತೆಗೆದು ಹಾಲಿನಲ್ಲಿ ನೆನೆಸಬೇಕು. ಬಳಿಕ ತೆಗೆದು ಐದುದಿನಗಳವರೆಗೆ ಒಣಗಿಸಿ ಅನಂತರ ಅದಕ್ಕೆ ವಿಡಂಗ ಬೆರೆಸಿದ ತುಪ್ಪದ ಹೊಗೆಯಿಂದ ಧೂಪಹಾಕಬೇಕು (ಶ್ಲೋ. 52).

ಹಾಲಿನಲ್ಲಿ ನೆನೆಸಿದ ಬೀಜಕ್ಕೆ ಬೃಹತಿ ಮತ್ತು ಎಳ್ಳುಗಳ ಬೂದಿ ಮತ್ತು ತುಪ್ಪಗಳನ್ನು ಸವರಿ, ಹಸುವಿನ ಸಗಣಿಯಿಂದ ಉಜ್ಜಿ, ಕೊಬ್ಬಿನಿಂದ ಧೂಪಿಸಿ ಬಿತ್ತುವುದರಿಂದ ಕೂಡಲೇ ಬೆಳೆಯುತ್ತದೆ (ಶ್ಲೋ. 53).

ಹಾಲಿನಲ್ಲಿ ನೆನೆಸಿ, ಪಸುವಿನ ಸಗಣಿಯಲ್ಲಿ ಚೆನ್ನಾಗಿ ಉಜ್ಜಿ, ಒಣಗಿಸಿ, ಬಳಿಕ ಪದೇ ಪದೇ ಜೇನು ಮತ್ತು ವಿಡಂಗ ಪುಡಿಯಿಂದ ಪುನಃ ಉಜ್ಜುವುದರಿಂದ ಬೀಜವು ಮೊಳಕೆಯೊಡೆಯುವುದು ಖಂಡಿತ (ಶ್ಲೋ. 54).

ಶುದ್ಧ ಬುದ್ಧಿಯುಳ್ಳ ವಿವೇಕಿಗಳು ಹಾಲಿನಲ್ಲಿ ನೆನೆಸಿ, ನೆರಳಿನಲ್ಲಿ ಚೆನ್ನಾಗಿ ಒಣಗಿಸಿ ಬೃಹತಿ ಎಳ್ಳುಗಳು, ನಾಳದೊಡ ಬೆರೆಸಿದ ಸಾಸುವೆಗಳ ಬೂದಿಯಲ್ಲಿ ಉಜ್ಜಿದ ಬೀಜವು ಬಿತ್ತನೆಗೆ ಉತ್ಕೃಷ್ಟವಾದುದೆಂದು ಸಾರುತ್ತಾರೆ (ಶ್ಲೋ. 55).

ಮಾವು, ಪನ್ನೇರಳೆ ಅಥವಾ ಪನಸ (ಬ್ರೆಡ್‌ಫ್ರೂಟ್)ಗಳ ಹಸಿ (ಎಂದರೆ ತಾಜಾ) ಬೀಜವು ಮೇಲೆ ಹೇಳಿದ ಕ್ರಮದಿಂದ ಸಂಸ್ಕರಿಸಿ ಒಣಗಿಸಿ ಬಳಿಕ ಮೇಲೆ ತಿಳಿಸಿದಂತೆ ಶುದ್ಧಮಾಡಿದಾಗ............ಉತ್ತಮ ಬಿತ್ತನೆಯಾಗುತ್ತದೆ (ಶ್ಲೋ. 56).

ಬಹಳಷ್ಟು ಬೆಲ್ಲ ಕರಗಿಸಿದ ನೀರಿನಲ್ಲಿ ನೆನೆಸಿದ ಎರ್ವಾರು (?) ಬೀಜವನ್ನು ಹೆಚ್ಚು ಎಲೆಗಳಲ್ಲಿ ಕಟ್ಟಿ, ಭೂಮಿಯೊಳಗಿರಿಸಿ ಮೇಲೆ ನಿರಂತರವಾಗಿ ಮೂರುದಿನಗಳವರೆಗೆ ಬೆಂಕಿಯಿರಿಸಿದ ಬಳಿಕ ತೆಗೆಯುವುದರಿಂದ ಬಿತ್ತನೆಗೆ ಯುಕ್ತವಾಗಿರುತ್ತದೆ (ಶ್ಲೋ. 57).

ಮೇಲೆ ತಿಳಿಸಿದರೀತಿಯಲ್ಲಿ ಬೀಜೋಪಚಾರ ಮಾಡಲಾದ ಎಲ್ಲ ಬೀಜಗಳು ಉತ್ಕೃಷ್ಟ ಬಿತ್ತನೆಗಳಾಗುತ್ತವೆ ಮತ್ತು ಇವುಗಳಿಂದ ಬೆಳೆದ ಮರಗಳು (ಅಥವಾ ಗಿಡಗಳು) ಉತ್ತಮ ಗುಣಮಟ್ಟ(ದರ್ಜೆ) (?)ದ ಹೂಹಣ್ಣುಗಳನ್ನು ಹೇರಳವಾಗಿ ಬಿಡುತ್ತವೆ (ಶ್ಲೋ. 58).

ಶುದ್ಧವಾಗಿ ಮಿಂದು ಪವಿತ್ರವಾಗಿ, ಶುಭ್ರವಸ್ತ್ರಧರಿಸಿ ದೇವತಾರ್ಚನೆ ಮಾಡಿ, ಗುರುಗಳಿಗೆ ವಂದಿಸಿ ಸತ್ಪಾತ್ರರಿಗೆ ಧನ ಇಲ್ಲವೇ ಭೂಮಿಕಾಣಿಕೆಯಿತ್ತು, ಮನೆದೇವರಿಗೆ ನಮಿಸಿ ಮೊದಲು ಒಡೆಯನು ತಾನೇ ಕೆಲವು ಬೀಜಗಳನ್ನು ಬಿತ್ತಬೇಕು, ಬಳಿಕ ಆತನ ಆಳುಗಳು ಜಮಾನಿಸಲ್ಲಿಲ್ಲ ಉಳಿದವನ್ನು ಬಿತ್ತಬೇಕು (ಶ್ಲೋ. 59).

ಬೀಜಧಾರಕ(ಪಾತ್ರೆ)ವನ್ನು ಒಣಹುಲ್ಲಿನಿಂದ ಮುಚ್ಚಿ, ಅದಕ್ಕೆ ಹಾಲು ಮತ್ತು ನೀರು ಚಿಮುಕಿಸಬೇಕು. ನೀರಿನ ನೆರವಿನಿಂದ ಬೀಜಗಳು ಮೊಳಕೆಬಿಟ್ಟಾಗ, ಒಣಹುಲ್ಲು ಕಡ್ಡಿಗಳನ್ನು ತೆಗೆದು, ಬೀಜಗಳನ್ನು ಒಣಗಿಸಬೇಕು (ಶ್ಲೋ. 60).

ಶುಕ್ಲಪಕ್ಷದ ಮೊದಲದಿನ ಪುಸ್ಸಿ (?), ಚಾಂದ್ರಮಾಸದ ಪಂಚಮಿ ಹಾಗೂ ತ್ರಯೋದಶಿಗಳು ಹಾಗೂ ಗುರುವಾರಗಳು, ಶುಕ್ರವಾರಗಳು ಮತ್ತು ಸೋಮವಾರ ಗಳನ್ನು ಅಸೌಮ್ಯದಿನಗಳೆನ್ನಲಾಗಿದೆ (?) (ಶ್ಲೋ. 61).

ವಿಶಾಖ, ಶತಭಿಷೆ, ಮೂಲ, ಮೃಗಶಿರ, ಚಿತ್ರ, ಮೂರು ಉತ್ತರೆಗಳು, ರೋಹಿಣಿ, ಅನುರಾಧಾ, ಜೇಷ್ಠ ಮತ್ತು ಕೃತ್ತಿಕಾ ನಕ್ಷತ್ರಗಳು ಹಾಗೂ ಸ್ಥಿರರಾಶಿಚಕ್ರ ಗಳಲ್ಲಿ ಸೂರ್ಯಪ್ರವೇಶಕಾಲ ಇವು ಪವಿತ್ರವಾದುವು (ಶ್ಲೋ. 62).

ಉಳುಮೆ ಮಾಡಿರದ ಹಾಗೂ ಹೂವುಗಳು, ಎಳ್ಳು ಮತ್ತು ಮುಸ(ಫೇಸಿಯೊಲಸ್ ರೇಡಿಯೇಟಸ್)ಗಳನ್ನು ಚೆಲ್ಲಿದ ಭೂಮಿಯಲ್ಲಿ ಮರಗಳನ್ನು ನೆಡಬೇಕು ಇಲ್ಲವೇ ಅವುಗಳ ಬಿತ್ತನೆ ಮಾಡಬೇಕು (ಶ್ಲೋ. 63).

ಮರಗಳ ನಡುವಣ ಅಂತರವು ಹದಿನಾಲ್ಕು, ಹದಿನಾರು ಇಲ್ಲವೇ ಇಪ್ಪತ್ತು ಮೊಳ ಇರಬಹುದು. ಇವುಗಳನ್ನು ಕ್ರಮವಾಗಿ ವೃಕ್ಷಬೆಳವಣಿಗೆಗೆ ಅಧಮ (ಕನಿಷ್ಠ), ಮಧ್ಯಮ ಹಾಗೂ ಉತ್ತಮ ಅಂತರಗಳೆಂದು ಪರಿಗಣಿಸಲಾಗಿವೆ(ಶ್ಲೋ. 64).

ಗುಲ್ಮ (ಪೊದೆ, ಮೆಳೆ)ಗಳ ನಡುವಣ ಅಂತರವು ನಾಲ್ಕು ಇಲ್ಲವೇ ಐದುಮೊಳ ಗಳಿರಬಹುದು. ಪೂಗವಂತಹ ಮರಗಳ ನಡುವಣ ಅಂತರವು ಎರಡು ಇಲ್ಲವೇ ಮೂರು ಮೊಳವೂ ಇರಬಹುದಾಗಿದೆ (ಶ್ಲೋ. 65).

ಸೂಚಿತ (ನಿರ್ದೇಶಿತ)ವಾದುದಕ್ಕಿಂತ ಹೆಚ್ಚು ಅಂತರವಿಡುವುದರಿಂದ ಬಿರುಗಾಳಿ ಯಿಂದ (ಮರಗಳಿಗೆ) ಅಪಾಯತಟ್ಟಬಹುದು ಹಾಗೂ ಕಡಮೆ ಅಂತರ ಬಿಡುವುದರಿಂದ

ಹಣ್ಣುಗಳು ಕನಿಷ್ಠದರ್ಜೆಯವಾಗುತ್ತವೆ. ಆದಕಾರಣ, ತನ್ನ ಮರಗಳ ಪ್ರರೋಹವೃದ್ಧಿಯಲ್ಲಿ ಕಾತರನಾಗಿರುವಾತನು ಈ ನಿಯಮವನ್ನುಲ್ಲಂಘಿಸಬಾರದು (ಶ್ಲೋ. 66).

ಮಾವು, ದಾಳಿಂಬೆ ಮುಂತಾದುವುಗಳ ಮತ್ತು ಕುಂಬಳ-ಕಾಯಿ ಹಾಗೂ ಅಲಂಬುಕಗಳ ಬಿತ್ತನೆ ಹಾಗೂ ವಿಶೇಷವಾಗಿ ನೆಡುವಿಕೆಗಳನ್ನು ಸುತ್ತಲೂ ಒಂದು ಮೊಳ ಅಳತೆಯುಳ್ಳ ಕುಳಿಗಳಲ್ಲಿ ಮಾಡುವುದು ಅತ್ಯುತ್ತಮವೆಂದು ಪರಿಗಣಿಸಲಾಗಿದೆ. ಇಂಥ (ಇದಕ್ಕಾಗಿ) ಕುಳಿಯನ್ನು ಹೊಸದಾಗಿ ತೋಡಿದ್ದು, ಒಣಗಿಸಿ, ಗೋಮೂಳೆ ಮತ್ತು ಗೋಸಗಣಿಗಳಿಂದ ತುಂಬಿಸಿ, ಚೆನ್ನಾಗಿ ಸುಟ್ಟು, ಬಳಿಕ ಸ್ವಾಭಾವಿಕವಾಗಿಯೇ ಆರಿದ ಬಳಿಕ ಅದರೊಳಗಿನ ಬೂದಿಯನ್ನು ತೆಗೆಯಬೇಕು. ಅನಂತರ, ಸತ್ತಪ್ರಾಣಿಜಲದ ನೀರೆರೆದು ಗೊಬ್ಬರದಿಂದ ತುಂಬಬೇಕು (ಶ್ಲೋ. 67-69).

ಎರಡು ತಿಂಗಳ ಬಳಿಕ ಅವು ಎಲೆಬಿಟ್ಟ ಬಳಿಕ, ಪರಿಣತನಾದವನು ಅವುಗಳನ್ನು ಅಗೆದು ತೆಗೆದು ಆಷಾಢ (?)ದಲ್ಲಿ ತಾನಿಚ್ಛಿಸಿದ ಸ್ಥಳದಲ್ಲಿ ಮರುನಾಟಮಾಡಬೇಕು (ಶ್ಲೋ. 78).

ಕರವೀರ ಮತ್ತು ದಾಳಿಂಬೆ ಮರದ ರೆಂಬೆಗಳನ್ನು ಬಾಗಿಸಿ ಅವುಗಳಿಂದ ಕಸಿಗಳನ್ನು ತೂಡಿ ಕೆಳತುದಿಯನ್ನು ಉತ್ತಮ ಹಸುವಿನ ಸಗಣಿಯಿಂದ ಲೇಪಿಸಿ ನಾಟಿಮಾಡಬೇಕು (ಶ್ಲೋ. 79).

ಎರಡು ತಿಂಗಳುಗಳವರೆಗೆ ಅವುಗಳಿಗೆ ನಿಯತವಾಗಿ ನೀರು ಹಾಯಿಸಬೇಕು. ಬಳಿಕ ದೀರ್ಘಕಾಲದವರೆಗೆ ಅವು ಎಲೆಗಳನ್ನು ಬಿಟ್ಟಮೇಲೆ ಮಧ್ಯಕ್ಕೆ ಕತ್ತರಿಸಬೇಕು (ಶ್ಲೋ. 80).

ಎಲ್ಲ ಗೆಡ್ಡೆಬೇರುಗಳನ್ನು, ಸುತ್ತಲೂ ಒಂದುಮೊಳ ಅಳತೆಯುಳ್ಳ ಕುಳಿಗಳನ್ನು ತೋಡಿ, ಮೃದುವಾದ ಮರಳು ಮತ್ತು ಮಣ್ಣು (ಮೃದುವಾದುದು)ಗಳನ್ನು ಬೆರೆಸಿ ತುಂಬಿ ಅದರಲ್ಲಿ ನೆಡಬೇಕು (ಶ್ಲೋ. 81).

ಬಾಳೆಯ ಬೇರುಗಳನ್ನು ಒಳ್ಳೆಯ ಗೋಸಗಣಿಯಿಂದ ಮುಚ್ಚಿ, ಅದನ್ನು ಕುಳಿಯಲ್ಲಿರಿಸಿ, ಹೇರಳವಾಗಿ ನೀರು ಹಾಯಿಸಬೇಕು (ಶ್ಲೋ. 82).

ಪರಿಣತನಾದವನು, ಎಳೆಯ ಸಸಿಗಳನ್ನು ಮಣ್ಣುತುಂಬಿದ ಕುಳಿಗಳಲ್ಲಿ ಪರಸ್ಪರ ಒಂದು ಮೊಳ ಅಂತರವಿರುವಂತೆ ನೆಡಬೇಕು. ಅವುಗಳನ್ನು ನೆಡುವ ಮುನ್ನ ಬೇರುಗಳಿಗೆ

ಜೇನು, ಕಪಾಲದದಂಟು, ತುಪ್ಪ ಮತ್ತು ವಿಡಂಗಗಳ ಲೇಪನ ಮಾಡಬೇಕು (ಶ್ಲೋ. 83).

ಇದೇ ರೀತಿಯಲ್ಲಿ ದೊಡ್ಡದೊಡ್ಡ ಗಿಡಗಳನ್ನು ಸಹ ಅವುಗಳ ಬೇರುಗಳಿಗೆ ತಾಳಯುಕ (? ಚಾಪೆ ?)ಗಳನ್ನು ಸುತ್ತಿ ನಾಟಿಮಾಡಬಹುದು ಹಾಗೂ ಮರುದಿನ ಸಂಜೆ ಮತ್ತು ಬೆಳಿಗ್ಗೆ ಈ ಕೆಳಗೆ ತಿಳಿಸಿದ ಮಂತ್ರವನ್ನು ಪುನರುಚ್ಚರಿಸಬೇಕು:

'ಎಲೈ ವೃಕ್ಷವೇ ನಾನು ನಿನ್ನನ್ನು ಈ ಸ್ಥಳದಿಂದ ಒಳ್ಳೆಯ ಸ್ಥಾನಕ್ಕೆ ಸಾಗಿಸುತ್ತೇನೆ, ನೀನು ಸಂತೋಷದಿಂದಿರಲು ನೀರೆರೆಯುತ್ತೇನೆ. ಅಲ್ಲಿ ನೀನು ಚೆನ್ನಾಗಿ ವರ್ಧಿಸುತ್ತೀಯೆ, ಅಲ್ಲಿ ಸಿಡಿಲೆರಗುವ ಅಪಾಯವಿಲ್ಲದೆ ಸುರಕ್ಷಿತವಾಗಿರುತ್ತೀಯೆ. ಅಲ್ಲಿ ನಿನ್ನನ್ನು ನನ್ನ ಪ್ರೀತಿ ಪಾತ್ರನಾದ ಜಡಪುತ್ರನನ್ನು ಪೋಷಿಸುವಂತೆಯೇ ನಿನ್ನನ್ನೂ ಪೋಷಿಸುತ್ತೇನೆ (ಶ್ಲೋ. 84-86).

ವಿವೇಕಿಯು ಕ್ಷೀರೀ, ಮಾವು, ದಾಳಿಂಬೆ, ಬಕುಳ ವೃಕ್ಷ ಮುಂತಾದುವನ್ನು ಶ್ರಾವಣಮಾಸದಲ್ಲಿಯೂ ರಾಜಕೋಶ (?), ಆಮ್ರ (ಮಾವು), ಲಕುಚ ಮುಂತಾದುವನ್ನು ಭಾದ್ರಪದ ಮಾಸದಲ್ಲಿಯೂ ನೆಡಬೇಕು (ಶ್ಲೋ. 87).

ಅಶ್ವಿನ್ ಮಾಸದಲ್ಲಿ, ಗೋಮ್ಮು, ಬದನೆ ಮುಂತಾದುವನ್ನೂ ಕಾರ್ತಿಕದಲ್ಲಿ ಮಜೋರಮ್, ಶತಪತ್ರಿಕ, ಧಾನ್ಯಕ(ಧನಿಯಾ), ಮತ್ತು ಮೂಲಕ (ಮೂಲಂಗಿ) ಮುಂತಾದುವನ್ನು ಬಿತ್ತಬೇಕು(ಶ್ಲೋ. 88).

ಫಾಲ್ಗುಣದಲ್ಲಿ ಪಟೋಲ ಮುಂತಾದುವನ್ನೂ, ಚೈತ್ರದಲ್ಲಿ ಕಾಕರುಕ ಇತ್ಯಾದಿಯನ್ನೂ ಬಿತ್ತಬೇಕು. ವೈಶಾಖದಲ್ಲಿ, ಶುಕ್ರಗ್ರಹದಲ್ಲಿ ವಿವೇಕಶಾಲಿಗಳು ಬಾಳೆಗಿಡ ಇತ್ಯಾದಿಗಳನ್ನು ನೆಡಬೇಕು (ಶ್ಲೋ. 89).

ಆಷಾಢಮಾಸದಲ್ಲಿ ತನಗಿಷ್ಟ ಬಂದ ಎಲ್ಲ ಬಗೆಯ ಬೀಜಗಳನ್ನು ಬಿತ್ತಬಹುದಲ್ಲದೆ, ಏನಾದರೂ ನೆಡಬಹುದು. ಮಾರ್ಗಶಿರ, ಪುಷ್ಯ ಮತ್ತು ಮಾಘಮಾಸಗಳು ಬಿತ್ತನೆ ಮುಂತಾದಕಾರ್ಯಗಳಿಗೆ ನಿಷಿದ್ಧವಾದುವು (ಶ್ಲೋ. 90).

ಬುದ್ಧಿವಂತನು ತನ್ನ ತೋಟದ ಮರಗಳು ರೋಗಮುಕ್ತವಾಗಿ ಆರೋಗ್ಯದಿಂದಿರಲು, ತೋಟದ ಎಲ್ಲ ಮೂಲೆಗಳಲ್ಲೂ ಲೋಧ್ರ ಮರ ನೆಡಲು ಎಚ್ಚರಿಕೆವಹಿಸಬೇಕು (ಶ್ಲೋ. 91).

ವಿವೇಕಿಯು ತೋಟಗಾರಿಕೆ ಶಾಸ್ತ್ರಾನುಗುಣವಾಗಿ ಹಾಗೂ ನಿಯಮಾವಳಿಗಳನ್ನು ತಿಳಿದುಕೊಂಡು ತನ್ನ ತಿಳಿವಳಿಕೆಗೆ ದೂರವಿರುವ ಮರಗಳ ಪ್ರತ್ಯೇಕ ಗುಣಲಕ್ಷಣಗಳನ್ನು ಪರಿಚಯಿಸಿಕೊಂಡು ತನ್ನ ಸತ್ವಂತತಿಯಂತೆ ನೆಟ್ಟು ಬೆಳೆಸಬೇಕು. ಇದರಿಂದ ದೇವಗುರುವಿಗೆ (ಎಂದರೆ ಬೃಹಸ್ಪತಿ) ಆನಂದವುಂಟುಮಾಡಿ ತನ್ನ ಪಾಪಗಳನ್ನೆಲ್ಲ ತೊಳೆದುಕೊಳ್ಳಬೇಕು (ಶ್ಲೋ. 96).

ಮರಗಳು ಮಾತ್ರ ಈ ಲೋಕ ಹಾಗೂ ಇತರ ಲೋಕಗಳಲ್ಲಿ ಸಕಲ ಕಲ್ಯಾಣ ಮೂಲಗಳಾಗಿವೆ. ಏಕೆಂದರೆ ಅವು ಕಡುಬಡತನವನ್ನು ದಾಟುವ (ನಿಭಾಯಿಸುವ) ಮಾಧ್ಯಮಗಳು (ಶ್ಲೋ. 97).

ಮದ್ರಾಸಿನ ಅಡ್ಯಾರ್ ಗ್ರಂಥಭಂಡಾರದಲ್ಲಿರುವ ವೃಕ್ಷಾಯುರ್ವೇದ ಹಸ್ತಪ್ರತಿಯಲ್ಲಿ ವಿವಿಧ ಗಿಡಗಳನ್ನು ಹೇಗೆ ಬೆಳೆಸಬೇಕೆಂಬುದನ್ನು ಕುರಿತು ವಿವರವಾಗಿ ವರ್ಣಿಸುವ ಅನೇಕ ಶ್ಲೋಕಗಳಿವೆ. ಓದುಗರ ಅನುಕೂಲಕ್ಕಾಗಿ ಆ ಶ್ಲೋಕಗಳ ಅನುವಾದವನ್ನಿಲ್ಲಿ ಕೊಟ್ಟಿದೆ.

ಕೇಸರಿ, ಶುಂಠಿ, ಬೆಳ್ಳುಳ್ಳಿ, ಆಲೂ [ಆಲೂಗಡ್ಡೆ (ಬಟಾಟೆ) ಅಥವಾ ಸೊಲನಮ್ ಟ್ಯೂಬರೋಸಮ್] ಮತ್ತು ಕಂದ (ಅಮಾರ್ಫೊಫಾಲಸ್ ಕೆಂಪಾನುಲೇಟಸ್) ಗಳನ್ನು ಗೆಡ್ಡೆಗಳಿಂದ ಬೆಳೆಯಲಾಗುತ್ತದೆ. ಪಲಕ್ಕಿ, ಪದ್ಮ (ಕಮಲ, ನೆಲುಂಬಿಯಂ ಸ್ಪೆಸಿಯೋಸಂ), ಉತ್ಪಲ (ಕನ್ನೈದಿಲೆ, ನಿಂಫಿಯ ಕೆರುಲಿಯ) ಮುಂತಾದುವನ್ನು ಬೀಜ ಹಾಗೂ ಗೆಡ್ಡೆ, ಗಳೆರಡರಿಂದಲೂ ಬೆಳೆಯಲಾಗುತ್ತದೆ(ಶ್ಲೋ. 50).

ಮರಗಳ ಬೆಳವಣಿಗೆಗೆ ಮೃದುಮಣ್ಣು ಅತ್ಯಂತ ಸೂಕ್ತವಾದುದು. ಅದರಲ್ಲಿ ಮೊದಲು ಎಳ್ಳು ಬಿತ್ತಿ, ಅವು ಹೂಬಿಟ್ಟಾಗ ಬುಡಸಮೇತ ಕಿತ್ತು ಮಣ್ಣಿನಲ್ಲಿ ತುಳಿದು ಸೇರಿಸಬೇಕು. ಇದು ಮಣ್ಣು ಹದಗೊಳಿಸುವ ಮೊದಲ ಹಂತವಾಗಿದೆ(ಶ್ಲೋ. 51).

ಮಟ್ಟಸವಾದ ಹಾಗೂ ಚೆನ್ನಾಗಿ ಉಳುಮೆ ಮಾಡಲಾದ ಜಮೀನಿನಲ್ಲಿ ಮೊದಲು ಮಾಷ (ಫೆಸಿಯೋಲಸ್ ರೇಡಿಯೇಟಸ್) ಮತ್ತು ಎಳ್ಳುಗಳನ್ನು ಬೆಳೆಯಬೇಕು. ಅವು ಬಲಿತಾಗ, ಬೇರುಸಮೇತ ಕಿತ್ತು ಅಲ್ಲಿ ಬೀಜಗಳನ್ನು (ಮರಗಳ) ಲಾಭಕರವಾಗಿ ಬಿತ್ತಬೇಕು (ಶ್ಲೋ. 52).

ಸಕಾಲದಲ್ಲಿ ಬಲಿತ ಬೀಜಗಳನ್ನು ಹಣ್ಣುಗಳಿಂದ ತೆಗೆದು ಹಾಲಿನಲ್ಲಿ ನೆನೆಸಿ ಐದು ದಿನಗಳವರೆಗೆ ಒಣಗಿಸಬೇಕು. ಬಳಿಕ ಅವುಗಳಿಗೆ ವಿಡಂಗ (ಎಂಬ್ಲಿಯ ರೈಬ್ಸ್) ಬೆರೆಸಿದ ತುಪ್ಪದ ಹೊಗೆಯ ಧೂಪಹಾಕಬೇಕು (ಶ್ಲೋ. 53).

ಹಾಲು, ವಿಶುಷ್ಕ ಆಲೂಗೆಡ್ಡೆಯೊಡನೆ, ಎಳ್ಳು ಮತ್ತು ತುಪ್ಪಗಳಲ್ಲಿ ಊರಿಸಿ, ಗೋಸಗಣಿಯಿಂದ ಉಜ್ಜಿ, ಕೊಬ್ಬಿನ ಧೂಪಹಾಕಿದ ಬೀಜವು ಶೀಘ್ರವಾಗಿ ಬೆಳೆಯುತ್ತದೆ (ಶ್ಲೋ. 54).

ಹಾಲಿನಲ್ಲಿ ಊರಿಸಿ (ನೆನೆಸಿ), ಗೋಸಗಣಿಯಿಂದ ಉಜ್ಜಿ, ಒಣಗಿಸಿದ ಬಳಿಕ ಪುತ್ತೊಪ್ಪೆ ಜೇನು ಮತ್ತು ವಿದಂಗ (ಎಂಬ್ಲಿಯ ರೈಬ್ಸ್) ಪುಡಿಗಳಿಂದ ಪದೇ ಪದೇ ಉಜ್ಜಿದ ಬೀಜವು ಚೆನ್ನಾಗಿ ಬೆಳೆಯುತ್ತದೆ (ಶ್ಲೋ. 55).

ಪನ್ನೇರಳೆ, ರೊಟ್ಟಿಹಣ್ಣು (ಬ್ರೆಡ್ ಫ್ರೂಟ್), ಮಾವು, ಸರಲ, (ಪೈನಸ್ ಲಾಂಜಿಫೋಲಿಯ) ಮತ್ತು ಲಿಕುಚ ಬೀಜಗಳನ್ನು ಹಾಲಿನಲ್ಲಿ ಊರಿಸಿ, ತುಪ್ಪ, ಗೋಸಗಣಿ ಮತ್ತು ವಿದಂಗ (ಪುಡಿ) ಗಳಿಂದ ಉಜ್ಜಿದ ಬಳಿಕ ಬಿತ್ತನೆಮಾಡಬೇಕು (ಶ್ಲೋ. 56).

ಹಲಸ, ಅಶೋಕ, ಬಾಳೆ, ಪನ್ನೇರಳೆ, ಲಿಕುಚ, ದಾಳಿಂಬ ದ್ರಾಕ್ಷ, ಅಳಲೆಕಾಯಿ (ಎಂಬ್ಲಿಕ್ ಮೈರೊಬಲನ್), ಮಾದಳ ಮತ್ತು ಅತಿಮುಕ್ತಗಳು ಗೋಸಗಣಿ ಮೆತ್ತಿದ ಕಸಿತುಂಡುಗಳಿಂದ ಬೆಳೆಯುವ ಮರಗಿಡಗಳಾಗಿವೆ. ಅವುಗಳನ್ನು ಬೇರುಗಳಿಂದ ಅಗೆದು ತೆಗೆಯುವುದರಿಂದ (ಎಂದರೆ ನಾಟಿ) ಇಲ್ಲವೇ ಕಸಿತುಂಡು ಕತ್ತರಿಸುವುದರಿಂದ ಎಚ್ಚರಿಕೆಯಿಂದ ನೆಡಬೇಕು (ಶ್ಲೋ. 57–58).

ಬೇರು ಮತ್ತು ಕಾಂಡಗಳನ್ನು ತುಪ್ಪ (ಉಸಿರ ಆ್ಯಂಡ್ರೊಪೊಗಾನ್ ಮ್ಯುರಿಕೇಟಸ್), ಎಳ್ಳು, ಜೇನು, ವಿದಂಗ, ಕ್ಷೀರ (ಆಕ್ಟಿರಾಕ್ಯಾಂತ ಲಾಂಜಿಫೋಲಿಯ) ಮತ್ತು ಗೋಸಗಣಿ (ಎಲ್ಲವನ್ನು ಒಟ್ಟಿಗೆ ಪುಡಿಮಾಡಿ)ಗಳಿಂದ ಸವರಿದ (ಮೆತ್ತಿದ) ಬಳಿಕ ನಾಟಿಮಾಡಬೇಕು (ಶ್ಲೋ. 59).

ಪೂರ್ಣಸಮಯದವರೆಗೆ ಬಲಿತ ಬೀಜಗಳನ್ನು ಸಂಗ್ರಹಿಸಿ, ಒಣಗಿಸಿ, ಬಳಿಕ ಹಾಲಿನಲ್ಲಿ ನೆನೆಹಾಕಿ, ತೆಗೆದು ಐದುದಿನಗಳ ಕಾಲ ಒಣಗಿಸಬೇಕು. ಅನಂತರ ವಿದಂಗ ಸಾರ ಮಿಶ್ರಮಾಡಿದ ತುಪ್ಪದ ಹೊಗೆಯ ಧೂಪಹಾಕಬೇಕು. ಬಳಿಕ ಬೃಹತಿ (ಆಲೂಗೆಡ್ಡೆ–ಸೊಲಾನಮ್) ಮತ್ತು ಕುವರಿ (ಕ್ಯಾಪ್ಪರಿಸ್ ಎಫಿಲ್ಲ)ಗಳ ಪಂಚಭಾಗ (ಬೇರು, ತೊಗಟೆ, ಎಲೆಗಳು, ಹೂವು, ಹಣ್ಣು)ಗಳ ಭಸ್ಮವನ್ನು ಪಿಂ (ಮಸಿಹೋಕ್ ಬೇರು) ದೊಡನೆ ಮಿಶ್ರಮಾಡಿ ಅದರಲ್ಲಿ ಬೀಜಗಳನ್ನು ಐದುದಿನಗಳವರೆಗೆ ಮೃದುವಾಗಿ ಉಜ್ಜಬೇಕು. ಬಳಿಕ ಬೀಜಗಳನ್ನು ಗೋಸಗಣಿ ಮತ್ತು ಗೋಮೂತ್ರಗಳಲ್ಲಿ ಒಂದು ದಿವಸ ನೆನೆಸಬೇಕು. ಅನಂತರ, ಅವುಗಳಿಗೆ ಗೋಸಗಣಿ ಸವರಿ ಹಾಲು ಚಿಮುಕಿಸುವುದರಿಂದ ಅತಿ ಕ್ಷಿಪ್ರವಾಗಿ ಬೆಳೆಯುತ್ತವೆ (ಶ್ಲೋ. 60–62).

ವಿಡಂಗ ಮತ್ತು ಜೇನು ಸವರಿದ ಬೀಜವು ಅತಿಶೀಘ್ರವಾಗಿ ಬೆಳೆಯುತ್ತದೆ. ಹಾಗೆಯೇ ಹಸುವಿನ ಸಗಣಿ ಸವರಿ ಒಣಗಿಸಿದ ಬೀಜಗಳೂ ಸಹ ಬೇಗನೆ ಬೆಳೆಯುತ್ತವೆ. (ಶ್ಲೋ. 63).

ಬೀಜಗಳನ್ನಿಟ್ಟಿರುವ ಪಾತ್ರೆಯಲ್ಲಿ ಒಣಹುಲ್ಲುಕಡ್ಡಿಗಳನ್ನು ಹರಡಬೇಕು. ಬಳಿಕ ಅವುಗಳಿಗೆ ಹಾಲು ಮತ್ತು ನೀರುಗಳನ್ನು ಚಿಮುಕಿಸಬೇಕು. ಬೀಜಗಳು ಮೊಳಕೆಯೊಡೆದಾಗ ಒಣಹುಲ್ಲುಕಡ್ಡಿಗಳನ್ನು ತೆಗೆದು ಬೀಜಗಳನ್ನು ಒಣಗಿಸಬೇಕು(ಶ್ಲೋ. 64).

ಪ್ರಾತಃಕಾಲದಲ್ಲಿ ಮಿಂದು, ಉಪವಾಸವಿದ್ದು ಚಿನ್ನದ ಗಿಂಡಿಯಲ್ಲಿ ನೀರು ತೆಗೆದುಕೊಂಡು ಬೀಜಗಳಮೇಲೆ ಚಿಮುಕಿಸಬೇಕು. ಬಳಿಕ ಮಂತ್ರಗಳಿಂದ ಪವಿತ್ರಗೊಳಿಸಿ ಕಹಳೆಯನಾದ ಮೊಳಗುತ್ತಿರಲು ಪದೇಪದೇ (ಎಂದರೆ ಒಂದಾದಮೇಲೊಂದರಂತೆ) ಬಿತ್ತನೆಮಾಡಬೇಕು (ಶ್ಲೋ. 65).

ಮಿಂದು, ಪವಿತ್ರವಾಗಿ, ಶುಭ್ರವಸ್ತ್ರಧರಿಸಿ, ದೇವತೆಗಳನ್ನಾರಾಧಿಸಿ, ಗುರುಗಳಿಗೆ ನಮಿಸಿ, ಸತ್ಪಾತ್ರರಿಗೆ ಧನ ಇಲ್ಲವೇ ಭೂಮಿ ಕಾಣಿಕೆಯಿತ್ತು, ಮನೆದೇವರನ್ನು ಪೂಜಿಸಿ ಮೊದಲು ಒಡೆಯನು ತಾನೇ ಕೆಲವು ಬೀಜಗಳನ್ನು ಬಿತ್ತನೆಮಾಡಬೇಕು, ಅನಂತರ ಆತನ ಆಳುಗಳು ಇಡಿಯ ಜಮೀನಿನಲ್ಲಿ ಬಿತ್ತನೆಮಾಡಬೇಕು (ಶ್ಲೋ. 66).

ಬೀಜಗಳು ಮತ್ತು ಬಿತ್ತನೆ ಪ್ರಮಾಣ(ದರ)

ಭಾರತವು ಅನೇಕ ವರ್ಷಗಳಿಂದಲೂ ವಿವಿಧ ವಿಷಯಗಳನ್ನು ಕುರಿತು ವಿಶೇಷ ಮಾಹಿತಿಗಳನ್ನು ಸಾರರೂಪದಲ್ಲಿ ತಿಳಿಸುವ ಸಾರೋಕ್ತಿ ಮತ್ತು ಗಾದೆಮಾತುಗಳಿಗೆ ಹೆಸರಾಗಿದೆ. ಹಿಂದಿ, ಬಂಗಾಳಿ, ಮೈಥಿಲಿ ಮತ್ತು ಬಂಗಾಳಿ ಭಾಷೆಗಳಲ್ಲಿ ಜನಪ್ರಿಯವಾಗಿರುವ ಮುಖ್ಯ ಗಾದೆಮಾತುಗಳನ್ನು ವೃಕ್ಷಾಯುರ್ವೇದದಲ್ಲಿ ಕೊಟ್ಟಿದೆ. ಈ ಸಂಗ್ರಹ (ಸಂಕಲನ)ದಲ್ಲಿ ಕೊಟ್ಟಿರುವ ಅನೇಕ ಉಕ್ತಿಗಳೆಲ್ಲ ವಿವಿಧ ಬಗೆಯ ಮಣ್ಣುಗಳಲ್ಲಿ ಬೀಜ ಬಿತ್ತನೆ ಮಾಡುವಿಕೆ ಹಾಗೂ ಅವುಗಳ ಪ್ರಮಾಣವನ್ನು ಕುರಿತವಾಗಿವೆ. ಅಂಥ ಕೆಲವು ಹೇಳಿಕೆಗಳನ್ನು ಕೆಳಗೆ ಕೊಟ್ಟಿದೆ :

ಗೋಧಿಯನ್ನು ಸ್ವಲ್ಪಮಟ್ಟಿನ ಶುಷ್ಕ (ಖುಷ್ಕಿ) ಜಮೀನಿನಲ್ಲಿ ಬಿತ್ತಬೇಕು. ಬಾರ್ಲಿಯನ್ನು ಆರ್ದ್ರ (ತರಿ) ಜಮೀನಿನಲ್ಲಿ ಬಿತ್ತಬೇಕು. ಭಾರಿ ಮಳೆಯಿದ್ದಲ್ಲಿ ಕಡಲೆಯನ್ನು ಬಿತ್ತಬೇಕು (ಶ್ಲೋ. 91).

ಸೌತೆಯನ್ನು (ಬೀಜಗಳು) ಜಿಂಕೆ ನೆಗೆತದಷ್ಟು ಅಂತರಗಳಲ್ಲೂ ಹತ್ತಿಯನ್ನು (ಬೀಜಗಳು) ಒಂದೊಂದು ಹೆಜ್ಜೆಯಂತರದಲ್ಲೂ, ಕಬ್ಬನ್ನು ಒತ್ತಾಗಿಯೂ ಬಿತ್ತಬೇಕೆಂದು ರೈತನಿಗೆ ಹೇಳು.

ಗಾಳಿ ಪ್ರವೇಶಿಸದಷ್ಟು ಒತ್ತಾಗಿ ಭಾರತೀಯ ಸಣಬನ್ನು ಬಿತ್ತಬೇಕು (ಶ್ಲೋ.92).

ಮುಸುಕಿನ ಜೋಳ ಮತ್ತು ತೃಣಧಾನ್ಯಗಳನ್ನು ಕೆಲವುಮಟ್ಟಿಗೆ ವಿರಳವಾಗಿ ಬಿತ್ತನೆ ಮಾಡಬೇಕು (ಶ್ಲೋ. 93).

ಸಣಬನ್ನು ಒತ್ತಾಗಿ ಬಿತ್ತನೆಮಾಡಿದಾಗ ಮಾತ್ರ ಹಗ್ಗಗಳನ್ನು ಮಾಡುವ ಸಾಧ್ಯತೆಯನ್ನು ನಿರೀಕ್ಷಿಸಬೇಕು (ಶ್ಲೋ. 94).

ತೃಣಧಾನ್ಯಗಳನ್ನು ಒಂದುಹೆಜ್ಜೆಯಂತರದಲ್ಲೂ, ಜೋಳವನ್ನು ಕಪ್ಪೆಕುಪ್ಪಳಿಸುವಿಕೆಯಂತರದಲ್ಲೂ ಬಿತ್ತನೆ ಮಾಡಿದಾತನು ತನ್ನ ಕಣಜವನ್ನು ಫಸಲಿನಿಂದ ತುಂಬಲು ಸಮರ್ಥನಾಗುತ್ತಾನೆ (ಶ್ಲೋ. 95).

ಬಾರ್ಲಿ, ಕಡಲೆ ಮತ್ತು ಹತ್ತಿಗಳನ್ನು ವಿರಳವಾಗಿ ಬಿತ್ತುವುದು ಒಳ್ಳೆಯದು. ಆದರೆ ಕಬ್ಬನ್ನು ಹೀಗೆ ವಿರಳವಾಗಿ ಬಿತ್ತಿದಾತನು ತನ್ನ ಭರವಸೆಯನ್ನು (ಒಳ್ಳೆಯಫಸಲು ಪಡೆಯುವ) ಕೈಬಿಡಬೇಕು (ಶ್ಲೋ. 96).

ಸಣಬನ್ನು ತೀರ ಒತ್ತಾಗಿ, ಹತ್ತಿಯನ್ನು ವಿರಳವಾಗಿ ಹಾಗೂ ತೃಣಧಾನ್ಯಗಳನ್ನು ಹೆಜ್ಜೆಯಂತರದಲ್ಲಿ ಬಿತ್ತುವುದರಿಂದ ಬಡತನ ನೀಗುತ್ತದೆ (ಶ್ಲೋ. 97).

ಚೆನ್ನಾಗಿ ಅಗೆದು ಸಿದ್ಧಗೊಳಿಸಿದ (ಜೇಷ್ಠಮಾಸದಲ್ಲಿ, ಎಂದರೆ ಮೇ–ಜೂನ್) ಜಮೀನಿನಲ್ಲಿ ಆಗಸ್ಟ್–ಸೆಪ್ಟಂಬರ್‌ನಲ್ಲಿ(ಭಾದ್ರಪದ) ಬತ್ತದ ಬಿತ್ತನೆ ಮಾಡಿದರೆ, ಹೇರಳವಾಗಿ ಬತ್ತದ ಬೆಳೆಯಾಗಿ ತಿಂದು ಸಂತೋಷಪಡಲು ಸಾಕಷ್ಟು ಅವಲಕ್ಕಿ (ಚಿಂದ) ದೊರಕುತ್ತದೆ (ಶ್ಲೋ. 98).

ಇತರರನ್ನು ನೋಡಿ, ಅದೇ ತಾನೇ ಬಾರ್ಲಿ ಮತ್ತು ಕಬ್ಬು ಕೊಯ್ಲುಮಾಡಿದ ಜಮೀನಿನಲ್ಲಿ ಅದೇ ಬೆಳೆಗಳನ್ನು ಮತ್ತೆ ಬಿತ್ತುವ ಕುಟುಂಬಗಳು ನಾಶಕಾಣುತ್ತವೆ (ಶ್ಲೋ. 99).

ಬಿತ್ತನೆಯನ್ನು ಬುಧವಾರ ಮತ್ತು ಕೊಯ್ಲನ್ನು ಶುಕ್ರವಾರ ಮಾಡಬೇಕು (ಶ್ಲೋ. 101).

ದೀಪಾವಳಿಗೆಯಂದು ಬಿತ್ತಿದಾತನು ದಿವಾಳಿಯಾಗುತ್ತಾನೆ. ಏಂವರೆ, ಒಳ್ಳೆಯಬೆಳೆ ಬರುವುದಿಲ್ಲ (ಶ್ಲೋ. 105).

ಗಜ್ಜರಿ, ಗೆಣಸು ಮತ್ತು ಮೂಲಂಗಿ–ಈ ಮೂರನ್ನೂ ವಿರಳವಾಗಿ ಬಿತ್ತಬೇಕು (ಶ್ಲೋ. 106).

ಕನಿಷ್ಠದರ್ಜೆಯ (ಗುಣಮಟ್ಟದ) ಮಣ್ಣಿಗೆ ನೀಲಿಗಿಡದ ದೇಟುಗಳ ಗೊಬ್ಬರ ಹಾಕುವುದರಿಂದ ದೇಟುಗಳು ಹೆಚ್ಚು ಹೆಚ್ಚು ಕೊಳತಂತೆಲ್ಲ ಮಣ್ಣು ಅಧಿಕಾಧಿಕ ಫಲ ವತ್ತಾಗುತ್ತದೆ (ಶ್ಲೋ. 107).

ಕೋಣವನ್ನು ಈದ ಎಮ್ಮೆ, ಹೆಣ್ಣಿಗೆ ಜನನವಿತ್ತ ತಾಯಿ ಹಾಗೂ ಕಾರ್ತಿಕ (ಅಕ್ಟೋಬರ್-ನವೆಂಬರ್)ದಲ್ಲಾದ ಮಳೆ–ಇವೆಲ್ಲ ವಿಪತ್ಕಾಲದ ಮುನ್ಸೂಚನೆಗಳು (ಅಥವಾ ದುರದೃಷ್ಟ) (ಶ್ಲೋ. 108).

ಬೇಸಾಯಗಾರನು ತನ್ನ ಚಾಪಾ‍ಯಿ(ಹುರಿಮಂಚ)ಗಳ ನೇಯ್ಗೆಯನ್ನು ರೋಹಿಣಿ ನಕ್ಷತ್ರದಲ್ಲೂ, ಕೊಟ್ಟಿಗೆ ನಿರ್ಮಾಣವನ್ನು ಮಾರ್ಗಶಿರದಲ್ಲೂ ಮುಗಿಸಬೇಕು. ಆಗ ಆರ್ದ್ರಾ ನಕ್ಷತ್ರಕಾಲದಲ್ಲಿ ಬಿತ್ತಬಿತ್ತಲು ಅವನಿಗೆ ಬಿಡುವು ಸಿಗುತ್ತದೆ (ಶ್ಲೋ. 109).

ಎಳ್ಳಿಡೆಯಲ್ಲೊ ಬಿತ್ತವನ್ನು ಕನ್ಯಾರಾಶಿಯಲ್ಲೂ, ಬಾರ್ಲಿಯನ್ನು ಮೀನರಾಶಿಯಲ್ಲೂ ಕೊಯ್ಲು ಮಾಡಬೇಕು (ಶ್ಲೋ. 110).

ಗಸಗಸೆ ಮತ್ತು ಅಗಸೆಗಳನ್ನು ತರಿಜಮೀನಿನಲ್ಲಿ ಬಿತ್ತಬೇಕು (ಒತ್ತಾಗಿ) (ಶ್ಲೋ. 111).

ತನಗೆ ಸಾಮರ್ಥ್ಯವಿದ್ದಲ್ಲಿ ಮಾತ್ರ ಉದ್ದನ್ನು (ಫೇಸಿಯೊಲಸ್ ರೇಡಿಯೇಟಸ್) ಬಿತ್ತಬೇಕು, ಇಲ್ಲದಲ್ಲಿ ರೊಟ್ಟಿ ಮತ್ತು ಉಂಡೆಗಳನ್ನು ಮಾಡಬೇಕು (ಅಡಿಗೆಗಾಗಿ) (ಶ್ಲೋ. 112).

ತನ್ನ ಜಮೀನಿನಲ್ಲಿ ಸೌತೆಕೊಯ್ಲಿನ ಬಳಿಕ ಬಿತ್ತವನ್ನು ಬಿತ್ತುವವನನ್ನು ಅನು ಭವಿ ಬೇಸಾಯಗಾರನೆಂದು ಪರಿಗಣಿಸಬೇಕು (ಶ್ಲೋ. 113).

ಒಂದು ಭಿಗ ಜಮೀನಿನಲ್ಲಿ ಈ ಕೆಳಗೆ ತಿಳಿಸಿದ ಪ್ರಮಾಣದಲ್ಲಿ ವಿವಿಧ ಬೀಜಗಳನ್ನು ಬಿತ್ತನೆಮಾಡಬೇಕು :

ಬಾರ್ಲಿ ಮತ್ತು ಗೋಧಿ	25 ಸೇರುಗಳು ಪ್ರತಿಯೊಂದು
ಬಟಾಣಿ	30 ಸೇರುಗಳು
ಕಡಲೆಕಾಳು	15 "
ಮುಸುಕಿನಜೋಳ	2 "
ತೊಗರಿ, ಮೋತಿ ಮತ್ತು ಉದ್ದು	2 "
ಹತ್ತಿ	1½ "
ಬತ್ತ	25 "
ಜಧನ್	15 "
ಸನ್ವಾನ್ (ಬತ್ತ)	1¼ "
ಎಳ್ಳು ಮತ್ತು ಸಾಸುವೆ	ಒಂದು ಹಿಡಿ, ಪ್ರತಿಯೊಂದು
ಬರೆನ್ ಮತ್ತು ಕೊಡನ್	1 ಸೇರು, ಪ್ರತಿಯೊಂದು
ಅಗಸೆ	1½ ಸೇರು
ತೃಣಧಾನ್ಯ, ಸಜ್ಜೆ ಮತ್ತು ಸನ್ವಾನ್	1½ "
ಕೊಡನ್ ಮತ್ತು ಕಾಕುನ್	½ "

ಮೇಲೆ ಹೇಳಿದ ಪ್ರಮಾಣ (ಪರಿಮಾಣ)ದಲ್ಲಿ ಬಿತ್ತನೆ ಮಾಡುವಾತನು ಎರಡು ಪಟ್ಟು ಫಸಲು ಪಡೆಯುತ್ತಾನೆ (ಶ್ಲೋ. 114).

ಕಡಲೆಕಾಳುಗಳನ್ನು ಚಿತ್ತಾನಕ್ಷತ್ರದಲ್ಲಿ ಬಿತ್ತಿದರೆ ನಾಲ್ಕು ಪಟ್ಟು ಬೆಳೆ ಕೊಡುತ್ತದೆ. ಹಾಗೆಯೇ ಸ್ವಾತಿಯಲ್ಲಿ ಗೋಧಿ ಬಿತ್ತಿದರೆ ಉತ್ತಮ ಇಳುವರಿ ಬರುತ್ತದೆ (ಶ್ಲೋ. 115).

ಭಾದ್ರಪದ (ಆಗಸ್ಟ್–ಸೆಪ್ಟೆಂಬರ್) ತಿಂಗಳಲ್ಲಿ ಎಷ್ಟು ದಿನಗಳವರೆಗೆ ಪಶ್ಚಿಮ ಮಾರುತ ಬೀಸುತ್ತದೆಯೋ ಅಷ್ಟು ದಿನಗಳವರೆಗೆ ಪುಷ್ಯದಲ್ಲಿ (ಡಿಸೆಂಬರ್-ಜನವರಿ) ಹಿಮಪಾತವನ್ನು ನಿರೀಕ್ಷಿಸಬಹುದು (ಶ್ಲೋ. 153).

ಕಬ್ಬಿನಪೈರು ಕನ (ತಿರುಳನ್ನು ಕೆಂಬಣ್ಣಕ್ಕೆ ತಿರುಗಿಸಿ, ರಸದಲ್ಲಿ ಸಕ್ಕರೆ ಅಂಶವನ್ನು

ಕಡಮೆ ಮಾಡುವ ಸಸ್ಯರೋಗ) ರೋಗಕ್ಕೆ ಹೇಗೆ ತುತ್ತಾಗುತ್ತದೆ? ಇವಕ್ಕೆ ಸ್ವಾತಿ ನಕ್ಷತ್ರದಲ್ಲಿ ಮಳೆಯಾಗುವುದೇ ಕಾರಣ (ಶ್ಲೋ. 154).

ಲೊಹೈ (ತಿರುಳನ್ನು ಕೆಂಬಣ್ಣಕ್ಕೆ ಪರಿವರ್ತಿಸುವರೋಗ)ಸೋಂಕಿಗೀಡಾದ ಕಬ್ಬಿನ (ಕೊಯ್ಲು) ಮಾಲಿಕನಿಗೆ ದೊಡ್ಡ ವಿಪತ್ತೊದಗುತ್ತದೆ (ಶ್ಲೋ. 155).

ಕೆಳಗೆ (ಮಣ್ಣಿನಲ್ಲಿ) ಆರ್ದ್ರತಾಂಶವಿದ್ದು ಮೇಲೆ ಮೋಡಗಳು ಆವರಿಸಿದ್ದಲ್ಲಿ, ಗೆರ್ರೈ ರೋಗವು ಉಗ್ರವಾಗುವುದೆಂದು ಪರಿಣತರು (ತಜ್ಞರು) ಸಾರಿದ್ದಾರೆ (ಶ್ಲೋ. 156).

ಫಾಲ್ಗುಣ (ಫೆಬ್ರುವರಿ-ಮಾರ್ಚ್)ವಲ್ಲಿ ಪೂರ್ವಮಾರುತವು ಬೀಸಿದರೆ, ಗೋಧಿ ಬೆಳೆಯು ಗೆರ್ರೈ ರೋಗಪೀಡಿತವಾಗುತ್ತದೆ (ಶ್ಲೋ. 157).

ಮಾಘ ಮತ್ತು ಪುಷ್ಯ (ಡಿಸೆಂಬರ್-ಜನವರಿ)ಗಳಲ್ಲಿ ಪೂರ್ವಮಾರುತ ಬೀಸಿದುದಾದರೆ, ಸಾಸುವೆಯನ್ನು ಮೊಹೂನ್(ಒಂದುಕೀಟ) ತಿಂದುಹಾಕುತ್ತದೆ (ಶ್ಲೋ. 158).

ದಕ್ಷಿಣಮಾರುತ ಬೀಸಿದ್ದಾದರೆ ಬೆಂದ ಅನ್ನದ ತಿಳಿಯನ್ನು ತಿನ್ನುವುದೆಂತು (ಏಕೆಂದರೆ ಬತ್ತದ ಕೊಯ್ಲೇ ಆಗುವುದಿಲ್ಲ)? (ಶ್ಲೋ. 159).

ಗೆರ್ರೈ ರೋಗವು ಸೂರ್ಯನು ಕುಂಭರಾಶಿಯಲ್ಲಿರುವಾಗ (ಎಂದರೆ ಫೆಬ್ರುವರಿ-ಮಾರ್ಚ್) ಪ್ರಾರಂಭವಾಗಿ ಮೀನದಲ್ಲಿರುವಾಗ (ಮಾರ್ಚ್-ಏಪ್ರಿಲ್) ಕಾಣೆಯಾಗುತ್ತದೆ. ಅದು ಕಾಂಡದ ದೇಟಿನಲ್ಲಿ ಪ್ರಾರಂಭವಾಗಿ ಎಲೆಗಳನ್ನೆಲ್ಲ ತಿಂದುಬಿಡುತ್ತದೆ (ಶ್ಲೋ. 160).

ಗೋಧಿಗೆ ಗೆರ್ರೈ ಮತ್ತು ಬತ್ತಕ್ಕೆ ಗಂಧಿ ರೋಗಗಳುಂಟಾದುದಾದರೆ ಬೇಸಾಯಗಾರನು ಕ್ಷಾಮದಿಂದ (ಉಪವಾಸದಿಂದ) ಸಾಯುತ್ತಾನೆ(ಎಂದರೆ ಆಹಾರಧಾನ್ಯಗಳ ಕೊರತೆಯಿಂದ) (ಶ್ಲೋ. 161).

ಮಾಘಮಾಸದಲ್ಲಿ (ಜನವರಿ-ಫೆಬ್ರುವರಿ) ಮೋಡದ ಬಣ್ಣವು ಕೆಂಪಗಿದ್ದುದಾದರೆ, ಆಗ ಆಲಿಕಲ್ಲು ಮಳೆಯಾಗುವುದು ಖಂಡಿತ (ಶ್ಲೋ. 162).

ಕಡಲೆಗಿಡಕ್ಕೆ ತಂಡಿ ಹತ್ತಿದುದಾದರೆ, ಆಗ ಅದನ್ನು ಗಧೈತ ಕೀಟವು ತಿಂದುಬಿಡಬಹುದು (ಶ್ಲೋ. 163).

ಚಿತ್ತಾ ನಕ್ಷತ್ರದಲ್ಲಿ ಮಳೆಯಾದುದಾದರೆ, ಇಡಿಯ ಫಸಲೆಲ್ಲ ಹಾಳಾಗುತ್ತದೆ (ಶ್ಲೋ. 164).

ಮಘಾ ನಕ್ಷತ್ರದಲ್ಲಿ ಮಿಡತೆಗಳು ಚೆನ್ನಾಗಿ ವೃದ್ಧಿಯಾಗುತ್ತವೆ ಹಾಗೂ ಪೂರ್ವದಲ್ಲಿ ಥಾನ್ಸ್ (ಕೀಟಗಳು) ಏಳಿಗೆಯಾಗುತ್ತವೆ (ಶ್ಲೋ. 165).

ಹಗಲುರಾತ್ರಿಯಿಡೀ ನಿರಂತರ ಮಳೆಯಿದ್ದುದಾದರೆ, ಆಗ ಸಾವನ್ ಮತ್ತು ಸತಿಗಳು ಅರವತ್ತು ದಿನಗಳಲ್ಲಿ ಫಸಲಿಗೆ ಬರುತ್ತವೆ (ಶ್ಲೋ. 166).

ಮಘಾ ನಕ್ಷತ್ರದಲ್ಲಿ ಮಳೆಯಿರುವಾಗ ತಾಯಿಯೇ ಊಟಕ್ಕೆ ಬಡಿಸಿದಾಗ ಹಸಿದವರಿಗೆ (ಎಷ್ಟು ಹೆಚ್ಚು ಊಟಸಿಗುವುದೆಂದರೆ) ಆಹಾರಕ್ಕಾಗಿ ದೇವರನ್ನು ಪ್ರಾರ್ಥಿಸುವ ಅವಶ್ಯಕತೆಯಿರುವುದಿಲ್ಲ (ಶ್ಲೋ. 167).

ಚಿತ್ತಾ ನಕ್ಷತ್ರ ಪ್ರಾರಂಭದಲ್ಲಿ ಹಾಗೂ ಹಸ್ತದಲ್ಲಿ ಮಳೆಯಿದ್ದಲ್ಲಿ ಪ್ರಜೆಗಳು ರಾಜನೆಷ್ಟೇ ಕರಭಾರ ವಿಧಿಸಿದರೂ ದೂರುವುದಿಲ್ಲ (ಶ್ಲೋ. 168).

ಮಘಾನಕ್ಷತ್ರವು ಭೂಮಿಯನ್ನು ತಣಿಸುತ್ತದೆ (ಮಳೆಯಿಂದ) (ಶ್ಲೋ. 169).

ಚಿತ್ತಾ ನಕ್ಷತ್ರದಲ್ಲಿಯ ಮಳೆಯಿಂದ ನೋಠಿ, ಮಶ (ಫೆಸಿಯೊಲಸ್ ರೇಡಿಯೇಟಸ್) ಮತ್ತು ಕಬ್ಬುಬೆಳೆಗಳ ಫಸಲು ನಾಶವಾಗುತ್ತದೆ(ಶ್ಲೋ. 170).

ಪುನರ್ವಸು ಮತ್ತು ಸ್ವಾತಿ ನಕ್ಷತ್ರಗಳಲ್ಲಿ ಮಳೆಯಾದಲ್ಲಿ ನೂಲುವ ಚರಕದ ಧ್ವನಿಯಾಗಲೀ, ಎಕ್ಕ (ಹಿಕ್ಕು)ವ ಟಂಕಾರ (ಝೇಂಕಾರ)ವಾಗಲೀ ಕೇಳಿಬರುವುದಿಲ್ಲ. (ಏಕೆಂದರೆ ಹತ್ತಿಬೆಳೆ ಹಾಳಾಗಿರುತ್ತದೆ)(ಶ್ಲೋ. 171).

ಮಘಾ ನಕ್ಷತ್ರದಲ್ಲಿ ಮಳೆಯಾಗದಿದ್ದಲ್ಲಿ ಬರಡು ಮತ್ತು ಚೌಳು ಮಣ್ಣು ಸಹ ಬರಪರಿಸ್ಥಿತಿಗೀಡಾಗುತ್ತದೆ. ಹುಲ್ಲು ಬೆಳೆಯೂ ಆಗದಿರುವುದರಿಂದ ಹಯನೂ ಇರುವುದಿಲ್ಲ, ನೀರಿನ ಕೊರತೆಯಿಂದ ಬತ್ತದ ಬೆಳೆಯೂ ಆಗುವುದಿಲ್ಲ (ಶ್ಲೋ. 172).

ಮಾಘ ಮಾಸದಲ್ಲಿ (ಜನವರಿ–ಫೆಬ್ರವರಿ) ಹವಾಗುಣವು ಸಾಕಷ್ಟು ತಂಪಾಗಿಲ್ಲದಿದ್ದಲ್ಲಿ ಗೆಳೆಯನೆ, ಆಹಾರಧಾನ್ಯಗಳು ತುಟ್ಟಿಯಾಗುತ್ತವೆಂದು ಭಾವಿಸಿಕೊ (ಧಾರಣೆ ಹೆಚ್ಚುವುದರಿಂದ)(ಶ್ಲೋ. 173).

ಪುಷ್ಯ ಮತ್ತು ಮಾಘ ಮಾಸಗಳಲ್ಲಿ ದಕ್ಷಿಣ ಮಾರುತವು ಬೀಸಿದರೆ, ಅದು ಶ್ರಾವಣ ಮಾಸಕ್ಕೆ (ಮಳೆಯಾಗಲು) ಶುಭಲಕ್ಷಣವಾಗಿರುತ್ತದೆ (ಶ್ಲೋ. 174).

ವರ್ಷದಲ್ಲಿ ಜ್ಯೇಷ್ಠದಂತಹ ಸುಡುಬಿಸಿಲ ತಿಂಗಳಿಲ್ಲದಿದ್ದಲ್ಲಿ ಪ್ರತಿಯೊಬ್ಬರಿಗೂ ಕಬ್ಬು ಬಿತ್ತುವ (ನೆಡುವ) ಆಸೆಯಾಗುತ್ತಿತ್ತು (ಶ್ಲೋ. 175).

ಮಘಾ ನಕ್ಷತ್ರದಲ್ಲಿ ಮಳೆಯಾದಲ್ಲಿ ಎಲ್ಲ ಆಹಾರ ಧಾನ್ಯಗಳು ಒಳ್ಳೆಯ ಫಸಲು ಕೊಡುತ್ತವೆ (ಶ್ಲೋ. 176).

ಹಸ್ತ ನಕ್ಷತ್ರದಲ್ಲಿ ಮಳೆಯಾದಲ್ಲಿ ಹಾಗೂ ಚಿತ್ತಾ ನಕ್ಷತ್ರದಲ್ಲಿ ಮೋಡಮುಸು ಕಿದ್ದರೆ (ಮಳೆಯ ಭರವಸೆಯಿಂದ) ಬೇಸಾಯಗಾರನು ಮನೆಯಲ್ಲಿ ಕುಳಿತು ಸಂತಸ ದಿಂದ ಹಾಡುತ್ತಾನೆ (ಶ್ಲೋ. 177).

ಹಸ್ತ ನಕ್ಷತ್ರವು ಮಳೆಯಾಡಿಸಿದರೆ (ಎಂದರೆ ಅಡಿಯಿಡುತ್ತಿದ್ದಂತೆಯೇ ಮಳೆ ಸುರಿಸಿದರೆ), ಹೆಚ್ಚು ಶ್ರಮವಿಲ್ಲದೆಯೇ ಗೋಧಿಯು ಚೆನ್ನಾಗಿ ಬೆಳೆಯುತ್ತದೆ (ಶ್ಲೋ. 178).

ಶ್ರಾವಣ ಮಾಸದಲ್ಲಿ (ಜುಲೈ–ಆಗಸ್ಟ್) ಮಳೆಯಾಗದಿದ್ದಲ್ಲಿ, ಮುಂಗಾರಿ ಬೆಳೆಯು ಕೆಡುತ್ತದೆ ಹಾಗೂ ಬಾದೊನ್ (ಭಾದ್ರಪದ) ದಲ್ಲಿ ಮಳೆಯಾಗದಿದ್ದಲ್ಲಿ ಹಿಂಗಾರಿ ಬೆಳೆಗೆ ತೊಂದರೆಯಾಗುತ್ತದೆ (ಶ್ಲೋ. 179).

ಪುಷ್ಯಮಾಸದ ಮಧ್ಯದಲ್ಲಿ (ಎಂದರೆ, ಜನವರಿ ತಿಂಗಳ ಪ್ರಾರಂಭದಲ್ಲಿ) ಮಳೆ ಯಾದರೆ, ಕೊಯ್ಲಿನಲ್ಲಿ ಅರ್ಧಕಾಳು, ಅರ್ಧ ಒಣಹುಲ್ಲು ಇಳುವರಿಯಾಗುತ್ತವೆ; ಎಂದರೆ, ಒಳ್ಳೆಯ ಬೆಳೆಯಾಗುತ್ತದೆ (ಶ್ಲೋ. 180).

ಆರಿದ್ರಾದ ಆರಂಭದಲ್ಲಿ ಮತ್ತು ಹಸ್ತೆಯಲ್ಲಿ ಮಳೆಯಿಲ್ಲದಿದ್ದಲ್ಲಿ, ಮನೆಯಾ ತನು ನೆಂಟನಂತೆ ವಿಷಣ್ಣ (ಮಂಕುಕವಿದಂತೆ) ನಾಗುತ್ತಾನೆ. ಎಂದರೆ ಸ್ವಾಗತ ದೊರೆ ಯದ ಹಾಗೂ ಬೀಳ್ಕೊಡುಗೆಯೂ ದೊರೆಯದ ನೆಂಟನ ಸ್ಥಿತಿಗೊಳಗಾಗುತ್ತಾನೆ (ಶ್ಲೋ. 181).

ಅಧ್ಯಾಯ 9

ಕೃಷಿಯ ಪವನಶಾಸ್ತ್ರ

ವಾಯುಮಂಡಲ ಸ್ಥಿತಿಗತಿಗಳ ನಿರೀಕ್ಷಣೆಯಿಂದ ಮಳೆ ಸಾಧ್ಯತೆ, ನೀರುಕೊರತೆ ಇತ್ಯಾದಿಗಳನ್ನು ಪೂರ್ವಭಾವಿಯಾಗಿ ಹೇಳುವುದನ್ನು ಭಾರತದಲ್ಲಿ ತಜ್ಞರು ಕಾಲಕಾಲಕ್ಕೆ ಮಾಡುತ್ತಲೇ ಬಂದಿದ್ದಾರೆ. ಸಾಮಾನ್ಯವಾಗಿ, ಈ ನಿರೀಕ್ಷಣೆಗಳು ವಿವಿಧ ನಕ್ಷತ್ರಗಳು, ವಾಯುದಿಕ್ಕು ಇತ್ಯಾದಿಗಳನ್ನು ಅವಲಂಬಿಸಿದ್ದುದರಿಂದ ಸರಿಯಾಗಿಯೇ ಇರುತ್ತಿದ್ದುವು. ಈ ದಿಸೆಯಲ್ಲಿ ಕೆಲಡಿಯ ಬಸವರಾಜನು ಸಂಸ್ಕೃತದಲ್ಲಿ ಬರೆದಿರುವ ಶಿವತತ್ವ ರತ್ನಾಕರವು ಪ್ರಾಚೀನ ಭಾರತದ ಪವನಶಾಸ್ತ್ರ ವ್ಯವಸ್ಥೆಯನ್ನು ಕುರಿತ ಉಪಯುಕ್ತ ಮಾಹಿತಿಗಳನ್ನು ನೀಡುತ್ತದೆ. ಆ ಖ್ಯಾತಕೃತಿಯ ಕೆಲವು ಮುಖ್ಯ ಭಾಗಗಳ ಅನುವಾದವನ್ನು ಕೆಳಗೆ ಕೊಟ್ಟಿದೆ.

'ಯಾವ ತಿಂಗಳಿನಲ್ಲಿ ಯಾವ ಬಗೆಯ ಮೋಡಗಳು ನೆಲವನ್ನು ಮಳೆಯಿಂದ ತೋಯಿಸುತ್ತವೆ ? ಯಾವಗುರಿ(ಉದ್ದೇಶ)ಯಿಂದ ಮಳೆಯು ಅವುಗಳಿಂದ ಇಳಿಯುತ್ತದೆ ? ಎಲೈ ಗುರುವೆ ! ನಿನಗೆ ನನ್ನಲ್ಲಿ ಕರುಣೆ(ಕೃಪೆ)ಯಿದ್ದಲ್ಲಿ ಇವೆಲ್ಲವನ್ನು ತಿಳಿಸಿಕೊಡು. ಎಲೆ ಕಂದ, ನೀನು ತಿಳಿಯಲು ಕುತೂಹಲದಿಂದಿರುವ ಈ ಎಲ್ಲ ವಿಷಯಗಳನ್ನೂ ತಿಳಿಯ ಹೇಳುತ್ತೇನೆ' (ಶ್ಲೋ. 1–2).

ಮುಂದಿನ ರಾಶಿಚಕ್ರಕ್ಕೆ ಸೂರ್ಯನು ಸಂಕ್ರಮಿಸುವ ಕಾಲದಲ್ಲಿ ಕಾರ್ತೀಕ ಅಥವಾ ಮಾರ್ಗಶಿರ ಮಾಸಗಳಲ್ಲಿ ಮಳೆಬಿದ್ದರೆ, ಫಸಲು ಸುಮಾರಾಗಿ(ಮಧ್ಯಮ)ರುತ್ತದೆ. ಆದರೆ ಪುಷ್ಯದಲ್ಲಾದರೆ, ವಿಫಲವಾಗಿ ಬೆಳೆಯಾಗುತ್ತದೆ (ಶ್ಲೋ. 3).

ದೀಪಾವಳಿ, ಹಬ್ಬದದಿನ ಮಳೆಯಾದಲ್ಲಿ ಕುಜ(ಅಂಗಾರಕ) ಮತ್ತು ಸೂರ್ಯರು ಅನಿಷ್ಟಕಾರಿ(ಅಶುಭ)ಗಳಾಗಿರುತ್ತಾರೆ. ಕಾರ್ತೀಕದಲ್ಲಿ ಮೋಡಗಳು ಗುಡುಗಿದರೆ, ನಾಲ್ಕು ತಿಂಗಳವರೆಗೆ ನಿರಂತರ ಮಳೆಯಿರುತ್ತದೆ ಹಾಗೂ ಕೃಷಿ ಉತ್ಪನ್ನವು ಉತ್ಕೃಷ್ಟವಾಗಿದ್ದು ತತ್ಫಲವಾಗಿ ಹೇರಳವಾಗಿ ಆಹಾರಧಾನ್ಯಗಳಿರುತ್ತವೆ (ಶ್ಲೋ. 4–5b).

ಎಲ್ಲ ವರ್ಣಗಳ ಮೋಡಗಳು ಗಗನದಲ್ಲಿ ಪ್ರತ್ಯೇಕವಾಗಿ ತೇಲಾಡುತ್ತಿರುವುದನ್ನು ಕಾಣಬಹುದು. ಮೋಡಗಳು ಬಿಳಿ ಇಲ್ಲವೇ ಹಳದಿಬಣ್ಣವಿದ್ದಲ್ಲಿ, ಆಗ ಕೆಲವೆಡೆ ಮಳೆಯಾಗುತ್ತದೆ ಮತ್ತೆ ಕೆಲವೆಡೆ ಬರಪರಿಸ್ಥಿತಿಯುಂಟಾಗುತ್ತದೆ (ಶ್ಲೋ. 5b–6).

ಕಾರ್ತೀಕಮಾಸದಲ್ಲಿ ಮಳೆಯುಮೋಡಗಳ (ಮೇಘ ಬಾಷ್ಪ) ಸ್ವರೂಪವು ಆಕಾಶದ ಕೆಲವೆಡೆಯಲ್ಲಿ ಕಪ್ಪಾಗಿಯೂ, ಕೆಲವೆಡೆ ತಾಮ್ರವರ್ಣವಾಗಿಯೂ, ಕೆಲವೆಡೆ ಕಂದು ಕಂಚಿನಂತೆಯೂ ಉಳಿದವು ಸಿಂಧೂರವರ್ಣದವೂ ಆಗಿದ್ದಲ್ಲಿ ಅದನ್ನು (ಎಂದರೆ ಹಬೆಯ ಸ್ವರೂಪವನ್ನು) ಒಂದು ನಿರ್ದಿಷ್ಟ ಮನೆಯಲ್ಲಿಯ (ಮಹಲು) ಚಂದ್ರಸ್ಥಾನ ವೆಂದು ಪರಿಗಣಿಸಿ ಹದಿನೈದನೆಯ ದಿನ ಮಳೆಯಾಗುವುದೆಂದು ಮುಂಗಾಣಬೇಕು (ಶ್ಲೋ. 7–9a).

ಶುಕ್ಲಪಕ್ಷದಲ್ಲಿ ಮೂಡಿದ ಮುಗಿಲುಗಳು ಕೃಷ್ಣಪಕ್ಷದಲ್ಲೂ, ಕೃಷ್ಣಪಕ್ಷದಲ್ಲಿ ಮೂಡಿದವು ಶುಕ್ಲಪಕ್ಷದಲ್ಲೂ ಮಳೆಕಾರುತ್ತವೆಂಬುದು ಬುದ್ಧಿವಂತರಿಗೆ ತಿಳಿದಿದೆ. ಹಾಗೆಯೇ ರಾತ್ರಿಯ ಹೊತ್ತು ಹುಟ್ಟುವಂತೆ ಕಂಡುವು ದಿನದಲ್ಲಿಯೂ, ದಿನದಲ್ಲಿಹುಟ್ಟಿದುವು ರಾತ್ರಿಯಲ್ಲೂ ಮಳೆಸುರಿಸುತ್ತವೆ. ಬೆಳಗ್ಗೆ ಹೊತ್ತು ಮೂಡಿದಂಥವು ಸಂಜೆಯಲ್ಲಿ (ವಿಪರ್ಯಯವಾಗಿಯೂ) ಮಳೆಕಾರುತ್ತವೆ ಮತ್ತು ಮೂಡಲಲ್ಲಿ ಹುಟ್ಟಿದವು ಪಡುವಣದಲ್ಲಿ (ವಿಪರ್ಯಯವಾಗಿಯೂ) ಮಳೆಸುರಿಸುತ್ತವೆ. ಇದೇರೀತಿಯಲ್ಲಿ, ಗಾಳಿಯ ಚಲನೆಗೆ ತಕ್ಕಂತೆ ಬದಲಾವಣೆಗಳನ್ನು ಮುಂಗಾಣಬೇಕು (ಶ್ಲೋ. 9b–11).

ಅಶ್ವಿನಿ ನಕ್ಷತ್ರದಲ್ಲಿ ಒಳ್ಳೆಯ ಮಳೆಯಮೋಡ (ಎಂದರೆ ಮೇಘ)ಗಳಿದ್ದಲ್ಲಿ, ಧಾರಾಕಾರವಾಗಿ ಮಳೆಯಾಗುತ್ತದೆ. ಹಾಗೆಯೇ ಮಾರ್ಗಶಿರ ಶುಕ್ಲಪಕ್ಷದ ಮೂರನೆಯ ದಿನದಿಂದ ಹಿಡಿದು ನಾಲ್ಕು ದಿನಗಳವರೆಗೆ ಉತ್ಕೃಷ್ಟ ಮಳೆಯ ಮೇಘಗಳು ಕಂಡಲ್ಲಿ ಧಾರಾಕಾರವಾದ ಮಳೆಯನ್ನು ನಿರೀಕ್ಷಿಸಬಹುದು (ಶ್ಲೋ. 12-13a).

ಮಾರ್ಗಶಿರದ ಕೃಷ್ಣ ಪಕ್ಷದ ನಾಲ್ಕನೆಯ ದಿನ ಆಶ್ಲೇಷ ನಕ್ಷತ್ರವಿದ್ದು, ಸಿಡಿಲಿನೊಡಗೂಡಿದ ಗುಡುಗುವ ಮೋಡಗಳು ಕಂಡುಬಂದಲ್ಲಿ (ಆಕಾಶದಲ್ಲಿ), ನಿರಂತರ ಮಳೆಯಾಗುತ್ತದೆ. ಹಾಗೆಯೇ ಆಷಾಢದ ಕೃಷ್ಣ ಪಕ್ಷದಲ್ಲಿ ಇದೇ ಲಕ್ಷಣಗಳು ತೋರಿದಲ್ಲೂ ಸಹ ಹೀಗೆಯೇ ಮಳೆಯಾಗುತ್ತದೆ (ಶ್ಲೋ. 13b-14).

ಆಷಾಢದ ಶುಕ್ಲಪಕ್ಷದಲ್ಲಿ ಪಂಚಮಿ, ಷಷ್ಠಿ ಮತ್ತು ಸಪ್ತಮಿಗಳಂದು ಆಶ್ಲೇಷ, ಚಿತ್ತ ಮತ್ತು ಪೂರ್ವ (ಪುನರ್ವಸು) ನಕ್ಷತ್ರಗಳಿದ್ದು ಮಳೆಯ ಮೇಘರಾಶಿಗಳು ಕಂಡಲ್ಲಿ ನಿರಂತರ ಮಳೆಯಾಗುತ್ತದೆ (ಶ್ಲೋ. 15-16a).

ಬೇಸಾಯಕ್ಕೆ(ಪ್ರಾರಂಭಿಸಲು) ಶುಭಘಳಿಗೆ

ವಾಚಸ್ಪತ್ಯ ಕೋಶದಲ್ಲಿ ಹೇಳಿರುವ ಬೃಹತ್ ಪರಾಶರ ಸಂಹಿತದಲ್ಲಿ ಬೇಸಾಯ

ವನ್ನು ಆರಂಭಿಸಲು ಪ್ರಶಸ್ತ ಘಳಿಗೆಗಳನ್ನು ಕುರಿತು ಉಲ್ಲೇಖಿಸಲಾಗಿದೆ. ಆ ಪುಸ್ತಕದ ಮುಖ್ಯಭಾಗಗಳ ಅನುವಾದವನ್ನು ಕೆಳಗೆ ಕೊಡಲಾಗಿದೆ :

ಉಳುಮೆ (ಭೂಮಿಯನ್ನು ಉಳುವಿಕೆ) ಕಾರ್ಯವನ್ನು ಮೂಲ, ವಿಶಾಖ ಮತ್ತು ಮಘಾ ನಕ್ಷತ್ರಗಳಲ್ಲಿ ಚಲನಾತ್ಮಕ ಸ್ಥಿರ, ನಿಧಾನ ಹಾಗೂ ಶೀಘ್ರಗತಿಯುಳ್ಳ ಗ್ರಹಗಳಲ್ಲಿ ಅಥವಾ ದುಷ್ಟ ಗ್ರಹಗಳು ಮತ್ತು ನಕ್ಷತ್ರಗಳು ದುರ್ಬಲವಾಗಿದ್ದು (ಕಡಮೆ ಪ್ರಭಾವ ಶಾಲಿಗಳಾಗಿದ್ದು) ಚಂದ್ರನು ಜಲ (ಪೂರ್ವಾಷಾಢ) ಸ್ಥಾನದಲ್ಲಿದ್ದು ಶುಕ್ರನೊಡನೆ ಸಂಪೂರ್ಣವಾಗಿ, ಶಕ್ತಿಪೂರ್ಣವಾಗಿ ಕಂಗೊಳಿಸುವಾಗ ಹಾಗೂ ಬೃಹಸ್ಪತಿಯು ಲಗ್ನಸ್ಥಾನ ದಲ್ಲಿರುವಾಗ ಪ್ರಾರಂಭಿಸಬೇಕು. ಭಾನುವಾರ ಇಲ್ಲವೇ ಶನಿವಾರಗಳಲ್ಲಿ ಇಲ್ಲವೇ ಸೂರ್ಯನ ಸಿಂಹ, ಕುಂಭ, ಕಟಕ, ಮೇಷ, ಮಕರ, ಇಲ್ಲವೇ ತುಲಾ ರಾಶಿಪ್ರವೇಶ ಕಾಲದಲ್ಲಿ ಮಾಡಬಾರದು: ಇದು ಶರೀರವನ್ನು (ಬೇಸಾಯಗಾರನ) ಕ್ಷಯಿಸುತ್ತದೆ. ಹಾಗೆಯೇ ಇದೇ ಕಾರಣಕ್ಕಾಗಿ ರಿಕ್ತ ಎಂದು ಕರೆಯಲಾದ ಶುಕ್ಲಪಕ್ಷದ ಚತುರ್ಥಿ, ಷಷ್ಠಿ, ನವಮಿ ಮತ್ತು ಚತುರ್ದಶಿ ದಿನಗಳಂದು ಸಹ ಕೃಷಿಪ್ರಾರಂಭಿಸಬಾರದು(ಶ್ಲೋ. 181).

ಶ್ರಾವಣ, ಶತಭಿಷ, ಪುನರ್ವಸು ಮತ್ತು ವಿಶಾಖಾ ನಕ್ಷತ್ರಗಳನ್ನುಳಿದ ನಕ್ಷತ್ರಗಳಲ್ಲಿ ಬೀಜಬಿತ್ತನೆ ಮಾಡುವುದು ಶುಭಕರ. ಆದರೆ ಮಂಗಳವಾರ ಬಿತ್ತನೆ ಮಾಡಬಾರದು. ಹಾಗೆಯೇ ರಾಹು ಪ್ರಭಾವದಲ್ಲಿರುವ ಮೊದಲ ಎಂಟು ನಕ್ಷತ್ರಗಳು ಅಮಂಗಳಕಾರಿಗಳು: ಮುಂದಿನ ಮೂರು ಶುಭವಾದುವು; ಮುಂದಿನದೊಂದು ಅಮಂಗಳಕರ: ಅದರ ಮುಂದಿನ ಮೂರು ಶುಭವಾಗಿದ್ದು, ಒಂದು ಅಶುಭವಾಗಿರುತ್ತದೆ ಮತ್ತು ಅಲ್ಲಿಂದ ಮುಂದಿನ ಮೂರು ಶುಭವಾಗಿದ್ದು ಒಂದು ಅಮಂಗಳಕಾರಿಯಾಗಿರುತ್ತದೆ: ಕೊನೆಯ ಮೂರು ಮಂಗಳವಾಗಿದ್ದು ಉಳಿದ ಕಡೆಯ ನಾಲ್ಕು ಅಶುಭವಾಗಿರುತ್ತವೆ. ಉಳುಮೆ ಮಾಡಲು, ಸೂರ್ಯನು ಸ್ಥಾನಬಿಟ್ಟ ನಕ್ಷತ್ರದಿಂದ ಮೂರು ನಕ್ಷತ್ರಗಳು ಅಶುಭವಾದವು, ಮುಂದಿನ ಎಂಟು ಶುಭವಾದುವು, ಅಲ್ಲಿಂದ ಮುಂದಿನ ಒಂಬತ್ತು ಅಮಂಗಳಕಾರಿಗಳಾಗಿದ್ದು ಕೊನೆಯ ಎಂಟು ಮಂಗಳವಾದುವೆಂದು ಋಷಿಗಳು ಸಾರಿದ್ದಾರೆ (ಶ್ಲೋ. 182).

ಮೂಲ, ವಿಶಾಖ ಮತ್ತು ಮಘಾಗಳನ್ನೊಳಗೊಂಡ ಹತ್ತೊಂಬತ್ತು ನಕ್ಷತ್ರರಾಶಿ ಗಳಲ್ಲಿ ಚರ, ಸ್ಥಿರ, ನಿಧಾನ ಹಾಗೂ ಶೀಘ್ರಗತಿಯುಳ್ಳ ನಕ್ಷತ್ರಗಳಲ್ಲಿ ಉಳುಮೆ ಕಾರ್ಯ ಪ್ರಾರಂಭಿಸಬೇಕು. ನಾರದರು ಈ ಬಗ್ಗೆ ಕೆಳಗೆ ತಿಳಿಸಿದಂತೆ ಹೇಳಿದ್ದಾರೆ :

'ಎತ್ತುಗಳನ್ನು ಹೂಡಿ ಮೊದಲ ಉಳುಮೆ ಕಾರ್ಯವನ್ನು ನಿಧಾನಗತಿಯ, ಸ್ಥಿರ, ಶೀಘ್ರಗತಿಯ ಮತ್ತು ಚರ ಹಾಗೂ ವಿಶಾಖ ಮತ್ತು ಪಿತೃಗಳಿಗೆ (ಪಿತೃದೇವತೆಗಳಿಗೆ) ಪವಿತ್ರವಾದ ನಕ್ಷತ್ರಗಳಲ್ಲಿ ನಡೆಸಬೇಕು' (ಶ್ಲೋ. 183).

ಶ್ರೀಪತಿಯು ಇನ್ನೂ ವಿಶದವಾಗಿ ಹೇಳುತ್ತಾನೆ: ಮೊದಲ ಉಳುಮೆಕಾರ್ಯವನ್ನು ಆರೋಗ್ಯವಾದ, ಬೀಜತೆಗೆದು ನಿರ್ವೀರ್ಯಗೊಳಿಸದ ಹೋರಿಗಳನ್ನು ಹೂಡಿ, ನಿಧಾನಗತಿಯ, ಸ್ಥಿರವಾದ, ಶೀಘ್ರಗತಿಯ ಮತ್ತು ಚರ ನಕ್ಷತ್ರಗಳು ಹಾಗೂ ಮೂಲ, ಮಘ ಮತ್ತು ವಿಶಾಖೆಗಳಲ್ಲಿ ಉಳುಮೆ ಮಾಡಬೇಕು. ಇಲ್ಲಿ ಬೀಜತೆಗೆಯದ (ಹಿಡಮಾಡದ) ಎಂಬ ಪದ ಬಳಸಲಾಗಿದೆ. ಏಕೆಂದರೆ, ಹೋರಿಗಳ ಬೀಜಗಳು ಬಲಿತು ಫಲಕಾರಿಯಾಗಿರುವುದರಿಂದ ಹಿಡಮಾಡದ ಹೋರಿಗಳಿಂದ ಉಳುಮೆಮಾಡುವುದರಿಂದ ಬೇಸಾಯವು ಫಲವತ್ತಾಗುತ್ತದೆ ಹಾಗೂ ಹಿಡಮಾಡಿದವುಗಳಿಂದ ಉಳುಮೆ ಮಾಡುವುದರಿಂದ ಬರಡಾಗುತ್ತದೆ. ಉಳುಮೆಕಾರ್ಯಕ್ಕೆ ಭಾನುವಾರವು ತ್ಯಾಜ್ಯ. ಇದನ್ನು ಕುರಿತು, ವ್ಯವಸಾಯ ಕಲ್ಪದಲ್ಲಿ ಒಂದು ಉದ್ಧರಣ ಉಕ್ತಿ ಇದೆ: 'ಬೇಸಾಯವನ್ನು ಪೂರ್ವ, ದ್ವಿಷ (?), ಯಮ (ಭರಣಿ) ಮತ್ತು ಅಗ್ನಿ (ಕೃತ್ತಿಕ) ನಕ್ಷತ್ರಗಳಲ್ಲಿ ಭಾನುವಾರ ಮತ್ತು ಶನಿವಾರಗಳಲ್ಲಿ ಹಾಗೂ ಚಾಂದ್ರಮಾಸದ ರಿಕ್ತತಿಥಿಗಳಲ್ಲಿ ಮಾಡಬಾರದು' (ಶ್ಲೋ. 184–185).

ಲಗ್ನಾದಿಗಳಿಗೆ ಆಧಾರವಾಗಿ ರತ್ನಮಾಲ ಹಾಗೂ ಕಶ್ಯಪರಿಂದ ಹೇಳಲಾದ ಉಕ್ತಿಗಳನ್ನು ಕೊಟ್ಟಿದೆ:

'ಶುಕ್ರ ಮತ್ತು ಚಂದ್ರರು ಸಶಕ್ತರಾಗಿದ್ದು ಶನಿ, ಕುಜ ಮತ್ತು ಸೂರ್ಯರು ದುರ್ಬಲರಾಗಿದ್ದು ಚಂದ್ರನು ಪೂರ್ವಾಷಾಢ ಸ್ಥಾನದಲ್ಲಿದ್ದು ಗುರುವು ಮಂಗಳಸ್ಥಾನದಲ್ಲಿರುವಾಗ ಬೇಸಾಯಮಾಡಬೇಕು' (ಶ್ಲೋ. 186).

ಕಶ್ಯಪರಂತೆ: 'ಗುರು(ಬೃಹಸ್ಪತಿ)ವು ಲಗ್ನ ಸ್ಥಾನದಲ್ಲಿದ್ದು ಶುಕ್ರನು ಬಲವಾಗಿದ್ದು, ಚಂದ್ರನು ಪೂರ್ವಾಷಾಢ ದಲ್ಲಿದ್ದು ದುಷ್ಟನಕ್ಷತ್ರಗಳು ದುರ್ಬಲವಾಗಿರುವಾಗ ಬೇಸಾಯವನ್ನು ಪ್ರಾರಂಭಿಸುವುದು ಮಂಗಳಕರ' (ಶ್ಲೋ. 187).

ರಾಶಿಚಕ್ರ ಮತ್ತು ತಿಥಿಗಳ ಕೆಲವು ಲಕ್ಷಣಗಳ ಪರಿತ್ಯಾಜ್ಯತೆ(ವರ್ಜನೆ)ಯನ್ನು ಕುರಿತು ಜ್ಯೋತಿಷ್ಯ ಸಾರಸಂಗ್ರಹ ದಲ್ಲಿಯ ಕೆಲವು ಉಕ್ತಿಗಳನ್ನು ಕೆಳಗೆ ಕೊಟ್ಟಿದೆ :

ಸೂರ್ಯನು ಮೇಷರಾಶಿ ಪ್ರವೇಶಿಸುವ ಘಳಿಗೆಯಲ್ಲಿ ಬೇಸಾಯ ಪ್ರಾರಂಭಿಸುವುದರಿಂದ ದನಕರುಗಳು ನಾಶವಾಗುತ್ತವೆ; ಕಟಕ ಪ್ರವೇಶಕಾಲದಲ್ಲಾದರೆ ಜಲಾಪಾಯವನ್ನು ನಿಷೇಧಿಸುತ್ತದೆ; ಸಿಂಹರಾಶಿಯಲ್ಲಾದರೆ ಬೆಳೆಗೆ ವಿನಾಶಕಾರಿ; ತುಲಾದಲ್ಲಾದರೆ ನೇಗಿಲು ನಾಶ(ನೊಗ), ಮಕರದಲ್ಲಾದರೆ ಕಳ್ಳಕಾಕರಿಂದ 'ಅಪಾಯದ ಸೂಚನೆಯಿರುತ್ತದೆ'

'ಅಷ್ಟಮಿಯ ತಿಥಿಯಂದು ಬೇಸಾಯ ಪ್ರಾರಂಭಿಸಿದುದಾದರೆ, ಎತ್ತುಗಳು ಸಾಯುತ್ತವೆ, ನವಮಿಯಂದು ಬೆಳೆಗಳಿಗೆ ವಿನಾಶ, ಷಷ್ಠಿಯಂದು ಕೀಟಬಾಧೆ, ಹಾಗೂ ಚತುರ್ದಶಿಯಂದು ದನಕರುಗಳಿಗೆ ವಿಪತ್ತೊದಗುತ್ತದೆ. ಚೌತಿಯಂದು ಪ್ರಾರಂಭಿಸಿದಾಗಲೂ ಸಹ ಇದೇ ಪರಿಣಾಮಗಳನ್ನು ನಿರೀಕ್ಷಿಸಲಾಗಿದೆ' (ಶ್ಲೋ. 188–189).

'182 ನೆಯ ಶ್ಲೋಕದಲ್ಲಿ ತಿಳಿಸಿದ ನಕ್ಷತ್ರಗಳನ್ನು ಹೊರತಾಗಿಸುವುದೆಂದರೆ ಉಳಿದ ಮೂಲ, ಮಘಾ, ಧನಿಷ್ಟ, ಸ್ವಾತಿ ಹಾಗೂ ಸ್ಥಿರ, ನಿಧಾನ ಹಾಗೂ ಶೀಘ್ರ ಗತಿಯ ಹದಿನೈದು ನಕ್ಷತ್ರಗಳಲ್ಲಿ ಬಿತ್ತನೆಯನ್ನು ಆನಂದದಿಂದ ಮಾಡಬಹುದೆಂದರ್ಥ; ಇದಕ್ಕೆ ಪೂರಕವಾಗಿ ರತ್ನಮಾಲದ ಉಕ್ತಿಯೊಂದನ್ನು ಉದ್ಧರಿಸಲಾಗಿದೆ:

'ಬಿತ್ತನೆಯನ್ನು ಹಸ್ತ, ಅಶ್ವಿನಿ, ಪುಷ್ಯ, ಉತ್ತರ, ರೋಹಿಣಿ, ಚಿತ್ತ, ರಾಧ, ಮೃಗಶಿರ, ರೇವತಿ, ಸ್ವಾತಿ, ಧನಿಷ್ಟ, ಮಘಾ ಮತ್ತು ಮೂಲ ನಕ್ಷತ್ರಗಳಲ್ಲಿ ನಡೆಸುವುದರಿಂದ ಯಥೇಚ್ಛ ಇಳುವರಿ ದೊರೆಯುವುದೆಂದು ಹೇಳಲಾಗಿದೆ (ಶ್ಲೋ. 190).

ಎರಡು ಧಾತೃಗಳು, ಮೂಲ, ಮೈತ್ರ (ಮಘಾ?), ಪುಷ್ಯ, ಮೂರು (?) ಹಸ್ತಗಳು, ಮೂರು ಉತ್ತರ ನಕ್ಷತ್ರಗಳು, ರೇವತಿ, ಧನಿಷ್ಟ ಮತ್ತು ಅಶ್ವಿನಿಗಳಲ್ಲಿ ಬೀಜಬಿತ್ತನೆ ಮಾಡುವುದರಿಂದ ಅತ್ಯುತ್ತಮ ಫಸಲು(ಇಳುವರಿ) ದೊರೆಯುತ್ತದೆ (ಶ್ಲೋ. 191).

ನಾರದರು ಹೀಗೆ ಹೇಳುತ್ತಾರೆ: ನಿಧಾನಗತಿಯ, ಸ್ಥಿರ ಇಲ್ಲವೇ ಶೀಘ್ರಗತಿಯ ನಕ್ಷತ್ರಗಳಲ್ಲಿ ಮಘಾ, ಸ್ವಾತಿ, ಪುನರ್ವಸು ಮತ್ತು ಮೂಲ ನಕ್ಷತ್ರಗಳಲ್ಲಿ ಬೀಜಬಿತ್ತನೆ ಮಾಡುವುದರಿಂದ ಅತ್ಯುತ್ತಮ ಇಳುವರಿ ದೊರಕುತ್ತದೆ (ಶ್ಲೋ. 192).

ಕಶ್ಯಪರೂ ಸಹ: 'ಶಿಶ'ದಲ್ಲಿ ಧ್ಯಾನಿಸಿದಬಳಿಕ ಪುನರ್ವಸು, ಸ್ವಾತಿ, ಮೂಲ ನಕ್ಷತ್ರಗಳು ಹಾಗೂ ಶೀಘ್ರಗತಿಯ, ಸ್ಥಿರ ಮತ್ತು ನಿಧಾನಗತಿಯ ನಕ್ಷತ್ರಗಳಲ್ಲಿ ಬಿತ್ತನೆಮಾಡಿದಲ್ಲಿ, ಸಮೃದ್ಧ ಇಳುವರಿ ದೊರೆಯುತ್ತದೆ' ಎಂದಿದ್ದಾರೆ, ಒಂದು ನಿರ್ದಿಷ್ಟ ಕಾಲವನ್ನು ನಿಷೇಧಿಸುವುದನ್ನು ಕುರಿತು ರಾಜಮಾರ್ತಾಂಡದ ಉಕ್ತಿಯೊಂದನ್ನಿಲ್ಲಿ ಉದ್ಧರಿಸಿದೆ (ಶ್ಲೋ. 193):

ಸೂರ್ಯನು ತುಂಬಾ ಕ್ರೂರ(ತೀಕ್ಷ್ಣ)ನಾಗಿದ್ದು ಹಾಗೂ ಅನನುಕೂಲಕರ ಸ್ಥಾನದಲ್ಲಿರುವಾಗ ಭೂಮಿಯಲ್ಲಿ ಧೂಳಿದ್ದ ಬಿರುಗಾಳಿಯುಂಟಾಗುತ್ತದೆ (ಸ್ತ್ರೀಯ ಋತುಕಾಲಗಳಿಗನುಗುಣವಾಗಿ). ಆದಕಾರಣ ಆ ಕಾಲದಿಂದ ಮೂರುದಿನಗಳವರೆಗೆ ಬಿತ್ತನೆ ಮಾಡಬಾರದು (ಶ್ಲೋ. 194).

ನಾರದರು "ರಾಹುವಿನಿಂದಾವೃತ ಗ್ರಹಗಳು ಇಲ್ಲವೇ ನಕ್ಷತ್ರಗಳಲ್ಲಿ ರಾಹುವಿನ ನೆತ್ತಿಯ ಮೇಲಿನ ನಕ್ಷತ್ರತ್ರಯಗಳು ಫಸಲಿಗೆ ವಿನಾಶಕಾರಿಗಳು. ಗ್ರೀವದಲ್ಲಿಯ ಮೂರು ಕಾಳುಗಳನ್ನು ಕಪ್ಪಾಗಿಸುತ್ತವೆ, ಉದರದ ಮೇಲಿನ ಹನ್ನೆರಡು ಬೆಳೆ ಚೆನ್ನಾಗಿ ಬೆಳೆಯುವಂತೆ ಮಾಡುತ್ತವೆ, ಬಾಲದ (ಬೆಂಬದಿಯ) ಮೇಲಿನ ನಾಲ್ಕು, ಬೀಜಗಳು (ಅಥವಾ ಕಾಳು) ಇಲ್ಲದಂತೆ ಮಾಡುತ್ತವೆ ಹಾಗೂ ಶರೀರದ ಹೊರಕ್ಕೆ ಬರುವ ಐದು ನಕ್ಷತ್ರಗಳು ಫಸಲಿನ ನಾಶಕ್ಕೆ ಎಡೆಮಾಡಿಕೊಡುತ್ತವೆ ಎಂದಿದ್ದಾರೆ(ಶ್ಲೋ. 195-196).

ರತ್ನಮಾಲಡಲ್ಲಿಯೂ ಸಹ, ಬಿತ್ತನೆ ಕಾಲದಲ್ಲಿ ಹುಟ್ಟಿದ ರಾಹುವಿನಿಂದ ನೆತ್ತಿಯ ಕಡೆಗೆ ಮೂರು ನಕ್ಷತ್ರಗಳು ಗ್ರೀವದೆಡೆಗೆ ಮೂರು, ಉದರದೆಡೆ ಹನ್ನೆರಡು, ಬಾಲದೆಡೆ ನಾಲ್ಕು ಹಾಗೂ ಶರೀರದಾಚೆಗೆ ಐದು ನಕ್ಷತ್ರಗಳಿರುತ್ತವೆ: ಇವು ಕ್ರಮವಾಗಿ ಫಸಲುನಾಶ, ಕಾಳುಗಳು ಕಪ್ಪಾಗುವಿಕೆ, ಬೆಳವಣಿಗೆ ಹೆಚ್ಚಳ ಹಾಗೂ ಬೀಜ (ಕಾಳುಗಳು) ಗಳಿಲ್ಲದಾಗುವಿಕೆಗೆ ಕಾರಣವಾಗುತ್ತವಲ್ಲದೆ ಸ್ವಾಭಾವಿಕ ವಿಪತ್ತುಗಳಿಂದಾಗುವ ಹಾನಿಯ ಮುನ್ಸೂಚಕ(ಶಕುನ)ವಾಗಿರುತ್ತವೆ (ಶ್ಲೋ. 197).

ಕೆಲವರು ಸರ್ವೋದಯದ ಏಕೈಕ ಪ್ರಮಾಣದಿಂದಲೇ ಫಾಣಿ ಎಂಬ ಪದಕ್ಕೆ 'ಸೂರ್ಯ' ಎಂಬರ್ಥವನ್ನು ಗ್ರಹಿಸುತ್ತಾರೆ. ಆದರೆ ಇದು ಸರಿಯಾದುದಲ್ಲ, ಏಕೆಂದರೆ, ನಾರದರು ಇದನ್ನು ಸ್ಪಷ್ಟವಾಗಿ ರಾಹು ಎಂದು ತಿಳಿದಿದ್ದಾರಲ್ಲದೆ ಇದಕ್ಕೆ ಕಶ್ಯಪರಿಂದಲೂ ಪುಷ್ಟಿ ದೊರೆಯುತ್ತದೆ. ಕಶ್ಯಪರು: 'ರಾಹುಗ್ರಹದಿಂದ ಮುಂದಿನ ಎಂಟು ರಾಶಿಕೂಟಗಳು ಶುಷ್ಕತೆಯ ಸೂಚಕಗಳು' ಎಂದಿದ್ದಾರೆ (ಶ್ಲೋ. 198).

ಶುಭ ಲಗ್ನ (ಘಳಿಗೆ)ಗಳನ್ನು ನಿರ್ಧರಿಸುವಿಕೆಯನ್ನು ಕುರಿತು ವಸಿಷ್ಠರು ಹೀಗೆ ಹೇಳಿದ್ದಾರೆ:

ಜಮೀನು ಉಳುಮೆಗೆ, ಸೂರ್ಯನು ಜಾಗಬಿಟ್ಟ ನಕ್ಷತ್ರದಿಂದ ಹಿಡಿದ ಮುಂದಿನ ಮೂರೂ ಕ್ರಮವಾಗಿ ಅಶುಭಕಾರಿಗಳು. ಅವುಗಳಿಂದ ಮುಂದಿನ ಎಂಟು ಶುಭದಾಯಕವಾದುವು. ಬಳಿಕ ಮುಂದಿನ ಒಂಬತ್ತು ಅಶುಭಕರವೂ ಅಲ್ಲಿಂದ ಮುಂದಿನ ಎಂದರೆ ಕಡೆಯ ಎಂಟು ಶುಭಕರವಾದವೂ ಆಗಿವೆ. ಉದಾಹರಣೆಗೆ, ಸೂರ್ಯನು ಆರಿದ್ರಾ (ಆರ್ದ್ರಾ) ನಕ್ಷತ್ರದಲ್ಲಿದ್ದಾನೆಂದೂ ಮೃಗಶಿರಾ ನಕ್ಷತ್ರವನ್ನು ತ್ಯಜಿಸಿರುವನೆಂದೂ ತಿಳಿಯೋಣ. ಆಗ ಅಲ್ಲಿಂದ ಹಿಡಿದು ಎಂದರೆ ಮೃಗಶಿರಾ, ಆರ್ದ್ರ ಮತ್ತು ಪುನರ್ವಸುಗಳು ಅಶುಭಕಾರಿಗಳಾಗುತ್ತವೆ. ಮುಂದಿನ ಪುಷ್ಯ, ಆಶ್ಲೇಷ, ಮಘ, ಪುಬ್ಬ, ಫಾಲ್ಗುಣಿ, ಹಸ್ತ, ಚಿತ್ತ ಮತ್ತು ಸ್ವಾತಿಗಳು ಶುಭದಾಯಕವಾದುವು. ಮುಂದಿನ ವಿಶಾಖ, ಅನುರಾಧ,

ಜೇಷ್ಠ, ಮೂಲಾ, ಪೂರ್ವಾಷಾಢ, ಉತ್ತರಾಷಾಢ, ಅಭಿಜಿತ್, ಶ್ರವಣ ಮತ್ತು ಧನಿಷ್ಠಗಳು ಅಶುಭಕಾರಿಗಳು. ಅನಂತರ ಶತಭಿಷ, ಪೂರ್ವಭಾದ್ರಪದ, ಉತ್ತರಾಭಾದ್ರಪದ, ರೇವತಿ, ಅಶ್ವಿನಿ, ಭರಣಿ, ಕೃತ್ತಿಕೆ ಮತ್ತು ರೋಹಿಣಿಗಳು ಶುಭಕರವಾದುವು (ಶ್ಲೋ. 199).

ವಸಿಷ್ಠರು ಹೇಳಿರುವಂತೆ: 'ಮೂರು ನಕ್ಷತ್ರಗಳು-ಸೂರ್ಯನು ಸ್ಥಳಬಿಟ್ಟಿರುವುದು, ಸೂರ್ಯನನ್ನು ಆಕ್ರಮಿಸಿರುವುದು ಹಾಗೂ ಮುಂದಿನ ಆಕ್ರಮಿಸಲಿರುವ ಮೂರನೆಯ ನಕ್ಷತ್ರ ಇವು ಮೂರೂ ಅಶುಭಕರವಾದುವು. ಅಲ್ಲಿಂದ ಮುಂದಿನ ಎಂಟು ನಕ್ಷತ್ರಗಳು (ಹಿಂದಿನ ಹಾಗೂ ಮುಂದಿನವು ಎರಡೂ ಕಡೆಯಿಂದಲೂ ಎಣಿಕೆ ಮಾಡಿದರೂ) ಮಂಗಳಕರ. ಉಳಿದ ವೃತ್ತದ ತುದಿ (ಬಾಲ) ಭಾಗದ ಒಂಬತ್ತೂ ಅಶುಭಕಾರಿಗಳು' (ಶ್ಲೋ. 200).

ನಾರದರೂ ಸಹ ಹೀಗೆ ಹೇಳಿದ್ದಾರೆ: 'ಉಳುಮೆಕಾರ್ಯ ಪ್ರಾರಂಭ ಮಾಡುವ ಕಾಲದಲ್ಲಿ, ಸೂರ್ಯನು ಸ್ಥಾನಬಿಟ್ಟ ನಕ್ಷತ್ರದಿಂದ ಹಿಡಿದು ಮುಂದಿನ ಮೂರು ಎತ್ತುಗಳಿಗೆ ಹಾನಿಕರ. ಮುಂದಿನ ಮೂರು ಸಂಪತ್ತನ್ನೂ ಅಲ್ಲಿಂದಾಚಿನ ಐದು ಸಂತೋಷವನ್ನೂ ಕೊಡುತ್ತವೆ. ಅದರಾಚಿನ ಒಂಬತ್ತು ಮುಮ್ಮಡಿ ನೋವು ಉಂಟುಮಾಡುತ್ತವಲ್ಲದೆ ತಮ್ಮ ಹಾದಿಯಲ್ಲಿ ಸಾವುತರುತ್ತವೆ. ಇವುಗಳಿಗೆ ಸಮೀಪದಲ್ಲಿರುವ ಮುಂದಿನ ಐದು ಏಳಿಗೆಗೆ ಕಾರಣವಾಗಿದ್ದು, ಕಡೆಯ ವೃತ್ತದ ತುದಿ (ಬಾಲ)ಯಡೆಯ ಮೂರು ಶುಭಕಾರಿಗಳು'(ಶ್ಲೋ. 201-202).

ಉಳುಮೆ ಕಾರ್ಯದ ಮೇಲಿನ ರಾಶಿಚಕ್ರ ಪ್ರಭಾವವನ್ನು ಕುರಿತು ಕಶ್ಯಪರು 'ಸೂರ್ಯನು ಆದೇ ಬಿಟ್ಟ ನಕ್ಷತ್ರದಿಂದ ಹಿಡಿದು ಮುಂದಿನ ಮೂರು, ಎಂಟು, ಒಂಬತ್ತು ಮತ್ತು ಏಳುನಕ್ಷತ್ರಗಳು ಕ್ರಮವಾಗಿ ನಷ್ಟ, ಲಾಭ, ಬೇಸಾಯಗಾರನ ಸಾವು ಹಾಗೂ ಸಂಪದ್ಭಳಿಕೆಗಳಿಗೆ ಕಾರಣವಾಗುತ್ತವೆಂದಿದ್ದಾರೆ'(ಶ್ಲೋ. 203).

ಈ ಸಂಬಂಧದಲ್ಲಿ 27 ನಕ್ಷತ್ರಗಳನ್ನು ಪರಿಗಣಿಸುವಲ್ಲಿ ಅಭಿಜಿತ್ ನಕ್ಷತ್ರವನ್ನು ಸೇರಿಸಿಲ್ಲ. ಈಗ ಐದು ನಕ್ಷತ್ರಗಳನ್ನು ಬಿಡಲು ಕಾರಣವೇನು ? ಇದಕ್ಕೆ ಅವುಗಳೂ 'ಅದರಲ್ಲಿ' ಸೇರಿವೆಯೆನ್ನಲಾಗಿದೆ. 'ಅದರಲ್ಲಿ' ಎಂದರೆ ನೇಗಿಲ ಮೇಲಿನದಂಡ ಮತ್ತು ಶುಲ(?)ದ ಮೇಲಿನ ದಂಡವೆಂದು ಅರ್ಥೈಸಲಾಗಿದೆ. ಇವುಗಳ ನಡುವೆ, ಪ್ರತಿಯೊಂದರಲ್ಲೂ ಐದು ನಕ್ಷತ್ರ ಸಮುದಾಯಗಳಿದ್ದು, ಏಳಿಗೆ ಕಾರಕಗಳೆಂದು ಪರಿಗಣಿಸಬೇಕು.

ಇದು ಹತ್ತು ನಕ್ಷತ್ರಗಳ ಲೆಕ್ಕವನ್ನು ತೋರಿಸುತ್ತದೆ ಮತ್ತು ನೇಗಿಲುದಂಡದ ಮೇಲ್ಭಾಗದ ಮೂರು ನಕ್ಷತ್ರಗಳನ್ನು ಶುಭಪರಿಣಾಮಕಾರಿಗಳೆಂದು ದಾಖಲೆಮಾಡಿಕೊಳ್ಳಬೇಕು.

ಬೀಜ ಬಿತ್ತನೆ ವೃತ್ತ

ಸೂರ್ಯನು ಆಕ್ರಮಿಸಿದ ನಕ್ಷತ್ರಪುಂಜದಿಂದ ಹಿಡಿದು ಮುಂದಿನ ಪ್ರತಿ ಮೂರು ನಕ್ಷತ್ರಗಳ ಬಳಿಕ ರಾಹುವನ್ನಿಡಬೇಕು. ಆತನ ತಲೆಯಭಾಗದಲ್ಲಿ ಮೂರು ನಕ್ಷತ್ರಗಳೂ, ಕುತ್ತಿಗೆಯ ಭಾಗದಲ್ಲಿ ಮೂರು, ಉದರಭಾಗದಲ್ಲಿ ಹನ್ನೆರಡು, ಬಾಲದಲ್ಲಿ ನಾಲ್ಕು ಮತ್ತು ದೇಹದಾಚೆಗೆ ಐದು ನಕ್ಷತ್ರಗಳಿರುತ್ತವೆ(ಶ್ಲೋ. 230–231).

ಆತನ ಬಾಯಿಭಾಗದಲ್ಲಿರುವ ನಕ್ಷತ್ರಗಳಲ್ಲಿ ಬಿತ್ತನೆಮಾಡುವುದರಿಂದ, ಬೆಳೆಯಾಗದೆ ಹೋಗುತ್ತದೆ; ಕುತ್ತಿಗೆ ಭಾಗದಲ್ಲಿರುವುಗಳಲ್ಲಿ ಮಾಡಿದಾಗ, ಅಂಗಾರಕ (ಕಲ್ಲಿದ್ದಲು -ಅಗ್ನಿಯಿಂದನಾಶ)ವಾಗುತ್ತದೆ, ಉದರದಲ್ಲಿಯ ನಕ್ಷತ್ರಗಳಲ್ಲಿ ಮಾಡಿದಾಗ, ಒಳ್ಳೆಯ ಫಸಲಿಗೆ ನೆರವಾಗುತ್ತವೆ; ಬಾಲಭಾಗದಲ್ಲಿಯವುಗಳಲ್ಲಿ ಮಾಡಿದಾಗ, ಬೆಳೆ ನಾಶವಾಗುತ್ತದೆ. ಈ ಬೀಜಬಿತ್ತನೆ ವೃತ್ತದಲ್ಲಿ ದೇಶದಲ್ಲಿ ವಿಪತ್ತು ತಲೆದೋರುತ್ತದೆ. ಈ ವಿಪತ್ತುಗಳು ಆರುಬಗೆಯಿರುತ್ತವೆ. ಅವು, ಅತಿವೃಷ್ಟಿ, ಅನಾವೃಷ್ಟಿ(ಬರಗಾಲ), ಮಿಡತೆ, ಇಲಿ, ಪಕ್ಷಿಗಳು ಮತ್ತು ಪರಾಕ್ರಮಣಗಳಾಗಿವೆ (ಶ್ಲೋ. 233–234).

ಮಳೆಯ ವೃತ್ತವು ತನ್ನೆಲ್ಲ ಅಂಗಗಳನ್ನು ದೋಷವಿಲ್ಲದೆ(ಸಪ್ರಮಾಣದಲ್ಲಿ) ಹೊಂದಿರುವ ಹೋರಿಯ ಆಕಾರದಲ್ಲಿರುತ್ತದೆ. ಹೋರಿಯ ಚಿತ್ರವನ್ನು ಬರೆದು ವೃಷ ಎಂಬ ಹೆಸರು ಹೊಂದಿರುವ (ವೃಷಭಲಾಂಛನ) ನಕ್ಷತ್ರದಿಂದ ಪ್ರಾರಂಭಿಸಿ ಅಲ್ಲಿ ನಕ್ಷತ್ರಗಳನ್ನು ಬರೆದು ಸೇರಿಸಬೇಕು. ಅವುಗಳನ್ನು ಬಾಯಿ, ಕಣ್ಣು, ಕಿವಿ, ತಲೆ, ಕೊಂಬು ಮತ್ತು ಭುಜಗಳೆಡೆಯಲ್ಲಿ ತಲಾ ಎರಡೆರಡು ನಕ್ಷತ್ರಗಳನ್ನು ಬರೆದು, ಹಿಂಬದಿಯಲ್ಲಿ ಮೂರು, ಬಾಲದಲ್ಲಿ ಎರಡು, ಕಾಲುಗಳಲ್ಲಿ ಎಂಟು ಹಾಗೂ ಉದರ ಭಾಗದಲ್ಲಿ ಮೂರು ಬರೆದು ಸೇರಿಸಬೇಕು (ಶ್ಲೋ. 235-236).

ಉಳುಮೆ ಹಾಗೂ ಬಿತ್ತನೆ ಕಾರ್ಯಗಳನ್ನು ಮಾಡುವದಿನ ಹೋರಿಯ ಚಿತ್ರದ ಒಡಲಮೇಲಿನ ನಕ್ಷತ್ರ ಸ್ಥಾನಗಳಿಂದ ಇಡಿಯ ಶುಭಾಶುಭ ಪರಿಣಾಮಗಳನ್ನು ಕುರಿತು ತಿಳಿಸುತ್ತೇನೆ (ಶ್ಲೋ. 237).

ಮೇಲಿನ ಉಳುಮೆ ಹಾಗೂ ಬಿತ್ತನೆ ಕಾರ್ಯಗಳನ್ನು ಹೋರಿಯ ಬಾಯಿಭಾಗದಲ್ಲಿಯ ನಕ್ಷತ್ರಗಳಲ್ಲಿ ಮಾಡಿದುದಾದರೆ ನಷ್ಟಉಂಟಾಗುತ್ತದೆ; ಕಣ್ಣಿನ ಭಾಗದಲ್ಲಿಯವು

ಗಳಲ್ಲಿ ಮಾಡಿದಾಗ, ಪರಮಾನಂದ ಲಭಿಸುತ್ತದೆ: ಕಿವಿಗಳ ಬಳಿಯುವುಗಳಿಂದ, ಬೇಸಾಯ ಗಾರನು ತಿರುಕನಾಗಿ ಅಲೆಯುತ್ತಾನೆ: ಶಿರೋಭಾಗದಲ್ಲಿಯವುಗಳಿಂದ, ಅದೃಷ್ಟಶಾಲಿಯಾಗುತ್ತಾನೆ: ಕೊಂಬುಗಳ ಬಳಿಯವುಗಳಿಂದ ಸುಖಿಯಾಗುತ್ತಾನೆ. ಭುಜಗಳ ಬಳಿಯವುಗಳಲ್ಲಿ ಪುಣ್ಯಶಾಲಿ(ಅನುಗ್ರಹಿ)ಯಾಗುತ್ತಾನೆ. ಕುತ್ತಿಗೆಯ ಬಳಿಯವುಗಳಲ್ಲಿ ತೊಂದರೆಗೀಡಾಗುತ್ತಾನೆ: ಬಾಲದ ಬಳಿಯವುಗಳಲ್ಲಿ ಅವನಿಗೆ ಶುಭವಾಗುತ್ತದೆ, ಕಾಲುಗಳ ಬಳಿಯವುಗಳಿಂದ ನಿರಂತರ ಪರ್ಯಟನಕ್ಕೀಡಾಗುತ್ತಾನೆ, ಹೃದಯದ (ಉದರ?) ಬಳಿಯವುಗಳಿಂದ ಆರಾಮವಾಗಿರುತ್ತಾನೆ. ಇದನ್ನು ಚಂದ್ರನೊಡನೆರೆತ ವೃಷಭ ಚಕ್ರ(ವೃತ್ತ)ದ ಪರಿಣಾಮವೆಂದು ಬುದ್ಧಿವಂತರು ಸಾರಿದ್ದಾರೆ(ಶ್ಲೋ. 238–239).

ದೀಪಿಕದಿಂದ ಆಯ್ದ ಭಾಗಗಳು

ಜಮೀನು ಉಳುಮೆಯನ್ನು ಪುಷ್ಯ, ಕೃತ್ತಿಕ, ಭರಣಿ ರಾಹು, ಮಾಘ ಮತ್ತು ಶಿವ (?) ರಾಶಿಕೂಟಗಳನ್ನು ಹೊರತುಪಡಿಸಿ ಉಳಿದಂತೆ ರಿಕ್ತತಿಥಿಗಳು (4, 9, 14ನೆಯ), ಅಷ್ಟಮಿ ಹಾಗೂ ಅಮಾವಾಸ್ಯೆದಿನಗಳನ್ನು ಬಿಟ್ಟು ಮಾಡಬೇಕು. ವಾರದಲ್ಲಿ ಮಂಗಳ ಹಾಗೂ ಭಾನುವಾರಗಳನ್ನು ಬಿಟ್ಟು ಉಳಿದ ದಿನಗಳಲ್ಲಿ ದ್ವಯಾಂಗಲಿಗೊ(?) ಉದಯ ಕಾಲದಲ್ಲಿ ಹಾಗೂ ಚಂದ್ರನೊಡನೆ ಸಂಯೋಗಗೊಂಡದಿನಗಳ ಮಿಥುನೆಯಲ್ಲಿ ಪ್ರಾರಂಭ ಮಾಡಬೇಕು (ಶ್ಲೋ. 240).

ಬಿತ್ತನೆಮಾಡುವ ವಿಧಾನವೂ ಸಹ ಉಳುಮೆ ಮಾಡುವುದರಂತೆಯೇ ಇರುತ್ತದೆ. ಬಿತ್ತನೆಯನ್ನು ಚಿತ್ತ ನಕ್ಷತ್ರದಲ್ಲಿಯೂ ಸಹ ಮಾಡಬಹುದು.........(ಶ್ಲೋ. 241).

ಭೀಮ-ಪರಾಕ್ರಮದಿಂದ ಆಯ್ದ ಭಾಗಗಳು

ಬೇಸಾಯಗಾರನು ಉತ್ತರಾಭಿಮುಖನಾಗಿ ನಿಂತು ಉಳುಮೆಮಾಡಬೇಕು. ನೇಗಿಲ ಎಡಕ್ಕೆ ಕಪ್ಪು ಎತ್ತನ್ನೂ ಬಲಕ್ಕೆ ಕೆಂಪು ಎತ್ತನ್ನೂ ಹೂಡಬೇಕು(ಶ್ಲೋ. 242).

ಜಮೀನಿನಲ್ಲಿ ನೇಗಿಲಿಗೆ ಹೂಡಿದ ಮೇಲೆ ಎತ್ತು ಒಂದು ಮುಕ್ಕು ಬಾಯಿತುಂಬ ಹುಲ್ಲುಮೇದುದಾದರೆ, ಸಾಮಾನ್ಯ ಇಳುವರಿಗಿಂತ ಮುಪ್ಪಟ್ಟು ಇಳುವರಿಯಾಗುವುದೆಂದು ಗರ್ಗಮುನಿಗಳು ಸಾರಿದ್ದಾರೆ (ಶ್ಲೋ. 243).

ಬೇಸಾಯ ಪ್ರಾರಂಭಕ್ಕೆ ಚಾಂದ್ರಮಾಸದ ಪ್ರಥಮೆಯು ಉಪಯುಕ್ತವಾಗಿರುತ್ತದೆ, ದ್ವಿತೀಯೆಯು ಕೈಗೊಂಡಕಾರ್ಯದಲ್ಲಿ ಯಶಸ್ಸುಗಳಿಸಿಕೊಡುತ್ತದೆ, ತೃತೀಯೆಯು ಒಳ್ಳೆಯ ಆರೋಗ್ಯಕ್ಕೆ ಸಹಕಾರಿ, ಚೌತಿಯು ಸದಾ ಕೀಟಪೀಡನೆಯುಂಟುಮಾಡು

ತ್ತದೆ, ಪಂಚಮಿಯು ಏಳಿಗೆಯುಂಟುಮಾಡುತ್ತದೆ, ಷಷ್ಠಿಯು ಕಲಹಕಾರಿ (ಉಂಬಳಿ ಗಳಿಸಿಕೊಡುತ್ತದೆ), ಸಪ್ತಮಿಯು ಬಿಡುಗಡೆ, ಆನಂದಕಾರಿ: ಅಷ್ಟಮಿಯು ಹೋರಿಗಳಿಗೆ ವಿನಾಶಕಾರಿ, ನವಮಿಯು ಫಸಲುನಾಶಕಾರಿ, ದಶಮಿಯು ಏಳಿಗೆ(ಉನ್ನತಿ)ಕಾರಿ, ಏಕಾದಶಿಯು ಧನಧಾನ್ಯಾಭಿವೃದ್ಧಿ ಹಾಗೂ ಅಭಿಲಾಷೆಗಳ ಪೂರೈಕೆಗೆ ಸಹಕಾರಿ, ದ್ವಾದಶಿಯು ಬೇಸಾಯಗಾರನ ಜೀವಕ್ಕೆ ಹಾನಿಕಾರಿ, ತ್ರಯೋದಶಿಯು ಸರ್ವತೋಮುಖ ಯಶಸ್ಸುಗಳಿಸಿಕೊಡುತ್ತದೆ, ಚತುರ್ದಶಿಯು ಒಡೆಯನಿಗೆ ಮರಣಕಾರಿ ಹಾಗೂ ಪಂಚದಶಿ(ಹದಿನೈದನೆಯದಿನ)ಯು ಬರಡುಕಾರಿಯಾಗಿರುತ್ತದೆ (ಶ್ಲೋ. 244–247).

ಅಮಾವಾಸ್ಯೆ, ಅಷ್ಟಮಿ, ಷಷ್ಠಿ, ಹಾಗೂ ರಿಕ್ತ (ಚೌತಿ, ನವಮಿ ಮತ್ತು ಚತುರ್ದಶಿ) ತಿಥಿಗಳನ್ನೂ ಸಹ ಈ ದಿಸೆಯಲ್ಲಿ ಕೈಬಿಡಬೇಕು. ಭಾನುವಾರ ಇಲ್ಲವೇ ಮಂಗಳವಾರ ಬೇಸಾಯಪ್ರಾರಂಭಿಸಿದುದಾದರೆ, ಸಂಪತ್ ನಷ್ಟವುಂಟಾಗುತ್ತದೆ (ಶ್ಲೋ. 248).

ರೋಹಿಣಿ, ಶ್ರವಣ, ಪುಷ್ಯ, ಮಘಾ, ಹಸ್ತ, ಉತ್ತರೆಗಳು, ಅಶ್ವಿನಿ, ಸ್ವಾತಿ, ರೇವತಿ, ಮೂಲ, ಪುನರ್ವಸು, ಮತ್ತು ಮೃಗಶಿರ ನಕ್ಷತ್ರಗಳಲ್ಲಿ ಸೋಮವಾರ, ಗುರುವಾರ, ಶುಕ್ರವಾರ ಮತ್ತು ಶನಿವಾರಗಳಲ್ಲಿ ಸೂರ್ಯನು ಕನ್ಯಾ, ವೃಷಭ, ಮೀನ ಮತ್ತು ಮಿಥುನರಾಶಿ ಚಕ್ರಗಳನ್ನು ಪ್ರವೇಶಿಸಿದಾಗ ಬೇಸಾಯಕಾರ್ಯಾರಂಭ ಮಾಡಿದರೆ ಮಂಗಳಕರವೆಂದು ಪರಿಗಣಿಸಲಾಗಿದೆ (ಶ್ಲೋ. 249-250).

ಒಳ್ಳೆಯ ಉಡಿಗೆತೊಟ್ಟು ಬೇಸಾಯಗಾರನು ಜಮೀನಿನ ಈಶಾನ್ಯ ಮೂಲೆಯಲ್ಲಿ ಕ್ಷೇತ್ರಪಾಲ(ದಿಕ್ಪಾಲಕ)ರನ್ನು ಆರಾಧಿಸಿ, ನೇಗಿಲಿಗೆ ಪುಷ್ಪಹಾರ ಸಮರ್ಪಿಸಿ, ನೇಗಿಲುಗುಳದ ತುದಿಯನ್ನು ಮೊಸರು, ತುಪ್ಪ ಮತ್ತು ಜೇನುತುಪ್ಪಗಳಿಂದ ಸವರಬೇಕು. ಆತ ಹೊಚ್ಚಹೊಸ ನೇಗಿಲಿಂದ ಉಳುಮೆ ಪ್ರಾರಂಭಿಸುವುದರಲ್ಲಿ ಬುದ್ಧಿವಂತನಾಗಿರಬೇಕು (ಶ್ಲೋ. 251–252).

ಬೀಜಬಿತ್ತನೆಯನ್ನು ಹಸ್ತ, ಅಶ್ವಿನಿ, ಪುಷ್ಯ, ಮೃಗಶಿರ, ರೋಹಿಣಿ, ಧನಿಷ್ಠ, ಶ್ರವಣ, ಶತಭಿಷ, ಸ್ವಾತಿ, ಕೃತಿಕ ಮತ್ತು ಉತ್ತರೆಗಳಲ್ಲಿ ಹಾಗೂ ಭಾನುವಾರ, ಸೋಮವಾರ, ಮಂಗಳವಾರ, ಗುರುವಾರ ಮತ್ತು ಶುಕ್ರವಾರಗಳಲ್ಲಿ ಸೂರ್ಯನು ಮಿಥುನ, ಕನ್ಯಾ, ವೃಷಭ ಇಲ್ಲವೇ ಮೀನರಾಶಿ ಪ್ರವೇಶಿಸುವ ಕಾಲಗಳಲ್ಲಿ ಮಾಡಬೇಕೆಂದು ಶಿಫಾರಸ್ಸು ಮಾಡಲಾಗಿದೆ (ಶ್ಲೋ. 253–254).

ರಾಜಮಾರ್ತಾಂಡದಿಂದ ಆಯ್ದ ಭಾಗಗಳು

ಈ ಮುಂದೆ ತಿಳಿಸುವ ನಕ್ಷತ್ರಗಳು ಮತ್ತು ವಾರದ ದಿನಗಳು ಬಿತ್ತನೆ ಹಾಗೂ ಕೊಯ್ಲಿಗೆ ಶುಭವಾದುವು. ರೋಹಿಣಿ, ಶ್ರವಣ, ಉತ್ತರೆಗಳು ಪುನರ್ವಸು, ಮಘಾ, ರೇವತಿ, ಪುಷ್ಯ, ಅಶ್ವಿನಿ, ಮೃಗಶಿರ, ಶತಭಿಷ, ಸ್ವಾತಿ ಮತ್ತು ವಿಶಾಖಗಳು; ಭಾನುವಾರ, ಸೋಮವಾರ, ಬುಧವಾರ, ಗುರುವಾರ ಮತ್ತು ಶುಕ್ರವಾರಗಳು ಹಾಗೂ ಶನಿಗ್ರಹ ಹುಟ್ಟುವಾಗಿನ ಕಾಲ ಇವು ಒಳ್ಳೆಯವು (ಶ್ಲೋ. 255).

ದೇವಲನಿಂದ ಆಯ್ದ ಭಾಗಗಳು

ಭಾನುವಾರ, ಸೋಮವಾರ, ಗುರುವಾರ ಮತ್ತು ಶುಕ್ರವಾರಗಳು ಕಲ್ಯಾಣ, ಏಳಿಗೆ ಹಾಗೂ ಶುಭಕಾರಕತೆಗೆ ಸಹಕಾರಿಗಳು; ಮಂಗಳವಾರ, ಬುಧವಾರ ಮತ್ತ ಶನಿವಾರಗಳು ನಿರರ್ಥಕವಾದುವು(ಶ್ಲೋ. 256).

ಮೇಷ ಮತ್ತು ಕರ್ಕಾಟಕ ರಾಶಿಗಳು ಸ್ವಭಾವತಃ ಎಲ್ಲ ದನಕರುಗಳಿಗೂ ಹಾನಿಕರವಾದವು. ಸೂರ್ಯನು ಮಿಥುನರಾಶಿಚಕ್ರ ಪ್ರವೇಶಿಸುವಾಗ ಬೇಸಾಯ ಪ್ರಾರಂಭಿಸುವುದು ಅಷ್ಟೇನೂ ಸಂತೋಷದಾಯಕವಲ್ಲ ಹಾಗೂ ತುಲಾರಾಶಿ ಪ್ರವೇಶಿಸಿದಾಗಲಂತೂ ಬಿತ್ತನೆಗಳು ಮೊಳೆತು ಕುಡಿಯೊಡೆಯುವುದಿಲ್ಲ (ಶ್ಲೋ. 257).

ಸಿಂಹರಾಶಿಯು ಬೆಳೆನಾಶಕಾರಿ, ಧನುವು ರಾಜನಿಗೆ ವಿಪತ್ಕಾರಿ, ಮಕರ ಹಾಗೂ ಕುಂಭಗಳು ನಿಷ್ಫಲಕಾರಿಗಳಾಗಿದ್ದರೂ ಅಪಾಯವನ್ನಲ್ಲದೆ ಬೇರೇನನ್ನೂ ಹೇಳವು (ಶ್ಲೋ. 258).

ಮೇಷ, ಕನ್ಯಾ, ಮಿಥುನ ಹಾಗೂ ಮೀನರಾಶಿಗಳಲ್ಲಿ ಹೇರಳವಾಗಿ ಬೆಳೆಯಾಗುತ್ತದೆ. ಚಂದ್ರತಾರೆಗಳೂ ಸಹ ಶ್ಲಾಘ್ಯವಾಗಿರುತ್ತವೆ (ಉತ್ತಮವಾಗಿರುತ್ತವೆ). ಬೇಸಾಯಗಾರನು ಮಿಂದು ಶುಭ್ರ ಶ್ವೇತವಸ್ತ್ರಧರಿಸಿ, ಹೂವುಗಂಧಗಳಿಂದ ಭೂದೇವಿಯನ್ನು ಇತರ ಗ್ರಹಗಳು ಮತ್ತು ಪ್ರಜಾಪತಿ(ಬ್ರಹ್ಮ)ಯೊಂದಿಗೆ ಸರಿಯಾದ ರೀತಿಯಲ್ಲಿ ಪೂಜಿಸಬೇಕು. ಬಳಿಕ ಅಗ್ನಿಪ್ರದಕ್ಷಿಣೆಬಂದು, ಧಾರಾಳವಾಗಿ ಕಾಣಿಕೆಯಿತ್ತು, ಅನಂತರ ನೇಗಿಲಿಗೆ ಕಪ್ಪು ಎತ್ತುಗಳನ್ನು ಹೂಡಬೇಕು. ಅವುಗಳ ಕಟಬಾಯಿ ಬಳಿ ತುಪ್ಪ ಇಲ್ಲವೇ ಬೆಣ್ಣೆಯನ್ನು ಸವರಿ, ನೇಗಿಲಗುಳದ ತುದಿಯನ್ನು ಬಂಗಾರದಿಂದ ಮುಟ್ಟಬೇಕು. ಆ ಬಳಿಕ, ಉತ್ತರಾಭಿಮುಖನಾಗಿ ನಿಂದು ಕ್ಷೀರ ತರ್ಪಣ ಕೊಡಬೇಕು. ಆಗ ಪವಿತ್ರನೂ ಪಾತ್ರನೂ ಆಗಿ ಉಳುಮೆಕಾರ್ಯವನ್ನು ಪ್ರಾರಂಭಿಸಬೇಕು (ಶ್ಲೋ. 259-a-b).

ಅಧ್ಯಾಯ 10

ಬೇಸಾಯದಲ್ಲಿ ಜಾನುವಾರುಗಳು

ಪಶುಸಂಗೋಪನೆಯು ಸಾಕುಪ್ರಾಣಿಗಳು ಇಲ್ಲವೇ ಜಾನುವಾರು ಉತ್ಪಾದನೆಯಾಗಿದ್ದು ತಳಿಅಭಿವೃದ್ಧಿ, ಮೇವುಣಿಕೆ ಮತ್ತು ನಿರ್ವಹಣೆಗಳ ಎಲ್ಲ ಮಜಲುಗಳನ್ನೂ ಒಳಗೊಂಡಿರುತ್ತದೆ. ಎ.ಎಲ್. ಆ್ಯಂಡರ್‌ಸನ್ ತನ್ನ ಕೃತಿ 'ಇಂಟ್ರೊಡೊಕ್ಷರಿ ಅನಿಮಲ್ ಹಸ್ಬೆಂಡರಿ' ಯಲ್ಲಿ 'ಪ್ರಾಣಿ ಸಾಕಣೆಯು ನಾಗರಿಕತೆಯಷ್ಟೇ ಹಳೆಯದು, ಏಕೆಂದರೆ ನಾವು ಇಂದು ನೋಡುವ ಅತಿಸಾಮಾನ್ಯ ಸಾಕುಪ್ರಾಣಿಗಳನ್ನು ಲಿಖಿತ ಚರಿತ್ರೆಯ ಪ್ರಾರಂಭಕ್ಕೆ ಮುನ್ನವೇ ಪಳಗಿಸಲಾಗಿತ್ತು. ಪುರಾತನ ಶಿಲಾಯುಗದ ಮಾನವ ತನ್ನ ಆಹಾರ ಮತ್ತು ಉಡಿಗೆತೊಡಿಗೆಗಳಿಗಾಗಿ ಪ್ರಾಣಿಗಳ ಬೇಟೆಯಾಡುತ್ತಿದ್ದ; ಆತನ ಉತ್ತರಾಧಿಕಾರಿ ಮುಂದಿನ ನೂತನ ಶಿಲಾಯುಗದ ಮಾನವನು ಅವುಗಳನ್ನು ಪಳಗಿಸಿ ತನ್ನ ಅಂಕೆಯಲ್ಲಿಟ್ಟುಕೊಂಡ. ನೂತನ ಇಲ್ಲವೇ ನವೀನ ಶಿಲಾಯುಗದಲ್ಲಿ ಮಾನವರು ಮೊದಲಬಾರಿಗೆ ಬೇಸಾಯವನ್ನು ಪ್ರಾರಂಭಿಸಿದರು. ಇದರಲ್ಲಿ ಸಾಕುಪ್ರಾಣಿಗಳ ಉತ್ಪಾದನೆಯೂ ಒಂದಾಗಿದ್ದಿತು" ಎಂದಿದ್ದಾನೆ.

ಕೃಷಿಶಾಸ್ತ್ರ ಹಾಗೂ ಆಚರಣೆಗಳಲ್ಲಿ ದನಕರುಗಳು ಎಷ್ಟು ನಿಕಟವಾಗಿ ಹೊಂದಿಕೊಂಡಿವೆಯೆಂದರೆ, ಪ್ರಾಚೀನ ಶಾಸ್ತ್ರದಲ್ಲಿ ಇವೆರಡನ್ನೂ ಜೊತೆಜೊತೆಯಲ್ಲಿಯೇ ವಿವರಿಸಲಾಗಿದೆ. ಇದು ಹಸುಗಳು ಮತ್ತು ಹೋರಿಗಳ ವಿಷಯದಲ್ಲಿ ಇನ್ನೂ ಅಧಿಕವಾಗಿರುತ್ತದೆ. ಕಾಣಿಕೆ ಹಾಗೂ ಗೋಸ್ತುತಿಗಳನ್ನು ಕುರಿತ ಶ್ಲೋಕಗಳು ಮತ್ತು ಸಾಲುಗಳಲ್ಲಿ ಗೋವುಗಳನ್ನು ಎಷ್ಟು ಗೌರವಾದರಗಳಿಂದ ಭಾವಿಸಲಾಗುತ್ತಿತ್ತೆಂಬುದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಈಗಿನ ಕಾಲದಲ್ಲೂ ಸಹ, ಎಂದರೆ ಇಪ್ಪತ್ತನೆಯ ಶತಮಾನದಲ್ಲಿಯೂ ಸಹ ಹಿಂದುಗಳು ಅವುಗಳನ್ನು ಪರಿಗಣಿಸಿ, ಪಾಲಿಸಿ 'ತಾಯಿ' ಎಂದು ಸಂಬೋಧಿಸುತ್ತಾರೆ. ಹಿಂದೂಗಳ ಯಾವುದೇ ಹಬ್ಬದಲ್ಲಿಯೂ ಗೋವು ಮತ್ತು ಸಗಣಿಯನ್ನು ಒಳಗೊಂಡಂತೆ ಗೋವುತ್ಪನ್ನಗಳು ಪವಿತ್ರ ವಸ್ತುಗಳಾಗಿದ್ದು ಧಾರ್ಮಿಕ ಆಚರಣೆಗಳಲ್ಲಿ ಅವಶ್ಯ ಅಂಶಗಳಾಗಿವೆ.

ಭಾರತದಲ್ಲಿ ದನಗಳ ತಳಿಗಳು ಬಹಳಷ್ಟು ಕುಗ್ಗಿವೆ. ಆದರೆ ಮಹಾಭಾರತದಲ್ಲಿ ಹೇಳಿರುವಂತೆ ಇದು ವಶಿಷ್ಠರ ಹೆಸರಾಂತ 'ಕಾಮಧೇನು'(ಕೇಳಿದ್ದನ್ನು, ಇಚ್ಛಿಸಿದ್ದನ್ನು ಕೊಡುವಂಥದ್ದು) ಹಸುವಿದ್ದ ಭೂಮಿ. ದನಗಳ–ಕುಗ್ಗುವಿಕೆ(ಇಳಿಮುಖತೆಗೆ)ಗೆ ಗೋಮಾಳಗಳ ಕೊರತೆ, ಕೆಳಮಟ್ಟದ (ಕನಿಷ್ಠದರ್ಜೆಯ) ಮತ್ತು ಕಡಮೆ ಪ್ರಮಾಣದ ಮೇವು, ಮಾನವರೊಡನೆ ಆಹಾರಕ್ಕಾಗಿ ಸ್ಪರ್ಧೆ, ಬೇಸಾಯಗಾರರ ಅಜ್ಞಾನ(ಅರಿಯದ)

ಮತ್ತಿತರ ಅಂಶಗಳನ್ನು ಕಾರಣವಾಗಿ ಕೊಡಬಹುದು. ಹೇಗೊ ಏನೋ ಪ್ರಾಚೀನ ಸಂಸ್ಕೃತಿಯೊಂದಿಗಿನ ಸಂಪರ್ಕ ತಪ್ಪಿ, ಇಳಿಮುಖತೆ ಉಂಟಾಯಿತು.

ಪ್ರಾಚೀನ ಭಾರತದಲ್ಲಿ, ದನಗಳ ಆರೈಕೆಯು ವೃತದ ಅಂಶಗಳಲ್ಲಿ ಒಂದಾಗಿತ್ತು. ಗೋಪಾಲನೆಯನ್ನು ಚೆನ್ನಾಗಿ ಅರಿತಿದ್ದ ಒಂದು ವರ್ಗದ ಜನತೆಗೆ ಆ ಕಾರ್ಯವನ್ನು ವಹಿಸಲಾಗಿತ್ತು. 'ಪ್ರಜಾಪತಿ (ಬ್ರಹ್ಮ)ಯು ದನಗಳನ್ನು ಸೃಷ್ಟಿಸಿದಾಗ, ಅದನ್ನು ವೈಶ್ಯರಿಗೆ ದಯಪಾಲಿಸಿದನು. ವೈಶ್ಯನಾದವನು ಅದನ್ನು ಪಾಲಿಸಲು(ಇಟ್ಟುಕೊಳ್ಳಲು) ಸಮ್ಮತಿಸಿದುದಾದರೆ, ಇನ್ಯಾವುದೇ ಜಾತಿಯವರೂ ಅದನ್ನು ಪಾಲಿಸುವಂತಿಲ್ಲ' (ಮನು ಸಂಹಿತ IX, 326–327). ವೈಶ್ಯರು ಮೂಲತಃ ಕೃಷಿಕರಾಗಿದ್ದು, ಜನಾಂಗದಲ್ಲಿ ಶ್ರೀಮಂತ ಪ್ರತಿಷ್ಠಿತ ವರ್ಗವಾಗಿದ್ದು ಶ್ರೇಷ್ಠ(ಉತ್ಕೃಷ್ಟ)ದನಗಳ ತಳಿಯೆಬ್ಬಿಸುತ್ತಿದ್ದರು. ಭಾರತದಲ್ಲಿ ಪರಿಣಿತರಾದ, ಒಳ್ಳೆಯ ಅನುಭವಶಾಲಿಗಳಾದ ದನಗಳ ತಳಿಯೆಬ್ಬಿಸುವವರಿದ್ದುದು ನಿಶ್ಚಿತ. ಇವರು ಶ್ರೇಷ್ಠ ದರ್ಜೆಯ ದೊಡ್ಡ ದೊಡ್ಡ ದನಗಳ ಹಿಂಡನ್ನು ನಿರ್ಮಿಸುತ್ತಿದ್ದರು. ಅವುಗಳಲ್ಲಿ ಕೆಲವು ಈಗಲೂ ಭಾರತದ ಕೆಲವು ಭಾಗಗಳಲ್ಲಿ, ಎಂದರೆ ಉದಾಹರಣೆಗೆ ಪಂಜಾಬ್, ಬಿಹಾರ, ಗುಜರಾತ್ ಮತ್ತು ಕಾಥೇವಾಡಗಳಲ್ಲಿ ಕಂಡುಬರುತ್ತವೆ.

ಕೃಷಿ (ಬೇಸಾಯ), ಪಶುಪಾಲನೆ, ವ್ಯಾಪಾರ ಮತ್ತು ವಾಣಿಜ್ಯ ಇವು ಐಶ್ವರ್ಯ ಗಳಿಕೆಯ ನಾಲ್ಕು ಸೂಕ್ತ ವಾರ್ತ ಅಥವಾ ಮಾರ್ಗಗಳಾಗಿವೆ. ಪಶುಪಾಲನೆಯನ್ನು ಬೇಸಾಯದಂತೆಯೇ ಒಂದು ಮುಖ್ಯ ಹಾಗೂ ಸಾರ್ವತ್ರಿಕ ಕಸುಬೆಂದು ಪುರಾಣಕಾವ್ಯಗಳಲ್ಲಿ ಪರಿಗಣಿಸಲಾಗಿದೆ. (ರಾಮಾಯಣ II. 67.12: 100.45; ಮಹಾಭಾರತ II. 5.79; 13.2; XII. 88. 28). ಭಾಗ I (ಬೆಳೆಪಾಲನೆ)ರಲ್ಲಿ ಬೇಸಾಯ ಮತ್ತು ಪಶುಪಾಲನೆಗಳು ಜೊತೆ ಜೊತೆಗೆ ಹೇಗೆ ಬೆಳೆದುಬಂದುವೆಂದು ಈಗಾಗಲೇ ತಿಳಿಸಲಾಗಿದೆ.

ಪಶುಪಾಲನೆಯು ವೈಶ್ಯವೃತ್ತಿ ಮಾತ್ರವೆಂಬ ಮನು ನಿರ್ದೇಶನಕ್ಕೆ ಪ್ರತಿಯಾಗಿ, ಜಾನುವಾರು ಮತ್ತು ಪಶುಸಂಗೋಪನೆಯು ಒಂದು ವಿಶಿಷ್ಟ ಗುಂಪು ಇಲ್ಲವೇ ವರ್ಗದ ಜನತೆಯ ವೃತ್ತಿಯಲ್ಲವೆಂಬುದಕ್ಕೆ ಲಭ್ಯಸಾಹಿತ್ಯದಲ್ಲಿ ಆಧಾರಗಳಿವೆ. ರಾಜರು ಸ್ವತಃ ಮತ್ತು ಕ್ಷತ್ರಿಯರೂ ಸಹ ದನಕರುಗಳನ್ನು ಹೊಂದಿದ್ದು ಪಾಲಿಸುತ್ತಿದ್ದರು ಹಾಗೂ ಗೋಸಂಪತ್ತು ಅವರ ಕೌಟುಂಬಿಕ ಖರ್ಚುವೆಚ್ಚಗಳ ಹಣಕಾಸಿಗೆ ಮುಖ್ಯ ಮೂಲವಾಗಿದ್ದಿತು. ಇದಕ್ಕೆ ಕೋಸಲ ಚಕ್ರಾಧಿಪತಿ (ರಾಮಾಯಣ II. 100.50

ಅಥವಾ ಕಾಶಿಯ ರಾಜಕುಮಾರ(ಜಾತಕ I. 240)ರು ಪ್ರಮುಖ ಉದಾಹರಣೆಗಳಾಗಿದ್ದಾರೆ.

ಕುದುರೆಗಳು, ಆನೆಗಳು, ಹಸುಗಳು, ಕುರಿಗಳು ಮತ್ತು ಆಡುಗಳು ಜೊತೆಗೆ, ಎಮ್ಮೆಗಳು, ಒಂಟೆಗಳು, ಕತ್ತೆಗಳು, ಹೇಸರಗತ್ತೆಗಳು, ಹಂದಿ ಮತ್ತು ನಾಯಿಗಳನ್ನು ವಿವಿಧೋದ್ದೇಶಗಳಿಗಾಗಿ ಪಾಲಿಸುತ್ತಿದ್ದರು (ಅರ್ಥಶಾಸ್ತ್ರ II. 29). ಧೂಮಕಾರಿಜಾತಕ (III. 401)ದಲ್ಲಿ ಸದ್ವಂಶಜಾತ ಬ್ರಾಹ್ಮಣನು ಆಡುಪಾಲಕನು. 'ರಾಜಗೃಹದ ಸಮೀಪದ ಗೃಧ್ರಕೂಟ ಪರ್ವತದ ಇಳಿಜಾರುಗಳಲ್ಲಿದ್ದ ಬ್ರಾಹ್ಮಣಕೊಪ್ಪಲಿನ (ಹಳ್ಳಿಯ) ಎಲ್ಲಾ ಎಪ್ಪತ್ತು ಕುಟುಂಬಗಳವರೂ ದನಗಳ ತಳಿಯೆಬ್ಬಿಸುವಿಕೆಯನ್ನು ತಮ್ಮ ಜೀವನದ ಮುಖ್ಯವೃತ್ತಿಯಾಗಿ ಕೈಗೊಂಡಿದ್ದರು(ಬೀಲರ ಚೈನೀಸ್ ಧರ್ಮಪದ)'. ಜಾತಕ (I. 388)ರಲ್ಲಿ ಉಲ್ಲೇಖಿತರಾಗಿರುವ ಶೆಟ್ಟರು ಅಥವಾ ವ್ಯಾಪಾರಿ (ವರದ)ಗಳು ಸಹ ದನಕರುಗಳನ್ನಿಟ್ಟಿದ್ದವರೆ.ದನಗಳ ಪಾಲನೆ ಹಾಗೂ ದನಗಳ ವ್ಯಾಪಾರದ ಸಾರ್ವತ್ರಿಕತೆಯು, ಹಸುಗಳನ್ನು ಒಂದು ಮೌಲ್ಯವಾಗಿ ಸಾಮಾನ್ಯವಾಗಿ ಬಳಸಿ, ವಿನಿಮಯ ಹಾಗೂ ಹಣದ ವ್ಯವಹಾರಪ್ರಾರಂಭ ಘಟ್ಟಗಳ ನಡುವಣ ಪರಿವರ್ತನಾವಧಿ (ಮಧ್ಯಕಾಲ)ಯಲ್ಲಿ ವಿನಿಮಯಮಾಧ್ಯಮವಾಗಿ ಬಳಸಿರುವುದರಿಂದ ಸ್ಪಷ್ಟವಾಗುತ್ತದೆ.

ಪಶುಸಂಗೋಪನೆಯು ಬಹುಕಾಲ ಜನತೆಯ ಬದುಕಿನ ಸಂಪೂರ್ಣ ಇಲ್ಲವೇ ಭಾಗಶಃ ವೃತ್ತಿಯಾಗಿದ್ದಿತು. ಇವರಲ್ಲಿ ಪಶುಸಂಗೋಪನೆಯನ್ನೇ ಪೂರ್ಣವಾಗಿ ಅವಲಂಬಿಸಿದ್ದ ವರ್ಗದ ಜನರ ಆರ್ಥಿಕ ಸ್ಥಿತಿಗತಿಗಳು ಮುಖ್ಯವಾಗಿ ಬೇಸಾಯವನ್ನೇ ಅವಲಂಬಿಸಿದ್ದವು. ಇವರಲ್ಲಿ ಕೆಲವರು ನಿಜವಾಗಿಯೂ ಶ್ರೀಮಂತರಿದ್ದು ದೊಡ್ಡ ದೊಡ್ಡ ಹಿಡುವಳಿದಾರರಾಗಿದ್ದರು. ಇದು ಪದಕದಲ್ಲಿಯ ಸೆಟ್ಟಿಯ ಮಗ ಧನಿಯನ ಉದ್ಧಾಹರಣೆಯಿಂದ ಚೆನ್ನಾಗಿ ವ್ಯಕ್ತವಾಗುತ್ತದೆ (ಪರಮಾತ್ತಜೋತಿಕನ ಸುತ್ತನಿಪಟದಲ್ಲಿ ಉಲ್ಲೇಖಿತವಾಗಿರುವಂತೆ). ಧನಿಯನು 30,000 ದನಗಳನ್ನು ಹೊಂದಿದ್ದ; ಇವುಗಳಲ್ಲಿ 27000 ದನಗಳು ಹೈನದ ದನಗಳಾಗಿದ್ದುವು. ಇವಲ್ಲದೆ, ಅವು ಮೇಯಲು ಸಾಕಷ್ಟು ಮೇವು ತುಂಬಿದ ಹುಲ್ಲುಗಾವಲನ್ನು ಸಹ ಪಡೆದಿದ್ದನು. ಗಣಪತಿ ಮೆಂಡಕನು 1250 ಗೋವಳರು ನಿರ್ವಹಿಸುತ್ತಿದ್ದ ದೊಡ್ಡ ಫಾರ್ಮನ್ನು ಹೊಂದಿದ್ದನು (ಮಹಿಯಗ್ಗ 34–19).

ಪ್ರತಿ ಹಳ್ಳಿಗನೂ ಸಹ ಭಾರವೆಳೆಯಲು ಇಲ್ಲವೇ ತನ್ನ ಕೌಟುಂಬಿಕ ಅವಶ್ಯಕತೆಗಳ ಪೂರೈಕೆಗಾಗಿ ಕೆಲವು ಜಾನುವಾರುಗಳನ್ನು ಪಾಲಿಸುತ್ತಿದ್ದನು. ಹಳ್ಳಿಯವರೆಲ್ಲಾ ಸೇರಿ

ಒಟ್ಟಿಗೇ ಸಂಬಳ ಇಲ್ಲವೇ ಉತ್ಪನ್ನದಲ್ಲಿಯ ಪಾಲುಗಾರಿಕೆಯ ಆಧಾರದ ಮೇಲೆ ಕುರುಬರನ್ನು ನೇಮಿಸಿಕೊಳ್ಳುತ್ತಿದ್ದರು. ಇವರು ಮುಂಜಾನೆಯ ವೇಳೆ ಜಾನುವಾರುಗಳನ್ನು ಹುಲ್ಲುಗಾವಲಿಗೆ ಹೊಡೆದುಕೊಂಡುಹೋಗಿ, ಸಂಜೆಗೆ ಮರಳಿ ತರುವ ಕಾರ್ಯ ನಿರ್ವಹಿಸುತ್ತಿದ್ದರು(ಅಂಗುತ್ತರನಿಕಾಯ I.205; ಋಗ್ವೇದ X. 10. ef).

ದನಗಳ ಹಿಂಡನ್ನು ಕ್ರೂರಪ್ರಾಣಿಗಳು ಮತ್ತು ದನಗಳ್ಳರ ವಿಪರೀತ ತೊಂದರೆ ಹಾಗೂ ನಿರಂತರ ಬೆದರಿಕೆಗಳಿದ್ದಾಗಲೂ ಕಾಡಿಗೆ ಹೊಡೆದುಕೊಂಡು ಹೋಗಲಾಗುತ್ತಿತ್ತು, ಏಕೆಂದರೆ ಹಳ್ಳಿಯು ಸಾಮಾನ್ಯವಾಗಿ ದೊಡ್ಡ ವ್ಯವಸಾಯಯೋಗ್ಯ ಜಮೀನಿನಿಂದ ಆವರಿಸಲ್ಪಟ್ಟಿರುತ್ತಿತ್ತು. ಅದರಾಚೆಗೆ ಹುಲ್ಲುಗಾವಲು ಭೂಮಿಯಿದ್ದು, ಅಲ್ಲಲ್ಲಿ ಕ್ರೂರ ಮೃಗಗಳಿಂದ ಕೂಡಿದ ದಟ್ಟಕಾಡುಪ್ರದೇಶವಿರುತ್ತಿತ್ತು. ಮಂದೆಯನ್ನು ಬೆಳೆಜಮೀನಿನ ಬಳಿ ಮೇಯಬಿಟ್ಟರೆ ಬೆಳೆಗಳಿಗೆ ಹಾನಿಯಾಗುತ್ತಿತ್ತು. ಆದಕಾರಣ, ಮೇಯಲು ದೂರದ ಅಡವಿಗೆ ಹೊಡೆದುಕೊಂಡು ಹೋಗಲಾಗುತ್ತಿತ್ತು. ಆದರೆ ಬೆಳೆವಲಯದಾಚೆ ವಿಶಾಲ ಹುಲ್ಲುಗಾವಲಿದ್ದಾಗ ಇದರ ಅವಶ್ಯಕತೆ ಇರುತ್ತಿರಲಿಲ್ಲ.

ಮಂದೆ ಕಾಯುವವರ ಜವಾಬ್ದಾರಿ ಹಾಗೂ ಕೆಲಸದ ಕಾಠಿಣ್ಯತೆಗಳೆಷ್ಟಿದ್ದವೆಂಬುದನ್ನು ಎ. ಎನ್. ಬೋಸ್‌ರ 'ಸೋಷಿಯಲ್ ಅಂಡ್ ರೂರಲ್ ಎಕಾನಮಿ ಆಫ್ ನಾರ್ದನ್ ಇಂಡಿಯ, ಸಂ. I ರಿಂದ ಆಯ್ದುಕೊಟ್ಟಿರುವ ಮುಂದಿನ ಭಾಗಗಳಿಂದ ಚೆನ್ನಾಗಿ ತಿಳಿದುಕೊಳ್ಳಬಹುದಾಗಿದೆ.

'ಈ ಸಂಪ್ರದಾಯವು ಮಂದೆಕಾಯುವವರದು ಎಂತಹ ಗುರುತರ ಹೊಣೆಗಾರಿಕೆ ಹಾಗೂ ಕೃತಜ್ಞತೆಗಳಿಲ್ಲದ ಕೆಲಸವೆಂಬುದನ್ನು ತಿಳಿಸುತ್ತವೆ. ದನಗಳ ರಕ್ಷಣೆಯಲ್ಲಿ ಸಿಂಹ ಮತ್ತು ಹುಲಿಗಳ ಸೂರೆ (ಭಕ್ಷಣೆ) (ಜಾತಕ I, 388, III. 149, 479; Dn. XXIV. 2.5; ಅರ್ಥಶಾಸ್ತ್ರ II. 29; ಮಹಾಭಾರತ VII: 1.24, 95.23)ಯ ಬೆದರಿಕೆಯೊಂದೇ ಇರಲಿಲ್ಲ; ಜೊತೆಗೆ ಒಂದೇ ಸಮನೆ ಪ್ರವೇಶಿಸುತ್ತಿದ್ದ ದನಗಳ್ಳರೊಡನೆ ಸೆಣಸುವುದು ಇನ್ನೂ ಹೆಚ್ಚು ತೊಂದರೆದಾಯಕವಾಗಿದ್ದಿತು. ದನಗಳನ್ನು ಕದಿಯುವಿಕೆಯು ಸಣ್ಣಪುಟ್ಟ ಕಳ್ಳನಿಂದ(ಜಾತಕ I. 140, IV. 251, VI. 335) ಹಿಡಿದು ಜಂಬೂದ್ವೀಪದ ಸಾರ್ವಭೌಮ ಚಕ್ರವರ್ತಿಯವರೆಗೆ ಒಂದು ಸಾರ್ವತ್ರಿಕ ಅಪರಾಧವಾಗಿದ್ದಿತು (ಮಹಾಭಾರತ III) (cf ಮಹಾಭಾರತ I, 215; Ep. In. VI. 16. B; VII. 4) ಮತ್ತು ಅದರ ಮಹತ್ವ ಅಷ್ಟರಮಟ್ಟಿಗಿದ್ದುದರಿಂದ ಅರ್ಥಶಾಸ್ತ್ರ ಕೃತಿಕಾರನು ದನಗಳ್ಳರು ಮತ್ತು ಅವರ ಸಹಕಾರಿಗಳನ್ನು ಕೊಲ್ಲಬೇಕೆಂದು ವಿಧಿಸುವಮಟ್ಟಿಗೆ ಕೆರಳಿದ್ದಾನೆ (II. 29).

ದನಗಳನ್ನು ಕ್ರೂರಿಗಳು ಮತ್ತು ಕಳ್ಳರಿಂದ ಸಂರಕ್ಷಿಸುವುದಲ್ಲದೆ, ಗೋಪಾಲಕರಿಗೆ ಇತರ ಜವಾಬ್ದಾರಿಯೂ ಇದ್ದವು. ಅವುಗಳನ್ನು ಬುದ್ಧಸುತ್ತಗಳಲ್ಲಿ ಗುಣಧರ್ಮಗಳಾಗಿ ವಿಂಗಡಿಸಲಾಗಿದೆ. ಇವುಗಳನ್ನು ಗೋಪಾಲನೆ ಹಾಗೂ ಗೋಮಂದೆಯ ಹೆಚ್ಚಳಗಳಲ್ಲಿ ಯಶಸ್ಸಾಧನೆಯ ದೃಷ್ಟಿಯಿಂದ ಗಣಿಸಲಾಗಿದೆ. ದಕ್ಷನಾದವನಿಗೆ (i) ಕಾರ್ಯಸ್ವರೂಪದ ತಿಳಿವಳಿಕೆ (ರೂಪಣ್ಣು), (ii) ತನ್ನ ಜಾನುವಾರುಗಳನ್ನು ಸರಿಯಾಗಿ ಗುರುತಿಸುವ ದೃಷ್ಟಿ (ಲಕ್ಕಣಕುಸಾಲೊ), (iii) ಉಣ್ಣೆಗಳನ್ನು ತೆಗೆಯುವಿಕೆ (ಅಸಟಿಕಂಸಟೀಟ), (iv) ಹುಣ್ಣು(ಗಾಯಗಳನ್ನು)ಗಳನ್ನು ಪಟ್ಟಿಹಾಕಿ ಗುಣಪಡಿಸುವ (ವನಮ್ ಪಟಿಚ್ಛಾದೆತ್ವ), (v) ತಂಗುದೊಡ್ಡಿಗಳನ್ನು ಗ್ರಹಿಸುವ (ಧೂಮಮ್ ಕಟ್ಟ), (vi) ಕಾಲುಹೊಳೆಗಳು(ತಿತ್ತಮ್ ಜನತಿ) ಮತ್ತು (vii) ನೀರ್ಗುಡಿಸುವ ತಾಣಗಳು (ಪಿತಮ್ ಜನತಿ) ಮತ್ತು (viii) ಹಾದಿಗಳು (ವಿಥಿಮ್ ಜನತಿ), (ix) ಹುಲ್ಲುಗಾವಲುಗಳ ತಿಳಿವಳಿಕೆ(ಗೋಚಾರಕುಸಾಲೊ), (x) ಹಸಿದ ಹೊಟ್ಟೆಯಲ್ಲಿರುವಾಗ ಹಾಲುಕರೆಯದಿರುವುದು (ಸ್ವಸೇಸ ದೋಹಿ) ಮತ್ತು (xi) ಮಂದೆಯಲ್ಲಿಯ ಹಿರಿಯ ಮುಖಂಡ ಹೋರಿಗಳನ್ನು ವಿಶೇಷ ಆಸಕ್ತಿಯಿಂದ ರಕ್ಷಿಸಿ ಆರೈಕೆ ಮಾಡುವಿಕೆಗಳು ತಿಳಿದಿರಬೇಕು. (ತೆ ಉಸಭ ಗೋಪಿತರೊ ಗೋಪರಿನಾಯಕ ಅತಿರೇಕ ಪೂಜಾಯ ಪಿಜೇತ ಹೋತಿ, Mn. 33, An. V.350). ಅರ್ಥಶಾಸ್ತ್ರ ನಿಯಮದ ಪ್ರಕಾರ ಆತನಿಗೆ ದನಗಳ ರೋಗೋಪಚಾರ ಹಾಗೂ ಅವುಗಳನ್ನು ಕ್ಷೇಮವಾಗಿ (ಕಾಲುಹೊಳೆಗಳಲ್ಲಿ) ಕಡಹಾಯಿಸುವಿಕೆಗಳೂ ತಿಳಿದಿರಬೇಕು(II. 29). ತಿತ್ತಮ್ (ಕಡಹಾಯಿಸುವಿಕೆ)ಅನ್ನು ಕುರಿತ ತಿಳಿವಳಿಕೆಯನ್ನು ಮಜ್ಝಿಮ ನಿಕಾಯ (34)ದಲ್ಲಿ ಇನ್ನಷ್ಟು ವಿವರಿಸಲಾಗಿದೆ. ಅಲ್ಲಿ ಒಬ್ಬನು ತನ್ನ ಮಂದೆಯನ್ನು ಕಾಲುಹೊಳೆಯಿಲ್ಲದೆಡೆಯಲ್ಲಿ ಗಂಗಾನದಿಯನ್ನು ದಾಟಿಸುವಾಗ [ಜವುಗು (ಕೆಸರು) ಅಥವಾ ಕಡಿದಾದ ದಿಬ್ಬ, ಬಲವಾದ ಸೆಳೆತ ಅಥವಾ ಪ್ರಪಾತ ಇಲ್ಲವೇ ಸುಳಿ ಇದ್ದಿತೆಂದು ಭಾವಿಸೋಣ] ವಿಪತ್ತುಂಟು ಮಾಡಿದನು ಹಾಗೂ ಮತ್ತೊಬ್ಬನು ಕ್ಷೇಮವಾಗಿ ದಾಟಿಸಿದನು. ಇಲ್ಲಿಯೂ ಸಹ ಮಂದೆಯಲ್ಲಿಯ ಹಿರಿಯ ಮುಖಂಡಜೀವಕ್ಕೆ ಪ್ರಾಮುಖ್ಯತೆಯನ್ನು ಕೊಡಲಾಗಿದೆ.

ಅರ್ಥಶಾಸ್ತ್ರಕಾರನು ಉತ್ತಮ ಗೋಮಂದೆಯನ್ನು ನಿಯತ ಕೂಲಿಗೆ ಮೇಯಿಸಲು (ವೇತನೋಪಗ್ರಾಹಿಕಂ) ಬಿಡಬೇಕೆನ್ನುತ್ತಾನೆ. ಹಾಗಿಲ್ಲದೆ ಅವರು ಹಾಲುಬೆಣ್ಣೆಗಳಿಗಾಗಿಯೇ ಗೋಮಂದೆಯನ್ನು ಮೇಯಿಸಿದರೆ ಅವಶ್ಯಕ್ಕಿಂತಲೂ ಹೆಚ್ಚು ಹಾಲು ಕರೆದು ಅವುಗಳನ್ನು ಹಾಳುಮಾಡಬಹುದು. ಇದರ ಮುಂದಿದ ದರ್ಜೆಯ ಗೋಮಂದೆಯನ್ನು ಒಬ್ಬನು ಮೇಯಿಸುತ್ತ ಮಾಲಿಕನಿಗೆ ವರ್ಷಕ್ಕೆ 8 ವಾರಕ ಬೆಣ್ಣೆ ಕೊಡುವು

ದಕ್ಕೆ (ಕರಪ್ರತಿಕರ) ಒಪ್ಪಿಸಬೇಕು. ನಿರುಪಯುಕ್ತ ಹಾಗೂ ಪರಿತ್ಯಕ್ತ (ಭಗ್ಗೋತ್ಸೃಕಂ)ಮಂದೆಯನ್ನು ಪೈನೋತ್ಪನ್ನದ 1/10 ಭಾಗಪಾಲು ಕೊಡುವ ಒಪ್ಪಂದದ ಮೇಲೆ ಮೇಯಿಸಲು ಬಿಡಲಾಗುತ್ತದೆ (II. 29). ಈ ಸಂದರ್ಭದಲ್ಲಿ ನಾಗಸೇನನನ್ನು ಕುರಿತು ಸಹೋದರನೊಬ್ಬನು ಮಾಡಿರುವ ಹಾಸ್ಯದಲ್ಲಿ ವಾಸ್ತವಿಕತೆಯ ಲೇಪವಿರುವುದು ಸುವ್ಯಕ್ತ. ಆತ ತನ್ನ ವಿದ್ವತ್ ಕೃತಿಗಳನ್ನು ರಚಿಸುವ ಕಾರ್ಯದ ಫಲ ಇತರರ ಅನುಕೂಲಕ್ಕಾದುದು. ಗೋವಳರು ಗೋವುಗಳನ್ನು ಶ್ರಮವಹಿಸಿ ಪಾಲಿಸಿದರೆ ಅವುಗಳ ಉತ್ಪನ್ನದ ಸವಿ ಪಡೆಯುವವರು ಇತರರು (ಸೆಯ್ಯತ ಪಿ.........ಗೋಪಾಲಕೊ ಗವೊ ರಖ್ಖತಿ ಅನ್ನೇ ಗೋರಸಂ ಪರಿಭುಂಜತಿ, Mil. ಪು. 18). ಸತ್ಯವಾಗಿಯೂ ಗೋವಳ ವೃತ್ತಿಯು ಇತರರು ಕರುಬುವಂತಹುದಾಗಿರಲಿಲ್ಲ.

ಸಾಕು ಪ್ರಾಣಿಗಳು

ಈಗ ಸಾಕುಪ್ರಾಣಿಗಳ ವಿವಿಧ ಜಾತಿಗಳು ಹಾಗೂ ಅವುಗಳ ಉಪಯುಕ್ತತೆಯನ್ನು ಕುರಿತು ವಿವೇಚಿಸೋಣ. ಮಹಾಭಾರತದಲ್ಲಿ ಸಿಂಹ, ಹುಲಿ, ಹಂದಿ, ಎಮ್ಮೆ, ಆನೆ, ಕರಡಿ ಮತ್ತು ಬಾಲವಿಲ್ಲದ ಕೋತಿ (ಏಪ್), ಈ ಏಳನ್ನೂ ಕಾಡುಪ್ರಾಣಿಗಳೆನ್ನಲಾಗಿದೆ (ಅರಣ್ಯಾಃ); ಹಸು, ಆಡು, ಕುರಿ, ಕುದುರೆ, ಹೇಸರಗತ್ತೆ ಮತ್ತು ಕತ್ತೆಗಳನ್ನು ಸಾಕುಪ್ರಾಣಿಗಳೆಂದು ಕಾಣಲಾಗಿದೆ (gramyah VI. 4, 13f. Bengal text). ಕಾಡುಪ್ರಾಣಿಗುಂಪಿನಲ್ಲಿ ಹಂದಿ, ಎಮ್ಮೆ ಮತ್ತು ಆನೆಗಳನ್ನು ಪಳಗಿಸಿರುವುದು ಕಂಡುಬಂದಿದೆ. ಅನೇಕವೇಳೆ ಈ ಪ್ರಾಣಿಗಳಲ್ಲಿ ಒಂದೇ ಜಾತಿಯವನ್ನು ಮಾತ್ರ ಬೆಳೆಸಲಾಗಿದೆ. ಉದಾಹರಣೆಗೆ ಗೋಪಾಲಕ, ಅಜಪಾಲಕರು ಮಾತ್ರವಲ್ಲ, ಪಿಂಡಾರಕ ಮತ್ತು ಸೂಕರಪಾಲಕರು ಸಹ ಇದ್ದುದು ತಿಳಿಯುಬರುತ್ತದೆ (Arth. II. 29; Dn. XXIII. 25) ಮಾರುಕಟ್ಟೆ(ಸಂತೆಪೇಟೆ)ಯಲ್ಲಿ ವಿವಿಧ ಪ್ರಾಣಿಗಳ ಮಾಂಸಗಳನ್ನು ಸಹ ಪ್ರತ್ಯೇಕ ಅಂಗಡಿ (ಕಸಾಯಿಖಾನೆ)ಗಳಲ್ಲಿಯೇ ಮಾರಾಟ ಮಾಡಲಾಗುತ್ತಿತ್ತು, ಇದರಿಂದ ವಿವಿಧ ಪ್ರಾಣಿ ಸಂಗ್ರಾಹಕರು ಮತ್ತು ಕಟುಕರು ಜೀವನ ನಡೆಸುತ್ತಿದ್ದರು; ಉದಾಹರಣೆಗೆ, ಗೋಹಂತಕ (ಗೋಘಾತಕ), ಕುರಿಕಟುಕ (ಅರಭಿಕೊ), ಹಂದಿಯ ಇರಿಗತ್ತಿಗ (ಸೂಕರಿಕೊ), ಪಕ್ಷಿಹಂತಕ (ಶಕುಂತಿಕೊ), ಜಿಂಕೆಯ ಮರೆಬೇಟೆಗಾರ (ಮಾಗವಿಕೊ) ಮುಂತಾದವರನ್ನು ಹೆಸರಿಸಬಹುದು. Mn. 51cf. ಹಾಗೆಯೇ ಜಾತಕ-I. 488ರಲ್ಲಿ ಉಡ-ಬಲೆಗಾರ (ಗೊಧಲುಜ್ಜಕೊ)ನು ಕಂಡುಬರುತ್ತಾನೆ. ಈ ದಿಸೆಯಲ್ಲಿ ರೈ ಡೇವಿಡ್ಡರು ಮಾರುಕಟ್ಟೆ ಮಾಂಸಕ್ಕಾಗಿಯೇ ಜಾನುವಾರುಗಳ ವಿಶೇಷ ತಳಿಯೆಬ್ಬಿಸುವಿಕೆ ಸಂಪ್ರದಾಯವಿಲ್ಲದುದನ್ನು ಮನಗಂಡಿದ್ದಾರೆ (Buddhist India. P.94). ಇದಕ್ಕೆ ಪ್ರತಿಯಾಗಿ ಕಸಾಯಿಖಾನೆಯನ್ನು ಕುರಿತ ಅನೇಕ ಆಧಾರಗಳನ್ನು ಗಮನಿಸಬಹುದಾಗಿದೆ (ಸುನ, ಪರಿಸು

ನವ್). ಅರಮನೆಯ ಲಾಯ ಮತ್ತು ನಾಯಿಗೂಡುಗಳಲ್ಲಿ ಒಂಟೆ ಮತ್ತು ನಾಯಿಗಳಿದ್ದುದು ಸುಸ್ಪಷ್ಟವಾಗಿದೆ [ಅರಮನೆಯಲ್ಲಿ ನಾಯಿಗಳಿದ್ದ ವಿಚಾರವು ರಾಮಾಯಣದಲ್ಲಿ ಪದೇ ಪದೇ ಬರುತ್ತದೆ. ಅಲೆಕ್ಸಾಂಡರನು ರಾಜ ಸೋಫಿಥೆಸ್ ನಿಂದ (Str. XV. i. 31) 150 ನಾಯಿಗಳನ್ನು ಕಾಣಿಕೆಯಾಗಿ ಪಡೆದನು]. ಹಾಗೆಯೇ ಹಳ್ಳಿಯ ಕೊಟ್ಟಿಗೆಗಳಲ್ಲಿ ನಾಯಿಗಳು ಸಂತೋಷವಾಗಿ ಬೊಗಳುತ್ತಾ ಹೊರಳಾಡುತ್ತಿದ್ದವು. ಆದರೆ ಸಾಕುಪ್ರಾಣಿಗಳಲ್ಲಿ ಬಾತುಕೋಳಿಗಳು ಕಂಡುಬರುವುದಿಲ್ಲ. ಹಸು, ಎಮ್ಮೆ, ಆಡು ಮತ್ತು ಕುರಿಗಳನ್ನು ಹೈನು(ಗೋರಸವ್) ಹಾಗೂ ಮಾಂಸ ಹಾಗೂ ಚರ್ಮ (ತೊಗಲು)ಗಳಿಗಾಗಿ 'ಪಾಲಿಸಲಾಗುತ್ತಿತ್ತು. ಹಂದಿ ಮತ್ತು ಕೋಳಿಗಳನ್ನು ಪೂರ್ಣವಾಗಿ ಆಹಾರಕ್ಕೆಂದೇ ಸಾಕುತ್ತಿದ್ದರು. ಗೂಳಿ(ಆಕ್ಸ್) ಮಾತ್ರ ನೇಗಿಲೆಳೆಯುತ್ತಿತ್ತು. ಗೂಳಿ, ಹೇಸರಗತ್ತೆ, ಕತ್ತೆ ಮತ್ತು ಒಂಟೆಗಳನ್ನು ಹೊರೆಹೊರಲು (ಭಾರವೆಳೆಯಲು) ಬಳಸಲಾಗುತ್ತಿತ್ತು (ಅಪರೂಪ ಸಂದರ್ಭಗಳಲ್ಲಿ ಕುದುರೆ ಮತ್ತು ಆನೆಗಳನ್ನು ಸಹ ಬಳಸಲಾಗುತ್ತಿತ್ತು(Arth. II. 30 ff; Mbh. V.132.21; Pliny. VI 22; Solin, 52. 6-17; Arr. XVIII) ಮತ್ತು ಮಾಲೀಕರು ಅವುಗಳನ್ನು ಬಾಡಿಗೆಗೂ ಕೊಡಬಹುದಿತ್ತು (Str. XV. i.41; Jat. I. 195). ನಾಯಿಯು ಮಂದೆಕಾಯುವವರಿಗೆ ಹುಲ್ಲುಗಾವಲು ಕಾಡುಗಳಲ್ಲಿ ಸ್ಥಳಪರೀಕ್ಷೆ (ಬೇಹುಗಾರಿಕೆ, ಸುಳಿವು ಕೊಡುವಿಕೆ) ಕಾರ್ಯಗಳಲ್ಲಿ ನೆರವಾಗುತ್ತಿತ್ತು (ಅರ್ಥಶಾಸ್ತ್ರ II 29) ಇಲ್ಲವೇ ಅರಮನೆಯಂಕಣಗಳನ್ನು ಕಾಯುತ್ತಿತ್ತು (ಜಾತಕ I. 175) ಅಥವಾ ರಾಜನ (ಜಾತಕ IV. 437) ಇಲ್ಲವೇ ಅಲೆಮಾರಿಬೇಟೆಗಾರರ ಬೇಟೆಗಳಲ್ಲಿ ಸಹಚರಿಯಾಗಿ ನೆರವಾಗುತ್ತಿತ್ತು (ಜಾತಕ VI. 428): ಕುದುರೆ ಮತ್ತು ಆನೆಗಳನ್ನು ಅವುಗಳ ವಿವಿಧ ಸ್ವಭಾವಪ್ರವೃತ್ತಿಗಳಿಗನುಗುಣವಾಗಿ ಭಾರವೆಳೆಯುವಿಕೆ, ಸವಾರಿ ಇಲ್ಲವೇ ಯುದ್ಧಗಳಲ್ಲಿ ಬಳಸಲಾಗುತ್ತಿತ್ತು. ಭಾರವೆಳೆಯಲೆಂದೂ ಬಳಸುವ ಪ್ರಾಣಿಗಳನ್ನು ಸಾಮಾನ್ಯವಾಗಿ ಹಿಡಮಾಡಲಾಗುತ್ತಿತ್ತು. ಕೆಲವುವೇಳೆ ಅವುಗಳ ಕೊಂಬುಗಳನ್ನು ಕತ್ತರಿಸಲಾಗುತ್ತಿತ್ತು (ಮಹಾಭಾರತ XII. 15.51). ಕಾಡು ಹಾಗೂ ಪಳಗಿಸಲಾದ ಪ್ರಾಣಿಗಳಿಂದ ವಿವಿಧ ಬಗೆಯ ಪ್ರಾಣಿ ಉತ್ಪನ್ನಗಳು ಎಂದರೆ ಚರ್ಮ (ತೊಗಲು), ಉಗುರು, ಕೊಂಬು, ಗೊರಸು, ಗರಿ, ದಂತ, ಉಣ್ಣೆ ಮುಂತಾದುವು ದೊರಕುತ್ತಿದ್ದವು.

ಅಧ್ಯಾಯ 11

ಹಸುಗಳು ಮತ್ತು ಎತ್ತುಗಳು

ಹಸುಗಳನ್ನು 'ಭೂಮಿ', ಸೂರ್ಯಕಿರಣಗಳು ಇಲ್ಲವೇ ವಾಗ್ದೇವತೆಯ ಸಂಕೇತವಾಗಿ ಉಲ್ಲೇಖಿಸಲಾಗಿದೆ. ವಿಷ್ಣು ಪುರಾಣದಲ್ಲಿ ಭೂಮಿಯನ್ನು ಹಸುವಿನ ರೂಪದಲ್ಲಿ ಪ್ರತಿನಿಧಿಸಲಾಗಿದೆ. ಸುತ್ತ ನಿಪಟ, ಬ್ರಹ್ಮಾಂಡವಿಮ್ಮ ಸುತ್ತ (13, 24)ದಲ್ಲಿ ಬುದ್ಧನು ಗೋವಧೆಯನ್ನು ನಿಷೇಧಿಸಬೇಕೆಂಬ ಬೋಧನ ಸಂವಾದದಲ್ಲಿ 'ತಾಯಿಯಾಗಿ ಬದುಕಿರಿ... ...... ಗೋವುಗಳು ನಮ್ಮ ಅತ್ಯುತ್ತಮ ಗೆಳೆಯರು.........ನೀರು, ಭೂಮಿ, ಹೊನ್ನು, ಸಂಪತ್ತು ಮತ್ತು ಧಾನ್ಯಗಳಂತೆಯೇ ಜನತೆಗೆ ಹಸುಗಳೂ ಮುಖ್ಯವಾಗಿವೆ. ಅವೂ ಸಹ ಜೀವಿಗಳಿಗೆ ಅವಶ್ಯವಾಗಿವೆ' ಎಂದಿದ್ದಾನೆ.

ಹಸುಗಳಿಂದ ಲಭಿಸುವ ಅತೀವ ಲಾಭ ಹಾಗೂ ಆರ್ಥಿಕ ಉಪಯುಕ್ತತೆಗಳಿಂದಾಗಿ ಮಾನವನು ಸಹಜವಾಗಿಯೇ ಅವುಗಳನ್ನು ಗೌರವಿಸಿ ಸ್ತುತಿಸುತ್ತಾನೆ. ಇವು ಈ ಮುಂದೆ ತಿಳಿಸುವ ಋಗ್ವೇದದಿಂದ (VI. 28) ಆಯ್ದ ಭಾಗಗಳಿಂದ ಸ್ಪಷ್ಟವಾಗಿ ವ್ಯಕ್ತವಾಗುತ್ತವೆ–ಇದನ್ನು ಮೂಲ ಸಂಸ್ಕೃತ ಹಸ್ತಪ್ರತಿಯಿಂದ ಅನುವಾದಿಸಲಾಗಿದೆ.

ಇವು (ಎಂದರೆ ಹಸುಗಳು) ಕಳೆದುಹೋಗುವುದಿಲ್ಲ, ಕಳ್ಳನು ಅಪಹರಿಸುವುದಿಲ್ಲ, ಇಲ್ಲವೇ ದುಷ್ಟಶತ್ರುಗಳು ಅವುಗಳನ್ನು ಬಾಧಿಸುವುದಿಲ್ಲ. ಏಕೆಂದರೆ ಅವುಗಳ ಒಡೆಯನು ಅವುಗಳೊಟ್ಟಿಗೇ ಬದುಕುತ್ತಾನೆ ಹಾಗೂ ಅವುಗಳಿಂದ (ಎಂದರೆ ಗೋಉತ್ಪನ್ನಗಳಿಂದ) ಯಜ್ಞಯಾಗಾದಿಗಳನ್ನು, ದಾನಧರ್ಮಗಳನ್ನು ಮಾಡುತ್ತಾನೆ.

ಯುದ್ಧಾಶ್ವವು ತನ್ನ ಧೂಳಿಡಿದ ಕುತ್ತಿಗೆಯಿಂದ ಅವುಗಳನ್ನು ಹಿಂದೆಹಾಕುವುದಿಲ್ಲ ಇಲ್ಲವೇ ಕಸಾಯಿಖಾನೆಯ ಬಳಿ ಎಂದೂ ಹೋಗುವುದಿಲ್ಲ. ಈ ಪೂಜ್ಯ ಹಸುಗಳು ವಿಶಾಲ ಹುಲ್ಲುಗಾವಲಿನಲ್ಲಿ ನಿರ್ಭೀತವಾಗಿ ಚಲಿಸುತ್ತವೆ.

ಹಸುಗಳು ದೇವರು (ದೈವ). ಅವು ನನಗೆ ಇಂದ್ರನಾಗಿ ತೋರುತ್ತವೆ. ಮೊದಲ ಬಾರಿ ಇಳಿಸಿದ ಸೋಮರಸವನ್ನು ಎಳೆದುವು ಹಸುಗಳೇ. ಓ ಜನಗಳೇ ಈ ಹಸುಗಳೇ ಇಂದ್ರರೂಪ. ನನ್ನ ಹೃದಯ ಬುದ್ಧಿ ಗಳೆರಡರಿಂದಲೂ ಇಂದ್ರನನ್ನು ಹಂಬಲಿಸುತ್ತೇನೆ.

ಹಸುಗಳೇ, ಕೃಶಕಾಯನನ್ನು ಕೊಬ್ಬಿಸಿ (ದೃಢಕಾಯನಾಗಿಸಿ) ಹಾಗೂ ಕುರೂಪಿ

ಯನ್ನು ಸುರೂಪಿಯನ್ನಾಗಿಸಿ. ನಿಮ್ಮ ಪವಿತ್ರ ಧ್ವನಿಯಿಂದ ನನ್ನ ಗೃಹವನ್ನು ಹರಸಿರಿ. ನಮ್ಮ ಸಭೆ ಸಮಾರಂಭಗಳಲ್ಲಿ ನಿಮ್ಮ ಶಕ್ತಿ ಸಾಮರ್ಥ್ಯಗಳನ್ನು ಉತ್ಕಟಕಂಠದಲ್ಲಿ ಶ್ಲಾಘಿಸಲಾಗಿದೆ.

ಹಿಂದಿರುಗಿ, ಮುಂದಡಿಯಿಡದಿರಿ: ನಮ್ಮಲ್ಲಿ ಭೇಟಿಕೊಡಿ ಓ ಸಿರಿವಂತರೆ, ಪದೇ ಪದೇ ಐಶ್ವರ್ಯ ತರುವ ಅಗ್ನಿ ಮತ್ತು ಸೋಮರೇ ನಮಗೆ ಸಿರಿಯನ್ನು ಪಾಲಿಸಿರಿ.

ಅವುಗಳನ್ನು ನಮಗೆ ಹಿಂದಿರುಗಿಸಿರಿ: ನಮ್ಮ ಸಮೀಪಕ್ಕೆ ತನ್ನಿರಿ. ಪುನಃ ಪುನಃ ಸಿರಿಯನ್ನು ಪಾಲಿಸುವ ಇಂದ್ರ, ಅಗ್ನಿ ಮತ್ತು ಸೋಮರು ನಮಗೆ ಸಂಪತ್ತನ್ನು ಕರುಣಿಸಲಿ.

ಅವು ಪುನಃ ನಮ್ಮಲ್ಲಿಗೆ ಹಿಂದಿರುಗಲಿ. ಈ ಗೋಮಂದೆಯಲ್ಲಿ ಉಣ್ಣಲಿ, ಓ ಅಗ್ನಿಯೆ, (ನಮ್ಮಲ್ಲಿ) ಏನೇ ಸಂಪತ್ತಿರಲಿ ಅವುಗಳನ್ನು ಇಲ್ಲಿಯೇ ಬಿಡಿರಿ. ಅವು ನಮ್ಮೊಡನೆ ಉಳಿಯಲಿ.

ಹಸುಗಳ ಪಾಲನೆ ಮತ್ತು ಆರೈಕೆ

ವಾಚಸ್ಪತ್ಯ–ಕೋಶದಲ್ಲಿ ತಿಳಿಸಿರುವಂತೆ, ಬೃಹತ್ ಪರಾಶರ ಸಂಹಿತೆಯಲ್ಲಿ ಗೋಪಾಲನೆಯನ್ನು ಕುರಿತು ಸುದೀರ್ಘ ವಿವರವಿದೆ. ಸಂಬಂಧಪಟ್ಟ ಭಾಗಗಳ ಅನುವಾದವನ್ನು ಕೆಳಗೆ ಕೊಟ್ಟಿದೆ:

ಬ್ರಾಹ್ಮಣ ಗೃಹಸ್ಥನು ತನ್ನ ಹಸು(ಆಕಳು)ವನ್ನು ಕಟ್ಟಿಹಾಕಿ, ಪೋಷಿಸಿ ರಕ್ಷಿಸಬೇಕು ಹಾಗೂ ಕರುಗಳ ಆರೈಕೆಗೆ ಹೆಚ್ಚು ಎಚ್ಚರವಹಿಸಬೇಕು. ಏಕೆಂದರೆ, ಕಾಲಕ್ರಮೇಣ ಅವು ಪೂರ್ಣವಾಗಿ ಬೆಳೆದು ದೊಡ್ಡವಾಗುತ್ತವೆ (ಸಂ. II, ಶ್ಲೋ. 7).

ಆಕಳನ್ನು ಮೇಯಲು ಬಹುದೂರ ಕಳಿಸಬಾರದು. ಹಾಗೆ ಮಾಡುವುದರಿಂದ ಸುತ್ತಾಟವು ಕ್ಷೇಮಕರವಲ್ಲ. (ಸಂ. II, ಶ್ಲೋ. 8).

ಮನೆಯವರು ಮುಂಜಾನೆ, ಸಂಜೆ ಎರಡುವೇಳೆಗಳಲ್ಲಿಯೂ ಹಾಲುಕರೆಯಬೇಕು. ಗೋವಳನನ್ನು ಬದಲಾಯಿಸಿದ್ದರೆ, ನಿಯಮದಂತೆ ಅವು ತಮ್ಮ ಹಾಲುತ್ಪಾದನೆಯನ್ನು ಹೆಚ್ಚಿಸುವುದಿಲ್ಲ (ಸಂ. II, ಶ್ಲೋ. 9).

ನಿಷ್ಪ್ರಯೋಜಕವೆಂದು ಎಸೆದ ಬರಿಯ ಕೊಳೆಗಳನ್ನು ತಿಂದು ದಿನದಿನವೂ ಹಾಲು

ಕೊಡುತ್ತವೆ. ಇದು ದೇವತೆಗಳಿಗೆ ಸಂಪ್ರೀತಿಕರ. ಹಾಗಿದ್ದಲ್ಲಿ ಗೋವುಗಳನ್ನು ಪೂಜಿಸ ಬಾರದೇಕೆ? (ಸಂ. 11, ಶ್ಲೋ. 10).

ಗೋವು ಎಲ್ಲ ದೇವತೆಗಳ ನೆರವಿನ ಏಕತಾಣವಾಗಿದೆ (ನಿವಾಸಸ್ಥಾನ). ಆದರ ಶಿರದಲ್ಲಿ ಬ್ರಹ್ಮದೇವನೂ, ಭುಜದಲ್ಲಿ ಶಿವನೂ, ಬೆನ್ನಿನಲ್ಲಿ (ಹಿಂಬದಿಯಲ್ಲಿ) ವಿಷ್ಣುವೂ, ಪಾದಗಳಲ್ಲಿ ವೇದಗಳೂ, ಇನ್ನುಳಿದ ಸಕಲ ದೇವತೆಗಳೂ ಆದರ ರೋಮರೋಮಗಳಲ್ಲಿ ನೆಲಸಿರುತ್ತಾರೆ, ಗೋವಿಗೆ ಶ್ರದ್ಧೆಯಿಂದ ಆರೈಕೆಮಾಡುವುದರಿಂದ ಶ್ರೀಹರಿಯು ಪ್ರಸನ್ನನಾಗುತ್ತಾನೆ (ಸಂ. 11, ಶ್ಲೋ. 11–12).

ಗೋಸ್ಪರ್ಶದಿಂದ ಪಾಪವಿಮುಕ್ತಿಯಾಗುತ್ತದೆ, ಹಾಲು ಪೋಷಣೆಯುಂಟು ಮಾಡುತ್ತದೆ ಹಾಗೂ ಅವುಗಳನ್ನು ದಾನವಾಗಿ ನೀಡಿದುದಾದರೆ ಸ್ವರ್ಗಕ್ಕೆ ಮಾರ್ಗ ದೊರಕುತ್ತದೆ. ಹೀಗಿರುವಾಗ ಗೋವುಗಳನ್ನೇಕೆ ಪೂಜಿಸಬಾರದು? (ಸಂ. 11, ಶ್ಲೋ. 13).

ಗೋಪಾದಗಳಿಂದ ಎದ್ದ ಧೂಳೂ ಸಹ ಮಾನವನ ಪಾಪನಾಶಮಾಡುವುದೆಂದ ಮೇಲೆ ಗೋವುಗಳನ್ನು ಗೌರವಿಸಬಾರದೇಕೆ? (ಸಂ. 11, ಶ್ಲೋ. 14).

ಪರಾಶರರು, ಗೋಸಗಣಿ ಮತ್ತು ಗಂಜಲಗಳು ತಂದೆಮಾಡಿದ ಪಾಪವನ್ನೂ ಸಹ ತೊಳೆದುಹಾಕುವುದೆಂದ ಬಳಿಕ ಗೋವಿಗೆ ಸಂಬಂಧಿಸಿದ ಎಲ್ಲ ವಸ್ತುಗಳೂ ಗೌರವಾ ದರಗಳಿಗೆ ಪಾತ್ರವಲ್ಲವೇನು ಎಂದು ಕೇಳುತ್ತಾರೆ (ಸಂ. 11, ಶ್ಲೋ. 15).

ಹಸುವಿನ, ಕರುವಿಲ್ಲದಿರುವಾಗ ಇಲ್ಲವೇ ಅದು ಗಬ್ಬವಿರುವಾಗ ಹಾಲುಕರೆಯ ಬಾರದು. ಹಸು ಈಯುವ ಹತ್ತು ದಿನಗಳ ಮುನ್ನ ಹಾಲುಕರೆದವನು ನರಕಭಾಜನನಾಗು ತ್ತಾನೆ (ಸಂ. 11, ಶ್ಲೋ. 16).

ಮೂರೂ ಜಾತಿಗಳಲ್ಲಿ ಸುಖಸಂತೋಷಾಪೇಕ್ಷಿಗಳಾದ ಸಜ್ಜನರು ದುರ್ಬಲವಾದ, ರೋಗದಿಂದ ನರಳುತ್ತಿರುವ (ರೋಗಪೀಡಿತ), ಬೆದೆಗೆ ಬಂದ ಇಲ್ಲವೇ ಅವಳಿ ಕರು ಗಳಿಗೆ ಜನ್ಮವಿತ್ತ ಹಸುವಿನಿಂದ ಹಾಲುಕರೆಯಬಾರದು (ಸಂ. 11, ಶ್ಲೋ. 17).

ಬೆದೆಯಲ್ಲಿರುವ ಹಸುವಿನಿಂದ ಹಾಲುಕರೆಯುವಿಕೆ, ಅತಿಯಾದ ಕಲೆ(ಮಚ್ಚೆ)ಗಳು (ಶರೀರದಮೇಲೆ), ಚಪಲಚಿತ್ತ (ಚಂಚಲಮತಿ)ಯಾದ ಸ್ತ್ರೀ ಮತ್ತು ದಾಯಾದಿ ಕಲಹ

ಗಳು–ಇವೆಲ್ಲ ಕುಲನಾಶನಕ್ಕೆ ಕಾರಣವಾಗುತ್ತವೆ (ಸಂ. 11, ಶ್ಲೋ. 18).

ಪರ್ವತಗಳು, ಅಡವಿ, ಅರಣ್ಯಗಳ ಸಮೇತ ಇಡಿಯ ಭೂಮಂಡಲವನ್ನು ಒಂದೆಡೆ ಇರಿಸಿ, ಇಲ್ಲಿ ಹಾಗೂ ಮುಂದೆಂದೂ ಉಪಯುಕ್ತವಾಗಿರುವ ಗೋವನ್ನು ಮತ್ತೊಂದೆಡೆ ಯಿರಿಸಿದಾಗ ಇರಡರಲ್ಲಿ ಗೋವೇ ಮಿಗಿಲಾದುದು ಎಂಬುದು ನಿಶ್ಚಿತ (ಸಂ. 11, ಶ್ಲೋ. 19).

ಶೂದ್ರರು ತಾವು ದುಡಿಸಿಕೊಳ್ಳುವ ಪೂಜ್ಯಗೋವುಗಳನ್ನು ಸರಿಯಾದ ರೀತಿಯಲ್ಲಿ ಪಾಲಿಸಬೇಕು. ಅವುಗಳನ್ನು ಪೋಷಿಸಿ, ಪೂಜಿಸುವಾತನು ಮರಣಾನಂತರ (ಸ್ವರ್ಗದಲ್ಲಿ) ಸುಖಭೋಗಿಯಾಗುತ್ತಾನೆ (ಸಂ. 11, ಶ್ಲೋ. 20).

ಗೋವುಗಳನ್ನು ಅವು ದಕ್ಷಿಣ ಇಲ್ಲವೇ ಉತ್ತರಾಭಿಮುಖವಾಗಿರುವಂತೆ ಕಟ್ಟ ಬೇಕು (ಗೂಟಗಳಿಗೆ). ಆದರೆ ಎಂದೂ ಪೂರ್ವ ಇಲ್ಲವೇ ಪಶ್ಚಿಮಾಭಿಮುಖವಾಗಿರ ಬಾರದು (ಸಂ. 11, ಶ್ಲೋ. 21).

ಗೋವುಗಳು, ಎತ್ತುಗಳು ಇಲ್ಲವೇ ಕುದುರೆಗಳನ್ನು ಕಟ್ಟಿಹಾಕುವ ಕೊಟ್ಟಿಗೆ (ಇಲ್ಲವೇ ಗೋಶಾಲೆ)ಯಲ್ಲಿ, ಯಾವಾಗಲೂ ಒಂದು ಹರಿತವಾದ ಕುಡುಗೋಲಿಟ್ಟಿರ ಬೇಕು(ಸಂ. 11, ಶ್ಲೋ. 22).

ಗೋವುಗಳನ್ನು ದಾನವಾಗಿ ಕೊಡಬೇಕು (ಬ್ರಾಹ್ಮಣರಿಗೆ): ಅವುಗಳನ್ನು ಸದಾ ರಕ್ಷಿಸಿ, ಪೋಷಿಸಿ ಆರೈಕೆಮಾಡಬೇಕು. ಅವುಗಳನ್ನು ಹೊಡೆದು ಇಲ್ಲವೇ ಎಳೆದಾಡುವವರು ಕ್ರೂರಿಗಳು, ನರಕದಲ್ಲಿ ಅವರ ಕೈಕಾಲುಗಳನ್ನು ಸುಡಲಾಗುತ್ತದೆ ಹಾಗೂ ಗೂರಲು (ದಮ್ಮು, ಉಬ್ಬಸ) ವ್ಯಾಧಿಯಿಂದಾಗಿ ಶ್ವಾಸಬಂಧನ(ಉಸಿರುಕಟ್ಟುವಿಕೆ)ಕ್ಕೊಳಗಾ ಗುತ್ತಾರೆ (ಸಂ. 11, ಶ್ಲೋ. 23).

ದಾರಿತಪ್ಪಿ ಹೋಗುತ್ತಿರುವ ಹಸುವನ್ನು ದನಗಾಹಿಗಳು ಸರಿದಾರಿಯತ್ತ ತಿರು ಗಿಸಲು ಕೋಲಿನಿಂದ ಬಡಿಯಬಾರದು; ಆತ ಬೇಗ ಬೇಗ ನಡೆ, ಇತ್ತ ತಿರುಗು ಇತ್ಯಾದಿ **ನುಡಿಗಳಿಂದ('ಜೀ. ಜೀ. ಹೊ'!)**ಒತ್ತಾಯಿಸಿ ನಡೆಸಬೇಕಷ್ಟೆ. ಅಲ್ಲದೆ 'ಬೇಡ, ಹೆದರ ಬೇಡ' ಎಂದು ಕೂಗಿ ಅಡ್ಡದಾರಿಯಿಂದ ತಪ್ಪಿಸಬೇಕು (ಸಂ. 11, ಶ್ಲೋ. 24).

ಗೋಸ್ಪರ್ಶಮಾಡಿ, ಗೋವನ್ನು ಬಲಬದಿಗಿರಿಸಿಕೊಂಡು ಪ್ರದಕ್ಷಿಣೆಬರುವಾತನು,

ಸಪ್ತಖಂಡಗಳೊಡಗೂಡಿದ ಇಡಿಯ ಭೂಮಂಡಲವನ್ನೇ ಪ್ರದಕ್ಷಿಣೆಬರುವುದರಿಂದ ಗಳಿಸುವ ಯಶಸ್ಸು ಗಳಿಸುತ್ತಾನೆ (ಸಂ. II, ಶ್ಲೋ. 25).

ದಿನವೂ ಗೋವಿಗೆ ಹುಲ್ಲು ನೀರುಗಳ ಮೇವಿತ್ತು ಪೋಷಿಸುವಾತನು ಅಶ್ವಮೇಧ ಯಾಗದಿಂದ ಪಡೆಯುವ ಫಲವನ್ನೇ ಗಳಿಸುವುದು ಖಂಡಿತ (ಸಂ. II, ಶ್ಲೋ. 26).

ಎಲ್ಲ ಪವಿತ್ರಕ್ಷೇತ್ರಗಳ ಅಥವಾ ಇಡೀ ವಿಶ್ವದ ಸಾಗರ ಮತ್ತು ಕೊಳಗಳಲ್ಲೂ ಮಿಂಯುವುದರಿಂದ ಬರುವ ಫಲವು ಗೋವಿನ ಕೊಂಬುಗಳನ್ನು ತೊಳೆದ ನೀರಿನಲ್ಲಿ ಮಾಡಿದ ಸ್ನಾನದ ಹದಿನಾರನೆಯ ಒಂದು ಭಾಗಕ್ಕೂ ಸಮವೆನಿಸದು (ಸಂ. II, ಶ್ಲೋ. 27).

ತಮ್ಮ ಸತೀಸುತರಂತೆಯೇ ಗೃಹದಲ್ಲಿ ಹಸುಗಳು ಮತ್ತು ಕರುಗಳಿಂದ ಕೂಡಿದ ಮನೆಯು ಪಾಪಕಲುಷಿತವಾಗುವುದೆಂತು? (ಸಂ. II, ಶ್ಲೋ. 28)

ಬ್ರಾಹ್ಮಣರು ಮತ್ತು ಗೋವುಗಳು ಒಂದೇ ಕುಟುಂಬಕ್ಕೆ ಸೇರಿದ್ದು ಮುಂದೆ ಎರಡಾಗಿ ಒಡೆದವಾಗಿವೆ. ಇವುಗಳಲ್ಲಿ ಮೊದಲರ್ಧದಲ್ಲಿ ಪವಿತ್ರ ಮಂತ್ರಗಳು ನೆಲೆಸಿದ್ದರೆ, ಎರಡನೆಯದರಲ್ಲಿ ದಾನಧರ್ಮಗಳು ನೆಲೆಯಾದುವು (ಸಂ. II, ಶ್ಲೋ. 29).

ಗೋವುಗಳ ನೆರವಿನಿಂದ ಯಜ್ಞಯಾಗಾದಿಗಳು ನಿರ್ವಿಘ್ನವಾಗಿ ನೆರವೇರುತ್ತವೆ, ದೇವತೆಗಳು ಉಚ್ಚಸ್ಥಾನದಲ್ಲಿ ನೆಲೆಗೊಳ್ಳುತ್ತಾರೆ. ಗೋವುಗಳಿಂದಲೇ ವೇದವೇದಾಂಗ ಗಳು, ಪದ ಮತ್ತು ಕ್ರಮಪಾಠಗಳು ಪಠಣಗೊಂಡುವು (ಸಂ. II, ಶ್ಲೋ. 30).

ಎದುರಿನಲ್ಲಿ ಸದಾ ಎತ್ತು (ಹೋರಿ)ಗಳಿರುವ ಗೋವುಗಳೊಡನೆ ವಾಸಿಸುವ ಹಾಗೂ ತಮ್ಮ ಹಿಂದೆ ಮತ್ತು ಹೃದಯದಲ್ಲಿ ಗೋವಲ್ಲದೆ ಬೇರಿಲ್ಲದ ಜನತೆಯು ಈ ಭುವಿಯಲ್ಲಿ ಧನ್ಯರು. ಇಂಥವರನ್ನು ಸ್ವರ್ಗದಲ್ಲಿಯೂ ಕಾಣುವುದು ಕಷ್ಟ (ಸಂ. II, ಶ್ಲೋ. 31).

(ಗೋವಿನ) ಕೊಂಬುಗಳ ಮೂಲದಲ್ಲಿ ಬ್ರಹ್ಮನೂ, ಮಧ್ಯದಲ್ಲಿ ಕೇಶವನೂ (ಎಂದರೆ, ವಿಷ್ಣು), ತುದಿ(ಅಗ್ರಭಾಗ)ಯಲ್ಲಿ ಶಿವನೂ ಸ್ಥಿತರಾಗಿರುತ್ತಾರೆ–ಇಂತು ತ್ರಿಮೂರ್ತಿಗಳು ಅಲ್ಲಿ ಶಾಶ್ವತವಾಗಿ ನೆಲೆಸಿರುತ್ತಾರೆ (ಸಂ. II, ಶ್ಲೋ. 32).

ಕೊಂಬಿನ ತುದಿಯಲ್ಲಿ(ಹಸುವಿನ) ಎಲ್ಲ ಪವಿತ್ರಕ್ಷೇತ್ರಗಳೂ ಗಣ್ಯಪುರುಷರೂ

ಇರುತ್ತಾರೆ ಹಾಗೂ ಸಕಲ ದೇವತೆಗಳೂ ಒಡಲಲ್ಲಿ ನೆಲೆಸಿರುತ್ತಾರೆ. ಹೀಗೆ ಗೋವು ಎಲ್ಲ ದೇವತೆಗಳ ಮೂರ್ತಸ್ವರೂಪ(ನೆಲೆ)ವಾಗಿರುತ್ತದೆ (ಸಂ. II, ಶ್ಲೋ. 33).

ಹಸುವಿನ ನೆತ್ತಿಯಲ್ಲಿ ದೇವಿಯೂ(ಪಾರ್ವತಿ), ನಾಸಿಕಗಳಲ್ಲಿ ಕಾರ್ತಿಕೇಯ ಸ್ವಾಮಿಯೂ, ಕರ್ಣಗಳಲ್ಲಿ ಸರ್ಪನಾಯಕ(ಮುಖಂಡ)ರಾದ ಕಂಬಳ ಮತ್ತು ಅಶ್ವತಾರ ರಿಬ್ಬರೂ ನೆಲೆಸಿರುತ್ತಾರೆ (ಸಂ. II, ಶ್ಲೋ. 34).

ಆ ಪೂಜ್ಯ ಸುರಭಿ (ಗೋವು)ಯ ನೇತ್ರಗಳಲ್ಲಿ ಸೂರ್ಯಚಂದ್ರರೂ, ದಂತಗಳಲ್ಲಿ ಅಷ್ಟವಸ್ತುಗಳೂ ಜಿಹ್ವೆ(ನಾಲಗೆ)ಯಲ್ಲಿ ವರುಣದೇವನೂ ನೆಲೆಸಿರುತ್ತಾನೆ, (ಸಂ. II, ಶ್ಲೋ. 35).

ಗೋವಿನ ಅಂಬಾ ಎಂಬ ಧ್ವನಿಯಲ್ಲಿ ವಾಗ್ದೇವಿ ಸರಸ್ವತಿಯೂ, ಕಪೋಲ (ಕಣತಲೆ, ಗಂಡಸ್ಥಲ)ಗಳಲ್ಲಿ ಯಮ ಮತ್ತು ಯಕ್ಷ (ಕುಬೇರ)ರೂ, ರೋಮರಂಧ್ರ (ಕೂಪರ)ಗಳಲ್ಲಿ ಋಷಿ (ಮುನಿ)ಗಳೂ, ಗಂಜಲದಲ್ಲಿ ಗಂಗಾಜಲವೂ ಇರುತ್ತದೆ (ಸಂ. II, ಶ್ಲೋ. 36).

ಯಮುನಾ ಮತ್ತಿತರ ದೇವತೆಗಳೆಲ್ಲ ಸಗಣಿಯಲ್ಲಿರುತ್ತಾರೆ. ಇಪ್ಪತ್ತೆಂಟುಕೋಟಿ ದೇವತೆಗಳು ರೋಮಗಳಲ್ಲಿ ನೆಲೆಸಿರುತ್ತಾರೆ (ಸಂ. II, ಶ್ಲೋ. 37).

ಹೊಟ್ಟೆಯಲ್ಲಿ ಗಾರ್ಹಪತ್ಯಾನಲ (ಗಾರ್ಹಪತ್ಯಅಗ್ನಿ) ವಿರುತ್ತದೆ; ಹೃದಯದಲ್ಲಿ ದಕ್ಷಿಣಾಗ್ನಿ; ಬಾಯಿಯಲ್ಲಿ ಆಹವನೀಯವೂ ಪಕ್ಕಗಳಲ್ಲಿ ಅವಸಥ್ಯವೂ ಇರುತ್ತದೆ (ಸಂ. II, ಶ್ಲೋ. 38).

ಆದಕಾರಣ, ಗೋವುಗಳನ್ನು ಸುಧಾರಿಸುವುದರಲ್ಲಿ (ನಿಯಂತ್ರಿಸು, ಅಂಕೆಯಲ್ಲಿ ಟ್ಟುಕೊಳ್ಳುವುದರಲ್ಲಿ) ತನ್ನ ಕೋಪವನ್ನು ಅಂಕೆಯಲ್ಲಿಟ್ಟುಕೊಂಡಿರುವಾತನು ಏಳಿಗೆ ಪಡೆಯುವನಲ್ಲದೆ ಸ್ವರ್ಗಲೋಕದಲ್ಲಿಯೂ ಸಹ ದಿವ್ಯಪದವಿ ಪಡೆಯುತ್ತಾನೆ (ಸಂ. II, ಶ್ಲೋ. 39).

ಅದರ ಮೇವುಪಾತ್ರೆಯನ್ನು ಯಾರೂ ದಾಟಬಾರದು ಇಲ್ಲವೇ ಸಗಣಿಗಂಜಲಗಳ ಹೊಲಸು ನಾತಕ್ಕೆ ಮೂಗು ಮುಚ್ಚಬಾರದು. ಅದನ್ನು ಹೆಚ್ಚು ಹೆಚ್ಚು ಉಸಿರೆಳೆದು ಕೊಂಡಷ್ಟೂ, ಹೆಚ್ಚು ಯಶಸ್ಸುಗಳಿಸುತ್ತಾನೆ (ಸಂ. II, ಶ್ಲೋ. 40).

ಹಾಲು ಕರೆಯುವ ಪ್ರಾಯದ ಹಸುವನ್ನು, ಕರುವಿನೊಂದಿಗೆ ದಾನವಿತ್ತ (ಬ್ರಾಹ್ಮಣನಿಗೆ)ವರಿಗೆ ಶಿವಾಲಯವನ್ನು (ಕಟ್ಟಿ) ಅರ್ಪಿಸಿದ ಇಲ್ಲವೇ ಇಡಿಯ ಭೂಮಂಡಲವನ್ನೇ ದಾನವಿತ್ತುದಕ್ಕೆ ಸಮವಾದ ಪುಣ್ಯಲಭಿಸುತ್ತದೆ (ಸಂ. II, ಶ್ಲೋ. 41).

ಸೂತ್ರಗಳ ಕಾಲಕ್ಕೆ ಗೋವು ಅತ್ಯಂತ ಪಾವಿತ್ರ್ಯತೆಯ ಹಂತವನ್ನು ತಲುಪಿತ್ತು. ಆಪಸ್ತಂಭರು (1,2,20,21,30) ಹಸುಗಳಿಗೆ ಎದುರಾಗಿ ಮಲಮೂತ್ರಗಳನ್ನು ಮಾಡಬಾರದು, ಇಲ್ಲವೇ ತನ್ನ ಕಾಲುಗಳನ್ನು ಸಹ ಅವುಗಳೆಡೆ ಚಾಚಬಾರದು ಎಂದಿದ್ದಾರೆ. ಉದ್ದೇಶಪೂರ್ವಕವಾಗಿ ಗೋಹತ್ಯೆಮಾಡಿದುದಾದರೆ, ಅದನ್ನು ಗಂಭೀರ ಅಪರಾಧವಾಗಿ ಪರಿಗಣಿಸಲಾಗುತ್ತಿತ್ತು. ಹಂತಕನನ್ನು ಉಗ್ರವಾಗಿ ಶಿಕ್ಷಿಸಲಾಗುತ್ತಿತ್ತು. ಹತ್ಯೆಯು ಆಕಸ್ಮಾತ್ತಾಗಿ ಸಂಭವಿಸಿದಾಗ, ಇಲ್ಲವೇ ಹತ್ಯೆಗೆ ಪರೋಕ್ಷವಾಗಿ ಕಾರಣವಾಗಿದ್ದ ಸಂದರ್ಭದಲ್ಲಿಯೂ ಸಹ ಆ ವ್ಯಕ್ತಿಯು ಏಳು ಕಠಿಣ ನಿಯಮಗಳನ್ನು ಪಾಲಿಸಬೇಕಾಗಿತ್ತು (ಅಪಸ್ತಂಭ ಸಂಹಿತ, ಅಧ್ಯಾಯ I. ಪರಾಶರ ಸಂಹಿತ, ಅಧ್ಯಾಯ IX, ಸಂಬರ್ತ ಸಂಹಿತ ಹಾಗೂ ಅಗ್ನಿಪುರಾಣ. ಅಧ್ಯಾಯ CCXXVII). ಈ ಸಂಬಂಧದಲ್ಲಿ ಅರ್ಥಶಾಸ್ತ್ರದಲ್ಲಿ ವಿಧಿಸಿರುವ ನಿಯಮವು ಇನ್ನೂ ಉಗ್ರವಾಗಿದೆ. 'ಯಾರೇ ಆಗಲಿ ಗೋಹಿಂಸೆ ಮಾಡಿದಲ್ಲಿ ಅಥವಾ ಮತ್ತೊಬ್ಬರು ಹಿಂಸೆ ಮಾಡುವಂತೆ ಮಾಡಿದಲ್ಲಿ, ಅಪಹರಿಸಿದಲ್ಲಿ ಇಲ್ಲವೇ ಮತ್ತೊಬ್ಬರು ಅಪಹರಿಸುವಂತೆ ಮಾಡಿದಲ್ಲಿ ಅಂಥವರನ್ನು ಸಂಹರಿಸಬೇಕು,

ಬೃಹಸ್ಪತಿಸ್ಮೃತಿಯಲ್ಲಿ (ಅಧ್ಯಾಯ X. II) ಗೋಅಪಹರಣಕ್ಕೆ ಇನ್ನೂ ಉಗ್ರವಾದ ಕ್ರೂರದಂಡನೆಯನ್ನು ವಿಧಿಸಿದೆ. ಶಂಕಿತ ಅಪರಾಧಿಯಿಂದ ಮೊದಲು ಸೇಗಿಲೆಳೆಸಲಾಗುತ್ತಿತ್ತು. ಅನಂತರ ಅಪರಾಧವು ಸಾಬೀತಾದಲ್ಲಿ ಅವರನ್ನು ಉಗ್ರವಾಗಿ ಶಿಕ್ಷಿಸಲಾಗುತ್ತಿತ್ತು. ಹನ್ನೆರಡು ಪಲಗಳಷ್ಟು ತೂಕವಿರುವ ಸೇಗಿಲುಗುಳವನ್ನು ಕೆಂಪಗೆ ಕಾಯಿಸಿ ಕಳ್ಳನು ಅದನ್ನು ನಾಲಗೆಯಿಂದ ನೆಕ್ಕುವಂತೆ ಮಾಡಲಾಗುತ್ತಿತ್ತು. ಆಗ ಆತನ ನಾಲಗೆ ಸುಡದಿದ್ದ ಪಕ್ಷದಲ್ಲಿ ಆತ ನಿರಪರಾಧಿಯೆಂದು ಬಿಡುಗಡೆಮಾಡಲಾಗುತ್ತಿತ್ತು.

ಈ ದಿಸೆಯಲ್ಲಿ, ಗಂಗೋಪಾಧ್ಯಾಯರು ತಮ್ಮ 'ಪ್ರಾಚೀನ ಭಾರತದಲ್ಲಿ ಕೃಷಿ ಮತ್ತು ಕೃಷಿಕರು' (ಅಗ್ರಿಕಲ್ಚರ್ ಅಂಡ್ ಅಗ್ರಿಕಲ್ಚರಿಸ್ಟ್ ಇನ್ ಏನ್ಷಂಟ್ ಇಂಡಿಯ) ಎಂಬ ಕೃತಿಯಲ್ಲಿ ಅಗ್ನಿಪುರಾಣದಿಂದ ಉದ್ಧರಿಸಲಾದ ಕೆಲವು ಸಾಲುಗಳು ಕುತೂಹಲಕಾರಿಯಾಗಿವೆ :

'ಗೋವುಗಳು, ಪಾವನವಾದುವು (ಪವಿತ್ರವಾದುವು) ಹಾಗೂ ಆನಂದಮಯವಾದುವು. ವಿಶ್ವವು ತನ್ನ ಅಸ್ತಿತ್ವಕ್ಕೆ ಗೋವಂಶಕ್ಕೆ ಋಣಿಯಾಗಿದೆ. ಗೋಸ್ಪರ್ಶವು

ಹೋರಿಗಳನ್ನು ಪೂಜಿಸಬಾರದೇಕೆ?–ಒಂದು ಹೋರಿಯ ದಾನವು ಹತ್ತು ಗೋವುಗಳ ದಾನಕ್ಕೆ ಸಮ. ಭೂಮಿಯ ಮೇಲೆ ಧರ್ಮದ ಸ್ವರೂಪವೇ (ಧಾರ್ಮಿಕ) ಅದರಲ್ಲಿ ಮೂರ್ತಿವೆತ್ತಿರುತ್ತದೆ.

ಅವುಗಳನ್ನು ಎಚ್ಚರಿಕೆಯಿಂದ ಪಾಲಿಸಿ ಸರಿಯಾದ ರೀತಿಯಲ್ಲಿ ನೊಗಕ್ಕೆ ಹೂಡಬೇಕು. ಅವುಗಳನ್ನು ಆರೈಕೆ ಮಾಡದೆ ದುಡಿಸಿಕೊಳ್ಳುವಾತನು ಘೋರನರಕಕ್ಕೆ ಹೋಗುತ್ತಾನೆ.

ಒಂದು ಪೆಟ್ಟಿನ ಅಥವಾ ಕಡಮೆ ಅಂಗ ಹೊಂದಿರುವ, ಇಲ್ಲವೇ ಶರೀರದಮೇಲೆ ಚುಕ್ಕೆಗಳಿರುವ ಅಥವಾ ಶಾರೀರಿಕ ಗಾಯಗಳಿಂದ ನರಳುತ್ತಿರುವ ಹೋರಿಯನ್ನು ಶೂದ್ರನಾದವನು ನೊಗಕ್ಕೆ ಹೂಡಬಾರದು. ಹಾಗೆ ಮಾಡಿದವನಾದರೆ ಆತ ನಾಶವಾಗುತ್ತಾನೆ.

ಹಾನಿಕರ ರೋಗಗಳಿಗೆ ಗುರಿಯಾದ ಪಶುಗಳಿಂದ ಹಾಲುಕರೆಯಬಾರದು. ಆದರೆ ಅವುಗಳನ್ನು ಎಚ್ಚರಿಕೆಯಿಂದ ಆರೈಕೆಮಾಡಬೇಕು. ಏಕೆಂದರೆ, ಇದರಿಂದ ಆತನಿಗೆ ದೈವಾನುಗ್ರಹವುಂಟಾಗುತ್ತದೆ.

ದೇವರು ಆಹಾರಧಾನ್ಯಗಳನ್ನು ಬೆಳೆಯುವುದಕ್ಕಾಗಿಯೇ ಹೋರಿಗಳನ್ನು ಸೃಷ್ಟಿಸಿದನು. ಏಕೆಂದರೆ, ಆಹಾರಧಾನ್ಯಗಳಿಂದ ತ್ರಿಲೋಕಗಳಲ್ಲಿಯ ಚರಾಚರಜೀವಿಗಳಿಗೂ ಸಮೃದ್ಧ ಹಿತದೊರೆಯುತ್ತದೆ.

ಸೃಷ್ಟಿಕರ್ತನು ಹೋರಿ ಮತ್ತು ಗೋವುಗಳನ್ನು ದನಗಳಜಾತಿಯ ಸಂತಾನೋತ್ಪಾದನೆಗಾಗಿ ಸೃಷ್ಟಿಸಿದ್ದಾನೆ. ಅವುಗಳಿಂದ ಬೆಳೆದ ಫಸಲಿ(ಎಂದರೆ, ದನಗಳಿಂದ)ನಿಂದ ಎಲ್ಲ ಜೀವಿಗಳೂ ಪೋಷಣೆಪಡೆಯುತ್ತವೆ (ಸಂ. 11, ಶ್ಲೋ. 42).

ಅವುಗಳನ್ನು ಎಚ್ಚರಿಕೆಯಿಂದ ಪಾಲಿಸಿ ಪೋಷಿಸುವಾತನು ಎಲ್ಲ ಲೋಕಗಳ ಪೋಷಕನಾಗಿರುತ್ತಾನೆ (ಸಂ. 11, ಶ್ಲೋ. 43).

ಎತ್ತುಗಳನ್ನು ಪಾಲಿಸುವುದರಿಂದ ಗೋವುಗಳ ಪಾಲನೆಯಿಂದ ಲಭಿಸುವುದೆಂದು ವೇದಗಳು ಸಾರಿದುದಕ್ಕಿಂದ ಹತ್ತುಪಟ್ಟು ಅಧಿಕ ಫಲ ಲಭಿಸುತ್ತದೆ (ಸಂ. 11, ಶ್ಲೋ. 44).

ಇಡಿಯ ವಿಶ್ವದ ಚೇತನಾಚೇತನಗಳಿಗೆಲ್ಲ ಎತ್ತುಗಳಿಂದ ಬಲದೊರೆಯುತ್ತದೆ.

ಆದಕಾರಣ ಎತ್ತನ್ನು ಯಾವಾಗಲೂ ಚೆನ್ನಾಗಿ ಸಂರಕ್ಷಣೆಮಾಡಿ, ಉಣಿಸಬೇಕು (ಸಂ II, ಶ್ಲೋ. 45).

ಬ್ರಹ್ಮನು (ಸೃಷ್ಟಿಕರ್ತ) ವಿಶ್ವಕಲ್ಯಾಣ ದೃಷ್ಟಿಯಿಂದ ಭೂಮಿಯಲ್ಲಿ ಎತ್ತನ್ನು ಧರ್ಮದ ಸಾಕ್ಷಾರರೂಪವಾಗಿ ಸೃಷ್ಟಿಸಿ, ಆಹಾರ ಧಾನ್ಯಗಳನ್ನು ಉತ್ಪಾದಿಸಲು ಹಾಗೂ ತ್ರಿಲೋಕಗಳನ್ನು ಪೋಷಿಸಲು ಸಮರ್ಥವಾಗಿರುವಂತೆ ಮಾಡಿದ್ದಾನೆ(ಸಂ. II, ಶ್ಲೋ.46).

ಅವು ದೂರದೂರ ಸ್ಥಳಗಳಲ್ಲಿ ತಿರುಗಿ ಮಾನವ ಬಳಕೆಗೆ ಅಯುಕ್ತವಾದ ಕಾಡುಹುಲ್ಲನ್ನು ಕಟ್ಟಕ್ಕರೆಯಿಂದ ಮೇಯುತ್ತವೆ. ಇಂಥ ಎತ್ತುಗಳನ್ನು ಯಾರು ತಾನೇ ಪೂಜಿಸುವುದಿಲ್ಲ ?(ಸಂ. II, ಶ್ಲೋ. 47).

ಅವು ಬೆಳೆ ಬೆಳೆಯುವುದನ್ನು ಸಾಧ್ಯವಾಗಿಸುತ್ತವೆ, ಫಸಲನ್ನು ಒಕ್ಕುತ್ತವೆ ಹಾಗೂ ದೂರ ಪ್ರದೇಶಗಳಿಗೆ ಸಾಗಣೆಮಾಡುತ್ತವೆ. ಹೀಗಾಗಿ ಎತ್ತುಗಳಿಗಿಂತ ಶ್ರೇಷ್ಠವಾದ ಪ್ರಾಣಿ ಯಾವುದಿದೆ ? (ಸಂ.II, ಶ್ಲೋ. 48).

ಅವು ತಮ್ಮ ಭುಜಬಲದಿಂದ ಭಾರಗಳನ್ನು ದೂರಪ್ರದೇಶಗಳಿಂದ ಹೊತ್ತು ತರುತ್ತವೆ. ಅವು ತಮ್ಮ ಆಹಾರಕ್ಕಾಗಿ ಬೆಳೆದ ಆಹಾರ-ಧಾನ್ಯಗಳನ್ನು ಕೇಳುವುದಿಲ್ಲ ಹಾಗೂ ತಮ್ಮೊಂದಿಗೆ ಇತರ ಜೀವಿಗಳನ್ನು ರಕ್ಷಿಸಿ, ಪೋಷಿಸಿ ಅಭಿವೃದ್ಧಿಗೆ ತರುವುದಿಲ್ಲ (ಸಂ. II, ಶ್ಲೋ. 49).

ಒಂದು ಎತ್ತನ್ನು (ದಾನ)ಮಾಡುವುದರಿಂದ ಹತ್ತು ಗೋದಾನ ಫಲ ಲಭಿಸುತ್ತದೆ. ಇದು ಇಡಿಯ ಭೂಮಂಡಲವನ್ನೇ ದಾನವೀಯುವುದಕ್ಕೆ ಸಮವಾಗಿರುತ್ತದೆ. ಆದ ಕಾರಣ ಎತ್ತನ್ನುಳಿದು ಬೇರಾವಪ್ರಾಣಿಯೂ ಪೂಜ್ಯತೆಗೆ ಅರ್ಹವಲ್ಲ (ಸಂ. II, ಶ್ಲೋ. 51).

ಆಹಾರಧಾನ್ಯಗಳನ್ನು ಬೆಳೆಯಲು ತಾವೊಂದು ಸಾಧನವಾಗಿದ್ದು ಸಹ ಅವು (ಎತ್ತು) ಸ್ವತಃ ಹುಲ್ಲು ಮೇಯುತ್ತವಲ್ಲದೆ, ಎಲ್ಲ ಫಸಲನ್ನೂ ಅವುಗಳ ಸ್ಥಾನಕ್ಕೆ ಸಾಗಿಸುತ್ತವೆ. ತಮಗೆ ಆಯಾಸವಾಗಿದ್ದರೂ ಸಹ ಆಕ್ಷೇಪಿಸುವುದಿಲ್ಲ. ಎಲ್ಲ ಜೀವಿಗಳೂ ಎತ್ತುಗಳಿಂದ ಪೋಷಣೆಗೊಳ್ಳುತ್ತವೆ(ಸಂ. II, ಶ್ಲೋ. 52).

ಎತ್ತು ದೃಢಕಾಯವಾದ ಬಳಿಕ, ಮೂರು, ನಾಲ್ಕು ದಿನಗಳವರೆಗೆ ಮೂಗಿನ ಹೊಳ್ಳೆಗಳನ್ನು ಕೊರೆಯಬಾರದು, ಹಾಗೆಯೇ ಅದು ನಿಶ್ಶಕ್ತವಾಗಿರುವವರೆಗೂ ? ಕೊರೆಯಬಾರದು (ಸಂ. II, ಶ್ಲೋ. 53).

ಕಸಬುಗಾರರು ಖದಿರ ಅಥವಾ ಶೀಶಾಮ್ ಮರದಿಂದ ಹನ್ನೆರಡು ಅಂಗುಲ ಉದ್ದವುಳ್ಳ ಮೂಗುಚುಚ್ಚು (ಹೋಳಿಗಳಲ್ಲಿ ದಾರಹಾಕಲು ಮಾಡುವ ರಂಧ್ರಗಳು-ನೋಸ್ ಪಿನ್ಸ್) ಮಾಡಬೇಕು. ಇಂಥವು ಎರಡು (ಒಂದು ಜೊತೆ) ಇಲ್ಲವೇ ಮೂರಿರಬೇಕು (ಸಂ. II, ಶ್ಲೋ. 54).

ಪರಾಶರರ 'ಕೃಷಿ ಪರಾಶರ' ಕೃತಿಯಲ್ಲಿ ಭಾರವೆಳೆಯುವ ದನಗಳಿಗೆ ನೀಡಬೇಕಾದ ಗಮನವನ್ನು ಕುರಿತು ಕೆಲವು ಉಪಯುಕ್ತ ಸೂಚನೆ(ಸುಳಿವು)ಗಳು ದೊರಕುತ್ತವೆ. ಆ ಪುಸ್ತಕದ ಕೆಲವು ಭಾಗಗಳ ಅನುವಾದವನ್ನು ಈ ಮುಂದೆ ಕೊಟ್ಟಿದೆ:

ಎತ್ತುಗಳು ದಣಿಯದಿರುವ ರೀತಿಯಲ್ಲಿ ಬೇಸಾಯಕಾರ್ಯ ನಡೆಸಬೇಕು. ಭಾರವೆಳೆಯುವ ಪ್ರಾಣಿಗಳನ್ನು ದಣಿಸಿ ಬೆಳೆದ ಬೆಳೆಯನ್ನು ದೇವತೆಗಳೂ ಪಿತೃಗಳೂ ನಿಷೇಧಿಸುತ್ತಾರೆ.

ಪ್ರಾಣಿಗಳನ್ನು ಅತಿಯಾಗಿ ದುಡಿಸಿ, ಮಾಡಿದ ಬೇಸಾಯದಿಂದ ಫಸಲು ದೊರೆತರೂ, ನಿರರ್ಥಕ(ನಿಷ್ಪ್ರಯೋಜಕ)ವಾಗಿ ಸರ್ವನಾಶವಾಗುತ್ತದೆ.

ಪ್ರಾಣಿಗಳನ್ನು ಶಕ್ತಿಮೀರುವವರೆಗೆ ದುಡಿಸುವವನು ಕಡೆಗೆ ಭೂಮಂಡಲದ ನಾಲ್ಕು ದಿಸೆಗಳಲ್ಲಿ ಕಡುಬಡತನದಿಂದ ತೀವ್ರವಾಗಿ ನರಳಿ ಅಲೆಯುತ್ತಾನೆ.

ಕಪ್ಪು, ಕೆಂಪು ಅಥವಾ ಕಪ್ಪು ಹಾಗೂ ಕೆಂಪು ಹೋರಿಗಳನ್ನು ನೇಗಿಲಿಗೆ ಹೂಡುವುದನ್ನು ಶಿಫಾರಸುಮಾಡಿದೆ. ಆದಕಾರಣ, ಭೂಮಿಯನ್ನು ಉಳುಮೆಮಾಡುವ ಪ್ರಾರಂಭದಲ್ಲಿ ಈ ಬಗೆಯ ಹೋರಿಗಳ ಆಯ್ಕೆಯಲ್ಲಿ ಎಚ್ಚರಿಕೆವಹಿಸಬೇಕಲ್ಲದೆ ಬಾಯಿಯ ಪಕ್ಕಗಳಿಗೆಲ್ಲ ಬೆಣ್ಣೆ ಇಲ್ಲವೇ ತುಪ್ಪವನ್ನು ಸವರಬೇಕು.

ಮೈಗಳ್ಳ ಹೋರಿ, ಕೋಟು ಇಲ್ಲವೇ ಗೊರಸುಗಳು ಒಡೆದಿರುವ ಅಥವಾ ಕೊಂಬುಗಳು ತೀರಗಿಡ್ಡ ಇಲ್ಲವೇ ಉದ್ದವಾಗಿರುವ ಹೋರಿಯನ್ನು ಸಾಧ್ಯವಾದಷ್ಟು ಉಳುಮೆಗೆ ಹೂಡುವುದನ್ನು ತಪ್ಪಿಸಬೇಕು.

ನೇರವಾಗಿ, ಪೂರ್ವಾಭಿಮುಖವಾಗಿ ನಿಂತು (ಬೇಸಾಯಗಾರನು), ಹಾಲನ್ನು ಅರ್ಪಿಸಿ, ಬಳಿಕ ನೇಗಿಲುಪೂಜೆಮಾಡಿ ಹೋರಿಗಳ ಕೊರಳಸುತ್ತ ಹೂಮಾಲೆ ಹಾಕಬೇಕು.

ಓ ದೇವಾಧಿದೇವ ಶಚೀಂದ್ರ(ಎಂದರೆ ಇಂದ್ರ)ನೇ ಬಿಳಿಯ ಪುಷ್ಪ, ಮೊಸರು, ಹಾಲು ಮತ್ತು ತುಪ್ಪಗಳ ಆಹುತಿಯನ್ನು ಸ್ವೀಕರಿಸು; ಒಳ್ಳೆಯ ಮಳೆಯಾಗುವಂತೆ ಮಾಡೆಂದು ಬೇಡುತ್ತೇನೆ.

ಉಳುಮೆಕಾಲದಲ್ಲಿ, ಬಳಲಿದ ಎತ್ತಿನ ಬಾಲ ಮತ್ತು ಕಿವಿಗಳನ್ನು ತಿವಿದು ನೋಯಿಸಬಾರದು. ಅಲ್ಲದೆ ಪದೇ ಪದೇ ಹೊಡೆಯಬಾರದು.

ಅತ್ರಿ, ಪರಾಶರ, ಆಪಸ್ತಂಭ ಮತ್ತಿತರರು: 'ನೇಗಿಲಿಗೆ ಎಂಟು ಎತ್ತುಗಳನ್ನು ಹೂಡುವಾತನು ಧಾರ್ಮಿಕನು, ಆರು ಎತ್ತುಗಳನ್ನು ಹೂಡುವವನು ಕೇವಲ ವಾಣಿಜ್ಯ (ವ್ಯಾಪಾರ) ದೃಷ್ಟಿಯುಳ್ಳವನು, ನಾಲ್ಕು ಹೂಡುವವರು ಕ್ರೂರಿಗಳು, ಎರಡು ಹೂಡುವವರು ಗೋಮಾಂಸಭಕ್ಷಕರು, ಎಂದು ಹೇಳಿದ್ದಾರೆ(ಅಪಸ್ತಂಭ 1, 2, 3; ಅಗ್ನಿಪುರಾಣ CXLII, 4).

ಗೌತಮರು IX, 23ರಲ್ಲಿ ಕರುವಿಗೆ ಹಾಲುಕೊಡುತ್ತಿರುವ ಹಸುವನ್ನು ಅಡ್ಡಿಪಡಿಸಬಾರದೆಂದು ವಿಧಿಸುತ್ತಾರೆ.(See also Manu IV, 59; Ap. I, 31, 10, 18; Yasistha XII, 33 and Vishnu LXIII. 2). ಬೌದ್ಧಾಯನರು II, 3, 6, 13ರಲ್ಲಿ ಕರುವನ್ನು ಕಟ್ಟಿದ ಹಗ್ಗವನ್ನು ತುಳಿದು ದಾಟಬಾರದೆನ್ನುತ್ತಾರೆ. ಮನುಸಂಹಿತ,IV,162 ರಲ್ಲಿ ಯಾವುದೇ ಕಾರಣದಿಂದ ನೋಯಿಸಬಾರದೆಂದು ಪ್ರತಿಬಂಧಕಾಜ್ಞೆ ವಿಧಿಸಿದೆ ಸಾಮಾನ್ಯವಾಗಿ ದನಗಳ ಜಾತಿಪ್ರಾಣಿಗಳಿಗೆ ಯಾವುದೇ ರೀತಿಯ ಕ್ರೂರನಡವಳಿಕೆಯನ್ನು ತೀವ್ರವಾಗಿ ಖಂಡಿಸಿರುವುದನ್ನು ಈಗಾಗಲೇ ಕಂಡಿದ್ದೇವೆ. (ಇಂಡೊ–ಇರಾನಿಗಳು ಸಹ ದನಗಳ ವಿರುದ್ಧ ಹಿಂಸೆಯನ್ನು ತೆಗಳಿದ್ದಾರೆ(See the zend-Avesta, Yasna XII,2) ಅರ್ಥಶಾಸ್ತ್ರದ ಪುಸ್ತಕ II, ಅಧ್ಯಾಯ XXVI ರಲ್ಲಿ ಕರು, ಹೋರಿ ಅಥವಾ ಕರೆಯುವ ಹಸುವನ್ನು ಕಡಿಯಬಾರದೆಂದು ಸ್ಪಷ್ಟವಾಗಿ ವಿಧಿಸಲಾಗಿದೆ ಹಾಗೂ ಪುಸ್ತಕ II, ಅಧ್ಯಾಯ XXIXನಲ್ಲಿ ಗೋಮಾರಾಟ ಮಾಡಿದವನು ಗೋವಿನ ¼ ಪಾಲು ಹಣವನ್ನು ರಾಜನಿಗೆ ಕೊಡಬೇಕೆಂದು ತಿಳಿಸಿದೆ (ದದಿಷ್ಯಾನಿ ದಿನಿಕ್ ಅಧ್ಯಾಯ LIII ಯಲ್ಲಿ ಕಟುಕರಿಗೆ ದನಗಳನ್ನು ಮಾರಾಟ ಮಾಡುವಿಕೆ ಹಾಗೂ ಅನುಚಿತ ತಿಂಡಿಗಳ ಪ್ರಸ್ತಾಪದಲ್ಲಿ ಮಾರಾಟಕ್ಕೆ ಕೆಲವು ನಿಬಂಧನೆಗಳನ್ನು ದೇಶದ ಹಿತಕ್ಕೆ ಕುಂದುಬಾರದ ರೀತಿಯಲ್ಲಿ ಹೇರಲಾಗಿದೆ. (ಇದನ್ನು ಗಂಗೋಪಾಧ್ಯಾಯರ 'ಅಗ್ರಿಕಲ್ಚರ್ ಅಂಡ್ ಅಗ್ರಿಕಲ್ಚರಿಸ್ಟ್ಸ್ ಇನ್ ಏನ್‌ಷಂಟ್ ಇಂಡಿಯ' ಪುಸ್ತಕದಿಂದ ಉದ್ಧರಿಸಲಾಗಿದೆ).

ದನದ ಕೊಟ್ಟಿಗೆ (ಗೋಶಾಲೆ)

ಪರಾಶರರು ತಮ್ಮ ಕೃಷಿ-ಪರಾಶರ ಕೃತಿಯಲ್ಲಿ ಕೊಟ್ಟಿಗೆಯನ್ನು ಶುಚಿಯಾಗಿ, ಅಲಂಕಾರವಾಗಿ (ಲಕ್ಷಣವಾಗಿ)ಟ್ಟುಕೊಳ್ಳವುದರಿಂದ ದನಗಳು ಸಂತೋಷಚಿತ್ತದಿಂದಿರುವುದಲ್ಲದೆ, ಆರೋಗ್ಯವಂತವಾಗುತ್ತವೆ ಎಂದಿದ್ದಾರೆ. ಅವರು ತಮ್ಮ ಕೃತಿಯಲ್ಲಿ ಕೊಟ್ಟಿಗೆಯನ್ನು ಲಕ್ಷಣವಾಗಿ (ನಾಣ್ಯವಾಗಿ), ಶುಚಿಯಾಗಿಟ್ಟುಕೊಳ್ಳುವುದನ್ನು ಕುರಿತು ಕೆಲವು ಉಪಯುಕ್ತ ಸೂಚನೆಗಳನ್ನು ಕೊಟ್ಟಿದ್ದಾರೆ. ಕೊಟ್ಟಿಗೆಯ ಶುಭ್ರತೆಗೆ ಸಂಬಂಧಪಟ್ಟ ಕೆಲವು ಮುಖ್ಯಭಾಗಗಳ ಅನುವಾದವನ್ನು ಈ ಮುಂದೆ ಕೊಡಲಾಗಿದೆ :

ಭದ್ರವಾಗಿ ಕಟ್ಟಿದ್ದು, ಶುಭ್ರವಾಗಿರುವ, ಸಗಣಿಗಳಿಲ್ಲದೆ ಸ್ವಚ್ಛವಾಗಿರುವ ಕೊಟ್ಟಿಗೆಯನ್ನು ಹೊಂದಿರುವ ಬೇಸಾಯಗಾರನ ಜಾನುವಾರುಗಳು ಪೌಷ್ಟಿಕ ಆಹಾರಗಳಿಲ್ಲದೆಯೂ ಸಹ ಚೆನ್ನಾಗಿ ಬೆಳೆಯುತ್ತವೆ(ಶ್ಲೋ. 17).

ದಿನನಿತ್ಯವೂ ದನಗಳು ತಮ್ಮ ಕೊಟ್ಟಿಗೆಯಿಂದ ಸಗಣಿ ಗಂಜಲಗಳು ಮೆತ್ತಿ ಹೊಲಸಾದ ಶರೀರದಿಂದ ಹೊರಬರುತ್ತಿದ್ದರೆ ಪೌಷ್ಟಿಕ ಆಹಾರವೇನು ಪೋಷಣೆ ನೀಡಬಲ್ಲದು? (ಶ್ಲೋ. 18).

ದನಗಳ ಆರೋಗ್ಯಕರ ಬೆಳವಣಿಗೆಗೆ 5 × 5 (?) ಅಳತೆಯ ಕೊಟ್ಟಿಗೆಯು ಒಳ್ಳೆಯದು. ಅದನ್ನು ಪೊರಕ್ಕೆ ಚಾಚಿರುವಂತೆ ಕಟ್ಟಿದ್ದರೆ ಅದು ದನಗಳ ನಾಶಕ್ಕೆ ಕಾರಣವಾಗುವುದು ಖಂಡಿತ (ಶ್ಲೋ. 19).

ಒಬ್ಬ ಬೇಸಾಯಗಾರನು ತಪ್ಪುಗ್ರಹಿಕೆಯಿಂದ ಮುಂಭಾಗದಲ್ಲಿ ವಿಶಾಲವಾಗಿ ಕಿರಿದಾಗಿದ್ದು, ಹಿಂಭಾಗದಲ್ಲಿ ನೀರವಿರುವ ಭೂಮಿಯಲ್ಲಿ ಕೊಟ್ಟಿಗೆಯನ್ನು ನಿರ್ಮಿಸಿದುದೇ ಆದರೆ ತನ್ನ ತಪ್ಪಿನಿಂದಾಗಿ ದನಗಳಿಗೆ ವಿನಾಶ ತರುತ್ತಾನೆ (ಶ್ಲೋ. 20).

ಅಕ್ಕಿ ತೊಳೆದ ನೀರು, ಬೆಂದ ಅನ್ನದ ಬಿಸಿಗಂಜಿ, ಮೀನುಸಾರ, ಹತ್ತಿಬೀಜಗಳು ಮತ್ತು ಹೊಟ್ಟು (ತೌಡು)ಗಳನ್ನು ಕೊಟ್ಟಿಗೆಯಲ್ಲಿರಿಸಿದರೆ, ದನಗಳ ವಿನಾಶವು ನಿಶ್ಚಿತ (ಶ್ಲೋ. 21).

ಕೊಟ್ಟಿಗೆಯಲ್ಲಿ ಕಸಬರಿಗೆ ಹಾಗೂ ಒನಕೆಗಳಿದ್ದುದಾದರೆ ದನಗಳ ವಿನಾಶ ಖಂಡಿತ. ಹಾಗೆಯೇ ಅಲ್ಲಿ ಆಡುಗಳನ್ನು ಕಟ್ಟುವುದೂ ಸಹ ಇದೇ ಪರಿಣಾಮವನ್ನುಂಟುಮಾಡುತ್ತದೆ. (ಶ್ಲೋ. 22).

ಕೊಟ್ಟಿಗೆಯಲ್ಲಿ ದನಗಳ ಗಂಜಳದ ಕಾಲುವೆಯ ನಡುವೆ ಮನೆಯವರು ಮಲವಿಸರ್ಜನೆ ಮಾಡಿದರೆ ದನಗಳ ಜೀವರಕ್ಷಣೆಯನ್ನು ನಿರೀಕ್ಷಿಸುವುದಾದರೂ ಹೇಗೆ? (ಶ್ಲೋ. 23).

ದನಗಳ ಏಳಿಗೆಯನ್ನು ಬಯಸುವುದಾದರೆ ತಪ್ಪು ಗ್ರಹಿಕೆಯಿಂದಲೂ ಸಹ ಸಗಣಿಯನ್ನು ಭಾನುವಾರ, ಮಂಗಳವಾರ ಹಾಗೂ ಶನಿವಾರಗಳಲ್ಲಿ ತೆಗೆಯಬಾರದು (ಶ್ಲೋ. 24).

ಮೇಲೆ ತಿಳಿಸಿದ ಮೂರು ದಿನಗಳನ್ನು ಬಿಟ್ಟು ಉಳಿದ ದಿನಗಳಲ್ಲಿ ಯಾರಿಗಾದರೂ ಸಗಣಿಯನ್ನು ಕೊಡಬಹುದು. ಮಂಗಳವಾರ ಮತ್ತು ಶನಿವಾರಗಳಲ್ಲಿ ಸಗಣಿ ತೆಗೆಯುವುದು ದನಗಳಿಗೆ ಹಾನಿಕರ (ಶ್ಲೋ. 25).

ದನಗಳ ಬಾಯಿಜೊಲ್ಲು, ಗಂಜಳ ಇಲ್ಲವೇ ಸಗಣಿ ಮತ್ತು ಪಾದಗಳಿಂದ ಮಣ್ಣು, ಧೂಳುಗಳು ಬೀಳದ ಮನೆಯಲ್ಲಿ ಸಂಪತ್ತುಳಿಯುವುದಿಲ್ಲ (ಶ್ಲೋ. 26).

ಮುಚ್ಚಂಜೆಯಲ್ಲಿ ಉರಿಯುವ ಹಣತೆಯನ್ನಿಡದ ಕೊಟ್ಟಿಗೆಯು ಸಂಪದ್ವೈಭವಗಳನ್ನು ಕಳೆದುಕೊಳ್ಳುತ್ತದೆ ಹಾಗೂ ಆ ಮಬ್ಬು ಸ್ಥಳವನ್ನು ವೃಷ್ಟಿಸುವುದರಿಂದ ದನಗಳು ಕ್ಷೀಣಿಸತೊಡಗುತ್ತವೆ (ಶ್ಲೋ. 27).

ಎಂಟು ಎತ್ತುಗಳು ಎಳೆಯುವ ನೇಗಿಲು ಉತ್ಕೃಷ್ಟವಾದುದು (ಅಥವಾ ಧರ್ಮಸಮ್ಮತವಾದುದು), ಆರು ಎತ್ತುಗಳಿಂದ ಎಳೆಯಲ್ಪಡುವುದು ವ್ಯಾಪಾರಿದೃಷ್ಟಿಯುಳ್ಳವರದು, ನಾಲ್ಕರಿಂದ ಎಳೆಯಲ್ಪಡುವುದು ಕ್ರೂರಿಗಳದೂ, ಎರಡರಿಂದ ಎಳೆಯಲ್ಪಡುವುದು ಗೋಮಾಂಸಭಕ್ಷಕರದಾಗಿರುತ್ತದೆ (ಶ್ಲೋ. 28).

ಹತ್ತು ಬಾರಿ ಉಳುಮೆಮಾಡಿದ ಭೂಮಿಯಲ್ಲಿ ತಪ್ಪದೇ ಸರ್ವತೋಮುಖ ಏಳಿಗೆಯುಂಟಾಗುತ್ತದೆ. ಐದುಬಾರಿ ಉಳುಮೆಮಾಡಿದುದರಿಂದ ಸಂಪತ್ತೂ, ಮೂರುಬಾರಿ ಮಾಡಿದುದರಿಂದ ಜೀವನಾಧಾರ ಫಸಲೂ, ಒಂದು ಸಲ ಮಾತ್ರ ಉಳುಮೆ ಮಾಡಿದ ಜಮೀನಿನಿಂದ ಸಾಲವೂ ಒದಗುತ್ತದೆ (ಶ್ಲೋ. 29).

ತನ್ನ ಜಮೀನನ್ನೂ ಎರಡು ಬಾರಿ ಮಾತ್ರ ಉಳುವಾತನು ತನ್ನ ಜೀವನಾಧಾ

ಕ್ಕೆ ಸಾಕಾಗುವಷ್ಟು ಮಾತ್ರ ಉತ್ಪಾದಿಸಬಲ್ಲ. ಹೀಗಾಗಿ ಆತ ಪಿತೃಗಳು, ದೇವತೆಗಳು ಹಾಗೂ ಅತಿಥಿಗಳಿಗೆ ಏನನ್ನೂ ಅರ್ಪಿಸಲು ಅಶಕ್ತನಾಗುತ್ತಾನೆ (ಶ್ಲೋ. 30).

'ರೋಗಗಳು ಉಂಟಾಗದಂತೆ ಸಂರಕ್ಷಿಸಲು ಕೊಟ್ಟಿಗೆಯನ್ನು ಎಂದಾದರೊಮ್ಮೆ ದೇವದಾರು (ಪೈನಸ್ ದೇವದಾರ್), ವಚ (ಒರಿಸ್ ಬೇರು), ಮಾಂಸಿ (ಹಣ್ಣುಗಳ ರುಳು ?), ಗುಗ್ಗುಳ (ಸುವಾಸನಾಯುಕ್ತ ಗೋಂದುರಾಳ), ಹಿಂಗು ಮತ್ತು ಸಾಸುವೆ ಬೀಜಗಳನ್ನು ಮಿಶ್ರಮಾಡಿ ಧೂಪಿಸಬೇಕು. (ಅಗ್ನಿಪುರಾಣ, ಅಧ್ಯಾಯ, CCXCII, 33 ಮತ್ತು 35): ಕೊಟ್ಟಿಗೆಯಲ್ಲಿಯ ಚರಂಡಿ ಪರಿಸ್ಥಿತಿಯ ಸಾಮಾನ್ಯ ಸುಧಾರಣ ದೃಷ್ಟಿಯಿಂದ ಪಿನ್ನಕ ವೃಕ್ಷ (ಹಿಂಗು)ವನ್ನು ನೆಡಬೇಕು'

ಅಧ್ಯಾಯ 12

ದನಗಳ ಆರೈಕೆ

ಪ್ರಾಚೀನ ಭಾರತದಲ್ಲಿ ದನಗಳ ಪಾಲನೆಯನ್ನು ಒಂದು ಪವಿತ್ರ ಕರ್ತವ್ಯವಾಗಿ ಭಾವಿಸಲಾಗಿದ್ದಿತು. ಕೃಷಿ ಪರಾಶರದಲ್ಲಿ ದನಗಳನ್ನು ನೋಡಿಕೊಳ್ಳುವ ವಿಚಾರದಲ್ಲಿ ಸುದೀರ್ಘ ನಿಯಮಾವಳಿಗಳು ಕಂಡುಬರುತ್ತವೆ. ಆ ಪುಸ್ತಕದಿಂದ ಮುಖ್ಯಭಾಗಗಳ ಅನುವಾದವನ್ನು ಕೆಳಗೆ ಕೊಟ್ಟಿದೆ:

ಪೂರ್ವತ್ರಯಗಳು (ಭಾದ್ರಪದ, ಫಾಲ್ಗುಣ ಮತ್ತು ಆಷಾಢ), ಧನಿಷ್ಠ, ಆರ್ದ್ರ (?), ಸ್ಯೆಂದ್ರಾಗ್ನಿ (?) ಬುಧ ಮತ್ತು ಶತಭಿಷೆ–ಈ ಎಲ್ಲ ನಕ್ಷತ್ರಕೂಟಗಳು ದನಗಳ ಬಿಡುಗಡೆ ಹಾಗೂ ಮರಳಿ ತರುವುದಕ್ಕೆ ಶುಭಕರವಾಗಿರುತ್ತವೆ (ಶ್ಲೋ. 106).

ಮೂರು ಚರಗಳು (?), ರೋಹಿಣಿ ನಕ್ಷತ್ರದಲ್ಲಿ ಅಮಾವಾಸ್ಯೆಯ ಹಿಂದಿನದಿನ, ಚತುರ್ದಶಿಯಂದು ಶ್ರವಣ, ರೇವತಿ, ಹಸ್ತ, ಆರ್ದ್ರಗಳಲ್ಲಿ ಹಾಗೂ ಚಾಂದ್ರಮಾಸದ ಅಷ್ಟಮಿಯಂದು ದನಗಳನ್ನು ಹೊರಗೆ ಬಿಡಬಾರದು ಇಲ್ಲವೇ ಕೊಟ್ಟಿಗೆಯಲ್ಲೂ ಸಹ ಬಿಡಬಾರದು. ಹಾಗೆ ಮಾಡುವುದರಿಂದ ದನಗಳು ಮತ್ತಿತರ ಪ್ರಾಣಿಗಳು ನಾಶವಾಗುತ್ತವೆ (ಶ್ಲೋ. 107-108).

ಭಾನುವಾರಗಳು,————, ಮತ್ತು ಮಂಗಳವಾರಗಳು ದನಗಳನ್ನು ಹೊರಗೆ ಬಿಡುವುದು ಹಾಗೂ ಒಳಸೇರಿಸುವುದನ್ನು ನಿಷೇಧಿಸಲಾಗಿದೆ. ಏಕೆಂದರೆ, ಹೊರಗೆ ಬಿಡುವುದರಿಂದ ದನಗಳಿಗೂ, ಒಳಗೆ ಸೇರಿಸುವುದರಿಂದ ಒಡೆಯನಿಗೂ ವಿಪತ್ತೊದಗುತ್ತದೆ (ಶ್ಲೋ.109).

ಸಗಣಿ ವಿಲೇವಾರಿ

ಯಶಸ್ವೀ ಬೇಸಾಯಗಾರನು ಮಾಘಮಾಸದಲ್ಲಿ ಸಗಣಿರಾಶಿಯನ್ನು ಪೂಜಿಸಿ ಒಂದು ಶುಭದಿನದಂದು ಸನಿಕೆಯಿಂದ ಗೊಬ್ಬರವನ್ನು ಕೆದಕಬೇಕು (ಶ್ಲೋ. 110).

ಸೂರ್ಯನ ಬಿಸಿಲಿಗೆ ಒಣಗುತ್ತಿರುವ ಸಗಣಿಗೊಬ್ಬರವನ್ನು ಹುಡಿಯಾಗಿ ಪರಿವರ್ತಿಸಿ, ಫಾಲ್ಗುಣ ಮಾಸದಲ್ಲಿ ಜಮೀನಿನ ಕುಳಿಗಳಲ್ಲಿ ಹಾಕಬೇಕು (ಶ್ಲೋ. 111).

ಬಳಿಕ ಬಿತ್ತನೆಕಾಲದಲ್ಲಿ ಜಮೀನಿಗೆ ಗೊಬ್ಬರ ಹಾಕಬೇಕು. ಗೊಬ್ಬರ ಹಾಕದಿದ್ದಾಗ ಬೆಳೆ ಚೆನ್ನಾಗಿ ಬೆಳೆಯುವುದೂ ಇಲ್ಲ, ಫಲಕೊಡುವುದೂ ಇಲ್ಲ (ಶ್ಲೋ. 112).

ಮೇಯಿಸಲು ದನಗಳನ್ನು ಹೊರಗೆ ಒಯ್ಯುವುದು

ಪೂರ್ವತ್ರಯಗಳು, ಧನಿಷ್ಠ, ಜೇಷ್ಠ, ಕೃತ್ತಿಕ ಮೃಗಶಿರ ಮತ್ತು ಶತಭಿಷ ನಕ್ಷತ್ರಗಳು ಯಾವಾಗಲೂ ದನಗಳನ್ನು ಹೊರಗೆ ಬಿಡುವುದಕ್ಕೂ, ಒಳಸೇರಿಸುವುದಕ್ಕೂ ಶುಭವಾದುವು (ಶ್ಲೋ. 37).

ಮೂರು ಉತ್ತರೆಗಳು, ರೋಹಿಣಿ, ಪುಷ್ಯ, ಶ್ರವಣ ಹಸ್ತ ಮತ್ತು ಚಿತ್ತ ನಕ್ಷತ್ರಗಳಲ್ಲಿ ಹಾಗೂ ಅಮಾವಸ್ಯೆಯ ಹಿಂದಿನದಿನ, ಚಾಂದ್ರಮಾಸದ ಚತುರ್ದಶಿಹಾಗೂ ಅಷ್ಟಮಿಗಳಲ್ಲಿ ದನಗಳನ್ನು ಹೊರಕ್ಕೆ ಕಳಿಸಲೂ ಬಾರದು ಇಲ್ಲವೇ ಹೊಸದಾಗಿ ಕೊಟ್ಟಿಗೆಗೆ ಸೇರಿಸಲೂ ಬಾರದು. ಈ ನಿಯಮವನ್ನುಲ್ಲಂಘಿಸಿದಾತನ ದನಗಳು ಮತ್ತಿತರ ಮೇವಿನ ಪ್ರಾಣಿಗಳು ನಾಶವಾಗುತ್ತವೆ (ಶ್ಲೋ. 38-39).

ದನಗಳನ್ನು ಶನಿವಾರ, ಭಾನುವಾರ ಇಲ್ಲವೇ ಮಂಗಳವಾರಗಳಂದು ಮೊದಲ ಬಾರಿಗೆ ಮೇಯಲೆಂದು ತೆಗೆದುಕೊಂಡು ಹೋದರೆ ಅವುಗಳಿಗೆ ವಿಪತ್ತೊದಗುತ್ತದೆ, ಹಾಗೂ ಆ ದಿನಗಳಲ್ಲಿ ಅವುಗಳನ್ನು ಹೊಸದಾಗಿ ಕೊಟ್ಟಿಗೆಗೆ ಸೇರಿಸಿದುದಾದರೆ, ಅದು ಕುಟುಂಬದ ಒಡೆಯನಿಗೆ ಮಾರಕವಾಗುತ್ತದೆ (ಶ್ಲೋ. 40).

ಗೋವುಗಳ ಮೇಲ್ವಿಚಾರಕ (ಗೋವಳಿಗ)

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ (Bk. II, ಅಧ್ಯಾಯ 46) ಗೋವುಗಳ ಮೇಲ್ವಿಚಾರಕನ ಕರ್ತವ್ಯಗಳನ್ನು ಹಾಗೂ ಆತ ಗೋವುಗಳೊಡನೆ ಹೇಗೆ ವರ್ತಿಸಬೇಕೆಂಬುದನ್ನು ತಿಳಿಸಿದೆ. ಓದುಗರ ಅನುಕೂಲಕ್ಕಾಗಿ ಸಂಬಂಧಪಟ್ಟ ಭಾಗಗಳ ಅನುವಾದವನ್ನು ಕೆಳಗೆ ಕೊಡಲಾಗಿದೆ. ಇದು ಹಿಂದಿನ ಕಾಲದಲ್ಲಿ ಭಾರತೀಯರು ಗೋಪಾಲನೆಗೆ ಎಷ್ಟು ಪ್ರಾಮುಖ್ಯತೆ ಕೊಡುತ್ತಿದ್ದರೆಂಬುದರ ಕಲ್ಪನೆ ನೀಡುತ್ತದೆ.

ಗೋಮೇಲ್ವಿಚಾರಕನು (1) ನಿಗದಿಯಾದ ಕೂಲಿಗೆ ಸಂರಕ್ಷಣೆ ಪಡೆಯುತ್ತಿರುವ ಗೋವುಗಳು, (2) ನಿಯಮಿತವಾದ ಹಣದ ಮೇಲೆ ಹಾಲನ್ನು ಕರೆಯುವ ಗೋವುಗಳು, (3) ಉಪಯೋಗಕ್ಕೆ ಬಾರದ ಪರಿತ್ಯಕ್ತ ಗೋವುಗಳು, (4) ಹೈನೋತ್ಪನ್ನದ

ಪಾಲಿಗಾಗಿ ಪಾಲಿಸುವ ಮಂದೆಗಳು, (5) ಮಂದೆಗಳ ವಿಭಾಗಗಳು, (6) ತಪ್ಪಿಸಿ ಕೊಂಡುಹೋಗುವ ಗೋವುಗಳು, (7) ಕೈಮಾರಿ ನಷ್ಟವಾದ (ಹಾಳಾದ) ಗೋವು ಗಳು ಮತ್ತು (8) ಸಂಗ್ರಹಿಸಿದ ಹಾಲು ಮತ್ತು ತುಪ್ಪಗಳ ಪರಿಮಾಣ ಇವುಗಳನ್ನು ಅಧೀನದಲ್ಲಿಟ್ಟುಕೊಂಡಿರಬೇಕು (ಶ್ಲೋ. 1).

ಒಬ್ಬ ಗೊಲ್ಲ, ಎಮ್ಮೆ ಕಾಯುವವನು, ಹಾಲುಕರೆಯುವವನು, ಮೊಸರು ಕಡೆಯು ವವನು, ಹಸುಗಳನ್ನು ಹುಲಿಗಳ ಕಾಟದಿಂದ ತಪ್ಪಿಸುವ ಬೇಟೆಗಾರ-ಇವರನ್ನೊಳಗೊಂಡ ತಂಡಕ್ಕೆ ತಲಾ ನೂರುನೂರು ಗೋವುಗಳನ್ನು ಮೇಯಿಸಲು ಕೂಲಿಗೆ (ನಗದುಹಣ) ಒಪ್ಪಿಸಬಹುದು. ಹಾಗಿಲ್ಲದೆ, ಇವರು ಹಾಲುಬೆಣ್ಣೆಗಳ ರೂಪದಲ್ಲಿ ಪ್ರತಿಫಲ (ಪರಿ ಹಾರ) ಪಡೆದುದಾದರೆ, ಕರುಗಳಿಗೆ ಹಾಲಿಲ್ಲದಂತೆ ಪೂರ್ತಿ ಕರೆದುಕೊಂಡು ಅವುಗಳನ್ನು ಉಪವಾಸ ಕೆಡವಿದಾರು. ಹೀಗೆ ಹಸುಗಳನ್ನು ಕೂಲಿಗಾಗಿ ಮೇಯಿಸುವುದಕ್ಕೆ ವೇತ ನೋಪಗ್ರಾಹಕವೆಂದು ಹೆಸರು (ಶ್ಲೋ. 2).

ವಯಸ್ಸಾದ ಗೋವು, ಹಾಲುಕರೆಯುವ ಹಸು, ಗಬ್ಬವಾದ ಹಸು, ಕಡಸು (ಮಣಕ) ಹಾಗೂ ಕರುಗಳು ಸಮಪ್ರಮಾಣದಲ್ಲಿರುವ ನೂರು ದನಗಳನ್ನು ಮೇಯಿಸಲು ಒಬ್ಬನಿಗೆ ವಹಿಸಿರಬಹುದು. ಇದಕ್ಕೆ ಪ್ರತಿಯಾಗಿ ಅವನು ಮಾಲೀಕನಿಗೆ ವಾರ್ಷಿಕವಾಗಿ 8 ವಾರಕಗಳಷ್ಟು ತುಪ್ಪ, ಪ್ರತಿ ದನಕ್ಕೂ ಒಂದು ಪಣ ಹಾಗೂ ಸತ್ತ ಹಸುಗಳ (ಯಾವುದಾದರೂ ಸತ್ತಲ್ಲಿ) ಗುರುತಿನ ಚರ್ಮ ಕೊಡಬೇಕಾದೀತು. ಈ ಬಗೆಯ ಒಪ್ಪಂದಕ್ಕೆ ಕರಪ್ರತಿಕರವೆಂದು ಹೆಸರು. ಎಂದರೆ ಒಂದು ನಿರ್ದಿಷ್ಟ ಪ್ರಮಾಣದ ಹೈನೋತ್ಪನ್ನಕ್ಕಾಗಿ ದನಗಳನ್ನು ಒಪ್ಪಿಸುವುದು (ಶ್ಲೋ. 3).

ರೋಗದಿಂದ ನರಳುತ್ತಿರುವ, ಹೆಳವ, ನಿರ್ದಿಷ್ಟ ವ್ಯಕ್ತಿಗೆ ಮಾತ್ರ ಹಾಲುಹಿಂಡಲು ಕೊಡುವ ಅಭ್ಯಾಸವುಳ್ಳ, ಹಾಲುಕರೆಯುವುದು ಕಷ್ಟವಿರುವ ಹಾಗೂ ತಮ್ಮ ಕರು ಗಳನ್ನೇ ಕೊಲ್ಲುವ ಹಸುಗಳನ್ನು ಸಮಸಂಖ್ಯೆಯಲ್ಲಿ ಹೊಂದಿರುವ ನೂರು ಹಸುಗಳನ್ನು ಪಾಲಿಸಲು ಜನರನ್ನು ನಿಯಮಿಸಬಹುದು. ಇದಕ್ಕೆ ಪ್ರತಿಯಾಗಿ ಅವರು ಹೈನೋತ್ಪ ನ್ನದಲ್ಲಿ ಒಂದು ನಿರ್ದಿಷ್ಟಪಾಲನ್ನು ಮಾಲೀಕನಿಗೆ ಕೊಡಬೇಕಾಗುತ್ತದೆ. ಇದಕ್ಕೆ ಭಗ್ನೋ ಟ್‌ಸ್ರಟಕವೆಂದು ಹೆಸರು. ಎಂದರೆ, ನಿಷ್ಪ್ರಯೋಜಕ ಹಾಗೂ ಪರಿತ್ಯಕ್ತ ಮಂದೆ ಎಂದು ಹೆಸರು (ಶ್ಲೋ. 4).

ಹಸುಗಳನ್ನು ಕದಿಯುವ ಶತ್ರುಗಳ ಮತ್ತು ಕಾಡುಪ್ರಾಣಿಗಳ ಭಯದಿಂದ ಅವು ಗಳ ರಕ್ಷಣೆಗೆ ಹೈನೋತ್ಪನ್ನದ 1/10 ಭಾಗವನ್ನು ಕೊಡುವ ನಿಯಮದ ಮೇಲೆ, ಗೋಮೇ

ಲ್ವಿಚಾರಕನ ವಶಕ್ಕೆ ಗೋವುಗಳನ್ನೊಪ್ಪಿಸುವುದಕ್ಕೆ ಭಾಗಾನುಪ್ರವಿಷ್ಟಕವೆಂದು ಹೆಸರು. ಎಂದರೆ ದನಗಳನ್ನು ಹೈನೋತ್ಪನ್ನದ ಪಾಲಿಗಾಗಿ ಮೇಯಿಸುವುದೆಂದರ್ಥ (ಶ್ಲೋ. 5).

ಮೊಲೆಯುಣ್ಣುವ, ಮೊಲೆಯುಣ್ಣುವುದನ್ನು ಬಿಟ್ಟ ಹೋರಿ ಕರುಗಳು, ಪಳಗಿಸಬಹುದಾದುವು, ಭಾರವೆಳೆಯುವ ಎತ್ತುಗಳು, ತಳೀಕರಣದ ಹೋರಿಗಳು, ನೊಗಕ್ಕೆ ಕಟ್ಟಬಹುದಾದುವು, ಸವಾರಿಯ ಹಾಗೂ ಗಾಡಿ ಎಳೆಯುವಂತಹವು, ಮಾಂಸದ ಕಡಸು ದನಗಳು, ಭಾರಹೊರಲು ಹಾಗೂ ಎಳೆಯುವ ಕೋಣಗಳು, ಮೊಲೆಯುಣ್ಣುವ ಹಾಗೂ ಮೊಲೆಬಿಟ್ಟ ಹೆಣ್ಣುಗರುಗಳು, ಕಡಸುಗಳು, ಗಬ್ಬದ ಹಸುಗಳು, ಹೈನದ ದನಗಳು, ಬರಡು ಇಲ್ಲವೇ ಗೊಡ್ಡು ಹಸುಗಳು, ಎಮ್ಮೆಗಳು ಹಾಗೂ ಒಂದೆರಡು ತಿಂಗಳ ಹೆಣ್ಣುಗರು ಮತ್ತು ಹೋರಿಗರುಗಳು–(ಇವು ದನಗಳ ವಿವಿಧ ವರ್ಗಗಳು) ಅವು ಒಂದೆರಡು ತಿಂಗಳಿನವಾಗಿರುವಾಗಲೇ ಅವುಗಳ ದೇಹದ ಒಂದು ಭಾಗದಲ್ಲಿ ಗುರುತಿನ ಬರೆಹಾಕಬೇಕು. ದನಗಳ ದೊಡ್ಡಿಯಲ್ಲಿ ಒಂದೆರಡು ತಿಂಗಳವರೆಗೆ ಉಳಿದ (ವಾರಸುದಾರರಿಲ್ಲದ) ದನಗಳಿಗೂ ಸಹ ಗುರುತುಮಾಡಬೇಕು. ಹಾಗೆ ಮಾಡಿದ ಗುರುತುಗಳು, ಅವುಗಳ ದೇಹದಲ್ಲಿ ಸಹಜವಾಗಿರುವ ಗುರುತುಗಳು, ಬಣ್ಣ, ಗೋವಿನ ಕೊಂಬುಗಳ ವಿಶಿಷ್ಟತೆ (ನಡುವಣ ಅಂತರ) ಮತ್ತಿತರ ದನಗಳ ವಿಶಿಷ್ಟ ಲಕ್ಷಣಗಳನ್ನು ಅವು ಇನ್ನೂ ಎಳೆಯವಾಗಿರುವಾಗಲೆ ಮೇಲ್ವಿಚಾರಕನು ದಾಖಲುಮಾಡಿಟ್ಟಿರಬೇಕು. ಇದಕ್ಕೆ ವ್ರಜ-ಪರ್ಯಗ್ರನ್ ಎಂದರೆ 'ದನಗಳ ವರ್ಗಗಳು' ಎಂದು ಹೆಸರು (ಶ್ಲೋ. 6).

ಕಳ್ಳರು ಒಂದು ಪ್ರಾಣಿಯನ್ನು ಅಪಹರಿಸಿಕೊಂಡುಹೋದರೂ, ಬೇರೆಯವರ ಮಂದೆಯಲ್ಲಿ ಸೇರಿಹೋದರೂ ಇಲ್ಲವೇ ಪತ್ತೆಯಿಲ್ಲದೆ ತಪ್ಪಿಸಿಕೊಂಡುಹೋದರೂ ಅದು ನಷ್ಟವೆನಿಸುತ್ತದೆ (ಶ್ಲೋ. 7).

ಒಂದು ಪ್ರಾಣಿಯು ಕೆಸರಿನಲ್ಲಿ(ಜೌಗು, ಉಸುಬು) ಸಿಕ್ಕಿಕೊಂಡು ಇಲ್ಲವೇ ಪ್ರಪಾತಕ್ಕೆ ಬಿದ್ದು, ರೋಗದಿಂದ, ಮುಪ್ಪಿನಿಂದ ಇಲ್ಲವೇ ನೀರಿನಲ್ಲಿ ಮುಳುಗಿ, ಇಲ್ಲವೇ ನದಿಯದಡದಲ್ಲಿ ಮರವುರುಳಿ ಬಿದ್ದುದರಿಂದಲೋ, ದೊಣ್ಣೆ ಅಥವಾ ಕಲ್ಲೇಟಿಗೆ ಸಿಕ್ಕಿ ಸಾಯಬಹುದು. ಹಾಗೆಯೇ ಹುಲಿಯ ಕೈಗೆ ಸಿಕ್ಕಿ, ಹಾವುಕಚ್ಚಿ ಇಲ್ಲವೇ ಮೊಸಳೆಬಾಯಿಗೆ ಸಿಕ್ಕಿ ಇಲ್ಲವೇ ಕಾಡ್ಗಿಚ್ಚಿನಲ್ಲಿ ಬೆಂದು ಸಾಯಬಹುದು. ಈ ಎಲ್ಲ ಬಗೆಯ ನಷ್ಟಕ್ಕೆ ವಿನಷ್ಟ ಅಥವಾ ಕೈಮಿಂಚಿದ ನಷ್ಟವೆಂದು ಹೆಸರು. ಗೋವಳರು ದನಗಳನ್ನು ಇಂಥ ಅಪಾಯಗಳಿಂದ ದೂರವಿಡಲು ಪ್ರಯತ್ನಿಸಬೇಕು(?) (ಶ್ಲೋ. 8).

ಈ ರೀತಿಯಲ್ಲಿ ಗೋವುಗಳ ಮೇಲ್ವಿಚಾರಕನು ದನಗಳನ್ನು ಕುರಿತ ಸಂಪೂರ್ಣ ಮಾಹಿತಿಯನ್ನಿಟ್ಟಿರಬೇಕು (ಶ್ಲೋ. 9).

ಗೋವಧೆ ಇಲ್ಲವೇ ಗೋವುಗಳನ್ನು ಅಪಹರಿಸಿದಾತನನ್ನು ಇಲ್ಲವೇ ಇನ್ನೊಬ್ಬರು ಅಂತಹ ಕೃತ್ಯ ಕೈಗೊಳ್ಳುವಂತೆ ಪ್ರಚೋದಿಸಿದಾತನನ್ನು ಕೊಲ್ಲಬೇಕು (ಶ್ಲೋ. 10).

ಖಾಸಗಿ ಪ್ರಾಣಿಯೊಂದನ್ನು ರಾಜಮುದ್ರೆಯೊತ್ತಿ ರಾಜ್ಯದ ಸ್ವತ್ತಾಗಿ ಮಾರ್ಪಡಿಸುವವನಿಗೆ(ಅಧಿಕಾರಿಗೆ) ಪ್ರಥಮ ದಂಡ ವಿಧಿಸಬೇಕು (ಶ್ಲೋ. 11).

ಕಳ್ಳರು ಅಪಹರಿಸಿದ್ದ ಗೋವನ್ನು(ಪ್ರಾದೇಶಿಕ) ವಶಪಡಿಸಿಕೊಂಡು ತಂದೊಪ್ಪಿಸಿದಾತನಿಗೆ ಅಂಗೀಕೃತ ಬಹುಮಾನವನ್ನು ಕೊಡಬೇಕು. ಆದರೆ ಪರದೇಶದ ಗೋವನ್ನು ರಕ್ಷಿಸಿದುದೇ ಆದರೆ ಆತನಿಗೆ ಆ ಗೋವುಗಳ ಬೆಲೆಯಲ್ಲಿ ಅರ್ಧಭಾಗವನ್ನು ಬಹುಮಾನವಾಗಿ ಕೊಡಬೇಕು (ಶ್ಲೋ. 12).

ಗೋವಳರು ಎಳಗರುಗಳು, ಮುದಿಯಾದ ಮತ್ತು ರೋಗಪೀಡಿತ ದನಗಳಿಗೆ ಔಷಧೋಪಚಾರ ಮಾಡಬೇಕು (ಶ್ಲೋ. 13).

ಕಾಡಿನಲ್ಲಿ ಬೇರೆ ಬೇರೆ ಕಾಲಗಳಿಗನುಗುಣವಾಗಿ ಮೇಯಿಸಲು ನಿಗದಿಯಾದ ಹುಲ್ಲುಗಾವಲುಗಳಲ್ಲಿ ಗೊಲ್ಲರು ದನಗಳನ್ನು ಮೇಯಿಸಬೇಕು. ಅಲ್ಲಿ ಕಳ್ಳರು, ಹುಲಿಗಳು ಮತ್ತು ಇತರ ದುಷ್ಟಮೃಗಗಳು ಇವುಗಳಿಂದ ಉಂಟಾಗಬಹುದಾದ ಅಪಾಯವನ್ನು ಬೇಡರು ತಮ್ಮ ಬೇಟೆನಾಯಿಗಳೊಡನೆ ಬೇಟೆಯಾಡುತ್ತ ತಪ್ಪಿಸಬೇಕು (ಶ್ಲೋ. 14).

ಹುಲಿ, ಹಾವುಗಳನ್ನು ಹೆದರಿಸಲೆಂದು ಹಾಗೂ ದನ ಎಲ್ಲಿ ಮೇಯುತ್ತಿದೆಯೆಂದು ತಿಳಿಯಲು ಶಬ್ದ ಮಾಡುವ ಕೊರಳುಗಂಟೆಗಳನ್ನು ಸಾಧು ಗೋವುಗಳ ಕುತ್ತಿಗೆಯಲ್ಲಿ ಕಟ್ಟಬೇಕು (ಶ್ಲೋ. 15).

ಎಲ್ಲೆಡೆಯಲ್ಲೂ ಒಂದೇ ಸಮವಾದ ಆಳವುಳ್ಳ ನದೀಸರೋವರಗಳಲ್ಲಿ, ಕೆಸರಿಲ್ಲದೆಡೆಗಳಲ್ಲಿ ಮೊಸಳೆಗಳ ಭಯವಿಲ್ಲದಿರುವುದನ್ನು ನೋಡಿ ಗೊಲ್ಲರು ಗೋವುಗಳನ್ನು ನೀರಿಗೆ (ಕುಡಿಯಲು ಇಲ್ಲವೇ ಸ್ನಾನಕ್ಕಾಗಿ) ಬಿಡಬೇಕು. ಅಂತಹ ಸಂದರ್ಭಗಳಲ್ಲಿ ಅವುಗಳಿಗೆ ಒದಗಬಹುದಾದ ಅಪಾಯಗಳಿಂದ ಅವುಗಳನ್ನು ಸದಾ ಕಾಪಾಡಬೇಕು (ಶ್ಲೋ. 16).

ಯಾವ ಪ್ರಾಣಿಯನ್ನಾದರೂ ಕಳ್ಳರು, ಹುಲಿ, ಹಾವು, ಮೊಸಳೆ ಇವು ಹಿಡಿದಾಗ ಅಥವಾ ರೋಗ ಇಲ್ಲವೇ ಮುಪ್ಪಿನಿಂದ ತೀರಿಕೊಂಡಾಗ ಸುದ್ದಿಯನ್ನು ಗೋವುಗಳ ಮೇಲ್ವಿಚಾರಕನಿಗೆ ತಿಳಿಸಬೇಕು. ಇಲ್ಲದ ಪಕ್ಷದಲ್ಲಿ ಅವರು ನಷ್ಟವನ್ನು ತುಂಬಿಕೊಡಬೇಕಾಗುತ್ತದೆ (ಶ್ಲೋ. 17).

ಒಂದು ಪ್ರಾಣಿಯು ಕಾರಣಾಂತರದಿಂದ (ಸಹಜವಾಗಿ) ಸತ್ತರೆ, ಗೋವಳರು ಅದು ಹಸು ಇಲ್ಲವೇ ಎಮ್ಮೆಯಾಗಿದ್ದಲ್ಲಿ ಗುರುತುಮಾಡಿದ ಚರ್ಮವನ್ನು ಸಾಕ್ಷಿಯಾಗಿ ತಂದೊಪ್ಪಿಸಬೇಕು (ಗೋವುಗಳ ಮೇಲ್ವಿಚಾರಕನಿಗೆ); ಅದು ಆಡು ಇಲ್ಲವೇ ಕುರಿಯಾಗಿದ್ದಲ್ಲಿ ಗುರುತುಮಾಡಿದ ಕಿವಿಗಳು; ಅದು ಕುದುರೆ, ಕತ್ತೆ ಇಲ್ಲವೇ ಒಂಟೆಯಾಗಿದ್ದಲ್ಲಿ ಬಾಲ ಹಾಗೂ ಗುರುತಿನ ಚರ್ಮಗಳನ್ನು ಒಪ್ಪಿಸಬೇಕು. ಜೊತೆಗೆ, ಅವುಗಳ ಕೂದಲು, ಚರ್ಮ, ಮೂತ್ರಪಿಂಡ, ಪಿತ್ತಕೋಶ, ಸ್ನಾಯುಗಳು, ಹಲ್ಲು, ಗೊರಸು, ಕೊಂಬು ಮತ್ತು ಮೂಳೆ ಇವುಗಳನ್ನು ಸಹ ತೆಗೆದು ಒಪ್ಪಿಸಬೇಕು (ಶ್ಲೋ. 18).

ಅವರು ಪ್ರಾಣಿಗಳ ಹಸಿಯಾದ ಇಲ್ಲವೇ ಒಣಮಾಂಸವನ್ನು ಮಾರಾಟಮಾಡಬಹುದು (ಶ್ಲೋ. 19).

ಅವರು ನಾಯಿಗಳಿಗೂ ಕಾಡುಹಂದಿಗಳಿಗೂ ಕುಡಿಯಲು ಮಜ್ಜಿಗೆಯನ್ನು ಕೊಡಬಹುದು (ಶ್ಲೋ. 20).

ಕಂಚಿನ ಪಾತ್ರೆಯಲ್ಲಿ ಸ್ವಲ್ಪಭಾಗವನ್ನು (ಮಜ್ಜಿಗೆ) ತಮ್ಮ ಆಹಾರಕ್ಕಾಗಿ ಉಳಿಸಿಕೊಳ್ಳಬೇಕು (ಶ್ಲೋ. 21).

ಹೆಪ್ಪು ಅಥವಾ ಗಿಣ್ಣುಹಾಲನ್ನು ಮೇವು ಮತ್ತು ಹಿಂಡಿಗಳನ್ನು ನೆನೆಸಲು ಬಳಸಬಹುದು (ಶ್ಲೋ. 22).

ಮಂದೆಯಲ್ಲಿ ಮೇಯಿಸಲು ಬಿಟ್ಟಿರುವ ತನ್ನ ಹಸುವನ್ನು ಒಬ್ಬನು ಮಾರಲಿಚ್ಛಿಸಿದಲ್ಲಿ, ಅದರ ಬೆಲೆಯಲ್ಲಿ ಕಾಲುಭಾಗವನ್ನು ಗೋಮೇಲ್ವಿಚಾರಕನಿಗೆ ಕೊಡಬೇಕು (ಶ್ಲೋ. 23).

ಮಳೆಗಾಲ, ಬೇಸಿಗೆ ಹಾಗೂ ಮಂಜು ಕಾಲಗಳ ಎರಡೂ ಹೊತ್ತೂ (ಬೆಳಿಗ್ಗೆ, ಸಂಜೆ) ಹಾಲು ಕರೆಯಬೇಕು; ಚಳಿಗಾಲ, ವಸಂತ ಹಾಗೂ ಬೇಸಿಗೆಗಳಲ್ಲಿ ಒಂದುವೇಳೆ (ಎಂದರೆ ಬೆಳಿಗ್ಗೆಮಾತ್ರ) ಹಾಲು ಕರೆಯಬೇಕು. ಈ ದಿನಗಳಲ್ಲಿ ಎರಡುವೇಳೆ ಹಾಲುಕರೆಯುವವನಿಗೆ ಹೆಬ್ಬೆರಳು ಕತ್ತರಿಸಬೇಕು (ಶ್ಲೋ. 24).

ಹಾಲು ಕರೆಯುವ ಸಮಯ ಮೀರಿತೆಂದರೆ, ಆ ಸಮಯದ ಕೂಲಿಯನ್ನು (ಸಂಭಾವನೆ) ಕಳೆದುಕೊಳ್ಳುತ್ತಾನೆ (ಶ್ಲೋ. 25).

ಪ್ರಾಣಿಗೆ ಮೂಗುದಾರಹಾಕುವುವದರಲ್ಲಿ, ಪಳಗಿಸುವುದರಲ್ಲಿ, ನೊಗಕ್ಕೆ ಹೂಡುವು

ದರಲ್ಲಿ, ಹೊಸ ಪ್ರಾಣಿಯನ್ನು ಒಗ್ಗಿಸುವುದರಲ್ಲಿ (ಹಳೆಯದರೊಡನೆ ದುಡಿಯಲು) ಇಲ್ಲವೇ ತರಬೇತಿ ಕೊಡುವುದರಲ್ಲಿ ತೋರುವ ಅಲಕ್ಷ್ಯತೆಗೂ ಸಹ ಇದೇ ಶಿಕ್ಷೆಯು (ಸಂಭಾವನೆ ಮುಟ್ಟುಗೋಲು ಹಾಕುವಿಕೆ) ಅನ್ವಯಿಸುತ್ತದೆ (ಶ್ಲೋ. 26).

ಒಂದು 'ದ್ರೋಣ' ಪ್ರಮಾಣದ ಗೋವಿನ ಹಾಲಿನಿಂದ ಒಂದು 'ಪ್ರಸ್ಥ' ತುಪ್ಪ ಬರುತ್ತದೆ; ಇಷ್ಟೇ ಪ್ರಮಾಣದ ಎಮ್ಮೆ ಹಾಲಿನಲ್ಲಿ 1/5 ಭಾಗದಷ್ಟು ಹೆಚ್ಚು ತುಪ್ಪ ಬರುತ್ತದೆ, ಹಾಗೂ ಆಡು ಮತ್ತು ಕುರಿಗಳಲ್ಲಿ 2/5 ಭಾಗ ಹೆಚ್ಚು ತುಪ್ಪ ಬರುತ್ತದೆ (ಶ್ಲೋ. 27).

ಎಲ್ಲ ಬಗೆಯ ಹಾಲುಗಳನ್ನು ಕಡೆದಾಗ ನಿರ್ದಿಷ್ಟ ಪ್ರಮಾಣದ ತುಪ್ಪ ಎಷ್ಟೆಂದು ನಿರ್ಧರಿಸಬಹುದು. ಹಾಲು ತುಪ್ಪಗಳ ಇಳುವರಿ ಹೆಚ್ಚಳವು ಮಣ್ಣಿನ ಸ್ವಭಾವ ಹಾಗೂ ಹುಲ್ಲುನೀರುಗಳ ಗುಣಮಟ್ಟವನ್ನವಲಂಬಿಸಿರುತ್ತದೆ (ಶ್ಲೋ. 28).

ಒಬ್ಬನು ಮಂದೆಯಲ್ಲಿರುವ ಹೋರಿಯನ್ನು ಮತ್ತೊಂದರೊಡನೆ ಕಾದಾಡಲು ಬಿಟ್ಟರೆ, ಅವನಿಗೆ ಪ್ರಥಮ ದಂಡನೆಯನ್ನು ವಿಧಿಸಬೇಕು (ಶ್ಲೋ. 29).

ಆ ಸಂದರ್ಭದಲ್ಲಿ ಹೋರಿಗೆ ಅಪಾಯ ಸಂಭವಿಸಿದುದಾದರೆ ಅವನಿಗೆ ಉಗ್ರಶಿಕ್ಷೆ ವಿಧಿಸಬೇಕು (ಶ್ಲೋ. 30).

ನೂರು ದನಗಳ ಹಿಂಡನ್ನು ಮೇಯಿಸುವಾಗ ಒಂದೇ ಬಣ್ಣದ ಹತ್ತು ರಾಸುಗಳ ಗುಂಪಾಗಿ ವಿಂಗಡಿಸಿ ಗೋವಳರ ರಕ್ಷೆಗೆ ಬಿಡಬೇಕು (ಶ್ಲೋ. 31).

ಗೋವಳರು ತಮ್ಮ ರಕ್ಷಣಾಶಕ್ತಿಗನುಗುಣವಾಗಿ ಹಾಗೂ ಗೋವುಗಳು ಎಷ್ಟು ದೂರ ಹೋಗಲು ಶಕ್ತವಾಗಿರುವವೋ ಅದಕ್ಕನುಗುಣವಾಗಿ ಅವರು ಗೋವುಗಳನ್ನು ದೂರದ ಇಲ್ಲವೇ ಸಮೀಪದ ಹುಲ್ಲುಗಾವಲಿಗೆ ಒಯ್ಯುತ್ತಾರೆ (ಶ್ಲೋ. 32).

ಆಡು ಮುಂತಾದುವುಗಳಿಂದ ಆರು ತಿಂಗಳಿಗೊಂದು ಬಾರಿ ಉಣ್ಣೆ ಕತ್ತರಿಸಬೇಕು. ಕುದುರೆ, ಕತ್ತೆ, ಒಂಟೆ ಮತ್ತು ಹಂದಿಗಳಿಗೂ ಸಹ ಇದೇ ನಿಯಮ ಅನ್ವಯಿಸುತ್ತದೆ (ಶ್ಲೋ. 33–34).

ಮೂಗುದಾರವಿರುವ ಹಾಗೂ ವೇಗದಲ್ಲೂ ಭಾರ ಹೊರುವುದರಲ್ಲೂ ಕುದುರೆಗೆ ಸಮಾನವಾದ ಹೋರಿಗಳಿಗೆ ಅರ್ಧಭಾರ (= 2000ಪಲ)ದಷ್ಟು ಹಸಿಹುಲ್ಲನ್ನೂ ಅದರ ಎರಡರಷ್ಟು ಒಣಹುಲ್ಲನ್ನೂ, ಒಂದು ಟುಟ (100 ಪಲ)ದಷ್ಟು ಕಾಳು,

ಐದು ಪಲ ಉಪ್ಪು, ಮೂಗಿನ ಹತ್ತಿರ ಉಜ್ಜಲಿಕ್ಕಾಗಿ 1 ಕುಡುಂಬದಷ್ಟು ಎಣ್ಣೆ, ಹಾಗೂ ಕುಡಿಯಲು ಅದೇ (ಅದನ್ನೆ) ಒಂದು ಪ್ರಸ್ಥದಷ್ಟು ಸಾಮಾನ್ಯ ಆಹಾರವಾಗಿ ಕೊಡಬೇಕು. ಇದರ ಜೊತೆಗೆ ಒಂದು ತುಲಾ ಮಾಂಸ, ಒಂದು ಆಢಕ ಮೊಸರು, ಒಂದು ದ್ರೋಣ ಬಾರ್ಲಿ ಇಲ್ಲವೇ ಫೇಸಿಯೋಲಸ್ ರೇಡಿಯೇಟಸ್ ಸಹ ಕೊಡಬಹುದು. ಅಲ್ಲದೆ ಒಂದು ದ್ರೋಣ ಹಾಲು ಇಲ್ಲದೇ ಒಂದ ಆಢಕ ದಷ್ಟು ಮದ್ಯವನ್ನು (ಒಂದು ಪ್ರಸ್ಥ ಎಣ್ಣೆಗೆ ಬದಲು) ಹತ್ತು ಪಲ ಬೆಲ್ಲ ಮತ್ತು ಒಂದು ಪಲ ಒಣಶುಂಠಿಯನ್ನು ಪಾನೀಯಮಾಡಿ ನಿತ್ಯವೂ ಕೊಡಬೇಕು (ಇದರಿಂದ ಆಹಾರ ಜೀರ್ಣವಾಗಲೂ ಹಾಗೂ ಚೆನ್ನಾಗಿ ಹಸಿವಾಗಲು ನೆರವಾಗುತ್ತದೆ) (ಶ್ಲೋ. 35).

ಇದೇ ಆಹಾರಪದಾರ್ಥಗಳನ್ನು ಕಾಲುಭಾಗದಷ್ಟು ಕಡಮೆಮಾಡಿ ಹೇಸರಗತ್ತೆ ಮತ್ತು ದೊಡ್ಡ ಕತ್ತೆಗಳಿಗೆ ಆಹಾರವಾಗಿ ಕೊಡಬೇಕು. ಇದರ ಎರಡು ಪಾಲು ಆಹಾರವನ್ನು ಎಮ್ಮೆ ಮತ್ತು ಒಂಟೆಗಳಿಗೆ ಕೊಡಬೇಕು (ಶ್ಲೋ. 36).

ಭಾರವೆಳೆಯುವ ಎತ್ತುಗಳಿಗೂ ಹಾಲುಕರೆಯುವ ಹಸುಗಳಿಗೂ ಅವು ಎಷ್ಟು ಕಾಲ ದುಡಿಮೆಮಾಡುತ್ತವೆ ಹಾಗೂ ಹಸುಗಳು ಎಷ್ಟು ಇಳುವರಿ ಹಾಲು ಕೊಡುತ್ತವೆ ಎಂಬುದಕ್ಕನುಗುಣವಾಗಿ ಆಹಾರ ಉಣಿಸಲಾಗುತ್ತದೆ (ಶ್ಲೋ. 37).

ಎಲ್ಲ ದನಗಳಿಗೂ ಮನದಣಿಯೆ ಹುಲ್ಲುನೀರುಗಳನ್ನು ಕೊಡಬೇಕು (ಶ್ಲೋ. 38).

ಇಲ್ಲಿಗೆ ದನಗಳ ಮಂದೆಯನ್ನು ಪಾಲಿಸುವ ವಿವರವು ಮುಗಿಯಿತು (ಶ್ಲೋ. 39).

ನೂರು ಕತ್ತೆ ಮತ್ತು ಹೇಸರಗತ್ತೆಗಳ ಮಂದೆಯಲ್ಲಿ ಐದು ಗಂಡುಗತ್ತೆಗಳೂ ಕುರಿಮೇಕೆಗಳ ಮಂದೆಯಲ್ಲಿ ಹತ್ತು ಟಗರುಗಳೂ ಹಸುಗಳು, ಎಮ್ಮೆಗಳು ಮತ್ತು ಒಂಟೆಗಳಲ್ಲಿ ತಲಾ ನಾಲ್ಕು ನಾಲ್ಕು ತಳಿಎಬ್ಬಿಸುವ ಗಂಡುಪ್ರಾಣಿಗಳೂ ಇರಬೇಕು (ಶ್ಲೋ. 40).

ಅಧ್ಯಾಯ 13

ದನಗಳ ಸಂರಕ್ಷಣೆ ಹಾಗೂ ಪ್ರಾಣಿಜನ್ಯ ಆಹಾರಬಳಕೆ

ಹಿಂದಿನ ಕಾಲದಲ್ಲಿ ಪ್ರಾಣಿಗಳ ಮಾಂಸವನ್ನು ಸೇವಿಸುವುದು ಅಪರೂಪದ ಮಾತಾಗಿತ್ತು. ಆದಾಗ್ಯೂ ಕೆಲವು ಅನಿವಾರ್ಯ ಪ್ರಸಂಗಗಳಲ್ಲಿ, ಅದರ ಬಳಕೆಗೆ ಸಮಾಜದಲ್ಲಿ ಅವಕಾಶವಿದ್ದಿತು. ವಿಧಿ, ಸಾಂಪ್ರದಾಯಿಕ ಸಮಾರಂಭಗಳಲ್ಲಿ ಬಿಟ್ಟು ಉಳಿದಂತೆ ಮಾಂಸಾಹಾರ ಸೇವನೆಮಾಡುತ್ತಿದ್ದ ಉದಾಹರಣೆಗಳು ಪ್ರಾಚೀನ ಸಾಹಿತ್ಯದಲ್ಲಿ ದೊರಕುತ್ತವೆ. ಹಳೆಯ ಧರ್ಮಶಾಸ್ತ್ರಗ್ರಂಥಗಳಲ್ಲಿ ಮಾಂಸಾಹಾರ ಸೇವನೆಯನ್ನು ಖಂಡಿತವಾಗಿ ನಿಷೇಧಿಸಲಾಗಿದೆ ; ಅಲ್ಲಿ ಶಾಸ್ತ್ರಸಮ್ಮತವಾಗಿ ಎಂದರೆ ವೈದಿಕ ಮತಾಚರಣೆ ಹಾಗೂ ಯಜ್ಞಯಾಗಾದಿಗಳಲ್ಲಿ ತೆಗೆದುಕೊಳ್ಳದಿದ್ದಲ್ಲಿ ಪಾಪಪರಿಹಾರ (ಪ್ರಾಯಶ್ಚಿತ್ತ) ಹಾಗೂ ಶಾಶ್ವತ ಅಧಃಪತನದ ಎಚ್ಚರಿಕೆ ಇದೆ (ವಿಷ್ಣು LL. 59-78; ಮನು IV, 83-52; ಯಾಜ್ಞವಲ್ಕ I, 980 f).

ಆರ್ಥಿಕ ದೃಷ್ಟಿಯಿಂದ ಸಂರಕ್ಷಣೆ

ಎ. ಜೋನ್ಸ್‌ರವರು ತಮ್ಮ 'ಸೋಷಿಯಲ್ ಅಂಡ್ ರೂರಲ್ ಎಕಾನಮಿ ಆಫ್ ನಾರ್ದನ್ ಇಂಡಿಯಾ' ಎಂಬ ಕೃತಿಯಲ್ಲಿ ನೈತಿಕ ಹಾಗೂ ಆರ್ಥಿಕ ದೃಷ್ಟಿಯಿಂದ ದನಗಳ ಸಂರಕ್ಷಣೆಯನ್ನು ಕುರಿತು ವಿವರವಾಗಿ ತಿಳಿಸಿದ್ದಾರೆ. ಆ ಪುಸ್ತಕದಿಂದ ಕೆಲವು ಮುಖ್ಯ ಭಾಗಗಳನ್ನು ಇಲ್ಲಿ ಕೊಟ್ಟಿದೆ:

ಆದರೆ ಅಹಿಂಸಾತತ್ವ ಅಥವಾ ಭಾವನೆಯು ಪ್ರಾಣಿವಧೆಯನ್ನು ನಿಲ್ಲಿಸಲಾಗಲಿಲ್ಲ– ಬ್ರಾಹ್ಮಣರಲ್ಲಿ ಯಜ್ಞಯಾಗಾದಿಗಳಲ್ಲೂ, ಕ್ಷತ್ರಿಯರಲ್ಲಿ ಬೇಟೆಯ ಮೋಜಿನಲ್ಲೂ, ಉಳಿದ ಎಲ್ಲ ವರ್ಗಗಳ ಜನಸಾಮಾನ್ಯರಲ್ಲಿ ಆಹಾರ ಹಾಗೂ ತೊಗಲು, ಪುಕ್ಕ, ಮೂಳೆ, ಕೊಂಬು, ಗೊರಸು ಇತ್ಯಾದಿ ಶ್ರೀಮಂತ ವಸ್ತುಗಳ ತಯಾರಿಕೆ ಹಾಗೂ ಬಳಕೆಗೆಂದೂ ಪ್ರಾಣಿವಧೆ ನಡೆಯುತ್ತಿತ್ತು (Jacobi, J.S., I. p. 12).

ಮಹಾಭಾರತದಲ್ಲಿ ಅಹಿಂಸೆಯ ಶ್ರೇಷ್ಠತೆಯನ್ನು ಮತ್ತು ಮಾಂಸಾಹಾರ ವರ್ಜನೆ (XIII. 115 f.)ಯನ್ನು ಕುರಿತು ಒಂದು ಸುದೀರ್ಘ ಉಪನ್ಯಾಸವಿದೆ. ಆದರೆ ಯಜ್ಞಯಾಗಾದಿಗಳಲ್ಲೂ ರಾಜರುಗಳ ಬೇಟೆಯ ಕ್ರೀಡೆಗಳಿಗೂ ವಿನಾಯಿತಿ ನೀಡಲಾಗಿದೆ.

ಯಜ್ಞಯಾಗಾದಿಗಳಲ್ಲಿ ಪ್ರಾಣಿವಧೆಯ ವಿರುದ್ಧ ಬ್ರಾಹ್ಮಣರ ಪ್ರತಿಭಟನೆಯ ವಿಚಾರವಾಗಿ ಅಲ್ಪಸ್ವಲ್ಪ ಸುಳಿವು ದೊರೆಯುತ್ತದೆ. ಆದರೆ ಈ ಅರೆಮನಸ್ಸಿನ ಹಾಗೂ ಪರತ್ರಿನ ತಪ್ಪೊಪ್ಪಿಕೆಗಳು ಬೌದ್ಧರ ಪ್ರಭಾವದಿಂದ ಸ್ಫೂರ್ತಿ ಪಡೆದುದಾಗಿರಬೇಕು (ಮಹಾಭಾರತ XII 264; 338, 4 ff; XIV. 91) ಧರ್ಮಶಾಸ್ತ್ರಕಾರರು ಬ್ರಾಹ್ಮಣರ ಮಾರ್ಗದರ್ಶನಕ್ಕಾಗಿಯೇ ಶಾಸನಗಳನ್ನು ವಿಧಿಸಿದರು. ಮನು ಅನಿವಾರ್ಯ, ಸಂದರ್ಭಗಳಲ್ಲಿ ಇವಕ್ಕಾಗಿ ಕಟುಕ (ಮಾಂಸವಿಕ್ರಯಿನ್, III. 151)ನನ್ನು ಕರೆಸಿ ಮಾಡುವುದಕ್ಕೂ ಅವಕಾಶವಿತ್ತಿದ್ದಾನೆ. ಬುದ್ಧನೂ ಸಹ ತನ್ನ ಶಿಷ್ಯರು ಮೂರು ಸಂದರ್ಭಗಳಲ್ಲಿ ಅಂದರೆ ಕಾಣದೆ, ಕೇಳದೆ ಅಥವಾ ಸಂಶಯಬರದಾಗ ಮೀನು ಮತ್ತು ಮಾಂಸಗಳನ್ನು ತಿನ್ನಬಹುದೆಂದು ತಿಳಿಸುತ್ತಾನೆ (Mv. 31.14; Mn. 55). ಮೇಲೆ ತಿಳಿಸಿದ ಉದ್ದೇಶಗಳಿಗಾಗಿ ಪ್ರಾಣಿಸಂಕುಲನಾಶವನ್ನು ತಡೆಯುವ ಬಗ್ಗೆ ಅತ್ಯಲ್ಪ ಆಧಾರಗಳು ಕಂಡುಬರುತ್ತವೆ. ಬೇಟೆಯನ್ನೇ ಕಸುಬಾಗಿ ಸ್ವೀಕರಿಸಿದವರಿಗೆ ಮತ್ತು ಮಾಂಸಾಹಾರ ಒದಗಿಸುತ್ತಿದ್ದವರಿಗೆ ದೊರಕುತ್ತಿದ್ದ ಸಾಮಾಜಿಕ ಸ್ಥಾನ (ನಿಷಾದ, ಕಿರಾತ, ಪೆದ್ದಕ, ಲುದ್ಧಕ)ವು ಮಹಾಕಾವ್ಯ ಹಾಗೂ ಜಾತಕದ ಕಥೆಗಳಲ್ಲಿ ಕಂಡುಬರುತ್ತದೆ. ಇವು ಪ್ರಾಣಿ ಸಂರಕ್ಷಣೆಯಲ್ಲಿ ಅಂಶಮಾತ್ರವಾಗಿರುವುದು. ಈ ವಿಚಾರವಾಗಿ ಮೆಗಾಸ್ತನೀಸನು 'ಬೇಟೆಗಾರರಿಗೆ ಮಾತ್ರ ಬೇಟೆಗೆ ಅನುಮತಿಯಿತ್ತು' ಎಂದು ತಿಳಿಸುತ್ತಾನೆ (Str. XV. i 41). ಇದು ಪ್ರಾಯಶಃ ಬೇಟೆಯು ಕೆಳವರ್ಗದ ಜಾತಿಯವರ ವೃತ್ತಿಯಾಗಿದ್ದುದನ್ನು ತೋರಿಸುತ್ತದೆ (ಬೇಟೆಯನ್ನೇ ಜೀವನೋಪಾಯವಾಗಿ ಆಧರಿಸಿದ ಕ್ಷುದ್ರ ವರ್ಗದವರನ್ನು ಬಿಟ್ಟಂತೆ, ರಾಜರು ನಾಯಕ(ಹೆಗ್ಗಡೆ)ರುಗಳು ಕ್ರೀಡೆಗಾಗಿ ಬೇಟೆಯಾಡುತ್ತಿದ್ದರು. ಕೃಷಿಕರು ಮತ್ತು ವ್ಯಾಪಾರಿಗಳು ಇದರಲ್ಲಿ ವ್ಯವಹರಿಸಿರುವುದು ಕಂಡುಬರುವುದಿಲ್ಲ; ಹೀಗೆ ಒಂದು ವೇಳೆ ಈ ವೃತ್ತಿಯನ್ನು ಅವರೇನಾದರೂ ಜೀವನಾಧಾರಿತ ವೃತ್ತಿಯಾಗಿ ಸ್ವೀಕರಿಸಿದುದಾದರೆ, ಕೂಡಲೇ ಅವರಿಗೆ ಹೀನತೆಯ ಪಟ್ಟ ಕಟ್ಟುತ್ತಿದ್ದರು). ಮಹಾಭಾರತದಲ್ಲಿಯ ಒಂದು ದಂತಕಥೆಯಲ್ಲಿ ಯುಧಿಷ್ಠಿರನು (ಧರ್ಮರಾಯನು) ತಾವು ವನವಾಸಕಾಲದಲ್ಲಿ ಕಾಡಿನಲ್ಲಿ ಬೇಟೆಯಿಂದ ಜೀವಿಸುತ್ತಿರುವಾಗ ಆ ಕಾಡಿನ ಅಲ್ಪಸ್ವಲ್ಪ ಉಳಿದ ಪ್ರಾಣಿಗಳ ಜೀವದಾನಮಾಡಿ, ಸೋದರರೊಡನೆ ಕಾಡುಪ್ರಾಣಿಗಳಿಂದ ತುಂಬಿದ್ದ ಕಾಮ್ಯಕ ವನಕ್ಕೆ ತೆರಳಿದನೆಂದು ತಿಳಿದುಬರುತ್ತದೆ (II. 256). ಯಜ್ಞಯಾಗಾದಿಗಳಲ್ಲಿ ಅರ್ಪಿಸುತ್ತಿದ್ದ ಪ್ರಾಣಿಬಲಿಯನ್ನು ತಪ್ಪಿಸುವುದರಲ್ಲಿ ಬುದ್ಧನ ಉಪದೇಶವು ಕೆಲಕಾಲದವರೆಗೆ ಪರಿಣಾಮಕಾರಿಯಾಗಿದ್ದುದು ನಿಸ್ಸಂಶಯ. ಬುದ್ಧನ ಪ್ರಭಾವಕ್ಕೊಳಗಾಗಿ ಅಶೋಕ ಹಾಗೂ ಹರ್ಷವರ್ಧನರಂತಹ ಕೆಲವು ಬಲಿಷ್ಠ ಚಕ್ರವರ್ತಿಗಳು ಪ್ರಾಣಿವಧೆಯನ್ನು ನಿಷೇಧಿಸಲು ಕ್ರಮಕೈಗೊಂಡರು. ಆದರೆ ಇವು ಅನವಶ್ಯಕ ಕ್ರೌರ್ಯ ಹಾಗೂ ಸ್ವೇಚ್ಛಾವಧೆಗಳ ವಿರುದ್ಧಮಾತ್ರವಾಗಿತ್ತು.

ಆದರೆ, ಅವರು ಮಾಂಸಾಹಾರ ಸೇವನೆ ನಿಷೇಧಿಸಬೇಕೆಂಬ ವಿಚಾರದಲ್ಲಿ ತಲೆಹಾಕಲಿಲ್ಲ, ಮಾತ್ರವಲ್ಲ ಪ್ರಾಣಿಗಳ ಜೀವದ ವಿಚಾರವಾಗಿ ತಮ್ಮ ಪ್ರತಿಬಂಧಕಾಜ್ಞೆಗಳಲ್ಲಿ ವಿಶೇಷ ಪಾವಿತ್ರ್ಯತೆಯನ್ನೂ ಉಲ್ಲೇಖಿಸಲಿಲ್ಲ.

'ಬ್ರಾಹ್ಮಣರು ಮಾಂಸಸೇವನೆ ಮಾಡುತ್ತಾರೆ, ಆದರೆ ದುಡಿಮೆಗೆ ಬಳಸುವ ಪ್ರಾಣಿಗಳದಲ್ಲ, (XV.i,59) ಎಂಬ ಮೆಗಾಸ್ತನೀಸನ ಹೇಳಿಕೆಮೇಲೆ ಸ್ಟ್ರಾಬೋರ್‌ರವರ ಟಿಪ್ಪಣಿಯಲ್ಲಿ ಸತ್ಯವೇನೇ ಇರಲಿ ಆರೋಗ್ಯಕರ, ಆರ್ಥಿಕ ದೃಷ್ಟಿಯಲ್ಲಿ ಮಾಂಸಾಹಾರ ಸೇವನೆಗೆ ಮನ್ನಣೆ ನೀಡಿರುವುದನ್ನು ತೋರಿಸುತ್ತದೆ. ಅಶೋಕನ ಸುಧಾರಣೆಗಳು ಶುದ್ಧ ಲೋಕ ಹಿತಾರ್ಥವಾದುವೇನಲ್ಲ. ಅವನು ಮನುಷ್ಯರಂತೆಯೇ ಪ್ರಾಣಿಗಳಿಗೂ ಆಹಾರ ಸೌಕರ್ಯ ಹಾಗೂ ವೈದ್ಯಕೀಯ ಉಪಚಾರಗಳಿರಬೇಕೆಂದು ಬಯಸುತ್ತಿದ್ದ (R. E. II; P. E. VII). ಆತ ದ್ವಿಪಾದಿಗಳು, ಚತುಷ್ಪಾದಿಗಳು, ಪಕ್ಷಿಗಳು ಮತ್ತು ಜಲಜೀವಿಗಳಿಗೆ 'ಜೀವದಾನ' ಮಾಡಿದಷ್ಟರಮಟ್ಟಿಗೆ ವಿವಿಧಾನುಕೂಲತೆಗಳನ್ನು ಕಲ್ಪಿಸಿಕೊಟ್ಟುದಾಗಿ ಹೆಮ್ಮೆ ಪಟ್ಟುಕೊಳ್ಳುತ್ತಾನೆ a Panadakhinaya, P. E. II). ಆದರೆ ತನ್ನ ಹೆಸರಾಂತ ಭೋಗವರ್ಜನ ಶಾಸನದಲ್ಲಿ (Abstinance ordinance) ಈ ಮುಂದೆ ತಿಳಿಸುವ ಕೆಲವು ಪ್ರಾಣಿಗಳ ವಿಚಾರದಲ್ಲಿ ನಿಯಮೋಲ್ಲಂಘನೆ ಮಾಡಬಾರದೆಂದು ತಿಳಿಸಿದ್ದಾನೆ–ಅವು ಶುಕ (ಗಿಳಿ), ಸಾರಿಕ (ಮೈನಾ), ಅಲುನ (? , ಚಕ್ರವಾಕ (ಕೆಂಬಾತು), ಹಂಸ (ಕಾಡು ಬಾತುಕೋಳಿ), ನಂದಿಮುಖ (ಒಂದು ಜಾತಿ ಪಕ್ಷಿ), ಜೆಲಾಟ (?), ಜಾತುಕ (ಬಾವಲಿ), ಅಂಬಾಕಪಿಲಿಕ (ರಾಣಿ ಇರುವೆ), ದಾಳಿ (ಸೀಸೀರಾಮು), ಅನಠಿಕ ಮತ್ಸ್ಯ (ಲೋಳೆ ಮೀನು, ಅಂಬಲಿಮೀನು), ವೇದವಿಯಕ (?), ಗಂಗಾಪುಪುಟಕ (?), ಸಂಕುಜಮತ್ಸ್ಯ (ಜಾರುಮೀನು), ಕಫಟಸಾಯಕ (ಮುಳ್ಳುಹಂದಿ), ಪಮ್ನಸಸ (ಅಳಿಲು ?), ಸಿಮಲ (?), ಸವ ದಕ (ಕಾಡುಗೂಳಿ), ಓಕಪಿಂಡ (ಉಡ ?), ಪಲಸಟ (ಖಡ್ಗಮೃಗ), ಸಿತ ಕಪೋತ (ಬಿಳಿ ಪಾರಿವಾಳ), ಗಾಮ ಕಪೋತ (ಸಾಕುಪಾರಿವಾಳ)ಗಳಾಗಿವೆ. ಇದರ ಜೊತೆಗೆ ಆತ 'ಉಪಯೋಗಕ್ಕೂ ಬಾರದ ಹಾಗೂ ತಿನ್ನಲೂ ಆಗದಂತಹವು' ಎಂಬ ಪರತ್ತನ್ನೂ ಸೇರಿಸುತ್ತಾನೆ (yapatibhogam no eti na ca khadiyati, P E V . ಈ ಶಾಸನದ ಉದ್ದೇಶ(ಸಾರ)ವು ಪರೋಪಕಾರಾರ್ಥವಾಗಿರುವುದಕ್ಕಿಂತಲೂ ಆರ್ಥಿಕತೆಯನ್ನೊಳಗೊಂಡಿರುವುದು ವ್ಯಕ್ತವಾಗುತ್ತದೆ. ಇದು ಅರಣ್ಯಶಾಸನದಿಂದ ಇನ್ನಷ್ಟು ಸ್ಪಷ್ಟವಾಗುತ್ತದೆ–'ಅರಣ್ಯಗಳನ್ನು ಉಪಯೋಗದೃಷ್ಟಿಯಿಲ್ಲದೆ ಅಥವಾ ಜೀವಂತ ಪ್ರಾಣಿಗಳನ್ನು ಕೊಲ್ಲಬೇಕೆಂದು ಸುಡಬಾರದು'; ಇತರ ನಿಷೇದಾಜ್ಞೆಗಳು ಗಬ್ಬದ ಹಾಗೂ ಹೈನದ ಆಡುಗಳು, ಕುರಿಗಳು ಮತ್ತು ಹಂದಿಗಳು ಆರು ತಿಂಗಳೊಳಗಿನ ಮರಿಗಳನ್ನು ಕುರಿತುದಾಗಿವೆ. ಹಾಗೆಯೇ, ಮೀನಿನ ಕೆರೆಗಳು ಮತ್ತು ಗಜವನಗಳಲ್ಲಿ ಮೂರು ಚಾತುರ್ಮಾಸಗಳಲ್ಲಿ ತಿಷ್ಯ ಪೌರ್ಣಿಮೆಯ ಮೂರುದಿನಗಳ(ಎಂದರೆ 14, 15 ಹಾಗೂ ಪ್ರಥ

ಮಗಳ)ಲ್ಲಿ ಹಾಗೂ ಪ್ರತಿ ಉಪವಾಸದಿನಗಳಲ್ಲಿ ಕಡ್ಡಾಯವಾಗಿಯೂ ಬೇಟೆಯಾಡಬಾರದೆಂದಿದೆ. ಜೀವಂತ ಪ್ರಾಣಿಯನ್ನೇ ಪ್ರಾಣಿಗೆ ಆಹಾರವಾಗಿ ಕೊಡುವುದು, ಹುಂಜಗಳನ್ನು ನಿರ್ವೀರ್ಯಗೊಳಿಸುವುದು (ಬೀಜತೆಗೆದು ಬಲಿಸುವುದು, ಕೇಪನ್ ಮಾಡುವಿಕೆ), ಹೋರಿಗಳು, ಹೋತ, ಟಗರು, ವರಾಹ (ಗಂಡುಹಂದಿ) ಇತ್ಯಾದಿ ಜಾನುವಾರುಗಳಿಗೆ ಬೀಜಮಾಡುವಿಕೆ ಹಾಗೂ ಕುದುರೆಗಳು ಮತ್ತು ಎತ್ತುಗಳಿಗೆ ಗುರುತಿನ ಮುದ್ರೆಹಾಕುವಿಕೆಗಳನ್ನು ಮೇಲೆಹೇಳಿದ ಕೆಲವು ನಿಬದ್ಧ ದಿನಗಳಲ್ಲಿ ಮಾಡಬಾರದೆಂದು ನಿಷೇಧಿಸಲಾಗಿದೆ. ಈ ನಿಯಮಗಳ ಮೂಲೋದ್ದೇಶವು ಕ್ರೂರ ಪದ್ಧತಿಗಳನ್ನು ತಡೆದು ವಿವಿಧ ಪ್ರಭೇದಗಳನ್ನು ಸಂರಕ್ಷಿಸುವುದಾಗಿದೆ. ಆದರೆ ಅಶೋಕ ತನ್ನ ಅರಮನೆಯ ಪಾಕಶಾಲೆಯಲ್ಲಿ ಮಾಂಸಾಹಾರ ಭಕ್ಷಣೆಯನ್ನು ಸಂಪೂರ್ಣವಾಗಿ ನಿಷೇಧಿಸಿದ್ದನೇ ಹೊರತು ಬೇರೆಡೆ ಮಾಂಸಾಹಾರವನ್ನು ಸಂಪೂರ್ಣವಾಗಿ ವರ್ಜಿಸುವತ್ತ ಅವನ ಮನ ಮಿಡಿಯಲಿಲ್ಲ(R. E. I).

ಅರ್ಥಶಾಸ್ತ್ರಕಾರನು ಪ್ರಾಣಿಸಂಪತ್ತಿನ ನಿರ್ಮೂಲನಾಶದ (ನಿರ್ಲಕ್ಷ್ಯದಿಂದ ಹಾಳುಮಾಡುವ) ಅಪಾಯವನ್ನು ಚೆನ್ನಾಗಿ ತಿಳಿದಿದ್ದನು. ಅದಕ್ಕಾಗಿ ರಕ್ಷಣೆಗೆಂದು ಕೆಲವು ಆಚರಣಾಯೋಗ್ಯ ನಿಯಮಗಳನ್ನು ವಿಧಿಸಿದ್ದಾನೆ. ಪ್ರಾಣಿಉತ್ಪನ್ನಗಳೂ ಸಹ ಈತನಿಗೆ ಇತರ ಅರಣ್ಯೋತ್ಪನ್ನಗಳಷ್ಟೇ ಗಮನಾರ್ಹವಾಗಿವೆ(II. 17). ಆತ ಹಿಂಸಿಸಬಾರದೆಂದು ಹೇಳಿರುವ ಪಕ್ಷಿಗಳ ಪಟ್ಟಿಯು ಅಶೋಕನ ಶಾಸನಗಳನ್ನು ಹೋಲುತ್ತದೆ ಹಾಗೂ ಕಾಡು ಪ್ರಾಣಿಗಳನ್ನು ಸಹ ನಿರ್ಮೂಲವಾಗದಂತೆ ಸಂರಕ್ಷಿಸಲು ಸಮಾನ ಎಚ್ಚರಿಕೆವಹಿಸಬೇಕೆನ್ನುತ್ತಾನೆ (II. 26). ಈ ದೃಷ್ಟಿಯಿಂದ ಆತ ಜಾನುವಾರುಗಳ ಕ್ಷೇಮ, ಆರೋಗ್ಯ ಹಾಗೂ ಭದ್ರತೆಗಳಿಗಾಗಿ ಕೆಲವು ಸೂಚನೆಗಳನ್ನು ಕೊಡುತ್ತಾನೆ. ಗೋವು, ಕುದುರೆ ಹಾಗೂ ಆನೆಗಳ ಮೇಲ್ವಿಚಾರಕರು ಆಯಾ ಪ್ರಾಣಿಗಳ ವಯಸ್ಸು, ಗಬ್ಬ, ಅವು ಮಾಡುವ ಕೆಲಸದ ಸ್ವರೂಪ ಇಲ್ಲವೇ ಅವುಗಳ ಉಪಯುಕ್ತತೆಗನುಗುಣವಾಗಿ ಕೊಡಬೇಕಾದ ಆಹಾರಗಳನ್ನು ಕುರಿತು ಮಾರ್ಗದರ್ಶನಕ್ಕಾಗಿ ಸುದೀರ್ಘ ನಿಯಮಾವಳಿಗಳನ್ನು ರಚಿಸಿದ್ದಾನೆ. ಪ್ರಾಣಿಗಳ ದೊಡ್ಡಿ ರಚನೆಯ ವಿವರಗಳನ್ನು ಅವುಗಳ ಕ್ಷೇಮಾಭಿವೃದ್ಧಿ ಹಾಗೂ ಶುಚಿರ್ಭೂತ ಚರಂಡಿವ್ಯವಸ್ಥೆಗಳಿಗಾಗಿ ಎಚ್ಚರಿಕೆಯಿಂದ ಕೊಡಲಾಗಿದೆ. ಅಶ್ವ ಹಾಗೂ ಗಜಶಾಲೆಗಳಲ್ಲಿ ಅವುಗಳನ್ನು ನೋಡಿಕೊಳ್ಳಲೆಂದು ತರಬೇತಿಗಾರರು, ಊಟವಿಡುವವರು, ಅಡುಗೆಯವರು, ಕಾವಲುಗಾರರು, ಮಾಲೀಸು ಮಾಡುವವರು (ಕಾಸ್ತಾರರು), ಚಿಕಿತ್ಸಕರು, ಸವಾರರು, ಮಾವಟಿಗರು, ಅವುಗಳನ್ನು ಕಟ್ಟುವವರು, ಗುಡಿಸಿ ಚೊಕ್ಕಟಮಾಡುವವರು ಮುಂತಾದವರೆಲ್ಲರ ತಂಡ ಹಾಗೂ ಅನೇಕ ಸಾಮಾನು ಸರಂಜಾಮುಗಳು ಇರುತ್ತಿದ್ದುವು (II. 29–32).

ಚತುಷ್ಪಾದಿಗಳು, ಪಕ್ಷಿಗಳು ಹಾಗೂ ಅಪಾಯಕಾರಿಯಲ್ಲದ ಜಲಚರಗಳ ಸಂರಕ್ಷಣೆಯನ್ನು ಅರ್ಥಶಾಸ್ತ್ರದ ನಿಯಮಗಳಂತೆ ಅತ್ಯಂತ ನಿಷ್ಠೆಯಿಂದ ನಡೆಸಲಾಗುತ್ತಿತ್ತು. ಇದಕ್ಕಾಗಿಯೇ ಅಭಯಾರಣ್ಯಗಳನ್ನು ಬಿಟ್ಟು ಅಲ್ಲಿ ಯಾರೂ ಜಿಂಕೆಗಳು, ಕಾಡೆಮ್ಮೆಗಳು, ಪಕ್ಷಿಗಳು ಇತ್ಯಾದಿ ಪ್ರಾಣಿಗಳಿಗೆ ಹಿಂಸಿಸುವುದಕ್ಕೆ, ಕೊಲ್ಲಲು ಇಲ್ಲವೇ ಹಿಡಿಯಲು ಅವಕಾಶಕೊಡುತ್ತಿರಲಿಲ್ಲ. ರಾಜ್ಯ ಸಂರಕ್ಷಣೆಯ ಅರಣ್ಯಗಳಲ್ಲಿ 1 6 ಭಾಗ ಜೀವಂತಪ್ರಾಣಿಗಳನ್ನು ಸ್ವೇಚ್ಛೆಯಾಗಿ ಬಿಡಲು ಬಿಡಲಾಗುತ್ತಿತ್ತು. ಅಲ್ಲದೆ, ಇತರ ಪ್ರಾಣಿ ಜಾತಿಗಳನ್ನು ತಿನ್ನುವ ಸಾಧುಪ್ರಾಣಿಗಳನ್ನು ಕೊಲ್ಲುವವರಿಗೆ ವಿಧಿಸುವ ದಂಡನೆಯ ಪ್ರಮಾಣದಲ್ಲಿ ಹೆಚ್ಚು ವ್ಯತ್ಯಾಸವಿರುತ್ತಿತ್ತು. [illegible] ಅನೇಕಗಳು (ಶಕ್ತ), ತಳಿ ಅಭಿವೃದ್ಧಿ ಮಾಡುವ ಅನೇಕಗಳು (ಸಾಮಗ್ರಿ), ಪಂಚಮುಖದ್ದು, ರೋಗನಿರೋಧಕವಾದದ್ದು ಹಾಗೂ [illegible] (ಫೇ[illegible]) ಸೇರುತ್ತವೆ.

ಗ್ರೀಕ್ ಬರಹಗಾರರು, ಸಾಕು ಆನೆಗಳಲ್ಲಿ [illegible], [illegible] ಹಾಗೂ [illegible] ಪದ್ಧತಿಯನ್ನು [illegible] ಸಾಕ್ಷಿಯಾಗಿದ್ದಾರೆ (Str. XV. i. 41, 43; Arr. XIV). ಆನೆಗಳನ್ನು ವಿಶೇಷ ಅರಣ್ಯಗಳಲ್ಲಿ (ನಾಗವನ) ಕಾಪಾಡಲಾಗುತ್ತಿತ್ತು ಹಾಗೂ ಆನೆ ಕೊಂದವರು ತಪ್ಪ ಪ್ರಾಣ ಶಿಕ್ಷೆಗೆ ಗುರಿಯಾಗುತ್ತಿದ್ದರು (ಅರ್ಥಶಾಸ್ತ್ರ II. 2). [illegible] ಮಾವುತರು ಅವುಗಳ ಕ್ಷೇಮಕ್ಕಾಗಿ [illegible] ನಿಯಮಗಳನ್ನು ಕಿಂಚಿತ್ ಉಲ್ಲಂಘಿಸಿದರೂ ಕಟ್ಟುನಿಟ್ಟಿನಿಂದ ದಂಡಿಸಲಾಗುತ್ತಿತ್ತು. ಅವುಗಳಿಗೆ ನೀಡಬೇಕಾದ [illegible] (ನಿಮಿ) [illegible] ಆನೆಗೆ 2 [illegible] [illegible] ಕಡಿತಗೊಳಿಸಲಾಗುತ್ತದೆ. ಹಾಗೆಯೇ [illegible] ಆನೆಗಳಿಗೆ 5 [illegible] ದಂಡಕಟ್ಟಬೇಕು (II. 32). [illegible] ಆನೆಗಳನ್ನು [illegible] ಎಂದು ಕಟ್ಟು ವಿಧಿಸಲಾಗಿದೆ (VII. II).

ಸಾಕುಪ್ರಾಣಿಗಳ ವಿಷಯದಲ್ಲಿ ಅನವಶ್ಯಕ ಕ್ರೌರ್ಯ ಹಾಗೂ ಆಘಾತ ಕೊಡುವುದನ್ನು ನಿಷೇಧಿಸಿದ. ಪ್ರಾಣಿಗಳನ್ನು [illegible] ಕಸಾಯಿಖಾನೆಗಳಲ್ಲಿ (ಸೂನಸ್ಥಾನ) [illegible] (ಕಂಗ) [illegible] (II. 26): ಪಾಲಿಭಾಷೆಯ ಧರ್ಮಗ್ರಂಥಗಳಲ್ಲಿರುವ [illegible], ಈ ನಿಯಮವು ಆಚರಣೆಯಲ್ಲಿದ್ದಂತೆ ತೋರುತ್ತದೆ. ಗೋವುಗಳ 'ಬೋರಿ ಮಾಟು' ಎಂಬ ಪ್ರಕರಣಗಳನ್ನು [illegible] (cf. ಜಾತಕ. IV. 250) ಭಾರವಾದ ಪ್ರಾಣಿಗಳನ್ನು [illegible] ಹೊಡೆದು

ಮೂಗುರಂಧ್ರಗಳನ್ನು ಸಕಾಲದಲ್ಲಿ ಮಾಡದಿದ್ದರೆ ದಂಡ ವಿಧಿಸಲಾಗುತ್ತಿತ್ತು. ಮಳೆಗಾಲ ಮತ್ತು ಶರತ್ಕಾಲಗಳಲ್ಲಿ ಎರಡು ವೇಳೆ ಹಾಲುಕರೆಯಬೇಕಿತ್ತು ಹಾಗೂ ಶುಷ್ಕ ಚಳಿಗಾಲ ಹಾಗೂ ಬೇಸಗೆಗಳಲ್ಲಿ ಒಂದು ಹೊತ್ತು ಮಾತ್ರ ಹಾಲುಕರೆಯಬೇಕು. ಇಲ್ಲದಲ್ಲಿ ಅಂಥವರ ಹೆಬ್ಬೆರಳು ಕತ್ತರಿಸಲಾಗುತ್ತಿತ್ತು. ಆರುತಿಂಗಳಿಗೊಂದುಸಲ ಕುರಿ ಮತ್ತಿತರ ಪ್ರಾಣಿಗಳ ತುಪ್ಪಟವನ್ನು ಕತ್ತರಿಸಬೇಕು(II.29). ಬೀಜದ ಹೋರಿಗಳು, ಗ್ರಾಮದೇವತೆಯ ಹೆಸರಿನಲ್ಲಿ ಬಿಟ್ಟಿರುವ (ಗ್ರಾಮದೇವಾವೃಷಃ) ಗೂಳಿಗಳು ಹಾಗೂ ಕರುಹಾಕಿ ಹತ್ತು ದಿನಗಳೂ ಕಳೆಯದಿರುವ ಹಸು ಇವಕ್ಕೆ ಅಕ್ರಮಪ್ರವೇಶ ದಂಡವಿನಾಯಿತಿಯಿತ್ತು. ಕಾಯ್ದಿಟ್ಟ ಅರಣ್ಯಗಳಿಂದ ತಪ್ಪಿಸಿಕೊಂಡು ಬಂದ ಪ್ರಾಣಿಗಳನ್ನು 'ಅರಣ್ಯಾಧಿಕಾರಿಯ ಗಮನಕ್ಕೆ ತರಬೇಕು ಹಾಗೂ.......... ನೋವಾಗದ ಇಲ್ಲವೇ ಕೊಲ್ಲದೆ ಓಡಿಸಬೇಕು'. ತೊಂಡುದನಗಳಿಗೆ ಹಗ್ಗಗಳು ಮತ್ತು ಚಾಟಿಯೇಟುಗಳನ್ನು ಮಾತ್ರ ಕೊಡಬೇಕು. ಈ ದಿಸೆಯಲ್ಲಿ ಅವುಗಳಿಗೇನಾದರೂ ಹಾನಿಯಾದಲ್ಲಿ ಅದಕ್ಕೆ ದಂಡತೆರಬೇಕಾಗುತ್ತದೆ (III. 10). ಮನೆಯ ಇತರ ಆಸ್ತಿಪಾಸ್ತಿಗಳ ಜೊತೆಗೆ ಜಾನುವಾರುಗಳನ್ನು ಸಹ ವೈಯುಕ್ತಿಕ ಅಪರಾಧ ಕಾನೂನುಗಳಿಂದ ಸಂರಕ್ಷಿಸಲಾಗುತ್ತದೆ. 'ಚಿಕ್ಕಪುಟ್ಟ ಚತುಷ್ಪಾದಿಗಳನ್ನು ಕೋಲು ಮುಂತಾದುವುಗಳಿಂದ ಹಿಂಸಿಸಿದರೆ ಒಂದು ಅಥವಾ ಎರಡು ಪಣ ದಂಡಕೊಡಬೇಕು: ಅವುಗಳಿಗೆ ರಕ್ತಬರುವಂತೆ ಹೊಡೆದುದಾದರೆ, ಇದರ ಎರಡರಷ್ಟು ದಂಡಕೊಡಬೇಕು. ದೊಡ್ಡ ಚತುಷ್ಪಾದಿಗಳ ವಿಚಾರದಲ್ಲಿ ಮೇಲಿನ ದಂಡದ ಎರಡು ಪಟ್ಟು ಕೊಡಬೇಕು ಮಾತ್ರವಲ್ಲದೆ, ಸಾಕಷ್ಟು ಪರಿಹಾರವನ್ನು ಸಹ ವಿಧಿಸಲಾಗುತ್ತದೆ' (III. 19).

ಪ್ರಾಣಿವ್ಯಾಪಾರ ಸಂರಕ್ಷಣೆಯ ಪ್ರಾಮುಖ್ಯತೆಯನ್ನು ಸಹ ಪೂರ್ಣವಾಗಿ ಮನಗಾಣಲಾಗಿತ್ತು. ವ್ಯಾಪಾರಿಗಳಿಂದ ಸುಂಕವಸೂಲಿ ವಿಧಿಸುವಲ್ಲಿ ದ್ವಿಪಾದಿ ಮತ್ತು ಚತುಷ್ಪಾದಿಗಳಿಗೆ ಇತರ ಸಾಮಗ್ರಿಗಳೊಡನೆ ಗರಿಷ್ಠ ದರ್ಜೆಯಲ್ಲಿರಿಸಿ ಅವುಗಳ ಮೌಲ್ಯದ1/5ರಿಂದ 1/15ರ ವರೆಗೆ ಶುಲ್ಕ ವಿಧಿಸಲಾಗುತ್ತಿತ್ತು. ಗೋಪ ಅಥವಾ ಗ್ರಾಮಲೆಕ್ಕಿಗನು ಪ್ರಜೆಗಳ ವಾಸಿಲೆಯೊಂದಿಗೆ ಹಳ್ಳಿಯಲ್ಲಿರುವ ದ್ವಿಪಾದಿ ಹಾಗೂ ಚತುಷ್ಪಾದಿಗಳ ಲೆಕ್ಕವನ್ನು ಸಹ ಇಡಬೇಕಿದ್ದಿತು. ಹಾಗೆಯೇ ಒಟ್ಟು ಎಷ್ಟು ಪ್ರಜೆಗಳು ಮತ್ತು ಪ್ರಾಣಿಗಳಿವೆಯೆಂಬುದನ್ನು ತಿಳಿಸಲು ಗೂಢಚಾರರನ್ನು ಸಹ ನೇಮಿಸಲಾಗುತ್ತಿತ್ತು (II. 35).

ಪ್ರಾಣಿಗಳ ಪವಿತ್ರತೆ ಮತ್ತು/ಅಥವಾ ಅಪವಿತ್ರತೆಗಳು

ಪ್ರಾಚೀನ ಭಾರತೀಯ ಸಾಹಿತ್ಯದಲ್ಲಿ ಅದು ಧಾರ್ಮಿಕವಿರಲಿ ಲೌಕಿಕದ್ದಿರಲಿ, ಪ್ರಾಣಿಗಳ ಪಾವಿತ್ರ್ಯತೆ ಇಲ್ಲವೇ ಅಪವಿತ್ರತೆಗಳಮೇಲೆ ಅವುಗಳ ಬಹಿಷ್ಕಾರವನ್ನು ಕುರಿತು

ಯಾವುದೇ ನಿಯತ ಪ್ರಯತ್ನವು ನಡೆಯದಿರುವುದು ಕಂಡುಬರುತ್ತದೆ. ಗೋವು ದೈವಸ್ವರೂಪವಾಗಿರುವುದರಿಂದ ಅದನ್ನು ಹಿಂಸಿಸಬಾರದೆಂಬ ಸಂಪ್ರದಾಯವೇನೂ ಹಿಂದೆ ಇರಲಿಲ್ಲ. ಕಾಲಾಂತರದಲ್ಲಿ ಹೊರಗಿನಿಂದ ಬಂದ ಒರಟುಜನತೆಯೊಡನೆ ಬೆರೆತಂತೆ, ತಲೆದೋರಿ, ಮುಂದೆ ಹಿಂದೂ ಸಮಾಜದಲ್ಲಿ ಬರಡು ಮತತತ್ವ, ಸಿದ್ಧಾಂತಗಳೆಲ್ಲ ಪುನರ್ಸುಧಾರಣೆಗೊಂಡಾಗ ಗಟ್ಟಿಯಾಯಿತು. ಗೋವಧೆಯನ್ನು ಕುರಿತ ಶಾಸನಗಳಲ್ಲಿ ಅರ್ಥಶಾಸ್ತ್ರಕಾರನು ಕರುಗಳು, ಹಾಲುಕರೆಯುವ ಹಸುಗಳು ಮತ್ತು ಬೀಜದ ಹೋರಿಗಳಿಗೆ ಮಾತ್ರ ವಿನಾಯಿತಿಕೊಡುತ್ತಾನೆ (II, 26). ಅಶೋಕನು ಹಿಂಸಿಸಬಾರದೆಂದು ಹೇಳಿರುವ 'ಪ್ರಯೋಜನಕ್ಕೆ ಬಾರದ ಇಲ್ಲವೇ ತಿನ್ನಲು ಅಯೋಗ್ಯವಾಗಿರುವಂತಹ' ಪ್ರಾಣಿಗಳ ಪಟ್ಟಿಯಲ್ಲಿ ಸಂಡಕ ಎಂಬ ಶಬ್ದವಿದೆ: ಈ ಪದವು 'ಕಾಡು ಹೋರಿಯನ್ನೇ ಉದ್ದೇಶಿಸಿ ನಿರೂಪಿತವಾಗಿದೆ. ವೈದಿಕ, ಬೌದ್ಧ ಹಾಗೂ ಶ್ರೇಷ್ಠ ಸಂಸ್ಕೃತಸಾಹಿತ್ಯಗಳಲ್ಲಿ ಗೋವಧೆ ಇಲ್ಲವೇ ಗೋಮಾಂಸ ಭಕ್ಷಣೆಗೆ ಅಡಚಣೆಗಳಿದ್ದ ಬಗ್ಗೆ ಯಾವುದೇ ಪರೋಕ್ಷ ಸೂಚನೆಗಳೂ ಕಂಡುಬರುವುದಿಲ್ಲ. ಋಗ್ವೇದದಲ್ಲಿ ದನಗಳಿಗೆ ಸಂಬಂಧಪಟ್ಟಂತೆ ಅಘ್ನ್ಯ ಎಂಬ ವಿಶೇಷಣ ಬರುತ್ತದೆ, ಆದಾಗ್ಯೂ ಆಚರಣೆಯು ಮಾತ್ರ ಅದಕ್ಕೆ ವಿರುದ್ಧವಾಗಿರುವುದೇ ಕಂಡುಬರುತ್ತದೆ. ಶತಪಥಬ್ರಾಹ್ಮಣದಲ್ಲಿ ಯಾಜ್ಞವಲ್ಕ್ಯನು ಎಳೆಯ ಗೋಮಾಂಸವನ್ನು ಬಯಸುತ್ತಾನೆ (III. 1. 2. 21). ಪಾಣಿನಿಯಂತೆ, 'ಗೋಘ್ನ' ಎಂದರೆ 'ಅತಿಥಿ' ಎಂದರ್ಥ; ಏಕೆಂದರೆ, ಆತನಿಗಾಗಿ ಗೋವಧೆ ಮಾಡಲಾಗುತ್ತದೆ (III. 4. 73). ಆಪಸ್ತಂಭ ಮಹರ್ಷಿಗಳು ಅತಿಥಿಗಳ ಉಪಚಾರಕ್ಕಾಗಿ, ಪಿತೃ ಆರಾಧನೆಗೆ, ಹಾಗೂ ಶೋಭನಪ್ರಸ್ತ ಸಮಾರಂಭಗಳಲ್ಲಿ ಗೋವಧೆಮಾಡಲು ಅನುಮತಿಸಿದ್ದಾರೆ (Grhyasutra, 1.3.9; cf. Sat. Br. III.4.1.2; Manu. V 41; Vas.IV 8; Sam. II. 16.1; Vis. LXXX. 9: Yaj; I.19). ಭವಭೂತಿಯ ಉತ್ತರರಾಮಚರಿತ್ರೆ ನಾಟಕದ ನಾಲ್ಕನೆಯ ಅಂಕದ ಪ್ರಾರಂಭದಲ್ಲಿ ವಾಲ್ಮೀಕಿಗಳು ತಮ್ಮ ಆಶ್ರಮಕ್ಕೆ ಬಂದ ವಸಿಷ್ಠರ ಗೌರವಾರ್ಥವಾಗಿ (ಅತಿಥಿ ಉಪಚಾರಕ್ಕೆ) ಕಡಸ(ಮಣಕ)ನ್ನು ವಧಿಸುತ್ತಾರೆಂದು ಉಲ್ಲೇಖ ಬರುತ್ತದೆ.

ಬೌದ್ಧಕೃತಿಗಳಲ್ಲಿ 'ಗೋಘಾತಕ' ಎಂಬ ಶಬ್ದವು ಚಿರಪರಿಚಿತವಾದುದು. ದಶಬ್ರಾಹ್ಮಣ ಜಾತಕದಂತೆ ಆತನ ವೃತ್ತಿಯು ಬಹುವಾಗಿ ಗೊತ್ತುಗುರಿಯಿಲ್ಲದೆ ಅಲೆದಾಡುವ ಬ್ರಾಹ್ಮಣರನ್ನು ಹಿಂಬಾಲಿಸುವುದು (IV. 361. ff). ಮಾಂಸಕ್ಕಾಗಿ ಗೂಳಿಗಳನ್ನು ವಧಿಸುವುದು ತೀರ ಸಾಮಾನ್ಯವಾಗಿತ್ತು (Sut.III. Viii. 7; Jat II. 50. 135; VI. 111) ಹಾಗೂ ದನದ ಮಾಂಸಕ್ಕಾಗಿಯೇ ವಿಶೇಷ ಕಸಾಯಿಖಾನೆಗಳಿದ್ದುವು (ಗವಘಾತನಮ್, ಮಹಾವಗ್ಗ V. 1. 13). ಇಲ್ಲಿ ಗೋವುಗಳಿಗೂ ಸಹ ವಿನಾಯಿತಿ ಇರಲಿಲ್ಲ (An. IV. 137; Ch. Dhp., P. 60; Apast. I. 5. 17. 30).

ಸೂತ್ತಗಳಲ್ಲಿ ಇದನ್ನು ಕುರಿತು [illegible] ಗಳಲ್ಲಿಯೂ ಅತ್ಯಂತ ಸ್ಪಷ್ಟ [illegible] ಗಳಲ್ಲಿ [illegible] ವಾಗಿ ಅಲ್ಲದೆ [illegible] ಗಳು [illegible] ಉಲ್ಲೇಖಿಸಲಾಗಿದೆ. ಅಂದು 'ಗೋಘಾತಕ ಅಥವಾ ಅವನ ಶಿಷ್ಯರು [illegible] ಅದ ಗೋವು [illegible] ದನವನ್ನು [illegible] ನಾಲ್ಕು ರಸ್ತೆಗಳು ಸೇರುವ [illegible] ಮಾರಾಟಕ್ಕಿಡುತ್ತಿದ್ದ' (goghatako va goghatakantevasi va g vim vadhi va catumahapathe vilaso Patibhajitva nisinno assa, Dn. XXI . 6: Mn. 1 91).

ದನದ ಮಾಂಸಾಹಾರದ್ದು [illegible] ಅಭ್ಯಾಸವಾಗಿದ್ದುದಕ್ಕೆ ಕಂಡು ಬರುತ್ತದೆ. [illegible] ಗಳಲ್ಲಿ. ಪವಿತ್ರ ಗ್ರಂಥಗಳಲ್ಲಿಯೂ [illegible] ಸಂಗೀತಗಳಲ್ಲಿ [illegible] ಬರುತ್ತದೆ. [illegible] ಕೊಡುತ್ತದೆ. [illegible] ಸುತ್ತದಲ್ಲಿ [illegible] P. [illegible]) [illegible] (also Ud VIII. 5). [illegible] Mv. VI. 10.2). [illegible] (ಗೋಹತ್ಯೆ) [illegible] ಕೊಳ್ಳುತ್ತಿದ್ದರು. [illegible] ಪಕ್ಷಿಗಳಲ್ಲಿ [illegible] ಮತ್ತು ಕೋಳಿ [illegible] ಆಹಾರಗಳಾಗಿ [illegible] ಕಂಡುಬರುತ್ತದೆ (II.91, 67, 70). [illegible] ಕೋಳಿ [illegible] (P. 150). [illegible] ಕೋಳಿ [illegible] (ತಪ್ಪ) ಕಂಡು ಬರುತ್ತದೆ (PP.366 ff). ಜಾತಕದ ಕಥೆಗಳು (I. 259, IV. 3 4; Dn. XXIII 31. [illegible] ತಿಂದ ನಾಲಗೆಗೆ [illegible] ಆಹಾರಗಳಲ್ಲಿ ಆನೆ, ಕುದುರೆ, ನಾಯಿ ಮತ್ತು ಹಾವುಗಳು ಕಂಡುಬರುತ್ತವೆ Mv. VI 23, 10 ff). ಬ್ರಾಹ್ಮಣರು ತಿನ್ನಬಾರದೆಂದು [illegible] ಆಹಾರ [illegible] ಪಟ್ಟಿಯಲ್ಲಿ ಕೋಳಿ (ಪಕ್ಷಿಗಳು) ಹಂದಿ ಮತ್ತು ಹಸುಗಳು ಸೇರಿಲ್ಲ.

(Sat Br. I. 2. 1.8; Ait. Br II. 1. 83: Apast. 1.5. 17. 29 ff; Manu, V. II.18; yaj. I. 172; Mbh. XII 37. 24-26). ಸ್ಯಿ-ಯು-ಕಿ. ಯ ಕಾಲದ ವೇಳೆಗೆ ದನ ಮತ್ತು ದನದ ಮಾಂಸಗಳ ಸೇವನೆಯನ್ನು ವರ್ಜಿಸಲಾಯಿತು (Watters' p. 178). ಪ್ರತ್ಯಕ್ಷದಲ್ಲಿ(ತಿಮಿಂಗಿಲ) ಹುಟ್ಟಿದ ಉಚ್ಚಶಿಖಿ (ಬುಟ್ಟು)ಯು, ಕೋಳಿಗಳು ನಿಷಿದ್ಧ ಭಕ್ಷ್ಯವಾಗಿದ್ದುವು. ಇದು ಮಹಾಭಾರತ XII. 281. 60 ರಲ್ಲಿ ಮೊದಲಿಗೆ ಕಂಡುಬರುತ್ತದೆ. ಈ ಎಲ್ಲ ದೃಷ್ಟಾಂತಗಳು ಹಾಗೂ ಶಾಂತಿಪರ್ವದಲ್ಲಿಯು ಧ್ಯೇಯಲಕ್ಷಣಗಳಿಂದ ಇವನ್ನು ಕಾಲಾಂತರದಲ್ಲಿ ಪುರೋಹಿತರ ಕೈವಾಡ(ಪ್ರಕ್ಷೇಪ) ಇಲ್ಲವೇ ಸ್ಥಳೀಕ ಸಂಪ್ರದಾಯದ ಪ್ರತಿರೂಪವೆಂದು ತಿಳಿಯಬಹುದಾಗಿದೆ. ಅದಾಗ್ಯೂ, ಗೌತಮಸ್ಮೃತಿ XXIII. 5 ಮತ್ತು ಮನು XI. 157 ರಲ್ಲಿ ಸ್ನಾತಕ ಬ್ರಾಹ್ಮಣರು ತಿನ್ನಬಾರದೆಂದು ನಿಷೇಧಿಸಲಾಗಿರುವ ಪ್ರಾಣಿಗಳ ಸಮಗ್ರ ಪಟ್ಟಿಯಲ್ಲಿ ಹಳ್ಳಿಯ ಸಾಕುಕೋಳಿ ಮತ್ತು ಹಂದಿಗಳೂ ಸೇರುತ್ತವೆಂಬುದಿಲ್ಲಿ ಗಮನಾರ್ಹ.

ಗೋಸಂರಕ್ಷಣೆ ಹಾಗೂ ಆರಾಧನೆ

ವೇದಕಾಲದಿಂದ ಹಿಡಿದು ಸ್ಮೃತಿ ಹಾಗೂ ಮಹಾಕಾವ್ಯಗಳವರೆಗೂ ಗೋವಧೆಯನ್ನು ನಿಷೇಧಿಸುವುದಕ್ಕೆ ಹಾಗೂ ಅಮೂಲ್ಯ ಗೋಸಂಪತ್ತಿನ ರಕ್ಷಣೆಗೆ ಸೀಮಿತವಾದ್ದ ನಡೆಯುತ್ತಲೇ ಇತ್ತು. ಆದರೆ ಗೋವುಗಳ ಪಾವಿತ್ರ್ಯದ ಬಗ್ಗೆ ಬಲವಾದ ವಿಚಾರವಿಲ್ಲ. ರಾಮಾಯಣದಲ್ಲಿ ಗೋವಧೆ (IV. 34. 12; ಮಹಾಭಾರತ VII. 17. 31; 73 27) ಹಾಗೂ ಅದೇ ರೀತಿಯಾಗಿ ಗೋವಿನ ಹಾಲು ಕರೆಯುವುದು (II. 75. 54) ಪಾಪವೆಂದು ಪರಿಗಣಿತವಾಗಿದೆ. ಮಹಾಭಾರತದಲ್ಲಿ, ವೈಶ್ಯರು ಕೃಷಿಕಾರ್ಯದ ದನಗಳನ್ನು ಎಚ್ಚರದಿಂದ ಪಾಲಿಸಿ, ಕರುಗಳು ತಮ್ಮ ತಾಯಿಯ ಹಾಲನ್ನು ಕುಡಿಯುತ್ತಿರುವವರೆಗೂ ಹಾಲುಕರೆಯುತ್ತಿದ್ದಂತಹ ಸಮಯಗಳನ್ನು ಬಹುಮಾನದಿಂದ ನೆನೆಸಲಾಗಿದೆ. (Phena pamsca tatha vatsan na duhanti, I 64. 22). ರಾಜರು ನ್ಯಾಯದ ತೆರಿಗೆ ವಿಧಿಸುವಾಗ 'ಬರದಾಗಿರುವುದಿಲ್ಲ' ಎಂಬ ಸಾಮ್ಯವನ್ನು ಆಧಾರವಾಗಿಟ್ಟುಕೊಳ್ಳುತ್ತಿದ್ದರು. ಜೇನಿಯ ವೈಭವಗಳಲ್ಲಿ, ಕೃಷಿಕಾರ್ಯದ ದನಗಳನ್ನು ಭಾರಹೇರಲು ಎಂದೂ ಬಳಸುತ್ತಿರಲಿಲ್ಲ, ಬದಲಿಗೆ ಚೆನ್ನಾಗಿ ಪೋಷಿಸಿ ಕೊಬ್ಬಿಸಲಾಗುತ್ತಿತ್ತು. (I. 63 II) ಹಾಗೂ ಕಲಿಯುಗದ ಕರಾಳ ದಿನಗಳಲ್ಲಿ ಮಾತ್ರ ನೇಗಿಲೆಳೆಯಲು ಹಾಗೂ ಭಾರಹೊರಲು ಹಸುಗಳು ಮತ್ತು ಹರೆಯದ ಕರುಗಳನ್ನು ಬಳಸುತ್ತಾರೆ(III. 189. 27) ಎಂದಿದೆ. ಈ ಬಗೆಯ ಆತಂಕಕ್ಕೆ ಕಾರಣವೆಂದರೆ, ನಾಲ್ಕು ಜಾತಿಗಳಲ್ಲಿ ಬ್ರಾಹ್ಮಣರು ಹೇಗೆ ಶ್ರೇಷ್ಠರೋ ಹಾಗೆ ಚತುಷ್ಪಾದಿಗಳಲ್ಲಿ ಗೋವು ಉತ್ಕೃಷ್ಟವಾಗಿರುವುದೇ ಆಗಿದೆ (VI. 123. 345 XII. II. II). ಆದಕಾರಣ, ಗೋಬ್ರಾಹ್ಮಣರ ಕ್ಷೇಮಕ್ಕಾಗಿ ದೇವಸಮೂಹದಲ್ಲಿ ಸ್ಕಂಧ

ನನ್ನು ನಾಯಕನನ್ನಾಗಿ ಮಾಡಲಾಯಿತು (ಗೋಬ್ರಾಹ್ಮಣ ಹಿತಾಯಚ, III. 22ರ. 23; XII. 21. 18; Baudh. II. 2. 4. 18).

ಆದರೆ ದೊಡ್ಡ ದೊಡ್ಡ ಯಜ್ಞಯಾಗಾದಿಗಳಲ್ಲಿ ಬಲಿಗಾಗಿ ದನಗಳನ್ನೇ ದೊಡ್ಡ ಪ್ರಮಾಣದಲ್ಲಿ ಆಯ್ಕೆ ಮಾಡಲಾಗುತ್ತಿತ್ತು. ರಂತಿದೇವನೆಂಬ ರಾಜನ ಪಾಕಶಾಲೆಯಲ್ಲಿ ನಿತ್ಯವೂ 2000 ದನಗಳು ಮತ್ತು 2000 ಇತರ ಪ್ರಾಣಿಗಳನ್ನು ವಧಿಸಿ ಮಾಂಸವನ್ನು ಹಂಚಲಾಗುತ್ತಿತ್ತು. ಹೀಗಾಗಿ ಈ ಪ್ರಾಣಿಗಳ ದೇಹದಿಂದ ಹೊರಬಂದ 'ಕೊಬ್ಬು ಚರ್ಮ ವತಿ (III. 207. 8 f; VII. 67. 5; XII. 29 123;. XIII. 66. 43) ನದಿ ಯಾಗಿ ಹರಿಯಿತು. ಇದಕ್ಕೆ ಕಾರಣಗಳನ್ನು ಕೆಳಕಂಡಂತೆ ವಿವರಿಸಲಾಗಿದೆ:

'ಪವಿತ್ರಾಗ್ನಿದೇವನಿಗೆ ಪ್ರಾಣಿಗಳ ಮಾಂಸಾಹಾರವು ಪ್ರಿಯವಾದುದು-ಇದು ದೈವ ವಾಣಿ. ಯಜ್ಞಾಹುತಿಗಳಲ್ಲಿ, ಪ್ರಾಣಿಗಳನ್ನು ತಪ್ಪದೆ ದ್ವಿಜ ಬ್ರಾಹ್ಮಣರು ವಧಿಸುತ್ತಾರೆ. ಈ ಪ್ರಾಣಿಗಳು ವೇದಸ್ತುತಿಗೀತೆಗಳ (ಋಕ್ಕುಗಳ) ಮಂತ್ರ ಪಠನದಿಂದಾಗಿ ಪಾಪ ವಿಮೋಚನೆಗೊಂಡು ಸ್ವರ್ಗಕ್ಕೆ ಹೋಗುತ್ತವೆ.'

'ಅಗ್ನಯೋ ಮಾಂಸಕಾಮಾಶ್ಚ ಇತ್ಯಪಿ ಶ್ರೂಯತೆ ಶ್ರುತಿಃ
ಯಜ್ಞೇಷು ಪಸವೊ ಬ್ರಾಹ್ಮನ್ ವಧ್ಯಂತೇ ಸತತಂ ದ್ವಿಜಃ
ಸಂಸ್ಕೃತಃ ಕಿಲ ಮಂತ್ರೈಶ್ಚ ತೇ ಪಿ ಸ್ವರ್ಗಂ ಅವಾಪ್ನುವನ್'

(III. 208. IIf; cf. VII. 67. 4; Manu. V. 40-42; Vas. IV. 7; Vis LI. 59. 78; Yaj. I. 180f).

ವಿಲಿಯನ್ಸನು ಪರದೇಶೀಯನ ಒರಟುಲಕ್ಷಣಗಳಿಂದಲೇ ಪುರೋಹಿತರ ಧರ್ಮ ಶ್ರದ್ಧೆಯ ಪ್ರಾಣಿಧರ್ಮೋಪಕಾರವನ್ನು ವಿವರಿಸುತ್ತಾನೆ: ಭಾರತದ ಧಾರ್ಮಿಕ ಕ್ಷೇತ್ರದಲ್ಲಿ ಅಂತರ್ಗತ ಬಿರುಕು ಇದೆ (ಎಂದರೆ, ಯಜ್ಞಾಹುತಿಗಳ ವಿಚಾರದಲ್ಲಿಯ ಅಭಿಪ್ರಾಯ ಕಂಡರೆ cf. Jat. I. 300). ಇದರಲ್ಲಿ ರಹಸ್ಯಮಾರ್ಗ(ಗೂಢ)ಗಳಿವೆ.........ಇಲ್ಲಿ ಭಾರತೀಯರು 10000ಕ್ಕೂ ಮಿಗಿಲಾಗಿ ವಿವಿಧ ಬಗೆಯ ದನಗಳು, ಕುರಿಗಳು, ಆಡು ಗಳು, ಗೂಳಿ ಮತ್ತು ಕುದುರೆಗಳನ್ನು ಮುಪ್ಪಟ್ಟಾಗಿ ತರುತ್ತಾರೆ: ಅನಿಷ್ಟಸೂಚಕ ಸ್ವಪ್ನ ದಿಂದ ಬೆದರಿದ, ಎಚ್ಚರದ ವಾಣಿ ಇಲ್ಲವೇ ದೈವವಾಣಿಯಾದ, ದುಶ್ಶಕುನದ ಹಕ್ಕಿ ಯನ್ನು ನೋಡಿದ ಪ್ರತಿಯೊಬ್ಬೊಬ್ಬನೂ ತನ್ನ ಜೀವಕ್ಕೆ ಬದಲು ಈ ಕಂದರಗಳಿಗೆ ಪ್ರಾಯಶ್ಚಿತ್ತರೂಪವಾಗಿ ಈ ಪ್ರಾಣಿಗಳನ್ನು ಬಲಿಕೊಟ್ಟು ಪಾರಾಗುತ್ತಾರೆ(XVI. 16).

ಸ್ಪಷ್ಟವಿರುವಂತೆ ಇಲ್ಲಿ ಎರಡು ವಿರುದ್ಧ ಶಕ್ತಿಗಳು ಕೆಲಸಮಾಡುತ್ತಿರುವುದು ವ್ಯಕ್ತವಾಗುತ್ತದೆ. ಗೋವುಗಳ ಉಪಯುಕ್ತತೆಯನ್ನು ಒಂದೆಡೆ ಪ್ರಶಂಸಿಸಲಾಗುತ್ತಿತ್ತು. ಆದರೆ, ಮಾಂಸಾಭಿಲಾಷೆಯಿಂದಾಗಿ ಗೋವಧೆಯನ್ನು ಮಾತ್ರ ತಡೆಯಲಿಲ್ಲ. ಇದು ಇಂದು ಆಡಿನ ಹಾಲಿನ ಮೌಲ್ಯವರಿತಿದ್ದಾಗ್ಯೂ ಅದರ ವಧೆಯನ್ನು ತಡೆಯದಿರುವುದಕ್ಕೆ ಹೋಲಿಸಬಹುದು. ಗೋವು ಜೀವಿಗಳೆಲ್ಲಾ ಶ್ರೇಷ್ಠವಾದುದರಿಂದಲೇ ಅದನ್ನು ದೇವತಾ ಸಂತೃಪ್ತಿಗಾಗಿ ಆಹುತಿಕೊಡಲಾಗುತ್ತಿತ್ತು. ಬುದ್ಧನ ಯಜ್ಞಾಹುತಿ ವಿಧಿಗಳನ್ನು ಕುರಿತ ಆವೇಶಪೂರಿತ ದೂಷಣೆಗಳು ಆರ್ಥಿಕ ದೃಷ್ಟಿಯಿಂದ ಗೋಸಂರಕ್ಷಣೆಯಾಗಬೇಕಾದುದರ ಅವಶ್ಯಕತೆಯನ್ನು ಬಿಂಬಿಸಿತು. ಆತ ಬ್ರಾಹ್ಮಣರು ತಮ್ಮ ಹಿಂದಿನ ಸಚ್ಚಾರಿತ್ರವನ್ನು ತ್ಯಜಿಸಿ ಗೋವುಗಳನ್ನು ಬಲಿಕೊಡುವ ಕೆಟ್ಟ ಪದ್ಧತಿಯನ್ನು ಅನುಸರಿಸತೊಡಗಿದ ಮೌಢ್ಯತೆಯನ್ನು ದೂಷಿಸಿದನು (ಬ್ರಾಹ್ಮಣರೆಂದೂ ಗೋಆಹುತಿ(ಬಲಿ)ಯನ್ನು ವಿರೋಧಿಸಿರಲಿಲ್ಲ; ಈ ಕಾಲ್ಪನಿಕ ಪ್ರಸ್ತಾವನೆಯ ಅರ್ಥ ಧರ್ಮೋಪದೇಶವನ್ನು ಒತ್ತಾಯಪಡಿಸುವುದಾಗಿದೆ). ಗೋವುಗಳು ನಮ್ಮ ತಂದೆತಾಯಿಗಳಂತೆ ಉಪಕಾರಿಗಳಾಗಿರುವುದರಿಂದ ಹಾಗೂ ಆಹಾರಶಕ್ತಿಗಳನ್ನು ಕೊಡುವಂತಹವಾಗಿರುವುದನ್ನು ತಿಳಿದು ಹಿಂದಿನ ಬ್ರಾಹ್ಮಣರು ಗೋವಧೆ ಹಾಗೂ ಭಕ್ಷಣೆಗಳಿಂದ ದೂರವುಳಿದರು:

"ಯಥಾ ಮಾತಾ ಪಿತಾ ಭಾತ ಅಸ್ನೇವ ಪಿ ಚ ನಾಟಕ;
ಗಾವೊ ನ ಪರಮಾ ಮಿತ್ತಾ ಯಾಸು ಜಯಂತೆ ಓಷಧ
ಅನ್ನದ ವಲದ ಚೇತ ವನ್ನದ ಸುಖದ ತಥಾ
ಏತಂ ಅತ್ಥವಸಂ ನತ್ವ ನಸು ಗಾವೊ ಹನಿಂಸು ತೆ"

-ಸುತ್ತಪಿಟಕ II. Vii. 13 f.

ಬ್ರಾಹ್ಮಣದ ನಿದರ್ಶನದ ಮೇಲೆ ಕಾಲಕ್ರಮೇಣ ರಾಜನೂ ಸಹ ನೂರಾರು ಸಾವಿರ ಗೋವುಗಳನ್ನು ಬಲಿಕೊಟ್ಟನು(ಅದೇ. 25). ತತ್ಪರಿಣಾಮವಾಗಿ ಮೂರಿದ್ದ ವ್ಯಾಧಿಗಳು 98 ಆಗಿ ಗುಣಿತವಾದುವು (ಅದೇ. 28).

ಬುದ್ಧನು ಗೋವುಗಳನ್ನು ದೈವತ್ವಕ್ಕೇರಿಸಿರಲಿಲ್ಲವೆಂಬುದು ನಿಸ್ಸಂಶಯ. ಧರ್ಮೋಪದೇಶದಲ್ಲಿ ಬೋಧಿಸಿರುವ ಅಹಿಂಸೆಯ ಹಿನ್ನೆಲೆಯಲ್ಲಿರುವುದು ಗೋವಿನ ಉಪಯುಕ್ತತೆಯಾಗಿದೆ. ಇಂಡೋ-ಆರ್ಯನರು ಮೂಲ ಈಜಿಪ್ಟಿನವರಾದುದರಿಂದ ಗೋವು ಅವರ ಮೂಢಾರಾಧನೆಯ ವಸ್ತುವಾಗಿರಲಿಲ್ಲ (ನೆವಿಸ್ ಮತ್ತು ಎಪಿಸ್ ಬಸವಾರಾಧನೆಗಳ ವಿಕಾಸದಲ್ಲಿ ಒಂದು ಸಾದೃಶ್ಯವಿದೆ. ಇವೆರಡೂ ಟಾಹ್ ಮತ್ತು ರ ದೇವತೆಗಳ ಪ್ರತಿನಿಧಿಗಳೆಂದು ಈಜಿಪ್ಟಿನಲ್ಲಿ ಪರಿಗಣಿತವಾಗಿದ್ದುವು. ಅಲ್ಲಿ ಇವುಗಳನ್ನು

ದೈವಸ್ವರೂಪವೆಂದು ಪರಿಗಣಿಸುವುದು ಪ್ರಾಚೀನ ಯುಗದಲ್ಲಿ ಗೌರವಿಸಲಾಗುತ್ತು. ಹಾಗೂ ಹಿಂದೂಸ್ಥಾನಕ್ಕೆ ವಿದೇಶೀಯರು ಆಗಮಿಸಿದಾಗ ಶಿವನ ವಾಹನವಾಗಿ ನಂದಿ(ವೃಷಭ)ಯನ್ನು ಪ್ರತಿಷ್ಠಿಸಲಾಯಿತು. ಕುಶಾನರ ಹಾಗೂ ಸಿಥಿಯನ್ ರಾಜರ ಕಾಲದ ನಾಣ್ಯಗಳ ಮೇಲೆ ಹಾಗೂ ಗುಪ್ತರಾಜ ಮನೆತನ ಕಾಲದ ನಾಣ್ಯಗಳೊಂದರ ಮೇಲೂ ನಂದಿ (ವೃಷಭ) ವಾಹನ ಶಿವನನ್ನು ಚಿತ್ರಿಸಲಾಗಿದೆ. ಅದರ ಮೊದಲು ಸಿಂಧೂ ಹಾಗೂ ಮೊಹೆಂಜೊದಾರೊ ಕಾಲದ ನಾಣ್ಯಗಳಲ್ಲಿ, ಒಂದರ ಬದಲು ವೃಷಭದಂತಹ ಹಾಗೂ ಮತ್ತೊಂದರಲ್ಲಿ 'ಪಶುಪತಿ ಶಿವ' ಎಂದು ಕಂಡುಬರುತ್ತದೆ. ಇದನ್ನು ಡಿ. ಆರ್. ಭಂಡಾರ್ಕರ ರವರ ಲೆಕ್ಚರ್ಸ್ ಆನ್ ಏನ್ಷಿಯೆಂಟ್ ಇಂಡಿಯನ್ ನ್ಯೂಮಿಸ್ಮ್ಯಾಟಿಕ್ಸ್, ಪುಟ 18 ನೋಡಿರಿ. ಗೋವುಗಳು ದೈವಸ್ವರೂಪವೆಂಬ ಕಲ್ಪನೆ ಭಾರತದಲ್ಲಿ ಹಾಗೂ ವೃಷಭಾರೂಢನ(ಶಿವನ)ನು ಪರದೇಶಿಯರಿಂದ ಹುಟ್ಟಿ ಬಂದಿತೆ? ಗೋವನ್ನು ಕೆಲವು ವೇಳೆ ಪವಿತ್ರವಾಗಿ ಪರಿಗಣಿಸಿ ಪೂಜಿಸುವುದಾದರೆ, ಅದರ ವಿವರಣೆಯನ್ನು ಧಾರ್ಮಿಕತೆಗಿಂತಲೂ ಉಪಯುಕ್ತತಾತತ್ವಗಳಲ್ಲಿ ಕಂಡುಕೊಳ್ಳಬೇಕಾಗಿದೆ (ಕೊಡಬೇಕಾಗಿದೆ) (cf. ಮಹಾಭಾರತ XIII. 51. 26 ff; 69 8). ಗೋವನ್ನು ಹಾಲಿನಿಂದ ಸ್ತುತಿಸುವುದು ಹಾವಳಿಯ ಕಟ್ಟಳೆಯನ್ನು (ರಾಮಾಯಣ II. 75. 31; ಮಹಾಭಾರತ VII. 73.30; ಮಹಾಭಾರತ VII; 73.30 XIII. 93 117; 126. 28 ff. ಗೋವುಗಳಿಗೆ ತೊಂದರೆ ಕೊಡುವ ಕ್ರೂರ ಸಂಬಂಧವು ಪಟ್ಟಿಯಲ್ಲಿ ಭಾವಿಸಲಾಗಿದೆ. ಗೋವುಗಳ ಉಪಯುಕ್ತತೆಯು ಭಾವನೆಯು ಅಂತಿಮವಾಗಿ ಗೋವುಗಳ ಬಲಿ ಕೊಡುವಿಕೆಯು ನಿಷೇಧಿಸುವದಕ್ಕೆ ಒಡೆಯಾದಿತ್ತು ಹಾಗೂ ಗೋವುಗಳ ಸಂರಕ್ಷಣ ಒಳಿತೆಂಬುವದೆ ಮಾನ್ಯವಾದುದಾಗಿದೆ (ಮಹಾಭಾರತ XIII. 69. 44). [ಈ ಪಟ್ಟಿಕೆಯು ಅನುಶಾಸನಪರ್ವದಲ್ಲಿ ಗೋದಾನವನ್ನು ಕುರಿತ ಸುಮಾರು 13 ಅಧ್ಯಾಯಗಳ ನಿರೂಪಣೆಯಲ್ಲಿ ಬರುತ್ತದೆ. ಇದು ಬ್ರಾಹ್ಮಣ ಕಾಲಾಂತರದಲ್ಲಾದ ಪ್ರಕ್ಷೇಪವಿರಬೇಕು. ಇದು ಗೋವುಗಳ ಬಲಿಕೊಡುವಿಕೆಯು ಕ್ಷೀಣಿಸತೊಡಗಿದ ಅವಧಿಯನ್ನು ಸೂಚಿಸುತ್ತದೆ. ಬದಲಾಗಿ, ಮನು ಇದನ್ನು ಪಾಪವೆಂದು ಹೇಳಿ ಗೋ ಮಾಂಸ ಮಾರಾಟವನ್ನು ನಿಷೇಧಿಸಲಾಗಿದೆ (88. 71). ಗೋಮೂತ್ರವು ಅತ್ಯಂತ ಶುದ್ಧ ಎಂದು ಆರಂಭ ಕಾಲದ ಭಾಗಗಳಲ್ಲಿ ಹೇಳಲಾಗಿದೆ. ಗೃಹ್ಯಸೂತ್ರಗಳಲ್ಲಿ ಮಾತ್ರ ಕ್ಷೇತ್ರಪಾಲನ (ಸೃಷ್ಟಿಕರ್ತೃ ಮಂಗಳ ಸಂಕೇತ) ವೃಷಭವು ಹಾಲಿನ ಕವಿತೆಯ ಸಾಮರ್ಥ್ಯದ ಹಾಗೂ 'ಗ್ರಾಮಸ್ಥರೆಲ್ಲಾ ಒಟ್ಟಾಗಿ ಅದರಿಂದ ಒದಗಿದ ಕಳೆ ಬರಕ್ಕೆ ಹೋಗುವ ಹಾದಿ ಹಾಕಿ ಗೌರವಿಸಿ, ಅದನ್ನು ಸಮಾಧಿಯಲ್ಲಿ ಹೂಳುವರು' (ಸೆಕ್ಟ್ ಬುಕ್ಸ್ ಆಫ್ ದ ಈಸ್ಟ್, ಕಂಡಿಕೆ ಗಂಧಪರಾಯಣ ಪ್ರಾಚೀನ ಅವಲೋಕನ, IV.326). ಆದರೆ, ಅಂತಹ ಗೌರವವು ಅಷ್ಟು ಪ್ರಕಟವಾಗದಂತೆಯಲ್ಲಿ ಕುದುರೆ ಆನೆಗಳಿಗೂ ಸಲ್ಲಿಸಲಾಗುತ್ತದೆ, ಮಂಗಳಪಕ್ಷಿ(ಪಕ್ಷಿ)ಯು (I. 320) ಮಂಗಳ ಋಷಭ(ವೃಷಭ)

ಕ್ಕಿಂತಲೂ ಹೆಚ್ಚು ಪ್ರಧಾನವಾಗಿರುತ್ತದೆ. ಅಲ್ಲದೆ, ಇದಕ್ಕೆ ಬರವರಿಸ್ಥಿತಿಯ ವಿರುದ್ಧ ಹೋರಾಡಿಸುವ ಪ್ರಭಾವವೂ ಇರುತ್ತದೆ (VI. 487 ff. Cp ಕುರುಧಮ್ಮ–C), ಹಸ್ತಿ ಮಂಗಲ ಇಲ್ಲವೇ ಗಜೋತ್ಸವವು ಜಾತಕಗಳಲ್ಲಿ ತೀರ ಸಾಮಾನ್ಯವಾದ ವಿಚಾರ. ರಾಜನಾದವನು ಆನೆಯ ಲಾಯವನ್ನು ಸುಗಂಧದ್ರವ್ಯಗಳಿಂದ ಪರಿಮಳಗೊಳಿಸಿ, ಸುಗಂಧತೈಲದ ದೀಪಿಗೆಯನಿಸಿತ್ತ ಬಣ್ಣದ ಚಿತ್ತಾರಗಳನ್ನು ತೂಗು ಬಿಟ್ಟು, ಧೂಪದ ಬಟ್ಟಲಿರಿಸಿ, ಲದ್ದಿಯ ಮೇಲೆ ಬಂಗಾರದ ಬಟ್ಟಲಿರಿಸಿ, ಅದು ನಡೆದಾಡಲು ಕಾಲಡಿಯಲ್ಲಿ ರತ್ನಗಂಬಳಿ ಹಾಸಿ, ವಿವಿಧ ಬಗೆಯ ಸ್ವಾದಿಷ್ಟವಾದ ರಾಜಭೋಜನವನ್ನು ಕೊಡುವುದರ ಮೂಲಕ ಗೌರವಿಸುತ್ತಿದ್ದನು (ಜಾತಕ III. 384. cf. IV. 92). ಮ್ಲೇಚ್ಛರಾಜ ಸಾಲ್ವನ ಉಚ್ಚಜಾತಿಯ ಆನೆಯನ್ನು ಧೃತರಾಷ್ಟ್ರನ ಮಗನು ಪದೇ ಪದೇ ಪೂಜಿಸುತ್ತಿದ್ದನು (ಮಹಾಭಾರತ IX. 20. 3). ಮೇಲೆ ತಿಳಿಸಿದ ರೀತಿಯಲ್ಲೇ ಜಾಜೊತಪ್ಪದಂತೆ ರಾಜನೊಬ್ಬನು ಕುದುರೆಯನ್ನು ಸಹ ಗೌರವಿಸುತ್ತಿದ್ದ (ಜಾತಕ. II. 291). ಭಾರತಯುದ್ಧದಲ್ಲಿ, ಯುದ್ಧಾಶ್ವಗಳಿಗೆ ಸ್ನಾನ ಮಾಡಿಸಿ ಪುಷ್ಪಮಾಲೆ ಹಾಕುತ್ತಿದ್ದರು (VIII. 112.56). ಕುದುರೆ ಮರಿಯನ್ನು ದೇಶದ ಕುದುರೆಯಾಗಿ ಸ್ಥಾಪಿಸಿ ಅದರ ಮೇಲೆ ಪವಿತ್ರಜಲವನ್ನು ಪ್ರೋಕ್ಷಿಸಲಾಗುತ್ತಿತ್ತು (ಜಾತಕ II. 287). ಚಾತುರ್ಮಾಸಕಾಲದಲ್ಲಿ, ಹಾಗೂ ಎರಡು ಋತುಗಳ ಸಂಧಿಕಾಲದಲ್ಲಿ ಮೂರುಬಾರಿ ದೀಪಾರತಿಮಾಡಲಾಗುತ್ತಿತ್ತು. ಹಾಗೆಯೇ ಅಮಾವಾಸ್ಯೆ ಮತ್ತು ಪೌರ್ಣಿಮೆಗಳಲ್ಲೂ ಸಹ ಗಜಾಧಿಪತಿಗಳು (ಮಾವುತರು) ಆನೆಗಳ ಕ್ಷೇಮಾಭಿವೃದ್ಧಿಗಾಗಿ ಭೂತಬಲಿಗಳನ್ನು ಕೊಡಬೇಕು (ಅರ್ಥಶಾಸ್ತ್ರ II 32). ಕುದುರೆಗಳಿಗೆ ದಿನಕ್ಕೆರಡು ಬಾರಿ ಮಿಂಯಿಸಿ, ಸುಗಂಧಲೇಪಿಸಿ ಹೂವಿನಹಾರಗಳನ್ನು ಹಾಕಬೇಕು. ಅಮಾವಾಸ್ಯೆಯಂದು ಭೂತಬಲಿಯನ್ನು ಪೌರ್ಣಿಮೆಯಂದು ಪವಿತ್ರ ಮಂತ್ರೋಚ್ಚಾರಣೆಯನ್ನು ಮಾಡಬೇಕು. ಅಶ್ವಯುಜಮಾಸದ ನವಮಿಯಂದು ಯಾತ್ರೆಯಲ್ಲಿ ಪ್ರಯಾಣದ ಪ್ರಾರಂಭ ಹಾಗೂ ಕೊನೆಗಳಲ್ಲೂ ಹಾಗೂ ಕಾಯಿಲೆಯ ಕಾಲದಲ್ಲೂ ಪುರೋಹಿತರು ಕುದುರೆಗಳಿಗೆ ಆಶೀರ್ವಾದಮಾಡಿ ಆರತಿಯೆತ್ತಬೇಕು (ಅದೇ ಸ್ಥಳದಲ್ಲಿ, 30).

ದುಷ್ಟಶಕ್ತಿಗಳ ನಿವಾರಣೆಗೆಂದು ಮಾಡುವ ಈ ಮೂಢಾಚರಣೆಗಳು ದೇಶದ ಹಿತವನ್ನು ರಕ್ಷಿಸಿ ಎಲ್ಲ ಬಗೆಯ ಅಪಾಯಗಳಿಂದಲೂ ಯುದ್ಧಕ್ಕೆ ಬೇಕಾದ ಸಾಮಗ್ರಿಗಳನ್ನು ರಕ್ಷಿಸುವುದನ್ನು ಸೂಚಿಸುತ್ತದಲ್ಲದೆ ಮೂಢನಂಬಿಕೆಯ ಗೌರವ ಇಲ್ಲವೇ ಭಯದಿಂದ ಪ್ರಾಣಿಗಳ ದೇವತ್ವವನ್ನು ತೋರಿಸಿ ತಣಿಸುವುದಲ್ಲ. ಅವು ಗೋವು ಅಮೂಲ್ಯವಾದ ಹಾಲು, ಮೊಸರು, ಬೆಣ್ಣೆ ಮತ್ತು ತುಪ್ಪಗಳ ಸರಬರಾಯಿಗೆ ಮೂಲವಾಗಿರುವಂತೆ ಯುದ್ಧ ಮತ್ತು ಕ್ರೀಡೆಗಳಲ್ಲಿ ಅತ್ಯವಶ್ಯವಾಗಿದ್ದುವು. ಆ ಪ್ರಾಣಿಯನ್ನು ಕಾಲುಗಳಿಂದ

ಸ್ಪರ್ಶಿಸುವುದು ಪಾಪವಾದುದಾದರೆ, ಈ ಸಂಬಿಕೆಯಲ್ಲಿ ಕೆಲಸಗಾರನು ತನ್ನ ಸಾಧನವಸ್ತು (ಭಾರತೀಯರ ಮಾನಸಶಾಸ್ತ್ರೀಯ ಭಾವನೆಯಾದ) ತಾನೇ ಒದ್ದುಕೊಳ್ಳಬಾರದೆಂಬ ತತ್ವ ಅಡಗಿದೆ. ಪಸುವಿನ ಕೆಚ್ಚಲು, ಕುರಿಯ ಉಣ್ಣೆ ಮತ್ತು ಆನೆಯ ದಂತ ಇವೆಲ್ಲವೂ ಮುನ್ನೆಚ್ಚರಿಕೆ ಇಲ್ಲದ ಒಡೆಯರ ದುರಾಸೆಯ ಸಂರಕ್ಷಣಾದೃಷ್ಟಿಯಿಂದ ಕಾನೂನುವಿಧಿಗೊಳಪಟ್ಟಿವೆ. ಈ ರೀತಿ ಪ್ರಾಣಿಗಳಿಂದ ದುಡಿಸಿಕೊಳ್ಳುವುದು ಹಾಗೂ ಪ್ರಾಣಿಉತ್ಪನ್ನಗಳ ಪ್ರಯೋಜನ ದೃಷ್ಟಿಯು ಪ್ರಾಣಿಶಾಸ್ತ್ರ ಹಾಗೂ ಪಶುವೈದ್ಯಕೀಯ ಶಾಸ್ತ್ರ ಸುಧಾರಣೆ ಬೆಳವಣಿಗೆಗಳಿಗೆ ಎಡೆಮಾಡಿಕೊಟ್ಟಿತು. ಇದಕ್ಕೆ ಪಲಿಯನ್ (XIII. 7), ಅಶೋಕ ಮತ್ತು ಅರ್ಥಶಾಸ್ತ್ರಕಾರರು ಪ್ರಮುಖರಾಗಿದ್ದಾರಲ್ಲದೆ ಕೇವಲ ಸಾಕ್ಷಿಗಳಲ್ಲ. ಪ್ರಾಚೀನ ಭಾರತದಲ್ಲಿಯ ಪ್ರಾಣಿಸಂರಕ್ಷಣೆಯ ತಾತ್ವಿಕಹಿನ್ನೆಲೆಯು ಅಹಿಂಸಾಧರ್ಮ ಹಾಗೂ ಆರ್ಥಿಕ ಸಂರಕ್ಷಣೆ ತತ್ವಗಳಾಗಿದ್ದವು. ಇತರ ಕುಲಗಳಲ್ಲಿ ಪ್ರಾಚೀನ ಜನಾಂಗದ ಬುಡಕಟ್ಟಿನವರು ಕುಲದೇವತಾರಾಧನೆ ಮಾಡುತ್ತಿದ್ದರು. ಈ ಮೌಢ್ಯತೆಯು ಜಡವಸ್ತುಗಳ ಆರಾಧನೆ, ಇಲ್ಲವೇ ನಗರ ದೇವತೆಗಳು ಅಥವಾ 'ಹೆಸರುಗಳ ಮೇಲೆ' (nomes) ಆರಾಧಿಸುವಂತಹುದಾಗಿ ಪ್ರಬಲವಾಗಿದ್ದವು. ಇವು ಆ ಬುಡಕಟ್ಟುಗಳು ಮುಂದೆ ಕುಲದೇವತಾರಾಧನ ಪಂಥವನ್ನು ಮೀರಿ ಮುಂದುವರಿದಾಗಲೂ ಸಹ ಪಾವಿತ್ರ್ಯತೆಯ ಹಿನ್ನೆಲೆಯಲ್ಲಿ ಹಾಗೆಯೇ ಬದಲಾಗದೆ ಉಳಿದುಬಂದುವು. ಇಂಥ ವಿಧಿಗಳು ಇಂಡೊ ಆರ್ಯನ್ನರಿಗೆ ಹೊಸದಾಗಿದ್ದುವು. ಅವರ ಮತವಿಧಿಗಳ ಸರ್ವಚೇತನ ಪಂಥವನ್ನು ಮೀರಿ ಪ್ರಾಕೃತಿಕ ಶಕ್ತ್ಯುಪಾಸನೆ ಹಾಗೂ ಗ್ರಹದೇವತಾರಾಧನೆಯಲ್ಲಿ ನೆಲೆಯಾಗಿದ್ದುವು. ಇದು ಪ್ರಾಚೀನ ಇತಿಹಾಸದ ಶೋಧನೆಯ ಕಾಲದಲ್ಲಿ ಆಚರಣೆಯಲ್ಲಿದ್ದುದು ತಿಳಿದುಬರುತ್ತದೆ.

ದನಗಳ ತಳಿಯೆಬ್ಬಿಸುವಿಕೆ

ಈ ಮುಂದೆ ತಿಳಿಸಿರುವ ದನಗಳ ತಳಿಯೆಬ್ಬಿಸುವಿಕೆಯನ್ನು ಕುರಿತ ಉದ್ಧೃತ ಭಾಗವನ್ನು ಆರ್. ಗಂಗೋಪಾಧ್ಯಾಯರ 'ಅಗ್ರಿಕಲ್ಚರ್ ಅಂಡ್ ಅಗ್ರಿಕಲ್ಚರಿಸ್ಟ್ಸ್ ಇನ್ ಏನ್ಷಂಟ್ ಇಂಡಿಯಾ' ಎಂಬ ಕೃತಿಯಿಂದ ಆಯ್ದುಕೊಟ್ಟಿದೆ:

'ಅಗ್ನಿಪುರಾಣದಲ್ಲಿ, ರಾಜನಾದವನು ದೇಶದಲ್ಲಿ ದನಗಳ ತಳಿಸಂರಕ್ಷಣೆಯ ಹೊಣೆಯು ರಾಜನದಾಗಿತ್ತೆಂದು ಕಾಣುತ್ತೇವೆ. ಹೋರಿಗಳನ್ನು ಹಿಡಮಾಡುವುದಕ್ಕೆ ಕೆಲವು ಪ್ರತಿಬಂಧಕಗಳಿದ್ದುವು. ಚಕ್ರವರ್ತಿ ಅಶೋಕನು ಇದಕ್ಕಾಗಿ ಒಂದು ಶಾಸನ ಹೊರಡಿಸಿದ್ದನು:

'...... ....ಅಥಮಿಪಖಾಯೆ
ದಸಯೆ ಪನ್ನದಸಯೆ ತಿಸಯೆ ಪುನ
ವಸುನೆ ತಿಸ ಚತುಮಾಸಿಸು ಸುದಿವಸಯೆ
ಗೊನೆ ನ ನಿಲಖಿತವಿಯೆ ಅಜಕೆ ಇಡಕೆ।'

ಎಂದರೆ, ಹೋರಿ, ಹೋತ ಇಲ್ಲವೇ ಟಗರುಗಳನ್ನು ಪ್ರತಿ ಪಕ್ಷದ ಅಷ್ಟಮಿ, ದಶಮಿ, ಪಂಚದಶಿ ಹಾಗೂ ತ್ರಯೋದಶಿಗಳಲ್ಲಿ ಒಡಮಾಡಬಾರದು. ಹಾಗೆಯೇ ಪುನರ್ವಸು ನಕ್ಷತ್ರವಿದ್ದ ದಿನ, ಹಬ್ಬದ ದಿನ ಹಾಗೂ ವರ್ಷದ ಪ್ರತಿ ಚತುರ್ಥಮಾಸದಲ್ಲಿಯೂ ಒಡಮಾಡಬಾರದು.

ಗಂಗೆತ್ತುಗಳನ್ನು ಎಂದೂ ಒಡಮಾಡಬಾರದಲ್ಲದೆ ಕೆಲವು ಹಬ್ಬಹರಿದಿನಗಳಲ್ಲಿ ಅವುಗಳಿಗೆ ವಿಶೇಷ ಪೂಜಾಗೌರವಗಳು ಸಲ್ಲುತ್ತಿದ್ದುವು. ಅದರ ಬಲಪಕ್ಕೆಯ ಮೇಲೆ ಚಕ್ರ ಹಾಗೂ ಎಡಪಕ್ಕೆಯ ಮೇಲೆ ತ್ರಿಶೂಲಗಳ ಮುದ್ರೆ ಹಾಕಲಾಗುತ್ತಿತ್ತು. ಕಾರ್ತಿಕ ಇಲ್ಲವೇ ಆಶ್ವಿನ ಮಾಸದ ಪೌರ್ಣಮೆಯಲ್ಲಿ ಬರುವ ವೃಷೋತ್ಸರ್ಗ ಸಮಾರಂಭದಲ್ಲಿ ಗೂಳಿಗಳನ್ನು ಸ್ವತಂತ್ರವಾಗಿ ಬಿಡಲಾಗುತ್ತಿತ್ತು. ಅದಕ್ಕೆ ಮೇಲೆ ತಿಳಿಸಿದ ರೀತಿಯಲ್ಲಿ ಮುದ್ರೆಯೊತ್ತಿ, ಮೀಯಿಸಿ, ಸಿಂಗರಿಸಲಾಗುತ್ತಿತ್ತು. ಬಳಿಕ ಅದನ್ನು ಚೆನ್ನಾಗಿ ತೊಳೆದು ಸಿಂಗರಿಸಿದ ನಾಲ್ಕು ತರುಣ ಹಸುಗಳ ಸಮೀಪಕ್ಕೆ ಅದನ್ನು ಕರೆತಂದು ನಿಲ್ಲಿಸಿ, ಅದರ ಬಲಗಿವಿಯಲ್ಲಿ 'ಕರುಗಳ ಜನಕ' ಎಂಬ ಮಂತ್ರವುಚ್ಚರಿಸಿ, ಹಸುಗಳ ಕಿವಿಯಲ್ಲಿ 'ಈ ಪ್ರಾಯದ ಹೋರಿಯನ್ನು ನಿಮ್ಮ ಪತಿಯಾಗಿ ನೀಡುತ್ತೇನೆ' ಎಂದು ನುಡಿಯಲಾಗುತ್ತಿತ್ತು. ವಿಷ್ಣುವು LXXXIV ಅಧ್ಯಾಯದಲ್ಲಿ ಹೋರಿಯು ಕರುವಿರುವ, ಹಾಲುಕರೆಯುವ ಹಸುವಿನ ವಂಶದ್ದಾಗಿರಬೇಕೆಂದು ಸೂಚಿಸುತ್ತಾನೆ. ಅದರ ಯಾವ ಅಂಗವೂ ಊನವಾಗಿರಬಾರದು ಹಾಗೂ ಅದು ಮಂದೆಕಾಯುವ ಮುಖಂಡರಲ್ಲೊಂದಾಗಿರಬೇಕು. ಮತ್ಸ್ಯಪುರಾಣದ CCVII ಅಧ್ಯಾಯದಲ್ಲಿ ಹೋರಿಯ ಭುಜ ಹಾಗೂ ಹಿಣಿಲುಗಳು ಎತ್ತರವಾಗಿರಬೇಕು, ಬಾಲವು ಮೃದುವಾಗಿದ್ದು ನೇರವಾಗಿರಬೇಕು; ಮೃದು ಕಪೋಲ, ವಿಶಾಲ ಬೆನ್ನು, ಹೊಳಪು ಕಣ್ಣುಗಳು, ಮೊನಚು ಕೊಂಬುಗಳು, ಬಾಲದಲ್ಲಿ ದಟ್ಟರೋಮಗಳು ಹಾಗೂ ಹದಿನೆಂಟು ಸುದೃಢ ಹಲ್ಲುಗಳಿರಬೇಕೆಂದು ಉಲ್ಲೇಖಿಸಿದೆ. ಅಲ್ಲದೆ, ಹೋರಿಯು ಕಟ್ಟುಮಸ್ತಾಗಿದ್ದು ಗುಡುಗಿನಂತೆ ಗುಟುರುಹಾಕುವ, ಎತ್ತರ ನಿಲುವಿನದಾಗಿದ್ದು ಉದ್ರಿಕ್ತ ಆನೆಯ ನಡಿಗೆಯನ್ನು ಹೊಂದಿರಬೇಕು ಎಂಬ ಸೂಚನೆಯಿದೆ.

ಹೀಗೆ ಬಿಟ್ಟ ಹೋರಿ(ಗೂಳಿ)ಗಳು ಸಾರ್ವಜನಿಕ ಸ್ವತ್ತಾಗುತ್ತಿದ್ದುವು. ಇವು ತಳಿ ಹೆಚ್ಚಿಸುವ ಹೋರಿಗಳಾಗುತ್ತಿದ್ದುವು. ಆದುದರಿಂದಲೇ, ಹಿಂದಿನವರು ಅವುಗಳ ದೈಹಿಕ ರಚನೆಯ ಬಗ್ಗೆ ವಿಶೇಷ ಆಸಕ್ತಿ ತಳೆದಿದ್ದರು. ಅರ್ಥಶಾಸ್ತ್ರದಲ್ಲಿ ಹತ್ತು ಹಸು ಇಲ್ಲವೇ

ಎಮ್ಮೆಗಳಿರುವ ವ್ಯಾವೆಗೆ ಅನುಕ್ರಮವಾಗಿ ನಾಲ್ಕು ಹೋರಿ ಇಲ್ಲವೇ ಕೋಣಗಳಿರಬೇಕೆಂದು ನಿರೂಪಿಸಿದೆ (ವಿನ್‌ಕರ್ಡ್‌ನ ಸುಕದರ್‌ನಾಸ್ಕ್‌ನ III ನೆಯ ಕೃತಿಯಲ್ಲಿ ಹೋರಿಹಸುಗಳ ಸಮಾಗಮ ಕಾಲವನ್ನು ಕೊಟ್ಟಿವೆ).

ತಳಿಗಳು ಮುಖ್ಯವಾಗಿ ದನಗಳನ್ನು ಮೇಯಿಸುವಿಕೆಯನ್ನು ಮೂಲತಃ ಅವಲಂಬಿಸುವುದರಿಂದ ಈ ದಿಸೆಯಲ್ಲಿ ಜಾನುವಾರುಗಳನ್ನು ಮೇಯಿಸುವಿಕೆಯು ಅತ್ಯಂತ ಮುಖ್ಯವಾಗಿತ್ತು. ಋಗ್ವೇದ X; 27. 8, ರಲ್ಲಿ ಅವುಗಳಿಗೆ ಬಾರ್ಲಿ ಮತ್ತು ಜೋಳ ಉಣಿಸುತ್ತಿದ್ದುದು ವ್ಯಕ್ತವಾಗುತ್ತದೆ. ಅಗ್ನಿಪುರಾಣದಲ್ಲಿ ಕರುಗಳು ಮಾಸ (ಫೇಸಿಯೊಲಸ್ ರೇಡಿಯೇಟಸ್), ಎಳ್ಳು, ಗೋಧಿ, ಪರಿಶುದ್ಧಗೊಳಿಸಿದ ಬೆಣ್ಣೆ, ಹಾಲುಕೆನೆ ಮತ್ತು ಉಪ್ಪುಗಳ ಮೇವಿನಿಂದ ಅದ್ಭುತವಾಗಿ ಬೆಳೆಯುತ್ತಿದ್ದುದು ವ್ಯಕ್ತವಾಗುತ್ತದೆ.

ಮೂಗದಾರಹಾಕಿದ, ವೇಗ ಹಾಗೂ ಭಾರವೆಳೆಯುವುದರಲ್ಲಿ ಕುದುರೆಗಳಿಗೆ ಸಮಾನವಾದ ಹೋರಿಗಳಿಗೆ ಅರ್ಧ ಭಾರದಷ್ಟು ಹಸಿಹುಲ್ಲು, ಅದರ ಎರಡರಷ್ಟು ಸಾಮಾನ್ಯ ಹುಲ್ಲು, ಒಂದು ತುಲ (100ಪಲ) ಎಣ್ಣೆಹಿಂಡಿ, 10 ಅಢಕ ತವುಡು, 5ಪಲ ಉಪ್ಪು, ಮೂಗಿನ ಮೇಲೆ ಉಜ್ಜಲು 1 ಕುಡುಂಬದಷ್ಟು ಎಣ್ಣೆ, ಒಂದು ಪ್ರಸ್ಥ ನೀರು ಒಂದು ತುಲ ಹಣ್ಣುಗಳ ತಿರುಳು, ಒಂದು ಅಢಕ ಮೊಸರು, ಒಂದು ದ್ರೋಣ ಬಾರ್ಲಿ ಅಥವಾ ಬೇಯಿಸಿದ ಮಾಸ, ಒಂದು ದ್ರೋಣ ಹಾಲು ಅಥವಾ ಅರ್ಧ ಅಢಕ ಸುರೆ (ಮದ್ಯ), ಒಂದು ಪ್ರಸ್ಥ ಎಣ್ಣೆ ಅಥವಾ ತುಪ್ಪ (ಶುದ್ಧಗೊಳಿಸಿದ ಬೆಣ್ಣೆ), 10ಪಲ ಸಕ್ಕರೆ ಮತ್ತು ಒಂದುಪಲ ಶೃಂಗವೇರ ಫಲ(ಶುಂಠಿ)ವನ್ನು ಹಾಲಿಗೆ ಬದಲು ಕೊಡಬಹುದು. ಇದೇ ಸಾಮಗ್ರಿಗಳನ್ನು 1/4 ಭಾಗ ಕಡಮೆ ಮಾಡಿ ಹೇಸರಗತ್ತೆ, ದನ ಮತ್ತು ಕತ್ತೆಗಳಿಗೂ, ಇದರ ಎರಡರಷ್ಟು ಆಹಾರವನ್ನು ಎಮ್ಮೆ ಮತ್ತು ಒಂಟೆಗಳಿಗೂ ಆಹಾರವಾಗಿ ಕೊಡಬೇಕು.

ಪ್ರತಿಹಳ್ಳಿಗೂ ಸಾರ್ವಜನಿಕ ಹುಲ್ಲುಗಾವಲು ಮತ್ತು ಅರಣ್ಯಪ್ರದೇಶಗಳನ್ನು ಒದಗಿಸಲಾಗುತ್ತಿತ್ತು. ಅರಣ್ಯಪ್ರದೇಶಗಳ ಮೇಲಿನ ಸರ್ವಸಮಾನತ ಹಕ್ಕು ಮುಖ್ಯವಾಗಿದ್ದಿತು ಹಾಗೂ ಹಳ್ಳಿಗಳ ರಾಜಪತ್ರಿಗಳಲ್ಲಿ ಇವಕ್ಕೆ ವಿಶೇಷಾವಕಾಶಗಳನ್ನು ನೀಡಲಾಗುತ್ತಿತ್ತು. ಮನುವು ಗ್ರಾಮದ ಸುತ್ತಲೂ ನೂರು ಧನುಸ್ಸು ಅಥವಾ ಮೂರು ಸಮ್ಯಪಾರ(ಅಗಲವಷ್ಟು)ವನ್ನೂ ನಗರದ ಸುತ್ತ ಇದರ ಮೂರರಷ್ಟು ಸ್ಥಳವನ್ನೂ ಗೋಮಾಳಕ್ಕಾಗಿ ಕಾದಿರಿಸಬೇಕೆಂದು ವಿಧಿಸಿದ್ದಾನೆ. ಅರ್ಥಶಾಸ್ತ್ರಕೃತಿಯಲ್ಲಿ (Bk II, ch. 2) ಸಹ ಬೇಸಾಯಮಾಡದ ಭೂಮಿಯಲ್ಲಿ, ಜಾನುವಾರುಗಳು ಮೇಯಲು ರಾಜನು ಗೋಮಾಳಕ್ಕೆ ಅವಕಾಶ ಮಾಡಿಕೊಡಬೇಕೆಂದು ಸೂಚಿಸಲಾಗಿದೆ. ಈ ಹುಲ್ಲು ಗೋಮಾಳಗಳಲ್ಲಿ ಒಂದು

ಪಾಲುಹುಲ್ಲನ್ನು ದನಗಳೇ ಮೇಯುತ್ತವೆ; ಜನತೆಗೆ ಅರಣ್ಯಗಳಿಂದ ಸೌದೆಯೂ ದೊರಕುತ್ತಿತ್ತು. ಇದರಿಂದ ಬೆಂಕಿಯುರಿಸಲು ಸಗಣಿಯ ಬೆರಣಿ ತಟ್ಟುವುದರಿಂದಾಗುವ ಲಭ್ಯಗೊಬ್ಬರದ ಉಳಿತಾಯವಾಗುತ್ತಿತ್ತು. ವೃತ್ತಿಗೋವಳರು ದನಗಳ ಮಂದೆಯನ್ನು ಮೇಯಿಸುವುದಕ್ಕೆ ಕರೆದೊಯ್ಯುತ್ತಿದ್ದರು. ಇವರ ಹಿತಾಸಕ್ತಿ ಹಾಗೂ ಹೊಣೆಗಾರಿಕೆಯ ಬಗ್ಗೆ ಧರ್ಮಶಾಸ್ತ್ರಕಾರರು ಸಾಕಷ್ಟು ಗಮನಹರಿಸಿದ್ದಾರೆ. ಗೋವಳರು ಕತ್ತಲು ಹರಿದೊಡನೆ ಗೋವುಗಳನ್ನು ಮೇಯಿಸಲು ಕರೆದುಕೊಂಡುಹೋಗಿ ಅವು ಹುಲ್ಲುನೀರುಗಳನ್ನು ಸೇವಿಸಿದ ಬಳಿಕ ಸಂಜೆಯ ವೇಳೆಗೆ ಕರೆತರುತ್ತಿದ್ದರು(ಮನು, VIII, 230). ಇಂದಿನಂತೆಯೇ ಹಿಂದಿನಕಾಲದಲ್ಲಿಯೂ ಸಹ ನಾದಕ್ಕಾಗಿ ಗೋವುಗಳ ಕೊರಳಿಗೆ ಘಂಟೆಗಳನ್ನು ಕಟ್ಟುತ್ತಿದ್ದರು. ಇದರಿಂದ ಅವೇನಾದರೂ ಕಾಡಿನಲ್ಲಿ ಹಾದಿತಪ್ಪಿದಾಗ, ಘಂಟಾನಾದದಿಂದ ಅವುಗಳ ಪತ್ತೆಹಚ್ಚಲು ನೆರವಾಗುತ್ತಿತ್ತು. ಕೆಲವುವೇಳೆ ಹುಲ್ಲುಮಾಳವು ವಿವಿಧ ಹಂಗಾಮುಗಳಿಗೆಂದು ವಿಂಗಡಿಸಲಾದ ಅರಣ್ಯಪ್ರದೇಶಗಳೊಳಗೇ ಇರುತ್ತಿದ್ದುವು; ಇಂಥಲ್ಲಿ ಕಳ್ಳಕಾಕರು, ಹುಲಿಗಳು ಮತ್ತಿತರ ಹಿಂಸಾಪಶುಗಳನ್ನು ಬೇಟೆಗಾರರು ತಮ್ಮ ಬೇಟೆನಾಯಿಗಳ ನೆರವಿನಿಂದ ಓಡಿಸುತ್ತಿದ್ದರು(see the Arthasastra BK. II, ch. XXIX). ಅರ್ಥಶಾಸ್ತ್ರವು 'ದನಗಳನ್ನು ಮೇಯಿಸುವಾಗ ಅವುಗಳನ್ನು ಸಮಾನವರ್ಣದ ಹತ್ತುದನಗಳ ಗುಂಪುಗಳಾಗಿ ವಿಂಗಡಿಸಬೇಕೆಂದು ತಿಳಿಸುತ್ತದೆ'. ಗೋವುಗಳಿಗೆ ತಗಲುವ ರೋಗರುಜಿನಗಳ ಪರಿಚಯ ಹಾಗೂ ಪರಿಹಾರೋಪಾಯಗಳು ಗೋವಳರಿಗೆ ತಿಳಿದಿರಬೇಕಿತ್ತು. ಹುಲ್ಲುಮಾಳದಲ್ಲಿ ಮೇಯುವಾಗ ದನಗಳ ಸಂಪೂರ್ಣ ರಕ್ಷಣೆಯ ಹೊರೆಯು ಗೋವಳರದಾಗಿತ್ತು. ಗೋವಳನೊಬ್ಬನ ಉಪೇಕ್ಷೆಯಿಂದ ಯಾವುದಾದರೊಂದು ಪ್ರಾಣಿ ಕಳೆದುದಾದರೆ, ಅವನು ಆ ನಷ್ಟವನ್ನು ತುಂಬಿಕೊಡಬೇಕಾಗುತ್ತಿತ್ತು (Manu VIII, 232; The Arthasastra, Loc. Cit.). ಪ್ರಾಣಿಯೊಂದು ಸಹಜವಾಗಿ ಮರಣವನ್ನಪ್ಪಿದಾಗ ಗೋವಳನು ಅದರ ಚರ್ಮ, ಕೊಬ್ಬು, ಪಿತ್ತಕೋಶ, ನೆಣ, ಹಲ್ಲುಗಳು, ಗೊರಸುಗಳು, ಕೊಂಬುಗಳು ಮತ್ತು ಮೂಳೆಗಳನ್ನು ತಂದೊಪ್ಪಿಸಬೇಕಾಗಿದ್ದಿತು (The Arthasastra Loc. cit.). ಗೋವಳರು ಮಂದೆಕಾಯುವುದಕ್ಕೆ ಪ್ರತಿಯಾಗಿ ಮನುವು '100ಗೋವುಗಳ ಪಾಲನೆಗೆ ಗೋವಳನಿಗೆ ವರ್ಷಕ್ಕೆ ಒಂದು ಕಡಸನ್ನು ಕೊಡಬೇಕೆಂದು ವಿಧಿಸುತ್ತಾನೆ. 200 ಹಸುಗಳನ್ನು ಪಾಲಿಸಿದರೆ ಬಂದು ಕರೆಯುವ ಹಸು ಕೊಡಬೇಕು. ಜೊತೆಗೆ ಆತ ಎಂಟುದಿನಕ್ಕೊಮ್ಮೆ ಎಲ್ಲ ಹಸುಗಳಿಂದಲೂ ಹಾಲುಕರೆದುಕೊಳ್ಳಲು ಅವಕಾಶವಿರಬೇಕು,' (VIII, 231).

ಬೆಳೆಗಳ ಕೊಯ್ಲಾದ ಬಳಿಕ, ಅಂಥ ಸಾಗುಜಮೀನು ಹಾಗೂ ಪಾಳುಬಿಟ್ಟ ಭೂಮಿಗಳಲ್ಲಿ ದನಗಳನ್ನು ಮೇಯಿಸಲಾಗುತ್ತಿತ್ತು. ಸಾಗುಭೂಮಿಯಲ್ಲಿಯ ಕಳೆಗಳು, ಕೊಯ್ಲಿನಲ್ಲಿ ಕೆಳಗೆಬಿದ್ದ ಕಾಳುಗಳಿಂದ ಹುಟ್ಟಿದ ಗಿಡಗಳು, ಕೂಳೆ ಮತ್ತು ಜಮೀನಿನಂಚಿನಲ್ಲಿ ಹಾಗೂ ದೊಡ್ಡ ನೀರ್ಗಾಲುವೆಗಳುದ್ದಕ್ಕೂ ಬೆಳೆದಿರುವ ಹುಲ್ಲುಗಳನ್ನು ಇಂದಿನಂತೆಯೇ ದನಗಳು ಮೇಯಲು ಅವಕಾಶವಿತ್ತು. ಮೇವಿನಬೆಳೆಗಳನ್ನು ಬೆಳೆದು ಒಣಮೇವು ಸಿದ್ಧಪಡಿಸಲಾಗುತ್ತಿತ್ತು. ಇದು ಭಾರತದಲ್ಲಿ ಅನುಸರಿಸುತ್ತಿದ್ದ ಒಂದು ಹಳೆಯ ಪದ್ಧತಿಯಾಗಿದೆ. ಇದು ಋಗ್ವೇದದಲ್ಲಿ ಬರುವ ಸುಜವಸ್ (RV. VI,28. 7; VII, 99, 3) ಎಂಬ ಶಬ್ದದಿಂದ ವ್ಯಕ್ತವಾಗುತ್ತದೆ. ಬೇಸಾಯಗಾರರು ತಮ್ಮ ಜಾನುವಾರುಗಳಿಗೆ ಒಣಹುಲ್ಲನ್ನೂ ಸಹ ಕೊಡುತ್ತಿದ್ದರು.

ಋಗ್ವೇದಕಾಲದಲ್ಲಿ, ಹೈನದ ಆಕಳಿಂದ ದಿನಕ್ಕೆ ಮೂರುಬಾರಿ–ಎಂದರೆ ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಂಜೆಕಾಲಗಳಲ್ಲಿ ಹಾಲುಕರೆಯಲಾಗುತ್ತಿತ್ತು. ಡಾ। ದಾಸರು ಹಸುಗಳ ಹಾಲುಕರೆಯುವುದು ಸಾಮಾನ್ಯವಾಗಿ ಬೆಳೆದ ಹೆಣ್ಣುಮಕ್ಕಳ (ದುಹಿತೃ) ಕರ್ತವ್ಯವಾಗಿದ್ದಿತು. ದುಹಿತೃ ಎಂದರೆ ಹಾಲುಕರೆಯುವ ವ್ಯಕ್ತಿ ಎಂದರ್ಥ, ಎಂದಿದ್ದಾರೆ. ಇದು ಈ ವಿಚಾರದ ಸುಸ್ಪಷ್ಟವಾದ ಜೀವಂತ ಚಿತ್ರಣವನ್ನು ನೀಡುತ್ತದೆ (Vide Rigvedic Culture, p. 123). ಇಲ್ಲಿಂದ ಮುಂದಿನ ಅವಧಿಯಲ್ಲಿ, ಹಾಲುಕರೆಯುವ ವೇಳೆಯನ್ನು ಋತುಮಾನಗಳಿಗನುಗುಣವಾಗಿ ದಿನಕ್ಕೊಮ್ಮೆ ಇಲ್ಲವೇ ಎರಡು ವೇಳೆ ಕರೆಯುವುದನ್ನು ಕುರಿತ ನಿರ್ದಿಷ್ಟ ನಿಯಮಗಳನ್ನು ವಿಧಿಸಿರುವುದು ಕಂಡುಬರುತ್ತದೆ. ಇದರಂತೆ ಚಳಿಗಾಲ, ವಸಂತ ಮತ್ತು ಬೇಸಗೆಗಳಲ್ಲಿ ದಿನಕ್ಕೊಂದುವೇಳೆಯೂ, ಶರದೃತು, ಚಳಿಗಾಲದ ಪೂರ್ವಾರ್ಧಕಾಲದಲ್ಲಿ ಎರಡುವೇಳೆ ಹಾಲುಕರೆಯಬೇಕು. ಒಂದು ದ್ರೋಣ ಆಕಳಹಾಲಿನಿಂದ ಒಂದು ಪ್ರಸ್ಥ ಬೆಣ್ಣೆಯೂ ಎಮ್ಮೆ ಹಾಲಿನಿಂದ 1/7 ಪ್ರಸ್ಥದಷ್ಟು ಹೆಚ್ಚು ಬೆಣ್ಣೆಯೂ ದೊರಕುತ್ತಿತ್ತು; ಹಾಲಿನ ಪರಿಶುದ್ಧತೆಯನ್ನು ಕಡೆಯುವುದರಿಂದ ತಿಳಿಯಲಾಗುತ್ತಿತ್ತು. ಅರ್ಥಶಾಸ್ತ್ರದಲ್ಲಿ ಹಾಲು ಮತ್ತು ಬೆಣ್ಣೆಗಳ ಹೆಚ್ಚಳವು, ಮಣ್ಣಿನ ಸ್ವಭಾವ ಹಾಗೂ ಆಕಳುಣ್ಣುವ ಮೇವುನೀರುಗಳ ಪ್ರಮಾಣ ಮತ್ತು ಗುಣಮಟ್ಟಗಳಿಗನುಗುಣವಾಗಿರುತ್ತದೆಂದು ಹೇಳಲಾಗಿದೆ. ಅಗ್ನಿಪುರಾಣದಲ್ಲಿ ಹಾಲುತ್ಪಾದನೆಯನ್ನು ಹೆಚ್ಚಿಸಲು ಹಸುವಿಗೆ ಅಶ್ವಗಂಧ ಮತ್ತು ಎಳ್ಳಿನ (ಫಿಸಾಲಿಸ್ ಫ್ಲೆಕ್ಸುವೊಸ ಲಿನ್) ಗಿಡಸು ಕಡ್ಡಿಗಳನ್ನು ಕೊಡಬೇಕೆಂದು (ನೋಡಿ ಅಧ್ಯಾಯ CCXII' Verse 35) ನಿರ್ದೇಶಿಸುತ್ತದೆ.

ಒಟ್ಟಿನಲ್ಲಿ ಪ್ರಾಚೀನ ಕಾಲದಲ್ಲಿ ಆಧುನಿಕ ಕಾಲಕ್ಕಿಂತ ಉತ್ತಮತಳಿಯ ದನಗಳಿದ್ದುವು, ಕರೆಯುವ ಆಕಳು ಹೆಚ್ಚು ಉತ್ಪಾದಕವಾಗಿದ್ದುವು ಹಾಗೂ ನೇಗಿಲೆಳೆಯುವ ದನಗಳು ಆಧುನಿಕಯುಗದವುಗಳಿಗಿಂತ ಸಾಮಾನ್ಯವಾಗಿ ಹೆಚ್ಚು ಸಾಮರ್ಥ್ಯಶಾಲಿಗಳಾಗಿದ್ದವೆಂದು ಸಮಾರೋಪಿಸಬಹುದು.

ಅಧ್ಯಾಯ 14

ದನಗಳ ವೈದ್ಯಕೀಯ ಚಿಕಿತ್ಸೆ

ಪ್ರಾಚೀನ ಭಾರತದಲ್ಲಿ ಸಾಕುಪ್ರಾಣಿಗಳ ರೋಗಗಳು ಮತ್ತು ಅವುಗಳ ಚಿಕಿತ್ಸಾ ವಿಧಾನದ ಬಗ್ಗೆ ಭಾರತೀಯರಿಗೆ ಸಾಕಷ್ಟು ತಿಳಿವಳಿಕೆಯಿತ್ತು. ಇಂದು ಪಶುವೈದ್ಯಕೀಯ ಕ್ಷೇತ್ರದಲ್ಲಿ ಸಾಕಷ್ಟು ಆಧುನಿಕ ಪ್ರಗತಿಯಾಗಿದ್ದು ನರಳುತ್ತಿರುವ ಪ್ರಾಣಿಯ ರೋಗ ನಿದಾನ ತಂತ್ರ ಹಾಗೂ ಚಿಕಿತ್ಸಾ ವಿಧಾನದ ಬೆಳಕಿನಲ್ಲಿ ಹಿಂದಿನ ವಿಧಾನಗಳು ಸಾಕಷ್ಟು ಒರಟಾಗಿ ತೋರಬಹುದು. ಆದಾಗ್ಯೂ ಅವು ಕುತೂಹಲಕಾರಿಯಾಗಿವೆ. ವಿಷ್ಣುಧರ್ಮೋತ್ತರ ಮಹಾಪುರಾಣ (500-700A.D.) ಕೃತಿಯಿಂದ ಆಯ್ದ ಕೆಲವು ಮುಖ್ಯಭಾಗಗಳ ಅನುವಾದವನ್ನು ಕೆಳಗೆಕೊಡಲಾಗಿದೆ. ಇದು ಓದುಗರಿಗೆ ರೋಗಗ್ರಸ್ತ ಪ್ರಾಣಿಗಳನ್ನು ಹಿಂದೆ ಚಿಕಿತ್ಸೆಮಾಡುತ್ತಿದ್ದ ಪದ್ಧತಿಗಳ ತಿಳಿವಳಿಕೆ ನೀಡುತ್ತದೆ.

ಪುಷ್ಕರನು, ಓರಾಮ! ಚಿತ್ತವಿಟ್ಟು ಕೇಳು, ಇಲ್ಲಿಂದ ಮುಂದೆ ದನಗಳ ಚಿಕಿತ್ಸಾ ವಿಧಾನವನ್ನು ಸ್ಥೂಲವಾಗಿ ವಿವರಿಸುತ್ತೇನೆ. ಇದು ಅವುಗಳಿಗೆ ಮುಖ್ಯವಾಗಿದ್ದು ಉಪಯುಕ್ತವಾದುದಾಗಿದೆ (ಶ್ಲೋ. 1).

ಶುಂಠಿ, ಬಚೆ ಮತ್ತು ಜಾತಮಾಂಸಿ ಗಳನ್ನು ಜಜ್ಜಿ ಬೇಯಿಸಲಾದ ಎಣ್ಣೆಗೆ ಕಲ್ಲುಪ್ಪು (ಸೈಂಧವ ಲವಣ) ಮತ್ತು ಜೇನುತುಪ್ಪಗಳನ್ನು ಸೇರಿಸಿ ದನಗಳ ಕೊಂಬುಗಳ ಮೂಲಸ್ಥಾನಕ್ಕೆ ಹಚ್ಚಬೇಕು; ಇಲ್ಲವೇ ಇದೇರೀತಿ ತುಪ್ಪದಲ್ಲಿ ಸಿಮಿ(?) ಪುಡಿಯನ್ನು ಬೆರೆಸಿ ಹಚ್ಚಬೇಕು. (ಶ್ಲೋ. 2-3a).

ಮಂಜಿಷ್ಠ, ಹಿಂಗು ಮತ್ತು ಕಲ್ಲುಪ್ಪುಗಳನ್ನು ಬೇಯಿಸಿದ ಎಣ್ಣೆ ಇಲ್ಲವೇ ಗೋವಿನ ಹಾಲನ್ನು ದನಗಳ ಕರ್ಣಮೂಲಸ್ಥಾನದಲ್ಲಿ ಹಚ್ಚಬೇಕು (ಶ್ಲೋ. 3b-4a).

ಆಡಿನ ಹಾಲಿನಲ್ಲಿ ಜೇನು, ಕಲ್ಲುಪ್ಪು, ಶಂಖ, ಟಗರಿ(?), ಬಾಲಮೆಣಸು ಮತ್ತು ಸಿಪ(?)ಗಳನ್ನು ಅರೆದು ಅದರಿಂದ ಗುಳಿಗೆಗಳನ್ನು ಸಿದ್ಧಪಡಿಸಬೇಕು. ಈ ಗುಳಿಗೆಗಳನ್ನು ತುಪ್ಪ ಮತ್ತು ಜೇನುತುಪ್ಪದಲ್ಲಿ ತೇದು ಹಾಕಿದರೆ ಕಣ್ಣುಗಳಿಗೆ ಒಳ್ಳೆಯ ಅಂಜನ (ಕಾಡಿಗೆ) ವಾಗುತ್ತದೆ (ಶ್ಲೋ. 4b-5).

ಬೇಲದಮರ, ಅಪಮಾರ್ಗ, ಧಾತಕಿ (ಕಗ್ಗಲಿಮರ), ಪಾಟಲ ಮತ್ತು ಕುಟಜ

ವೃಕ್ಷಬೇರುಗಳ ಪುಡಿಯನ್ನು ವಸಡು(ಹಲ್ಲುಗಳಬೇರು)ಗಳಿಗೆ ತಿಕ್ಕುವುದರಿಂದ ಹಲ್ಲು ನೋವು ನಿವಾರಣೆಯಾಗುತ್ತದೆ (ಶ್ಲೋ. 6).

ಹಲ್ಲುನೋವು ನಿವಾರಣೆಗೆಂದು ತಿಳಿಸಿದ ವಸ್ತುಗಳನ್ನೆಲ್ಲ ಹಾಕಿ ಬೇಯಿಸಿದಂತಹ ತುಪ್ಪವು ನಾಲಗೆಯ ಬಾಯಿಹುಣ್ಣು ಇತ್ಯಾದಿ ಬಾಯಿರೋಗಗಳನ್ನು ಗುಣಪಡಿಸುತ್ತದೆ. ಕಲ್ಲುಪ್ಪು ನಾಲಗೆಯ ವ್ಯಾಧಿಗಳಿಗೆ ಉಪಯುಕ್ತ (ಶ್ಲೋ.7).

ಶುಂಠಿ, ಎರಡು ಜಾತಿಯ ಅರಿಶಿನಕೊಂಬು ಹಾಗೂ ಅಳಲೆಕಾಯಿತ್ರಯಗಳನ್ನು ಗಂಟಲು ಹುಣ್ಣಿಗೆ ಸೂಚಿಸಲಾಗಿದೆ. ಶುಂಠಿ, ಎರಡು ಜಾತಿಯ ಅರಿಶಿನಕೊಂಬು, ಕುಟಜ, ಅಪಮಾರ್ಗ ಮತ್ತು ವಿದಂಗಗಳ ತೊಗಟೆಗಳನ್ನು ಉಪ್ಪಿನೊಡನೆ ಸೇರಿಸಿ ಬಳಸುವುದರಿಂದ ಬಾಯಿವ್ಯಾಧಿಗಳು ನಿವಾರಣೆಯಾಗುತ್ತವೆ ಹಾಗೂ ಜ್ವರತಾಪದ ಅನಾರೋಗ್ಯವನ್ನು ಸಹ ಉಪಶಮನಗೊಳಿಸುತ್ತದೆ (ಶ್ಲೋ. 8–9).

ದನಗಳ ಮೂತ್ರಕೋಶದೊಳಬಾಧೆ, ವಾತವ್ಯಾಧಿ, ಗಾಯಗಳು ಹಾಗೂ ಮೂಗೇಟು(ತೆರೆದಗಾಯ)ಗಳಿಗೆ ಅಳಲೆಕಾಯಿತ್ರಯಗಳ ಪುಡಿಯನ್ನು ತುಪ್ಪದಲ್ಲಿ (ಕರಗಿಸಿದ್ದು) ಕರಗಿಸಿ ಕುಡಿಯಲು ಕೊಡುವುದು ಒಳ್ಳೆಯದು (ಶ್ಲೋ. 10).

ದನಗಳ ಎಲ್ಲ ಬಗೆಯ ಹೃದ್ರೋಗ ನಿವಾರಣೆಗೆ, ಶತಪುಷ್ಪ, ಕುಟಜ ಮತ್ತು ಚಿತ್ರಕಗಳನ್ನು ಬೇಯಿಸಲಾದ ಎಣ್ಣೆಯನ್ನು ಕೊಡಬೇಕು (ಶ್ಲೋ. 11).

ಆಮಶಂಕೆಯಾದಾಗ, ಎರಡುಬಗೆಯ ಅರಿಶಿನ ಮತ್ತು ಪಥ(?)ಗಳನ್ನು ಕೊಡಬೇಕು ಹಾಗೂ ಮಲಬದ್ಧತೆಗೆ ಪದ್ಮಚಾರಿಣಿ(ಅರಿಶಿನ?)ಯನ್ನು ತುಪ್ಪದೊಡನೆ ಬೆರೆಸಿ ಕೊಡಬೇಕು (ಶ್ಲೋ. 12).

ಎಲ್ಲ ಬಗೆಯ ಕುಷ್ಠವ್ಯಾಧಿಗಳು, ಕೊಂಬುವ್ಯಾಧಿಗಳು ಹಾಗೂ ಕೆಮ್ಮುಗಸೆ(ದಮ್ಮು?) ರೋಗಗಳಿಗೆ ಶುಂಠಿ ಮತ್ತು ದರ್ವಿ(?)ಗಳನ್ನು ಕೊಡಬೇಕು (ಶ್ಲೋ. 13).

ಮುರಿದ ಮೂಳೆಯು ಕೂಡಿಕೊಳ್ಳಲು ಉಪ್ಪಿನೊಡನೆ ಬೆರೆಸಿದ ಪ್ರಿಯಂಗ ಉಪಯುಕ್ತವಾಗಿರುತ್ತದೆ. ವಾತವಿಕಾರಗಳಲ್ಲಿ ದನಗಳಿಗೆ ಶತಪುಷ್ಪವನ್ನು ಬೇಯಿಸಿದ ಎಣ್ಣೆ ಕೊಡಬೇಕು. ಇದು ಅಂಥ ತೊಂದರೆಗಳಿಗೆ ಒಂದು ನಿರ್ದಿಷ್ಟ ಔಷಧಿಯಾಗಿದೆ. ಶ್ಲೇಷ್ಮ

ವ್ಯಾಧಿಗಳಿಗೆ ಒಣಬಟಾಣಿಕಾಳು ಬೇಯಿಸಿ ಮಾಡಿದ ಕಟ್ಟಿಗೆ ಜೇನುತುಪ್ಪ ಬೆರೆಸಿ ಕೊಡ ಬೇಕು(ಶ್ಲೋ. 14–15).

ಎಲ್ಲ ಬಗೆಯ ಪಿತ್ತವ್ಯಾಧಿಗಳಿಗೂ ಅತಿಮಧುರದ ಬೇರನ್ನು ಬೇಯಿಸಲಾದ ತುಪ್ಪವು ಪರಿಹಾರಕಾರಿ. ಇದನ್ನು ಅಂತಹ ವ್ಯಾಧಿಗಳು ತಲೆದೋರಿದಾಗ ಕೊಡಬೇಕು (ಶ್ಲೋ. 16).

ಪಿತ್ತದಿಂದಾಗಿ ತಲೆದೋರುವ ರಕ್ತಕೆಡುವಿಕೆಗೆ ಕಕೋಟಕ ರಸದ ಗುಟುಕುಗಳನ್ನು ಕೊಡಬೇಕು. ಯಾವ ಚಿಕಿತ್ಸೆಗೂ ನಿಲ್ಲದ ರಕ್ತಸ್ರಾವವಿರುವಾಗ, ದನಗಳಿಗೆ ಗೋಧಿಹಿಟ್ಟು, ಮಸ ಮತ್ತು ಸಾಸುವೆಗಳನ್ನು ನೀರಿನಲ್ಲಿ ಗೊಟಾಯಿಸಿ ಬೆಲ್ಲದೊಡನೆ ಬೆರೆಸಿ ಕುಡಿಯಲು ಕೊಡಬೇಕು. ಇಂಥ ಪ್ರಸಂಗಗಳಲ್ಲಿ ಇದು ಒಳಿತು (ಶ್ಲೋ. 17–18).

ಎಳ್ಳು, ಅಂಭುಕರುಹ (ಕಮಲಗಳು?), ಹಳದಿ ಹರಿದಳ ಮತ್ತು ತುಪ್ಪಗಳಿಂದ ಸಿದ್ಧಗೊಳಿಸಿದ ಮುಲಾಮು ದನಗಳ ತೆರೆದಗಾಯಗಳಿಗೆ ಹಚ್ಚಲು ಅತ್ಯುತ್ತಮ ಔಷಧಿ (ಶ್ಲೋ. 19).

ಬೇನೆಯಿಂದ ನರಳುತ್ತಿರುವ ಕರುಗಳಿಗೆ, ಮಜ್ಜಿಗೆಯಲ್ಲಿ ಕಡೆದ ಪತ ಅಥವಾ ಅರಿಸಿನ ಕದಡಿದ ಹಾಲು ಕುಡಿಸುವುದರಿಂದ ನರಳುವಿಕೆಯು ಉಪಶಮನವಾಗುತ್ತದೆ (ಶ್ಲೋ. 20).

ಹಸುಗಳ ಹಾಲು ಮತ್ತು ತುಪ್ಪದಲ್ಲಿ ಮಾಸ, ಎಳ್ಳು ಮತ್ತು ಗೋಧಿ(ಹಿಟ್ಟು), ಗಳನ್ನು ಸೇರಿಸಿ ರುಚಿಗೆ ಉಪ್ಪು ಸೇರಿಸಿ ಮಾಡಿದ ಗುಳಿಗೆಗಳು ಕರುಗಳಿಗೆ ಹೆಚ್ಚು ಪುಷ್ಟಿಕರವಾಗಿರುತ್ತವೆ; ಹೋರಿಗಳಿಗೆ ಶಕ್ತಿದಾಯಕವಾಗಿರುತ್ತವೆ (ಶ್ಲೋ. 21).

ದೇವದಾರು, ವಲ, ಜಾತವಮಾಂಸಿ, ಹಿಂಗು, ಸಾಸುವೆ ಮತ್ತು ಗುಗ್ಗುಲಗಳನ್ನು ಸ್ವಲ್ಪ ತುಪ್ಪದೊಡನೆ ಸೇರಿಸಿ ತಯಾರಿಸಿದ ಸುಗಂಧ ಧೂಪನವು ಶುಭಕರವಾಗಿದ್ದು ಎಲ್ಲ ಗ್ರಹಗಳ ದುಷ್ಟಭಾವವನ್ನೂ ನಿವಾರಿಸುತ್ತದೆ. ಮೇಲೆ ತಿಳಿಸಿದ ಸುಗಂಧ ಧೂಪನ ಮಾಡಿದ ಗಂಟೆಯನ್ನು ಸಹ ದನಗಳ ಕೊರಳಿಗೆ ಕಟ್ಟಬೇಕು (ಶ್ಲೋ. 22–23).

ಅಶ್ವಗಂಧ, ಎಳ್ಳು ಮತ್ತು ಶಕ್ರ ಎಂಬ ವಿಶೇಷಬಗೆಯ ಪುಲ್ಲಿಂಪುರಚಿಗಳು

ಮೂತ್ರಪಿಂಡ ಶುದ್ಧಗೊಳಿಸುವುದರಲ್ಲಿ ಉಪಯುಕ್ತವಾದುವು. ಅಶ್ವಗಂಧ ಮತ್ತು ಎಳ್ಳು ಗಳೊಡಬೆರೆಸಿದ ಮಜ್ಜಿಗೆಯು ಸಹ ಮೂತ್ರಪಿಂಡಗಳಿಗೆ ಒಳ್ಳೆಯದು. ಇದರಿಂದ ಭೃಗು ವಂಶದ ಗೋಕ್ಷೀರವು ವೃದ್ಧಿಯಾಗುತ್ತದೆ (ಶ್ಲೋ. 24).

ಹೇಗಾದರೂ! ಎಣ್ಣೆಹಿಂಡಿಗಳನ್ನು ದನಗಳ ಸಂಜೀವಿನಿ(ದಿವ್ಯೌಷಧ)ಯೆಂದು ಪರಿ ಗಣಿಸಲಾಗಿದೆ. ಹಸಿಹುಲ್ಲು ಮತ್ತು ತಣ್ಣನೆಯ ಕುಡಿಯುವ ನೀರುಗಳನ್ನು ಮೇವಿ ನಿಂದ ವರ್ಜಿಸಬೇಕು (ಶ್ಲೋ. 25).

ರಾತ್ರಿಯವೇಳೆಯಲ್ಲಿ ದನಗಳ ಕೊಟ್ಟಿಗೆಯಲ್ಲಿ ದೀವಿಗೆ ಹಚ್ಚಿರಬೇಕು (ಶ್ಲೋ.27).

ನಿರೋಧಕವಾಗಿ ದನಗಳಿಗೆ ಹದಿನೈದು ದಿನಗಳಿಗೊಮ್ಮೆ ನಿಯತವಾಗಿ ಉಪ್ಪು ಕೊಡಬೇಕು. ಇದು ಮಲಬದ್ಧತೆ, ಹೊಟ್ಟೆಶೂಲೆಗಳನ್ನು ನಿವಾರಿಸಿ ಹಸಿವುಂಟುಮಾಡು ತ್ತದೆ. ಇದು ಕುರಿ ಮತ್ತು ಆಡುಗಳಿಗೂ ಸಹ ಉಪಯುಕ್ತವಾಗಿರುತ್ತದೆ(ಶ್ಲೋ. 28).

ಅನಾದಿಕಾಲದಿಂದಲೂ, ಭಾರತೀಯರಿಗೆ ಗೋವು ಸದಾ ಒಂದು ಪವಿತ್ರಜೀವಿ ಯಾಗಿದೆ. ಅದನ್ನು ತಾಯಿ(ಗೋಮಾತೆ)ಯೆಂದು ಮಾತ್ರ ಪರಿಗಣಿಸಿರಲಿಲ್ಲ. ಜೊತೆಗೆ ಇಡೀ ಮಾನವಕುಲಕ್ಕೇ ಅತ್ಯುಪಕಾರಿಯೆಂದು ಭಾವಿಸಲಾಗಿತ್ತು, ಆದಕಾರಣ, ಹಿಂದಿ ನಿಂದಲೂ ನರಳುತ್ತಿರುವ ಗೋವಿನ ಚಿಕಿತ್ಸೆಮಾಡುವುದು ಪ್ರತಿಯೊಬ್ಬ ವ್ಯಕ್ತಿಯ ಅತ್ಯಾವಶ್ಯಕ ಕರ್ತವ್ಯವೆಂದು ಗಣಿಸಲಾಗಿತ್ತು. ಜಯದತ್ತನು ತನ್ನ ಅಶ್ವವೈದ್ಯಕ ಕೃತಿ ಯಲ್ಲಿ ಈ ಕೆಳಗೆ ವಿವರಿಸಿದ ಪಶುವೈದ್ಯಕೀಯ ಚಿಕಿತ್ಸೆಗಳನ್ನು ಕೊಟ್ಟಿದ್ದಾನೆ:

ಇದರಿಂದ ಶಾರೀರಿಕ ರಸಧಾತುಗಳ ಅವ್ಯವಸ್ಥೆಯಿಂದ ಮಲಿನಗೊಂಡ ರಕ್ತಶುದ್ಧಿ ಯಾಗುತ್ತದೆ. ಹೀಗೆ ರೋಗಕಾರಕಗಳಿಂದ ಮುಕ್ತವಾಗಿ ಆಹಾರಸೇವನೆಯಿಂದ ಕುದು ರೆಯು ಚೇತನಗೊಳ್ಳುತ್ತದೆ. ಬಳಿಕ ಶ್ರಾವಣಮಾಸದಲ್ಲಿ ಅದಕ್ಕೆ ಎಳೆಯಹುಲ್ಲು ತಿನ್ನಿಸ ಬೇಕು. ಇದರಿಂದ ಅದು ಬಲಿಷ್ಠವಾಗಿ ವಜ್ರಕಾಯವಾಗುತ್ತದೆ (ಶ್ಲೋ. 4–5a).

ಕುದುರೆಯು ರಕ್ತಾಧಿಕ್ಯತೆ(ಪಿತ್ತರಕ್ತ)ಯಿಂದ ನರಳುತ್ತಿದ್ದು ಎಳೆಯಹುಲ್ಲು ಮೇಯುವಂತಾದರೆ ಅದರಿಂದ ಪಿತ್ತವೇರಿ ಸಾಯುತ್ತದೆ (ಶ್ಲೋ. 5b–6a).

ಕುದುರೆಯ ಮೂಗಿನಲ್ಲಿ ರಕ್ತಾಧಿಕ್ಯತೆಯಿಂದ ಸ್ರಾವವಾಗುತ್ತಿದ್ದು ಎಳೆಯಹುಲ್ಲನ್ನು

ಎಣ್ಣೆ ಇತ್ಯಾದಿ ಪದಾರ್ಥಗಳೊಂದಿಗೆ ಸೇವಿಸಿದಲ್ಲಿ ಕೂಡಲೇ ಶ್ಲೇಷ್ಮಪೀಡಿತವಾಗಿ ಕೊಸ ಯುಸಿರೆಳೆಯುತ್ತದೆ (ಶ್ಲೋ. 6a–7a).

ರಕ್ತಹೀನತೆಯಿಂದ ಒಣಗಿದ ಕುದುರೆಯು ಎಳೆಯಹುಲ್ಲು ಮೇದರೆ, ತೀವ್ರ ವಾತವಿಕಾರಕ್ಕೊಳಗಾಗುತ್ತದೆ ಹಾಗೂ ಕೂಡಲೇ ಮರಣಹೊಂದುತ್ತದೆ. ಇವು ರಕ್ತವೈಪ ರೀತ್ಯತೆಗಳಿಂದ ತಲೆದೋರುವ ಲಕ್ಷಣಗಳಾಗಿವೆ (ಶ್ಲೋ. 7b–8).

ವಿವೇಕಿಗಳು ಎಲ್ಲ ರಸಧಾತುಗಳ ವೈಪರೀತ್ಯತೆಯ ಲಕ್ಷಣಗಳನ್ನು ತಿಳಿದಿರಬೇಕು. ಕುದುರೆಯು ಪಿತ್ತವಿಕಾರಕ್ಕೊಳಗಾಗಿದ್ದು, ರಕ್ತ ಕೆಟ್ಟಿದ್ದಲ್ಲಿ, ಅದರ ಶರೀರದಲ್ಲೆಲ್ಲ ಕೆರೆತ ವುಂಟಾಗಿ ಒಂದೇಸಮನೆ ಗೀರಿಕೊಳ್ಳುತ್ತದೆ. ಅದು ನೆರಳಿನಲ್ಲಿರಲು ಅದರಲ್ಲೂ ಕೆರೆಕೊಳದ ಸಮೀಪದಲ್ಲಿರಲು ಬಯಸುತ್ತದಲ್ಲದೆ ನೀರು ಮತ್ತು ಆಹಾರ ಸೇವಿಸಲು, ಕಾತುರವಾಗಿ ರುತ್ತದೆ (ಶ್ಲೋ. 9–11a).

ಈ ಲಕ್ಷಣಗಳಿಂದ ಕುದುರೆಯು ರಕ್ತ ಹಾಗೂ ಪಿತ್ತವಿಕಾರದಿಂದ ನರಳುತ್ತಿರು ವುದನ್ನು ಕಂಡುಹಿಡಿದು ರಕ್ತನಾಳದಿಂದ ರಕ್ತ ಹೊರಬರುವಂತೆ ಮಾಡಿ ಬಳಿಕ ಅದಕ್ಕೆ ೦ ಮತ್ತು ಬಾಲಮೆಣಸುಗಳು ಹಾಗೂ ಶುಂಠಿಗಳನ್ನು ಬೆಲ್ಲದೊಡನೆ ಬೆರೆಸಿ ಕೊಡಬೇಕು. (ಇದರಿಂದ ಜಾಡ್ಯದ ಮೂಲವು ಹೊರಬಿದ್ದು ರೋಗಮುಕ್ತವಾಗುತ್ತದೆ) (ಶ್ಲೋ. 11–12).

ಕುದುರೆಯ ಕಣ್ಣುಗಳಲ್ಲಿ ನೀರು ಸುರಿಯುತ್ತಿದ್ದು ಕಣ್ಣುಗಳು ಕಳೆಗುಂದಿ ಸಪ್ಪೆ ಯಾಗಿದ್ದರೆ, ಅದು ರಕ್ತ ಮತ್ತು ಪಿತ್ತವಿಕಾರದ ಲಕ್ಷಣವಾಗಿದ್ದು, ಸಾವು ಸಮೀಪಿಸಿ ತ್ತದೆ. ಇವು ಪಿತ್ತ ಮತ್ತು ರಕ್ತ ವೈಪರೀತ್ಯಗಳಿಂದ ಉಂಟಾಗುವ ಕಣ್ಣಿನ ಲಕ್ಷಣಗಳಾ ವೆ (ಶ್ಲೋ. 13–14a).

ಕುದುರೆಯು ಶ್ಲೇಷ್ಮ ಹಾಗೂ ರಕ್ತ ವಿಕಾರಕ್ಕೊಳಗಾಗಿದ್ದರೆ, ತನ್ನ ಮುಸುಡಿಯನ್ನು ನಾ ಕೆಳಗೆ ಹಾಕಿಕೊಂಡಿದ್ದು ಆಗಾಗ್ಗೆ ಕೆಮ್ಮುತ್ತಿರುತ್ತದೆ, ಊಟ ಬಿಡುತ್ತದೆ ಹಾಗೂ ಚುವಟಿಕೆಯಿಂದ ಕೆಲಸಮಾಡುವುದಿಲ್ಲ (ಎಂದರೆ ಸೋಮಾರಿಯಾಗಿರುತ್ತದೆ) (ಶ್ಲೋ. 14b–15).

ಬಾಟಿಯೇಟಿಗಾದಗಲೀ, ತಿವಿತಕ್ಕಾಗಲೀ ಇಲ್ಲವೇ ಜೇನುಗಳ (?) ಎಳೆತಕ್ಕಾಗಲೀ ತಿಕ್ರಿಯೆ ತೋರಿಸದೆ, ಮೇಲಿಂದ ಮೇಲೆ ಮೂಗೆಳೆಯುವ ಮತ್ತು ಬೆಚ್ಚಗಿರಲು

ಎ ಕುದುರೆಗೂ ಸಹ ರಕ್ತಹರಿಸಿ, ಒಣಶುಂಠಿಯೊಡನೆ ಬೆಲ್ಲಬೆರೆಸಿ ಕೊಡಬೇಕು.
ದ ರಕ್ತಶುದ್ಧವಾಗುತ್ತದೆ (ಶ್ಲೋ. 16–17).

ಗಿನ ಚಿಕಿತ್ಸೆ

ಕೆಮ್ಮು, ಗಸೆ(ಉಬ್ಬಸ)ಗಳಂತೆಯೇ ಮೂಗುಬಾಧೆಯೂ(?) ವಾತ, ಪಿತ್ತ,
ದಿಗಳಿಂದ ಉಂಟಾಗುತ್ತದೆ. ಮೂಗುವ್ಯಾಧಿಗಳು ಮಾರಕವಾಗುವುದರಿಂದ,
ಹೊಳ್ಳೆಗಳಮೂಲಕ ಔಷಧಚಿಕಿತ್ಸೆ ಮಾಡಬೇಕು (ಶ್ಲೋ. 1).

ಬಾಲಮೆಣಸು, ಕಲ್ಲುಪ್ಪು, ಸಾರ (ಕೆನೆ?), ಬೆಲ್ಲದೊಡನೆ ಬೆರೆಸಿದ ಒಣಶುಂಠಿ,
...... ಕುದುರೆಗಳ ಶ್ಲೇಷ್ಮವ್ಯಾಧಿ ನಿವಾರಣೆಯಲ್ಲಿ ಉಪಯುಕ್ತವಾಗಿರುತ್ತವೆ
. 2).

ಚೂಲಿಕ (?)–ಉಪ್ಪು ಮೂಗಿನ ಮೂಲಕ ಸೇರಿಸುವುದು ಯಾವಾಗಲೂ
ನಿವಾರಣ ಕ್ರಮವಾಗಿರುತ್ತದೆ (ಶ್ಲೋ. 3a).

ಪರಿಶುದ್ಧ ಸಕ್ಕರೆ, ಗಂಧದನೀರು ಮತ್ತು ಬಾರ್ಲಿ ಹಿಟ್ಟುಗಳನ್ನು ಚಿಮ್ಮು ಮಾರ್ಜ
ಬಳಸುವುದರಿಂದ ರಕ್ತನಾಳಗಳ ವಾತವಿಕಾರಗಳು ನಿವಾರಣೆಯಾಗುತ್ತವೆ (ಶ್ಲೋ.
a).

ಹಸಿಶುಂಠಿ ಮತ್ತು ಮೃದುಕ(?)ಗಳನ್ನು ವಚ ಮತ್ತು ಕ್ಷೀರದೊಡನೆ ಬೆರೆಸಿ
ನೊಳಗೆ ಸೇರಿಸುವುದರಿಂದ ಕುದುರೆಯ ವಾತ ವ್ಯಾಧಿ ಮತ್ತಿತರ ಬಾಧೆಗಳು
ರವಾಗುತ್ತವೆ (ಶ್ಲೋ. 4b–5a).

ಸಕ್ಕರೆ, ಜೇನುತುಪ್ಪ, ಸ್ಥೈರ (? ಅಥವಾ ಸಾರ) ಮತ್ತು ಪಟೋಲ(ಸೌತೆ)
ಪಾಲದೊಡನೆ ಬೆರೆಸಿ, ಶರದೃತುವಿನಲ್ಲಿ ಕುದುರೆಯ ಮೂಗಿನೊಳಗೆ ಸೇರಿಸು
ಂದ ಕುದುರೆಗಳ ವ್ಯಾಧಿಗಳು ನಿವಾರಣೆಯಾಗುತ್ತವೆ(ಶ್ಲೋ. 5b–6a).

ವಾಹ, ಉಸ್ಥಾನಕ(?), ಕುಷ್ಠ, ಒಣಶುಂಠಿ, ಕಸಮರ್ದಿಕ–ಇವೆಲ್ಲವನ್ನು ಸ್ವಲ್ಪ
ಣ್ಣದ ತಣ್ಣೀರಿನಲ್ಲಿ ಬೆರೆಸಿ ಅವುಗಳ ಮೂಗಿನೊಳಗೆ ಸೇರಿಸಬೇಕು (ಶ್ಲೋ.
7).

ಗುಡುಚಿ, ಕೌಮುದಿ (? ಮಲ್ಲಿಕಾ ಬಳ್ಳಿ ?), ಮತ್ತು ತಾಳಿ (ತಾಳೆ ?) ಗಳನ್ನು ಬಾವಿನೀರಿನಲ್ಲಿ ಬೆರೆಸಿ ಚಳಿಗಾಲದಲ್ಲಿ ಒಳ್ಳೆ ಆರೋಗ್ಯಶೀಲ ಕುದುರೆಗಳ ಮೂಗಿನೊಳಗೆ ಸೇರಿಸುವುದರಿಂದ, ಆರೋಗ್ಯದಿಂದಿರುತ್ತವೆ. ಅಪಮಾರ್ಗವನ್ನು ಮೂಗಿನ ಮೂಲಕ ಸೇರಿಸುವುದರಿಂದ ಯಾವ ರೋಗಗಳೂ ಸುಳಿಯುವುದಿಲ್ಲ(ಶ್ಲೋ. 7b–8).

ಗೋಮೂತ್ರ(ಗಂಜಳ)ದಲ್ಲಿ ಚೆನ್ನಾಗಿ ಕುದಿಸಲಾದ ಶುದ್ಧ ಸಾಸುವೆ ಎಣ್ಣೆಯು ಸಹವಾಸದಿಂದ ಸಡಿಲ(ಅಥವಾ ದುರ್ಬಲ)ಗೊಂಡ ಸ್ರಾವಕಗ್ರಂಥಿಗಳಿಗೆ ಶಕ್ತಿ ನೀಡುತ್ತದೆ (ಶ್ಲೋ. 9).

ಗಂಜಳದೊಡನೆ ಉಪ್ಪು ಸೇರಿಸಿ ಮೂಗಿನ ಚಿಮ್ಮು ಮಾರ್ಜನೆ ಮಾಡುವುದು ಗಂಟಲುಬೇನೆಗೆ ಅತ್ಯುತ್ತಮವಾದುದಲ್ಲದೆ ಎಲ್ಲ ಉಪದ್ರವಗಳನ್ನು ನಿವಾರಿಸುತ್ತದೆ (ಶ್ಲೋ. 10).

ಆಡಿನ ಮೂತ್ರವನ್ನು ಅಪಮಾರ್ಗ ಬೇರಿನೊಡನೆ ಬೆರೆಸಿ ಮೂಗಿನ ಚಿಮ್ಮು ಮಾರ್ಜಕವಾಗಿ ಉಪಯೋಗಿಸುವುದು ಇಲ್ಲವೇ ಮೀನು ಕೊಬ್ಬಿನಿಂದ ಸಿದ್ಧಪಡಿಸಿದ ಮೂಗೌಷಧ ಹಾಕುವುದು ಬಾಯಿಬೇನೆಗೆ ಒಳ್ಳೆಯದು (ಶ್ಲೋ. 11).

ಬೆಳ್ಳುಳ್ಳಿ, ಪಿಪ್ಪಲಿಮೂಲ(ಬಾಲ ಮೆಣಸಿನ ಬೇರು?), ಗಂಧಕ (ಈರುಳ್ಳಿ?) ಮತ್ತು ನಾಗಕೇಸರಗಳನ್ನು ಸಾಸುವೆ ಎಣ್ಣೆಯೊಡನೆ ಮೂಗಿನೊಳಕ್ಕೆ ಪ್ರಕ್ಷೇಪಿಸುವುದು ಕುದುರೆಗಳ ವ್ಯಾಧಿ ನಿವಾರಣೆಯಲ್ಲಿ ಪರಿಣಾಮಕಾರಿಯಾಗಿರುತ್ತದೆ (ಶ್ಲೋ. 12).

ಒಂದು ರಾತ್ರಿಕಾಲವಿರಿಸಿದ್ದ ಪರಿಶುದ್ಧ ನೀರಿನಿಂದ ಮುಂಜಾನೆವೇಳೆಯಲ್ಲಿ ಮೂಗಿಗೆ ಚಿಮ್ಮುಮಾರ್ಜನೆ ಮಾಡುವುದು ಕಣ್ಣುಗಳಿಗೆ ಒಳ್ಳೆಯದು. ಇದು ಮನುಷ್ಯರು ಹಾಗೂ ಕುದುರೆಗಳೆರಡಕ್ಕೂ ಬಲವರ್ಧಕ ಔಷಧಿಯಾಗಿರುತ್ತದೆ(ಶ್ಲೋ. 13).

ಗಂಟಲು ಕೆರೆತದಿಂದ ನರಳುತ್ತಿರುವ ಕುದುರೆಯು ಆಹಾರವನ್ನು ಹೊರತಳ್ಳುತ್ತದೆ (ನುಂಗಲಾರದೆ). ಕೆಮ್ಮಿನಿಂದ ಸಂಕಟಪಡುತ್ತಿರುವ ಕುದುರೆಯನ್ನು ಗಲಶಲುಕಿಣ(?) ಎಂದು ಪರಿಗಣಿಸಬೇಕು.

ಎಲ್ಲ ಬಗೆಯ ಬಾಯಿ ಬೇನೆಗಳೂ ಶ್ಲೇಷ್ಮ ಹಾಗೂ ರಕ್ತ ವೈಪರೀತ್ಯತೆಗಳಿಂದ ಉಂಟಾಗುತ್ತವೆ. ಈಗ ಇಂತಹ ವ್ಯಾಧಿಗಳನ್ನು ಕುದುರೆಗಳಲ್ಲೂ ಹೇಗೆ ಶಮನಗೊಳಿಸಬೇಕೆಂದು ತಿಳಿಸುತ್ತೇನೆ(ಶ್ಲೋ. 18).

ಬಾಯಿಬೇನೆಗಳು

ವಿವೇಕಿಯಾದವನು ಮೊದಲಿಗೆ ಅಂಗುಳು(ತಾಲು) ಅಭಿಧಮನಿ (ಅಥವಾ ಅಪಧಮನಿ)ಯನ್ನು ರಂಧ್ರಮಾಡಿ ಕುದುರೆಯ ಬಾಯಿಯ ಅವಕಾಶ (ಅಂತರ) ದಿಂದ ಉಬ್ಬಿದ ಮಾಂಸ ಭಾಗವನ್ನು ಚಾಕುವಿನಿಂದ ಕತ್ತರಿಸಿಹಾಕಬೇಕು (ಶ್ಲೋ. 19).

ನಾಲಗೆಯು ಸಿಳಿಕ(ಸೀದಿಕೊಂಡಿರುವಾಗ)ವಿದ್ದಾಗ, ವೈದ್ಯನು ನಾಲಿಗೆಯನ್ನು ತೊಳೆದು, ಬಳಿಕ ಆರುಬಗೆಯ ಉಪ್ಪಿನಪುಡಿಗಳಿಂದ ಅದನ್ನು ಒಳತಳ್ಳಬೇಕು(ಶ್ಲೋ. 20).

ಪ್ರಾತಃಕಾಲದಲ್ಲಿ ಕುಡಿಯುವ ನೀರಿಗೆ, ಮದ್ಯ ಹಾಗೂ ಪುನರ್ನವ, ವಚ, ಸಿಗ್ರು, ಕಾರಂಜ ಮತ್ತು ನಿಂಬ ಎಲೆಗಳನ್ನು ಬೆರೆಸಿ, ಬಾಲಮೆಣಸು, ಶುಂಠಿ, ವಿಡಂಗ, ಮತ್ತು ಸ್ವಲ್ಪ ಉಪ್ಪುಗಳನ್ನು ಸೇರಿಸಿ ಸರಿಯಾದ ರೀತಿಯಲ್ಲಿ ಒಣಮಲ್ಲಿನೊಡನೆ ಕೊಡಬೇಕು(ಶ್ಲೋ. 22–23).

ಚೆನ್ನಾಗಿ ಶೋಧಿಸಿದ ಕಾರಂಜ ಮತ್ತು ನಿಂಬ ಎಲೆಗಳು ಮತ್ತು ತಿಕ್ತಮುಷ್ಟಿ (?)ಗಳ ಕಷಾಯವನ್ನು ಎಣ್ಣೆ, ಕರಿಮೆಣಸು, ಬಾಲಮೆಣಸು ಮತ್ತು ಒಣಶುಂಠಿಯೊಡನೆ ಸೇರಿಸಿ ಕೊಡಬೇಕು(ಶ್ಲೋ. 24).

ಕುದುರೆಗಳ ಬಾಯನ್ನು ಗಂಜಳ ಹಾಗೂ ಎಳೆಯ ಕಡ್ಡಿಗೆ ಕರಿಮೆಣಸು, ಬಾಲಮೆಣಸು ಮತ್ತು ಒಣಶುಂಠಿ ಪುಡಿಗಳನ್ನು ಚಿಮುಕಿಸಿ ಅದರಿಂದ ಉಜ್ಜಿ ತೊಳೆಯುವುದು ಉಪಯುಕ್ತವಾಗಿರುತ್ತದೆ(ಶ್ಲೋ. 25).

ಗಂಟಲು ಉರಿಯೂತವಾದಾಗ ವಿವೇಕಿಗಳು ಒಣಶುಂಠಿ, ಬಾಲಮೆಣಸು, ವಚ, ಸಾಸುವೆ ಮತ್ತು ಹಸಿಶುಂಠಿಗಳನ್ನು ಹಾಕಿ, ಚಿಕಿತ್ಸೆ ಮಾಡಬೇಕು(ಶ್ಲೋ. 26).

ಅಳಲೆಕಾಯಿ ತ್ರಯಗಳ ಕಷಾಯದಲ್ಲಿ ಕರಗಿಸಲಾದ ಗುಗ್ಗುಲ ಪಾನಕವು

ಉಪಯುಕ್ತವಾಗಿರುತ್ತದೆ. ಆಹಾರದಲ್ಲಿ ಬಾರ್ಲಿ ಕೊಡಬೇಕು ಹಾಗೂ ಮಸ ಇತ್ಯಾದಿಗಳನ್ನು ಕೊಡಬಾರದು(ಶ್ಲೋ. 27).

ಹಲ್ಲಿನಮೇಲೆ ಹಲ್ಲು ಹೆಚ್ಚಾಗಿ ಬೆಳೆಯುತ್ತಿದ್ದರೆ ಚಿಮುಟ(ಪಟಕಾರ)ದಿಂದ ಅದನ್ನು ಕಿತ್ತು, ಬಳಿಕ ಮೇಲೆ ತಿಳಿಸಿದಂತೆ ಚಿಕಿತ್ಸೆ ಮಾಡಬೇಕು(ಶ್ಲೋ. 28).

ಹಾಗೆಯೇ ಹುಳುಕಲ್ಲು(ಹುಳು ತಿಂದು ಹುಳುಕಾಗಿರುವುಗಳನ್ನು ಸಹ ತೆಗೆದು, ನಿರುಪಯುಕ್ತ ಹಲ್ಲುಗಳನ್ನು ತೆಗೆದದ್ದರಿಂದ ಆದ ರಂಧ್ರಗಳನ್ನು ಮುಚ್ಚಿ ಸರಿಪಡಿಸಬೇಕು (ಹಾಗೆಯೇ ಪೂರ್ತಿ ಕೊಳೆತ ಹಲ್ಲುಗಳನ್ನೂ ಸಹ) (ಶ್ಲೋ. 29)

ಕಣ್ಬೇನೆಗಳು

ಹಿಂದಿನ ವೈಜ್ಞಾನಿಕ ಪುಸ್ತಕಗಳಲ್ಲಿ ಋಷಿವರ್ಯರು ತಿಳಿಸಿದ ಕಣ್ಬೇನೆಗಳ ರೋಗ ನಿದಾನಗಳನ್ನು ಈಗ ವಿವರಿಸುತ್ತೇನೆ(ಶ್ಲೋ. 1).

ವಾತ, ಪಿತ್ತ ಹಾಗೂ ಶ್ಲೇಷ್ಮ ಮಾಲಿನ್ಯತೆಗಳಿಂದ ಅಶ್ರುಗಲನ (ಕಣ್ಣೀರು ಸುರಿಯುವುದು), ಪ್ರಸನ್ನಾಂಧ, ಇರುಳು ದೃಷ್ಟಿಮಾಂಧ್ಯತೆ (ರಾತ್ರಿ ಹೊತ್ತು ಕಣ್ಣು ಕಾಣಿಸದಿರುವಿಕೆ), ತಿಮಿರ(ನೆಗಡಿ, ಶೀತ ?), ಮುಂಜಕ (?), ಮುಂಜ-ಜಲ (?) ಪಟಲ(ಕಣ್ಪೊರೆ), ಬದ್ಬುದ(?)(ಫ್ಲೋ ಆಫ್ ಪೀಸ್),(ಕಣ್ಣೀರು ಸುರಿಸುವಿಕೆ) ಕಚಕ್ಷ(?) ರಕ್ತ ಸುರಿಯುವಿಕೆ, ಚಿಪಿಟ(?), ವಕ್ರರೋಗ ಮತ್ತು ಅಭಿಸ್ಯಂದ(?)- ಈ ರೋಗಗಳು ಉಂಟಾಗುತ್ತವೆ. ಈಗ ಈ ರೋಗ ಲಕ್ಷಣಗಳು ಹಾಗೂ ಅವುಗಳ ಚಿಕಿತ್ಸಾ ವಿಧಾನವನ್ನು ಅನುಕ್ರಮವಾಗಿ ತಿಳಿಸುತ್ತೇನೆ (ಶ್ಲೋ. 2-4).

ನೋಡುವಾಗ ಶುದ್ಧ ಅಶ್ರುಬಿಂದುಗಳು ಅವಿರತವಾಗಿ ಹರಿದರೆ ಅದಕ್ಕೆ 'ಅಶ್ರುಗಲನ'ವೆಂದು ಹೆಸರು. ಇದು ವಾತದಿಂದ ಉಂಟಾಗುತ್ತದೆ(ಶ್ಲೋ. 5).

ಕುದುರೆಯ ಕಣ್ಣು ಹೊರನೋಟಕ್ಕೆ ಎಲ್ಲ ರೀತಿಯಿಂದಲೂ ಸರಿಯಿದ್ದು ದೃಷ್ಟಿಸಾಮರ್ಥ್ಯವಿಲ್ಲದಿದ್ದಲ್ಲಿ ಅದಕ್ಕೆ ಪ್ರಸನ್ನಾಂಧ ರೋಗವೆಂದು ಹೆಸರು. ಇದನ್ನು ಗುಣಪಡಿಸಲಾಗುವುದಿಲ್ಲ(ಶ್ಲೋ. 6).

ಹಗಲು ವೇಳೆಯಲ್ಲಿ ದೃಷ್ಟಿ ಶಕ್ತಿಯು ಚೆನ್ನಾಗಿದ್ದು ರಾತ್ರಿಯವೇಳೆ ಕಾಣಿ
ಎಂದು ಹೆಸರು. ಇದೂ ಸಹ

ವಾತವೈಪರೀತ್ಯತೆಯಿಂದುಂಟಾಗುತ್ತದೆ (ಶ್ಲೋ. 7).

ಕೆಲವು ವೇಳೆ ಕಣ್ಣು ಕಾಣಿಸುತ್ತಿದ್ದು, ಕೆಲವುವೇಳೆ ಕಾಣಿಸದಿದ್ದರೆ ಜಾಣನು ಅದನ್ನು 'ತಿಮಿರ' ರೋಗವೆಂದು ತಿಳಿಯಬೇಕು(ಶ್ಲೋ. 8).

ಅಳಲೆಕಾಯಿತ್ರಯಗಳೊಡನೆ ತುಪ್ಪವನ್ನು ಬೆರೆಸಿ ಚೆನ್ನಾಗಿ ಕಾಯಿಸಿ (ಹೊಟ್ಟೆಗೆ ಔಷಧಿ ರೂಪದಲ್ಲಿ) ಕೊಡಬೇಕು, ಆ ಬಳಿಕ ಕಣ್ಣುಗಳಿಗೆ ಸಂತರ್ಪಣ (ಪಟ್ಟಿ ಹಾಕುವುದು ?) ಮಾಡಬೇಕು(ಶ್ಲೋ. 9).

ಕುದುರೆಯನ್ನು ನೆಲದಮೇಲೆ ಮಲಗಿಸಿ, ಬಲವಾದ ಹಗ್ಗಗಳಿಂದ ಕಟ್ಟಬೇಕು. ಬಳಿಕ ಮಾಷ ಹಿಟ್ಟಿನ ಮುಲಾಮನ್ನು ಪ್ರತಿಕಣ್ಣಿನ ಸುತ್ತಲೂ ಹಾಕಿ, ಮುಚ್ಚಿ ಬಳಿಕ ಕಣ್ಣಿಗೆ ತುಪ್ಪ ಇಲ್ಲವೇ ಹಾಲು ತುಂಬಿಸಬೇಕು. ಇದು ಕಣ್ಣುಗಳಿಗೆ ಸಂತರ್ಪಣ ಮಾಡುವ ಸಾಮಾನ್ಯ ವಿಧಾನ(ಶ್ಲೋ. 10–11).

ಇನ್ನೊಂದು ಸುಲಭ ಸಂತರ್ಪಣ ವಿಧಾನವೂ ಇದೆ. ಇದರಂತೆ, ತುಪ್ಪದಲ್ಲಿ ಅದ್ದಿದ ಹತ್ತಿಯ ಮೆತ್ತೆಯನ್ನು ಕಣ್ಣುಗಳಿಗೆ ಹಾಕಬೇಕು(ಶ್ಲೋ. 12).

ಇದರಮೇಲೆ ಹಾಗೂ ಕಣ್ಣಿನ ಮೇಲೆ ಸಡಿಲವಾಗಿ ಪಟ್ಟಿಕಟ್ಟಬೇಕು. ಹೀಗೆ ಹಾಕಿದ ಪಟ್ಟಿಯಮೇಲೂ ಸಹ ಇನ್ನೂ ಸ್ವಲ್ಪ ತುಪ್ಪ ಸುರಿಯಬೇಕು(ಶ್ಲೋ. 13).

ತಿಮಿರ ಪೀಡಿತ ಕಣ್ಣುಗಳಿಗೆ ನಿತ್ಯವೂ ನೀಲೋತ್ಪಲ, ಗಂಧದ ಮರ ಹಾಗೂ ಲೈಸ್ಟಿಮಾನಿ ಲೋಹಗಳಿಂದ ತಯಾರಿಸಿದ ಕಡ್ಡಿ ಮುಲಾಮು ಹಚ್ಚಬೇಕು(ಶ್ಲೋ. 14).

ಹುಣ್ಣುಗಳ ಲಕ್ಷಣಗಳು

ಹುಣ್ಣುಗಳಲ್ಲಿ ಎರಡು ಬಗೆಯಿರುತ್ತವೆ–ಬಾಹ್ಯವಾದವು (ಎಂದರೆ ಗಾಯಗಳು) ಮತ್ತು ಆಂತರಿಕ ರೋಗಜನ್ಯವಾದವು (ಕೀವು, ಹುಣ್ಣು, ಒಳಕುರುಗಳು). ಶಾಸ್ತ್ರ ಕೃತಿಗಳಿಗನುಗುಣವಾಗಿ ಅವುಗಳ ಲಕ್ಷಣ ಹಾಗೂ ಚಿಕಿತ್ಸೆಗಳನ್ನು ವಿವರಿಸುತ್ತೇನೆ (ಶ್ಲೋ. 1).

ವಿವೇಕಿಯಾದವನು, ದೈಹಿಕ (ಆಂತರಿಕ) ಬೇನೆಯಿಂದ ಆಗುವ ಹುಣ್ಣು ಊತ ಹಾಗೂ ನೋವುಗಳಿಂದ ಕೂಡಿರುತ್ತದೆಂದು ತಿಳಿಯಬೇಕು. ಇಂತಹುವಕ್ಕೆ ಕೀವು

ಹುಣ್ಣು(ಒಳಕುಳು) ಅಥವಾ ಕುರು ಎಂದು ಹೆಸರು. ಆಯುಧ ಇತ್ಯಾದಿಗಳ ಪೆಟ್ಟು ತಗಲಿ ಆಗುವ ಹುಣ್ಣುಗಳಿಗೆ 'ಗಾಯ'ಗಳೆಂದು ಹೆಸರು(ಶ್ಲೋ. 2).

ನಿಧಾನವಾಗಿ ಮಾಗುವ ಕೀವುಹುಣ್ಣು ಅಥವಾ ಕುರು ಸ್ಪರ್ಶವನ್ನು ಹೆಚ್ಚು ಕಾಲದವರೆಗೆ ಸಹಿಸುವಂತಿದ್ದರೆ ಅದು ವಾತವೈಪರೀತ್ಯತೆಯಿಂದಾದುದಾಗಿರುತ್ತದೆ. ಶೀಘ್ರದಲ್ಲಿ ಮಾಗುವ ಹಾಗೂ ಕೆರೆತ ಹಾಗೂ ಉರಿಯುಂಟುಮಾಡುವಂಥವು ಪಿತ್ತವೈಪರೀತ್ಯತೆಯಿಂದುಂಟಾಗುತ್ತವೆ(ಶ್ಲೋ. 3).

ಮಾಂಸಲವಾಗಿ ಉಬ್ಬಿ, ಬಿಳಿಬಣ್ಣವಿದ್ದು, ಸ್ಪರ್ಶಕ್ಕೆ ಗಟ್ಟಿಯಿದ್ದು ಹೆಚ್ಚೇನೂ ನೋವುಂಟುಮಾಡದಿರುವ ಕುರುಹುಣ್ಣು ಶ್ಲೇಷ್ಮ ವೈಪರೀತ್ಯತೆಯಿಂದುಂಟಾಗುತ್ತದೆ. ಇದು ಮಾಗುವುದು ನಿಧಾನ (ಶ್ಲೋ. 4).

ಈ ಎಲ್ಲಾ ಲಕ್ಷಣಗಳನ್ನು ಪ್ರಕಟಿಸುವ ಹುಣ್ಣು ಮೂರು ಬಗೆಯ ರಸಧಾತು (ವಾತ, ಪಿತ್ತ, ಶ್ಲೇಷ್ಮ) ಗಳ ವೈಪರೀತ್ಯತೆಯಿಂದಾಗಿರುತ್ತದೆಂದು ಪರಿಗಣಿಸಬೇಕು. ಹಾಗೆಯೇ, ಯಾವುದಾದರೂ ಎರಡರ ಲಕ್ಷಣ ತೋರಿಸಿದರೆ, ಅದು ಆ ಎರಡು ಧಾತುವೈಪರೀತ್ಯತೆಯ ಫಲವಾಗಿರುತ್ತದೆ(ಶ್ಲೋ. 5).

ಪ್ರಾಜ್ಞ ವೈದ್ಯನು ಹುಣ್ಣಿನ ಸ್ವಭಾವ ಲಕ್ಷಣಾನುಕ್ರಮಕ್ಕನುಗುಣವಾಗಿ ಮೊದಲು ಆ ಹಾನಿಕರ ಕುರುವನ್ನು ತೊಡೆದು (ಎಂದರೆ ಕೀವು ತೆಗೆದು) ಶುದ್ಧಗೊಳಿಸಿ, ಬಳಿಕ ಹುಣ್ಣಾರಿಸಲು (ಹುಣ್ಣು ಮಾಯಿಸಲು) ಯತ್ನಿಸಬೇಕು(ಶ್ಲೋ. 6).

ಒಡೆದ ಕುರು ಹಾಗೆಯೇ ಅಡಗಿ(ಒಣಗಿ)ದಂತಿದ್ದು, ಇನ್ನೂ ದುರ್ವಾಸನೆ ಹೊರಡುತ್ತಿದ್ದು, ಇನ್ನೂ ಗಂಟಾಗಿದ್ದರೆ(ಗುಳ್ಳೆಯಂತಿದ್ದರೆ) ಅದು ಶುಭ್ರವಾಗಿಲ್ಲವೆಂದು ತಿಳಿಯಬೇಕು. ಇದಕ್ಕೆ ವಿರುದ್ಧ ಲಕ್ಷಣವುಳ್ಳದ್ದು ಶುದ್ಧವಾದುದು(ಶ್ಲೋ.7).

ದಂತಿಮೂಲ(ಸೂರ್ಯಕಾಂತಿಬೇರುಗಳು?), ಎರಡು ಜಾತಿಯ ಅರಿಶಿನಗಳು, ಚಿತ್ರಕ(ಔಡಲ), ಶುಂಠಿ, ಬೆಳ್ಳುಳ್ಳಿ ಮತ್ತು ಕಲ್ಲುಪ್ಪುಗಳನ್ನೆಲ್ಲ– ಹುಳಿಗಂಜಿಯೊಡನೆ ಅರೆದು ಕೀವು ತುಂಬಿದ ಎಲ್ಲ ಬಗೆಯ ಹಾನಿಕಾರಿ ಕುರುಗಳಿಗೂ ಹಾಕಬೇಕು (ಶ್ಲೋ. 8–9a).

ಎಳ್ಳುಪುಡಿ ಮತ್ತು ಹಿಟ್ಟಿನ ಉಂಡೆ, ಮೊಸರಿನೊಡನೆ ಬೆರೆಸಿದ ಕಲ್ಲುಪ್ಪು ಹಾಗೂ ನಿಂಬ ಎಲೆಗಳು, ಜೇನುತುಪ್ಪ ಮತ್ತು ಕಲ್ಲುಪ್ಪುಗಳೊಡನೆ ಬೆರೆಸಿದ ಎಳ್ಳೆಣ್ಣೆ

ಹಿಂಡಿಯ ಉಂಡೆಗಳನ್ನು ವಿವೇಕಿಗಳು ಕೀವುತುಂಬಿದ ಕುರುಗಳ ನಿವಾರಣೆಗೆ ಹಚ್ಚ ಬೇಕು(ಶ್ಲೋ. 9b-10).

ಕುರುವಿನಿಂದ ಕೀವು ಸಂಪೂರ್ಣ ಹೊರಬಂದ ಮೇಲೆ ನಿಂಬ (ಎಲೆಗಳು) ಮತ್ತು ಎಳ್ಳಿನಿಂದ ಸ್ನಿಗ್ಧಪಡಿಸಿದ ಉಂಡೆಯು(ಜೇನುತುಪ್ಪ ಮತ್ತು ಕಲ್ಲುಪ್ಪುಗಳನ್ನು ಸೇರಿಸ ದಿದ್ದುದು) ಅತ್ಯುತ್ತಮ ಹುಣ್ಣಾರಿಕೆ ನಿಯೋಗಿಯಾಗಿರುತ್ತದೆ(ಶ್ಲೋ. 11).

ವೈದ್ಯರು ಕೀವುತೆಗೆಯಲಾದ ತೆರೆದ ಕುರುವಿನಮೇಲೆ ದಾಳಿಂಬೆ, ಆಳಲೆಕಾಯಿ (ಎಂಬ್ಲಿಕ್ ಮೈರೋಬಲನ್), ಅಗಸ್ತಿ ಮತ್ತು ಕಪಿತ್ಥ ಗಳ ಬೇರುಪುಡಿಯನ್ನು ಧೂಳಿಸಬೇಕು(ಶ್ಲೋ. 12).

ಕುರುವು ಒಣಗಿ, ವಾಸಿಯಾದಾಗ, ಈ ಮುಂದೆ ಋಷಿಗಳು ತಿಳಿಸಿದ ಪುಡಿ ಯನ್ನು ಅಲ್ಲಿ ಹಚ್ಚಬೇಕು. ಇದರಿಂದ (ಗಾಯದ ಜಾಗದಲ್ಲಿ) ಮೊದಲಿನಂತೆ ಕೂದಲು (ರೋಮ)ಗಳು ಹುಟ್ಟುತ್ತವೆ(ಶ್ಲೋ. 13).

ಪಶುವಿನಂತಹ ದನಗಳ ಗೊರಸು, ಚರ್ಮ, ಮೂಳೆ, ರೋಮ, ಹಲ್ಲುಗಳು, ಕೊಂಬು ಮತ್ತು ಉಗುರುಗಳನ್ನು ಸಂಗ್ರಹಿಸಿ ಜೊತೆಗೆ ಆಮೆ ಚಿಪ್ಪನ್ನು ಸಂಗ್ರಹಿಸಿ ಚೆನ್ನಾಗಿ ಮೊಹರು ಮಾಡಲಾದ ಪಾತ್ರೆಯಲ್ಲಿ ಹಾಕಿ ಬೆಂಕಿಯಲ್ಲಿ ಸುಟ್ಟು ಬೂದಿ ಮಾಡಬೇಕು. ಈ ಬೂದಿಯನ್ನು ತುಪ್ಪ ಮತ್ತು ಎಣ್ಣೆಗಳೊಡನೆ ಬೆರೆಸಿ ಹಚ್ಚು ವುದರಿಂದ ರೋಮಗಳು ಚೆನ್ನಾಗಿ ಬೆಳೆಯುತ್ತವೆ (ಶ್ಲೋ. 14-15).

ನಿರಿಯಂ, ಒಡೊರಂ, ಬಾಳೆ, ಅರ್ಕ (ಎಕ್ಕ), ಸ್ನುಹಿ, ಉಮ್ಮತ್ತಿಕಾಯಿ (ಥಾರ್ನ್ ಆ್ಯಪಲ್), ಚಿತ್ರಕ ಮತ್ತು ಭಲ್ಲಾತಕ(ಗೇರುಬೀಜ)ಗಳನ್ನು ಬೇಯಿಸಲಾದ ಎಣ್ಣೆಯು ನಾಳವ್ರಣಗಳಿಗೆ ಅತ್ಯುತ್ತಮ ಔಷಧ(ಶ್ಲೋ. 16).

ಅಗರ–ಧುಮ (ಕಾಂಡ ? ಅಥವಾ ಗಿಡ?) ವನ್ನು ಗೋಮೂತ್ರದೊಡನೆ ಜಜ್ಜಿ ಅದನ್ನು ಎಚ್ಚರಿಕೆಯಿಂದ ಹುಣ್ಣುಗಳ ಕುಳಿಗೆ ತುಂಬುವುದರಿಂದ, ಸಾಂಕ್ರಾಮಿಕ ತೆಯು ತಗ್ಗುತ್ತದೆ (ಶ್ಲೋ. 17).

ವ್ರಣವು ಕೀವುಮುಕ್ತವಾಗದೆ ಅಸಾಧ್ಯವಾಗಿದ್ದರೆ, ಅದಕ್ಕೆ ಚುಟಿಕೆ (ಸುಡಿಗೆ) ಹಾಕಬೇಕು. ಇದೇ ಕ್ರಮವನ್ನೇ ಪಿತ್ತ ವೈಪರೀತ್ಯದಿಂದಾಗುವ ಕುರುಗಳಿಗೂ ಅನುಸರಿಸ ಬೇಕೆಂದು ಶಿಫಾರಸ್ಸು ಮಾಡಲಾಗಿದೆ(ಶ್ಲೋ. 18).

ವಿವೇಕಿ ವೈದ್ಯನು ಮೊದಲು ಅಮ್ಲ (ಎಂದರೆ– ವಿನಿಗರ್) ದಲ್ಲಿ ಸಂರಕ್ಷಿಸಿಡಲಾದ ಮುಲ್ಲಂಗಿಯಂಥ ಖಾದ್ಯ ಬೇರುಗಳಿಂದ (ಸಿದ್ಧಪಡಿಸಿದ ವ್ಯಂಜನ) ಹುಣ್ಣಿನಿಂದ ಕೆಟ್ಟರಕ್ತ ಹೊರಹೋಗುವಂತೆ ಕಾಪಟ (ಶಾಖ) ಕೊಡಬೇಕು. ಅನಂತರ ಅದರಮೇಲೆ ಜೇನು ಮತ್ತು ತುಪ್ಪಗಳೊಡನೆ ಬೆರೆಸಿದ ಮಧೂಕ ಪುಡಿಯನ್ನು ಹಾಕಿ ಪಟ್ಟಿಕಟ್ಟಿ ಅದರ ಮೇಲೆ ತುಪ್ಪ ಸುರಿಯಬೇಕು (ಶ್ಲೋ. 19–20).

ಅನಂತರ, ಪಂಚವೃಕ್ಷಗಳ [(ನ್ಯಗ್ರೋಧ (ಆಲ), ಔದುಂಬರ (ಅತ್ತಿ ಮರ), ಅಶ್ವತ್ಥ (ಅರಳೀಮರ), ಪ್ಲಕ್ಷ (ಅರಳೀಗಿಡ) ಮತ್ತು ವೇತಸ (ಬಿದಿರು)] ತೊಗಟೆಯ ಪುಡಿಯನ್ನು ತುಪ್ಪದಲ್ಲಿ ಬೆರೆಸಿ ಹಚ್ಚುವುದನ್ನು ಮುಂದುವರಿಸಿ, ರೋಗಿಗೆ ಒಣ ಆಹಾರ (ಡ್ರೈಫುಡ್) ಮತ್ತು ಸ್ವಲ್ಪವೇ ನೀರು (ಆಹಾರಗಳಲ್ಲಿ) ಕೊಡುತ್ತಿರಬೇಕು (ಶ್ಲೋ. 21).

ಗಾಯವು ಕೀವುಮಯವಾಗತೊಡಗಿದರೆ, ಆಗ ರಸಧಾತು ವೈಪರೀತ್ಯಗಳಿಂದಾಗಿ ಆಗುವ ಕುರುಗಳ ಚಿಕಿತ್ಸೆಗೆ ತಿಳಿಸಿದ ಚಿಕಿತ್ಸಾ ವಿಧಾನವನ್ನೇ ಹುಣ್ಣು ವಾಸಿಯಾಗುವವರೆಗೆ ಪುನರಾವರ್ತಿಸಬೇಕು (ಶ್ಲೋ. 22).

ಈಗ ಎರಡೂ ಬಗೆಯ ಹುಣ್ಣುಗಳನ್ನು ಕುರಿತ ಅಧ್ಯಾಯವನ್ನು ತಿಳಿಸೋಣ– ಎಂದು ಪೂಜ್ಯಪಾಲಕಾಪ್ಯರು ಹೇಳಿದ್ದಾರೆ.

ಕ್ಲಿಷ್ಟ ಪರಿಹಾರಗಳಿಗೆ ಮೀಸಲಾದ, ವಿದ್ವಾಂಸಮಿತ್ರ ಹಾಗೂ ಗಜಕ್ಷೇಮಾಭಿಲಾಷಿಗಳಾಗಿದ್ದ ಋಷಿವರ್ಯರಿಗೆ ಈ ಸಮಸ್ಯೆಯನ್ನೊಡ್ಡಲಾಯಿತು (ಶ್ಲೋ. 1) :

ಹುಣ್ಣುಗಳಾಗಲು ಕಾರಣಗಳೇನು, ಅವುಗಳ ಹುಟ್ಟು, ಅವುಗಳನ್ನು ಕುರಿತ ಅಧಿಕೃತ ಪಂಡಿತರು, ಶಸ್ತ್ರಚಿಕಿತ್ಸೆಯ ರಹಸ್ಯ, ಕೀವು ಇಲ್ಲವೇ ರಕ್ತವನ್ನು ಹೊರತೆಗೆಯುವ ವಿಧಾನಗಳಾವುವು ? (ಶ್ಲೋ. 2).

ಹುಣ್ಣುಗಳನ್ನು ಯಶಸ್ವಿಯಾಗಿ ಚಿಕಿತ್ಸೆಮಾಡಲು ಇರುವ ವಿಧಾನಗಳಾವುವು? ಶಾಸ್ತ್ರಕೃತಿಗಳ ಪ್ರಕಾರ ಆ ಚಿಕಿತ್ಸೆಗಳ ಮೂಲವೇನು? (ಶ್ಲೋ. 3).

ಆನೆಗಳಲ್ಲಿ, ಸಾಮಾನ್ಯವಾಗಿ ಹುಣ್ಣಗಳಿಂದ ಕೀವು ಹೊರಬರುವಂತೆ ಮಾಡುವುದು ಹೇಗೆ ? ಒಂದು ಸ್ವಲ್ಪ ಅಲಕ್ಷ್ಯಮಾಡಿದರೂ ಅವು ಕಾಣದಹುಣ್ಣುಗಳಾಗಿ ಪರಿ

ವರ್ತನೆಗೊಳ್ಳುವುದು ಹೇಗೆ ? (ಶ್ಲೋ. 4).

ಕೆಲವು ಹುಣ್ಣುಗಳು ಜಡ್ಡಾಗಲು (ಹಾನಿಕಾರಿ, ತೀವ್ರ ?) ಹಾಗೂ ಸುಲಭವಾಗಿ ವಾಸಿಯಾದರೂ ಪದೇ ಪದೇ ತಲೆದೋರಲು ಕಾರಣಗಳೇನು ? (ಶ್ಲೋ. 5).

ಅವು (ಆನೆಗಳು) ಕಾಡಿನಲ್ಲಿರುವಾಗ ದೈಹಿಕ ರಸಧಾತು ವೈಪರೀತ್ಯತೆಯಿಂದಾಗಿ ಹುಣ್ಣುಗಳ ಬಾಧೆಗೆ ತುತ್ತಾಗದಿರಲು ವಹಿಸಬೇಕಾದ ಮುನ್ನೆಚ್ಚರಿಕೆಗಳಾವುವು ? ವೈದ್ಯಕೀಯ ನೆರವಿಲ್ಲದೆಯೇ ಈ ಹುಣ್ಣುಗಳು ವಾಸಿಯಾಗುವ ವಿಧಾನವಾವುದು(ಶ್ಲೋ. 6).

ಆಗ ಪಾಲಕಾಪ್ಯ ಮಹರ್ಷಿಗಳು ರಾಜನಿಗೆ ಹುಣ್ಣುಗಳನ್ನು ಕುರಿತ ಸಮಗ್ರ ನಿಯಮಾವಳಿಗಳನ್ನು ವಿವರಿಸಿದರು(ಶ್ಲೋ.7).

ಶಾಸ್ತ್ರಕೃತಿಗಳಂತೆ ಹುಣ್ಣು(ಮತ್ತು ಗಾಯ)ಗಳ ಮೂಲ(ಯೋನಿ)ವು ಮೂರು ವಿಧವಾಗಿರುತ್ತದೆ. ಅವುಗಳ ಸ್ವಭಾವವೂ (ಅಕ್ಕ)ಸಹ ತ್ರಿವಿಧವಾಗಿರುತ್ತದೆ. ಅವುಗಳ ಆಂತರ್ಯ(ವಸ್ತು)ವು ಅಷ್ಟಬಗೆಯದೂ, ಸ್ಥಾನ(ಅಧಿಷ್ಠಾನ)ವು ದ್ವಿವಿಧವೂ ಆಗಿರುತ್ತದೆ(ಶ್ಲೋ. 8).

ಅವುಗಳ ಬಾಹ್ಯ ಸ್ವರೂಪ(ಆಕೃತಿ) ಮತ್ತು ಯೋನಿ(?) ಹಾಗೂ ಅವುಗಳ ಸ್ರಾವಣವೂ ಸಹ ದ್ವಿವಿಧವಾಗಿರುತ್ತದೆ. ಅವುಗಳ ಮೇಲೆ ನಡೆಸುವ ಶಸ್ತ್ರಚಿಕಿತ್ಸೆಯೂ ಸಹ ದ್ವಿವಿಧವಾಗಿರುತ್ತದೆ. ಪರಿಹಾರೋಪಾಯಗಳು ಮೂರು ವಿಧವಿರುತ್ತವೆ(ಶ್ಲೋ. 9).

ಶಾಸ್ತ್ರಗಳ ಹೇಳಿಕೆಯಂತೆ ಅದರ(?)ಯೋನಿಯನ್ನು ತ್ರಿವಿಧವೆಂದು ಪರಿಗಣಿಸಬೇಕು. ಹುಣ್ಣುಗಳ ಪರಿಹಾರ ಮೂಲ (ಯೋನಿ)ವೂ ಸಹ ಹೇ ರಾಜನೆ ಐದು ವಿಧವೆಂದು ಹೇಳಲಾಗಿವೆ(ಶ್ಲೋ. 10).

ಎಲೈ ರಾಜನೆ, ಆನೆಗೆ ಬರುವ ಹುಣ್ಣುಗಳಲ್ಲಿ ಬಾಧೆಯ ಸ್ಥಾನಕ್ಕನುಗುಣವಾಗಿ (ಮತ್ತು ಮೃದುತ್ವ) ಒಂಬತ್ತು ಬಗೆಯಿವೆ. ಈ ಅಧ್ಯಾಯದ ವಿಷಯವು ಹೀಗೆ ಸಂಗ್ರಹವಾಗಿದೆ. ಈಗ ಅವುಗಳ ಲಕ್ಷಣವನ್ನು ವಿವರಿಸಲಾಗುತ್ತದೆ(ಶ್ಲೋ. 11).

ಹುಣ್ಣುಗಳು ಯಾವುದರಿಂದ ಹುಟ್ಟುತ್ತವೆಂಬುದರ ಮೇಲೆ ಅವುಗಳ ಮೂಲವು ಮೂರು ಬಗೆಯದಾಗಿದೆ. ಅವುಗಳನ್ನು ಉರಿಯೂತ, ತೆರೆದ ಗಾಯ ಇಲ್ಲವೇ ಉರಿ ಗಾಯಗಳೆಂದು ಗುರುತಿಸಲಾಗುತ್ತದೆ(ಶ್ಲೋ. 12).

ಶಾಸ್ತ್ರ ಕೃತಿಗಳಪ್ರಕಾರ, ಉರಿಯೂತಗಳಲ್ಲಿ ಎರಡು ಬಗೆಯಿರುತ್ತದೆ–ಒಂದು ಶಾರೀರಿಕ ಅನಾರೋಗ್ಯದಿಂದಾದುದು, ಇನ್ನೊಂದು ಅಪಘಾತ(ಆಕಸ್ಮಿಕ)ಗಳಿಂದಾದುದು(ಶ್ಲೋ. 13).

ಶಾರೀರಿಕ ಅನಾರೋಗ್ಯದಿಂದಾದ ಉರಿಯೂತವು ವಾತ, ಪಿತ್ತ, ಶ್ಲೇಷ್ಮ ಇಲ್ಲವೇ ಈ ಎಲ್ಲದರ ಅವ್ಯವಸ್ಥೆಯಿಂದಾಗಬಹುದು(ಶ್ಲೋ. 14).

ಆಕಸ್ಮಿಕ ಉರಿಯೂತಗಳೂ ಸಹ ಅನೇಕ ಬಗೆಯಿವೆ. ಉದಾಹರಣೆಗೆ, ಅವು ವಿಷಕಾರಿ ವಸ್ತು ಇಲ್ಲವೇ ಇತರ ವಸ್ತುಸಂಪರ್ಕ ಅಥವಾ ಪೆಟ್ಟುಗಳಿಂದಾಗಬಹುದು (ಶ್ಲೋ. 15).

ಉರಿಯೂತದಲ್ಲಿ ನೋವು ವಾತಮೂಲದಿಂದಾಗುತ್ತದೆ; ಕೀವು ಪಿತ್ತಮೂಲದಿಂದಲೂ ಸ್ರಾವವು ಶ್ಲೇಷ್ಮದಿಂದಲೂ ಉಂಟಾಗುತ್ತದೆ. ಹುಣ್ಣಿನ ಸ್ವಭಾವವು ಆಯಾ ವಿಶಿಷ್ಟ ರಸಧಾತು ಅವ್ಯವಸ್ಥೆಯ ತೀವ್ರತೆಗೆ ಅನುಗುಣವಾಗಿರುತ್ತದೆ(ಶ್ಲೋ. 16).

ಚಿಕ್ಕದಾಗಿ, ದುಂಡಗೆ, ಗಟ್ಟಿ(ಗಡಸು)ಯಾಗಿರುವ ಹುಣ್ಣಿಗೆ "ಗಂಟು" (ಗ್ರಂಥಿ, ಗಂತಿ) ಎಂದು ಹೆಸರು. ದೊಡ್ಡದಾಗಿದ್ದು ಹೆಚ್ಚು ಊತವಿರುವುದಕ್ಕೆ ವಿದ್ರಂಥಿ(ಕೀವುಹುಣ್ಣು, ಒಳಕುರು) ಎಂದು ಹೆಸರು. ಇದು ಆನೆಯ ತಲೆಯಂತಿರುತ್ತದೆ(ಶ್ಲೋ. 17).

ಈಗ ವಿಕೃತ (ಗಾಯಗಳ) ಮೂಲವನ್ನು ವಿವರಿಸಲಾಗುತ್ತದೆ. ಇವು ತರಚಿಕೆ, ಕಡಿತ ಇಲ್ಲವೇ ಪೆಟ್ಟು(ಹಾನಿ)ಗಳಿಂದಾಗಬಹುದು(ಶ್ಲೋ. 18).

ತರಚುಗಾಯವು ಹಗ್ಗದ ಹುರಿಯ ತಿಕ್ಕಾಟ ಮುಂತಾದವುಗಳಿಂದಾಗಬಹುದು, ಕಡಿತಗಾಯವು ಹಾವು ಮುಂತಾದವುಗಳ ಕಡಿತದಿಂದಾಗಬಹುದು, ಹಾಗೂ ಪೆಟ್ಟುಗಾಯವು (ಇರಿಗಾಯ) ಯಾವುದೇ ಹರಿತವಾದ ವಸ್ತುಗಳು ಆನೆಯ ಶರೀರದಲ್ಲಿ ಗಾಯವುಂಟುಮಾಡುವುದರಿಂದಾಗಬಹುದು(ಶ್ಲೋ. 19).

ಹುಣ್ಣುಗಳು ಚಿಕಿತ್ಸಾದೃಷ್ಟಿಯಿಂದ ನಾಲ್ಕು ಬಗೆಯಾಗಿರುತ್ತವೆ. ಅವುಗಳಿಗೆ ಕೊಯ್ತು, ವಿವಿಧ ಶಸ್ತ್ರೋಪಕರಣದಿಂದ ಚುಚ್ಚುವಿಕೆ, ಕತ್ತರಿಸುವಿಕೆ (ಕಚ್ಚುಮಾಡುವಿಕೆ) ಇಲ್ಲವೇ ಹಾಗೆಯೇ ಬಿಡಬೇಕಾಗಿಬರಬಹುದು (ಹಣ್ಣಾಗಲು ಇಲ್ಲವೇ ತಾನೇ ಒಡೆಯಲು ?) (ಶ್ಲೋ. 20).

ಕೊಯ್ತಾಗಳಲ್ಲಿ ಸಹ ಐದು ಬಗೆಯಿವೆ. ಅವು ಛಿನ್ನ ವಿಚ್ಛಿನ್ನ, ಉತ್ಕೃಷ್ಟ, ಅಪಕೃಷ್ಟ ಮತ್ತು ದರಿತ (ಶ್ಲೋ. 21).

ಇವುಗಳಲ್ಲಿ ಗಾಯದ ಭಾಗವನ್ನು ಸಂಪೂರ್ಣವಾಗಿ ಕತ್ತರಿಸಿ ತೆಗೆಯುವುದು ಛಿನ್ನ. ಹೊಡೆತದ ಪೆಟ್ಟಿನಿಂದಾದುದು ವಿಚ್ಛಿನ್ನ (ಶ್ಲೋ. 22).

ಕಿವಿ, ಬಾಲ ಇಲ್ಲವೇ ಹೊಟ್ಟೆಯನ್ನು ಎರಡಾಗಿ ಒಡೆಯುವುದು ದರಿತ ಹಾಗೂ ಮಾಂಸ, ಮೂಳೆಗಳಲ್ಲಿ ಆಳವಾಗಿ ಸೀಳುವುದು ಅಪಕೃಷ್ಟ (ಶ್ಲೋ. 23).

ಅಪಕೃಷ್ಟ ಪ್ರದೇಶಕ್ಕೆ ಉತ್ಕೃಷ್ಟವೆಂಬ ಹೆಸರು. ಈ ರೀತಿಯಲ್ಲೂ ಛಿನ್ನವನ್ನು ಐದು ಬಗೆಯಾಗಿ ವಿಂಗಡಿಸಲಾಗಿದೆ (ಶ್ಲೋ. 24).

ವಿದ್ಧ ದಲ್ಲಿಯೂ ನಿವಿದ್ಧ, ಅನಿವಿದ್ಧ, ವಿದ್ಧ ಮತ್ತು ಉತ್ಪಂದಿತ ಎಂದು ನಾಲ್ಕು ಬಗೆಯುವೆ (ಶ್ಲೋ. 25).

ಅನುಬಂಧ 1

ಭಾರತೀಯ ಭಾಷೆಗಳಲ್ಲಿ ದೊರೆತ ಪ್ರಕಟಿತ ಸಾಹಿತ್ಯ

ಈ ಅಭ್ಯಾಸದ ಸಮಯದಲ್ಲಿ ಸಮಾಲೋಚಿಸಿದ ವಿವಿಧ ಭಾರತೀಯ ಭಾಷೆಗಳಲ್ಲಿ, ಮುಖ್ಯವಾಗಿ ಸಂಸ್ಕೃತದಲ್ಲಿ ಪ್ರಕಟಿತ 'ವಿಷಯ'ದ ಪಟ್ಟಿಯನ್ನು ಸಾಧ್ಯವಾದ ಮಟ್ಟಿಗೆ ವಿಷಯಾನುಕ್ರಮಣಿಕೆ ಮತ್ತು ಕಾಲಾನುಕ್ರಮಣಿಕೆಯ ಅನುಕ್ರಮದಲ್ಲಿ ಕೆಳಗೆ ಕೊಟ್ಟಿದೆ.

ಬೇಸಾಯ

ಸಾಹಿತ್ಯದ ಹೆಸರು	ವಿವರಗಳು
ಅಥರ್ವವೇದ (ಕ್ರಿ. ಪೂ. 1500-500)	VIII 13.9–12, ಕೃಷಿಯ ಮೂಲಸ್ವರೂಪನೆಂದು ಸಂಪ್ರದಾಯ ಪ್ರಸಿದ್ಧವಾದ ಪೃಥು ವೈನ್ಯನ ಕಥೆಯ ಆಧಾರ ಕೊಡುತ್ತದೆ.
ಕೌಟಿಲ್ಯನ ಅರ್ಥಶಾಸ್ತ್ರ (ಕ್ರಿ. ಪೂ. 321–186)	II,41, ಸಿತಾಧ್ಯಕ್ಷ (ಕೃಷಿ ಮೇಲ್ವಿಚಾರಕ) II,46, ಗೋ–ಅಧ್ಯಕ್ಷ (ಜಾನುವಾರು ಮೇಲ್ವಿಚಾರಕ) ಕುಪಾಧ್ಯಕ್ಷ (ಪು. 121); (ಅರಣ್ಯ ಉತ್ಪತ್ತಿಗಳ ಮೇಲ್ವಿಚಾರಕ) : ತುಲಾಸ್ಥಾನ–ಪಾಟಸ (ಪು. 127) (ಅಳತೆ ಮತ್ತು ತೂಕ ಮೇಲ್ವಿಚಾರಕ) : ವಿವಿತಾಧ್ಯಕ್ಷ (ಪು. 177) (ಹುಲ್ಲುಗಾವಲುಗಳ ಮೇಲ್ವಿಚಾರಕ) : ಸೂತ್ರಾಧ್ಯಕ್ಷ (ಪು. 140) (ನೇಯ್ಗೆಯ ಮೇಲ್ವಿಚಾರಕ)
ಚರಕ ಸಂಹಿತ (ಕ್ರಿ. ಶ. 100–500)	ಸೂತ್ರಸ್ಥಾನ IV,1, 36, 37 ಸಸ್ಯಶಾಸ್ತ್ರ ಕುರಿತು, ಸಸ್ಯಗಳ ವರ್ಗೀಕರಣ ಮುಂತಾಗಿ ತಿಳಿಸುವುದು.
ಶುಶ್ರುತ ಸಂಹಿತ (ಕ್ರಿ. ಶ. 200–500)	ಸೂತ್ರಸ್ಥಾನ, ಅಧ್ಯಾಯ XXXVIII ಮತ್ತು XLVI, ಸಸ್ಯಗಳ ವರ್ಗೀಕರಣ ತಿಳಿಸುವುದು ಅಧ್ಯಾಯ LXIII ಸಸ್ಯಶಾಸ್ತ್ರ ಕುರಿತು.

ವಿಷ್ಣು ಪುರಾಣ (ಕ್ರಿ. ಶ. ಸುಮಾರು 500)	ಪುಸ್ತಕ I, ಅಧ್ಯಾಯ 13, ಕೃಷಿಯ ಮೂಲ ಪುರುಷನಾದ ಪೃಥುವೈನ್ಯನ ಪೌರಾಣಿಕ ಕಥೆಯನ್ನು ವಿವರವಾಗಿ ತಿಳಿಸುತ್ತದೆ.
ವರಾಹ–ಮಿಹಿರನ ಬೃಹತ್ ಸಂಹಿತ (ಕ್ರಿ. ಶ. ಸುಮಾರು 500)	II,55, ವೃಕ್ಷಾಯುರ್ವೇದ ಕುರಿತು (ಸಸ್ಯ ವಿಜ್ಞಾನ ಮತ್ತು ಸಸ್ಯ ಜೀವನ) : II, 21, ಮಳೆ ಮೋಡಗಳನ್ನು ಕುರಿತು ; II, 22, ಭರಣ ಅಥವಾ ಮಳೆ ನಕ್ಷತ್ರಗಳು ; II, 23, ಮಳೆಗಳನ್ನು ಕುರಿತು II, 27, ಗಾಳಿಗಳನ್ನು ಕುರಿತು II, 28, ತಕ್ಷಣದ ಮಳೆ ಕುರಿತು II, 29, ಕುಸುಮಲತಾಧ್ಯಾಯ ಕುರಿತು (ಹೂವಿನ ವಿಕಾಸದ ಮೇಲಿಂದ ಬೆಳೆಯ ಇಳುವರಿಯನ್ನು ಸೂಚಿಸುವುದು) II,40, ಸಸ್ಯಜಾತಕ ಕುರಿತು (ತರಕಾರಿ ಜಾತಕ ವಿದ್ಯೆ) II, 53, ದಾಕರಗಳ ಕುರಿತು, ಅಂದರೆ ಒಣ ಪ್ರದೇಶದಲ್ಲಿನೀರಿನ ಇರವನ್ನು ಕಂಡುಹಿಡಿಯುವುದು
ಅಗ್ನಿಪುರಾಣ (ಕ್ರಿ. ಶ. 500–700)	ಪರಿಚ್ಛೇದ/ಸರ್ಗ–262, ವೃಕ್ಷಾಯುರ್ವೇದ ಕುರಿತು
ವಿಷ್ಣು ಧರ್ಮೋತ್ತರ ಮಹಾಪುರಾಣ (ಕ್ರಿ. ಶ. 500–700)	II, 20, ವೃಕ್ಷಾಯುರ್ವೇದ ಕುರಿತು
ಕೃಷಿ–ಸಂಗ್ರಹ ಅಥವಾ ಪರಾಶರನ ಕೃಷಿತಂತ್ರ (ಕ್ರಿ. ಶ. 500-1000)	ಕೃಷಿಯ ಮೇಲೆ ಕಾಲಾನಂತರದಲ್ಲಿ ಬರೆದ ಒಂದು ವ್ಯವಸ್ಥಿತ ಪದ್ಯ. ಬಂಗಾಳಿ ಭಾಷಾಂತರದಿಂದ ಬಂಗಾಳಿ ಲಿಪಿಯಲ್ಲಿ ಪ್ರಕಟಣೆಯಾಗಿದೆ.
ಉಪವನ–ವಿನೋದ ಅಥವಾ ವೃಕ್ಷಾಯುರ್ವೇದ, ಲೇ. ಸಾರಂಗಧರ (ಕ್ರಿ. ಶ. 1120–1330)	ಸಸ್ಯಗಳು ಮತ್ತು ಸಸ್ಯಗಳ ಜೀವನ ಅಥವಾ ವೃಕ್ಷ–ತೋಟಗಾರಿಕೆ ಬಗ್ಗೆ ಒಂದು ವ್ಯವಸ್ಥಿತ ಪದ್ಯ. ಒಂದು ಕವಿತಾ ಸಂಗ್ರಹದ ಒಂದು ಭಾಗವು 'ಸಾರಂಗಧರ ಪದ್ಧತಿ' ಎಂದು ಪ್ರಸಿದ್ಧವಾಗಿದೆ.

ಶ್ರೀ ಶಿವತತ್ತ್ವರತ್ನಾಕರ ಲೇ. ಕೆಳದಿಯ ಬಸವರಾಜ (ಕ್ರಿ. ಶ. 1698–1715)	ಕಲ್ಲೋಲ (ಭಾಗ) VI, ಅಧ್ಯಾಯ X ಮತ್ತು XI ಗಳು ಕೃಷಿ ಮತ್ತು ತೋಟಗಾರಿಕೆಯನ್ನು ಒಳಗೊಂಡಿವೆ. ಭೂಮಾಪನ ಕಲ್ಲೋಲ II ಅಧ್ಯಾಯ I, ಭೂಮಾಪನವನ್ನು ಒಳಗೊಂಡಿದೆಮತ್ತು ಕಲ್ಲೋಲ III ಅಧ್ಯಾಯ II ಮಳೆಯ ವಿಷಯವನ್ನು ಒಳಗೊಂಡಿವೆ.
'ವೇದಮೋ ಕೃಷಿ' ಲೇ. ಶ್ರೀಪಾದ ದಾಮೋದರ ಸಾತ್ವಳೇಕರ (1923)	ಕೃಷಿಯ ಬಗ್ಗೆ ವೇದಗಳಿಂದ ಉದ್ಧರಣೆಗಳನ್ನು ಕೊಡುವ ಇತ್ತೀಚೆಗೆ ಬರೆದ ಒಂದು ಕಿರು ಹೊತ್ತಿಗೆ
ವಾಚಸ್ಪತ್ಯ ಕೋಶ (ಸಂ. II) (ಸಂಸ್ಕೃತ-ಶಬ್ದ ಕೋಶ)	ಕೃಷಿ ಶಬ್ದದ ಕೆಳಗೆ, ಪರಾಶರನ ಕೃಷಿ ಸಂಗ್ರಹ, ಬೃಹತ್ ಪರಾಶರ ಸಂಹಿತ ಪತ್ರಗಳಿಂದ ಹೇರಳವಾಗಿ ಎತ್ತಿ ಹೇಳುತ್ತವೆ.
ಕೃಷಿ ಶಾಸನಂ, ಲೇ. ದಶರಥಶಾಸ್ತ್ರಿ, ರಾಘವ ಭಾಷ್ಯದ ಮತ್ತು ನಾರಾಯಣೀಯ ಭಾಷ್ಯದೊಂದಿಗೆ, ಹಿಂದಿಯಲ್ಲಿ	ಈ ಗ್ರಂಥದ ಸೂಚನೆಯು ಸಂಸ್ಕೃತ ಗ್ರಂಥಗಳ ಬ್ರಿಟಿಷ್ ವಸ್ತು ಸಂಗ್ರಹಾಲಯದ ಗ್ರಂಥ ಸೂಚಿಯಲ್ಲಿದೆ. 10906, 1928, ED 1928 ಪು. 238b ರಲ್ಲಿಯ ಪ್ರಕಟಣೆ ಮಾರ್ವಾಡಿ ಮಷಿನ್ ಪ್ರೆಸ್, ನಾಗಪುರ, 1970 (ಅಲಭ್ಯ).
ಮುನಿಭವ ಬೋಧಿನಿ ಲೇ. ನಾರಾಯಣ-ಗಜಪತಿ ಬೆಂತಲೋರಿ	ತೆಲುಗು ಲಿಪಿ, ತೆಲುಗು ಭಾಷಾಂತರದಲ್ಲಿರುವ ಸಂಸ್ಕೃತ ಕೃತಿ.

ಜಾನುವಾರು ವ್ಯವಸಾಯ (ಪ್ರಾಣಿ ಬೇಸಾಯ)

ಕೌಟಿಲ್ಯನ ಅರ್ಥಶಾಸ್ತ್ರ (ಕ್ರಿ. ಪೂ. 321–186)	II, XXX, ಅಶ್ವಾಧ್ಯಕ್ಷ (ಕುದುರೆಗಳ ಮೇಲ್ವಿಚಾರಕ) ಮತ್ತು III, XXXI ಗಜಾಧ್ಯಕ್ಷ (ಆನೆಗಳ ಮೇಲ್ವಿಚಾರಕ), ಪ್ರಾಣಿಗಳ ಸಾಕಣೆ ಮತ್ತು ಪಶುವೈದ್ಯಕೀಯ ವಿಧಾನಗಳನ್ನು ಒಳಗೊಂಡಿದೆ.

ವರಾಹಮಿಹಿರನ ಬೃಹತ್ ಸಂಹಿತೆ (ಕ್ರಿ. ಶ. ಸುಮಾರು 500)	ಅಧ್ಯಾಯ , ಗೋ-ಲಕ್ಷಣ ಅಧ್ಯಾಯ , ಅಶ್ವ-ಲಕ್ಷಣ ಅಧ್ಯಾಯ , ಛಾಗ-ಲಕ್ಷಣ ಮತ್ತು ಅಧ್ಯಾಯ , ಹಸ್ತಿ ಲಕ್ಷಣ ವಿವಿಧ ಪ್ರಾಣಿಗಳ ಗುಣಲಕ್ಷಣಗಳನ್ನು ತಿಳಿಸುತ್ತದೆ.
ಅಗ್ನಿಪುರಾಣ (ಕ್ರಿ. ಶ. 500–700)	ಅಧ್ಯಾಯ 292 ಗವಾಯುರ್ವೇದದಲ್ಲಿ ಆಕಳು ಅಥವಾ ದನಗಳ ಮೇಲೆ ವೈದ್ಯಕೀಯ ಉಪಚಾರಗಳು) ಅಧ್ಯಾಯ 289 ಅಶ್ವ ಚಿಕಿತ್ಸೆಯ ಮೇಲೆ (ಕುದುರೆಗಳ ವೈದ್ಯಕೀಯ ಉಪಚಾರ ಕುರಿತು); ಮತ್ತು ಅಧ್ಯಾಯ 287, ಆನೆ ಗಜ ಚಿಕಿತ್ಸೆ ಕುರಿತು (ಆನೆಗಳ ವೈದ್ಯಕೀಯ ಉಪಚಾರಗಳು)
ವಿಷ್ಣು ಧರ್ಮೋತ್ತರ ಮಹಾಪುರಾಣ (ಕ್ರಿ. ಶ. 500–700)	II, 43, ಗೋ-ಚಿಕಿತ್ಸೆ ಕುರಿತು (ಆಕಳು ಅಥವಾ ದನಕರುಗಳ ವೈದ್ಯಕೀಯ ಉಪಚಾರ ಕುರಿತು) II, 46, ಅಶ್ವ-ಚಿಕಿತ್ಸೆ ಕುರಿತು (ಕುದುರೆಗಳ ವೈದ್ಯಕೀಯ ಉಪಚಾರ) ಮತ್ತು II, 48, ಹಸ್ತಿ-ಚಿಕಿತ್ಸೆ (ಆನೆಗಳ ವೈದ್ಯಕೀಯ ಉಪಚಾರ ಕುರಿತು)
ಅಶ್ವ-ವೈದ್ಯಕ ಲೇ. ಜಯದತ್ತಸೂರಿ	1886ರಲ್ಲಿ ಇಂಡಿಯಾ ಪುರಾತನ ಪುಸ್ತಕ ಪ್ರಕಟಣಾ ಮಾಹಿತಿಯಲ್ಲಿ ಪ್ರಕಟಿತ ಪ್ರಾಣಿಗಳ (ಕುದುರೆಗಳ) ಸಾಕಣೆ ಮತ್ತು ಕುದುರೆಗಳ ಪಶು ವೈದ್ಯಕೀಯ ವಿಜ್ಞಾನದ ಒಂದು ವ್ಯಾಪಕ ಪತ್ರ.
ಅಶ್ವ ಚಿಕಿತ್ಸೆ ಶಾಸ್ತ್ರ ಲೇ ನಕಲು	1887ರಲ್ಲಿ ಇಂಡಿಕಾ ಪುಸ್ತಕ ಪ್ರಕಟಣೆ

	ಮಾಲೆಯಲ್ಲಿ ಪ್ರಕಟಿತ, ಪ್ರಾಣಿಗಳ (ಕುದುರೆಗಳ) ಸಾಕಣೆ ಮತ್ತು ಕುದುರೆಗಳ ಪಶುವೈದ್ಯಕೀಯ ವಿಜ್ಞಾನದ ಒಂದು ವ್ಯಾಪಕ ಪತ್ರ.
ಹಸ್ತ್ಯಾಯುರ್ವೇದ ಲೇ. ಮುನಿಪಾಲಕಾಪ್ಯ	1894ರಲ್ಲಿ ಆನಾಂದಾಶ್ರಮ ಪ್ರಕಟಣಾ ಮಾಹಿತಿಯಲ್ಲಿ ಪ್ರಕಟಿತ, ಆನೆಗಳ ಸಾಕಣೆ ಮತ್ತು ಆನೆಗಳ ಪಶುವೈದ್ಯಕೀಯ ವಿಜ್ಞಾನದ ಒಂದು ವ್ಯಾಪಕ ಪತ್ರ.
ಮಾತಂಗ ಲೀಲಾ (ಮಾತಂಗ ಚಿಕಿತ್ಸೆ)	ತ್ರಿವೇಂದ್ರಂ ಪುಸ್ತಕಮಾಲೆ ಸಂ. 10–ಈ ತಲೆಬರಹದ ಅಧ್ಯಾಯವು ಆನೆಗಳ ಸಾಕಣೆ ಮತ್ತು ಆನೆಗಳ ವೈದ್ಯಕೀಯ ವಿಧಾನಗಳನ್ನು ವಿವರಿಸುತ್ತದೆ.
ಮಹಾಗರುಡಪುರಾಣ	ಅಧ್ಯಾಯ 207, ಪಶುವೈದ್ಯಕೀಯ ವಿಜ್ಞಾನವನ್ನು ಒಳಗೊಂಡಿದೆ.
ಪ್ರಾಸ-ಕಲ್ಪಾದ್ರುಮ ಅಥವಾ ಪಶು ಚಿಕಿತ್ಸೆ	ಪ್ರಾಚೀನ ಪಶುವೈದ್ಯಕೀಯ ವಿಜ್ಞಾನ ಕುರಿತು ಇತ್ತೀಚಿಗೆ ಬರೆದ ಒಂದು ಪುಸ್ತಕ (ಪ್ರಕಟಣೆ 1915)
ಮಾನಸೋಲ್ಲಾಸ	ಅಶ್ವ–ವೈದ್ಯಕ ಪಶುವೈದ್ಯಕೀಯ ವಿಜ್ಞಾನ (ಕುದುರೆಗಳಿಗೆ ಸಂಬಂಧಿಸಿದಂತೆ) ದ ಮೇಲಿನ ಅಧ್ಯಾಯ (ಪು. 81), ಗಜ-ಚಿಕಿತ್ಸೆ (ಆನೆಗಳಿಗೆ ಸಂಬಂಧಿಸಿದಂತೆ ಪಶುವೈದ್ಯ) (ಪು.85 ಮತ್ತು ಗಜ ಔಷಧಿ ನಿಘಂಟು)(ಬಳಸುವ ಮೂಲಿಕೆಗಳ ಪಟ್ಟಿ) (ಪು. 90)
ಶಿವತತ್ವರತ್ನಾಕರ ಲೇ. ಕೆಳದಿಯ ಬಸವರಾಜ	ಪ್ರಾಣಿಗಳ ಸಾಕಣೆ ಮತ್ತು ಪಶುವೈದ್ಯಕೀಯ ವಿಜ್ಞಾನ ಕುರಿತ ಅಧ್ಯಾಯಗಳು ಕೊಲ್ಲೋಲ VII ,ಅಧ್ಯಾಯಗಳು II, XII ಮತ್ತು XIII.

ಸೂಚನೆ : ಈ ಮೇಲಿನ ಪಟ್ಟಿಯು ವಿಷಯದ ಮೇಲಿನ ಪತ್ರಗಳು ಅದರಂತೆಯೇ ವಿವಿಧ ವಿಷಯದ ಭಾಗಗಳಿಗೆ ಸಂಬಂಧಿಸಿದಂತೆ ಕೆಲವು ಸುಪ್ರಸಿದ್ಧ ಪ್ರಕಟಿತ ಕೃತಿಗಳ ಮುಖ್ಯ ಸಹಾಯಕ ಗ್ರಂಥಗಳನ್ನು ಒಳಗೊಂಡಿದೆ.

ನಮ್ಮ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ವಿರಳ ಉದ್ಧರಣೆ ನೀಡುವ ಸಾಮಾನ್ಯ ಸಾಹಿತ್ಯ

ಋಗ್ವೇದದ ಸ್ತೋತ್ರಗಳು (ಋಗ್ವೇದದ ಪ್ರಾರ್ಥನಾ ಪದಗಳು)	I, 127, 6 ; I, 110, 5 ; XXI. 161, 10 ; IV, 57, 1-8 ; IV, 75, 8 ; IV, 5 ; 78 ; IV, 16, 11; VI.53, 99, VI, 28, 7 ;VII, 49, 2 ; X, 19. 4-8 ;X, 34, 13 ; X, 32, 5 ; X, 31, 9 ; X, 101, 3-4 ; X, 102, 8 ; X, 117, 7.
ಅಥರ್ವಣ ವೇದದ ಸ್ತೋತ್ರಗಳು (ಅಥರ್ವಣವೇದದ ಪ್ರಾರ್ಥನಾ ಪದ್ಯಗಳು)	VII, 18, (ಮಳೆ ಇತ್ಯಾದಿಗಳಿಗಾಗಿ) VII, 11, (ಮಿಂಚು (ಸಿಡಿಲು) ನಿಂದ ಬೀಜಗಳು ಕೆಡುವುದರ ಬಗ್ಗೆ (ದಕ್ಕೆ) VI, 79, (ಮನೆಯಲ್ಲಿ ಹೇರಳವಾಗಿ ಶೇಖರಿಸುವುದರ ಕುರಿತು) III, 17, (ಯಶಸ್ವೀ ಕೃಷಿಗಾಗಿ) II, 8, (ಸಸ್ಯದೊಂದಿಗೆ ಕ್ಷತ್ರಿಯ ರೋಗದ ವಿರುದ್ಧ ಮುಂತಾಗಿ) II, 26, (ಹಸುವಿನ ಕ್ಷೇಮ ಮತ್ತು ಅಭಿವೃದ್ಧಿಗಾಗಿ) III, 24 (ಧಾನ್ಯದ ಸಮೃದ್ಧಿಗಾಗಿ) IV, 21, (ಹಸುವಿನ ಸ್ತುತಿ) XII, 1, (ಭೂಮಿಯ ಸ್ತುತಿ) (36,42,45 ಸಾಲುಗಳನ್ನು ಪರಾಮರ್ಶಿಸಿ) VI, 142, (ಬೀಜ ಬಿತ್ತುವ ಕಾಲಕ್ಕೆ ಪಠನ ಮಾಡುವುದು) VI, 79, (ಹೆಚ್ಚಿನ ಮಳೆ ಪಡೆಯಲೆಂದು ಪಠಿಸುವುದು) VI, 50, (ಧಾನ್ಯದ ಹೊಲಗಳಿಗೆ ಬೀಳುವ ಸೋಂಕು ಕೀಟಗಳನ್ನು ನಿವಾರಿಸುವುದಕ್ಕೆ ಪಠಿಸುವುದು)
ಯಜುರ್ವೇದದ ಸ್ತೋತ್ರಗಳು :	(ಆಧಾರ-ಸಂಪುಟ I, ಪು 145 ನೋಡಿ)

ವಜಸ್ನೇಯ ಸಂಹಿತ ಮತ್ತು ತೈತ್ತಿರೀಯ ಸಂಹಿತ	
ಶತಪಥ ಬ್ರಾಹ್ಮಣ	VIII, vi, 2, 2 : I, 6, 1,3,
ರಾಮಾಯಣ, ಮಹಾಭಾರತ ಮಹಾಕಾವ್ಯಗಳು (ಕ್ರಿ. ಪೂ. 500–ಕ್ರಿ. ಶ. 200)	ಆಧಾರ-ಸಂಪುಟ I, ಪು. 150 ನೋಡಿ
ಪಾಣಿನಿಯ ಅಷ್ಟಾಧ್ಯಾಯಿ (ಕ್ರಿ. ಪೂ. ಸುಮಾರು 350.)	'ಇಂಡಿಯಾ ಆ್ಯಸ್ ನೋನ್‌ಟು ಪಾಣಿನಿ' ಲೇ. ವಿ. ಎಸ್. ಅಗರವಾಲ, ಪು. 194-209 210–17 ನೋಡಿ
ಬೌದ್ಧ ಸಾಹಿತ್ಯ (ಕ್ರಿ. ಪೂ. 500 ರಿಂದ ಕ್ರಿ. ಶ. 500)	ಕುಲ್ಲವಗ್ಗ X, 1, 6, ಬೆಂಕೀ ರೋಗ ಮತ್ತು ಬೂಷ್ಟು ಹಿಡಿಯುವುದನ್ನು ಕುರಿತ ಆಧಾರ ಕೊಡುತ್ತದೆ. ಕುಲ್ಲವರ್ಗ, VII, 1, 2, ಹೊಲದ ಕೆಲಸದ ಬಗ್ಗೆ ಆಧಾರ ನೀಡುತ್ತದೆ. ಮಹಾವಗ್ಗ VIII, 12, 1 ಕಿರಣ ಮಾದರಿಯ ಬತ್ತದ ಗದ್ದೆಗಳ ಆಕಾರದ ಆಧಾರ ನೀಡುತ್ತವೆ ದಶಬ್ರಾಹ್ಮಣ ಜಾತಕ, ಸಾಲಿಕೇದಾರ ಜಾತಕ. ಇತ್ಯಾದಿ ವಿವಿಧ ಜಾತಕಗಳು, ಸುತ್ತ ನಿಪಿಟಕ, ವಿನಯ ಪಿಟಕ ಇತ್ಯಾದಿ, ಪಶುವೈದ್ಯಕೀಯ ಪದ್ಧತಿಗಳಿಗೆ ಆಧಾರವುಳ್ಳ 'ಮಹಾವಂಶಕೃತಿ'
ಜೈನ ಧರ್ಮಶಾಸ್ತ್ರಗಳು (ಕ್ರಿ. ಪೂ. 500–ಕ್ರಿ. ಶ. 500)	ಬೃಹತ್ಕಲ್ಪ ಭಾಷ್ಯ ಉವಸಗದಾಸೊ, ಅಭಿದಾನ ರಾಜೇಂದ್ರ ಕೋಶ, ಥೇರಗಾಥ, ನಯಧಂಸ ಕಹ, ಬೃಹತ್ಕಲ್ಪ ಸೂತ್ರಗಳು, ಅವಶ್ಯಕ ಟೀಕೆ, ಮಜ್ಝಿಮ, ಅನುಯೋಗಧಾರಾ ಸೂತ್ರ, ವ್ಯವಹಾರ ಭಾಷ್ಯ, ಸ್ಪಷ್ಯಧಾಂಗ, ಪನ್ನವನ ಪಿಂಡಾ ನಿಜ್ಜುಟ್ಟಿ ನೈರುಕ್ತಿ, ಅಸ್ರಂಗ ಅಷ್ಟಕಾಧ್ಯಾಯನನ ಸೂತ್ರಗಳು, ಇಲ್ಲಿ ಬರುವ ವಿರಳ ಸೂತ್ರಗಳು

	ಅದೇ ಟೀಕ, ಜಂಬುಟೀಕ, ತಂಡುಲ ಟೀಕ, ಮಹಾವಂಶಟೀಕ ಕಲ್ಯಾಣ ವಿಜಯ, ವೀರ ನಿರ್ವಾಣ, ರಾಯಪಸ್ನಿಯ. ಒವ್ವೈಯ ಸೂತ್ರಗಳು, ವಿವಗಸ್ಯ, ನಿಸಿತಾಚು.
ಪುರಾಣ ಸಾಹಿತ್ಯ (ಕ್ರಿ. ಪೂ. 300 ರಿಂದ ಕ್ರಿ. ಶ. 700)	(ಜೆ. ಸಿ. ಜೈನರ'ಜೈನ ಧರ್ಮಶಾಸ್ತ್ರಗಳಲ್ಲಿ ತಿಳಿಸಿದ ಪ್ರಾಚೀನ ಭಾರತದಲ್ಲಿ ಜನಜೀವನ ನೋಡಿ)'
ವಿಷ್ಣು ಪುರಾಣ ಬ್ರಹ್ಮವಿವರ್ತ ಪುರಾಣ	ಅಧ್ಯಾಯ ಜನಮ್ಸ್-ಖಾಂಡ 102, ಉಪಯುಕ್ತ ಮತ್ತು ನಿರುಪಯುಕ್ತ ಮರಗಳ ವಿವರ ನೀಡುತ್ತದೆ (ಬದ್ರಪ್ರದ ವೃಕ್ಷ ಮತು ನಿಶಿದ್ಧ ವೃಕ್ಷ)
ಪದ್ಮ ಪುರಾಣ	ವಿವಿಧ ಆಧಾರ (ಉದ್ಧರಣೆ)ಗಳು
ಹರಿವಂಶ ಪುರಾಣ	ವಿವಿಧ ಆಧಾರ (ಉದ್ಧರಣೆ)ಗಳು
ಬ್ರಹ್ಮಾಂಡ ಪುರಾಣ	II, 7-160
ಮಹಾವರಾಹ ಪುರಾಣ	ಗೋಕರಣ ಮಹತ್ವವು ಮರಗಳ ನೆಡುವುದರಿಂದಾಗುವ ಪ್ರಯೋಜನಗಳನ್ನು ತಿಳಿಸುತ್ತದೆ (ವೃಕ್ಷಾರೋಪಣ ಫಲಂ).
ಮತ್ಸ್ಯ ಪುರಾಣ	ಅಧ್ಯಾಯ 227, ವೃಕ್ಷಶ್ಚ ಭೇಧನ-ದೋಷ (ಮರಗಳನ್ನು ಕಡಿಯುವುದರಿಂದ ಉಂಟಾಗುವ ಪಾಪಗಳು)
ವಾಯು ಪುರಾಣ	79, 71
ನಾರದೀಯ ಪುರಾಣ ಬೃಹಸ್ಪತ್ಯ-ಅರ್ಥಶಾಸ್ತ್ರ (ಕ್ರಿ. ಶ. 500-1000)	ಪ್ರಾಚೀನ ಭಾರತ ಭೌಗೋಳಿಕ ವಲಯಗಳ ಬಗ್ಗೆ ಆಧಾರಗಳನ್ನು ನೀಡುತ್ತದೆ.
ಸ್ಮೃತಿ ಸಾಹಿತ್ಯ (ಕ್ರಿ. ಪೂ. 200-ಕ್ರಿ. ಶ. 200)	
ಮನು ಸಂಹಿತ	VIII, 230, ದನಗಳ ಕುರಿತಾದ ನಿಯಮಗಳು

ನಾರದ ಸ್ಮೃತಿ	VI, 10–17, ದನಗಳ ಕುರಿತಾದ ನಿಯಮಗಳು
ಬೃಹಸ್ಪತಿ ಸ್ಮೃತಿ	VI, 10–17, ದನಗಳ ಕುರಿತಾದ ನಿಯಮಗಳು
ಯಾಜ್ಞವಲ್ಕ್ಯ ಸ್ಮೃತಿ	II, 164, ದನಗಳ ಕುರಿತಾದ ನಿಯಮಗಳು
ಆಪಸ್ಥಂಭ ಸ್ಮೃತಿ	II, II, 28, ಕೃಷಿ ಸಂಬಂಧಿಸಿದ ಹಿಂದೂ ನಿಯಮಗಳು
ಗೌತಮ ಸ್ಮೃತಿ	18-28 (SBE. 2 ಪುಟ 240) ,,
ಬೋಧಾಯನ ಸ್ಮೃತಿ	1, 5, 10 (SBE. 2 ಪುಟ 240) ,,
ವಾಸಿಷ್ಠ ಸ್ಮೃತಿ	II, 33, (SBE. 2 ಪುಟ 240) ,,
ಪರಾಶರ ಗೃಹ ಸೂತ್ರಗಳು	(SBE.ಸಂ 30) 23, 24, 25, 26ನೇ ಅಧ್ಯಾಯಗಳಲ್ಲಿ ಕೆಲವು ವಿರಳ ಉದ್ಧರಣೆಗಳು
ಕೌಶಿಕ ಸೂತ್ರಗಳು (ಬ್ಲೂಮ್ ಫೀಲ್ಡ್‌ನ ಆವೃತ್ತಿ)	26. 41–43; 27. 1-4 II, 20, (ಉಳುಮೆಯ ಹಬ್ಬ) XXI, 1–11, ದನಗಳ (ಸೌಂದರ್ಯ ಅಥವಾ ದೈವಾರೋಪಣೆ) XXIII, 17 (ಉಳುಮೆಯ ಕುರಿತು) XXIV, 1–2 (ಬಿತ್ತುವುದಕ್ಕೆ–ಶಾಂತಿ) XLI, 1–7 (ಮಳೆ ಪಡೆದುಕೊಳ್ಳುವುದಕ್ಕೆ) LI, 17-22 (ಹಾನಿಕಾರಕ ಹುಳುಗಳಿಂದ ಹೊಲಗಳನ್ನು ಮುಕ್ತಗೊಳಿಸುವುದು)
ಶುಕ್ರನೀತಿ ಅಥವಾ ಶುಕ್ರನೀತಿ-ಸಾರ	ಕೃಷಿ ಮತ್ತು ದನಗಳ ಕುರಿತಾದ ಕೆಲವು ಉದ್ಧರಣೆಗಳು
ಸೋಮೇಶ್ವರ ದೇವನ ಮಾನಸೋಲ್ಲಾಸ ಸಂಪುಟ I ಮತ್ತು II	ಗಾಯಕವಾಡ್ಸ್, ಓರಿಯಂಟಲ್ ಸೀರೀಸ್ LXXXIV ಮತ್ತು........, ವಿರಳ ಉದ್ಧರಣೆಗಳನ್ನು ಕೊಡುತ್ತದೆ.
ಅಭಿಲಾಷಿತ ಚಿಂತಾಮಣಿ (ಭಾಗ–1)	ಮದ್ರಾಸ್ ವಿಶ್ವವಿದ್ಯಾನಿಲಯ ಮಾಲೆ–69, ಮಾನಸೋಲ್ಲಾಸದಂತಹುದೇ ಮತ್ತೊಂದು ಹೆಸರಿನ ಕೃತಿ.

ಸಂಸ್ಕೃತ ಕೋಶಗಳು ಅಮರಕೋಶ(ಕ್ರಿ. ಶ. ಸುಮಾರು 800ಹತ್ತಿರ)	ಭೂಮಿವರ್ಗ, ವನೌಷಧಿವರ್ಗ ಮತ್ತು ವೈಶ್ಯ ವರ್ಗ ಎಂಬ ಅಧ್ಯಾಯಗಳಿಂದ ಕೃಷಿ ಕಲೆ, ಗಳಾದ ಮಣ್ಣು ಮತ್ತು ಭೂವಿಂಗಡಣೆ, ಬಳಸುವ ಉಪಕರಣ ಮುಂತಾದವುಗಳ ವ್ಯಾಪಕ ವಿವರ ದೊರೆಯುತ್ತದೆ.
ಶಬ್ದ–ಕಲ್ಪ–ದ್ರುಮ	ಕೃಷಿ ಶಬ್ದದಿಂದ ವಿಷಯಕ್ಕೆ ಕೆಲವು ಉದ್ಧರಣೆಗಳು
ಮೇದಿನೀ ಕೋಶ	ಕೃಷಿ ಶಬ್ದದಿಂದ ವಿಷಯಕ್ಕೆ ಕೆಲವು ಉದ್ಧರಣೆಗಳು
ಕಾವ್ಯ ಮೀಮಾಂಸ ಗಾಯಕವಾಡ್ಸ್ ಓರಿಯಂಟಲ್ ಸೀರಿಸ್ ನಂ. 1	ಪ್ರಾಚೀನ ಭಾರತದ ವಿಭಾಗಗಳು ಮತ್ತು ಅವುಗಳ ಬೆಳೆಗಳೊಂದಿಗ ಉದ್ಧರಣೆಗಳನ್ನು ನೀಡುತ್ತದೆ (ಪಠ್ಯದ ಪು. 93–94 ಮತ್ತು ಟಿಪ್ಪಣಿಯ ಪುಟ 132–137)
ಸಮರಾಂಗಣ ಸೂತ್ರಾಧಾರ ಭಾಗ-1 ಮತ್ತು 2ಗಾಯಕವಾಡ್ಸ್ (ಕ್ರಿ. ಶ. 1000–1100)	ಭೂಮಿ, ಲಾಯ ನಿರ್ಮಾಣ, ಪಶು ವೈದ್ಯಶಾಲೆ ಮುಂತಾದುವುಗಳ ಬಗ್ಗೆ ಉದ್ಧರಣೆಗಳು
ಕಾಳಿದಾಸನ ರಘುವಂಶ	ವಿಷಯದ ಮೇಲೆ ಕೆಲವು ಉದ್ಧರಣೆಗಳು
ಶೂದ್ರಕನ ಮೃಚ್ಛಕಟಿಕ	ವಿಷಯದ ಮೇಲೆ ಕೆಲವು ಉದ್ಧರಣೆಗಳು
ಹೇಮಚಂದ್ರನ ಅಭಿದಾನ ಚಿಂತಾಮಣಿ	ವಿಷಯದ ಮೇಲೆ ಕೆಲವು ಉದ್ಧರಣೆಗಳು
ಕಲ್ಹಣನ ರಾಜತರಂಗಿಣಿ (ಕ್ರಿ. ಶ. 12ನೇ ಶತಮಾನ)	ಕೃಷಿ, ಕ್ಷಾಮ, ಉತ್ಪನ್ನ ಮುಂತಾದುವುಗಳ ಬಗ್ಗೆ ಕೆಲವು ಅಂಶಗಳನ್ನು ನೀಡುತ್ತದೆ.
ರಾಜತರಂಗಿಣಿ, ಮುಂದಿನ ಶತಮಾನಗಳಲ್ಲಿ ಜೋನರಾಜ, ಶ್ರೀವರ, ಪ್ರಾಜ್ಯ ಭಟ್ಟ ಮತ್ತು ಶುಕರಿಂದ ಮುಂದುವರಿಸಲ್ಪಟ್ಟದ್ದು.	ಕೃಷಿ, ಕ್ಷಾಮ, ಉತ್ಪನ್ನ ಮುಂತಾದುವುಗಳ ಬಗ್ಗೆ ಕೆಲವು ಅಂಶಗಳನ್ನು ನೀಡುತ್ತದೆ.
ಗಾಗ ಮತ್ತು ಭದ್ರಿ ಲೇ. ರಾಮಹರೀಶ್ ತ್ರಿಪಾಠಿ	ಹಿಂದಿ ಕಾವ್ಯಗಳಲ್ಲಿ ಕೃಷಿ ; ಗೀತಾತ್ಮಕ ಹೇಳಿಕೆಗಳು

ಚಿನಾರ್-ವಚನ	ಬಂಗಾಳಿಯಲ್ಲಿ ಖಾನರ ತತ್ವಗಳು
ಡಕ್‌ವಚನಾಮೃತಗಳು	ಕೃಷಿ ಕುರಿತಾಗಿ ಮಿಥಿಲಾದ ಡಕ್‌ನಿಂದ ಗೀತಾತ್ಮಕ ಹೇಳಿಕೆಗಳು
ಗ್ರಾಮೋದ್ಯೋಗ ಶಬ್ದಾವಳಿ ಸಂಸ್ಕೃತ ಸಹಿತ್ಯಾಸಾಂಜಲಿ (ವರ್ಟ್ಬರ್ ಬುಚ್) ಲೇ. ಬ್ರತ್ಲಿಕ್ ಮತ್ತು ರೋಡಲ್ಫ್ ರೋತ್	ಸಂಸ್ಕೃತ–ಜರ್ಮನ್ ಶಬ್ದಕೋಶ, ಕೃಷಿ ಮತ್ತು ಇತಿ ಶಬ್ದಗಳಿಂದ ಅನೇಕ ಅಂಶಗಳನ್ನು ಕೊಡುತ್ತದೆ.
ಸಂದರ್ಶನ ಸಮುಚ್ಚಯದ ಮೇಲೆ ಗುಣರತ್ನನ ಟೀಕೆಗಳು	
ಭಾವ ಪ್ರಕಾಶ	

ಕೃಷಿಶಾಸ್ತ್ರ ಮತ್ತು ವೃಕ್ಷಾಯುರ್ವೇದ ಕುರಿತ ಹಸ್ತಪ್ರತಿಗಳು

ಕಶ್ಯಪ–ಮುನಿಕಥಿತ ಕೇಶ–ಪಿಪ-ಕೃಷಿ-ಸೂಕ್ತಿ	ಹಸ್ತಪ್ರತಿ ಸಂ ; 28 Kr. N. ಅಡಿಯಾರ್ ಗ್ರಂಥಾಲಯ ಮದ್ರಾಸು ಇಲ್ಲಿದೊರೆಯುತ್ತದೆ. XXXVIII 1.8, 63419, ಕೃಷಿ ಶಾಸ್ತ್ರದ ಮೇಲೆ ಒಂದು ವ್ಯಾಪಕ ಪಠ್ಯ, ಮುನಿಕಶ್ಯಪರದೆಂದು ಹೇಳಲಾಗಿದೆ.
ವೃಕ್ಷಾಯುರ್ವೇದ	ಹ. ಪ್ರ. ಸಂ. 9.K. 18, 700 (3) (ಸಂ.44), ಮದ್ರಾಸ್ ಅಡಿಯಾರ್ ಗ್ರಂಥಾಲಯದಲ್ಲಿ ದೊರೆತದ್ದು. ಸಸ್ಯಗಳು ಮತ್ತು ಸಸ್ಯಜೀವನ ಹಾಗೂ ತೋಟಗಾರಿಕೆ ಕುರಿತಾದ ಒಂದು ವ್ಯಾಪಕ ಪಠ್ಯ. ಈ ಹಸ್ತಪ್ರತಿಯು ಅನೇಕ ಶ್ಲೋಕಗಳು ಉಪವನ–ವಿನೋದ ಪಠ್ಯದಲ್ಲಿ ಈಗಾಗಲೇ ಪ್ರಕಟವಾಗಿವೆ.
ಮಾನವ ವೃಕ್ಷಾಯುರ್ವೇದ	ಹಸ್ತಪ್ರತಿ (ಹ. ಪ್ರ. ಸಂಗ್ರಹ ಸಂ. 195ರಲ್ಲಿ) ಯು ರಾಜಸ್ಥಾನದ ನಾಥದ್ವಾರದ ವಲ್ಲಭ ವೈಷ್ಣವ ಮಠ ಗ್ರಂಥಾಲಯದಲ್ಲಿ ಲಭ್ಯವಿದೆ. 22 ಸರ್ಗ (1600 ಪದ್ಯಗಳು)ಗಳಲ್ಲಿ ಕೃಷಿ

	ತೋಟಗಾರಿಕೆ, ಸಸ್ಯಶಾಸ್ತ್ರ ಮುಂತಾದುವನ್ನು ಕುರಿತಾದ ಒಂದು ವ್ಯಾಪಕ ಪಠ್ಯ.
ವಿಶ್ವವಲ್ಲಭ. ಲೇ. ಶ್ರೀ ಮಿಶ್ರ ಚಕ್ರಪಾಣಿ	ಹಸ್ತಪ್ರತಿ (ಹ. ಪ್ರ. ಸಂಗ್ರಹ ಸಂ. 195) ಯುರಾಜಸ್ಥಾನದ ನಥದ್ವಾರದ ವಲಭ ವೈಷ್ಣವ ಮಠ ಗ್ರಂಥಾಲಯದಲ್ಲಿ ದೊರೆತದ್ದು. ಕೃಷಿ, ತೋಟಗಾರಿಕೆ, ಸಸ್ಯಶಾಸ್ತ್ರ ಮುಂತಾದುವುಗಳ ಮೇಲೆ ಒಂಬತ್ತು ಅಧ್ಯಾಯಗಳ ಒಂದು ಪಠ್ಯ.
ಸುರಪಾಲನ ವೃಕ್ಷಾಯುರ್ವೇದ	ಹಸ್ತಪ್ರತಿ, ಆಕ್ಸ್‌ಫರ್ಡ್ ಸಂ. 324 B (ಹಸ್ತಪ್ರತಿ ವಾಲ್ಕರ್ 137) ಬೋಡ್ಲ್ಯೇನ್ ಗ್ರಂಥಾಲಯ, ಆಕ್ಸಫರ್ಡ್ ವಿಶ್ವವಿದ್ಯಾನಿಲಯ ಆಕ್‌ಫರ್ಡ್ (ಲಂಡನ್) ನಲ್ಲಿ ದೊರೆಯುತ್ತದೆ. ತೋಟಗಾರಿಕೆ ಮತ್ತು ಸಸ್ಯಶಾಸ್ತ್ರ ಕುರಿತಾದ ಒಂದು ಪಠ್ಯ.
ವಾಟಿಕ ವಿಧಿ ಅಥವಾ ಪುಷ್ಪಾವಾಟಿಕ	ಹ. ಪ್ರ. ಸಂ. 538, ಗಂಗಾನಾಥ ಝಾ ಸಂಶೋಧನ ಸಂಸ್ಥೆಯ ಗ್ರಂಥಾಲಯ, ಅಲಹಾಬಾದನಲ್ಲಿ ದೊರೆಯುತ್ತದೆ. ತೋಟಗಾರಿಕೆ ಮತ್ತು ಗೊಬ್ಬರ ಹಾಕುವಿಕೆಯ ಕುರಿತಾದ ಒಂದು ಸಣ್ಣ ಪ್ರಕರಣ ಗ್ರಂಥ
ಮಾನಸೋಲ್ಲಾಸದಲ್ಲಿ ವೃಕ್ಷಾಯುರ್ವೇದ ವಿಭಾಗ	ಈ ಹಸ್ತಪ್ರತಿಯ ಭಾಗವು ಈವರೆಗಿನ ಎರಡು ಪ್ರಕಾಶನಗಳಿಂದ ಎಂದರೆ ಓರಿಯಂಟಲ್ ಸಂಶೋಧನ ಸಂಸ್ಥೆ (ಅಭಿಲಾಷಿತಾರ್ಥ ಚಿಂತಾಮಣಿ), ಮತ್ತು ಗಾಯಕವಾಡ್ಸ್ ಓರಿಯಂಟಲ್ ರೀಸರ್ಚ್ ಇನ್ಸ್ಟಿಟ್ಯೂಟ್ (ಮಾನಸೋಲ್ಲಾಸ) ಗಳ ಪ್ರಕಟಣೆಗಳಲ್ಲಿ ಕಂಡುಬರುವುದಿಲ್ಲ.
ವೃಕ್ಷ–ದೋಹದ	ಹಸ್ತಪ್ರತಿ ಸಂ. 11305, ಗ್ರಂಥ ಲಿಪಿಯಲ್ಲಿ, ಸರಸ್ವತಿ ಮಹಲ್ ಗ್ರಥಾಲಯ ತಂಜಾವೂರು

ಇಲ್ಲಿ ದೊರೆಯುತ್ತದೆ. ಗೊಬ್ಬರ ಹಾಕುವಿಕೆ ಮತ್ತು ತೋಟಗಾರಿಕೆ ಪ್ರಯೋಗಗಳು ಅಥವಾ ವಿಧಾನಗಳ ಮೇಲೆ ಒಂದು ಸಣ್ಣ ಪ್ರಕಟಣಾ ಗ್ರಂಥ.

ಕೌತುಕ ಚಿಂತಾಮಣಿ

ಹಸ್ತಪ್ರತಿ ಸಂ. 770, 10762A (B) / 11041, D, ಗ್ರಂಥ ಲಿಪಿಯಲ್ಲಿ, ಸರಸ್ವತಿ ಮಹಲ್ ಗ್ರಂಥಾಲಯ, ತಂಜಾವೂರು(ದ.ಭಾ) ಗೊಬ್ಬರ ಹಾಕುವಿಕೆ ಮತ್ತು ತೋಟಗಾರಿಕೆ ಕುರಿತಾಗಿ ಒಂದು ಅಧ್ಯಾಯವಿದೆ.

ದಜವಜಿನ–ವಿಶ್ವ
ಶ್ರೀ. ಲೊಲ್ಲ ಲಕ್ಷ್ಮೀಧರ ಮತ್ತು
ಕಂಚಸ್ ಯಲ್ಲ ಯಾರ್ಯ

ಹಸ್ತಪ್ರತಿ D. ಸಂ. 13434 (ತೆಲುಗು ಲಿಪಿಯಲ್ಲಿ) ಮತ್ತು ಲಿಪ್ಯಂತರ ಪ್ರತಿ ಸಂ. 7865, ಸಂ. II ಸರಕಾರಿ ಹಸ್ತಪ್ರತಿ ಗ್ರಂಥಾಲಯ, ಮದ್ರಾಸ್‌ನಲ್ಲಿ ದೊರೆತದ್ದು. ಭೂ ಫಲವತ್ತತೆ ಮತ್ತು ತೋಟಗಾರಿಕೆ ಕುರಿತು ಒಂದು ಅಧ್ಯಾಯ (ಪುಟ 676–702)ವಿದೆ.

...ಷ್ಠಾನಂ

ಸರಸ್ವತೀ ಭವನ ಗ್ರಂಥಾಲಯ, ಉದಯಪುರದಲ್ಲಿ(ರಾಜಸ್ಥಾನ) ದೊರೆತ ಹಸ್ತಪ್ರತಿ. ಬಹುಭಾಗ ರಾಜಸ್ಥಾನಿ ಭಾಷೆಯಲ್ಲಿ ಬರೆದ, ತೋಟಗಾರಿಕೆ ವಿಧಾನಗಳು ಮತ್ತು ಭೂಫಲವತ್ತತೆ ಮತ್ತು ಕಸಿ ಮಾಡುವುದನ್ನು ಕುರಿತ ಪಠ್ಯ.

ಪರಾಶರನ ಕೃಷಿ ಪದ್ಧತಿ

ಹಸ್ತ ಪ್ರತಿ ಸಂ. 3168, ಭಾರತೀಯ ಕಛೇರಿ ಗ್ರಂಥಾಲಯ, ಲಂಡನ್‌ನಲ್ಲಿ ದೊರೆತದ್ದು. ಬಂಗಾಳಿ ಲಿಪಿಯಲ್ಲಿ ಕೃಷಿಯ ಮೇಲಿನ ಒಂದು ಪಠ್ಯ. ಇದು ಪರಾಶರನ ಕೃಷಿ ಸಂಗ್ರಹ ಎಂಬ ಹೆಸರಿನಿಂದ ಪ್ರಕಟವಾದ ಕೃತಿಯ ಕೈ ಬರಹ ಪ್ರತಿಯಾಗಿದೆ. ಆದರೂ ಸಹ ಕೆಲವು ಬೇರೆ ಬೇರೆ ಅಡಿಟಿಪ್ಪಣಿಗಳನ್ನೊಳಗೊಂಡಿದೆ.

ಕೃಷಿ ಪರಾಶರ	ಮೇಲಿನ ಪ್ರಕರಣ ಗ್ರಂಥ (2ನೇ ಬಾಬತ್ತು) ಹಸ್ತಪ್ರತಿಯ ನಾಗರಿ ಲಿಪಿಯ ನಕಲು : ಭಂಡಾರಕರ್ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಪೂನಾದಲ್ಲಿ ದೊರೆಯುತ್ತದೆ. ಈ ಹಸ್ತಪ್ರತಿಯಲ್ಲಿ ಕೊಟ್ಟ ಪಠ್ಯಕ್ಕೆ ಅನೇಕ ಪಾಠಾಂತರಗಳು ಕಂಡುಬಂದಿವೆ. ಈ ಹಸ್ತ ಪ್ರತಿಯು ಭಂಡಾರ್‌ಕರ್ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿದ್ದು ಇದು ಹಸ್ತ ಪ್ರತಿ ಮಾಂಡಲಿಕ ವಿಭಾಗ, ವಾಡಿಯಾ ಗ್ರಂಥಾಲಯ, ಫರ್ಗ್ಯುಸನ್ ಕಾಲೇಜ್ ಪೂನಾದಲ್ಲಿಯ ಪ್ರತಿಯ ನಕಲಾಗಿದೆ. ಮಾಂಡಲಿಕ ಹಸ್ತ ಪ್ರತಿಯು 1884, ಫೆಬ್ರವರಿ, 14ರಂದು ಮಾಡಿದ, ಸಂಸ್ಕೃತ ಪಾಠಶಾಲಾ ಕಲ್ಕತ್ತಾದ ಮೂಲ ಬಂಗಾಳಿ ಲಿಪಿಯ ಹಸ್ತಪ್ರತಿಯ ನಕಲಾಗಿದೆ.
ಪರಾಶರನ ಕೃಷಿ ಪದ್ಧತಿ	ಹಸ್ತ ಪ್ರತಿ ಸಂ. 6475, ಭಾರತೀಯ ಕಛೇರಿ ಗ್ರಂಥಾಲಯ, ಲಂಡನ್‌ನಲ್ಲಿದೆ. 12 ಮತ್ತು 13ನೇ ಬಾಬತ್ತುಗಳಲ್ಲಿ ಈ ಹಸ್ತಪ್ರತಿಯು ಮತ್ತೊಂದು ನಕಲಾಗಿದೆ. ಈವರೆಗೂ ಪೂರ್ಣವಾಗಿ ದೊರೆಯದೇ ಇರುವುದರಿಂದ, ನಾಗರಿ ಲಿಪಿಯಲ್ಲಿ ಪುನಃ ಸಂಪಾದನೆ ಮಾಡಲು ಈ ಪ್ರಕಟಣಾಗ್ರಂಥ ಅವಶ್ಯವಾಗಿದೆ.
ಕೃಷಿ ಸಮಯ ನಿರ್ಣಯ ಅಥವಾ ಕೃಷಿಶಾಸ್ತ್ರ	ಹಸ್ತ ಪ್ರತಿ ಆರ್. ಸಂ. 5278, ಸರಕಾರಿ ಹಸ್ತ ಪ್ರತಿ ಗ್ರಂಥಾಲಯ, ಮದ್ರಾಸ್‌ನಲ್ಲಿದೆ. ಕೃಷಿ ಕುರಿತು ಕೆಲವು ವಿವರಗಳಿವೆ.
ವರಾಹಮಿಹಿರನ ವೃಕ್ಷಾಯುರ್ವೇದ	ಹಸ್ತ ಪ್ರತಿ ಸಂ. 7927 (3757), ಭಾರತೀಯ ಗ್ರಂಥಾಲಯ, ಲಂಡನ್‌ನಲ್ಲಿದೆ. ಈಗಾಗಲೇ ಪ್ರಕಟವಾದ ಬೃಹತ್ ಸಂಹಿತೆಯ ವೃಕ್ಷಾಯುರ್ವೇದ ಅಧ್ಯಾಯದ ಮತ್ತೊಂದು ನಕಲು.

ವೃಕ್ಷಾಯುರ್ವೇದಾಧ್ಯಾಯ ಭಟ್ಟೋತ್ಪಾಲನ ಟೀಕೆಯೊಂದಿಗೆ

ಹಸ್ತಪ್ರತಿ (ಹಸ್ತ ಪ್ರತಿ ಸಂಗ್ರಹದ ಸಂಖ್ಯೆ 195) ವಲ್ಲಭ ವೈಷ್ಣವ ಮಠ ಗ್ರಂಥಾಲಯ, ನಾಥದ್ವಾರ (ರಾಜಸ್ಥಾನ)ದಲ್ಲಿದೆ. ವರಾಹ ಮಿಹಿರನ ವೃಕ್ಷಾಯುರ್ವೇದದ ಪಠ್ಯ (ಅವರ ಬೃಹತ್ ಸಂಹಿತೆಯ ಒಂದು ಅಧ್ಯಾಯ) ಟೀಕೆಯೊಂದಿಗೆ.

ಉಪವನ ವಿನೋದ

1887–91ರ ವರೆಗಿನ ಹಸ್ತಪ್ರತಿ ಸಂ. 986, ಭಂಡಾರ್‌ಕರ್ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನ ಸರ್ಕಾರಿ ಹಸ್ತಪ್ರತಿ ಗ್ರಂಥಾಲಯ ಪೂನಾದಲ್ಲಿದೆ. ಇದು (ಪ್ರಕಟಿತ) ಉಪವನ ವಿನೋದ ಹಸ್ತಪ್ರತಿಯ ನಕಲು. ಆದರೆ ಕೆಲವು ಮಾರ್ಪಾಡುಗಳು ಮತ್ತು ಬೇರೆ ಬೇರೆ ಅಡಿ ಟಿಪ್ಪಣಿಯಲ್ಲಿ ಹೆಚ್ಚಿನ ಅಂಶಗಳು ಹೊಂದಿವೆ.

ಸಾರಂಗಧರ-ಪದ್ಧತಿ ಉಪವನ ಪರಿಚ್ಛೇದ

ಹಸ್ತಪ್ರತಿ ಸಂ. 7662, ಸರಕಾರಿ ಓರಿಯಂಟಲ್ ಹಸ್ತಪ್ರತಿ ಗ್ರಂಥಾಲಯ, ತ್ರಿವೇಂದ್ರಂ (ತಿರುವಂಕೂರ್) ನಲ್ಲಿ ದೊರೆಯುತ್ತದೆ. ಉಪವನ-ವಿನೋದ ಹೆಸರಿನಿಂದ ಈಗಾಗಲೇ ಮುದ್ರಣವಾದ ಪಠ್ಯದನಕಲು. ಆದರೂ ಸಹ ಕೆಲವು ಹೆಚ್ಚಿನ ಅಂಶಗಳು, ಕೆಲವು ಬದಲಾವಣೆಗಳು ಮತ್ತು ಅನೇಕ ಅಡಿಟಿಪ್ಪಣಿಗಳನ್ನು ಹೊಂದಿದೆ.

ಪರಾಶರನ ವೃಕ್ಷಾಯುರ್ವೇದ

ಈ ಹಸ್ತಪ್ರತಿಯ ಸೂಚನೆಯು ಸಂಪೂರ್ಣ ವಿವರದೊಂದಿಗೆ ರಾಯಲ್ ಏಶಿಯಾಟಿಕ್ ಸೊಸೈಟಿ, ಬೆಂಗಾಲ್ ಪತ್ರಗಳು ಸಂ. XVI, ಸಂ 1. 1950ರ. ನಿಯತ ಕಾಲಿಕೆಯ ಒಂದು ಲೇಖನ ಕಂಡುಬಂದಿತು. ಇದು ಸಸ್ಯಶಾಸ್ತ್ರ ಮತ್ತು ತೋಟಗಾರಿಕೆ ಕುರಿತು ಹೇಳುತ್ತದೆ (ಈವರೆಗೂ ದೊರೆತಿಲ್ಲ).

ಜಿನನಾಥನ ವನಪತ್ರಿ	ಈ ಹಸ್ತಪ್ರತಿಯ ಸೂಚನೆಯು ಮಿಥಿಲೆಯ ಅನಂತ ಪ್ರಸಾದರ ಹಸ್ತಪ್ರತಿ ಗ್ರಂಥ ಸೂಚಿ ಸಂ. 111 (386) ರಲ್ಲಿ ಬಾಬತ್ತು 328 ರಲ್ಲಿ ಬಂದಿದೆ. ಇದು ಕೃಷಿಗೆ ಅವಶ್ಯವಾದ ಪವನ ಶಾಸ್ತ್ರ ಮತ್ತು ಮಳೆಗಳನ್ನು ಕುರಿತು ಹೇಳುತ್ತದೆ. ಇದು ಸಹ (ಈವರೆಗೆ ದೊರೆತಿಲ್ಲ).
ವೃಕ್ಷಾರೋಪಣ ಶುಭಾಶುಭ ವಿಚಾರ	ಹಸ್ತಪ್ರತಿ ದರ್ಭಾಂಗರಾಜ ಗ್ರಂಥಾಲಯ, ದರ್ಭಾಂಗದಲ್ಲಿದೆ. ಇದು ಬೇರೆ ಬೇರೆ ಮರಗಳನ್ನು ನೆಡುವುದರಿಂದ ಆಗುವ ಶುಭ ಮತ್ತು ಅಶುಭ ಪರಿಣಾಮಗಳನ್ನು ಹೇಳುತ್ತದೆ.
ಹುಪ್ರ ಪಸ್ತಕ ಪರಪತಿ ಠಾಕೂರ್ (ಕ್ರಿ. ಶ. 1500) ವ್ಯವಹಾರ ಪ್ರದೀಪಿಕಾ	ಹಸ್ತಪ್ರತಿಯು ದರ್ಭಾಂಗರಾಜ ಗ್ರಂಥಾಲಯದಲ್ಲಿದೆ. ಮಿಥಿಲೀ ಲಿಪಿಯಲ್ಲಿದೆ. ಬೀಜಾಪಾಪನ (ಬಿತ್ತುವ ಬೀಜಗಳ ಬೀಜೋಪಚಾರ) ಕುರಿತ ಒಂದು ಅಧ್ಯಾಯ ಮತ್ತು ಕೃಷಿ ಕಾರಕಮಾಣಿ (ಕೃಷಿಕಾರರು ಮಾಡಬೇಕಾದ ಕಾರ್ಯಗಳು) ಎಂಬ ಮತ್ತೊಂದು ಅಧ್ಯಾಯವನ್ನು ಹೊಂದಿದೆ. ಇದು ಸಣ್ಣ ಪುಟ್ಟ ಮಾಹಿತಿಗಳನ್ನು ಮಾತ್ರ ತಿಳಿಸುತ್ತದೆ.
ಕ್ರಮ–ವಸ–ವಿಚಾರ	ಹಸ್ತಪ್ರತಿಯು ದರ್ಭಾಂಗರಾಜ ಗ್ರಂಥಾಲಯದಲ್ಲಿದೆ. ಗ್ರಾಮ ವಾಸಿತ ಪರಿಸ್ಥಿತಿಯನ್ನು ಒಳಗೊಂಡಿದೆ.
ನಾರದ ಶಿಲ್ಪ ಶಾಸ್ತ್ರ	ಹಸ್ತಪ್ರತಿ 13515, ಬರೋಡದ ಗಾಯಕವಾಡ್ ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್‌ನಲ್ಲಿದೆ. ಹಸ್ತಪ್ರತಿಯಲ್ಲಿ ಗ್ರಾಮ ಸೀಮಾಂತ ಲಕ್ಷಣ (ಗ್ರಾಮ ಎಲ್ಲೆ), ಗ್ರಾಮಾಧಿಸ್ಥಳ ಸಮೀಕರಣ ಲಕ್ಷಣಂ (ಗ್ರಾಮ ಜಮೀನು ಮಟ್ಟಸಿಕೆ), ಮಾರ್ಗ ಲಕ್ಷಣ ಕಥನಂ (ಜಲಾಶಯಗಳು, ಕೆರೆಗಳು ಇತ್ಯಾದಿ), ಪ್ರಣಾಳಿ ಸೇತು ಲಕ್ಷಣ ಕಥನಂ (ಕಾಲುವೆಗಳು, ಕಟ್ಟೆಗಳು ಇತ್ಯಾದಿ) ಮಹಾಗ್ರಾಮ ಲಕ್ಷಣ ಕಥನಂ (ದೊಡ್ಡ

ಹೆಳ್ರಿಯ ಲಕ್ಷಣಗಳು) ಇತ್ಯಾದಿ ಕುರಿತು ವಿಭಾಗಗಳಿವೆ.

ಪರಿಶೀಲಿಸಬೇಕಾದ ಅಥವಾ ಗಮನಿಸಲಾದ ಅಷ್ಟೇನೂ ಪ್ರಾಮುಖ್ಯವಲ್ಲದ ಕೆಲವು ಕೃಷಿ ಸಂಬಂಧಿತ ಹಸ್ತ ಪ್ರತಿಗಳು

ವೃಕ್ಷದಾಯ	ರಘುವಂಶದಲ್ಲಿ ಹೇಮಾದ್ರಿಯು ಉದ್ಧರಿಸಿದ್ದಾನೆ; ಟಿ. ಅಫ್ರೆಚ್‌ನ ಗ್ರಂಥಪಟ್ಟಿಯಲ್ಲಿ ಕೊಟ್ಟಿದೆ.
ವೃಕ್ಷೋಧ್ಯಾಯನ	Dh. k 194; ಟಿ. ಅಫ್ರೆಚ್‌ನ ಗ್ರಂಥಪಟ್ಟಿಯಲ್ಲೂ ಸೂಚಿತವಾಗಿದೆ.
ವೃಕ್ಷೋ—	ಹಸ್ತ ಪ್ರತಿ ಸಂ. 5947; ಬಂಗಾಳದ ರಾಯಲ್ ಏಷ್ಯಾಟಿಕ್' ಸೊಸೈಟಿ (ಗ್ರಂಥಾಲಯ)ಯಿಂದ ಪಡೆದದ್ದು, ಮತ್ಸ್ಯ ಪುರಾಣದಿಂದ ಉದ್ಧರಿಸಲಾದುದೆಂದು ಹೇಳಲಾಗಿದೆ.
ಬೃಹತ್ ಉಪವನ ವಿನೋದ	ಕಾಶಿ, ಬೆನಾರಸ್‌ನ 'ಶ್ರೀವಲ್ಲಭರಾಮ ಸಾಲಿಗ್ರಾಮ ಸಂಗವೇದ ವಿದ್ಯಾಲಯದ' ಪ್ರಾಧ್ಯಾಪಕ ಶ್ರೀ ರಾಜೇಶ್ವರ ಶಾಸ್ತ್ರಿಯವರಿಂದ ಪಡೆದದ್ದು. ಹಸ್ತಪ್ರತಿ ನಾಗಪುರ ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕ ಎಫ್. ರಾಮಪ್ರಸಾದ್ ಶಾಸ್ತ್ರಿಯವರ ವಶದಲ್ಲಿದೆಯೆನ್ನಲಾಗಿದೆ. ಈಗಾಗಲೇ ಪ್ರಕಟವಾದ ಉಪವನ ವಿನೋದವು ಈ ಬೃಹತ್ ಕೃತಿಯ ಭಾಗವಾಗುತ್ತದೆನ್ನಲಾಗಿದೆ.
ಗಂಗಾಧರನ ಗಂಧಸಾರ	ಅನೇಕ ಸಸ್ಯ ಮತ್ತು ಅವುಗಳ ಉತ್ಪನ್ನಗಳನ್ನು ತಿಳಿಸುವ ಹಸ್ತಪ್ರತಿ. ಪೂನಾದ ಭಂಡಾರಕರ್ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ದೊರೆಯುತ್ತದೆ.

ರಘುನಾಥನ ಭೋಜನ ಕುತೂಹಲಂ	ಹಸ್ತ ಪ್ರತಿ ಸಂ. 594, ಪೂನಾದ ಭಂಡಾರ್‌ಕರ್ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ದೊರೆಯುತ್ತದೆ. ಇದು ಸೀತಾಫಲ ಮತ್ತು ರಾಮಾಫಲ ಹಣ್ಣುಗಳ ಬಗ್ಗೆ ಆಧಾರ ಕೊಡುತ್ತದೆ; ಇದು ಬಹುಹಿಂದಿನಿಂದಲೂ ಈ ವೃಕ್ಷಗಳನ್ನು ಬೆಳೆಸುತ್ತಿದ್ದು ಹಿಂದೂಗಳು ಗೌರವಿಸಿದ್ದಾರೆಂಬುದನ್ನು ತೋರಿಸುತ್ತದೆ. ಹಸ್ತಪ್ರತಿಯಲ್ಲಿ ಇನ್ನೂ ಅನೇಕ ಸಸ್ಯಗಳ ಬಗ್ಗೆ ಆಧಾರ ದೊರೆಯುತ್ತದೆ. ಹಸ್ತಪ್ರತಿಯ ಮತ್ತೊಂದು ನಕಲು ಗಂಗಾನಾಥ ಝಾ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ದೊರೆಯುತ್ತದೆ.
ತಡಗಡಿ ಪದಿ	ಹಸ್ತ ಪ್ರತಿ ಸಂ. 3406. ಬಂಗಾಳದ ರಾಯಲ್ ಏಷ್ಯಾಟಿಕ್ ಸೊಸೈಟಿ(ಗ್ರಂಥಾಲಯ)ಯಲ್ಲಿ ದೊರೆಯುತ್ತದೆ.
ಕೂಪ ಪ್ರತಿಷ್ಠ	ಹಸ್ತ ಪ್ರತಿ ಸಂ. 3407
ದ್ರವ್ಯನಾಮಾಕರ	ಹಸ್ತ ಪ್ರತಿ ಸಂ 745, ಅಲಹಾಬಾದಿನ ಗಂಗಾನಾಥ ಝಾ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ದೊರೆಯುತ್ತದೆ.
ಟಿ. ವೆಂಕಟರಾಮಯ್ಯನ ವೃಕ್ಷಶಾಸ್ತ್ರ ಸಂಗ್ರಹ (1895)	ಪ್ರಾಚೀನ ಸಾಹಿತ್ಯಾಧಾರದ ಮೇಲೆ ತೆಲುಗಿನಲ್ಲಿ ಬರೆದು ಪ್ರಕಟಿಸಲಾದ ಪುಸ್ತಕ. ತಿರುಪತಿಯ ವೆಂಕಟೇಶ್ವರ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ದೊರೆಯುತ್ತದೆ.
ವಿಕ್ರಮನ ಮಗ ವಾಗ್ಭಟನ (ಕ್ರಿ. ಶ. 1651) ಅಶ್ವಾಯುರ್ವೇದ	ಅಥವಾ ಶಾಲಿಹೋತ್ರ ಹಸ್ತ ಪ್ರತಿ ಸಂ. 581, ಅಶ್ವಚಿಕಿತ್ಸಾ ಪ್ರಕರಣ ಗ್ರಂಥ, ಪೂನಾದ ಭಂಡಾರ್‌ಕರ್ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ದೊರೆಯುತ್ತದೆ.
ಸುಖಾನಂದನ ಅಶ್ವಶಾಸ್ತ್ರ ಅಥವಾ ಅಶ್ವಚಿಕಿತ್ಸ	ಹಸ್ತಪ್ರತಿ ಸಂ. 427; ಬಾಂಬೆ ಶಾಖೆಯ ರಾಯಲ್ ಏಷ್ಯಾಟಿಕ್ ಸೊಸೈಟಿಯಲ್ಲಿ

	ದೊರೆಯುತ್ತದೆ. ಕುದುರೆಗಳ ಸ್ವಭಾವ, ವರ್ಗೀಕರಣ ಮತ್ತು ಚಿಕಿತ್ಸೆ ಕುರಿತ ಸಣ್ಣ ಪ್ರಕರಣ ಗ್ರಂಥ. ವಿವರಣಾತ್ಮಕ ಸಂಸ್ಕೃತ ಗ್ರಂಥಪಟ್ಟಿಯ ಕಡೆಯ ಪುಟದಲ್ಲಿ ಇದರ ಸೂಚನೆ ಬಂದಿದೆ; ಎಂ. ಡಿ. ವೇಲಂಕರ್ ಸಂಕಲಿಸಿದ ಸಂಸ್ಕೃತ ಮತ್ತು ಪ್ರಾಕೃತ ಹಸ್ತಪ್ರತಿಗಳು, ರಾಯಲ್ ಏಷ್ಯಾಟಿಕ್ ಸೊಸೈಟಿಯ ಬಾಂಬೆ ಶಾಖೆಯ ಗ್ರಂಥಾಲಯದಲ್ಲಿವೆ.
ಗಣನ ಅಶ್ವಾಯುರ್ವೇದ	ಟಿ. ಅಫ್ರೆಟ್‌ನ ಗ್ರಂಥಪಟ್ಟಿಯಲ್ಲಿ ಈ ಬಗ್ಗೆ ಸೂಚನೆ ಬಂದಿದೆ.
ಗಣನ ಸಾರ ಸಂಗ್ರಹ	ಟಿ. ಅಫ್ರೆಟ್‌ನ ಗ್ರಂಥಪಟ್ಟಿಯಲ್ಲಿ ಈ ಬಗ್ಗೆ ಸೂಚನೆ ಬಂದಿದೆ.
ವಿಕ್ರಮನ ಮಗ ವಾಗ್ಭಟನ ಅಶ್ವಾಯುರ್ವೇದ ಸಾರಸಂಗ್ರಹ	ಟಿ. ಅಫ್ರೆಟ್‌ನ ಗ್ರಂಥಪಟ್ಟಿಯಲ್ಲಿ ಈ ಬಗ್ಗೆ ಸೂಚನೆ ಬಂದಿದೆ.
ಅಶ್ವಸಾರ	ಟಿ. ಅಫ್ರೆಟ್‌ನ ಗ್ರಂಥಪಟ್ಟಿಯಲ್ಲಿ ಈ ಬಗ್ಗೆ ಸೂಚನೆ ಬಂದಿದೆ.
ಗಗನಋಷಿಯ ಅಶ್ವಾಯುರ್ವೇದ ಅಥವಾ ಸಿದ್ಧಿತ್ಯೋಗ ಸಂಗ್ರಹ	ಬನಾರಸನ ಸರಸ್ವತಿ ಭವನ ಸಂಸ್ಕೃತ ಗ್ರಂಥಾಲಯದಲ್ಲಿ ಹಸ್ತಪ್ರತಿಯ ನಕಲಿದೆ. ಟಿ. ಅಫ್ರೆಟ್‌ನ ಗ್ರಂಥಪಟ್ಟಿಯಲ್ಲಿ ಹಸ್ತಪ್ರತಿ ಬಗ್ಗೆ ಸೂಚನೆಯಿದೆ.
ವೀರಸೇನನ ಹಸ್ತಿವೈದ್ಯಕ	ಟಿ. ಅಫ್ರೆಟ್‌ನ ಗ್ರಂಥಪಟ್ಟಿಯಲ್ಲಿ ಈ ಹಸ್ತಪ್ರತಿ ಬಗ್ಗೆ ಸೂಚನೆಯಿದೆ.
ಗಜಾಯುರ್ವೇದ, ಗಜಚಿಕಿತ್ಸೆ ಮತ್ತು ಗಜವೈದ್ಯ	ಈ ಹಸ್ತಪ್ರತಿಗಳು ಪಾಲಕಾಪ್ಯನ ಹಸ್ತ್ಯಾಯುರ್ವೇದವೇ ಆಗಿವೆ. ಈಗಾಗಲೆ ಆನಂದ ಸಮ ಮಾಲೆಯಲ್ಲಿ ಪ್ರಕಟವಾಗಿವೆ. ಟಿ. ಅಫ್ರೆಟ್‌ನ ಗ್ರಂಥಪಟ್ಟಿಯಲ್ಲಿ ಈ ಹಸ್ತಪ್ರತಿ ಬಗ್ಗೆ ಸೂಚನೆಯಿದೆ.

ಅಶ್ವಶಾಸ್ತ್ರ	ಹಸ್ತಪ್ರತಿ ಸಂ. 119: ಪೂನಾದ ಭಂಡಾರ್‌ಕರ್ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ದೊರೆಯುತ್ತದೆ.
ಶಾಲಿಹೋತ್ರ	ಹಸ್ತಪ್ರತಿ ಸಂಖ್ಯೆ 865, ಮೇವಾರಿ ಭಾಷೆಯಲ್ಲಿದೆ (ರಾಜಸ್ಥಾನದ ಉಪಭಾಷೆ). ಇದರಲ್ಲಿ ಕುದುರೆಗಳ ಕಾಯಿಲೆಗಳು ಹಾಗೂ ಅವುಗಳ ಚಿಕಿತ್ಸೆ ಬಗ್ಗೆ ವಿವರವಿದೆ. ಇದು ಹಳೆಯ ರಾಜರ ಲಾಯದಾಳುಗಳು ಅನುಸರಿಸುತ್ತಿದ್ದ ಸ್ಥಳೀಯ ಚಿಕಿತ್ಸಾ ಪದ್ಧತಿಗಳನ್ನು ಆಧರಿಸಿರುವಂತೆ ತೋರುತ್ತದೆ (ಸಚಿತ್ರ ವರ್ಣ ವಿವರಗಳನ್ನು ಒಳಗೊಂಡಿದೆ).
ಅಶ್ವಲಕ್ಷಣ	ವಿವಿಧ ಬಗೆಯ ಅಶ್ವಗಳು, ಅವುಗಳ ಬಣ್ಣ, ಗುಣಲಕ್ಷಣಗಳು ಇತ್ಯಾದಿ ಅಶ್ವವಿವರಗಳನ್ನೊಳಗೊಂಡ ಸಚಿತ್ರಮಯ ಹಸ್ತ ಪ್ರತಿ (86 ಚಿತ್ರಗಳಿವೆ)
ಶಾಲಿಹೋತ್ರ	ಹಸ್ತಪ್ರತಿ ಸಂಖ್ಯೆ 386, ಸ್ಥಳೀಕ ಉಪಭಾಷೆಯಲ್ಲಿದ್ದು ಪಶು ವೈದ್ಯಕೀಯ ಪದ್ಧತಿಗಳನ್ನು ವಿವರಿಸುತ್ತದೆ. ಅಶ್ವರೋಗಗಳನ್ನು ಕುರಿತು ಅನೇಕ ಚಿಕಿತ್ಸಾ ಕ್ರಮಗಳನ್ನು ಕೊಡುತ್ತದೆ.
ವಿಷ್ಣುದಾಸನ ಅಶ್ವಲಕ್ಷಣ	ಹಸ್ತ ಪ್ರತಿ ಸಂ. 746, ಅಶ್ವಗಳನ್ನು ಕುರಿತು ಪಶುವೈದ್ಯಕೀಯ ಶಾಸ್ತ್ರದ ಸಚಿತ್ರಮಯ ಕೃತಿ (ಹೊಸ ಹಸ್ತ ಪ್ರತಿ ಸಂಖ್ಯೆ 842).
ಶಾಲಿಹೋತ್ರ ಅಥವಾ ಹಯದರ್ಪಣ	ಹಸ್ತ ಪ್ರತಿ ಸಂ. 272, ಅದೇ– (ದಿ. 1853)
ಅಶ್ವಶಾಸ್ತ್ರಂ ಅಥವಾ ಶಾಲಿಹೋತ್ರ	ಹಸ್ತ ಪ್ರತಿ ಸಂ. 1453. ಸಂಸ್ಕೃತದಲ್ಲಿದೆ; ಅಶ್ವಗಳನ್ನು ಕುರಿತ ಪಶುವೈದ್ಯಕೀಯ ಶಾಸ್ತ್ರದ ಪ್ರಕರಣ ಗ್ರಂಥ
ಅಶ್ವಾಯುರ್ವೇದ ಅಥವಾ ಅಶ್ವವೈದ್ಯಕಂ	ಹಸ್ತ ಪ್ರತಿ ಸಂ. 617, –ಅದೇ (ಹ. ಪ್ರ. ದಿ. 1727)

ಶಾಲಿಹೋತ್ರ	ಹಸ್ತಪ್ರತಿ ಸಂ. 1492, ಕುದುರೆಗಳ ಪಶು ವೈದ್ಯಶಾಸ್ತ್ರ ಕುರಿತು (ದಿ. 1974– ಅಪರಿಪೂರ್ಣ)
ಶಾಲಿಹೋತ್ರ ಸಂಹಿತ	ಹಸ್ತಪ್ರತಿ ಸಂ.1932, ಮೇಲಿನಂತೆ (ಪ. ವೈ. 1553)
ಶಾಲಿಹೋತ್ರ	ಹಸ್ತಪ್ರತಿ ಸಂ. 416; ಹಳೆಯ ಹಿಂದಿಯಲ್ಲಿದೆ, ಮೇಲಿನಂತೆ
ಶಾಲಿಹೋತ್ರ	ಹಸ್ತಪ್ರತಿ ಸಂ. 386, ಮೇಲಿನಂತೆ
ಅಶ್ವಲಕ್ಷಣ	ಹಸ್ತಪ್ರತಿ ಸಂ. 841, ವರ್ಣರಂಜಿತ ಸಚಿತ್ರ ಮಯ ಅಶ್ವ ಪಶುವೈದ್ಯಶಾಸ್ತ್ರ ಕುರಿತ ಬೃಹತ್ ಕೃತಿ.
ನಕುಲಪಂಪನ ಸಾಲಿತ್ತರೆ	ಹಸ್ತಪ್ರತಿ ಸಂ.286, ಮೇಲಿನಂತೆ
ಅಶ್ವವೈದ್ಯ ಸಂಗ್ರಹ	ಹಸ್ತಪ್ರತಿ ಸಂ.16 ; ಹಳಗನ್ನಡ ಲಿಪಿ ಹಾಗೂ ಭಾಷೆಯಲ್ಲಿದೆ, ಅಶ್ವ ಪಶುವೈದ್ಯಶಾಸ್ತ್ರ ಕುರಿತದ್ದಾಗಿದೆ ; ಮೈಸೂರು ಮಹಾರಾಜರ ಸಂಸ್ಕೃತ ಗ್ರಂಥಭಂಡಾರ 'ಸರಸ್ವತಿಭಂಡಾರ ಅರಮನೆ' ಯಲ್ಲಿದೆ.
ಅಶ್ವವೈದ್ಯ ಸಂಗ್ರಹ	ಹಸ್ತಪ್ರತಿ ಸಂ. 1356, ಹಳಗನ್ನಡ ಲಿಪಿಯಲ್ಲಿದ್ದು, ಅಶ್ವ ಪಶುವೈದ್ಯಶಾಸ್ತ್ರ ಪತ್ಯವನ್ನೊಳಗೊಂಡಿದೆ.
ಕರಟಿ ಕಸ್ತುಕ	ಹಸ್ತಪ್ರತಿ ಸಂ. 247, ದರ್ಭಾಂಗರಾಜ ಗ್ರಂಥಭಂಡಾರದಲ್ಲಿಯ ಪಶು ವೈದ್ಯಶಾಸ್ತ್ರ ಕುರಿತ ಕೃತಿ
ಹಗಾಯುರ್ವೇದ	ಪೂನಾದಲ್ಲಿಯ ಭಂಡಾರ್‌ಕರ್ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ದೊರೆಯುತ್ತದೆ.
ಶಾಲಿಹೋತ್ರನ ಅಶ್ವಶಾಸ್ತ್ರ	ಅಶ್ವ ಪಶುವೈದ್ಯಶಾಸ್ತ್ರ ಕುರಿತ ಹಸ್ತಪ್ರತಿ, ತಿರುಪತಿಯ ವೆಂಕಟೇಶ್ವರ ಓರಿಯಂಟಲ್ ಇನ್‌ಸ್ಟಿಟ್ಯೂಟ್‌ನಲ್ಲಿ ದೊರೆಯುತ್ತದೆ.

ಗಜಶಾಸ್ತ್ರ	ಅಶ್ವ ಪಶುವೈದ್ಯಶಾಸ್ತ್ರ ಕುರಿತ ಹಸ್ತಪ್ರತಿ ತಿರುಪತಿಯ ವೆಂಕಟೇಶ್ವರ ಓರಿಯಂಟಲ್ ಇನ್ಸ್ಟಿಟ್ಯೂಟ್‌ನಲ್ಲಿ ದೊರೆಯುತ್ತದೆ. (ಆನೆಗಳನ್ನು ಕುರಿತದ್ದು)
ಶಾಲಿಹೋತ್ರ	ಹಸ್ತಪ್ರತಿ ಸಂಖ್ಯೆ 1499, ಉದಯಪುರ ಮಹಾರಾಜರ ಗ್ರಂಥ ಭಂಡಾರ 'ಸರಸ್ವತಿ ಭವನ' ದಲ್ಲಿ ದೊರೆಯುತ್ತದೆ.

ಪ್ರಕಟಿತ ಹಸ್ತಪ್ರತಿಗಳು

ಎನ್. ನರಸಿಂಗಅಯ್ಯಂಗಾರರ ಪಶುವೈದ್ಯ ಸಂಗ್ರಹ	1895ರಲ್ಲಿ ಪ್ರಕಟಿತ.
ಗೋವೈದ್ಯ ಸಾರಸಂಗ್ರಹ	ಕನ್ನಡದಲ್ಲಿ ಬಿ. ಎಸ್. ನಂಜೋಪ, ಸಂಪಾದಿತ, 1917ರಲ್ಲಿ ಪ್ರಕಾಶಿತ.
ಕೃಷ್ಣರಾವ್‌ರ ಅಶ್ವಶಾಸ್ತ್ರ ಸಂಗ್ರಹ	ಪಾರಸಿ ಮತ್ತು ಮರಾಠಿ ಹಸ್ತಪ್ರತಿಗಳ ಆಧಾರದ ಮೇಲೆ ಸಂಕಲಿತ, 1916ರಲ್ಲಿ ಪ್ರಕಟಿತ

ಇದೇ ವಿಷಯದ ಮೇಲಿನ ದಕ್ಷಿಣ ಭಾರತ ಸಾಹಿತ್ಯ

ಸಂಸ್ಕೃತ ಮತ್ತು ಉತ್ತರ ಭಾರತೀಯ ಸಾಹಿತ್ಯದಲ್ಲಿ ದಕ್ಷಿಣ ಭಾರತೀಯ ಸಾಹಿತ್ಯದಲ್ಲೂ ಸಹ ಕೃಷಿ ಮುಖ್ಯಪಾತ್ರ ವಹಿಸುತ್ತದೆ. ಇದು ತಮಿಳು, ಕನ್ನಡ, ತೆಲುಗು ಇತ್ಯಾದಿ ಭಾಷೆಗಳಲ್ಲಿಯ ಈ ಮುಂದೆ ತಿಳಿಸುವ ಕೃತಿಗಳಿಂದ ಸ್ಪಷ್ಟವಾಗುತ್ತದೆ.

ತಿರುಕ್ಕುರುಳ್	ಕನ್ನಡದಲ್ಲಿದೆ, ಸರ್ಕಾರಿ ಹಸ್ತಪ್ರತಿ ಗ್ರಂಥ ಭಂಡಾರದಲ್ಲಿ ಪ್ರಕಟಗೊಂಡಿದೆ ; ಸಂತ ತಿರುವಳ್ಳುವರ ಪವಿತ್ರ ಸೂಕ್ತಗಳನ್ನೊಳಗೊಂಡಿದೆ ; ಇದು ತಮಿಳು ಸಾಹಿತ್ಯದ ಪ್ರಾಚೀನ ಕೃತಿಯೆಂದು ಪರಿಗಣಿತವಾಗಿದ್ದು ಕ್ರಿ. ಪೂ. 1 ಅಥವಾ 2ನೇ ಶತಮಾನಕ್ಕೆ ಸೇರಿದುದೆಂದು ಭಾವಿಸಲಾಗಿದೆ. ಇದರಲ್ಲಿ ಮಳೆ ಮತ್ತು ಕೃಷಿಗೆ ಸಂಬಂಧಿಸಿದ ಭಾಗಗಳಿವೆ.
ಚಾವುಂಡರಾಯನ ಲೋಕೋಪಕಾರ (ಕ್ರಿ. ಶ. ಸುಮಾರು 1025)	ಕನ್ನಡದಲ್ಲಿಯ ಒಂದು ವಿಶ್ವಕೋಶ. ಇದರಲ್ಲಿ ಕೃಷಿ ಮತ್ತು ಸಸ್ಯಜೀವನ ಕುರಿತ ಭಾಗವಿದೆ. (ಮದ್ರಾಸಿನ ಸರ್ಕಾರಿ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ ಲೈಬ್ರರಿಯಲ್ಲಿ ಪ್ರಕಟವಾಗಿದೆ).

ರಟ್ಟಮತ ಶಾಸ್ತ್ರಸು	ಕನ್ನಡ ಕೃತಿ ; ಮಳೆ ಮುನ್ಸೂಚನೆ ಮತ್ತಿತರ ಕೃಷಿ ವಿಷಯಗಳನ್ನೊಳಗೊಂಡಿದೆ.
ನಾಲಡಿಯಾರ್	(ತಮಿಳಿನ ನಾನೂರು ಉದ್ಧರಣೆಗಳು:) ಕೃಷಿ ಸಂಬಂಧಿತ ಕೆಲವು ಆಧಾರಗಳನ್ನು ಕೊಡುತ್ತದೆ.
ವ್ಯವಸಾಯ ಪ್ರಶ್ನೋತ್ತರ ಅಥವಾ ವ್ಯವಸಾಯಕ್ರಮ ಅಥವಾ ವ್ಯವಸಾಯ ಶಾಸ್ತ್ರ ಚರಿತ	ತೆಲುಗು ಕೃತಿ: ಪ್ರಶ್ನೋತ್ತರ ರೂಪದಲ್ಲಿ ಕೃಷಿ ಕುರಿತ ಒಂದು ಭಾಗ ಪಡೆದಿದೆ.
ಸಸ್ಯಾನಂದ	ತೆಲುಗು ಹಸ್ತಪ್ರತಿ, ಬೆಳೆಗಳ ಆನಂದ ಕುರಿತಾಗಿದೆ.
ಪೈರು ಮಾಡುವ ವಿವರ	ಹಸ್ತಪ್ರತಿ(ಲಿಪ್ಯಂತರ ಪ್ರತಿ) ಸಂಖ್ಯೆ 363/163, ಹಳೆಯ ಹಸ್ತಪ್ರತಿಯ ನಕಲು ; ವ್ಯವಸಾಯ ವಿಧಾನ ಕುರಿತಾಗಿದೆ.
ಕೃಷಿ-ಗೀತೆ	(ಪ್ರಕಟಿತ): ತೆಂಗು, ತಾಳೆ ಮತ್ತು ಧಾನ್ಯಗಳ ಬೇಸಾಯ ಕುರಿತಾದುದು; ಮಲೆಯಾಳ ಭಾಷೆ.
ದ್ರವ್ಯ-ಗುಣ-ಸಂಗ್ರಹ	ವಿವಿಧ ಬಗೆಯ ಮರಗಳು ಮತ್ತು ಗಿಡಗಳು ಇತ್ಯಾದಿಗಳ ವಿವರಣೆಯನ್ನು ಕೊಡುತ್ತದೆ, ಮಲೆಯಾಳ ಭಾಷೆಯಲ್ಲಿದೆ.
ಕಂಬರನ ಈರೇಳುಪಾದು	ಕ್ರಿ. ಶ. 11ನೇ ಶತಮಾನದ ತಮಿಳುಕಾವ್ಯ ; ನೇಗಿಲು ಮತ್ತು ಉಳುಮೆಗಾರನ ಹಿರಿಮೆ ಕುರಿತಾಗಿದೆ.
ಪರನಾನರು	ತಮಿಳ ಸಂಘಂ ಪದ್ಯಗಳ ಸಂಕಲನ (ಕ್ರಿ. ಶ. 2ನೆಯ ಶತಮಾನ)
ಮಣಿಮೇಖಲೈ	ಸುಪ್ರಸಿದ್ಧ ತಮಿಳು ವ್ಯಾಕರಣ ಗ್ರಂಥ ; ಕಿ. ಪೂ. 5ನೆಯ ಶತಮಾನದ್ದೆಂದು ಹೇಳಲಾಗಿದೆ, ಕೃಷಿ ಕುರಿತು ವಿರಳ ಆಧಾರಗಳನ್ನು ನೀಡುತ್ತದೆ.
ಕರಣಪಾಟು	ಮೋಡಗಳನ್ನು ಕುರಿತ 40 ಪದ್ಯಗಳನ್ನೊಳಗೊಂಡಿದೆ, ತಮಿಳು ಕೃತಿ.
ತೋಲ್ಕಾಪ್ಪಿಯಂ	ಸುಪ್ರಸಿದ್ಧ ತಮಿಳು ವ್ಯಾಕರಣ ಗ್ರಂಥ ;

	ಕ್ರಿ. ಪೂ. 5ನೆಯ ಶತಮಾನದ್ದೆಂದು ಹೇಳಲಾಗಿದೆ; ಕೃಷಿ ಕುರಿತು ವಿರಳ ಆಧಾರಗಳನ್ನು ನೀಡುತ್ತದೆ.
ಕೃಷಿ ಪಾಟ್ಟು	ಮಲೆಯಾಳಿ ಭಾಷೆಯಲ್ಲಿವೆ, ಕೃಷಿ ವಿಚಾರ ಕುರಿತಾದುದು.
ಸಾರಂಗಧರನ ವೃಕ್ಷಾಯುರ್ವೇದ	ತೋಟಗಾರಿಕೆ ಕುರಿತ ಸುಪ್ರಸಿದ್ಧ ಸಂಸ್ಕೃತ ಕೃತಿ. ಮಲೆಯಾಳ ಲಿಪಿಯಲ್ಲಿದ್ದು, ಮಲೆಯಾಳ ಭಾಷಾಂತರ ಒಳಗೊಂಡಿದೆ.
ನಾರಾಯಣ ಗಜಪತಿ ದಾಂತಲೋರಿಯ ಮುನಿಭವ ಬೋಧಿನಿ	ಕೃತಿಯ ಒಂದು ಭಾಗವಲ್ಲಿ ಕೃಷಿ ವಿಚಾರವುಳ್ಳ ಸಂಸ್ಕೃತ ಕೃತಿ: ತೆಲುಗು ಲಿಪಿಯಲ್ಲಿ ಬರೆಯಲಾಗಿದ್ದು, ತೆಲುಗು ಭಾಷಾಂತರವನ್ನೂ ಒಳಗೊಂಡಿದೆ.
ಟಿ. ವೆಂಕಟರಾಮಯ್ಯನ ವೃಕ್ಷಶಾಸ್ತ್ರ ಸಂಗ್ರಹ	1895ರಲ್ಲಿ ಪ್ರಕಟಿತ : ತೆಲುಗು ಭಾಷೆಯಲ್ಲಿದೆ. ಕೃಷಿ ಮತ್ತು ತೋಟಗಾರಿಕೆ ವಿಷಯವೊಳಗೊಂಡಿದೆ.
ನಾಗಭೂಷಣ ಘನಮಠಾರಾಧ್ಯರ ಕೃಷಿ ಜ್ಞಾನ ಪ್ರದೀಪಿಕೆ	19ನೆಯ ಶತಮಾನದಲ್ಲಿ ರಚಿತವಾದ (ಲೇಖಕರ ದಿ. ಕ್ರಿ. ಶ. 1826–1884) ಕೃಷಿ ಕುರಿತ ಕೃತಿ. ಆಗಮಶಾಸ್ತ್ರ ಮತ್ತು ಪುರಾಣಾಧಾರಿತ ಕನ್ನಡ ಕೃತಿ.
ರತುಪ್ಪಾಟು, ಕುರಿಂಜಿಪ್ಪಾಟ್ಟು ಮತ್ತು ಶಿಲಪ್ಪದಿಕಾರಮ್	ತಮಿಳು ಮಹಾಕಾವ್ಯ ಪದ್ಯಗಳು, ಕ್ರಿ. ಶ. 500 ರಿಂದ 600ಕ್ಕೆ ಸೇರಿದುದೆಂದು ಭಾವಿಸಿದೆ.
ಭಿನವ ಚಂದ್ರನ ಅಶ್ವಶಾಸ್ತ್ರ	ಕನ್ನಡ ಕೃತಿ, ಮದ್ರಾಸ್ ಸರ್ಕಾರಿ ಹಸ್ತಪ್ರತಿ ಗ್ರಂಥ ಭಂಡಾರದಲ್ಲಿ ಪ್ರಕಟವಾಗಿದೆ, ಅಶ್ವ ಪಶುವೈದ್ಯಕೀಯ ಶಾಸ್ತ್ರ ಕುರಿತ ಕೃತಿ.

ಸಾರಂಗಧರನ ವೃಕ್ಷಾಯುರ್ವೇದ	ಮಲೆಯಾಳಿ ಲಿಪಿಯಲ್ಲಿ ಬರೆದಿದ್ದು, ಮಲೆಯಾಳಿ ಭಾಷಾಂತರ ಸಹಿತ ಪ್ರಕಟವಾಗಿದೆ (ತಿರುವಾಂಕೂರು).
ದ್ರವ್ಯ-ಗುಣ-ಅಸ್ಸಮಾಯು	ವಿವಿಧ ಬಗೆಯ ಧಾನ್ಯಗಳು, ಕಬ್ಬು ಉತ್ಪನ್ನಗಳು ಇತ್ಯಾದಿಗಳ ಗುಣಧರ್ಮಗಳನ್ನು (ಒಳ್ಳೆಯ ಮತ್ತು ಕೆಟ್ಟ) ಕುರಿತ ಕೃತಿ.

ಅನುಬಂಧ 2

ಅನುಬಂಧ 1ರಲ್ಲಿ ಪರಾಮರ್ಶಿಸಲಾದ ಅನೇಕ ಹಸ್ತಪ್ರತಿಗಳ ಜೊತೆಗೆ, ಈ ಕೃತಿ ರಚನೆಯಲ್ಲಿ ಈ ಕೆಳಕಾಣಿಸಿದ ಪ್ರಕಟಣೆಗಳನ್ನು ಸಹ ಅವಲೋಕಿಸಿದೆ:

1. A.N. Bose, 1945, Rural Economy in Ancient India (Parts I and II), Calcutta University.

2. A. Krishnaswamy, 1952, Combined Annual Progress Report (1951-52) and Final Report (1.6.49-31.3.52) of the Scheme for "the Collection of Information on. Indigenous Veterinary Medicine from Ancient literature and Sanskrit Manuscripts." I C.A.R.

3. A.K. Yegna Narayana Aiyer, 1949, Agriculture and Allied Arts in Vedic India.

4. G.P. Majumdar, 1935, Upavana Vinoda, Indian Research Institute publication, Indian Positive Science Series No.1

5. _______ 1951, The History of Botany and Allied Sciences (Agriculture, Medicine) Arbori-Horticulture in Ancient India (c. 2000 B.C. to 100 A.D.) (Extract "Archieves Internationales d' Histoire and Sciences," Number 14- pp. 100-133)

6. G.G. Joshi, 1955, Bharatiya Krishisastra Bangmoyasuti, Sahitya-Samsar, 19th February and 30th April.

7. J.C. Ray, 1948, Life in Ancient India, Messrs Sen, Ray & Co. Ltd., Calcutta.

8. K.A. Chowdhury and S.S. Ghosh, 1951, Plant Remains from Harappa, Ancient India, No. 7 (January, 1946) pp. 3-18.

9. _______, 1954 & 1955, Plant Remains from Hastinapur, 1950-52, Ancient India, Nos. 10 & 11, pp. 121-137.

10. Nityendra Nath Sircar, 1950, An Introduction to the Vrksayurveda of Parasara, Journ. Royal Asiatic Society, Bengal, Vol. XVI, No. 1 pp. 123-139.

11. P.K. Gode. 1946, History of the Art of Grafting Plants, Indian Culture, Vol. XIII, No.1 (July-Sept.), pp. 25-34.

12. R.K. Mookerji, 1957, Hindu Civilisation, Parts I and II, Bharatiya Vidya Bhavan, Bombay.

13. R. Gangopadhyaya, 1932, "Some Materials for the Study of Agriculture and Agriculturists in Ancient India," N.C. Mukherjee & Co., Serampore.

14. S.P. Raychaudhri, 1941, Agriculture in Ancient India, Dacca University Studies, 101-126.

15. ______, 1953, Agricultural Practices in Ancient India. I.C.A.R. Review Series No. 4.

16. ______, 1941, A Short Account of the Agricultural Methods Practised in Ancient India, Science and Culture, Vol. 7 10-17

17. ______, 1936, Translation of Krishi Sangraha (A short compilation on Agriculture) by Mahamuni Parasara, Imperial Buraau of Soil Science, Monthly Letter No. 59.

18. S.S. Ghosh, 1961, Further records of rice (Oryza spp.) from Ancient Indian Forest, Vol. 87, No. 5, pp 295-301.

ಲಭ್ಯ ಸಾಹಿತ್ಯ ಅವಲೋಕನೆಗಾಗಿ ಹಾಕಿಕೊಂಡ ಯೋಜನೆಯಲ್ಲಿ ಡಾ। ಆರ್. ಶಾವ್, ಸಂಶೋಧನ ಸಹಾಯಕರು, ಈ ಕೆಳಕಾಣಿಸಿದ ಕೇಂದ್ರಗಳಿಗೆ ಭೇಟಿಯಿತ್ತಿದ್ದಾ

1. The Central Archaeological Library, New Delhi.
2. The Libraries of the Delhi University.
3. The Libraries of Calcutta University.
4. The Asiatic Society of Bengal, Calcutta.
5. The Belvedere National Library, Calcutta
6. The Library of the Hindu University, Banaras.
7. Saraswati Bhawan Library, Banaras.
8. Vidyapith University (Library), Banaras.
9. The Library of the University, Bombay.
10. Bombay Branch of Asiatic Society, Bombay.
11. Bharatiya Vidya Bhavan, Bombay.
12. Coma Oriental Institute, Bombay.
13. The Bhandarkar Oriental Research Institute, Poona.
14. Wadia Library of Fergusson College, Poona.
15. The Deccan College of Post-graduate and Researc Institute, Poona.
16. The Adyar Library of the Theosophical Society, Madra
17. The Library of the Madras University and the Govern ment Oriental Manuscript Library, Madras.
18. The Connemara Public Library, Madras.
19. The Libraries of the Travancore University, Trivandrum
20. The Oriental Manuscript Library, Trivandrum.
21. The Saraswati Mahal Oriental Research Library (Maharaja of Tanjore, Tanjore (S.I.)
22. The Library of the University of Nagpur.
23. The Library of the Allahabad University.
24. The Library of the Sanskrit College, Raghunath Templ Jammu.
25. Ganganath Jha Research Institute.
26. Saraswati Bhawan Library, Udaipur.
27. Vallabha Vaisna Matha Sanskrit Library, Nathdwar (Rajasthan).

28. The Kashmir Research Department, Srinagar.
29. The Public Library, Srinagar.
30. Gaekwad Oriental Research Institute, Baroda.
31. The State Record Office, Baroda.
32. Library of the Mysore University.
33. Oriental Research institute, Mysore.
34. Saraswati Bhandar Library, Maharaja Sanskrit College, Mysore.
35. Central College Library, Bangalore.
36. The Library of the Mythic Socity, Bangalore.
37. Venkateshwara Oriental Research Institute, Tirupati [S.I]
38. The Libraries of Patna University.
39. Jayaswal Research Society (Bihar Research Institute).
40. Darbhanga Raj Library, Darbhanga,
41. Mithila Institute of Research and Post-graduate Studies in Sanskrit, Darbhanga,

ಕನ್ನಡ ಅಧ್ಯಯನ ವಿಭಾಗದ ಪ್ರಕಟಣೆಗಳು

		ಸಾದಾ	ಕ್ಯಾಲಿಕೊ
1.	ಸುಭಿಕ್ಷತೆಗೆ ತೆರೆದ ಬಾಗಿಲು (ದ್ವಿತೀಯ ಮುದ್ರಣ)	2-50	
2.	ಪೀಡೆ ನಿರ್ವಹಣೆ (ದ್ವಿತೀಯ ಮುದ್ರಣ)	7-00	
3.	ಕೀಟ ವಿಂಗಡಣೆ	15-00*	
4.	ಕೀಟ [illegible] (ದ್ವಿತೀಯ ಮುದ್ರಣ)	12-50	
5.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ, ಭಾಗ-1	6-50	
6.	ತರಕಾರಿ ಬೇಸಾಯ	12-50	
7.	ಕೃಷಿ ರಸಾಯನಶಾಸ್ತ್ರ ಪ್ರಯೋಗ ನಿರೂಪಣಾವಳಿ	5-00	6-25
8.	ಮಣ್ಣು ಮತ್ತು ನೀರು ಸಂರಕ್ಷಣಾ ಕೈಪಿಡಿ	15-00	19-00*
9.	[illegible] ಮರಗಳು	15-00	19-00*
10.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ, ಭಾಗ-2	11-25	15-00*
11.	ಬೀಜಗಣಿತ ಪರಿಚಯ, ಭಾಗ-1	15-00	20-00*
12.	ಮಣ್ಣು ಮತ್ತು ನೀರು ನಿರ್ವಹಣೆ	15-00	19-00*
13.	ಮಣ್ಣು	11-25	15-00*
14.	ಕೃಷಿ ಸಹಕಾರ	6-25	10-00*
15.	ಕಳೆಗಳು ಮತ್ತು ಕಳೆಗಳ ನಿಯಂತ್ರಣ	15-00	19-00*
16.	ಗೋಸಂಪತ್ತು	6-25	10-00*
17.	ಧಾನ್ಯ ದಾಸ್ತಾನು ತತ್ವ ಮತ್ತು ಪದ್ಧತಿಗಳು	7-50	11-25*
18.	ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆ	17-50	21-25*
19.	ಪಶುವೈದ್ಯಕೀಯ ವಿಜ್ಞಾನ (ದ್ವಿತೀಯ ಮುದ್ರಣ)	6-00	16-00
20.	ಹೊಲದ ಬೆಳೆಗಳಿಗೆ ಬೀಳುವ ಕೆಲವು ಕೀಟಗಳು	8-25*	12-00*
21.	ಟ್ರ್ಯಾಕ್ಟರು ಹಾಗೂ ಅವುಗಳನ್ನು ಸುಸ್ಥಿತಿಯಲ್ಲಿಡುವ ಕ್ರಮಗಳು	7-50*	12-50*
22.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ, ಭಾಗ-3	10-00	15-00
23.	ಕೃಷಿ ವಿಸ್ತರಣ ಶಿಕ್ಷಣ ಪದ್ಧತಿಗಳು	11-25*	16-25*
24.	ಕಣಜದ ಪೀಡೆಗಳು ಮತ್ತು ಅವುಗಳ ಹತೋಟಿ	15-00	19-00

* ಪ್ರತಿಗಳು ತೀರಿವೆ

		ಸಾದಾ	ಕ್ಯಾಲಿಕೊ
25.	ಸಸ್ಯವರ್ಗೀಕರಣಶಾಸ್ತ್ರ	15–00	20–00*
26.	ಪೌಷ್ಟಿಕ ಆಹಾರ (ದ್ವಿತೀಯ ಮುದ್ರಣ)	6–00	16–00
27.	ಕಡಲ ಮೀನುಗಾರಿಕೆ	5–00	10–00
28.	ಧಾನ್ಯದ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	10–75*	
29.	ಕಬ್ಬಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	4–50*	
30.	ಶಿಶುವಿಹಾರ (ದ್ವಿತೀಯ ಮುದ್ರಣ)	6–00	
31.	ಬೇಳೆಕಾಳು ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	7–50*	
32.	ಕೃಷಿ ಎಂಜಿನಿಯರಿಂಗ್ ಪಠ್ಯಪುಸ್ತಕ ಸಮೀಕ್ಷಣೆ	9–50	14–00
33.	ಇಲಿಗಳು ಹಾಗೂ ಅವುಗಳ ನಿಯಂತ್ರಣ	9–50	13–25
34.	ತರಕಾರಿ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	21–50*	
35.	ಹಣ್ಣಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	16–25*	
36.	ಕ್ಯಾನಿಂಗ್-ಆಹಾರ ಜೋಪಾಸನೆಯ ಒಂದು ಆಧುನಿಕ ವಿಧಾನ	16–25	21–25
37.	ಅಲಂಕಾರ ಸಸ್ಯಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	10–75	
38.	ಜೀವಕೋಶಕ್ರಿಯಾಶಾಸ್ತ್ರ ಮತ್ತು ಜೀವರಸಾಯನ ಶಾಸ್ತ್ರ	20–00	25–00
39.	ಎಲುಬುಶಾಸ್ತ್ರ	11–25	16–25
40.	ಕಡಲೆಕಾಯಿ	10–00*	15–00*
41.	ಗಣಿತಶಾಸ್ತ್ರ ಪ್ರವೇಶಿಕೆ, ಭಾಗ-1	25–00	30–00
42.	ತೆಂಗು, ಅಡಿಕೆ, ಇತರೆ ಗರಿಮರಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	9–00*	

		ಸಾದಾ	ಕ್ಯಾಲಿಕೊ
43.	ಪ್ಲಾಂಟೇಶನ್ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	12-00*	
44.	ಭಾರತದಲ್ಲಿ ಕೋಳಿ ಸಾಕಣೆ	22-00	27-50*
45.	ಕಲ್ಲುನಾರು (ಭೂತಾಳೆ) ಗಿಡಗಳು	5-00	
46.	ಎಣ್ಣೆ ಬೀಜಗಳು (ಕಾಳು)ಗಳ ಬೆಳೆಗಳಿಗೆ ಬೀಳುವ ಕೀಟ ಹಾಗೂ ಅವುಗಳ ಹತೋಟಿ	7-50	
47.	ಹತ್ತಿ (ನೂಲು) ಹಾಗೂ ನಾರಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	10-00	
48.	ಹಸುರೆಲೆ ಗೊಬ್ಬರ, ಮೇವು ಹಾಗೂ ಉಪ್ಪುನೇರಿಳೆ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	5-00*	
49.	ಮಾದಕ (ಹೊಗೆಸೊಪ್ಪು, ಗಾಂಜಾ) ಮತ್ತು ಸಾಂಬಾರ (ಅರಿಶಿನ ಇತ್ಯಾದಿ) ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	3.75	
50.	ಕೃಷಿ ಉಪಯೋಗಿ ಕೆಲವು ವೃಕ್ಷಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	4.50	
51.	ಸಸ್ಯ ಸಾಮ್ರಾಜ್ಯ	25-00	30-00
52.	ಮೀನುಗಾರಿಕೆ	10-00	15-00
53.	ಭಾರತೀಯ ಗ್ರಾಮೀಣ ಯುವಕ ರೈತಸಂಘಗಳ ಸಂಘಟಣೆ	8-25	13-25
54.	ಗಣಿತಶಾಸ್ತ್ರ ಪ್ರವೇಶಿಕೆ, ಭಾಗ-2	20-00	25-00
55.	ಸಾವಯುವ ರಸಾಯನಶಾಸ್ತ್ರ ಪ್ರವೇಶಿಕೆ	14-00	19-00
56.	ಪಶುರೋಗಗಳು ಮತ್ತು ಸಾರ್ವಜನಿಕ ಆರೋಗ್ಯ	12-50	17-50
57.	ಭಾರತದಲ್ಲಿ ಜೇನು ಸಾಕಣೆ	20-00	25-00
58.	ಸಾಕುಪ್ರಾಣಿ ಮೂಲದ ಸೋಂಕು ರೋಗಗಳು	7-50	12-50
59.	ದೊಡ್ಡರೋಗ	5-00	
60.	ಮೂಲ ಅರ್ಥಶಾಸ್ತ್ರ	19-00	24-00
61.	ಜೇನುಸಾಕಣೆ	17-50	22-50

* ಪ್ರತಿಗಳು ತೀರಿವೆ

		ಸಾದಾ	ಕ್ಯಾಲಿಕೊ
62.	ಕೃಷಿ ರಸಾಯನಶಾಸ್ತ್ರ ಪಾರಿಭಾಷಿಕ ಶಬ್ದಕೋಶ	3–25	
63.	ಮಣ್ಣು ನಿರ್ವಹಣೆ, ಸಂರಕ್ಷಣೆ ಹಾಗೂ ಬೆಳೆ ಉತ್ಪಾದನೆ	20–00	25–00*
64.	ಕೃಷಿ ಅನಿಲಯಂತ್ರ ಹಾಗೂ ಟ್ರ್ಯಾಕ್ಟರುಗಳು		60–00
65.	ಸಹಕಾರಿ ಬೇಸಾಯ	18–00	23–00
66.	ಕೋಳಿ	20–00	25–00
67.	ತರಕಾರಿ ಬೆಳೆಗಳ ಕೀಟ ನಿಯಂತ್ರಣ	12–50*	19–50*
68.	ಸಾಕುಪ್ರಾಣಿಗಳ ಭ್ರೂಣಶಾಸ್ತ್ರ	20–00	25–00
69.	ಸಂಸ್ಕೃತಿಯ ರೂಪಿಕೆಗಳು	17–00	22–00
70.	ವೈಖಾನ್ನಿಕ ಬೀಜಗಣಿತ	30–00	35–00
71.	ಹುಲಿ-ಭಾರತದ ರಾಷ್ಟ್ರೀಯ ಮೃಗ	20–00	24–00
72.	ನೀರಾವರಿ ತತ್ತ್ವ ಹಾಗೂ ಪದ್ಧತಿಗಳು	45–00	50–00
73.	ಮಣ್ಣು ಶಿಲೀಂಧ್ರ ಕೈಪಿಡಿ	45–00	50–00
74.	ಪ್ರಾಣಿಗಳ ವರ್ತನೆ	17–00	22–00
75.	ಬೆಳೆ ಕೀಟಗಳು ಮತ್ತು ಅವುಗಳ ಹತೋಟಿ		125–00*
76.	ಸಸ್ಯತಳಿ ಅಭಿವೃದ್ಧಿ ವಿಧಾನಗಳು		60–00
77.	ಪ್ರಾಣಿಗಳ ಶರೀರಕ್ರಿಯಾಶಾಸ್ತ್ರ	17–00	22–00
78.	ಆಹಾರ ಸೂಕ್ಷ್ಮ ಜೀವಿ ವಿಜ್ಞಾನದಲ್ಲಿ ಪ್ರಾಮುಖ್ಯತೆ ಗಳಿಸಿರುವ ಸೂಕ್ಷ್ಮ ಜೀವಿಗಳು (ಆಹಾರ ಸೂಕ್ಷ್ಮ ಜೀವಿ ವಿಜ್ಞಾನ, ಭಾಗ-1)	8–50	
79.	ಕೆಲವು ಸಸ್ಯಗಳ ವೈಜ್ಞಾನಿಕ ಕುಟುಂಬ, ಇಂಗ್ಲೀಷ್ ಹಾಗೂ ಕನ್ನಡ ಹೆಸರು	15–00	20–00*
80.	ಮೀನು ಮತ್ತು ಇತರ ಸಾಗರೋತ್ಪನ್ನ ಆಹಾರಗಳ ಶೀತಜೋಪಾಸನೆ	20–00	25–00
81.	ಸಾಕುಪ್ರಾಣಿಗಳ ಕೀಲು ಮತ್ತು ಸ್ನಾಯುಶಾಸ್ತ್ರ	20–00	25–00
82.	ಕುರಿಸಾಕಣೆ	8–00	10–00
83.	ಜೋಳ	10–00	15–00
84.	ಹಂದಿಯ ಭ್ರೂಣಶಾಸ್ತ್ರ	35–00	40–00
85.	ಆಧುನಿಕ ಹೈನಾಗಾರ ದನಗಳ ನಿರ್ವಹಣೆ	25–00	30–00
86.	ದಾಸ್ತಾನು ಕೀಟಗಳು ಹಾಗೂ ಅವುಗಳ ಹತೋಟಿ	8–00	

* ಪ್ರತಿಗಳು ತೀರಿವೆ

		ಸಾದಾ	ಕ್ಯಾಲಿಕೊ
87.	ಮನೆ ಕೀಟಗಳು, ಇತರ ಪೀಡೆಗಳು ಹಾಗೂ ಅವುಗಳ ಹತೋಟಿ	10-00	
88.	ಜಾನುವಾರು ಮತ್ತು ಮನುಷ್ಯರಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	10-00	
89.	ತೆಂಗಿನ ಬೇಸಾಯ	9-00	14-00*
90.	ಆಹಾರ ರಕ್ಷಣೆ ಮತ್ತು ಕೆಡುವಿಕೆಯ ತತ್ವಗಳು (ಆಹಾರ ಸೂಕ್ಷ್ಮ ಜೀವಿ ವಿಜ್ಞಾನ, ಭಾಗ-2)	11-00	
91.	ಸೂಕ್ಷ್ಮ ಜೀವಿಶಾಸ್ತ್ರದ ಬೆಳವಣಿಗೆ ಹಾಗೂ ವಿಧಾನಗಳು (ಸೂಕ್ಷ್ಮ ಜೀವಿ ಜಗತ್ತು, ಭಾಗ-1)	17-00	
92.	ಕೃಷಿ ಸಸ್ಯಶಾಸ್ತ್ರ ಪಾರಿಭಾಷಿಕ ಶಬ್ದಕೋಶ	2-00	
93.	ಹಸುರು ಸಸ್ಯದ ಜೀವನ	12-00	17-00
94.	ಸೂಕ್ಷ್ಮಜೀವಿಗಳ ಚಯಾಪಚಯ(ಜೀವದ್ರವ್ಯ ಪರಿಣಾಮ) ಕ್ರಿಯೆಗಳು, ರಚನೆ ಮತ್ತು ಕಾರ್ಯ ಸಂಬಂಧ (ಸೂಕ್ಷ್ಮಜೀವಿ ಜಗತ್ತು, ಭಾಗ-2)	18-00	
95.	ವಿವಿಧ ಆಹಾರಗಳು ಕಲುಷಿತವಾಗುವಿಕೆ, ಕೆಡುವಿಕೆ ಮತ್ತು ರಕ್ಷಣೆ (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-3)	15-00	
96.	ಸೂಕ್ಷ್ಮಜೀವಿಗಳು ಉತ್ಪತ್ತಿಮಾಡುವ ಆಹಾರಗಳು ಮತ್ತು ರಾಸಾಯನಿಕ ಕಿಣ್ವಗಳು (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-4)	7-00	
97.	ರೋಗಗಳಿಗೆ ಸಂಬಂಧಿಸಿದಂತೆ ಆಹಾರಗಳು (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-5)	5-00	
98.	ಆಹಾರದ ನೈರ್ಮಲ್ಯ ನಿಯಂತ್ರಣ ಮತ್ತು ತಪಾಸಣೆ (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-6)	7-00	
99.	ಕೃಷಿ ಕರ್ನಾಟಕ	12-50	17-50*
100.	ದಾಸ್ತಾನು, ಮನೆ, ಜಾನುವಾರು ಹಾಗೂ ಮನುಷ್ಯರಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		35-00
101.	ಮತ್ಸ್ಯಶಾಸ್ತ್ರ		50-00

* ಪ್ರತಿಗಳು ಇರುವೆ

		ಸಾಮಾ	ಕ್ಯಾಲಿಕೊ
102.	ಹಣ್ಣು ಮತ್ತು ತರಕಾರಿ ಸಂರಕ್ಷಣೆ	35-00	40-00
103.	ಫಾರ್ಮ್ ನಿರ್ವಹಣೆ ಅರ್ಥಶಾಸ್ತ್ರ		60-00
104.	ಆಹಾರ ಸೂಕ್ಷ್ಮಜೀವಿ ವಿಜ್ಞಾನ		62-50
105.	ಭಾರತದಲ್ಲಿ ಸಾಮಾಜಿಕ ಅರಣ್ಯಶಾಸ್ತ್ರ	25-00	35-00
106.	ಬತ್ತದ ಬೇಸಾಯ	15-00	25-00*
107.	ಧಾನ್ಯದ ಬೆಳೆಗಳಿಗೆ ಬೀಳುವ ರೋಗಗಳು ಹಾಗೂ ಅವುಗಳ ಹತೋಟಿ	12-00	17-00*
108.	ವ್ಯವಸಾಯ ಮುನ್ನಡೆ	18-00	28-00*
109.	ಕೀಟಶಾಸ್ತ್ರ ಪಾರಿಭಾಷಿಕ ಶಬ್ದಕೋಶ	3-50	
110.	ಸಚಿತ್ರ ಬತ್ತದ ಬೆಳೆ	12-50	22-50*
111.	ಕೋಳಿಸಾಕಣೆ ಕೈಪಿಡಿ (ದ್ವಿತೀಯ ಮುದ್ರಣ)	12-00	
112.	ಮಣ್ಣು ಸೂಕ್ಷ್ಮಜೀವಿಶಾಸ್ತ್ರ	10-00	20-00
113.	ಭೂಸಾರ ಸಂರಕ್ಷಣೆ	7-50	17-50
114.	ಬಿಳಿಕಸ	9-00	19-00
115.	ವೈರಸ್‌ಗಳು (ಸೂಕ್ಷ್ಮಜೀಜಗತ್ತು ಭಾಗ-3)	7-50	
116.	ಸಂತಾನೋತ್ಪತ್ತಿ ಶರೀರಕ್ರಿಯಾಶಾಸ್ತ್ರ	20-00	30-00
117.	ಲವಂಗ	3-50	
118.	ಸೂಕ್ಷ್ಮಜೀವಿಗಳಉತ್ಪರಿವರ್ತನೆ ಹಾಗೂ ಅನುವಂಶಿಯ ಗುಣಗಳ ಪುನರ್ ಸಂಯೋಜನೆ (ಸೂಕ್ಷ್ಮಜೀವಿ ಜಗತ್ತು, ಭಾಗ-4)	15-00	
119.	ಬ್ಯಾಕ್ಟೀರಿಯಾಗಳ ವರ್ಗೀಕರಣ ಮತ್ತು ವಿವರಣೆ (ಸೂಕ್ಷ್ಮಜೀವಿ ಜಗತ್ತು, ಭಾಗ-5)	25-00	
120.	ಎಣ್ಣೆ ಕೊಡುವ ಕೆಲವು ಹೊಸ ಸಸ್ಯಗಳು	12-00	22-00*
121.	ಸೂಕ್ಷ್ಮಜೀವಿಗಳ ಪರಿಸರಶಾಸ್ತ್ರ ಮತ್ತು ಸೋಂಕು ಲಕ್ಷಣಾಶಾಸ್ತ್ರ (ಸೂಕ್ಷ್ಮಜೀವಿ ಜಗತ್ತು, ಭಾಗ-6)	20-00	
122.	ಕೃಷಿ ಯಂತ್ರಗಳು ಹಾಗೂ ಉಪಕರಣಗಳು		80-00
123.	ಸಸ್ಯಪೋಷಕಗಳು ಮತ್ತು ಅವುಗಳ ಪಾತ್ರ	10-00	20-00*
124.	ಮೆಣಸು-ಕಪ್ಪುಹೊನ್ನು	9-00	19-00

* ಪ್ರತಿಗಳು ತೀರಿವೆ

	[illegible]	[illegible]
125. ಮಾನವ ಕಲ್ಯಾಣಕ್ಕೆ ಸೂಕ್ಷ್ಮಜೀವಿಗಳ ಬಳಕೆ (ಸೂಕ್ಷ್ಮಜೀವಿ ಜಗತ್ತು ಭಾಗ-7)	5-00	
126. ಕೃಷಿ ಆರ್ಥಿಕ ವಿಶ್ಲೇಷಣೆ ಪ್ರವೇಶಿಕೆ	25-00	35-00
127. ರೇಷ್ಮೆ ವ್ಯವಸಾಯ	20-00	30-00
128. ಕೃಷಿ ಪ್ರಸರಣೆ	25-[illegible]	35-00
129. ಹಣ್ಣಿನ ಬೆಳೆಗಳ ಕೀಟ ನಿಯಂತ್ರಣ	12-[illegible]0	22-00
130. ತ್ರಿಕೋನಮಿತಿ	15-00	25-00
131. ಬಿದಿರು ಮತ್ತು ಬೆತ್ತ	10-00	20-00
132. ಬತ್ತದ ಬೆಳೆ ಕೀಟ ನಿಯಂತ್ರಣ	6-00	
133. ಇಪ್ಪತ್ತೊಂಬತ್ತನೆಯ ದಿನ	30-00	40-00
134. ಮಣ್ಣಿನ ಭೌತಿಕ ಗುಣಧರ್ಮಗಳು	20-00	30-00
135. ಆಧುನಿಕ ಆಹಾರ ಸೂಕ್ಷ್ಮಜೀವಿ ವಿಜ್ಞಾನ		70-00
136. ಸುಗಂಧದ್ರವ್ಯ ಸಸ್ಯಗಳು	12-50	22-50
137. ಸೂಕ್ಷ್ಮಜೀವಿ ಜಗತ್ತು		130-00
138. ಜೀವಶಾಸ್ತ್ರ ಪಾರಿಭಾಷಿಕ ಶಬ್ದಕೋಶ	2-50	
139. ಪ್ಲಾಂಟೇಶನ್ ಬೆಳೆಗಳ ಕೀಟಹತೋಟಿ	14-00	24-00
140. ಪ್ರಾಚೀನ ಭಾರತದಲ್ಲಿ ಬೇಸಾಯ	28-[illegible]	[illegible]0
141. ಪ್ರಾಚೀನ ಹಾಗೂ ಅರ್ವಾಚೀನ ವನಗಳ ಇತಿಹಾಸ	24-00	34-00
142. ಬೀಜಗಣಿತ ಪರಿಚಯ (ಭಾಗ-2)	20-00	30-00
143. ಸಾಗುವಳಿ ಉಪಕರಣಗಳು	15-00	25-00
144. ಮಾವು	40-00	50-00
145. ಬತ್ತ	40-00	50-00
146. ಬತ್ತದ ಬೇಸಾಯ—ಸಮಸ್ಯೆ ಹಾಗೂ ಪರಿಹಾರಗಳು	18-00	28-00
147. ಬೆಳೆಗಳ ಪ್ರಾಣಿ ಪೀಡೆಗಳು	50-00	60-00
148. ಭಾರತದ ಸಂಬಾರದ ಬೆಳೆಗಳು	18-00	28-00
149. ಸಜೀವ ಸಸ್ಯ	35-00	45-00
150. ಕೃಷಿ ಸಮಾನ ಪದಗಳ ಸಮೀಕ್ಷೆ	5-00	
151. ಕೃಷಿ ವಿಜ್ಞಾನ ಕನ್ನಡ ಪುಸ್ತಕಗಳ ಸಮೀಕ್ಷೆ	5-00	
152. ವನ್ಯಪ್ರಾಣಿಗಳ ವಿಕಸನ ಹಾಗೂ ವಿತರಣೆ	24-00	34-00

	ಸಾದಾ	ಕ್ಯಾಲಿಕೊ
153. ಭಾರತದಲ್ಲಿ ಕೃಷಿ ಅಭಿವೃದ್ಧಿ ಯೋಜನೆ —ಒಂದು ಪಕ್ಷಿನೋಟ	12–00	22–00
154. ಮೆಣಸಿನಕಾಯಿ ಬೆಳೆ	14–00	24–00
155. ಕೀಟನಾಶಕಗಳು	32–00	42–00
156. ಆಹಾರ ವಿಜ್ಞಾನಕ್ಕೆ ಪ್ರಥಮ ಪರಿಚಯ	24–00	34–00
157. ಕೋಳಿ ರೋಗಗಳು	24–00	34–00